ISSN 2321 - 3590


10ನೇ ವರ್ಷ

ಇತಿಹಾಸ ದರ್ಪಣ

(ತ್ರೈಮಾಸಿಕ)

ಕನ್ನಡದ ಹೆಮ್ಮೆಯ ಇತಿಹಾಸ ಸಂಶೋಧನ ನಿಯತಕಾಲಿಕೆ

ಪುಸ್ತಕ 37–38
(ಸಂಯುಕ್ತ ಸಂಚಿಕೆ)
ಏಪ್ರಿಲ್ – ಸೆಪ್ಟೆಂಬರ್ 2018




Itihasa Darpana

(Kannada Quarterly)

A Peer Reviewed Journal of Historical Research in Kannada

Book 37-38
(Combined Issue)
April - September 2018



'ಅಧ್ಯಯನಶೀಲ' ಶ್ರೀನಿವಾಸ ರಿತ್ತಿ

ISSN 2321 - 3590

ಕನ್ನಡದ ಹೆಮ್ಮೆಯ ಇತಿಹಾಸ ಸಂಶೋಧನ ನಿಯತಕಾಲಿಕೆ

ಇತಿಹಾಸ ದರ್ಪಣ

(ತ್ರೈಮಾಸಿಕ)

A Peer Reviewed Journal of
Historical Research in Kannada



ಇತಿಹಾಸ ದರ್ಪಣ
(ತ್ರೈಮಾಸಿಕ)
ಪುಸ್ತಕ ೩೭-೩೮
(ಸಂಯುಕ್ತ ಸಂಚಿಕೆ)
ಏಪ್ರಿಲ್ - ಸೆಪ್ಟೆಂಬರ್ ೨೦೧೮

Itihasa Darpana
(Kannada Quarterly)
Book 37-38
(Combined Issue)
April - September 2018

ಸಂಪಾದಕರು
ಹಂ.ಗು. ರಾಜೇಶ್
ಮೊ: ೭೮೨೯೪ ೦೪೦೬೩

Editor
H.G. Rajesh
Mob: 78294 04063

ಉಪ ಸಂಪಾದಕರು
ಸುಂಕಂ ಗೋವರ್ಧನ
ರಶ್ಮಿ ಎಸ್.
ಶಿವಕುಮಾರಿ ಎಂ.ಎಸ್.

Sub Editors
Sunkam Govardhan
Rashmi S.
Shivakumari M.S.

ಪುಸ್ತಕ ವಿನ್ಯಾಸ
ಶ್ವೇತ ಬಿ.ಎಸ್.

ಸ್ವಾನ್ ಪ್ರಿಂಟರ್ಸ್
svanprint@gmail.com
☎ 080-26742233

ನಮ್ಮ ವಿಳಾಸ
ಸಂಪಾದಕರು, ಇತಿಹಾಸ ದರ್ಪಣ
#೩೩/ಎ, ಐ.ಟಿ.ಐ. ಕಾಲೇಜು
ಹತ್ತಿರ, ಕೆಂಪೇಗೌಡನಗರ
ವಿಶ್ವನೀಡಂ-ಅಂಚೆ
ಬೆಂಗಳೂರು - ೫೬೦ ೦೯೧.
ಮೊ.: ೭೮೨೯೪೦೪೦೬೩

Our Address
Editor, ITIHASA DARPANA
33/A, Near ITI College,
Kempegowda Nagar
Vishwaneedam Post
Bengaluru - 560 091
Mob: 78294 04063

E-mail: itihasadarpana@gmail.com
Website: itihasadarpana.wordpress.com

ಓದುಗರ ಸಲಹೆ-ಸೂಚನೆಗಳನ್ನು 'ಇತಿಹಾಸ ದರ್ಪಣ'ವು ಮುಕ್ತವಾಗಿ ಸ್ವಾಗತಿಸುತ್ತದೆ.

ಲೇಖನಗಳಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳು ಲೇಖಕರ ಅಭಿಪ್ರಾಯಗಳೇ ವಿನಃ ಪತ್ರಿಕೆಯ ಅಭಿಪ್ರಾಯವಲ್ಲ. -ಸಂ.

ಪರಿವಿಡಿ. . .

ಚಂದಾದಾರರಾಗ ಬಯಸುವಿರಾ?

'ಇತಿಹಾಸ ದರ್ಪಣ'ದ ಚಂದಾದಾರರಾಗ ಬಯಸುವವರು ನಿಮ್ಮ ಆಯ್ಕೆಯ ಚಂದಾ ಹಣವನ್ನು ಡಿ.ಡಿ./ಚೆಕ್/ಎಂ.ಓ ಮೂಲಕ ಕೆಳಕಂಡ ವಿಳಾಸಕ್ಕೆ ಕಳುಹಿಸಿ ಕೊಡಬಹುದು.

- ಡಿ.ಡಿ. ಕಳುಹಿಸಿಕೊಡುವವರು "EDITOR, ITIHASA DARPANA" ಹೆಸರಿಗೆ ಬೆಂಗಳೂರಿನಲ್ಲಿ ಸಂದಾಯವಾಗುವಂತೆ ಡಿ.ಡಿ.ಯನ್ನು ತೆಗೆಸಿ, ಅದನ್ನು ನಿಮ್ಮ ವಿಳಾಸವುಳ್ಳ ಪತ್ರದೊಂದಿಗೆ ನಮಗೆ ಕಳುಹಿಸಿ ಕೊಡಿ.
- ಚೆಕ್ ಮೂಲಕ ಕಳುಹಿಸಿಕೊಡುವವರು ಚೆಕ್ಕನ್ನು "EDITOR, ITIHASA DARPANA" ಹೆಸರಿಗೆ ಬರೆದು, ಚೆಕ್ಕಿನ ಮೇಲ್ಭಾಗದ ಎಡಮೂಲೆಯಲ್ಲಿ "A/C Pay" ಎಂದು ನಮೂದಿಸಿ, ನಿಮ್ಮ ವಿಳಾಸದ ಪತ್ರದೊಂದಿಗೆ ಕಳುಹಿಸಿ. ಬೆಂಗಳೂರಿನ ಹೊರಗಡೆಯ ಚೆಕ್ಕುಗಳಾಗಿದ್ದಲ್ಲಿ ಬ್ಯಾಂಕಿನ ಸೇವಾಶುಲ್ಕ 40/- ರೂ.ಗಳನ್ನು ಚಂದಾ ಹಣದ ಮೊತ್ತದಲ್ಲಿ ಸೇರಿಸಿ ಕಳುಹಿಸಿ ಕೊಡಿ.
- ಇಲ್ಲವಾದಲ್ಲಿ ಬೆಂಗಳೂರಿನ ಚಾಮರಾಜಪೇಟೆಯ ಅಪೆಕ್ಸ್ ಬ್ಯಾಂಕಿನ ಪ್ರಧಾನ ಶಾಖೆಯಲ್ಲಿರುವ "EDITOR, ITIHASA DARPANA" ಹೆಸರಿನ ಚಾಲ್ತಿಖಾತೆ ಸಂ: 101 882ಕ್ಕೆ ಚಂದಾಹಣವನ್ನು ನಿಮ್ಮ ಹೆಸರಿನಲ್ಲಿ ಜಮಾ ಮಾಡಿ, ಸ್ವೀಕೃತಿಯ ನಕಲನ್ನು ನಿಮ್ಮ ವಿಳಾಸದ ಪತ್ರದೊಂದಿಗೆ ನಮಗೆ ಕಳುಹಿಸಿಕೊಡಿ.

ಪರಿಷ್ಕೃತ ಚಂದಾ ವಿವರ

	ವಯಕ್ತಿಕ ಚಂದಾ	ಶಾಲಾ ಕಾಲೇಜು ಮತ್ತು ಸಂಘ ಸಂಸ್ಥೆಗಳ ಚಂದಾ
ವಾರ್ಷಿಕ	400/-	600/-
ದ್ವೈವಾರ್ಷಿಕ	700/-	1100/-
ತ್ರೈವಾರ್ಷಿಕ	1000/-	1500/-

ಚಂದಾ ಕಳುಹಿಸಿಕೊಡಬೇಕಾದ ವಿಳಾಸ

ಸಂಪಾದಕರು, 'ಇತಿಹಾಸ ದರ್ಪಣ'
#33/ಎ, ಐ.ಟಿ.ಐ.ಕಾಲೇಜು ಹತ್ತಿರ
ಕೆಂಪೇಗೌಡನಗರ, ವಿಶ್ವನೀಡಂ-ಅಂಚೆ,
ಬೆಂಗಳೂರು-560 091.
ಮೊ-7829404063.

Editor, ITIHASA DARPANA
33/A, Near ITI College,
Kempegowda Nagar
Vishwaneedam Post
Bengaluru - 560 091
Mob: 78294 04063

ವಿಶ್ವವಿದ್ಯಾಲಯಗಳಲ್ಲಿ 'ಸ್ಥಳೀಯ ಚರಿತ್ರೆ'ಯ ಉಪೇಕ್ಷೆ ಏಕೆ?

ನಮ್ಮ ವಿಶ್ವವಿದ್ಯಾಲಯಗಳ ಇತಿಹಾಸ ಪಠ್ಯಕ್ರಮಗಳಲ್ಲಿ ಸ್ಥಳೀಯ ಚರಿತ್ರೆಯನ್ನು ನಿರ್ಲಕ್ಷಿಸಲಾಗಿದೆ. ಇದು ಹೊಸ ವಿಷಯವೇನಲ್ಲ; ಹಿಂದಿನಿಂದಲೂ ನಡೆದು ಬಂದಿರುವ ಪದ್ಧತಿ. ಯೂರೋಪ್, ಅಮೆರಿಕಾ, ಪೂರ್ವ ಏಷ್ಯಾದ ಚರಿತ್ರೆಯ ಪಠ್ಯಗಳನ್ನು ಪದವಿ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ಬೋಧಿಸುವ ನಮ್ಮ ಪ್ರಾಧ್ಯಾಪಕರ ಕೂಟಕ್ಕೆ ಸ್ಥಳೀಯ ಚರಿತ್ರೆಯ ಬಗೆಗೆ ಏಕೆ ಈ ದಿವ್ಯನಿರ್ಲಕ್ಷ್ಯ?! ನಮಗೆ ಚರಿತ್ರೆಯೇ ಇಲ್ಲ ಎಂಬ ಅಜ್ಞಾನವೋ? ಅಥವಾ ನಮ್ಮದ್ಯಾವ ಮಹಾ ಚರಿತ್ರೆ ಎಂಬ ಸಿನಿಕತನವೋ? ಅಥವಾ ಸ್ಥಳೀಯ ಚರಿತ್ರೆಯ ಬಗೆಗಿರುವ ಕೀಳರಿಮೆಯೋ? ಗೊತ್ತಿಲ್ಲ.

ಪ್ರಾಥಮಿಕ ಶಾಲಾ ಹಂತದಿಂದಲೂ ದೇಶ–ವಿದೇಶಗಳ ಚರಿತ್ರೆಯ ಜೊತೆಗೆ ಕೆಲವು ಮಟ್ಟಿಗೆ ಪ್ರಾದೇಶಿಕ ಚರಿತ್ರೆಯನ್ನು ಓದುವ ವಿದ್ಯಾರ್ಥಿಗಳು ಪದವಿ, ಸ್ನಾತಕೋತ್ತರ ಪದವಿಗೆ ಬಂದಾಗಲೂ ಅದೇ ಚರಿತ್ರೆಯನ್ನು ಇನ್ನೂ ವಿಸ್ತೃತವಾಗಿ ಓದುತ್ತಾರೆ. ಸ್ನಾತಕೋತ್ತರ ಪದವಿ ಪಡೆದ ವಿದ್ಯಾರ್ಥಿಗಳು ಯೂರೋಪ್ ಅಥವಾ ಅಮೆರಿಕಾ ಚರಿತ್ರೆಯ ಬಗೆಗೆ ಹೊಂದಿರುವ ಜ್ಞಾನದಲ್ಲಿ ಕನಿಷ್ಠ ಜ್ಞಾನವನ್ನಾದರೂ ತಮ್ಮ ಊರು ಮತ್ತು ಸುತ್ತಲ ಪರಿಸರದ ಚಾರಿತ್ರಿಕ ಅವಶೇಷಗಳ ಬಗೆಗೆ ಹೊಂದಿರುವುದಿಲ್ಲ. ಅವರು ಪ್ರಾದೇಶಿಕ ಚರಿತ್ರೆಯ ಬಗೆಗೆ ಒಂದಿಷ್ಟು ಕಲಿತಿದ್ದರೂ ಅದು ಕೇವಲ ಪ್ರಸಿದ್ಧ ವ್ಯಕ್ತಿ ಹಾಗೂ ಮನೆತನಗಳಿಗಷ್ಟೇ ಸೀಮಿತ. ಸ್ಥಳೀಯ ಸ್ಮಾರಕಗಳು, ಶಾಸನಗಳು, ಗ್ರಾಮನಾಮ ನಿಷ್ಪತ್ತಿ, ಸ್ಥಳೀಯ ಸಂಸ್ಕೃತಿ, ವಿಶಿಷ್ಟ ಆಚರಣೆ ಮುಂತಾದವುಗಳ ಚಾರಿತ್ರಿಕ ಹಿನ್ನೆಲೆಯ ಬಗೆಗೆ ಯಾವುದೇ ಅರಿವಿರುವುದಿಲ್ಲ. ಒಂದಿಷ್ಟು ತಿಳಿದಿದ್ದರೆ ಅದು ಪತ್ರಿಕೆಗಳಲ್ಲಿನ ವರದಿಗಳಿಂದಲೋ, ಹಿರೀಕರ ಮಾತುಗಳಿಂದಲೋ ತಿಳಿದವುಗಳಾಗಿರುತ್ತವೆಯೇ ವಿನಃ ಒಂದು ಶೈಕ್ಷಣಿಕ ಅಧ್ಯಯನಗಳಾಗಿರುವುದಿಲ್ಲ. ಇಂಥವರು ಸ್ನಾತಕೋತ್ತರ ಪದವಿ ಪಡೆದ ಮೇಲೆ ತಾವು ಓದಿದ ದೇಶ ವಿದೇಶಗಳ ಚರಿತ್ರೆಯ ಮೇಲೆ ಸಂಶೋಧನೆ ನಡೆಸಲು ಹೋಗುವುದು ವಿರಳಾತಿವಿರಳ. ಬದಲಿಗೆ, ಪೂರ್ವಜ್ಞಾನವೇ ಇಲ್ಲದಿರುವ ಸ್ಥಳೀಯ ಚರಿತ್ರೆಯ ವಿಷಯವನ್ನು ಆಯ್ದುಕೊಂಡು ಸಂಶೋಧನೆಯಲ್ಲಿ ತೊಡಗುತ್ತಾರೆ. ಹೀಗಾದರೆ, ಅವರು ಸಂಶೋಧನೆಗಳಲ್ಲಿ ಎಷ್ಟರ ಮಟ್ಟಿಗೆ ಯಶಸ್ವಿಯಾಗಬಲ್ಲರು? ಇವತ್ತಿನ ಸಂಶೋಧನೆಗಳು ತಮ್ಮ ಮೌಲ್ಯವನ್ನು ಕಳೆದುಕೊಳ್ಳುತ್ತಿರುವುದಕ್ಕೆ ಈ ಅಂಶವೂ ಒಂದು ಕಾರಣ ಎಂಬುದನ್ನು ನಿರಾಕರಿಸಲಾಗದು.

ಕೆಲವು ದಶಕಗಳ ಹಿಂದಿನ ಪಿಎಚ್.ಡಿ. ಸಂಶೋಧನಾ ಶೀರ್ಷಿಕೆಗಳನ್ನು ಗಮನಿಸಿದರೆ ಅದು ಒಂದು ಪ್ರಾದೇಶಿಕ ವ್ಯಾಪ್ತಿಯನ್ನೋ, ಪ್ರಸಿದ್ಧ ರಾಜವಂಶವನ್ನೋ ಸಾಮಾನ್ಯವಾಗಿ ಒಳಗೊಂಡಿರುತ್ತಿತ್ತು. ಪ್ರಾದೇಶಿಕ ಚರಿತ್ರೆ ಮತ್ತು ಪ್ರಸಿದ್ಧ ರಾಜವಂಶದ ಚರಿತ್ರೆಯನ್ನು ಓದಿದ ಪೂರ್ವಜ್ಞಾನ ಆ ಸಂಶೋಧಕರಿಗೆ ಇರುತ್ತಿತ್ತು. ಅದರ ಹಿನ್ನೆಲೆಯಲ್ಲಿಯೇ ತಮ್ಮ ಅಧ್ಯಯನವನ್ನು ಅವರು ಮುಂದುವರಿಸುತ್ತಿದ್ದ ಪ್ರಯುಕ್ತ ಸಹಜವಾಗಿ ಉತ್ತಮ ಸಂಶೋಧನೆಗಳು ನಡೆಯುತ್ತಿದ್ದವು.

ಇತಿಹಾಸ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದ ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಹಿರಿಯ ಕೆಂಪೇಗೌಡ ಬೆಂಗಳೂರು ಸ್ಥಾಪನೆಗೆ ಕಾರಣನಾದ ಎಂಬ ವಿಚಾರವಷ್ಟೆ ಪ್ರಾಸಂಗಿಕವಾಗಿ ಗೊತ್ತಿರಬಹುದು. ಆದರೆ ಸಾ.ಶ. (ಸಾಮಾನ್ಯ ಶಕ) 9ನೆಯ ಶತಮಾನದಲ್ಲಿಯೇ ಬೆಂಗಳೂರು ಎಂಬುದೊಂದು ಇತ್ತು ಎಂದರೆ ಅವರಲ್ಲಿ ಪರಮಾಶ್ಚರ್ಯವನ್ನುಂಟು ಮಾಡಬಹುದು! ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಓದಿದ ವಿದ್ಯಾರ್ಥಿಗಳಿಗೆ ಕುಣಿಗಲ್ ಕೆರೆ ಯಾವ ಕಾಲದಲ್ಲಿ ನಿರ್ಮಾಣವಾಯಿತು ಎಂಬ ಅರಿವಿರುವುದಿಲ್ಲ. ಅದು ಸಾ.ಶ. 8ನೆಯ ಶತಮಾನದಲ್ಲಿಯೇ ನಿರ್ಮಾಣಗೊಂಡಿತು ಎಂದರೆ ನಂಬಲಾರರು. ಏಕೆಂದರೆ, ಇದು ಅವರು ಓದುವ ಪಠ್ಯಗಳಲ್ಲಿ ಇಲ್ಲದಿರುವುದೇ ಅವರ ಆಶ್ಚರ್ಯ ಮತ್ತು ಅಜ್ಞಾನಕ್ಕೆ ಕಾರಣ. ಇದಕ್ಕೆ ಯಾರನ್ನು ದೂಷಿಸಿದರೂ ಪ್ರಯೋಜನವಿಲ್ಲ. ಇದಕ್ಕೆ ಇರುವ ಪರಿಹಾರ ಒಂದೇ, ಸ್ಥಳೀಯ ಚರಿತ್ರೆಯನ್ನು ಪಠ್ಯದ ಭಾಗವಾಗಿಸುವುದು.

ನಮ್ಮ ಬದುಕಿನ ಅವಿಭಾಜ್ಯ ಅಂಗವಾಗಿರುವ ಸ್ಥಳೀಯ ಚರಿತ್ರೆ, ಸಂಸ್ಕೃತಿಯನ್ನೇ ಕಲಿಸದೆ / ಕಲಿಯದೆ ದೇಶ–ವಿದೇಶಗಳ ಚರಿತ್ರೆ ಮತ್ತು ಸಂಸ್ಕೃತಿಯ ಪರಿಚಯದಿಂದ ಸಾಧಿಸಿದ್ದಾದರು ಏನು ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಬೇಕಿದೆ. ಏಕೆಂದರೆ, ಇದು 'ದೀಪದ ಬುಡ ಕತ್ತಲು' ಎಂಬ ದೃಷ್ಟಾಂತಕ್ಕೆ ಸಾಕ್ಷಿಯಾಗಿರುವ ವಿಚಾರ. ವಸಾಹತು ಕಾಲದ ಪಠ್ಯಗಳಿಗೆ ಜೋತುಬಿದ್ದು, ಯೂರೋಪಿನ ಚರಿತ್ರೆಯ ಪಠ್ಯಗಳನ್ನೇ ಬೋಧಿಸುತ್ತಿರುವುದು ದಾಸ್ಯದ ಮತ್ತೊಂದು ಬಗೆಯಲ್ಲವೆ? ಹೀಗೆಂದ ಮಾತ್ರಕ್ಕೆ ದೇಶ–ವಿದೇಶಗಳ ಚರಿತ್ರೆ ಕಲಿಯಬಾರದು ಅಂತೇನು ಅಲ್ಲ. ವಿದೇಶಗಳ ಚರಿತ್ರೆಗೆ ಕೊಡುತ್ತಿರುವಷ್ಟೇ ಮನ್ನಣೆಯನ್ನು ಸ್ಥಳೀಯ ಚರಿತ್ರೆಗಳಿಗೂ ನೀಡಬೇಕು ಎಂಬುದಷ್ಟೇ ನನ್ನ ಆಶಯ. ಆದ್ದರಿಂದ ನಮ್ಮ ಅಧ್ಯಯನ ಅಥವಾ ಬೋಧನೆಯ ಆದ್ಯತೆಗಳು ಇಂದು ಬದಲಾಗಬೇಕಿದೆ.

ಈ ಬದಲಾವಣೆ ಉನ್ನತ ಶಿಕ್ಷಣದಲ್ಲಿ ಮಾತ್ರ ಸಾಧ್ಯ. ಏಕೆಂದರೆ ಪ್ರಾಥಮಿಕ ಶಾಲಾ ಹಂತದಿಂದ ಪದವಿಪೂರ್ವ ಹಂತದವರೆಗೆ ರಾಜ್ಯದಾದ್ಯಂತ ಒಂದೇ ಮಾದರಿಯ ಪಠ್ಯಕ್ರಮವನ್ನು ಬೋಧಿಸಬೇಕಾದ್ದರಿಂದ ಅಲ್ಲಿ ಸ್ಥಳೀಯ ಚರಿತ್ರೆಗಳಿಗೆ ಆದ್ಯತೆ ನೀಡಲು ಕಷ್ಟಸಾಧ್ಯ. ಆದರೆ ಪದವಿ ಮತ್ತು ಸ್ನಾತಕೋತ್ತರ ಪದವಿಗಳ ಹಂತದಲ್ಲಿ ಇವುಗಳ ಅನುಷ್ಠಾನ ಸುಲಭಸಾಧ್ಯವಿದೆ. ನಮ್ಮ ರಾಜ್ಯದಲ್ಲಿ ಹೆಚ್ಚು ಕಡಿಮೆ ಎರಡೂ ಮೂರು ಜಿಲ್ಲೆಗಳಿಗೆ ಒಂದರಂತೆ ಇತಿಹಾಸ / ಪುರಾತತ್ವ ವಿಭಾಗಗಳನ್ನುಳ್ಳ ವಿಶ್ವವಿದ್ಯಾಲಯಗಳಿವೆ. ಈ ವಿಶ್ವವಿದ್ಯಾಲಯಗಳ ಪದವಿ ಪಠ್ಯಕ್ರಮಗಳಲ್ಲಾದರೂ ಸ್ಥಳೀಯ ಚರಿತ್ರೆ ಮತ್ತು

ಸಂಸ್ಕೃತಿಗಳನ್ನು ಒಳಗೊಂಡ ಒಂದೆರಡು ಪತ್ರಿಕೆಗಳನ್ನು ಬೋಧಿಸುವಂತಾಗಬೇಕು. ಸ್ನಾತಕೋತ್ತರ ಪಠ್ಯಕ್ರಮಗಳಲ್ಲಿ ಕೂಡ ವಿಶ್ವವಿದ್ಯಾಲಯದ ವ್ಯಾಪ್ತಿಯ ಜಿಲ್ಲೆಗಳ ಇತಿಹಾಸ ಮತ್ತು ಸಂಸ್ಕೃತಿಯನ್ನು ಒಳಗೊಂಡ ಪತ್ರಿಕೆಗಳನ್ನು ವಿಸ್ತೃತವಾಗಿ ಇಡಬೇಕು. ಬೇರೆ ಬೇರೆ ವಿಶ್ವವಿದ್ಯಾಲಯಗಳಿಂದ ಬಂದು ಸೇರುವ ವಿದ್ಯಾರ್ಥಿಗಳಿರುತ್ತಾರೆ. ಅವರ ಮೇಲೆ ಸ್ಥಳೀಯ ಚರಿತ್ರೆಯನ್ನು ಹೇರಿದಂತೆ ಆಗುತ್ತದೆ ಎಂದೂ ಕೆಲವರು ಆಕ್ಷೇಪಿಸಬಹುದು. ಈ ಆಕ್ಷೇಪಣೆಗೆ ಅಷ್ಟೇನು ಪ್ರಾಮುಖ್ಯತೆ ನೀಡಬೇಕಿಲ್ಲ. ಏಕೆಂದರೆ ಹೊರಗಿನ ವಿಶ್ವವಿದ್ಯಾಲಯಗಳಿಂದ ಬಂದು ಸೇರುವವರು ಒಬ್ಬರೋ ಇಬ್ಬರೋ ಇರುತ್ತಾರಷ್ಟೆ ಸ್ಥಳೀಯ ಚರಿತ್ರೆಯ ಪತ್ರಿಕೆಗಳನ್ನು ಆಸಕ್ತರು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಿದರೆ ಆಯಿತು. ಮಿಗಿಲಾಗಿ ವಿದೇಶಿ ವಿದ್ವಾಂಸರು ಆಗಮಿಸಿ ನಮ್ಮ ಇತಿಹಾಸ ಮತ್ತು ಸಂಸ್ಕೃತಿಗಳನ್ನು ಅಧ್ಯಯನ ಮಾಡುತ್ತಿರುವ ನಿದರ್ಶನಗಳಿರುವಾಗ ಹೊರಗಿನಿಂದ ಬಂದ ಒಂದಿಬ್ಬರು ವಿದ್ಯಾರ್ಥಿಗಳಿಗಾಗಿ ಬಹುಸಂಖ್ಯಾತರು ತಮ್ಮ ಸ್ಥಳೀಯ ಇತಿಹಾಸ ಮತ್ತು ಸಂಸ್ಕೃತಿ ಕುರಿತು ಅಧ್ಯಯನ ನಡೆಸುವುದನ್ನೇ ನಿರ್ಬಂಧಿಸುವುದು ಎಷ್ಟು ಸರಿ?

ಮತ್ತೊಂದು ಪ್ರಶ್ನೆಯನ್ನು ಎಸೆಯುವವರೂ ಇದ್ದಾರೆ. ಸ್ಥಳೀಯ ಚರಿತ್ರೆಯನ್ನು ಅಭ್ಯಾಸ ಮಾಡುವ ಆಕರಗಳು ಎಲ್ಲಿವೆ? ನನ್ನ ಪ್ರಕಾರ ಇದು ದೊಡ್ಡ ಸಮಸ್ಯೆಯೇ ಅಲ್ಲ. ಹೆಚ್ಚು ಕಡಿಮೆ ಪ್ರತಿ ಜಿಲ್ಲೆಗಳಿಗೆ ಒಂದೋ, ಎರಡೋ ಗ್ಯಾಸೆಟಿಯರ್‌ಗಳು ಹೊರಬಂದಿವೆ (ಹೊಸ ಜಿಲ್ಲೆಗಳಿಗೆ ಬಂದಿಲ್ಲ. ಆದರೆ, ಹಳೆಯ ಜಿಲ್ಲೆಯ ಗ್ಯಾಸೆಟಿಯರ್‌ನಲ್ಲಿಯೇ ಹೊಸ ಜಿಲ್ಲೆಗಳ ವಿಚಾರಗಳು ದೊರಕುತ್ತವೆ). ಬಹುತೇಕ ಜಿಲ್ಲಾವಾರು ಶಾಸನ ಸಂಪುಟಗಳು ಹೊರಬಂದಿವೆ. ಇವುಗಳನ್ನು ಪ್ರಮುಖ ಆಕರಗಳಾಗಿ ಬಳಸಿಕೊಳ್ಳಬಹುದು. ಇವಲ್ಲದೆ, ಹಲವು ಜಿಲ್ಲಾವಾರು ಇತಿಹಾಸ ಮತ್ತು ಪುರಾತತ್ವ ಸಂಪುಟಗಳೂ ಬಂದಿವೆ. ಜೊತೆಗೆ ಸ್ಥಳೀಯ ಇತಿಹಾಸಕಾರರು ನಡೆಸಿರುವ ಅಧ್ಯಯನಗಳನ್ನು ಮತ್ತು ಸಂಶೋಧನಾ ಕೃತಿಗಳನ್ನು ಕೂಡ ಪ್ರಮುಖ ಆಕರಗಳನ್ನಾಗಿ ಬಳಸಿಕೊಳ್ಳಬಹುದಾಗಿರುತ್ತದೆ. ಒಟ್ಟಾರೆ, ಸ್ಥಳೀಯ ಚರಿತ್ರೆಯ ಅಧ್ಯಯನಕ್ಕೆ ವಿದ್ಯಾರ್ಥಿಗಳನ್ನು ಅಣಿಗೊಳಿಸಿ ಬಿಟ್ಟರೆ ಮುಂದೆ ಸಮಗ್ರ ಅಧ್ಯಯನಗಳಿಗೆ ದಾರಿ ತೆರೆದಂತಾಗುತ್ತದೆ. ಇದರಿಂದ ಸ್ಥಳೀಯ ಚರಿತ್ರೆಯ ಮೂಲಕ ಸೂಕ್ಷ್ಮ ಅಧ್ಯಯನ ಮತ್ತು ಅಲಕ್ಷಿತ ಚರಿತ್ರೆಯ ಅಧ್ಯಯನಕ್ಕೂ ಎಡೆಮಾಡಿಕೊಡುತ್ತದೆ.

ಸ್ಥಳೀಯ ಚರಿತ್ರೆಯ ಅತಿದೊಡ್ಡ ಸವಾಲೆಂದರೆ ಇರುವ ವಿಫುಲವಾದ ಅಕರಗಳನ್ನು ಓದಿ ಅರ್ಥೈಸಿಕೊಳ್ಳಲಾಗದ ಭಾಷಾ ಅವಜ್ಞೆ ಇತಿಹಾಸ ವಿದ್ಯಾರ್ಥಿಗಳಲ್ಲಿ ಇರುವುದು. ಸ್ಥಳೀಯ ಚರಿತ್ರೆಯನ್ನು ಸಮಗ್ರವಾಗಿ ಗ್ರಹಿಸಬೇಕಾದರೆ ಭಾಷಾ ಜ್ಞಾನ ಅತ್ಯಂತ ಪ್ರಮುಖವಾದುದು. ಕಾಲಕಾಲದ ಭಾಷಾ ಬೆಳವಣಿಗೆಯನ್ನು ಗುರುತಿಸಲು ಸಾಧ್ಯವಾಗದವರು ಮೂಲ ಆಕರಗಳನ್ನು ಬದಿಗೊತ್ತಿ ದ್ವಿತೀಯ ಆಕರಗಳಿಗೆ ಜೋತು ಬೀಳುತ್ತಾರೆ. ಇದರಿಂದ ಚರಿತ್ರೆಯನ್ನು ಪುನರ್ ವ್ಯಾಖ್ಯಾನಿಸುವ ಸಾಧ್ಯತೆಗಳು ಕ್ಷೀಣಿಸುತ್ತಿವೆ. ಇದನ್ನು ನಿವಾರಿಸಲು ಪದವಿ ತರಗತಿಗಳಿಂದಲೇ ಭಾಷಾ ಜ್ಞಾನಕ್ಕೆ ಆದ್ಯತೆ ನೀಡಬೇಕು.

ಇತಿಹಾಸವನ್ನು ಕಲಿಸುತ್ತಿರುವ ಕೆಲವು ಅಧ್ಯಾಪಕರುಗಳು ಕೇವಲ ಇಂಗ್ಲಿಶ್‌ನಲ್ಲಿರುವ ಆಕರಗಳನ್ನು ಮಾತ್ರ ಬಳಸಿಕೊಂಡು ಸ್ಥಳೀಯ ಭಾಷೆಯಲ್ಲಿ ಸೃಷ್ಟಿಯಾಗಿರುವ ಮಹತ್ವದ

ಅಧ್ಯಯನಗಳನ್ನು ಬದಿಗಿರಿಸುತ್ತಾರೆ. ಇದರಿಂದಲೂ ಒಂದು ಬಗೆಯ ಸಮಸ್ಯೆ ಸೃಷ್ಟಿಯಾಗುತ್ತದೆ.

ಈ ನಿಟ್ಟಿನಲ್ಲಿ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ ಮತ್ತು ಬೆಂಗಳೂರು ಉತ್ತರ ವಿಶ್ವವಿದ್ಯಾಲಯಗಳು ಕಾರ್ಯೋನ್ಮುಖವಾಗಿವೆ ಎಂಬುದನ್ನು ಕೇಳಿದ್ದೇನೆ. ಇದು ಒಳ್ಳೆಯ ಬೆಳವಣಿಗೆ. ಈ ನಡೆಯಿಂದ ಕರ್ನಾಟಕದ ಇತರ ವಿಶ್ವವಿದ್ಯಾಲಯಗಳೂ ಪ್ರೇರಿತಗೊಂಡು ಸ್ಥಳೀಯ ಚರಿತ್ರೆ ಮತ್ತು ಪುರಾತತ್ವವನ್ನು ಒಳಗೊಂಡ ಪತ್ರಿಕೆಗಳನ್ನು ಕಡ್ಡಾಯಗೊಳಿಸಿದರೆ, ರಾಜ್ಯದಲ್ಲಿ ಚರಿತ್ರೆಗೆ ಹೊಸ ಆಯಾಮವನ್ನು ಕೊಟ್ಟಂತಾಗುತ್ತದೆ. ಈ ನಿಟ್ಟಿನಲ್ಲಿ ಪ್ರಾಜ್ಞರು ಗಮನಹರಿಸಬೇಕಷ್ಟೆ.

ಹಂ.ಗು. ರಾಜೇಶ್
ಸಂಪಾದಕರು

ಚಂದಾದಾರರಲ್ಲಿ ಮನವಿ

ಮಾನ್ಯರೇ,

ಕಳೆದ ನಾಲ್ಕೂವರೆ ವರ್ಷಗಳಿಂದ 'ಇತಿಹಾಸ ದರ್ಪಣ'ದ ಚಂದಾದಲ್ಲಿ ಯಾವುದೇ ಬದಲಾವಣೆಗಳನ್ನು ಮಾಡಿರುವುದಿಲ್ಲ. ಆದರೆ ಇಂದು ಕಾಗದ, ಬಣ್ಣಗಳ ಬೆಲೆ ಮತ್ತು ಮುದ್ರಣದ ವೆಚ್ಚ ದುಭಾರಿಯಾಗಿರುವ ಹಿನ್ನೆಲೆಯಲ್ಲಿ ಚಂದಾ ಪರಿಷ್ಕರಣೆ ಅನಿವಾರ್ಯವಾಗಿದೆ. ಮಾನ್ಯ ಚಂದಾದಾರರು ದರ ಪರಿಷ್ಕರಣೆಯನ್ನು ಸಹಿಸಿಕೊಂಡು ಎಂದಿನಂತೆ ಸಹಕರಿಸಬೇಕಾಗಿ ವಿನಂತಿ.

–ಸಂಪಾದಕರು.

ಪರಿಷ್ಕೃತ ಚಂದಾ ವಿವರ ಈ ರೀತಿ ಇದೆ

	ವಯಕ್ತಿಕ ಚಂದಾ	ಶಾಲಾ ಕಾಲೇಜು ಮತ್ತು ಸಂಘ ಸಂಸ್ಥೆಗಳ ಚಂದಾ
ವಾರ್ಷಿಕ	400/-	600/-
ದ್ವೈವಾರ್ಷಿಕ	700/-	1100/-
ತ್ರೈವಾರ್ಷಿಕ	1000/-	1500/-

ITIHASA DARPANA (Quarterly)
A Peer Reviewed Journal of Historical Research in Kannada
ISSN 2321-3590
Book No.: 37-38.
April – September 2018
Author: Mohana R.
Title: Maski mattu Lingasūgūru parisarada bayalu bandegaḷu chitragaḷu: ittīchina mukhya purātatva samshodhanegaḷu

ಮಸ್ಕಿ ಮತ್ತು ಲಿಂಗಸೂಗೂರು ಪರಿಸರದ ಬಯಲುಬಂಡೆ ಚಿತ್ರಗಳು: ಇತ್ತೀಚಿನ ಮುಖ್ಯ ಪುರಾತತ್ವ ಸಂಶೋಧನೆಗಳು

ಮೋಹನ ಆರ್
ಡಾ. ಸರ್ವೇಪಲ್ಲಿ ರಾಧಾಕೃಷ್ಣನ್ ಪೋಸ್ಟ್ ಡಾಕ್ಟರಲ್ ಫೆಲೋ (ಯು.ಜಿ.ಸಿ.)
ಡೆಕ್ಕನ್ ಕಾಲೇಜ್, ಸ್ನಾತಕೋತ್ತರ ಮತ್ತು ಸಂಶೋಧನ ಸಂಸ್ಥೆ
ಸ್ವಾಯತ್ತ ವಿಶ್ವವಿದ್ಯಾನಿಲಯ,
ಪುಣೆ 411 006
ಮೊ: 09980774716
mohangulya@gmail.com

ಕನ್ನಡನಾಡು ಕಲಾ ಸಿರಿವಂತಿಕೆಯ ಬೀಡು. ನಾಡಿನ ಕಲೆಯ ಪ್ರಾಚೀನತೆ ಹಾಗೂ ಅದರ ವಿಕಸನವು ನಮ್ಮ ಹೃದಯ ಪುಳಕಿತಗೊಳಿಸುವ ಜೊತೆಗೆ, ಸ್ಮೃತಿಪಟಲದಲ್ಲಿ ಲೀನವಾಗುತ್ತದೆ. ಪ್ರಾಕ್ತನ ಶಾಸ್ತ್ರಜ್ಞರು ಹಾಗೂ ಹವ್ಯಾಸಿ ಸಂಶೋಧಕರಿಂದ ನೂರಾರು ವರ್ಷಗಳಿಂದಲೂ ಕರ್ನಾಟಕವನ್ನೊಳಗೊಂಡಂತೆ ಭಾರತದಲ್ಲಿ ಪ್ರಾಗಿತಿಹಾಸಿಕ ವರ್ಣ, ಕುಟ್ಟು, ಗೀರುಚಿತ್ರಗಳ ಜೊತೆಗೆ ಕಲ್ಗುಳಿಗಳ ನೆಲೆಗಳನ್ನು ಶೋಧಿಸಿ ಪ್ರಕಟಿಸಿದ್ದಾರೆ.[1] ಆದರೆ ಇವುಗಳ ಕೂಲಂಕಷ ಅಭ್ಯಾಸ ಇತ್ತೀಚಿನ ದಿನಗಳಲ್ಲಿ ಕೆಲವೇ ವಿದ್ವಾಂಸರಿಂದ ನಡೆಯುತ್ತಿದ್ದು, ಇನ್ನೂ ಹೆಚ್ಚಿನ ಸಂಶೋಧನೆಗಳು ಅವಶ್ಯ. ಬಂಡೆ ಚಿತ್ರಕಲೆಯು ಗವಿ-ಕಲ್ಲಾಸರೆ ಮತ್ತು ಬಯಲುಬಂಡೆಗಳ ಬೆಟ್ಟ-ಗುಡ್ಡಗಳಲ್ಲಿವೆ. ಇಂತಹ ಚಿತ್ರಗಳ ಸೌಂದರ್ಯ ಹಾಗೂ ಮಹತ್ವ ಅರಿವಾಗುತ್ತಿರುವುದರಿಂದ ಈಚೆಗೆ ಅವುಗಳ ಶೋಧನೆ, ಅಭ್ಯಾಸದಲ್ಲಿ ಆಸಕ್ತಿ ಹೆಚ್ಚುತ್ತಿದೆ.

ಲೀಚ್ಹಾರ್ಡ್ 1845 ರಲ್ಲಿ ಆಸ್ಟ್ರೇಲಿಯಾದ ವರ್ಣಚಿತ್ರ ಹಾಗೂ ಭಾರತದಲ್ಲಿ 1956ರಲ್ಲಿ ಹೆನ್‌ವುಡ್‌ರವರು ನಡೆಸಿದ ಅಲೋರ ನೆಲೆಯಲ್ಲಿನ ಕುಟ್ಟು ಮತ್ತು ಗೀರುಚಿತ್ರಗಳ ಶೋಧನೆ

ಪ್ರಪ್ರಥಮವಾದರೂ ಬಹುಶಃ 1879ರಲ್ಲಿ ಮಾರ್ಸೆಲಿನೋ ಸಾನ್ಜ್ ಡೆ ಸಾಟೂಲಾ ಅಲ್ತಮಿರ(ಸ್ಪೇನ್)ದಲ್ಲಿಯ ಗವಿ ವರ್ಣಚಿತ್ರಗಳ ಶೋಧನೆ ಹಾಗೂ 1957ರಲ್ಲಿ ವಾಕಣ್‌ಕರ್ (1973) ರವರು ಮಧ್ಯ ಪ್ರದೇಶದ ಭೀಂಬೆಟ್ಕ ಕಲ್ಲಾಸರೆಯಲ್ಲಿನ ವರ್ಣಚಿತ್ರಗಳ ಶೋಧನೆ ಪ್ರಾಗಿತಿಹಾಸ ಬಂಡೆಚಿತ್ರ ಅಧ್ಯಯನಕ್ಕೆ ಒಂದು ಹೊಸ ಮೆರುಗು ನೀಡಿದವು.

ಅಧ್ಯಯನದ ಹಿನ್ನೆಲೆ

ಫಾಸೆಟ್‌ರವರು (1892) ಬಳ್ಳಾರಿಯ ಸಮೀಪದ ಕಪ್ಪಗಲ್ಲು ಅಥವಾ ಹಿರೇಗುಡ್ಡ ನೆಲೆಯಲ್ಲಿನ ಕುಟ್ಟು ಮತ್ತು ಗೀರುಚಿತ್ರಗಳನ್ನು ಬೆಳಕಿಗೆ ತಂದರು. ನಂತರ ನೆಲೆಯ ಹೆಚ್ಚಿನ ವಿವರಣೆಯನ್ನು ರಾಬರ್ಟ್ ಬ್ರೂಸ್ ಫುಟ್ 1916 ರಲ್ಲಿ ಪ್ರಕಟಿಸಿದ **ದಿ ಫೂಟ್ ಕಲೆಕ್ಷನ್ ಆಫ್ ದಿ ಇಂಡಿಯನ್ ಪ್ರಿ ಹಿಸ್ಟಾರಿಕ್ ಆ್ಯಂಡ್ ಪ್ರೋಟೋ ಹಿಸ್ಟಾರಿಕ್ ಆ್ಯಂಟಿಕ್ವಿಟೀಸ್: ನೋಟ್ಸ್ ಆನ್ ದೇರ್ ಏಜಸ್ ಆ್ಯಂಡ್ ಡಿಸ್ಟ್ರಿಬ್ಯೂಷನ್ಸ್** ಹೊತ್ತಗೆಯಲ್ಲಿ ನೋಡಬಹುದು. ಇದೇ ನೆಲೆಯ ಮುಂದುವರಿದ ಭಾಗವಾಗಿ ಗಾರ್ಡ್‌ನ್ (1951) ಲೇಖನವನ್ನು ಪ್ರಕಟಿಸಿದ್ದರು. 1915ರಲ್ಲಿ ಲಿಯೋನಾರ್ಡ್ ಮನ್ ಹಿರೇ ಬೆಣಕಲ್ (ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ) ಗುಡ್ಡಗಳಲ್ಲಿ ಸ್ವಾರಸ್ಯಕರವಾದ ಮೂರು ಗವಿ ವರ್ಣಚಿತ್ರಗಳನ್ನು ಶೋಧಿಸುವ ಜೊತೆಗೆ ಭಿಲ್ಲಮರಾಯ ಗುಡ್ಡದಲ್ಲಿ ಕುಟ್ಟಿದ ಮತ್ತು ಗೀರುಚಿತ್ರಗಳನ್ನು ಕಂಡು ಹಿಡಿದರು.[2] ಮನ್ ಶೋಧನೆಯ ನಂತರ 1940ರ ದಶಕದಲ್ಲಿ ಮಸ್ಕಿ, ಕಲ್ಲೂರು (ರಾಯಚೂರು ಜಿಲ್ಲೆ), ಬಲಚಕ್ರ ಮತ್ತು ಅತನೂರ್ ಎಂಬಲ್ಲಿ ಹಿಂದಿನ ಹೈದರಾಬಾದ್ ಸಂಸ್ಥಾನದ ಪುರಾತತ್ವ ಸರ್ವೇಕ್ಷಣ ಮತ್ತು ಭೂ ವಿಜ್ಞಾನ ವಿಭಾಗಗಳು ಕ್ರಮವಾಗಿ ಕುಟ್ಟಿದ ಮತ್ತು ಗವಿ ವರ್ಣಚಿತ್ರಗಳನ್ನು ಶೋಧಿಸಿ ತಮ್ಮ ಶಾಖೆಗಳ ವಾರ್ಷಿಕ ವರದಿಗಳಲ್ಲಿ ಪ್ರಕಟಿಸಿವೆ. ಧಾರವಾಡದಲ್ಲಿರುವ ಆಗಿನ ಮುಂಬೈ ಸರ್ಕಾರದ ಕನ್ನಡ ಸಂಶೋಧನಾ ಸಂಸ್ಥೆಯು (1956 ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸೇರಿಸಲ್ಪಟ್ಟಿತು) ಕುಳ್ಗೋಳ್ಳಿ ನೆಲೆಯಲ್ಲಿನ ಗೀರು ಮತ್ತು ಕುಟ್ಟಿದ ಚಿತ್ರಗಳನ್ನು 1951ರ ಸಮಯದಲ್ಲಿ ಪ್ರಕಟಿಸಿತು. ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ಅಲ್ಚಿನ್ ದಂಪತಿ ಪಿಕ್ಲಿಹಾಳ್ ನೆಲೆಯನ್ನು ಶೋಧಿಸಿ, ಉತ್ಖನನ ಕೈಗೊಂಡರು. 1960ರಲ್ಲಿ ಪ್ರಕಟವಾದ ವರದಿಯಲ್ಲಿ ಇವುಗಳ ಕೂಲಂಕಷ ವಿವರಣೆಯನ್ನು ನೀಡಿದ್ದಾರೆ (1960, 1994–95). ಆಸ್ಟ್ರಿಯ ದೇಶದ ಇರ್ವಿನ್ ನ್ಯೂಮಯರ್ (1993, 2010) ಕೊಡುಗೆಯೂ ಶ್ಲಾಘನೀಯವಾದುದಾಗಿದೆ.

ಸುಂದರ 1960ರ ದಶಕದಿಂದ ಕರ್ನಾಟಕದ ಹಲವಾರು ಭಾಗಗಳಲ್ಲಿ ಅನ್ವೇಷಣಾ ಕಾರ್ಯವನ್ನು ಕೈಗೊಂಡು ರಾಮದುರ್ಗ (ಬೆಳಗಾವಿ ಜಿಲ್ಲೆ); ಬಾದಾಮಿ, ಹೊಸ ಮಹಾಕೂಟ, ಐಹೊಳೆ (ಬಾಗಲಕೋಟೆ ಜಿಲ್ಲೆ); ಕೊಪ್ಪಳ, ಬಿಳಿಬಾವಿ, ಮಲ್ಲಾಪುರ, ಆನೆಗೊಂದಿ, ತಿಮ್ಮಲಾಪುರ, ನಾರಾಯಣಪುರ, ಬಂಡಿಹರ್ಲಾಪುರ, ತಾವರಗೇರ (ಕೊಪ್ಪಳ ಜಿಲ್ಲೆ); ಮಾಸ್ಕಿ, ಬೈಲ್‌ಮರ್ಚೆಡ್ (ರಾಯಚೂರು ಜಿಲ್ಲೆ); ಕುರುಗೋಡು, ಹಳಕುಂದಿ, ಬೆಳಗಲ್ಲು, ಹಂಪಿ (ಬಳ್ಳಾರಿ ಜಿಲ್ಲೆ); ಬ್ರಹ್ಮಗಿರಿ, ಜಟಿಂಗ ರಾಮೇಶ್ವರ, ಚಿತ್ರದುರ್ಗ (ಚಿತ್ರದುರ್ಗ ಜಿಲ್ಲೆ); ಜೋಳಿ (ಉತ್ತರ ಕನ್ನಡ ಜಿಲ್ಲೆ); ಹರಕೆರೆ, ಹೊಳಲೂರು, ಹೊಳೆಹಟ್ಟಿ, ಹೊಳೆಹನ್ನವಾಡಿ (ಶಿವಮೊಗ್ಗ ಜಿಲ್ಲೆ) ಹೀಗೆ ಕರ್ನಾಟಕದಾದ್ಯಂತ ಪ್ರಾಗಿತಿಹಾಸ ವರ್ಣ, ಕುಟ್ಟು ಹಾಗೂ ಗೀರು ಚಿತ್ರಗಳನ್ನು ಹೊಸದಾಗಿ ಶೋಧಿಸಿ ಪ್ರಕಟಿಸಿದ್ದರು. ಅಷ್ಟೇ ಅಲ್ಲದೇ ಹೆಚ್ಚಿನ ಅಧ್ಯಯನಕ್ಕಾಗಿ ಪೂರ್ವ ಶೋಧಿತ ನೆಲೆಗಳನ್ನು ಪುನರ್

ಪರಿಶೀಲಿಸುವ ವೇಳೆ ಇನ್ನು ಹಲವಾರು ಸ್ಥಳಗಳನ್ನು ಕಂಡುಹಿಡಿದು ಅಧ್ಯಯನ ನಡೆಸಿದರು. ಉದಾಹರಣೆಗೆ ಬಿಲ್ಲಮರಾಯನ ಗುಡ್ಡ, ಹಳಕುಂಡಿ, ಆನೆಗೊಂದಿ, ಹಿರೇಬೆಣಕಲ್, ಬಾದಾಮಿ, ಚಿತ್ರದುರ್ಗ, ಚಂದ್ರವಳ್ಳಿ. ಇವೆಲ್ಲವನ್ನು ಕ್ರೋಡೀಕರಿಸಿ **ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ** ಹೊತ್ತಗೆಯನ್ನು 1994 ರಲ್ಲಿ ಪ್ರಕಟಿಸಿದ್ದರು.

ಶ್ರೀಶೈಲ ಆರಾಧ್ಯ (1987), ಸುಂದರ (1994), ಲಕ್ಷ್ಮಣ್ ತೆಲಗಾವಿ (2005) ಮತ್ತು ಎಸ್. ತಿಪ್ಪೆಸ್ವಾಮಿ (2006, 2007) ಚಿತ್ರದುರ್ಗ ಜಿಲ್ಲಾ ಪರಿಸರದಲ್ಲಿ ಅನ್ವೇಷಣೆಯನ್ನು ಕೈಗೊಂಡು ಸುಮಾರು 30ಕ್ಕೂ ಹೆಚ್ಚು ಬಂಡೆಗಲ್ಲು ಚಿತ್ರ ನೆಲೆಗಳನ್ನು ಶೋಧಿಸಿ ಪ್ರಕಟಿಸಿದ್ದಾರೆ. ಈ ಪ್ರದೇಶದಲ್ಲಿ ನೆಲೆಗಳ ಪುನರ್ ಪರಿಶೀಲನೆಯ ಕ್ಷೇತ್ರಕಾರ್ಯ ಅನ್ವೇಷಣೆಯ ವೇಳೆ ಇನ್ನೂ ಹಲವು ನೆಲೆಗಳನ್ನು ಶೋಧಿಸಿ ಲೇಖಕರು ಅಧ್ಯಯನ ನಡೆಸಿದ್ದಾರೆ.[3]

ಶರಣಬಸಪ್ಪ ಕೋಲ್ಕಾರ ಹಂಪಿ–ಹಿರೇ ಬೆಣಕಲ್ ಪ್ರದೇಶದ ಪ್ರಾಗೈತಿಹಾಸಿಕ ಬಂಡೆಚಿತ್ರಗಳ ಅಧ್ಯಯನವನ್ನು ಕೈಗೊಂಡರು. ತಮ್ಮ ಸಂಶೋಧನೆಯ ಫಲಶ್ರುತಿಯನ್ನು 2010ರಲ್ಲಿ ಪ್ರಕಟಿಸಿದ ತಮ್ಮ **ಶಿಲಾಯುಗದ ಗವಿಚಿತ್ರಗಳು** ಹೊತ್ತಗೆಯಲ್ಲಿ ಕಾಣಬಹುದು. ಈ ಪುಸ್ತಕದಲ್ಲಿ ಕೊಪ್ಪಳ, ಗಂಗಾವತಿ ಮತ್ತು ಹೊಸಪೇಟೆ ಪರಿಸರದಲ್ಲಿ 17 ಹೊಸ ನೆಲೆಗಳ ಜೊತೆಗೆ ಒಟ್ಟು 76 ಗವಿ/ಕಲ್ಲಾಸರೆ/ಬಂಡೆಚಿತ್ರ ನೆಲೆಗಳನ್ನು ಹೊಸದಾಗಿ ಶೋಧಿಸಿರುವುದನ್ನು ಉಲ್ಲೇಖಿಸಿದ್ದಾರೆ. ಇವರ ಬೆನ್ನಲ್ಲೇ ಲೇಖಕರು ಇತ್ತೀಚೆಗೆ ಕೈಗೊಂಡ ಕಾರ್ಯಕ್ಷೇತ್ರ ಅನ್ವೇಷಣೆಯಲ್ಲಿ ಇನ್ನೂ ಹತ್ತಾರು ನೆಲೆಗಳ ಜೊತೆಗೆ 100ಕ್ಕೂ ಹೆಚ್ಚು ಸ್ಥಳಗಳನ್ನು ಬೆಳಕಿಗೆ ತಂದಿದ್ದು, ಈ ಪ್ರದೇಶವನ್ನು ದಕ್ಷಿಣದ ಭೀಂಬೆಟ್ಕಾ ಎಂದು ನಿಶ್ಚಯವಾಗಿ ಹೇಳುವಂತೆ ಮಾಡಿದ್ದಾರೆ.[4] ಹಾಗೆಯೇ ಲೇಖಕರು ಮಲಪ್ರಭಾ ನದಿ ತೀರದಲ್ಲಿ ಕ್ರಮಬದ್ಧ ಅನ್ವೇಷಣೆಯನ್ನು 2012–2015ರ ಅವಧಿಯಲ್ಲಿ ಅವರ ಡಾಕ್ಟರಲ್ ಅಧ್ಯಯನ ವಸ್ತುವನಾಗಿಟ್ಟು ಕೈಗೊಂಡ ಅನ್ವೇಷಣೆಯಲ್ಲಿ 32 ನೆಲೆಗಳಲ್ಲಿನ 78 ಚಿತ್ರ ನೆಲೆಗಳನ್ನು ಶೋಧಿಸಿ ಅವುಗಳ ವೈಜ್ಞಾನಿಕ ಅಧ್ಯಯನ ಮಾಡಿದ್ದಾರೆ (2015). ಈ ನೆಲೆಗಳಲ್ಲಿ ಇತಿಹಾಸ ಕಾಲದ ವೈವಿಧ್ಯಮಯ ವರ್ಣ ಚಿತ್ರಗಳಲ್ಲದೆ, ಹೆಚ್ಚಾಗಿ ಪ್ರಾಯಶಃ ಅಂತ್ಯ ಹಳೆ ಶಿಲಾಯುಗ–ಸೂಕ್ಷ್ಮ ಶಿಲಾಯುಗ ಕಾಲದ ಹಂದಿ, ಜಿಂಕೆ ಮೊದಲಾದ ಕಾಡುಪ್ರಾಣಿಗಳ ವರ್ಣ ಕುಟ್ಟು, ಗೀರು ಚಿತ್ರಗಳ ಜೊತೆಗೆ ಕಲ್ಗುಳಿ ಇರುವುದು ವಿಶೇಷ. ಚನ್ನಬಸಪ್ಪ ಮಲ್ಕಂದಿನ್ನಿ (2015, 2017) ಮಸ್ಕಿ ಪರಿಸರದ ಕುಟ್ಟುಚಿತ್ರಗಳ ಬಗ್ಗೆ ಇನ್ನೂ ಹೆಚ್ಚಿನ ಪರಿಚಯವನ್ನು ಮಾಡಿಕೊಟ್ಟರು. ಕರ್ನಾಟಕದ ಕೊಂಕಣತೀರ ಪ್ರದೇಶದಲ್ಲಿ ವಸಂತಶೆಟ್ಟಿ, ರಘುನಾಥ ಭಟ್ಟ ಮತ್ತು ಇತ್ತೀಚೆಗೆ ಮುರುಗೇಶಿ (2014) ಪ್ರಾಗಿತಿಹಾಸ ಚಿತ್ರಗಳ ಮೇಲೆ ಬೆಳಕನ್ನು ಚೆಲ್ಲಿದ್ದಾರೆ. ನಂತರದಲ್ಲಿ ಸಾಕಷ್ಟು ಅಧ್ಯಯನಗಳು ನಡೆದಿದ್ದು, ಕರ್ನಾಟಕದ ಅಧ್ಯಯನಕ್ಕೆ ತನ್ನದೇ ರೂಪುರೇಷೆಯನ್ನು ನೀಡಿದೆ.

ಬಂಡೆಚಿತ್ರಗಳನ್ನು ಸ್ಥೂಲವಾಗಿ ಎರಡು ವಿಧಗಳಲ್ಲಿ ವರ್ಗೀಕರಿಸಬಹುದು. ಅವುಗಳೆಂದರೆ:

ವರ್ಣಚಿತ್ರಗಳು: ಸಾಮಾನ್ಯವಾಗಿ ಗವಿ ಅಥವಾ ಕಲ್ಲಾಸರೆಯ ಒಳಬದಿಯಲ್ಲಿ ಕೆಮ್ಮಣ್ಣು ಅಥವಾ ಉರುಮಂಜು, ಬಿಳಿ, ಹಳದಿ, ಹಸಿರು ಬಣ್ಣದಲ್ಲಿ ಬಿಡಿಸಿದ ಚಿತ್ರಗಳು. ಭಾರತದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಈ ಪ್ರಕಾರದ ಚಿತ್ರಗಳು ಕಂಡುಬರುತ್ತವೆ.

ಬಯಲುಬಂಡೆ ಚಿತ್ರ: ಇದರಲ್ಲಿ ಮತ್ತೆ ಮೂರು ಪ್ರಕಾರಗಳನ್ನು ನೋಡಬಹುದು. ಅವುಗಳೆಂದರೆ: ಕುಟ್ಟುಚಿತ್ರಗಳು, ಗೀರುಚಿತ್ರಗಳು ಮತ್ತು ಕಲ್ಗುಳಿಗಳು.

ಕರ್ನಾಟಕದಲ್ಲಿ ಇದುವರೆಗೆ 200ಕ್ಕೂ ಹೆಚ್ಚು ಬಂಡೆಚಿತ್ರ ಹಾಗೂ ಕಲ್ಗುಳಿ ನೆಲೆಗಳು ಶೋಧಿತವಾಗಿವೆ. ವಿಶೇಷವೆಂದರೆ ಲಿಂಗಸೂಗೂರು-ಮಸ್ಕಿ ಪರಿಸರದ ಹಾಗೂ ಬಳ್ಳಾರಿ ಪ್ರದೇಶದಲ್ಲಿ ಕುಟ್ಟುಚಿತ್ರಗಳು ಪ್ರಾಧಾನ್ಯವಾಗಿದ್ದು, ಗೀರುಚಿತ್ರಗಳು ಅಲ್ಲಲ್ಲಿ ಕಂಡುಬರುವುದರ ಜೊತೆಗೆ ಕಲ್ಗುಳಿಗಳು ಎಲ್ಲ ಕಡೆ ಕಂಡುಬಂದಿವೆ. ಕರ್ನಾಟಕದಲ್ಲಿ ಇಷ್ಟೊಂದು ಪ್ರಮಾಣದ ಬಂಡೆಚಿತ್ರ ನೆಲೆಗಳು ಇದುವರೆಗೂ ನಡೆದ ಸಂಶೋಧನೆಗಳಿಂದ ದಾಖಲಾಗಿದ್ದು, ಭಾರತದಲ್ಲಿಯೇ ಪ್ರಥಮ ಸ್ಥಾನವನ್ನು ಪಡೆದುಕೊಂಡಿವೆ.

ಪ್ರಸ್ತುತ ಲೇಖನವು ಪ್ರಮುಖವಾಗಿ ಮಸ್ಕಿ-ಲಿಂಗಸೂಗೂರು ಪರಿಸರದಲ್ಲಿ ದೊರೆತಿರುವ ಬಯಲು ಬಂಡೆಗಳ ಮೇಲಿನ ಚಿತ್ರಗಳನ್ನು ಕುರಿತದ್ದಾಗಿದೆ. ಬಯಲು ಬಂಡೆ ಚಿತ್ರಗಳ ಕ್ರಮವು ವರ್ಣಚಿತ್ರಗಳಿಗಿಂತ ಸಹಜವಾಗಿ ಭಿನ್ನವಾಗಿವೆ. ಬೃಹದಾಕಾರದ ಬಂಡೆಗಳ ರಾಶಿಯಂತಿರುವ ಬೆಟ್ಟಗಳ ಮಧ್ಯದ ಮತ್ತು ಮೇಲಿನ ಹಂತಗಳಲ್ಲಿ, ಬಯಲಿನಲ್ಲಿರುವ ಸಮತಟ್ಟಿನ ಮೇಲ್ಮೈಯಲ್ಲಿ ಬೇಕಾದ ಚಿತ್ರವನ್ನು ಮೂಡಿಸುವುದಕ್ಕೆ ಅನುಕೂಲಕರವಾದ ಕಲ್ಲಿನಿಂದ ಏಕಪ್ರಕಾರವಾಗಿ ಕುಟ್ಟಿ ಬಿಡಿಸುವುದು; ನಂತರದ ಕಾಲ ಘಟ್ಟಗಳಲ್ಲಿ ಉಳಿಯುವಂತಹ ಚೂಪಾದ ಅಥವಾ ಮೊನಚಾದ ಕಲ್ಲಿನ ಅಥವಾ ಲೋಹದ ಉಪಕರಣದಿಂದ ಗೆರೆಗಳನ್ನು ಮೂಡಿಸುವುದು. ಇಂತಹ ಚಿತ್ರಗಳು ಈ ಪರಿಸರದಲ್ಲಿ ಹೇರಳವಾಗಿ ಕಂಡುಬಂದಿವೆ.

ರಾಯಚೂರು ಜಿಲ್ಲೆಯಲ್ಲಿ ಇದುವರೆಗೂ 30ಕ್ಕಿಂತ ಹೆಚ್ಚು ಬಂಡೆಚಿತ್ರ ನೆಲೆಗಳು ಬೆಳಕಿಗೆ ಬಂದಿವೆ. ಅವುಗಳಲ್ಲಿ ಪ್ರಮುಖವಾಗಿ ಪ್ರಸ್ತುತ ಲೇಖಕರ ಇತ್ತೀಚಿನ ಕ್ಷೇತ್ರಕಾರ್ಯ ಅಧ್ಯಯನಗಳ ಫಲಿತಾಂಶವನ್ನು ಪೂರ್ವ ಸಂಶೋಧನೆಗಳ ಜೊತೆಗೆ ಈ ಲೇಖನದಲ್ಲಿ ಚಿತ್ರಿಸಲಾಗಿದೆ. ಅತನೂರು (ತೊಗಲುಗುಡ್ಡ) ಮಾನ್ವಿ, ಬೈಲಮರ್ಚೇಡ್, ಸಿರವಾರ, ಪಿಕ್ಲಿಹಾಳಗಳಲ್ಲಿ ಚಿತ್ರಿತ ಕಲ್ಲಾಸರೆಗಳಿವೆ. ಮಾನ್ವಿಯಲ್ಲಿ ಸುರುಳಿ ಚಿತ್ರಪಟದಂತೆ ಸಾಲು ಸಾಲಾಗಿ ವರ್ಣಚಿತ್ರ ಪಟ್ಟಿಕೆಗಳಿವೆ. ಇವು ಪೌರಾಣಿಕ ಕಥಾನಕ ದೃಶ್ಯಗಳಾಗಿದ್ದು ಶೈಲಿಯಿಂದ ವಿಜಯನಗರ ಕಾಲಕ್ಕೆ ಹೊಂದುತ್ತವೆ. ಬೈಲಮರ್ಚೇಡ್ ಗುಡ್ಡದ ಅಂಚಿನಲ್ಲಿನ ಚಿತ್ರಗಳು ಶೈಲಿಯಿಂದ ವಿಜಯನಗರ ಕಾಲದವು. ಬೈಲಮರ್ಚೇಡ್‌ನಲ್ಲಿ ಕುದುರೆ ಸವಾರರ ಮತ್ತು ಗೂಳಿಗಳ ಚಿತ್ರಗಳಿವೆ. ಯುದ್ಧ ಮಾಡುತ್ತಿರುವ ಮೂರು ಜೋಡಿ ಅಶ್ವಸವಾರರು. ಎರಡನೇ ಗುಂಪಿನಲ್ಲಿ ಕುದುರೆ ಸವಾರರ, ಓಡುತ್ತಿರುವ ದನಗಳ ಚಿತ್ರಗಳಿವೆ. ಇದು ಗೋಗ್ರಹಣದ ಚಿತ್ರವಿರಬೇಕು. ಮತ್ತೊಂದು ಬದಿಯಲ್ಲಿ ಅಂಗೈಯ ಮುದ್ರಿತ ಚಿತ್ರಗಳಿವೆ. ಇವುಗಳನ್ನು ಕಂದು ಉರುಮಂಜು ಬಣ್ಣದಲ್ಲಿ ಚಿತ್ರಿಸಲಾಗಿದೆ. ಹಾಗೆಯೇ ಅತನೂರು, ಸಿರವಾರ ನೆಲೆಗಳಲ್ಲಿ ಮನುಷ್ಯರ ಚಿತ್ರಗಳನ್ನು ಕಡ್ಡಿಯ ರೂಪದಲ್ಲಿ ಬಿಡಿಸಲಾಗಿದೆ. ಪ್ರಾಣಿಗಳ ಹಾಗೂ ವಿಚಿತ್ರ ಬಗೆಯ ಪಕ್ಷಿಗಳ ಚಿತ್ರಗಳು ಛಾಯಾರೂಪದಲ್ಲಿವೆ. ಪಿಕ್ಲಿಹಾಳ್ ನೆಲೆಯಲ್ಲಿನ ವರ್ಣಚಿತ್ರಗಳು ಉರುಮಂಜು ಮತ್ತು ಕಂದು ವರ್ಣದಲ್ಲಿವೆ. ಒಂದು ಗವಿಯಲ್ಲಿ ದೊಡ್ಡ ಪ್ರಮಾಣದ ಹಲ್ಲಿ, ಕುರಿ ಮತ್ತು ಕೈಗಳನ್ನು ಮೇಲೆತ್ತಿ ನರ್ತಿಸುತ್ತಿರುವ ಸ್ತ್ರೀಯ ಚಿತ್ರಗಳಿವೆ. ಮತ್ತೊಂದು ಕಲ್ಲಾಸರೆಯಲ್ಲಿ

ಹಲ್ಲಿ, ಹಾವು, ಆನೆ ಚಿತ್ರಗಳಿವೆ. ಮತ್ತೊಂದೆಡೆ ಒಬ್ಬ ಮನುಷ್ಯ ತನ್ನ ಭುಜಗಳನ್ನು, ಕಾಲುಗಳನ್ನು ಅಗಲಿಸಿ ನಿಂತ ಮತ್ತು ಪ್ರಾಣಿಗಳ ಚಿತ್ರಗಳಾಗಿವೆ. ಇತರ ಎರಡು ಕಡೆಗಳಲ್ಲಿ ಖಡ್ಗವನ್ನು ಎತ್ತಿ ಹಿಡಿದ ಮನುಷ್ಯನ ಮತ್ತು ಕುದುರೆ ಸವಾರ ಮತ್ತಿತರ ಚಿತ್ರಗಳು ಸಹ ಇವೆ. ಕಲ್ಲೂರು, ಭಿಲ್ಲಮರಾಯನ ಗುಡ್ಡ, ಪಿಕ್ಲಿಹಾಳ್, ಮಸ್ಕಿ ಮತ್ತು ಗಬ್ಬೂರುಗಳಲ್ಲಿ ಬಯಲುಬಂಡೆಯ ಮೇಲೆ ಕೊರೆದ ಕುಟ್ಟು ಚಿತ್ರಗಳಿವೆ. ಕಲ್ಲೂರಿನ ಎಮ್ಮೆಗುಡ್ಡದಲ್ಲಿ ನಿಂತ ಎರಡು ಎಮ್ಮೆಗಳ ದೊಡ್ಡ ಪ್ರಮಾಣದ ಚಿತ್ರಗಳು ಪ್ರಮುಖವಾಗಿವೆ. ಅವುಗಳ ನಿಲುವಿನಲ್ಲಿ ಮಂದಗತಿ ಇದೆ. ಚಿತ್ರದ ಉದ್ದಗಲಕ್ಕೂ ಒಂದೇ ಸಮನಾಗಿ ತೆಳ್ಳಗೆ ದಟ್ಟವಾಗಿ ಕುಟ್ಟಿರುವುದರಿಂದ ಇಡೀ ಚಿತ್ರವು ಕಪ್ಪು ಕಲ್ಲಿನ ಹಿನ್ನೆಲೆಯಲ್ಲಿ ಢಾಳಾಗಿ ಕಾಣುತ್ತದೆ. ಇವುಗಳ ಕೋಡುಗಳು ಅಂಡಾಕೃತಿಯಂತೆ ಒಂದೇ ರೀತಿಯಲ್ಲಿ ಒಳಬಾಗಿವೆ. ದೇಹ ಬಲಿಷ್ಠತೆಯನ್ನು ಬಿಂಬಿಸುತ್ತದೆ. ಪಿಕ್ಲಿಹಾಳ್‌ದಲ್ಲಿ ಎತ್ತಿನ, ಮನುಷ್ಯರ ಚಿತ್ರಗಳು ಅನೇಕ ವಿಧದಲ್ಲಿವೆ. ಜೊತೆಗೆ ಕುದುರೆ, ಚಿಗರೆ, ಆಡು, ಜಿಂಕೆ ಮತ್ತಿತರ ಚಿತ್ರಗಳನ್ನು ಕುಟ್ಟಿ ಬಿಡಿಸಲಾಗಿದೆ. ಮಸ್ಕಿ ನೆಲೆಯು ನವಶಿಲಾಯುಗ ಕಾಲದ ಕುಟ್ಟುಚಿತ್ರಗಳ ಶ್ರೀಮಂತ ನೆಲೆ. ಇಲ್ಲಿಯ ಬೆಟ್ಟದ ಅನೇಕ ಬಿಡಿ ಗುಂಡುಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಜಾನುವಾರು, ಮನುಷ್ಯರ, ಅಶ್ವ ಸವಾರರ ಹುಲಿ ಮತ್ತು ನವಿಲುಗಳ ಚಿತ್ರಗಳಿವೆ. ಧಾರ್ಮಿಕ ಕಟ್ಟಳೆಯ ಕತ್ತಿಯನ್ನು ಹಿಡಿದುಕೊಂಡ ಮನುಷ್ಯ ಮತ್ತು ಪ್ರತ್ಯೇಕ ಕತ್ತಿಯ ಚಿತ್ರಗಳು ಇಲ್ಲಿವೆ.

ಪ್ರಸ್ತುತ ಲೇಖನವು ಲೇಖಕರು ನಡೆಸಿದ ಪುರಾತತ್ವ ಅನ್ವೇಷಣೆಯ ನೆಲೆಗಳನ್ನು ಕುರಿತದ್ದಾಗಿದೆ. ಅವುಗಳೆಂದರೆ: ಮಸ್ಕಿ ಪರಿಸರದ ಮಲ್ಲಯ್ಯನ ಗುಡ್ಡ, ದುರ್ಗಮ್ಮ ಗುಡ್ಡ, ಮೌನಪ್ಪ ಮಲ್ಡಿ, ಹಿರೇ ಗುಡ್ಡ, ಮಜ್ಜಿಗೆ ಗುಂಡು, ಗಲ್ಲ ಗುಡ್ಡ, ಮದಿಕಿನಾಳು. ಅಲ್ಲದೆ, ಲಿಂಗಸೂಗೂರು ಪರಿಸರದಲ್ಲಿ ಪಿಕ್ಲಿಹಾಳ್, ಬಿಲ್ಲಮರಾಯನ ಗುಡ್ಡ, ತರಕೇರ್ ಮೇಡು (ರಾಂಪುರ), ಹಳೇ ಆನೆಹೊಸೂರು, ಚಿಕ್ಕ ಹೆಸರೂರ್, ಆನ್ವರಿ, ವಟಗಲ್ ಮತ್ತು ಈ ನೆಲೆಯ ಗುಡ್ಡ ಶ್ರೇಣಿಗೆ ಹೊಂದಿಕೊಂಡಂತೆ ಇರುವ ಮಾನ್ವಿಯ ಅಮೀನಗಡ, ಕೋಟೆಕಲ್ಲು ನೆಲೆಗಳು.

ಆಯ್ದ ಚಿತ್ರಗಳ ವಿವರಣೆ

ಆನೆ : ಆನೆಯನ್ನು ಸಾಮಾನ್ಯವಾಗಿ ಪೂರ್ವ ಇತಿಹಾಸ ಕಾಲದ ವರ್ಣಚಿತ್ರಗಳಲ್ಲಿ ಕಾಣಬಹುದು. ಹಾಗೆಯೇ ಗೀರುಚಿತ್ರಗಳು ಮಲಪ್ರಭಾ ನದಿ ತೀರದ ಹುಲಿಗೆಮ್ಮ ಕೊಳ್ಳದಲ್ಲಿ[5] ಹಾಗೂ ಬಾದಾಮಿ ನೆಲೆಯಲ್ಲಿ ಉಬ್ಬು ಶಿಲ್ಪಗಳನ್ನು ಹಾಗೂ ನಂತರದ ಕಾಲ ಘಟ್ಟಗಳಲ್ಲಿ ವಾಸ್ತುಶಿಲ್ಪ ಕಲೆಯಲ್ಲಿ ಮೂರ್ತಿ ರೂಪಕವಾಗಿ ಬಿಂಬಿಸಿದ್ದಾರೆ. ಮೊದಲ ಬಾರಿಗೆ ಮಸ್ಕಿ ಮತ್ತು ಲಿಂಗಸೂಗೂರು ಪರಿಸರದಲ್ಲಿ ಅಂತ್ಯ ಹಳೆ ಶಿಲಾಯುಗ-ಸೂಕ್ಷ್ಮ ಶಿಲಾಯುಗ ಕಾಲಘಟ್ಟಕ್ಕೆ ಸೇರಿದ್ದೆನ್ನಬಹುದಾದ ಆನೆಯ ಕುಟ್ಟು ಚಿತ್ರಗಳು ಕಂಡುಬಂದಿರುವುದು ಹೆಚ್ಚು ಕುತೂಹಲಕರ ಸಂಗತಿಯಾಗಿದೆ. ಇವು ಹೆಚ್ಚಿನ ಅಧ್ಯಯನಕ್ಕೆ ನಾಂದಿ ಹಾಡಿವೆ. ಈ ಪರಿಸರದ ಬಿಲ್ಲಮರಾಯನ ಗುಡ್ಡ ಮತ್ತು ಗಲ್ಲ ಗುಡ್ಡ ನೆಲೆಗಳಲ್ಲಿನ ಆನೆಯ ಕುಟ್ಟು ಚಿತ್ರದ ಶೈಲಿ ಮತ್ತು ಲಕ್ಷಣಗಳನ್ನು ಗಮನಿಸಿದರೆ ಅವು ಪ್ಲೈಸ್ಟೋಸಿನ್ ಅಂತಿಮ ಘಟ್ಟಕ್ಕೆ ಸೇರಿದ್ದವೆನ್ನಬಹುದು.

ಗಲ್ಲಿ ಗುಡ್ಡದಲ್ಲಿರುವ ಆನೆ ಕುಟ್ಟು ಚಿತ್ರವು ಕರ್ನಾಟಕದಲ್ಲಿಯೇ ಅಲ್ಲದೆ ಭಾರತೀಯ ಉಪ ಖಂಡದಲ್ಲಿಯೇ ಹೆಚ್ಚು ವಿಶೇಷತೆಯನ್ನು ಪಡೆದುಕೊಂಡಿದೆ. ಯಾಕೆಂದರೆ ಮೊದಲ ಹೇಳಿದಂತೆ ಇಂತಹ ಕುಟ್ಟು ಚಿತ್ರಗಳು ಬಹಳ ವಿರಳ ಹಾಗೂ ಪ್ರಸ್ತುತ ಲೇಖಕರ ಜ್ಞಾನ ಪರಿಮಿತಿಯಲ್ಲಿ ಇದೇ ಮೊದಲು. ಆನೆಯನ್ನು ಬೇಟೆಯಾಡುವ ಚಿತ್ರಣ ಅತ್ಯಂತ ಸುಂದರವಾಗಿ ಮೂಡಿಬಂದಿದೆ. ಇದರ ಗುಣಲಕ್ಷಣಗಳೆಂದರೆ ದೇಹದ ವಿನ್ಯಾಸ, ಆಕಾರ, ತಲೆಯ ಮೇಲಿನ ಕುಪ್ಪಸ, ತೀರ ದಪ್ಪವಲ್ಲದ ಸೊಂಡಿಲು, ದಂತಗಳನ್ನು ತೋರಿಸಿರುವ ವಿಧಾನಗಳನ್ನು ಗಮನಿಸಿದರೆ ಅಂತ್ಯ ಪ್ಲೈಸ್ಟೋಸಿನ್ ಕಾಲ ಘಟ್ಟಕ್ಕೆ ಸೇರಿದೆಯೆನ್ನಬಹುದು. ಇದೊಂದು ಗಂಡು ಆನೆಯಾಗಿದ್ದು ಅದರ ಗುಪ್ತಾಂಗವನ್ನು ಪ್ರಧಾನವಾಗಿ ಬಿಂಬಿಸಿದ್ದಾರೆ. ಈ ಆನೆಯನ್ನು ಐದು ಬೇಟೆಗಾರರು ಬೇಟೆಯಾಡುತ್ತಿರುವಂತೆ ತೋರಿಸಲಾಗಿದೆ. ಇದರಲ್ಲಿ ಒಬ್ಬ ಧನಸ್ಸು ಮತ್ತು ಬಿಲ್ಲನ್ನು ಹಿಡಿದಿದ್ದು ಅದರ ಮುಂದೆ ನಿಂತಿದ್ದಾನೆ ಹಾಗೆಯೇ ಕ್ರಮವಾಗಿ ಆನೆಯ ಕಡೆಗೆ ಮತ್ತೊಬ್ಬನು ಕೈಯಲ್ಲಿ ಆಯುಧವನ್ನು ಹಿಡಿದಿದ್ದು, ಇನ್ನೊಬ್ಬ ಆನೆಯ ಕಾಲು ಮತ್ತು ಸೊಂಡಿಲುಗಳ ನಡುವೆ ನಿಂತು ಸೊಂಡಿಲನ್ನು ಹಿಡಿದಿರುವಂತೆ ಹಾಗೂ ಆನೆಯ ಹಿಂದುಗಡೆ ಇನ್ನೊಬ್ಬ ಬೇಟೆಗಾರ ನಗ್ನವಾಗಿದ್ದು ಭರ್ಜಿ ಮೂಲಕ ಅದರ ಹಿಂಗಾಲಿಗೆ ಇರಿಯುತ್ತಿರುವುದನ್ನು ಕಾಣಬಹುದು. ನಗ್ನ ಮನುಷ್ಯ ಚಿತ್ರಗಳು ಬಳ್ಳಾರಿ ಜಿಲ್ಲೆಯ ಹಲವು ನೆಲೆಗಳಲ್ಲಿ ಪ್ರಮುಖವಾಗಿ ಕಂಡುಬಂದಿವೆ. ಮತ್ತೊಬ್ಬ ಬೇಟೆಗಾರನು ಇವನ ಸೊಂಟದ ಕೆಳಗೆ ಹಿಂಭಾಗದಲ್ಲಿರುವಂತೆ ಚಿತ್ರಿಸಲಾಗಿದೆ (ಚಿತ್ರ 1). ಒಟ್ಟಾರೆಯಾಗಿ ಈ ಚಿತ್ರವು ಇತಿಹಾಸಕಾರರಲ್ಲಿ ಆಸಕ್ತಿ ಮೂಡಿಸಿದೆ. ಇದು ಇತಿಹಾಸಕ್ಕೆ ತನ್ನದೆಯಾದ ಮೆರುಗನ್ನು ನೀಡಿದೆಯೆಂದರೆ ಉತ್ಪ್ರೇಕ್ಷೆಯಾಗದು. ಈ ನೆಲೆಯಲ್ಲಿ ಇನ್ನೂ ಹಲವು ಕಡೆ ಆನೆಯ ಕುಟ್ಟು ಚಿತ್ರಗಳನ್ನು ಕಾಣಬಹುದು. ಬಿಲ್ಲಮರಾಯನ ಗುಡ್ಡ ನೆಲೆಯಲ್ಲಿ ಆನೆಯ ಕುಟ್ಟು ಚಿತ್ರವನ್ನು ಗುಡ್ಡದ ಮೇಲಿನ ಒಂದು ಬೃಹತ್ ಕಣಶಿಲೆಯ ಬಂಡೆಯ ಪೂರ್ವ ಪಾರ್ಶ್ವದ ಮೇಲೆ ಸುಂದರವಾಗಿ ಮೂಡಿಸಲಾಗಿದೆ. ದೇಹವು ಬೃಹದಾಕಾರವಾಗಿದ್ದು ಬೆನ್ನನ್ನು ಕಮಾನಿನಂತೆ, ಸೊಂಡಿಲನ್ನು ಒಳಮುಖವಾಗಿ ಮತ್ತು ದಂತಗಳನ್ನು ಮುಂಚಾಚಿರುವಂತೆ ಸ್ಪಷ್ಟವಾಗಿ ತೋರಿಸಿದ್ದಾರೆ (ಚಿತ್ರ 2). ಹಾಗೆಯೇ ಮಸ್ಕಿಯ ದುರ್ಗದ ಗುಡ್ಡದಲ್ಲಿಯೂ ಇತ್ತೀಚೆಗೆ ಮೂಡಿಸಿದ ಆನೆಯ ಕುಟ್ಟುಚಿತ್ರಗಳಿವೆ.

ಕಾಡುಕೋಣ: ಕಾಡುಕೋಣದ ವರ್ಣಚಿತ್ರಗಳು ಮಲಪ್ರಭಾ ನದಿ ತೀರದಲ್ಲಿ ಸಾಮಾನ್ಯವಾಗಿವೆ.[6] ಆದರೆ ದುರ್ಗಮ್ಮ ಗುಡ್ಡದಲ್ಲಿ ಕಂಡುಬಂದಿರುವ ಈ ಪ್ರಾಣಿಯ ಕುಟ್ಟುಚಿತ್ರವು ಹೆಚ್ಚು ವಿಶೇಷತೆಯಿಂದ ಕೂಡಿದೆ. ಇದರ ಹೊರ ರಚನೆಯು ಕುಟ್ಟುವಿಕೆಯಿಂದ ಕೂಡಿದ್ದರೂ ದೇಹದ ಒಳ ಮೈಯನ್ನು ಕಲ್ಲಿಂದ ಉಜ್ಜಿದಂತೆ ಕಂಡುಬರುತ್ತದೆ. ಇದರ ಕೋಡುಗಳು ಆಕರ್ಷಕವಾಗಿವೆ. ತನ್ನ ಮುಖವನ್ನು ಇನ್ನೊಂದು ದಿಕ್ಕಿಗೆ ತಿರುಗಿಸಿರುವುದರಿಂದ ಇದರ ಒಂದು ಕಿವಿಯು ಸ್ಪಷ್ಟವಾಗಿದೆ (ಚಿತ್ರ 3). ಇಂತಹ ಚಿತ್ರಗಳು ಪ್ರಾಗಿತಿಹಾಸ ಕಲೆಯಲ್ಲಿ ಬಹಳ ವಿರಳ.

ಜಾನುವಾರು: ಅಂತ್ಯ ಹಳೆ ಶಿಲಾಯುಗ ಮತ್ತು ಸೂಕ್ಷ್ಮಶಿಲಾಯುಗಕ್ಕೆ ಸೇರಿದ ಜಾನುವಾರು ಅಂದರೆ ದನ ಮತ್ತು ಗೂಳಿಯ ಚಿತ್ರಗಳು ಬಹಳ ವಿರಳ. ಕರ್ನಾಟಕದಲ್ಲಿ ಇದುವರೆಗೂ ಮಲಪ್ರಭಾ ನದಿ ತೀರದ ಚಿಚಖಂಡಿ ಮತ್ತು ಕೆಂದೂರು ನೆಲೆಯಲ್ಲಿ ಮಾತ್ರ ವರ್ಣ

ಚಿತ್ರಗಳಿವೆ. ಅವು ಸ್ಪಷ್ಟವಾಗಿ ಸಾಕು ಪ್ರಾಣಿಗಳಾಗಿರದೆ ಕಾಡಿನವಾಗಿರುತ್ತವೆ.[7] ಅನಂತರದ ಕಾಲಘಟ್ಟಗಳಲ್ಲಿ ಅಂದರೆ ನೂತನ ಶಿಲಾಯುಗ ತಾಮ್ರಯುಗ ಮತ್ತು ಕಬ್ಬಿಣಯುಗದ ಬೃಹತ್ ಶಿಲಾಯುಗ ಸಂಸ್ಕೃತಿಯಲ್ಲಿ ಈ ಪ್ರಾಣಿಗಳು ಸಮೃದ್ಧವಾಗಿ ಕಂಡುಬರುತ್ತವೆ. ಈ ಕಾಲಘಟ್ಟದಲ್ಲಿ ಹೆಚ್ಚಾಗಿ ಪಶುಸಂಗೋಪನೆಯನ್ನು ಕಾಣುತ್ತೇವೆ. ಇದಕ್ಕೆ ಸಾಕ್ಷಿಯೆಂಬಂತೆ ಕರ್ನಾಟಕದ ಪ್ರಾಗಿತಿಹಾಸ ಕಲೆಯಲ್ಲಿ ಹೆಚ್ಚಾಗಿ ಕಾಣುತ್ತೇವೆ. ಉದಾಹರಣೆಗೆ ರಾಯಚೂರು ದೋಅಬ್ ಮತ್ತು ಬಳ್ಳಾರಿ ಜಿಲ್ಲಾ ಪರಿಸರದಲ್ಲಿ ಹೆಚ್ಚಾಗಿ ಕಂಡುಬರುತ್ತವೆ.

ಪ್ರಸ್ತುತ ಅಧ್ಯಯನ ಪರಿಸರದಲ್ಲಿಯೂ ಬಹುತೇಕ ಎಲ್ಲ ನೆಲೆಗಳಲ್ಲಿ ಜಾನುವಾರು ಕುಟ್ಟು ಚಿತ್ರಗಳು ಮತ್ತು ಕೇವಲ ಚಿಕ್ಕಿಹಾಳ ನೆಲೆಯಲ್ಲಿ ಮಾತ್ರ ವರ್ಣಚಿತ್ರಗಳು ಕಂಡುಬಂದಿವೆ. ಮಸ್ಕಿ ಪರಿಸರದ ಮಲ್ಲಯ್ಯನ ಗುಡ್ಡ ಮತ್ತು ದುರ್ಗಮ್ಮ ಗುಡ್ಡಗಾಡಿನಲ್ಲಿ ಹೇರಳವಾಗಿವೆ. ಇದರಲ್ಲಿ ವಿಶೇಷವಾಗಿ ಮಲ್ಲಯ್ಯನ ಗುಡ್ಡದಲ್ಲಿನ ಕೆಲವು ಗೂಳಿಯ ಚಿತ್ರಗಳು ಕೋಡು ಮತ್ತು ದೇಹದ ವಿನ್ಯಾಸದಲ್ಲಿ ತನ್ನದೆಯಾದ ವೈಶಿಷ್ಟತೆಯನ್ನು ಹೊಂದಿವೆ (ಚಿತ್ರ 4). ಮೂರು ಗೂಳಿಗಳು ಒಂದರ ಹಿಂದೆ ಇನ್ನೊಂದು ಎಂಬಂತೆ ಸುಂದರವಾಗಿ ಚಿತ್ರಿಸಲಾಗಿದೆ (ಚಿತ್ರ 5). ವಿಶೇಷವೆಂದರೆ ವರ್ಣಚಿತ್ರಗಳಲ್ಲಿ ಗೂಳಿ ಅಥವಾ ಹಸುಗಳನ್ನು ಹಿಂದು ಹಿಂದಾಗಿ ಬಿಂಬಿಸುವಂತೆ ಕುಟ್ಟು ಅಥವಾ ಗೀರು ಚಿತ್ರಗಳಲ್ಲಿ ಬಿಂಬಿಸುವುದು ಬಹಳ ವಿರಳ. ಆದರೆ ಇದೇ ನೆಲೆಯಲ್ಲಿನ ಒಂದು ಬಂಡೆಯ ಮೇಲೆ ಹದಿನೈದಕ್ಕೂ ಹೆಚ್ಚು ಜಾನುವಾರುಗಳನ್ನು ಒಟ್ಟಾಗಿ ಒಂದೇ ಕಡೆ ಮುಖ ಮಾಡಿರುವಂತೆ ಚಿತ್ರಿಸಲಾಗಿದೆ (ಚಿತ್ರ 6). ಒಂದು ಬೃಹದಾಕಾರದ ಬಂಡೆಯ ಮೇಲೆ ಮೂರು ಗೂಳಿಯ ಚಿತ್ರಗಳಿದ್ದು, ಅದರಲ್ಲಿ ಒಂದು ಮಾತ್ರ ದೊಡ್ಡ ಗಾತ್ರದಲ್ಲಿದ್ದು ಹೆಚ್ಚು ಮನಸ್ಸಿನ ಅಂತರಾಳದಲ್ಲಿ ಉಳಿಯುವಂತೆ ಆಕರ್ಷಕವಾಗಿ ಚಿತ್ರಿಸಲಾಗಿದೆ (ಚಿತ್ರ 7). ದುರ್ಗಮ್ಮ ಗುಡ್ಡದಲ್ಲಿನ ಕೆಲವು ಗೂಳಿಗಳನ್ನು ಭಿನ್ನವಾಗಿ ತೋರಿಸಲಾಗಿದೆ. (ಚಿತ್ರ 8). ಈ ನೆಲೆಯ ಮತ್ತೊಂದು ಬಂಡೆಗಲ್ಲಿನ ಮೇಲೆ ಗೂಳಿಗಳ ಹಿಂಡನ್ನೇ ನೋಡಬಹುದು (ಚಿತ್ರ 9). ಈ ಪರಿಸರದಲ್ಲಿ ವಿಶೇಷವಾಗಿ ಬಿಲ್ಲಮರಾಯನ ಗುಡ್ಡ ಮತ್ತು ದುರ್ಗಮ್ಮ ಗುಡ್ಡ ನೆಲೆಗಳಲ್ಲಿ ಜಾನುವಾರುಗಳು ಮುಖಾಮುಖಿ ನಿಂತಿರುವಂತೆ ಚಿತ್ರಿಸಿರುವುದು ವಿಶೇಷವೆನಿಸಿದೆ (ಚಿತ್ರ 10).

ಹುಲಿ : ಬಿಲ್ಲಮರಾಯನ ಗುಡ್ಡ ನೆಲೆಯುಲ್ಲಿ ಪ್ರಮುಖವಾಗಿ ಮನುಷ್ಯ, ಪ್ರಾಣಿಗಳ ಮತ್ತು ಅಲಂಕೃತ ಆಕೃತಿಗಳ ಕುಟ್ಟುಚಿತ್ರ ಮತ್ತು ಕಲ್ಗುಳಿಗಳಿವೆ. ಈ ನೆಲೆಯಲ್ಲಿನ ಹುಲಿಯ ಕುಟ್ಟುಚಿತ್ರವು ಕುತೂಹಲಕಾರಿ ಹಾಗೂ ಆಕರ್ಷಕವಾಗಿದ್ದು, ಎಂತಹವರನ್ನೂ ಮೂಕಪ್ರೇಕ್ಷಕರನ್ನಾಗಿ ಮಾಡುತ್ತದೆ. ಇದರ ಕಾಲುಗಳು ಸ್ವಲ್ಪ ಮುಂಚಾಚಿವೆ (ಚಿತ್ರ 11). ದೇಹದ ಮೇಲಿನ ಬಿಡಿ ಪಟ್ಟಿಗಳನ್ನು ಸೂಚಿಸಲು ಒಂದರ ಹಿಂದೆ ಒಂದರಂತೆ ದಪ್ಪ ರೇಖೆಗಳ ಕೋನಗಳಿವೆ. ಹಾಗೆಯೇ ಮಸ್ಕಿ ಪರಿಸರದ ಮಲ್ಲಯ್ಯನ ಗುಡ್ಡದಲ್ಲಿಯು ಹುಲಿಯ ಕುಟ್ಟು ಚಿತ್ರಗಳು ಹೆಚ್ಚು ಗಮನ ಸೆಳೆಯುತ್ತವೆ. ಯಾಕೆಂದರೆ ಈ ನೆಲೆಯಲ್ಲಿನ ಹುಲಿಯ ಚಿತ್ರಗಳು ಒಂದೇ ಕಾಲಘಟ್ಟಕ್ಕೆ ಸೇರಿಲ್ಲ. ಇವು ಪೂರ್ವ ಇತಿಹಾಸ ಕಾಲದಿಂದ ಹಿಡಿದು ಅರ್ವಾಚೀನ ಕಾಲದವರೆಗೂ ಈ ಪ್ರವೃತಿಯು ಮುಂದುವರಿದುಕೊಂಡು ಬಂದಿರುವುದನ್ನು ಕಾಣಬಹುದಾಗಿದೆ. ಈ ನೆಲೆಯಲ್ಲಿನ ಒಂದು ಹುಲಿಯ ಕುಟ್ಟು

ಚಿತ್ರವು ಹೆಚ್ಚು ಆಕರ್ಷಕವಾಗಿದ್ದು, ಬಾಲವನ್ನು ಸುರುಳಿಯಾಗಿ ಮಾಡಿಕೊಂಡು ನಿಂತಿರುವಂತೆ ಬಿಡಿಸಲಾಗಿದೆ. ಇತ್ತೀಚೆಗೆ ಅದರ ಹಿಂದೆ-ಮುಂದೆ ಕೆಲವು ಪ್ರಾಣಿಗಳ ಚಿತ್ರಗಳನ್ನು ಕುಟ್ಟಿ ಹುಲಿಯು ಅವುಗಳನ್ನು ಬೇಟೆಯಾಡುವ ಭಂಗಿಯಲ್ಲಿ ಬಿಂಬಿಸಲಾಗಿದೆ (ಚಿತ್ರ 12). ಆದರೆ ಹುಲಿಯು ಬಿಲ್ಲಮರಾಯನ ಗುಡ್ಡ ನೆಲೆಯ ಹುಲಿಯಂತೆ ದೇಹದ ಮೇಲಿನ ಬಿಡಿ ಪಟ್ಟೆಗಳನ್ನು ಸೂಚಿಸಲು ಒಂದರ ಹಿಂದೆ ಒಂದರಂತೆ ದಪ್ಪ ರೇಖೆಗಳ ಕೋನಗಳಿವೆ. ಚಿತ್ರದುರ್ಗದ ಸಮೀಪ ಚಂದ್ರವಳ್ಳಿ ನೆಲೆಯಲ್ಲಿನ ಗೀರುಚಿತ್ರ ಬಹುಶಃ ಈ ಚಿತ್ರದೊಂದಿಗೆ ಹೆಚ್ಚು ಸಾಮ್ಯತೆಯನ್ನು ಹೋಲುತ್ತವೆ. ದುರ್ಗದ ಗುಡ್ಡದಲ್ಲಿಯು ಹಲವು ಹುಲಿಯ ಚಿತ್ರಗಳಿರುವುದು ಹೆಚ್ಚು ಆಸಕ್ತಿದಾಯಕವಾಗಿದ್ದರೂ ಇದರ ಕನ್ನಡಿಯೆಂಬಂತೆ ಕಾಣುವ ಮೌನಪ್ಪ ಗುಡ್ಡ(ಮಲ್ಡಿ)ದಲ್ಲಿ ಇತ್ತೀಚೆಗೆ ಮೂಡಿಸಿದ ಹುಲಿಯ ಗೀರುಚಿತ್ರವಿದ್ದು ಅದರ ಸ್ಪಷ್ಟತೆಯು ಪೂರ್ವ ಇತಿಹಾಸ ಚಿತ್ರಗಳಿದ್ದಂತಿಲ್ಲ. ಮೆದಿಕಿನಾಳ ಪರಿಸರದ ಕರಿಕಲ್ಲು ಗುಡ್ಡದ ಒಂದು ಬೃಹದಾಕಾರದ ಗುಂಡಿನ ಪಾರ್ಶ್ವದಲ್ಲಿರುವ ಹುಲಿಯು ಚಿಗರೆಯನ್ನು ಬೇಟೆಯಾಡುತ್ತಿರುವಂತೆ ಚಿತ್ರಿಸಲಾಗಿದೆ (ಚಿತ್ರ 13). ಇಂತಹ ಚಿತ್ರಿತ ದೃಶ್ಯಾವಳಿಗಳು ಸಾಮಾನ್ಯವಾಗಿ ವರ್ಣಚಿತ್ರಗಳಲ್ಲಿ ಕಂಡುಬರುತ್ತವೆ. ಆದರೆ ಬಯಲು ಬಂಡೆ ಚಿತ್ರಗಳಲ್ಲಿ ಬಹಳ ಅಪರೂಪವಾಗಿರುವುದರಿಂದ ಪ್ರಸ್ತುತ ಚಿತ್ರವು ಇತಿಹಾಸದ ಮೇಲೆ ತನ್ನದೆಯಾದ ಛಾಪನ್ನು ಮೂಡಿಸಿದೆ.

ಜಿಂಕೆ/ಚಿಗರೆ : ಮಾನವನು ಅನಾದಿ ಕಾಲದಿಂದಲೂ ಆಹಾರಕ್ಕಾಗಿ ಬೇಟೆಯಾಡಿಕೊಂಡು ಬಂದಿರುವ ಪ್ರಾಣಿಗಳಲ್ಲಿ ಜಿಂಕೆಯು ಮುಖ್ಯವಾದದ್ದು. ಇಂದು ಇದರ ಬೇಟೆ ನಿಷೇಧವಾಗಿದ್ದರೂ ಅದರ ಪ್ರವೃತಿ ಮುಂದುವರಿದುಕೊಂಡು ಬಂದಿದೆ. ಈ ಪ್ರಾಣಿಯು ಅತ್ಯಂತ ಹಳೆ ಶಿಲಾಯುಗ ಮತ್ತು ಸೂಕ್ಷ್ಮ ಶಿಲಾಯುಗ ಕಾಲ ಘಟ್ಟಗಳಲ್ಲಿನ ವರ್ಣಚಿತ್ರಗಳಲ್ಲಿ ಹೇರಳವಾಗಿ ಕಂಡುಬರುತ್ತವೆ. ಆದರೆ ಕುಟ್ಟು ಅಥವಾ ಗೀರು ಚಿತ್ರಗಳು ಬಹಳ ವಿರಳ. ಮೊದಲೇ ಹೇಳಿದಂತೆ ಮೆದಿಕಿನಾಳ ನೆಲೆಯಲ್ಲಿ ಹುಲಿಯು ಜಿಂಕೆಯನ್ನು ಬೇಟೆಯಾಡುತ್ತಿರುವ ಚಿತ್ರ ಆಕರ್ಷಕವಾಗಿದೆ. ವಟಗಲ್ ನೆಲೆಯಲ್ಲಿ ಜಿಂಕೆಗಳು ಹಿಂಡಾಗಿರುವಂತೆ ಬಿಂಬಿಸಲಾಗಿದೆ. ಹಾಗೆಯೇ ಮೌನಪ್ಪ ಮಲ್ಡಿಯಲ್ಲಿ ಎರಡು ಜಿಂಕೆಗಳನ್ನು ವಿರುದ್ಧ ದಿಕ್ಕಿಗೆ ನಿಂತಿರುವಂತೆ ತೋರಿಸಲಾಗಿದೆ. ಆದರೆ ಅವು ಇತ್ತೀಚಿನ ಕಾಲಘಟ್ಟಕ್ಕೆ ಸೇರಿದವಾಗಿವೆ.

ಕುದುರೆ : ಕುದುರೆಯ ಚಿತ್ರಗಳು ಸಾಮಾನ್ಯವಾಗಿ ಆದಿ ಇತಿಹಾಸ ಕಾಲದಿಂದ ಪ್ರಾರಂಭವಾಗಿ ಇಂದಿನವರೆಗೂ ಅದರ ಪ್ರವೃತಿಯು ಅನೇಕ ವಿಧಗಳಲ್ಲಿ ಬೆಳೆದುಕೊಂಡು ಬರುತ್ತಿರುವುದನ್ನು ಕಾಣಬಹುದು. ಅದೇ ರೀತಿ ಅನ್ವರಿ ನೆಲೆಯಲ್ಲಿ ಕುದುರೆಯ ಮೇಲೆ ಸವಾರ ಕುಳಿತಿರುವಂತೆ ಬಿಂಬಿಸಲಾಗಿದೆ (ಚಿತ್ರ 14). ಹಾಗೆಯೇ ಮಲ್ಲಯ್ಯನ ಗುಡ್ಡದ ನೆಲೆಯಲ್ಲಿ ಸಾಕಷ್ಟು ಪ್ರಮಾಣದ ಕುದುರೆ ಸವಾರರ ಕುಟ್ಟು ಮತ್ತು ಗೀರು ಚಿತ್ರಗಳಿವೆ. ಇದರ ಪಕ್ಕದಲ್ಲಿಯೇ ದೊಡ್ಡ ಗಾತ್ರದ ಮನುಷ್ಯನ ಚಿತ್ರವಿದೆ (ಚಿತ್ರ 15). ಬಿಲ್ಲಮರಾಯನ ಗುಡ್ಡ ನೆಲೆಯಲ್ಲಿಯೂ ಸಹ ಕುದುರೆಯ ಕುಟ್ಟುಚಿತ್ರವಿದೆ.

ನವಿಲು : ನವಿಲು ನಮ್ಮ ರಾಷ್ಟ್ರೀಯ ಪಕ್ಷಿ. ಸಾಮಾನ್ಯವಾಗಿ ಪ್ರಾಚೀನ ಕಲೆಯಲ್ಲಿ ಪಕ್ಷಿಗಳ ರಚನೆ ಬಹಳ ವಿರಳ. ಆದರೆ ಮೊದಲ ಬಾರಿಗೆ ಪಕ್ಷಿ ಅದರಲ್ಲೂ ನವಿಲಿನ

ಚಿತ್ರಗಳನ್ನು ಮಸ್ಕಿ ಪರಿಸರದ ಗುಡ್ಡಗಾಡಿನಲ್ಲಿ ಬಹುಶಃ ನವ ಶಿಲಾಯುಗ-ತಾಮ್ರಯುಗದ ಹಂತದಲ್ಲಿ ಚಿತ್ರಿಸಿರುವುದು ಆಸಕ್ತಿದಾಯಕ ಹಾಗೂ ಹೆಚ್ಚಿನ ಅಧ್ಯಯನಕ್ಕೆ ಎಡೆ ಮಾಡಿಕೊಟ್ಟಿದೆ. ಅದರಲ್ಲಿ ಮಲ್ಲಯ್ಯನ ಗುಡ್ಡದಲ್ಲಿನ ನವಿಲಿನ ಕುಟ್ಟುಚಿತ್ರಗಳು ಹೆಚ್ಚು ವಿಶೇಷತೆಯಿಂದ ಕೂಡಿವೆ (ಚಿತ್ರ 16).

ಮನುಷ್ಯನ ಚಿತ್ರಗಳು : ಬಿಲ್ಲಮರಾಯನ ಗುಡ್ಡ ನೆಲೆಯಲ್ಲಿ ಕೈಗಳಲ್ಲಿ ಖಡ್ಗ ಹಿಡಿದ ಇಬ್ಬರು ಮನುಷ್ಯರ ಚಿತ್ರ ಮತ್ತೊಂದು ದೊಡ್ಡ ಅಳತೆಯ ಇತ್ತೀಚಿನ ಮನುಷ್ಯನ ಚಿತ್ರಗಳು ನೈಜವಾಗಿದೆ. ಗಲ್ಲಿ ಗುಡ್ಡದಲ್ಲಿನ ಆನೆಯನ್ನು ಬೇಟೆಯಾಡುತ್ತಿರುವ ಮನುಷ್ಯರ ಕುಟ್ಟುಚಿತ್ರಗಳು ಗಮನಾರ್ಹವಾಗಿವೆ. ದುರ್ಗದ ಗುಡ್ಡದಲ್ಲಿನ ಮನುಷ್ಯ ಕೈಗಳನ್ನು ಅಗಲಿಸಿ ನಿಂತಿರುವಂತೆ ಹಾಗೂ ಇನ್ನೊಂದು ಕಡೆ ಕಡ್ಡಿ ರೂಪಕವೆಂಬಂತೆ ಮನುಷ್ಯ ಚಿತ್ರಗಳನ್ನು ತೋರಿಸಲಾಗಿದೆ. ಜೋಡಿ ಮನುಷ್ಯರು ಗೂಳಿಯನ್ನು ಹಿಡಿದುಕೊಂಡು ನಿಂತಿರುವಂತೆ ಮತ್ತೊಬ್ಬನು ಜೋಡಿ ಗೆರೆಯಲ್ಲಿ ಅಂಗಾತ ಮಲಗಿರುವಂತೆ ಬಿಂಬಿಸಲಾಗಿದೆ (ಚಿತ್ರ 17). ಹಾಗೆಯೇ ಒಬ್ಬ ಚಿಕ್ಕ ಮನುಷ್ಯ ದೊಡ್ಡ ಖಡ್ಗವನ್ನು ಹಿಡಿದು ನಿಂತಿರುವಂತೆ ಚಿತ್ರಿಸಲಾಗಿದೆ. ಇದು ಸಾಮಾನ್ಯವಾಗಿ ಧಾರ್ಮಿಕ ಕಟ್ಟಳೆಯ ಸಂಕೇತವಾಗಿರಬಹುದು (ಚಿತ್ರ 18). ಮಲ್ಲಯ್ಯನ ಗುಡ್ಡದಲ್ಲಿ ಬೃಹತ್ ಗಾತ್ರದ ಮನುಷ್ಯ ಮತ್ತು ಅವನ ಆಸು-ಪಾಸಿನಲ್ಲಿ ಗೂಳಿಗಳನ್ನು ಕುಟ್ಟಿ ಜಡಿಸಿದ್ದಾರೆ. ಪಿಕ್ಲಿಹಾಳ್ ನೆಲೆಯಲ್ಲಿ ಹೆಚ್ಚು ಮನುಷ್ಯರ ಕುಟ್ಟು ಮತ್ತು ವರ್ಣಚಿತ್ರಗಳಿವೆ. ಅದರಲ್ಲಿ ಪ್ರಮುಖವಾಗಿ ಕುಟ್ಟು ಚಿತ್ರಗಳು ಸ್ವಲ್ಪ ಭಿನ್ನವಾಗಿದ್ದು, ಕುಳ್ಳ ಮತ್ತು ದೊಡ್ಡ ಗಾತ್ರದ ಮನುಷ್ಯ ಚಿತ್ರಗಳನ್ನು ಕಾಣಬಹುದು. ಮತ್ತೊಬ್ಬ ಮನುಷ್ಯನ ಚಿತ್ರವು ಜಾನುವಾರುಗಳ ಜೊತೆ ತಳಕು ಹಾಕಿಕೊಂಡಿರುವಂತೆ ಚಿತ್ರಿಸಲಾಗಿದೆ (ಚಿತ್ರ 19).

ಇತರೆ ಚಿತ್ರಗಳು : ಜ್ಯಾಮಿತಿ, ಪಾದ ಹಾಗೂ ಹಸ್ತಪ್ರತಿ ಕುಟ್ಟು ಮತ್ತು ಗೀರು ಚಿತ್ರಗಳಲ್ಲಿವೆ. ಪ್ರಪಂಚದಲ್ಲಿ ಈವರೆಗೆ ಹಸ್ತಪ್ರತಿಗಳು ವರ್ಣಚಿತ್ರಗಳಲ್ಲಿ ಕಂಡುಬಂದಿವೆ. ಅದರಲ್ಲಿ ಬಹುತೇಕ ಎಡಗೈದಾಗಿದ್ದು, ಬಹುಶಃ ಬಲಗೈಯನ್ನು ಹಸ್ತಪ್ರತಿ ಮೂಡಿಸಲು ಬಳಸಲಾಗುತ್ತಿತ್ತು. ಹಾಗೆಯೇ ಈ ಪ್ರತಿಗಳು ತನ್ನ ಕೈ ಮುದ್ರೆಯನ್ನು ತಾನೇ ಮೂಡಿಸಿರುವುದಕ್ಕೆ ಆಧಾರವನ್ನು ಒದಗಿಸುತ್ತದೆ. ಇವುಗಳಲ್ಲಿ ಪುರುಷರು, ಮಹಿಳೆಯರು, ಮಕ್ಕಳ ಹಸ್ತಪ್ರತಿಗಳು ಕಂಡು ಬಂದಿರುವುದು ಹೆಚ್ಚು ವಿಶೇಷವಾಗಿದ್ದು, ಲಿಂಗ ಮತ್ತು ವಯಸ್ಸನ್ನು ಈ ಹಸ್ತಪ್ರತಿಗಳ ಆಧಾರದ ಮೇಲೆ ನಿರ್ಧರಿಸಬಹುದು. ಹಸ್ತಪ್ರತಿಗಳು ಪ್ರಪಂಚದ ಎಲ್ಲ ಭಾಗಗಳಲ್ಲಿ ಕಂಡು ಬಂದಿರುವುದರಿಂದ ಪ್ರಾಯಶಃ ಚಿತ್ರಕಾರನ ಸಹಿ ಇರಬಹುದೆಂಬುದು ಕೆಲ ವಿದ್ವಾಂಸರ ಅಭಿಪ್ರಾಯ.[8] ಆದರೆ ಇದುವರೆಗೂ ಕುಟ್ಟು ಹಸ್ತ ಪ್ರತಿಗಳು ದಾಖಲಾಗಿಲ್ಲದ ಹಿನ್ನೆಲೆಯಲ್ಲಿ ಪಿಕ್ಲಿಹಾಳ್ ಮತ್ತು ಬಿಲ್ಲಮರಾಯನ ಗುಡ್ಡ ನೆಲೆಯಲ್ಲಿ ಕುಟ್ಟು ಹಸ್ತಪ್ರತಿಗಳು ಇತಿಹಾಸದ ಮೇಲೆ ತನ್ನದೆಯಾದ ಬೆಳಕನ್ನು ಚೆಲ್ಲುವುದರಲ್ಲಿ ಯಾವುದೇ ಸಂಶಯವಿಲ್ಲ (ಚಿತ್ರ 20). ಹಾಗೆಯೇ ಮಸ್ಕಿ ಪರಿಸರದಲ್ಲಿ ಪಾದದ ಕುಟ್ಟು ಮತ್ತು ಗೀರುಚಿತ್ರಗಳು ಸಹ ಕಂಡುಬಂದಿದ್ದು, ಅದರಲ್ಲಿ ಹಿರೇ ಗುಡ್ಡ ನೆಲೆಯಲ್ಲಿನ ಪಾದದ ಗೀರುಚಿತ್ರ ವಿಶೇಷವಾಗಿದೆ (ಚಿತ್ರ 21). ಧಾರ್ಮಿಕ ಕಟ್ಟಳೆಗೆ ಸಂಬಂಧಿಸಿವೆ ಎನ್ನಬಹುದಾದ ಖಡ್ಗದ ಕುಟ್ಟುಚಿತ್ರಗಳು ದುರ್ಗಮ್ಮ ಗುಡ್ಡದಲ್ಲಿ ಹೆಚ್ಚಾಗಿವೆ.

(ಚಿತ್ರ 22). ಜ್ಯಾಮಿತಿ ಚಿತ್ರಗಳಲ್ಲಿ ಮಂಡಲ, ಆಟದ ಮನೆಗಳು, ಕೆಲವು ಕುಟ್ಟು ಮತ್ತು ಗೀರು ರೇಖಾ ಚಿತ್ರಗಳಿವೆ.

ಕಲ್ಗುಳಿಗಳು : ಮಾನವ ನಿರ್ಮಿತ ಕಲ್ಗುಳಿಗಳು ಬಟ್ಟಲಾಕೃತಿಯಲ್ಲಿದ್ದು, ಇವು ನೈಸರ್ಗಿಕ ಕಲ್ಗುಳಿಗಿಂತ ಭಿನ್ನವಾಗಿವೆ. ಆಸ್ಟ್ರೇಲಿಯದ ರಾಬರ್ಟ್ ಜಿ. ಬೆಡ್ನರಿಕ್ ಅವರು ಅವುಗಳ ಗುಣ ವೈಶಿಷ್ಟತೆಯನ್ನು ಸಮಗ್ರವಾಗಿ ವಿವರಿಸಿದ್ದಾರೆ.[9] ಇವರು ವೈಜ್ಞಾನಿಕವಾಗಿ ಅಧ್ಯಯನ ನಡೆಸಿ ಇವುಗಳ ಇತಿಹಾಸವನ್ನು ಆದಿಹಳೇ ಶಿಲಾಯುಗಕ್ಕೆ ಕೊಡ್ಯೊಯುತ್ತಾರೆ.[10] ಭಾರತವಲ್ಲದೇ ಪ್ರಪಂಚದ ಅನೇಕ ರಾಷ್ಟ್ರಗಳಲ್ಲಿ ಕಲ್ಗುಳಿಗಳ ಮೇಲೆ ವೈಜ್ಞಾನಿಕವಾಗಿ ಅಧ್ಯಯನ ನಡೆಯುತ್ತಿದ್ದು, ಇವುಗಳ ಪರಂಪರೆಯು ಅಂತ್ಯ ಪ್ಲೆಸ್ಟೋಸಿನ್ ಯುಗದಿಂದ ಪ್ರಸ್ತುತವರೆಗೂ ಚಾಲ್ತಿಯಲ್ಲಿರುವುದು ಗಮನಾರ್ಹ. ಕಲ್ಗುಳಿಗಳು ಮಸ್ಕಿ ಮತ್ತು ಲಿಂಗಸೂಗೂರು ಪರಿಸರದ ಮಲ್ಲಯ್ಯನ ಗುಡ್ಡ (ಚಿತ್ರ 23), ಗಲ್ಲದ ಗುಡ್ಡ, ಹಿರೇ ಗುಡ್ಡ (ಚಿತ್ರ 24), ಬಿಲ್ಲಮರಾಯನ ಗುಡ್ಡ, ಹಳೇ ಆನೆಹೊಸೂರು (ಚಿತ್ರ 25), ರಾಂಪುರ, ಪಿಕ್ಲಿಹಾಳ ನೆಲೆಗಳಲ್ಲಿ ಕಂಡುಬಂದಿವೆ. ಆದರೆ ಪಿಕ್ಲಿಹಾಳ ನೆಲೆಯಲ್ಲಿ ವೃತ್ತಾಕಾರದಲ್ಲಿ ಹಾಗೂ ಇದರ ಮಧ್ಯ ಭಾಗದಲ್ಲಿ '+' ಮಾದರಿಯಲ್ಲಿ (ಚಿತ್ರ 26) ಬಿಂಬಿಸಲಾಗಿರುವುದು ವಿಶೇಷವಾಗಿದೆ.

ಸಮಾರೋಪ : ಇಲ್ಲಿನ ಪರಿಸರವು ಅಂದಿನ ಜೀವನಾಂಶಕ್ಕೆ ಬೇಕಾಗುವ ನೈಸರ್ಗಿಕ ಪದಾರ್ಥಗಳನ್ನು ಸಂಗ್ರಹ ಮಾಡುವುದರ ಜೊತೆಗೆ ಬೇಟೆಯಾಡಲು ಸೂಕ್ತವಾದ ವಾತಾವರಣವನ್ನು ಒದಗಿಸುತ್ತದೆ. ಈ ಭಾಗದಲ್ಲಿ ಬೇಟೆಯಾಡುವ ಪ್ರವೃತ್ತಿಯು ಇಂದಿಗೂ ಮುಂದುವರಿದುಕೊಂಡು ಬಂದಿದೆ. ಪ್ರಾಗಿತಿಹಾಸ ಕಲೆಯಲ್ಲಿನ ಪ್ರಾಣಿಗಳಲ್ಲಿ ಹೆಚ್ಚಿನವು ವೈವಿಧ್ಯಮಯ ಅಳತೆ ಮತ್ತು ಶೈಲಿಯ ಗೂಳಿ ಕಟ್ಟು ಚಿತ್ರಗಳು ವಿಶೇಷವಾಗಿದ್ದು, ನವ ಶಿಲಾ–ತಾಮ್ರಯುಗವನ್ನು ಪ್ರತಿನಿಧಿಸುತ್ತವೆ. ಈ ಭಾಗದಲ್ಲಿ ಇದುವರೆಗೂ ಉತ್ಖನನಕ್ಕೆ ಒಳಪಟ್ಟ ನೆಲೆಗಳೆಂದರೆ ಮಸ್ಕಿ, ವಟಗಲ್, ಅತ್ತನೂರು, ಮತ್ತು ಪಿಕ್ಲಿಹಾಳ್. ಈ ಉತ್ಖನನಗಳ ಮೂಲಕ ತಿಳಿದು ಬಂದಿರುವುದೇನೆಂದರೆ ನವ ಶಿಲಾಯುಗದಲ್ಲಿ ಮಾನವನ ವಾಸ ಹಾಗೂ ಹೊಸ ಜೀವನಕ್ಕೆ ನಾಂದಿ ಹಾಡಲು ಇಲ್ಲಿನ ಪರಿಸರವು ಸೂಕ್ತವಾಗಿತ್ತು ಎಂಬುದು. ಈ ಪ್ರದೇಶವು ಇನ್ನೂ ಪೂರ್ಣ ಪ್ರಮಾಣದ ಕ್ಷೇತ್ರಕಾರ್ಯ ಅನ್ವೇಷಣೆ ಆಗದಿರುವುದು ಬೇಸರದ ಸಂಗತಿ. ಒಂದು ವೇಳೆ ಪೂರ್ಣ ಪ್ರಮಾಣದ ಕ್ಷೇತ್ರಕಾರ್ಯ ಮತ್ತು ವೈಜ್ಞಾನಿಕ ಅಧ್ಯಯನಗಳು ನಡೆದಿದ್ದೆಯಾದರೆ ನಮ್ಮ ಪೂರ್ವ ಸಂಸ್ಕೃತಿಯ ಮೇಲೆ ಹೊಸ ಬೆಳಕು ಚೆಲ್ಲುವುದರಲ್ಲಿ ಯಾವುದೇ ಸಂಶಯವಿಲ್ಲ.

ಕೃತಜ್ಞತೆಗಳು: ನನ್ನ ಕಾರ್ಯಕ್ಷೇತ್ರದ ಸ್ಫೂರ್ತಿಯಾದ ಅ. ಸುಂದರ ಅವರಿಗೆ ವಂದಿಸುತ್ತಾ, ಈ ಕ್ಷೇತ್ರಕಾರ್ಯ ಅನ್ವೇಷಣೆಯಲ್ಲಿ ಸಹಕರಿಸಿದ ಚನ್ನಬಸಪ್ಪ ಮಲ್ಕಂದಿನ್ನಿ, ಅಶೋಕ (ಶಿಲ್ಪ ಕಂಪ್ಯೂಟರ್) ನವೀನ್ ಕುಮಾರ್ ಕಲ್ಮನೆ, ನಾಗರಾಜ್ ಮತ್ತು ಲಿಂಗಸೂಗೂರು ತಾಲ್ಲೂಕು ಪ್ರವಾಸಿ ಮಂದಿರದಲ್ಲಿ ತಂಗಲು ಅನುಕೂಲ ಮಾಡಿಕೊಟ್ಟ ದುರ್ಗ ಪ್ರಸಾದ್, ದೇವೇಂದ್ರ ಮತ್ತು ಪಾಟೀಲರವರಿಗೂ ಹಾಗೂ ಲೇಖನದ ಪ್ರತಿ ಸಿದ್ಧಪಡಿಸಲು ಸಹಕರಿಸಿದ ಸಿದ್ಧರಾಜ್ ಕಪ್ಪಸೋಗೆ (ಪತ್ರಕರ್ತ) ಅವರಿಗೂ ಕೃತಜ್ಞತೆಗಳು.

ಟಿಪ್ಪಣಿಗಳು ಮತ್ತು ಆಕರ ಸೂಚಿ

1. ಉದಾ: ವಾಕಣ್‌ಕರ್ 1973; ವಾಕಣ್‌ಕರ್ & ಬ್ರೂಕ್ಸ್ 1976; ಸುಂದರ 1994; ಮೋಹನ 2015, 2017; ಪ್ರಧಾನ್ & ಗರ್ನಾಯಕ್ 2017.
2. ಮನ್ 1934, 1935.
3. ಮೋಹನ ಆರ್., 2018.
4. ಮೋಹನ ಆರ್., 2017.
5. ಮೋಹನ ಆರ್., 2015.
6. ಮೋಹನ ಆರ್., 2015 & 2016.
7. ಮೋಹನ ಆರ್., 2013 2016ಬಿ.
8. ಮೋಹನ ಆರ್., & ಹಂ.ಗು. ರಾಜೇಶ್, 2017.
9. ರಾಬರ್ಟ್ ಜಿ. ಬೆಡ್ನಾರಿಕ್., 2008.
10. ರಾಬರ್ಟ್ ಜಿ. ಬೆಡ್ನಾರಿಕ್., 1993.

* * *

ಕನ್ನಡ

- ಕೋಲ್ಕಾರ, ಶರಣಬಸಪ್ಪ 2010. **ಶಿಲಾಯುಗದ ಗವಿಚಿತ್ರಗಳು.** ಬಸವ ಪ್ರಕಾಶನ ಮತ್ತು ಪುಸ್ತಕ ವ್ಯಾಪಾರಿಗಳು, ಗುಲಬರ್ಗಾ.
- ಚನ್ನಬಸಪ್ಪ ಮಲ್ಕಂದಿನ್ನಿ. 2015. 'ರಾಯಚೂರು ಜಿಲ್ಲೆಯ ಪ್ರಾಗೈತಿಹಾಸಿಕ ನೆಲೆಗಳು'. **ಅಶೋಕ ಸಿರಿ (ಸ್ಮರಣ ಸಂಚಿಕೆ),** ಪುಟ. 133–119. ರಾಯಚೂರು: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್.
- ಚನ್ನಬಸಪ್ಪ ಮಲ್ಕಂದಿನ್ನಿ. 2017. 'ಮಸ್ಕಿಯ ಪ್ರಾಚ್ಯಾವಶೇಷಗಳು.' **ಗಚ್ಚಿನಶ್ರೀ–ಗಚ್ಚಿನ ಹಿರೇಮಠದ ಶ್ರೀಗುರು ಪಟ್ಟಾಧಿಕಾರ ಮಹೋತ್ಸವ ಸ್ಮರಣ ಸಂಚಿಕೆ** (ಘನಮಠದಯ್ಯ ಸಾಲಿಮಠ ಮತ್ತು ಇತರರು). ಪುಟ 5–10. ಮಸ್ಕಿ: ಗಚ್ಚಿನಹಿರೇಮಠದ ಶ್ರೀಗುರು ಪಟ್ಟಾಧಿಕಾರ ಮಹೋತ್ಸವ ಸಮಿತಿ.
- ತಿಪ್ಪೇಸ್ವಾಮಿ, ಎಸ್. 2006. 'ಸಂತೇಗುಡ್ಡದ ಗುಹಾ ವರ್ಣಚಿತ್ರಗಳು ಹಾಗೂ ಪ್ರಾಚ್ಯಾವಶೇಷಗಳು'. **ಇತಿಹಾಸ ದರ್ಶನ** 21: 24–27.
- ತಿಪ್ಪೇಸ್ವಾಮಿ, ಎಸ್. 2007. 'ಚಿತ್ರದುರ್ಗ ತಾಲ್ಲೂಕಿನ ಮತ್ತಷ್ಟು ಪ್ರಾಗಿತಿಹಾಸಿಕ ನೆಲೆಗಳು'. **ಇತಿಹಾಸ ದರ್ಶನ** 22: 13–16.
- ಮೋಹನ ಆರ್. 2016a 'ಮಲಪ್ರಭಾ ನದಿ ತೀರದ ಪ್ರಾಗಿತಿಹಾಸ ವರ್ಣಚಿತ್ರ ನೆಲೆಯ (ಕೆಂದೂರು) ಅನ್ವೇಷಣೆ ಮತ್ತು ಅದರ ಮಹತ್ವ'. **ಇತಿಹಾಸ ದರ್ಶನ 31: 15–18**.
- ಮೋಹನ, ಆರ್. 2017. 'ಗವಿ/ಶಿಲಾಸರೆಯಲ್ಲಿ ಪ್ರಾಚೀನ ಕರ್ನಾಟಕ ಸಂಸ್ಕೃತಿ'. **ಇತಿಹಾಸ ದರ್ಪಣ 31–32** (ಅಕ್ಟೋಬರ್ 2016–ಮಾರ್ಚ್ 2017): 25–40.
- ಮೋಹನ, ಆರ್. 2017a 'ತುಂಗಭದ್ರಾ ನದಿ ತೀರದಲ್ಲಿ ಇತ್ತೀಚೆಗೆ ಶೋಧಿಸಿದ ಪ್ರಾಗಿತಿಹಾಸಿಕ ಬಂಡೆಗಲ್ಲು ಚಿತ್ರಗಳು', **ಇತಿಹಾಸ ದರ್ಪಣ 35** (ಅಕ್ಟೋಬರ್–ಡಿಸೆಂಬರ್): 11–27.
- ಮೋಹನ, ಆರ್ ಮತ್ತು ಹಂ.ಗು. ರಾಜೇಶ್. 2017. ಬೆಂಗಳೂರು ಸಮೀಪ (ಬಂಕರಸನಗುಂಡು) ಕೈಗುರುತು ವರ್ಣಚಿತ್ರಗಳ ಶೋಧನೆ. **ಇತಿಹಾಸ ದರ್ಪಣ 31–32** (ಅಕ್ಟೋಬರ್ 2016–ಮಾರ್ಚ್ 2017): 57–68.
- ಲಕ್ಷ್ಮಣ್ ತೆಲಗಾವಿ. 2005. 'ಚಿತ್ರದುರ್ಗ ಜಿಲ್ಲೆಯಲ್ಲಿ ಪ್ರಾಚ್ಯಾರಿತ್ರಿಕ ಕಲೆ'. **ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ** (ಗೋಪಾಲ್ ಆರ್. ಸಂ.)., ಪುಟ 37–47. ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ.
- ಶ್ರೀಶೈಲ ಆರಾಧ್ಯ ಎಚ್.. 1987. 'ಚಿತ್ರದುರ್ಗ ಪರಿಸರದ ಪ್ರಾಗೈತಿಹಾಸ ಚಿತ್ರಗಳು'. **ಹರತಿಸಿರಿ.** ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ.
- ಸುಂದರ, ಅ. 1994. **ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ.** ಬೆಂಗಳೂರು: ಕರ್ನಾಟಕ ಲಲಿತ ಕಲಾ ಅಕಾಡೆಮಿ.

ಇಂಗ್ಲಿಷ್

- Allchin, F.R. 1960. **Piklihal Excavation**. Hyderabad: Andhra Pradesh Government Publications.
- Allchin, F.R. and B. Allchin 1994-95. 'Rock art of North Karnataka'. **Bulletin of the Deccan College Post-Graduate and Research Institute 54-55**: 313-39.
- Carballo, J. 1963. Prehistoric Caves Altamira: The Cave of Altamira and other Caves with Paintings of Santander. Santander (Spain): Patronato de las cuevas prehistoricas de la provincia de Santander.
- Fawcett, F. 1892. 'Prehistoric Rock Pictures near Bellary, South India'. **Asiatic Quarterly Review (New Series) III**: 147-157.
- Foote, R.B. 1916. **The Foote Collection of Indian Prehistoruic and Protohistoric Antiqueties, Notes on their Ages and Distributions**. Madras: Govt. of Madras Presidency.
- Gordon, D.H. 1951. 'The Rock Engravings of Kupgallu hill, Bellary, Madras', **Man** LI(204-205): 117-119.
- Leichhardt, L. 1846. Dr Leichhardt's lectures – lecture II. **Sydney Morning Herald,** 27 August 1846 (lecture delivered at School of Arts, Sydney University on 25 August 1846).
- José Antonio Lasheras. 2009. 'The Cave of Altamira: 22,000 Years of History. Adoranten' http://www.rockartscandinavia.com/images/articles/altamiraa9.pdf
- Mohana, R.2013. 'Newly Discovered Rock Art Sites in North Karnataka,India'. **in Asian Art, Culture and Heritage** (Anura Manatunga and Chamindi Dilkushi Senaratne Wettewe Eds.), pp. 191-198. International Association for Asian Heritage, Centre for Asian Studies, University of Kelaniya, Sri Lanka.
- Mohana, R. 2015. **Reading Rock Art: Interpreting Temporal and Geographic Variability in the Lower Malaprabha Basin, Karnataka.** Ph.D. thesis submitted to the Deccan College, Post Graduate and Research Institute, Pune.
- Mohana, R. 2016. **'Rock Art Exploration in the Malaprabha Basin: A Holistic Approach.'** Submitted to Nehru Trust for the Indian Collection at the Victoria and Albert Museum (NTICVA), United Kingdom.
- Mohana, R. 2018. 'Rock Art of Central Karnataka: A Preliminary Report'. **22nd RASI Proceedings Vol.**
- Munn. L. 1934. Prehistoric and Protohistoric Finds. **The Journal Hyderabad Geological Society 1 (2): 121-135.**
- Munn, C.L. 1935. Prehistoric and Protohistoric Finds of the Raichur and Shorapur Districts of H. E. H. the Nizam's State. **Man in India XV**(4): 225-250.
- Murugeshi, T. 2014. A Note on the Rock Art in Central Karnataka. In: Ajit Kumar (ed.) **Rock Art: Recent Researches and New Perspectives** (Festschrift to Yashodhar Mathpal), pp. 425-432. Delhi: New Bharatiya Book Corporation.
- Neumayer, E. 1993. **Lines on Stone: The Prehistoric Rock Art of India.** New Delhi: Manohar Publishers and Distributors.
- Neumayer,E. 2010. **Rock Art of India.** Oxford & New Delhi: Oxford University Press.
- Pradhan, S. and D. B. Garnayak. (Eds.) 2017. **Rock Art in India (In Felicitation of Prof. V.H. Sonawane)** Volume I-II. Delhi: B.R. Publishing Corporation.
- Wakankar, V.S. 1973. **Rock Paintings of India.** Ph.D. Dissertation. Pune: Deccan College, Post Graduate and Research Institute.
- Wakankar, V.S. and R.R.R. Brooks 1976. **Stone Age Painting in India.** U.S.A: Yale-Cambridge University.

■



ಚಿತ್ರ 1. ಗಲ್ಲ ಗುಡ್ಡ: ಆನೆಯನ್ನು ಬೇಟೆಯಾಡಿತ್ತಿರುವ ದೃಶ್ಯ



ಚಿತ್ರ 2. ಬಿಲ್ಲಮರಾಯನ ಗುಡ್ಡ: ಅಂತ್ಯ ಪ್ಲೈಸ್ಟೋಸಿನ್ (?) ಹಂತದ ಆನೆ



ಚಿತ್ರ 3. ದುರ್ಗಮ್ಮ ಗುಡ್ಡ: ಕಾಡು ಕೋಣವು ಕೋಡು ಮತ್ತು ಕಿವಿ ಚಿತ್ರಣದಿಂದ ಹೆಚ್ಚು ಆಕರ್ಷಕವಾಗಿದೆ.



ಚಿತ್ರ 4. ಮಲ್ಲಯ್ಯನ ಗುಡ್ಡ: ಗೂಳಿ ಚಿತ್ರಗಳು ದೇಹದ ವಿನ್ಯಾಸ ಹಾಗೂ ವೈಶಿಷ್ಟತೆಯಲ್ಲಿ ಭಿನ್ನವಾಗಿವೆ



ಚಿತ್ರ 5. ಮಲ್ಲಯ್ಯನ ಗುಡ್ಡ: ಗೂಳಿಗಳನ್ನು ಸುಂದರವಾಗಿ ಕುಟ್ಟಿ ಚಿತ್ರಿಸಲಾಗಿದೆ



ಚಿತ್ರ 6. ಮಲ್ಲಯ್ಯನ ಗುಡ್ಡ: ಜಾನುವಾರುಗಳ ಹಿಂಡಿನ ಜೊತೆ ಆಕರ್ಷಕ ಕೋಡುಗಳ ಚಿತ್ರಿತ ವಿಧಾನ.



ಚಿತ್ರ 7. ಮಲ್ಲಯ್ಯನ ಗುಡ್ಡ: ಬೃಹದಾಕರದ ಬಂಡೆಯ ಮೇಲಿನ ಗೂಳಿಯ ಕುಟ್ಟು ಚಿತ್ರ



ಚಿತ್ರ 8. ದುರ್ಗಮ್ಮ ಗುಡ್ಡ: ಗೂಳಿ ಕೋಡಿನ ರಚನೆಯಲ್ಲಿ ಭಿನ್ನತೆಯನ್ನು ತೋರಿಸಲಾಗಿದೆ ಮತ್ತು ನಗ್ನ ಮುಷ್ಯರ ಚಿತ್ರಗಳು



ಚಿತ್ರ 9. ದುರ್ಗಮ್ಮ ಗುಡ್ಡ: ಗೂಳಿಗಳ ಹಿಂಡು



ಚಿತ್ರ 10 ಬಿಲ್ಲಮರಾಯನ ಗುಡ್ಡ ಮತ್ತು ದುರ್ಗಮ್ಮ ಗುಡ್ಡ. ಗೂಳಿಗಳು ಮುಖಾಮುಖಿ ನಿಂತಿರುವಂತೆ ಚಿತ್ರಿಸಲಾಗಿದೆ



ಚಿತ್ರ 11
ಬಿಳ್ಳುಮರಾಯನ ಗುಡ್ಡ: ಕುಟ್ಟಿದ ಹುಲಿಯ ಚಿತ್ರ



ಚಿತ್ರ 12.
ಮಲ್ಲಯ್ಯನ ಗುಡ್ಡ: ಗಂಡು ಹುಲಿಯು ಸುರುಳಿ ಬಾಲ ಮತ್ತು ಪಟ್ಟಿಕೆಗಳನ್ನು ಹೊಂದಿದೆ.




ಚಿತ್ರ 13. ಕರಿಕಲ್ಲು ಗುಡ್ಡ: ಹುಲಿಯು ಚಿಗರೆಯನ್ನು ಬೇಟೆಯಾಡುತ್ತಿರುವ ದೃಶ್ಯ



ಚಿತ್ರ 14.
ಅನ್ವರಿ: ಕುದುರೆ ಸವಾರ



ಚಿತ್ರ 15.
ಮಲ್ಲಯ್ಯನ ಗುಡ್ಡ: ಕುದುರೆ ಸವಾರರು ಮತ್ತು ದೊಡ್ಡ ಗಾತ್ರದ ಮನುಷ್ಯ.



ಚಿತ್ರ 16. ಮಲ್ಲಯ್ಯನ ಗುಡ್ಡ: ನವಿಲಿನ ಕುಟ್ಟು ಚಿತ್ರಗಳು




ಚಿತ್ರ 17. ದುರ್ಗದ ಗುಡ್ಡ: ಗೂಳಿ ಮತ್ತು ಮನುಷ್ಯರ ಚಿತ್ರಗಳು.



ಚಿತ್ರ 18. ದುರ್ಗಮ್ಮ ಗುಡ್ಡ: ಧಾರ್ಮಿಕ ಕಟ್ಟಳೆಯ ಸಂಕೇತವೆಂಬಂತೆ ಮನುಷ್ಯ ದೊಡ್ಡ ಖಡ್ಗವನ್ನು ಹಿಡಿದು ನಿಂತಿರುವಂತೆ ಚಿತ್ರಿಸಲಾಗಿದೆ.



ಚಿತ್ರ 19. ಪಿಕ್ಲಿಹಾಳ್ : ಮನುಷ್ಯ ಮತ್ತು ಹಸು ಕುಟ್ಟು ಚಿತ್ರಗಳು



ಚಿತ್ರ 20. ಪಿಕ್ಲಿಹಾಳ್ ಮತ್ತು ಬಿಲ್ಲಮರಾಯನ ಗುಡ್ಡ: ಕುಟ್ಟು ಹಸ್ತ ಪ್ರತಿಗಳು



ಚಿತ್ರ 21
ಹಿರೇ ಗುಡ್ಡ:
ಪಾದದ
ಗೀರು ಚಿತ್ರ



ಚಿತ್ರ 22 ದುರ್ಗಮ್ಮ ಗುಡ್ಡ: ಧಾರ್ಮಿಕ ಕಟ್ಟಳೆಗೆ ಸಂಬಂಧಿಸಿದ್ದೆನ್ನಬಹುದಾದ ಬಿಡಿಸಿದ ಕುಟ್ಟುಚಿತ್ರಗಳು



ಚಿತ್ರ 23. ದುರ್ಗಮ್ಮ ಗುಡ್ಡ ಕಲ್ಲುಗಳ ಹಿನ್ನೆಲೆಯಲ್ಲಿ ಗೂಳಿಯ ಕುಟ್ಟು ಚಿತ್ರ



ಚಿತ್ರ 24.
ಹಿರೇ ಗುಡ್ಡ:
ಹಾಸು ಬಂಡೆ
ಮೇಲಿನ
ಕಲ್ಗುಳಿಗಳು



ಚಿತ್ರ 25.
ಹಳೇ
ಆನೆಹೊಸೂರು:
ಕಲ್ಗುಳಿಗಳು



ಚಿತ್ರ 26.
ಪಿಕ್ಲಿಹಾಳ್:
ವೃತ್ತಾಕಾರದ
ಹಾಗೂ ಇದರ
ಮಧ್ಯ '+'
ಮಾದರಿಯಲ್ಲಿ
ಬಿಂಬಿಸಲಾಗಿದೆ

ITIHASA DARPANA (Quarterly)
A Peer Reviewed Journal of Historical Research in Kannada
ISSN 2321-3590
Book No.: 37-38.
April – September 2018
Author: S. Venkatesh
Title: Doḍḍabaḷḷāpura tāllūkina bhṛhat shilāyuga samskṛtiya aprakaṭita nelegaḷu

ದೊಡ್ಡಬಳ್ಳಾಪುರ ತಾಲ್ಲೂಕಿನ ಬೃಹತ್ ಶಿಲಾಯುಗ ಸಂಸ್ಕೃತಿಯ ಅಪ್ರಕಟಿತ ನೆಲೆಗಳು

ಎಸ್. ವೆಂಕಟೇಶ್
ದೃಶ್ಯ, ಸೋಮೇಶ್ವರ ಬಡಾವಣೆ
ದೊಡ್ಡಬಳ್ಳಾಪುರ-561203
ಬೆಂಗಳೂರು ಗ್ರಾಮಾಂತರ ಜಿಲ್ಲೆ.
ಮೊ.:9845307342
drushya655@gmail.com

ಭೌಗೋಳಿಕವಾಗಿ ಬೆಟ್ಟಗುಡ್ಡಗಳಿಂದ ಆವೃತ್ತವಾಗಿರುವ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಮಾನವನ ಚಟುವಟಿಕೆಯನ್ನು ಇತಿಹಾಸ ಪೂರ್ವಕಾಲಕ್ಕೆ ಕೊಂಡೊಯ್ಯಬಹುದು. ಈ ತಾಲ್ಲೂಕಿನ ಸಾಸಲು, ದೊಡ್ಡಬೆಳವಂಗಲ ಮತ್ತು ತೂಬಗೆರೆ ಹೋಬಳಿಗಳಲ್ಲಿ ಆದಿಮಾನವನ ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಅನೇಕ ನೆಲೆಗಳು ಪತ್ತೆಯಾಗಿವೆ. ಈ ಸಾಂಸ್ಕೃತಿಕ ಘಟ್ಟಕ್ಕೆ ಸೇರಿದ ಮಾನವರು ವಿವಿಧ ಬಗೆಯ ಸಮಾಧಿಗಳನ್ನು ನಿರ್ಮಿಸುವಲ್ಲಿ ಬೃಹತ್ ಗಾತ್ರದ ಕಲ್ಲು ಚಪ್ಪಡಿಗಳನ್ನು ಬಳಸುತ್ತಿದ್ದುದರಿಂದ ಇವಕ್ಕೆ 'ಬೃಹತ್ ಶಿಲಾಯುಗ ಸಂಸ್ಕೃತಿ' ಎಂದು ಕರೆಯಲಾಗಿದೆ. ಆದರೆ ಬೃಹತ್ ಶಿಲಾ ಸಮಾಧಿಗಳೇ ಪ್ರಧಾನವಾಗಿ ಕಂಡು ಬರುವ ಕಾಲಾವಧಿ. ಅಲ್ಲದೆ ಈ ಹಂತದಲ್ಲೇ ವಿಸ್ತೃತ ಪ್ರಮಾಣದಲ್ಲಿ ಕಬ್ಬಿಣದ ಬಳಕೆ ಕಂಡು ಬರುವುದರಿಂದ ಇದನ್ನು 'ಕಬ್ಬಿಣಯುಗ ಸಂಸ್ಕೃತಿ' ಎಂದೂ ಕರೆಯಲಾಗುತ್ತದೆ. ಈ ಸಂಸ್ಕೃತಿಯ ಜನರ ವಾಸಸ್ಥಳವನ್ನು ವಸತಿ ನೆಲೆಗಳೆಂದೂ, ಶವಸಂಸ್ಕಾರದ ತಾಣಗಳನ್ನು ಸಮಾಧಿ ನೆಲೆಗಳೆಂದೂ ಗುರುತಿಸಲಾಗಿದೆ. ಈ ಸಂಸ್ಕೃತಿಗೆ ಸೇರಿದ ಜನರ ವಸತಿ ನೆಲೆಗಳಿಗಿಂತ ಸಮಾಧಿ

ನೆಲೆಗಳೇ ಅಧಿಕ ಸಂಖ್ಯೆಯಲ್ಲಿ ಪತ್ತೆಯಾಗಿರುವುದು ಈ ಸಂಸ್ಕೃತಿಯ ಇನ್ನೊಂದು ವೈಶಿಷ್ಟ್ಯ. ಇವುಗಳನ್ನು ಆಧರಿಸಿ ಅವರ ಸಾಂಸ್ಕೃತಿಕ ಬದುಕನ್ನು ಪುನಾರಚಿಸುವಲ್ಲಿ ಪುರಾತತ್ವ ತಜ್ಞರು ಸಾಕಷ್ಟು ಯಶಸ್ವಿಯಾಗಿದ್ದಾರೆ. ಈ ಸಂಸ್ಕೃತಿಯ ಜನ ಕಪ್ಪು, ಕೆಂಪು ಹಾಗೂ ಕಡುಗೆಂಪು ವರ್ಣದ ಮಡಕೆಗಳನ್ನು ಅತಿ ಹೆಚ್ಚು ಪ್ರಮಾಣದಲ್ಲಿ ತಯಾರಿಸಿ ಬಳಸುವಲ್ಲಿ ನಿಸ್ಸೀಮರಿದ್ದರು. ಕಪ್ಪು–ಕೆಂಪು ವರ್ಣದ ಮಡಕೆಗಳ ಬಳಕೆ ಈ ಸಂಸ್ಕೃತಿಯ ಒಂದು ಪ್ರಮುಖ ಲಕ್ಷಣ. ಈ ಸಂಸ್ಕೃತಿಗೆ ಸೇರಿದ ಒಂಭತ್ತು ಬಗೆಯ ಸಮಾಧಿಗಳನ್ನು ಗುರುತಿಸುವಲ್ಲಿ ವಿದ್ವಾಂಸರು ಈವರೆಗೆ ಯಶಸ್ವಿಯಾಗಿದ್ದು, ಇದರ ಕಾಲಮಾನವನ್ನು ಕ್ರಿ.ಪೂ.1200 ರಿಂದ ಕ್ರಿ.ಪೂ.250 ರವರೆಗೆ ಎಂದು ನಿರ್ಧರಿಸಲಾಗಿದೆ.

ಈ ಸಂಸ್ಕೃತಿಯ ವಸತಿ ಹಾಗೂ ಸಮಾಧಿ ನೆಲೆಗಳು ರಾಜ್ಯದೆಲ್ಲೆಡೆ ಅಧಿಕ ಸಂಖ್ಯೆಯಲ್ಲಿ ಪತ್ತೆಯಾಗಿದ್ದರೂ, ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಮಾತ್ರ ಈ ಸಂಸ್ಕೃತಿಗೆ ಸಂಬಂಧಿಸಿದ ವಸತಿನೆಲೆಯು ಈವರೆಗೆ ಎಲ್ಲೂ ಲಭ್ಯವಾದ ವರದಿಯಾಗಿಲ್ಲ. ಆದರೆ ಮೂವತ್ತಕ್ಕೂ ಹೆಚ್ಚು ಸಮಾಧಿ ನೆಲೆಗಳು ಪತ್ತೆಯಾಗಿವೆ. ಇವೆಲ್ಲವೂ ಈ ತಾಲ್ಲೂಕಿನ ಪಶ್ಚಿಮಭಾಗಕ್ಕೆ ಉತ್ತರ–ದಕ್ಷಿಣವಾಗಿ ಕೇಂದ್ರೀಕೃತವಾಗಿರುವುದನ್ನು ಕಾಣಬಹುದು. ನಿರ್ಮಿತಿಗಳನ್ನು ರಚಿಸಲು ಬೇಕಾಗುವ ಕಲ್ಲುಚಪ್ಪಡಿಗಳು ಉತ್ತರ–ದಕ್ಷಿಣವಾಗಿ ಹಬ್ಬಿರುವ ಶಿಲಾಖಂಡದಲ್ಲಿ ದೊರಕಿದ್ದು, ಅದೇ ಪ್ರದೇಶದಲ್ಲಿಯೇ ಬೃಹತ್ ಶಿಲಾಗೋರಿಗಳಿರುವುದು ಗಮನಾರ್ಹ. ಇಂತಹ ಗೋರಿನೆಲೆಗಳ ಸುತ್ತಮುತ್ತಲ ಪ್ರದೇಶದಲ್ಲಿಯೇ ವಸತಿ ನೆಲೆಗಳಿಗಾಗಿ ಹುಡುಕಾಟ ಮಾಡಬೇಕಾದ ಅಗತ್ಯವಿದೆ. ಗೋರಿ ನೆಲೆಗಳು ವ್ಯಾಪಕವಾಗಿ ಸಾಸಲು ಹೋಬಳಿಯ ಉಜ್ಜನಿ, ಹೊಸಹಳ್ಳಿ, ಜಾಲಗೆರೆ, ಸುತ್ತಹಳ್ಳಿ, ಸೂಲುಕುಂಟೆ, ಹಾಲುಚಿಲುಮೆ, ಬೆಣಕಿನಮಡಗು, ಕಲ್ಲುಕುಂಟೆ, ಅಲಪ್ಪನಹಳ್ಳಿ, ಭಕ್ತರಹಳ್ಳಿ, ಏಳಟ್ಟಿ, ಮಾದೇಶ್ವರ, ಬೂಚನಹಳ್ಳಿ, ಬೊಮ್ಮನಹಳ್ಳಿ, ಭೈರಾಪುರ ಮುಂತಾದ ಗ್ರಾಮಗಳಲ್ಲಿ ಮತ್ತು ಕ್ವಚಿತ್ತಾಗಿ ತೂಬಗೆರೆ ಹೋಬಳಿಯ ಘಾಟಿ, ಲಗುಮೇನಹಳ್ಳಿ, ಕಲ್ಲುಕೋಟೆ, ಮೆಳೇಕೋಟೆ, ಗುಂಜೂರು ಮೊದಲಾದ ಗ್ರಾಮಗಳಲ್ಲೂ ಕಂಡು ಬರುತ್ತವೆ. ಇವುಗಳ ಅಧ್ಯಯನದಿಂದ ಆ ಜನರ ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಬದುಕನ್ನು ಗ್ರಹಿಸಬಹುದಾಗಿದೆ.

ಈ ಸಾಂಸ್ಕೃತಿಕ ಘಟ್ಟದ ವಿಶಿಷ್ಟ ನಿರ್ಮಾಣಗಳಾದ ಗೋರಿ/ಸಮಾಧಿ ನೆಲೆಗಳು ವೈವಿಧ್ಯತೆಯಿಂದ ಕೂಡಿದ್ದು, ಶವಸಂಸ್ಕಾರ ಪದ್ಧತಿಯಲ್ಲಿ ಅವರು ಅನುಸರಿಸುತ್ತಿದ್ದ ವೈವಿಧ್ಯತೆಯೇ ಇದಕ್ಕೆ ಕಾರಣವಾಗಿದೆ. ಸತ್ತವರ ಅಂತ್ಯಸಂಸ್ಕಾರವನ್ನು ವಿಧಿವತ್ತಾಗಿ ಮಾಡುತ್ತಿದ್ದ ಅವರು ಶವಸಂಸ್ಕಾರ ಪದ್ಧತಿಯಲ್ಲಿ ಅನುಸರಿಸುತ್ತಿದ್ದ ಶಿಲಾವೃತ್ತ, ನಿಲಸುಗಲ್ಲು ಅಥವಾ ನಿಲುವುಗಲ್ಲು, ಕಲ್ಗುಪ್ಪೆ, ಕಿಂಡಿಕೋಣೆ ಕಲ್ಗೋರಿ, ಶವಕುಣಿಗಳು ಮುಂತಾದ ಮಾದರಿಯ ಸಮಾಧಿಗಳನ್ನು ಉದಾಹರಿಸಬಹುದಾಗಿದ್ದು, ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಇವುಗಳಲ್ಲಿ ಕೆಲವೊಂದು ಪ್ರಕಿಯ ಸಮಾಧಿಗಳನ್ನು ಪತ್ತೆಹಚ್ಚಲಾಗಿದೆ. ಈ ನಿಟ್ಟಿನಲ್ಲಿ ಸಾಸಲು ಜೆ.ವಿಶ್ವನಾಥ್ ಅವರನ್ನು ಸ್ಮರಿಸಲೇಬೇಕು. ಏಕೆಂದರೆ ನಮ್ಮ ತಾಲ್ಲೂಕಿನಲ್ಲಿ ಇತಿಹಾಸ ಪೂರ್ವಕಾಲಕ್ಕೆ ಸಂಬಂಧಿಸಿದ ಗೋರಿನೆಲೆಗಳನ್ನು ಪ್ರಪ್ರಥಮವಾಗಿ ಶೋಧಿಸಿದ, ಅವುಗಳನ್ನು ಬೆಳಕಿಗೆ ತಂದು ದಾಖಲಿಸಿದ ಕೀರ್ತಿ ಅವರಿಗೇ ಸಲ್ಲಬೇಕು. ಅದೇ

ರೀತಿಯಾಗಿ ಮೈಸೂರು ನಾಗರಾಜ ಶರ್ಮಾರವರೂ ಸಹ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಕ್ಷೇತ್ರಕಾರ್ಯ ಮಾಡಿ, ಬೂಚನಹಳ್ಳಿ ಹೊಸ ನೆಲೆಯನ್ನು ಶೋಧಿಸಿದ್ದಾರೆ. ಇದರ ಜೊತೆಗೆ ನನ್ನ ಕ್ಷೇತ್ರಕಾರ್ಯದ ಸಮಯದಲ್ಲಿ ಇನ್ನಷ್ಟು ಹೊಸ ನೆಲೆಗಳು ಪತ್ತೆಯಾಗಿದ್ದು, ಅವುಗಳನ್ನು ಕುರಿತು ನನ್ನದೇ ಪುಸ್ತಕವಾದ **ದೊಡ್ಡಬಳ್ಳಾಪುರ ಚಾರಿತ್ರಿಕ ಅಧ್ಯಯನ** ಕೃತಿಯಲ್ಲಿ ದೀರ್ಘವಾಗಿ ಬರೆದಿದ್ದೇನೆ. ಕೃತಿ ಪ್ರಕಟವಾದ ನಂತರವೂ ಹತ್ತು ಹಲವು ಹೊಸ ನೆಲೆಗಳನ್ನು ಶೋಧಿಸಲಾಗಿದ್ದು, ಅವುಗಳಲ್ಲಿ ಕೆಲವೊಂದು ನೆಲೆಗಳನ್ನು ಕುರಿತು ಇದೇ ಮೊದಲಸಲ ಇಲ್ಲಿ ದಾಖಲಿಸುತ್ತಿದ್ದೇನೆ.

ಹಳೇಕೋಟೆ: ಇದು ದೊಡ್ಡಬಳ್ಳಾಪುರ ತಾಲ್ಲೂಕು, ದೊಡ್ಡಬೆಳವಂಗಲ ಹೋಬಳಿಗೆ ಸೇರಿದ ಶಿಲಾಗೋರಿಗಳ ನೆಲೆ. ಇದು ದೊಡ್ಡಬಳ್ಳಾಪುರ ನಗರದಿಂದ 22 ಕಿ.ಮೀ. ದೂರ ಮತ್ತು ಹೋಬಳಿ ಕೇಂದ್ರವಾಗಿರುವ ದೊಡ್ಡಬೆಳವಂಗಲದಿಂದ 10 ಕಿ.ಮೀ. ದೂರದಲ್ಲಿದೆ. ಹುಲುಕುಡಿ ನಾಡಪ್ರಭುಗಳ ಆಡಳಿತ ಕೇಂದ್ರವಾಗಿದ್ದ ಹುಲುಕುಡಿಬೆಟ್ಟಕ್ಕೆ ತಾಕಿದಂತೆಯೇ ಹಿಂಭಾಗದಲ್ಲಿರುವ ಈ ಗ್ರಾಮ ಹುಲುಕುಡಿ ದೊರೆಗಳ ನೇರ ಆಳ್ವಿಕೆಗೆ ಒಳಪಟ್ಟಿತ್ತು. ಇಲ್ಲಿ ಕೋಟೆಯಿದ್ದು, ನಂತರ ಪಾಳುಬಿದ್ದಿರುವ ಈ ಸ್ಥಳದಲ್ಲಿ ಊರು ಬೆಳೆದಿರುವುದರಿಂದ ಇದಕ್ಕೆ ಹಳೇಕೋಟೆ ಎಂಬ ಹೆಸರು ಬಂದಿದೆ. ಒಂದು ಕಾಲಕ್ಕೆ ಅರಣ್ಯಮಯವಾಗಿದ್ದ ಈ ಪ್ರದೇಶ ಆದಿಮಾನವನ ವಾಸಯೋಗ್ಯ ನೆಲೆಯಾಗಿತ್ತು ಎಂಬುದಕ್ಕೆ ಇಲ್ಲಿನ ಬೆಟ್ಟದ ಸಾಲಿನುದ್ದಕ್ಕೂ ಪತ್ತೆಯಾಗಿರುವ ಬೃಹತ್ ಶಿಲಾಯುಗ ಸಂಸ್ಕೃತಿಯ ಕಾಲಕ್ಕೆ ಸೇರಿದ ಸಮಾಧಿನೆಲೆಗಳು ಸ್ಪಷ್ಟನೆ ನೀಡುತ್ತವೆ.

ಹಳೇಕೋಟೆ ಗ್ರಾಮದಲ್ಲಿ ಇದೇ ಮೊದಲಬಾರಿಗೆ ನನ್ನ ಕ್ಷೇತ್ರಕಾರ್ಯದ ಸಮಯದಲ್ಲಿ 8 ಶಿಲಾವೃತ್ತ (ಸ್ಟೋನ್ ಸರ್ಕಲ್) ಸಮಾಧಿಗಳು ಮತ್ತು 6 ಕಲ್ಗುಪ್ಪೆ ಸಮಾಧಿಗಳನ್ನು ಶೋಧಿಸಲಾಗಿದೆ. ಹಳೇಕೋಟೆ ಗ್ರಾಮದ ಚರ್ಚ್‌ನ ಹಿಂಭಾಗದಲ್ಲಿ ಒಂದು ಫರ್ಲಾಂಗ್ ದೂರಕ್ಕೆ ಪಶ್ಚಿಮದಿಕ್ಕಿನಲ್ಲಿ ಹುಣಿಸೇಮರ ಇರುವ ಹೊಲದಲ್ಲಿ ಅಕ್ಕಪಕ್ಕದಲ್ಲೇ ಎರಡು ಶಿಲಾವೃತ್ತ ಸಮಾಧಿಗಳಿವೆ. ಇವುಗಳಲ್ಲಿ ಒಂದು ಶಿಲಾವೃತ್ತ ಸಮಾಧಿಯು ಮೂಲಸ್ವರೂಪದಲ್ಲೇ ಸುಸ್ಥಿತಿಯಲ್ಲಿದೆ. ಇಲ್ಲಿನ ಶಿಲಾವೃತ್ತವು ಇಪ್ಪತ್ತು ಅಡಿಗಳ ವ್ಯಾಸವನ್ನು ಹೊಂದಿದೆ. ವ್ಯಾಸಕ್ಕೆ ಒಟ್ಟು 22 ದುಂಡನೆಯ, ಎರಡು ಅಡಿ ದಪ್ಪದ ಅನಿರ್ದಿಷ್ಟ ಆಕಾರದ ಕಲ್ಲುಗುಂಡುಗಳನ್ನು ಬಳಸಲಾಗಿದ್ದು, ಇವುಗಳಲ್ಲಿ 17 ಕಲ್ಲುಗುಂಡುಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ವ್ಯಾಸದ ಮಧ್ಯಭಾಗದಲ್ಲಿ ಒಂದೂವರೆ ಅಡಿ ಆಳದಲ್ಲಿ ಸಮಾಧಿಯ ಮೇಲಿನ ಟೊಪ್ಪಿಕಲ್ಲು ಕಾಣುತ್ತದೆ. ಇದರ ಕೆಳಗಡೆ ಇರುವ ಸಮಾಧಿಯು ಚೌಕಾಕಾರ, ಆಯತಾಕಾರ ಅಥವಾ ಸ್ವಸ್ತಿಕಾಕರ ಇವುಗಳಲ್ಲಿ ಯಾವ ರೀತಿಯ ಕಲ್ಲುತೊಟ್ಟಿಯನ್ನು ಹೊಂದಿದೆ ಎಂಬುದು ಸ್ಪಷ್ಟವಾಗುವುದಿಲ್ಲ. ಇದರ ಪಕ್ಕದಲ್ಲೇ ಇನ್ನೊಂದು ಸಮಾಧಿಯಿದ್ದು, ಅದರ ಮೇಲೆ ಇನ್ನಷ್ಟು ಮಣ್ಣುಗುಡ್ಡೆಮಾಡಿ ದಿಬ್ಬದಂತೆ ಮಾಡಿಕೊಂಡು, ಕಟ್ಟಿಗೆ ಜೋಡಿಸಿಟ್ಟಿದ್ದಾರೆ.

ಇದೇ ಸಮಾಧಿಯ ಹಿಂದಕ್ಕೆ 100 ಹೆಜ್ಜೆಗಳ ಅಂತರದಲ್ಲಿ ಮತ್ತೆ ಮೂರು ಸಮಾಧಿಗಳು ಕಾಣಸಿಗುತ್ತವೆ. ಎಲ್ಲವೂ ಕಲ್ಗುಪ್ಪೆ ಸಮಾಧಿಗಳು. ಗುರುತಿಗಾಗಿ ಮುಷ್ಟಿಗಾತ್ರದ ಕಲ್ಲುಗಳನ್ನು ಇಂದಿನ ನೆಲಮಟ್ಟದಿಂದ ಒಂದೂವರೆ ಅಡಿಯಷ್ಟು ಎತ್ತರಕ್ಕೆ ಗುಪ್ಪೆಯಂತೆ

ರಾಶಿಮಾಡಿದ್ದಾರೆ. ಆಶ್ಚರ್ಯವೆಂದರೆ ಈ ಕಲ್ಲುಗಪ್ಪೆಯ ಸುತ್ತಲೂ ಚಿಕ್ಕದಾದ ಕಲ್ಲುಗಳಿಂದ ಶಿಲಾವೃತ್ತವನ್ನು ರಚಿಸಿದ್ದಾರೆ. ಬಹುಶಃ ಕಲ್ಲುಗಪ್ಪೆಯು ಚದುರದಂತಿರಲೆಂದು ರಚಿಸಿರಬೇಕು. ಇದರ ಪಕ್ಕದಲ್ಲೇ ಇನ್ನೊಂದು ಬೃಹತ್ ಶಿಲಾವೃತ್ತ ಸಮಾಧಿಯಿದೆ. ಇದರ ಮಧ್ಯದಲ್ಲಿರುವ ಟೊಪ್ಪಿಕಲ್ಲು / ಮುಚ್ಚಳಕಲ್ಲು / ತಲೆಕಲ್ಲು ದೊಡ್ಡಹಾಸುಬಂಡೆಯಂತೆ ಕಾಣುತ್ತದೆ. ಅಂದರೆ ಅಷ್ಟು ದೊಡ್ಡದಾಗಿದೆ. ಸುತ್ತಲೂ ಇರುವ ಶಿಲಾವೃತ್ತದ ಕೆಲಗುಂಡುಗಳು ನಾಪತ್ತೆಯಾಗಿವೆ. ಸಾಮಾನ್ಯವಾಗಿ ಈ ರೀತಿಯ ಸಮಾಧಿಗಳು 4 ಅಡಿ ಅಗಲ ಮತ್ತು 8–10 ಅಡಿ ಉದ್ದವಿರುತ್ತವೆ.

ಉಳಿದ ಸಮಾಧಿಗಳು ಹುಲುಕುಡಿಬೆಟ್ಟದ ಹಿಂಭಾಗದಲ್ಲಿರುವ, ಹಳೇಕೋಟೆ ಗ್ರಾಮಕ್ಕೆ ಸೇರಿದ ತಳುಕಿನಕೆರೆಗೆ ಸಮೀಪದಲ್ಲಿವೆ. ಇವು ಸ್ವಲ್ಪ ಕಡಿದಾದ ಸ್ಥಳದಲ್ಲಿರುವುದರಿಂದ, ಅಷ್ಟು ಸುಲಭವಾಗಿ ಮೇಲ್ನೋಟಕ್ಕೆ ಕಾಣಿಸದಿರುವುದರಿಂದ ಇಂದಿಗೂ ಹಾಗೇ ಸುರಕ್ಷಿತವಾಗಿ ಉಳಿದುಕೊಂಡಿವೆ.

ಬೂಚನಹಳ್ಳಿ: ಇದು ಹಳೇಕೋಟೆ ಗ್ರಾಮದ ಪಕ್ಕದಲ್ಲೇ ಇರುವ ಇನ್ನೊಂದು ಬೃಹತ್ ಶಿಲಾಸಮಾಧಿ ನೆಲೆ. ಇಲ್ಲಿನ ಎರಡು ಸಮಾಧಿಗಳನ್ನು ಮೈಸೂರು ನಾಗರಾಜ ಶರ್ಮರವರು ಪತ್ತೆಮಾಡಿದ್ದಾರೆ. ಇವುಗಳನ್ನು ಹೊರತುಪಡಿಸಿ ನನ್ನ ಕ್ಷೇತ್ರಕಾರ್ಯದಲ್ಲಿ ಮತ್ತೆ 12 ಶಿಲಾವೃತ್ತ ಸಮಾಧಿಗಳು ಪತ್ತೆಯಾಗಿವೆ. ಇವುಗಳಲ್ಲಿ ಅರ್ಧದಷ್ಟು ಸಮಾಧಿಗಳು ನಿಧಿಗಳ್ಳರ ದಾಳಿಗೆ ತುತ್ತಾಗಿವೆ. ಮತ್ತೆ ಕೆಲವು ಬೆಟ್ಟದಿಂದ ಕೊಚ್ಚಿಬರುವ ಮಳೇನೀರಿನ ಮಣ್ಣಿನಿಂದ ಭೂಮಿಯ ಒಳಭಾಗದಲ್ಲಿ ಅವಿತಿವೆ. ಅವುಗಳ ಸುರಕ್ಷತೆಯ ದೃಷ್ಟಿಯಿಂದ ಇದು ಒಳ್ಳೆಯದೆನಿಸುತ್ತದೆ. ಮಳೆಗಾಲದಲ್ಲಿ ಹರಿಯುವ ನೀರಿನ ಕೊರೆತಕ್ಕೊಳಗಾಗಿ ತೆರೆದುಕೊಂಡಿದ್ದ, ನಿಧಿಗಳ್ಳರ ದಾಳಿಯಿಂದ ಹಾಳಾದ ಒಂದು ಸಮಾಧಿಯನ್ನು ಉತ್ಖನನಕ್ಕೆ ಒಳಪಡಿಸಿದಾಗ ಅನೇಕ ಕೂತಹಲಕಾರಿ ಅಂಶಗಳು ಬೆಳಕಿಗೆ ಬಂದಿವೆ. ಈ ಸಮಾಧಿಯು ಶಿಲಾವೃತ್ತ ಸಮಾಧಿಯೇ ಆಗಿತ್ತು. ಆದರೆ ಅದರ ಕಲ್ಲುವೃತ್ತಗಳು ಸಂಪೂರ್ಣವಾಗಿ ಮಣ್ಣು ಮಳೇನೀರಿನಿಂದ ಕೊರೆದು ಕೊಚ್ಚಿಹೋಗಿವೆ. ಅದರ ಚಪ್ಪಡಿ ಗೋಡೆಗಳು ಪೂರ್ತಿಯಾಗಿ ಹೊರಕ್ಕೆ ಕಾಣುತ್ತಿವೆ. ಇದು ಸ್ವಸ್ತಿಕಾಕಾರದ ರಚನೆಯನ್ನು ಹೊಂದಿದ್ದು, ಇದರ ಒಳವಿಸ್ತಾರ 4 ಅಡಿ ಅಗಲ ಮತ್ತು 10 ಅಡಿ ಉದ್ದವಿದೆ. ಇದರ ಟೊಪ್ಪಿಕಲ್ಲು ನಾಲ್ಕಾರು ಚೂರುಗಳಾಗಿವೆ. ನಿಧಿಗಳ್ಳರು ಈ ಸಮಾಧಿಯ ಮಣ್ಣನ್ನೆಲ್ಲಾ ಅಗೆದು ಹೊರಗೆ ಎಸೆದಿದ್ದರು. ಹೀಗೆ ಎಸೆದ ಮಣ್ಣಿನ ರಾಶಿಯನ್ನು ಜಾಲಾಡಿದಾಗ ಬೃಹತ್ ಶಿಲಾನೆಲೆಗಳ ಆಕರ್ಷಕ ಮಣ್ಣಿನ ರಚನೆಗಳಾದ ಬೋಗುಣಿಗಳು ಮತ್ತು ಘಂಟೆಯಾಕಾರದ ಮಣ್ಣಿನ ಮುಚ್ಚಳಗಳು ದೊರೆತಿವೆ. ಅಲ್ಲದೆ ಇವುಗಳ ಮೇಲೆ ಗೀರುರೇಖೆಗಳು (ಗ್ರಾಫಿಟ್ಟಿ ಮಾರ್ಕ್ಸ್) ಸಹ ಕಾಣಿಸಿಕೊಂಡಿವೆ. ಇದೇ ಮಣ್ಣಿನಲ್ಲಿ ಪತ್ತೆಯಾದ ಕೆಂಪು–ಕಪ್ಪು ಮಿಶ್ರಿತ ಮಡಕೆಯ ಚೂರುಗಳನ್ನೆಲ್ಲಾ ಸಮಗ್ರವಾಗಿ ಸಂಗ್ರಹಿಸಿ ಅವುಗಳನ್ನೆಲ್ಲಾ ಪುನರ್ಜೋಡಿಸಿದಾಗ (ಮೆಂಡಿಂಗ್) ಸುಮಾರು ಒಂದು ಮೀಟರ್ ಎತ್ತರದ ಬೃಹತ್ ಕುಂಭವೊಂದು ರೂಪುತಳೆಯಿತು.

ಹಳ್ಳೂರಿನಲ್ಲಿ ಈ ಹಿಂದೆ ನಡೆಸಿದ ಉತ್ಖನನದಲ್ಲಿ ಮೃತವ್ಯಕ್ತಿಯ ಅವಶೇಷವನ್ನು ತುಂಬಿ ಸಮಾಧಿ ಮಾಡುವ ಬೃಹತ್ ಶವಕುಂಭವು ವಿಶೇಷವಾಗಿ ದೊರೆತಿದ್ದು, ಶವಕುಂಭ

ಸಮಾಧಿಗಳು ಕರ್ನಾಟಕದಲ್ಲಿ ಇದ್ದ ಬಗ್ಗೆ ಸೂಚನೆಯನ್ನು ನೀಡುವುದರ ಜೊತೆಗೆ ಪ್ರಥಮ ದಾಖಲೆಯನ್ನು ಒದಗಿಸಿವೆ. ತಮಿಳುನಾಡಿನ ಕೆಲವು ಸ್ಥಳಗಳಲ್ಲಿ ಹೆಚ್ಚಾಗಿ ಕಂಡುಬಂದಿರುವ ಈ ರೀತಿಯ ಶವಕುಂಭಗಳ ಸಂಸ್ಕೃತಿಯು ಅಲ್ಲಿಂದಲೇ ಕರ್ನಾಟಕವನ್ನು ಪ್ರವೇಶಿಸಿರಬಹುದಾದ ಸಾಧ್ಯತೆಗೆ ಬೂಚನಹಳ್ಳಿಯಲ್ಲಿ ದೊರೆತಿರುವ ಈ ಬೃಹತ್ ಶವಕುಂಭವು ಮತ್ತಷ್ಟು ಪುಷ್ಟಿನೀಡುತ್ತದೆ. ಈವರೆಗೆ ದೊರೆತಿರುವ ಹೆಚ್ಚಿನ ಶಿಲಾಸಮಾಧಿಗಳು ಆಯ್ದ ಅಸ್ತಿಭಾಗಗಳನ್ನು ಮಾತ್ರ ಹೂಳಿರುವಂತಹ ಆಂಶಿಕ ಸಮಾಧಿಗಳು. ಇವುಗಳನ್ನು ಪುನರ್‌ಯೋಜಿತ ಸಮಾಧಿಗಳು ಎಂದೂ ಕರೆಯುವರು. ಅಂದರೆ ಶವಗಳನ್ನು ಬೇರೆಡೆ ಹೂತು, ಕೆಲವು ನಿರ್ದಿಷ್ಟ ದಿನಗಳ ನಂತರ ಶವದ ಉಳಿಕೆಭಾಗವಾದ ಮೂಳೆಗಳನ್ನು ಸಂಗ್ರಹಿಸಿ, ಇಂತಹ ಕುಂಭಗಳಲ್ಲಿ ಸಮಾಧಿ ಮಾಡುವ ಪರಿಪಾಠ ಕೆಲವೆಡೆ ಕಂಡುಬಂದಿದೆ. ಅದೇ ರೀತಿಯಾಗಿ ಬೂಚನಹಳ್ಳಿಯ ಈ ಕುಂಭವೂ ಸಹ ಮೃತವ್ಯಕ್ತಿಯ ಅಸ್ಥಿ ಅವಶೇಷಗಳನ್ನು ತುಂಬಿಕೊಂಡಿತ್ತು ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಏಕೆಂದರೆ ಇಲ್ಲಿ ಶವವನ್ನು ನೇರವಾಗಿ ಮಡಕೆಯೊಳಗೆ ಹೂಳಿದ ನಿದರ್ಶನಗಳು ಲಭ್ಯವಾಗಿಲ್ಲ. ಬದಲಾಗಿ ಶವವನ್ನು ನೈಸರ್ಗಿಕವಾಗಿ ಜೀರ್ಣಗೊಳ್ಳಲು ಬಿಟ್ಟು, ಅನಂತರ ಅಳಿದುಳಿದ ಅಸ್ಥಿ ಅವಶೇಷಗಳನ್ನು ಮಡಕೆಯೊಳಗೆ ತುಂಬಿದ್ದ ನಿದರ್ಶನಗಳು ಲಭ್ಯವಾಗಿವೆ. ಅಲ್ಲದೆ ಈ ಶವಕುಂಭದ ಆಕಾರವು ತಮಿಳುನಾಡು ಮತ್ತು ಕರ್ನಾಟಕದ ಹಳ್ಳೂರಿನಲ್ಲಿ ದೊರೆತಿರುವ ಬೃಹತ್ ಶವಕುಂಭಗಳ ಆಕಾರವನ್ನೇ ಹೋಲುತ್ತಿರುವುದರಿಂದ, ಈ ಕುಂಭವು ಗೃಹಬಳಕೆಗೆ ಸಾಧ್ಯವಿಲ್ಲದ ಕಾರಣ, ಇದರಲ್ಲಿನ ಮಣ್ಣಿನ ರಾಶಿಯಲ್ಲಿ ಮಾನವನ ಮೂಳೆಗಳು ಕಂಡುಬಂದಿರುವುದರಿಂದ ಇದನ್ನು ಸ್ಪಷ್ಟವಾಗಿ ಶವಕುಂಭ ಎಂದು ಗುರುತಿಸಬಹುದು.

ಮೃತವ್ಯಕ್ತಿಯ ಅಸ್ಥಿಅವಶೇಷಗಳನ್ನು ಇಂತಹ ಬೃಹತ್ ಕುಂಭದೊಳಗೆ ಇಟ್ಟು ಹೂಳಲಾಗುತ್ತಿತ್ತು. ಅಲ್ಲದೆ ಇದರೊಳಗೆ ಮಣ್ಪಾತ್ರೆಗಳು ಮತ್ತು ಕಬ್ಬಿಣದ ಉಪಕರಣಗಳನ್ನು ಇಡುತ್ತಿದ್ದರು. ಇಲ್ಲಿನ ಮಣ್ಣಿನಲ್ಲಿ ಅಂತಹ ಕೆಲವೊಂದು ಅವಶೇಷಗಳು ಲಭ್ಯವಾಗಿವೆ. ಕೆಲವು ಮಣ್ಪಾತ್ರೆಗಳು ಕೈಯಿಂದಲೇ ತಟ್ಟಿ ಮಾಡಿದವಾಗಿದ್ದು, ವಿವಿಧ ಗಾತ್ರದ್ದಾಗಿವೆ. ಮತ್ತೆ ಕೆಲವು ತಿಗುರಿಯ ಮೇಲೆ ಮಾಡಿದಂತಹವು. ಇವುಗಳ ನಯಗಾರಿಕೆ ಆಕರ್ಷಕವಾಗಿದೆ. ಮಣ್ಪಾತ್ರೆಗಳು ಸ್ವಲ್ಪ ಕೆಂಪೊತ್ತಿದ ಬಿಸ್ಕತ್‌ಬಣ್ಣ ಮತ್ತು ಕಪ್ಪುಬಣ್ಣದ (ಕರಿಗೆಂಪು) ದ್ವಿವರ್ಣ ಪಾತ್ರೆಗಳಾಗಿವೆ. ಇಲ್ಲಿನ ಕುಂಭವು ಜಾಡಿ/ಗುಡಾಣದಂತೆ ದೊಡ್ಡದಾಗಿರುವುದರಿಂದ ಹಾಗೂ ಇದರ ತಳವು ನೆಲದ ಮೇಲೆ ನಿಲ್ಲದ (ಚೂಪು ಬುಡದ) ಕಾರಣ ಭೂಮಿಯೊಳಗೆ ಗುಳಿತೋಡಿ ಅದರೊಳಗೆ ಇದನ್ನು ಹೂಳುತ್ತಿದ್ದರು. ಮಡಕೆಯ ಸುತ್ತಲೂ ದೊಡ್ಡ ಕಲ್ಲುಚಪ್ಪಡಿಗಳಿಂದ ತೊಟ್ಟಿಯಾಕಾರದಲ್ಲಿ (ಆಯತಾಕಾರದಲ್ಲಿ) ಕಲ್ಲುಗಳನ್ನು ನಿಲ್ಲಿಸಿ, ಅದರ ಮೇಲ್ಭಾಗವನ್ನು ಇನ್ನೊಂದು ದೊಡ್ಡಚಪ್ಪಡಿ ಕಲ್ಲಿನಿಂದ ಮುಚ್ಚುತ್ತಿದ್ದರು. ಭೂಮಟ್ಟದಲ್ಲಿ ಇವುಗಳ ಸುತ್ತ ಗುರುತಿಗಾಗಿ ಕಲ್ಲುವೃತ್ತವಿರುತ್ತದೆ. ಒಟ್ಟಾರೆ ಬೃಹತ್ ಗಾತ್ರದ ಳತೆಯ ಮಣ್ಣಿನ ಮಡಕೆಯನ್ನು ಹೊಂದಿರುವ ಕರ್ನಾಟಕದ ಎರಡನೆಯ ಮತ್ತು ದಕ್ಷಿಣ ಕರ್ನಾಟಕದ ಮೊಟ್ಟಮೊದಲನೆಯ ಶವಕುಂಭ ಸಮಾಧಿಯಾಗಿರುವ ಈ ಬೂಚನಹಳ್ಳಿ ನೆಲೆಯು ಒಂದು ಪ್ರಮುಖ ಪ್ರಾಚ್ಯನೆಲೆ ಎನಿಸಿದೆ. ಇಲ್ಲಿನ ಕೆಲವೊಂದು ಸಮಾಧಿಗಳಿಗೆ ಎರಡು ಸಾಲು ಶಿಲಾವೃತ್ತಗಳಿರುವುದು ಗಮನೀಯ.

ಮತ್ತೆ ಕೆಲವು ಸಮಾಧಿಗಳು ಬೆಟ್ಟದ ತಪ್ಪಲಿನಲ್ಲಿ ಇರುವುದರಿಂದ, ಮಳೆಬಂದಾಗ ಬೆಟ್ಟದಿಂದ ಹರಿದು ಬರುವ ನೀರುಮಣ್ಣಿನಿಂದಾಗಿ ಮುಚ್ಚಿಹೋಗಿವೆ. ತುಸು ಸೂಕ್ಷ್ಮವಾಗಿ ಗಮನಿಸಿದರೆ ಮಧ್ಯದ ಟೊಪ್ಪಿಕಲ್ಲನ್ನು ಗುರುತಿಸಬಹುದು. ಮತ್ತೆ ಕೆಲವು ಸಮಾಧಿಗಳು ನಿಧಿಶೋಧಕರ ದಾಳಿಗೆ ತುತ್ತಾಗಿ, ಶಿಲಾಗೋರಿಗಳ ಅವಶೇಷಗಳು ಹೊರಗೆ ಕಾಣುತ್ತಿವೆ. ಇನ್ನೂ ಕೆಲವು ನೆಲವನ್ನು ವ್ಯವಸಾಯಕ್ಕೆ ಹಸನುಮಾಡುವಾಗ ಹಾಳಾಗಿವೆ. ಈ ಗ್ರಾಮ ಹುಲುಕುಡಿಬೆಟ್ಟದ ಬುಡದಲ್ಲಿರುವುದರಿಂದ ಭೂಮಿಯು ಫಲವತ್ತಾಗಿದ್ದು, ನಿರಂತರ ವ್ಯವಸಾಯಕ್ಕೆ ಒಳಗಾಗಿರುವುದರಿಂದ ಈ ಪ್ರದೇಶದಲ್ಲಿ ಇದ್ದಿರಬಹುದಾದ ಇನ್ನೂ ಅನೇಕ ಶಿಲಾವೃತ್ತ ಸಮಾಧಿಗಳು ನಾಶವಾಗಿರುವ ಸಾಧ್ಯತೆಯಿದೆ.

ಗುಂಡಪ್ಪನಾಯಕನಹಳ್ಳಿ: ಇದು ದೊಡ್ಡಬಳ್ಳಾಪುರ ತಾಲ್ಲೂಕು, ಸಾಸಲು ಹೋಬಳಿ, ಬನವತಿ ಗ್ರಾಮಕ್ಕೆ ಸೇರಿದ ಒಂದು ಮಜರಾ/ಉಪಗ್ರಾಮ. ಈ ಗ್ರಾಮದ ರಸ್ತೆಯ ಪೂರ್ವಕ್ಕಿರುವ ಗುಡ್ಡದಲ್ಲಿ ಒಂದೇಕಡೆ ಐವತ್ತಕ್ಕೂ ಹೆಚ್ಚು ಸಮಾಧಿಗಳು ಕಂಡುಬಂದಿರುವುದು ಗಮನಾರ್ಹ. ಕೆಲವೊಂದು ಭೌಗೋಳಿಕ ಲಕ್ಷಣಗಳ ಆಧಾರದ ಮೇಲೆ ನಮ್ಮ ತಾಲ್ಲೂಕಿನ ಕಾಡುಮೇಡು, ಗುಡ್ಡಗಾಡು ಪ್ರದೇಶಗಳನ್ನು ಅಲೆಯುವುದು ನಾನು ಕಳೆದ ಹದಿನೈದು ವರ್ಷಗಳಿಂದ ರೂಢಿಸಿಕೊಂಡು ಬಂದಿರುವ ಪದ್ಧತಿ. ಈ ಹಿನ್ನೆಲೆಯಲ್ಲಿ ಇಲ್ಲಿನ ಗುಡ್ಡಗಾಡಿನಲ್ಲಿ ಅಲೆಯುತ್ತಿದ್ದಾಗ ಈ ನೆಲೆ ಇದೇ ಮೊದಲಸಲ ಆಕಸ್ಮಿಕವಾಗಿ ನನ್ನ ಕಣ್ಣಿಗೆ ಬಿತ್ತು. ಆಗ ನನಗಾದ ಆನಂದ ಹೇಳತೀರದು. ಆದರೆ ಈ ಸಂತೋಷ ಕೆಲವೇ ನಿಮಿಷಗಳದಾಗಿತ್ತು. ಏಕೆಂದರೆ ಕಣ್ಣು ಹಾಯಿಸುತ್ತಾ ಹೋದಂತೆ ಎಲ್ಲವೂ ನೆಲಸಮವಾಗಿರುವುದು ಕಂಡಿತು. ಐತಿಹಾಸಿಕ ಪ್ರಜ್ಞೆಯಿಲ್ಲದ ಈ ಜಮೀನಿನ ಭೂಮಾಲಿಕರು ವ್ಯವಸಾಯಕ್ಕೆಂದು ಜೆ.ಸಿ.ಬಿ. ಯಂತ್ರದಿಂದ ಇಲ್ಲಿನ ನೆಲವನ್ನು ಸಮಮಾಡಿಸಿದ್ದಾರೆ. ಆಗ ದೊರೆತ ಸಮಾಧಿಯ ಚಪ್ಪಡಿಗಳನ್ನೆಲ್ಲಾ ಕಿತ್ತು ಒಂದೆಡೆ ರಾಶಿಹಾಕಿದ್ದಾರೆ. ಅವರೇ ಹೇಳುವಂತೆ ಇಲ್ಲಿ ನಿಲುವುಗಲ್ಲು, ಶಿಲಾವೃತ್ತ, ಕಲ್ಲುಗುಪ್ಪೆ, ನೆಲಕೋಣೆ ಹೀಗೆ ಎಲ್ಲ ಪೈಕಿಯ ಸಮಾಧಿಗಳಿದ್ದವು.

ಆದರೆ ಕಲ್ಲುಗುಪ್ಪೆ ಸಮಾಧಿಗಳು ಹಾಗೇ ಸುರಕ್ಷಿತವಾಗಿ ಉಳಿದಿಕೊಂಡಿವೆ. ಅವುಗಳಿಗೆ ಜೆ.ಸಿ.ಬಿ. ಯಂತ್ರ ಇನ್ನೂ ಬಾಯಿಹಾಕಿರಲಿಲ್ಲ. ಹೀಗಾಗಿ ಅವುಗಳನ್ನು ಹಾಗೇ ಉಳಿಸಿಕೊಳ್ಳುವಂತೆ ಕೇಳಿಕೊಳ್ಳಲಾಯಿತು. ಸಮಾಧಿಯ ಮೇಲೆ ಗುರುತಿಗಾಗಿ ಒತ್ತಾಗಿ ಗುಪ್ಪೆಹಾಕಿದ ಸಣ್ಣಸಣ್ಣ ಕಲ್ಲಿನ ರಾಶಿಯೇ ಕಲ್ಲುಗುಪ್ಪೆಗಳು. ಈ ಕಲ್ಲುಗುಪ್ಪೆ (ಕೇಯಿರ್ನ್) ರಾಶಿಯ ಮಧ್ಯದಲ್ಲಿ ಕೆದಕಿದರೆ ಯಥಾಪ್ರಕಾರ ಅಂದರೆ ನಿಲಸುಗಲ್ಲುಗಳು ಮತ್ತು ಶಿಲಾವೃತ್ತ ಸಮಾಧಿಗಳಲ್ಲಿರುವಂತೆ ಮೊದಲಿಗೆ ಟೊಪ್ಪಿಕಲ್ಲು ಕಂಡುಬರುತ್ತದೆ. ಇದರ ಕೆಳಗೆ ಕಲ್ಲುಚಪ್ಪಡಿಗಳ ಗೋರಿಯಿದ್ದು, ಅದರೊಳಗೆ ಮಾನವನ ಅಸ್ಥಿಅವಶೇಷಗಳು ಮತ್ತು ಮಣ್ಪಾತ್ರೆಗಳು ಕಂಡುಬರುತ್ತವೆ. ಇಲ್ಲಿನ ಕಲ್ಲುಗುಪ್ಪೆಗಳು ಕೆಂಪು ಮತ್ತು ಬಿಳಿಬಣ್ಣದ ಬೆಣಚುಕಲ್ಲಿನ ರಾಶಿಯಿಂದ ಕೂಡಿದ್ದವು. ಇವು ಭೂಮಟ್ಟದಿಂದ ಸಾಮಾನ್ಯವಾಗಿ ಒಂದೂವರೆ–ಎರಡು ಅಡಿಗಳಷ್ಟು ಎತ್ತರವಾಗಿರುತ್ತವೆ. ಇವುಗಳಲ್ಲಿ ಕೆಲವೊಂದು ಕಲ್ಲುಗುಪ್ಪೆಗಳ ವ್ಯಾಸ 8–10 ಮೀಟರ್‌ಗಳಷ್ಟಿವೆ.

ಸ್ಥಳೀಯರು ಅಗೆದು ಹಾಳಾಮಾಡಿದ್ದ ಕೆಲವೊಂದು ಸಮಾಧಿಗಳ ಮಣ್ಣಿನ ರಾಶಿಯಲ್ಲಿ ಹುಡುಕಾಡಿದಾಗ ಎಂದಿನಂತೆ ಕೆಂಪು–ಕಪ್ಪು(ಕರಿಗೆಂಪು) ಬಣ್ಣದ ಮಡಕೆಯ

ಚೂರುಗಳು ಪತ್ತೆಯಾದವು. ಅವುಗಳನ್ನೆಲ್ಲಾ ಹೆಕ್ಕಿತಂದು ಪುನರ್ಜೋಡಿಸಲಾಯಿತು. ಆಗ ದೊಡ್ಡದಾದ ಅರ್ಧಂಬರ್ಧ ಗುಡಾಣಗಳು ರೂಪುಗೊಂಡವು. ಮತ್ತೆ ಕೆಲವು ಹೊಟ್ಟೆದಪ್ಪನಾಗಿರುವ, ಬಾಯಿ ಅಗಲವಾಗಿರುವ ದೊಡ್ಡಮಡಕೆಗಳಾದವು. ಉಳಿದ ಚೂರುಗಳಲ್ಲಿ ತಳ ನೆಲದಲ್ಲಿ ನಿಲ್ಲಲಾರದಂತಹ ಚೂಪುಬುಡದ ಮಡಕೆ ಚೂರುಗಳು, ಬೋಗುಣಿಗಳು, ತಟ್ಟೆಯಂತಹ ಚೂರುಗಳು, ಹಿಡಿಕೆಗಳು ದೊರೆತಿವೆ. ಭೂಅಗೆತ ಮಾಡುವಾಗ ಅಲ್ಲಿದ್ದ ಸ್ಥಳೀಯರೇ ಹೇಳುವಂತೆ ಕೆಲವೊಂದು ಮಡಕೆಗಳು ಕುದುರೆ ತಲೆಯಂತೆ ಇದ್ದವು. ಮತ್ತೆ ಕೆಲವು ಗಂಟೆಯಾಕಾರದಲ್ಲಿದ್ದವು. ಅವುಗಳ ಚೂರಿಗಾಗಿ ಮಣ್ಣಿನ ರಾಶಿಯನ್ನೆಲ್ಲಾ ಸಾಯಂಕಾಲದವರೆಗೂ ತಡಕಾಡಿದೆ. ಏನೂ ಪ್ರಯೋಜನವಾಗಲಿಲ್ಲ.

ದೊಡ್ಡತುಮಕೂರು: ಇದು ಮಧುರೆ ಹೋಬಳಿಗೆ ಸೇರಿದ ಒಂದು ಗ್ರಾಮ. ಇಲ್ಲಿನ ಮುತ್ತರಾಯಸ್ವಾಮಿ ದೇವಾಲಯವೆಂದು ಕರೆಯಲಾಗುತ್ತಿರುವ ಆಂಜನೇಯನ ದೇಗುಲದಲ್ಲಿ ಇತಿಹಾಸ ಪೂರ್ವಕಾಲಕ್ಕೆ ಸೇರಿದ ನಯವಾದ ವಿವಿಧ ಗಾತ್ರದ ನಾಲ್ಕು ಕೈಗೊಡಲಿಗಳಿದ್ದು, ಅವುಗಳನ್ನು ದೇವರ ಪಕ್ಕದಲ್ಲಿಟ್ಟು ಪೂಜಿಸಲಾಗುತ್ತಿದೆ. ಆದರೆ ಈ ಕೈಗೊಡಲಿಗಳನ್ನು ಯಾರು ಇಲ್ಲಿ ತಂದಿಟ್ಟರೆಂದಾಗಲಿ, ಅವು ಎಲ್ಲಿಯವೆಂದಾಗಲಿ ತಿಳಿಯುವುದಿಲ್ಲ. ಈ ಗ್ರಾಮದ ಸುತ್ತಮುತ್ತ, ಕೊನೆಗೆ ಮಧುರೆ ಹೋಬಳಿಯಲ್ಲಿ ಎಲ್ಲೂ ಇತಿಹಾಸ ಪೂರ್ವದ ನೆಲೆಗಳು ಪತ್ತೆಯಾಗಿರುವ ಬಗ್ಗೆ ಈವರೆಗೆ ಯಾವುದೇ ವರದಿಯಾಗಿಲ್ಲ. ಈ ಹಿನ್ನೆಲೆಯಲ್ಲಿ ಇಲ್ಲಿನ ಕೈಗೊಡಲಿಗಳು ಕುತೂಹಲಕಾರಿಯಾಗಿವೆ.

ಇಲ್ಲಿನ ಎಲ್ಲ ಸಮಾಧಿಗಳು ಕೃಷಿಗೆ ಯೋಗ್ಯವಲ್ಲದ ಸ್ಥಳದಲ್ಲಿ ಅಥವಾ ಬಂಜರು ಭೂಮಿಯಲ್ಲಿ ಇಲ್ಲವೆ ಬಂಡೆಗಳು / ಶಿಲಾದಿನ್ನೆಗಳು ಸುಲಭವಾಗಿ ಸಿಗುವಂತಹ ಸ್ಥಳಗಳಲ್ಲಿ ಕಂಡುಬಂದಿರುವುದು ಗಮನಾರ್ಹ. ಹುಲುಕುಡಿಬೆಟ್ಟದ ಸುತ್ತಮುತ್ತಲಿರುವ ಅರಣ್ಯ/ಗುಡ್ಡಗಾಡು ಪ್ರದೇಶಗಳಲ್ಲಿ ಅಲೆದಾಡಿದರೆ ಇನ್ನಷ್ಟು ಹೊಸ ಪುರಾತತ್ವ ನೆಲೆಗಳು ಸಿಗುವ ಸಾಧ್ಯತೆಯಿದೆ. ಈ ನಿಟ್ಟಿನಲ್ಲಿ ಕ್ಷೇತ್ರಕಾರ್ಯ ಕೈಗೊಳ್ಳುವ ಅಗತ್ಯವಿದೆ.

ಆಕರ ಗ್ರಂಥಗಳು

. ಬಿ.ಕೆ. ಗುರುರಾಜರಾವ್. 1972 **ಮೆಗಲಿಥಿಕ್ ಕಲ್ಚರ್ ಇನ್ ಸೌತ್ ಇಂಡಿಯಾ.** ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು.

. ಎ.ವಿ. ನರಸಿಂಹಮೂರ್ತಿ (ಸಂ.). 1975. **ಆರ್ಕಿಯಾಲಜಿ ಆಫ್ ಕರ್ನಾಟಕ.** ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು.

. ಎಸ್. ಶ್ರೀಕಂಠಶಾಸ್ತ್ರಿ. 1960. **ಭಾರತೀಯ ಪುರಾತತ್ವ ಶೋಧನೆ.** ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು.


. ಕೆ.ಬಿ. ಶಿವತಾರಕ್. 2011. **ಕರ್ನಾಟಕದ ಪುರಾತತ್ವ ನೆಲೆಗಳು.** ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ. ಹಂಪಿ.

. **ಮೈಸೂರ್ ಆರ್ಕಿಯಾಲಾಜಿಕಲ್ ರಿಪೋರ್ಟ್ಸ್** (1919–1940). ಬೆಂಗಳೂರು.

. **ಇತಿಹಾಸ ದರ್ಪಣ** ಸಂಪುಟಗಳು. ಬೆಂಗಳೂರು.

. **ಚರಿತ್ರೆ ಅಧ್ಯಯನ** ಸಂಪುಟಗಳು. ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ. ಹಂಪಿ.

8. **ಇತಿಹಾಸ ದರ್ಶನ** ಸಂಪುಟಗಳು, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.
9. ಎಸ್. ವೆಂಕಟೇಶ್, 2016, **ದೊಡ್ಡಬಳ್ಳಾಪುರ ಚಾರಿತ್ರಿಕ ಅಧ್ಯಯನ** (ಇತಿಹಾಸ ಪೂರ್ವಕಾಲದಿಂದ ಏಕೀಕರಣದವರೆಗೆ), ದೃಶ್ಯ ಪ್ರಕಾಶನ, ಸೋಮೇಶ್ವರ ಬಡಾವಣೆ, ದೊಡ್ಡಬಳ್ಳಾಪುರ.
10. ಕ್ಷೇತ್ರಕಾರ್ಯದಿಂದ ಲಭ್ಯವಾದ ಮಾಹಿತಿ.



ಸಿಧಿಗಳ್ಳರ ದಾಳಿಗೆ ತುತ್ತಾದ ಸಮಾಧಿಯಲ್ಲಿ ಪತ್ತೆಯಾದ ಶವಕುಂಭ - ಬೂಚನಹಳ್ಳಿ




ಶಿಲಾವೃತ್ತ ಸಮಾಧಿ - ಹಳೇಕೋಟೆ



ನಿಧಿಗಳ್ಳರ ದಾಳಿಗೆ ತುತ್ತಾಗಿ ತೆರೆದುಕೊಂಡಿರುವ ಸಮಾಧಿ - ಬೂಚನಹಳ್ಳಿ



ಅಪರೂಪದ ಎರಡು ಸಾಲಿನ
ಶಿಲಾವೃತ್ತ ಸಮಾಧಿ -
ಬೂಚನಹಳ್ಳಿ



ಲಭ್ಯವಾದ ಕರಿಗೆಂಪು ಮಡಕೆ
ಚೂರುಗಳು-ಗುಂಡಪ್ಪನಾಯಕನಹಳ್ಳಿ



ಇತಿಹಾಸ ಪೂರ್ವಕಾಲದ
ಕೈಗೊಡಲಿಗಳು
- ದೊಡ್ಡತುಮಕೂರು.



ಕಲ್ಲುಪ್ಪೆ ಸಮಾಧಿ - ಗುಂಡಪ್ಪನಾಯಕನಹಳ್ಳಿ.



ಸಮಾಧಿಯಲ್ಲಿ ಲಭ್ಯವಾದ ಕುಂಭ ಮತ್ತು ಘಂಟೆಯಾಕಾರದ ಮುಚ್ಚಳ - ಬೂಚನಹಳ್ಳಿ.



ಇತಿಹಾಸ ದರ್ಪಣದ ಹಿಂದಿನ ಸಂಚಿಕೆಗಳ ದರ ಪಟ್ಟಿ

ಸಂಚಿಕೆಗಳು	ರೂ.	✓	ಪುಸ್ತಕಗಳು	ರೂ.	✓
ಇತಿಹಾಸ ದರ್ಪಣ ಪುಸ್ತಕ -1*	10		ಇತಿಹಾಸ ದರ್ಪಣ ಪುಸ್ತಕ -16	40	
ಇತಿಹಾಸ ದರ್ಪಣ ಪುಸ್ತಕ -2*	10		ಇತಿಹಾಸ ದರ್ಪಣ ಪುಸ್ತಕ -17	60	
ಇತಿಹಾಸ ದರ್ಪಣ ಪುಸ್ತಕ -3*	10		ಇತಿಹಾಸ ದರ್ಪಣ ಪುಸ್ತಕ -18	70	
ಇತಿಹಾಸ ದರ್ಪಣ ಪುಸ್ತಕ -4*[1]	90		ಇತಿಹಾಸ ದರ್ಪಣ ಪುಸ್ತಕ -19	75	
ಇತಿಹಾಸ ದರ್ಪಣ ಪುಸ್ತಕ -5	10		ಇತಿಹಾಸ ದರ್ಪಣ ಪುಸ್ತಕ -20	75	
ಇತಿಹಾಸ ದರ್ಪಣ ಪುಸ್ತಕ -6,7*	20		ಇತಿಹಾಸ ದರ್ಪಣ ಪುಸ್ತಕ -21,22	150	
ಇತಿಹಾಸ ದರ್ಪಣ ಪುಸ್ತಕ -8 [2]	100		ಇತಿಹಾಸ ದರ್ಪಣ ಪುಸ್ತಕ -23	80	
ಇತಿಹಾಸ ದರ್ಪಣ ಪುಸ್ತಕ -9	20		ಇತಿಹಾಸ ದರ್ಪಣ ಪುಸ್ತಕ -24	90	
ಇತಿಹಾಸ ದರ್ಪಣ ಪುಸ್ತಕ -10	30		ಇತಿಹಾಸ ದರ್ಪಣ ಪುಸ್ತಕ -25 [4]	180	
ಇತಿಹಾಸ ದರ್ಪಣ ಪುಸ್ತಕ -11	30		ಇತಿಹಾಸ ದರ್ಪಣ ಪುಸ್ತಕ -26	75	
ಇತಿಹಾಸ ದರ್ಪಣ ಪುಸ್ತಕ-12, 13[3]	110		ಇತಿಹಾಸ ದರ್ಪಣ ಪುಸ್ತಕ -27	100	
ಇತಿಹಾಸ ದರ್ಪಣ ಪುಸ್ತಕ -14	30		ಇತಿಹಾಸ ದರ್ಪಣ ಪುಸ್ತಕ -28	100	
ಇತಿಹಾಸ ದರ್ಪಣ ಪುಸ್ತಕ -15	40		ಇತಿಹಾಸ ದರ್ಪಣ ಪುಸ್ತಕ - 29	100	

ಒಟ್ಟು ಮೊತ್ತ

ಹಿಂದಿನ ಸಂಚಿಕೆಗಳು ಬೇಕಾಗಿರುವವರು ಅವಶ್ಯವಿರುವ ಸಂಚಿಕೆಗಳನ್ನು ಗುರುತು ಮಾಡಿ. ಅವುಗಳ ಒಟ್ಟು ಮೊಬಲಗುವನ್ನು **"Editor, Itihasa Darpana"** ಹೆಸರಿಗೆ ಬೆಂಗಳೂರಿನಲ್ಲಿ ಸಂದಾಯವಾಗುವಂತೆ ತೆಗೆಸಿದ **ಚೆಕ್ / ಡಿ.ಡಿ** ಮೂಲಕ ಪಟ್ಟಿಯನ್ನು ನಮ್ಮ ವಿಳಾಸಕ್ಕೆ ಕಳುಹಿಸಿ ಕಳುಹಿಸಕೊಟ್ಟಲ್ಲಿ ತಮಗೆ ಅಂಚೆಯ ಮೂಲಕ ಕಳುಹಿಸಿಕೊಡಲಾಗುವುದು.

ವಿಶೇಷ ಕೊಡುಗೆ: ಇತಿಹಾಸ ದರ್ಪಣ ನಿಯತಕಾಲಿಕೆಯ ಎಂಟನೇ ವಾರ್ಷಿಕೋತ್ಸವದ ಪ್ರಯುಕ್ತ ರೂ. 500/- ಮೇಲ್ಪಟ್ಟ ಮೊತ್ತದ ಸಂಚಿಕೆಗಳ ಖರೀದಿಯ ಮೇಲೆ ಶೇ 15% ರಷ್ಟು ಹಾಗೂ ರೂ. 1000/- ಮೇಲ್ಪಟ್ಟ ಮೊತ್ತದ ಪುಸ್ತಕ ಖರೀದಿಯ ಮೇಲೆ ಶೇ 25% ರಷ್ಟು ವಿಶೇಷ ರಿಯಾಯಿತಿಯನ್ನು ನೀಡಲಾಗುವುದು. -ಸಂಪಾದಕರು.

ನಮ್ಮ ವಿಳಾಸ: ಸಂಪಾದಕರು, ಇತಿಹಾಸ ದರ್ಪಣ, #33/ಎ, ಐ.ಟಿ.ಐ ಕಾಲೇಜು ಹತ್ತಿರ, ಕೆಂಪೇಗೌಡನಗರ, ವಿಶ್ವನೀಡಂ - ಅಂಚೆ, ಬೆಂಗಳೂರು - 560091. ಮೊ. 7829404063.

1. ಕೃಷ್ಣ(ದೇವ)ರಾಯ ಮತ್ತು ವಿಜಯನಗರ ಸಾಮ್ರಾಜ್ಯ - ವಿಶೇಷ ಸಂಚಿಕೆ.
2. ನಮ್ಮ ಬೆಂಗಳೂರು - ವಿಶೇಷ ಸಂಚಿಕೆ.
3. ಕರ್ನಾಟಕದಲ್ಲಿ ಪುರಾತತ್ವ ಅಧ್ಯಯನಗಳು - ವಿಶೇಷ ಸಂಚಿಕೆ.
4. ಹೈದರಾಲಿ ಮತ್ತು ಟಿಪ್ಪೂ ಸುಲ್ತಾನರ ಮೂಲ ದಾಖಲೆ- ವಿಶೇಷ ಸಂಚಿಕೆ.

* ಸಂಚಿಕೆಗಳು ಲಭ್ಯವಿರುವುದಿಲ್ಲ.

ITIHASA DARPANA (Quarterly)
A Peer Reviewed Journal of Historical Research in Kannada
ISSN 2321-3590
Book No.: 37-38.
April – September 2018
Author: B. Rajashekarappa
Title: 'isila' Kannaḍa pada alla. adu kannaḍa 'esil'na prakṛta rūpa

'ಇಸಿಲ' ಕನ್ನಡ ಪದ ಅಲ್ಲ, ಅದು ಕನ್ನಡ 'ಎಸಿಲ್'ನ ಪ್ರಾಕೃತ ರೂಪ

ಷ. ಶೆಟ್ಟರ್ ಅವರ ಪ್ರಾಕೃತ ಜಗದ್ವಲಯ ಎಂಬ ಹೊಸ ಪುಸ್ತಕದ ಒಂದು ಅಧ್ಯಾಯದ ಕೆಲ ಭಾಗವೆನ್ನುವ 'ಇಸಿಲ ಕನ್ನಡದ ಮೊದಲ ಪದವಲ್ಲ' ಎಂಬ ಲೇಖನವನ್ನು ಪ್ರಜಾವಾಣಿಯ ದಿನಾಂಕ 26-06-2018ರ 'ಮುಕ್ತಛಂದ'ದಲ್ಲಿ ಓದಿದೆ. "ತೇದಿಯುಳ್ಳ ಪ್ರಾಚೀನತಮ ಕನ್ನಡ ಪದ" ಎಂದೇ ಬಹುವರ್ಷಗಳಿಂದ ತಿಳಿಯುತ್ತ ಅಭಿಮಾನಪಡುತ್ತ ಬರಲಾಗಿದ್ದ 'ಇಸಿಲ' ಪದ ಕುರಿತು ಒಂದು ಮರುಚರ್ಚೆ ಆ ಲೇಖನದಿಂದ ಪ್ರಾರಂಭವಾಗುತ್ತಿದೆಯೇನೋ ಅನಿಸಿತು. ಆದರೆ, ಮತ್ತೆ ಮತ್ತೆ ಆ ಲೇಖನ ಓದಿದಾಗ, ಅದು ಹಲವು ತಪ್ಪುಸಂಗತಿ (Factual Errors)– ಗೊಂದಲ-ಗೋಜಲುಗಳಿಂದ, ಅಂದಾಜಿನ ಹೇಳಿಕೆಗಳಿಂದ, ತುಂಬಿರುವುದು ಕಾಣಿಸಿತು. ವಾಚಕರು ಆ ಬರಹದಿಂದ ಕೆಲವು ತಪ್ಪು ವಿಚಾರಗಳಿಗೆ ಪಕ್ಕಾಗುವ ಸಂಭವವಿದೆಯೆನ್ನಿಸಿ, ಆ ಲೇಖನದ ಕೆಲವು ಅಸಂಗತ ಅಂಶಗಳನ್ನು ವಾಚಕರ ಗಮನಕ್ಕೆ ತರಲಿಕ್ಕಾಗಿ ಬರೆಯಬೇಕೆನಿಸಿತು. ಖೇದದ ಸಂಗತಿಯೆಂದರೆ, ಅದಕ್ಕೆ ಪ್ರತಿಕ್ರಿಯೆಯಂತು ಲೇಖನವನ್ನು ಹಾಕಲಾಗುವುದಿಲ್ಲ ಎಂದು ಪತ್ರಿಕೆಯವರು ದೂರವಾಣಿಯಲ್ಲಿ ಸ್ಪಷ್ಟವಾಗಿ ಹೇಳಿದರು. ಒಂದು ಕಾಲಕ್ಕೆ ಸಾಹಿತ್ಯ, ಇತಿಹಾಸ, ಭಾಷೆ ಮುಂತಾದ

ಬಿ. ರಾಜಶೇಖರಪ್ಪ
ಕನ್ನಡ ಪ್ರಾಧ್ಯಾಪಕರು, ಪ್ರಾಂಶುಪಾಲರು(ನಿ)
2 ನೇ ಕ್ರಾಸ್ (ಪಶ್ಚಿಮ),
ಜಯಚಾಮರಾಜೇಂದ್ರ ಬಡಾವಣೆ
ಚಿತ್ರದುರ್ಗ – 577 501.
ಮೊ : 9480226064.
drajashekharb@gmail.com

ವಿಷಯಗಳಿಗೆ ಸಂಬಂಧಿಸಿದಂತೆ ಗಂಭೀರ ಬೌದ್ಧಿಕ ಚರ್ಚೆಗೆ ಮತ್ತು ಸತ್ಯಾನ್ವೇಷಣೆಗೆ ಉತ್ತೇಜನ ಕೊಡುತ್ತಿದ್ದ ಆ ಪತ್ರಿಕೆ ಇದೀಗ ಆ ಗೋಜಿಗೇ ಹೋಗದೆ ಕೈಚೆಲ್ಲಿರುವುದು ಸಹಜವಾಗಿಯೆ ಖೇದವನ್ನು ಉಂಟುಮಾಡಿತು. ಈ ಬಗ್ಗೆ ತಿಳಿದ ಈ **ಇತಿಹಾಸ ದರ್ಪಣ** ವಿದ್ವತ್ ಪತ್ರಿಕೆಯ ಬಳಗದ ಮಿತ್ರರು ಇದನ್ನು ಪ್ರಕಟಿಸುವ ಉತ್ಸಾಹವನ್ನು ತೋರಿದರು. ಹಾಗಾಗಿ ಆ ಲೇಖನ ಇದೀಗ ಇಲ್ಲಿ ಪ್ರಕಟವಾಗುತ್ತಿದೆ. ಮೊದಲಿಗೆ ಬರೆದಿದ್ದ ಲೇಖನ ಸಂಕ್ಷಿಪ್ತವೇ ಇದ್ದರೂ ಅದು **ಪ್ರಜಾವಾಣಿ**ಯಲ್ಲಿ ಪ್ರಕಟವಾಗಿದ್ದರೆ, ಪೂರ್ತಿಯಾಗಿ ಪ್ರಕಟವಾಗುತ್ತಿತ್ತೆಂಬ ಬಗ್ಗೆ ನಂಬಿಕೆಯಿರಲಿಲ್ಲ. ಮೊದಲಿಗೆ ನಾನು ಬರೆದಿದ್ದ ಆ ಲೇಖನಕ್ಕೆ ಇನ್ನಷ್ಟು ಪೂರಕ ಅಂಶಗಳನ್ನು ಸೇರಿಸಿ ಅದನ್ನು ವಿಸ್ತಾರಗೊಳಿಸಿದ್ದೇನೆ. ಇತಿಹಾಸ, ಭಾಷೆ, ಸಾಹಿತ್ಯ ಕುರಿತಂತೆ ಚರ್ಚೆಗೆ ಸತ್ಯಾನ್ವೇಷಣೆಗೆ ಉತ್ತೇಜನ ಕೊಡುವ ಈ ಪತ್ರಿಕೆಯಲ್ಲಿ ಈ ಲೇಖನ ಬರುತ್ತಿರುವುದು ನನಗೆ ಸಹಜವಾಗಿಯೆ ಹರ್ಷವನ್ನು ತಂದಿದೆ. ದರ್ಪಣಕ್ಕೆ ನನ್ನ ಕೃತಜ್ಞತೆಗಳು.

ಈಚೆಗೆ ನನ್ನ ಮಿತ್ರರೂ ಚಿತ್ರದುರ್ಗ ಜಿಲ್ಲಾ ಶಿಕ್ಷಣಾಧಿಕಾರಿಗಳೂ ಆದ ಸಿ.ಎಂ. ತಿಪ್ಪೇಸ್ವಾಮಿ ಅವರು ಮೈಸೂರು ವಿಶ್ವವಿದ್ಯಾನಿಲಯದಿಂದ 2016ರಲ್ಲಿ ಪ್ರಕಟವಾಗಿರುವ **ಕನ್ನಡ ಕೈಪಿಡಿ ಸಂಪುಟ-1** (ಪರಿಷ್ಕೃತ ಆವೃತ್ತಿ)ರಲ್ಲಿ ಅದನ್ನು ಪರಿಷ್ಕರಿಸಿದ ಸೀತಾರಾಮ ಜಾಗೀರ್‌ದಾರ್ ಅವರು 'ಇಸಿಲ' ಕುರಿತು ಬರೆದಿರುವುದನ್ನು ನನ್ನ ಗಮನಕ್ಕೆ ತಂದಿದ್ದಾರೆ. ಅದರಲ್ಲಿ ಬರೆದಿರುವ ಕೆಲವು ಮಾತುಗಳು ಕೂಡಾ ವಿಚಾರಣೀಯವೆನ್ನಿಸಿದ್ದರಿಂದ ಆ ಬಗ್ಗೆ ಸಹ ನನ್ನ ಪ್ರತಿಕ್ರಿಯೆ ಸೇರಿಸುವುದು ಅವಶ್ಯಕವೆನಿಸಿತು. ಹಾಗಾಗಿ ಈ ಬರಹ ಒಂದು ಸಂಯುಕ್ತ ಪ್ರತಿಕ್ರಿಯೆಯ ರೂಪ ತಾಳಿದೆ.

I. ಷ. ಶೆಟ್ಟರ್ ಅವರ ಅಭಿಪ್ರಾಯ

'ಖರೋಷ್ಠೀ' ಎನ್ನುವುದು ಭಾಷೆಯೇ? : ಪ್ರಜಾವಾಣಿಯಲ್ಲಿ ಬಂದ ಲೇಖನದಲ್ಲಿ ಷ. ಶೆಟ್ಟರ್ ಅವರು ಬ್ರಹ್ಮಗಿರಿ ಮತ್ತು ಸಿದ್ದಾಪುರದ ಅಶೋಕನ ಶಾಸನಗಳ ಬಗ್ಗೆ ಬರೆಯುತ್ತಾ, "ಇವೆರಡನ್ನೂ ಕೊರೆದವನು ಗಾಂಧಾರ ಪ್ರದೇಶದ ಖರೋಷ್ಠೀ ಮಾತೃಭಾಷೆಯ, 'ಚಪಡ'ನೆಂಬ ಲಿಪಿಕಾರ..." ಎಂದು ಬರೆದಿದ್ದಾರೆ. ಇಲ್ಲಿ ಮೊದಲಿಗೆ ಒಂದು ತಾಂತ್ರಿಕ ಅಂಶವನ್ನು ಪ್ರಸ್ತಾಪಿಸಬೇಕಾಗಿದೆ. ಶೆಟ್ಟರ್ ಅವರು ಖರೋಷ್ಠಿಯನ್ನು ಭಾಷೆ ಎಂದಿರುವುದು ದೇವನಾಗರಿಯನ್ನೂ ಬ್ರಾಹ್ಮಿಯನ್ನೂ ಭಾಷೆ ಎಂದಂತಾಗಿದೆ. ಬ್ರಾಹ್ಮೀ ಮತ್ತು ದೇವನಾಗರಿಯಂತೆ ಖರೋಷ್ಠೀ ಎಂಬುದು ಒಂದು ಲಿಪಿಯೇ ಹೊರತು ಅವರು ಬರೆದಿರುವಂತೆ ಅದು ಒಂದು ಭಾಷೆಯಲ್ಲ. ಕೆಲವೊಮ್ಮೆ ಒಂದು ಭಾಷೆಗೆ ಒಂದು ನಿರ್ದಿಷ್ಟ ಲಿಪಿ ಇರುತ್ತದೆ. ಆ ಲಿಪಿಯನ್ನು ಆಯಾ ಭಾಷೆಯ ಹೆಸರಿನಿಂದ ಕರೆಯುತ್ತಾರೆ. ಉದಾಹರಣೆಗೆ ಕನ್ನಡ, ತಮಿಳು, ತೆಲುಗು ಇಂಥ ಭಾಷೆಗಳ ಲಿಪಿಗಳಿಗೆ (ಬ್ರಾಹ್ಮೀ ಲಿಪಿಯೇ ಮೂಲವಿದ್ದರೂ ಅವನ್ನು ಪ್ರತ್ಯೇಕ-ಪ್ರತ್ಯೇಕವಾಗಿ) ಆಯಾ ಭಾಷೆಗಳ ಹೆಸರಿನಿಂದ ಕರೆಯುತ್ತ ಬರಲಾಗಿದೆ. ಖರೋಷ್ಠೀ ಹಾಗೆ ನಿರ್ದಿಷ್ಟ ಭಾಷೆಯೊಂದರ ಲಿಪಿ ಅಲ್ಲ.

ಲಿಪಿ ಮತ್ತು ಭಾಷೆ ಇವುಗಳ ಪ್ರಸ್ತಾಪ ಬಂದಾಗ ನಾವು ನೆನಪಿಟ್ಟುಕೊಳ್ಳಬೇಕಾದ ಸಂಗತಿ ಎಂದರೆ ಭಾಷೆಯೇ ಬೇರೆ: ಲಿಪಿಯೇ ಬೇರೆ- ಎನ್ನುವುದು. ಒಂದು ಲಿಪಿಯನ್ನು

ಬೇರೆ ಬೇರೆ ಭಾಷೆಗಳಿಗೆ ಬಳಸಬಹುದು; ಹಾಗೇ ಒಂದು ಭಾಷೆಯನ್ನು ಬೇರೆ ಬೇರೆ ಲಿಪಿಗಳಲ್ಲಿ ಬರೆಯಬಹುದು. ಕನ್ನಡ ಲಿಪಿಯನ್ನು ತುಳು, ಕೊಂಕಣಿ, ಕೊಡವ– ಭಾಷೆಗಳಿಗೆ ಬಳಸಲಾಗುತ್ತದೆ. ಸಂಸ್ಕೃತ ಭಾಷೆಗೆ ದೇವನಾಗರೀ, ಕನ್ನಡ, ತೆಲುಗು, ಮಲಯಾಳಂ (ಗ್ರಂಥ) ಮುಂತಾದ ಲಿಪಿಗಳನ್ನು ಬಳಸಲಾಗಿದೆ. ಹಾಗೇ ಕನ್ನಡ ಲಿಪಿಯನ್ನು ತುಳು, ಕೊಂಕಣಿ, ಕೊಡವ ಭಾಷೆಗಳಿಗೆ ಬಳಸಲಾಗಿದೆ. ಅಂಥ ಪತ್ರಿಕೆಗಳನ್ನು ಕನ್ನಡ ಲಿಪಿ ಬಲ್ಲವರು ಓದಬಲ್ಲರಾದರೂ ಆ ಭಾಷೆಗಳು ಗೊತ್ತಿಲ್ಲದಿದ್ದರೆ ಅವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗದು. ಹಾಗೇ, ಸಂಸ್ಕೃತ ಶ್ಲೋಕಗಳು ಕನ್ನಡ ಲಿಪಿಯಲ್ಲಿದ್ದರೂ ಅವು ಅರ್ಥವಾಗಲು ಸಂಸ್ಕೃತ ಭಾಷೆ ತಿಳಿದಿರಬೇಕಾಗುತ್ತದೆ. ಲಿಪಿ ಭಾಷೆಗಳ ಸಂಬಂಧ ಇರುವುದು ಹೀಗೆ ಅಲ್ಲವೆ? ಆದರೆ, ಇಲ್ಲಿ ಹಾಗಿಲ್ಲ. ಮೇಲೆ ಹೇಳಿದ ಹಾಗೆ ಬ್ರಾಹ್ಮೀ ಮತ್ತು ಖರೋಷ್ಠೀ ನಿರ್ದಿಷ್ಟ ಭಾಷೆಗೆ ಸಂಬಂಧಿಸಿದ ಲಿಪಿಗಳಲ್ಲ. ದೇವನಾಗರೀ ಲಿಪಿಯ ಹಾಗೆ ಅವನ್ನು ಸಂಸ್ಕೃತ ಪ್ರಾಕೃತ ಹೀಗೆ ಬೇರೆ ಬೇರೆ ಭಾಷೆಗಳಿಗೆ ಬಳಸಲಾಗಿದೆ. ಈ ಎಲ್ಲ ವಿವರಗಳೂ ಶಾಸನಲಿಪಿ ಅಭ್ಯಾಸಿಗಳು ಪ್ರಾಥಮಿಕ ಹಂತದಲ್ಲೇ ತಿಳಿದುಕೊಳ್ಳುವ ತಾಂತ್ರಿಕ ಸಂಗತಿಗಳು. ಹೀಗಿರುವಾಗ ಶೆಟ್ಟರ್ ಅವರು ಖರೋಷ್ಠಿಯನ್ನು ಭಾಷೆ ಎಂದು ಭಾವಿಸಿದ್ದಷ್ಟೇ ಅಲ್ಲ, ಅದು ಚಪಡನ ಮಾತೃಭಾಷೆ ಎಂದದ್ದು ಎಷ್ಟು ಅಸಂಗತ ಎಂಬುದನ್ನು ಇನ್ನಷ್ಟು ವಿವರಿಸಬೇಕಾಗಿಲ್ಲ.

'ಚಪಡ'ನು ಲಿಪಿಕಾರನೇ? ಕಂಡರಣೆಕಾರನೇ?: ಬ್ರಹ್ಮಗಿರಿ ಶಾಸನದಲ್ಲಿ' 'ಚಪಡೇನ ಲಿಖಿತಂ ಲಿಪಿಕರೇಣ' ಎಂಬ ವಾಕ್ಯವಿದೆ, ನಿಜ. (ಅದರ ಅರ್ಥ 'ಬರವಣಿಗೆಕಾರನಾದ ಚಪಡನಿಂದ ಬರೆಯಲ್ಪಟ್ಟದ್ದು' ಎಂದು). ಇಡೀ ಶಾಸನ ಇರುವುದು ಪ್ರಾಕೃತ ಭಾಷೆಯಲ್ಲಾದರೂ ಈ ವಾಕ್ಯ ಇರುವುದು ಮಾತ್ರ ಸಂಸ್ಕೃತ ಭಾಷೆಯಲ್ಲಿ. ಅಲ್ಲಿ 'ಚಪಡೇನ ಲಿಖಿತಂ' ಎಂಬುದು ಬ್ರಾಹ್ಮೀಲಿಪಿಯಲ್ಲಿದ್ದರೆ, 'ಲಿಪಿಕರೇಣ' ಎಂಬುದು ಖರೋಷ್ಠೀ ಲಿಪಿಯಲ್ಲಿದೆ. ಶೆಟ್ಟರ್ ಅವರು ಈ ಶಾಸನವನ್ನು ಕೊರೆದವನು 'ಚಪಡ' ಎಂದಿದ್ದಾರೆ. ಶಾಸನವೇ ಸ್ಪಷ್ಟವಾಗಿ ಹೇಳಿರುವಂತೆ ಚಪಡನು ಈ ಶಾಸನದ ಲಿಪಿಕಾರ ಮಾತ್ರ. ಇಲ್ಲಿ ಕೂಡಾ ಒಂದು ತಾಂತ್ರಿಕ ಅಂಶವಿದೆ. ಲಿಪಿಕಾರ ಎಂಬುವನೇ ಬೇರೆ: ಕಂಡರಣೆಕಾರನೇ ಬೇರೆ. ಅಂದರೆ ಬರೆಯುವವನೇ ಬೇರೆ: (ಬರಹವನ್ನು) ಕೊರೆಯುವವನೇ ಬೇರೆ. ಒಂದು ವೇಳೆ ಚಪಡನು ಇದನ್ನು ಕೊರೆದಿದ್ದರೆ. ಶಾಸನದಲ್ಲಿ "ಚಪಡೇನ ಉತ್ಕೀರ್ಣಂ ಶಿಲ್ಪಕಾರೇಣ" ಎಂಬ ಮಾತನ್ನೂ ಸೇರಿಸಿರುತ್ತಿದ್ದ. (ಅದರ ಅರ್ಥ 'ಕಂಡರಣೆಕಾರನಾದ ಚಪಡನಿಂದ ಕಂಡರಿಸಲ್ಪಟ್ಟದ್ದು' ಎಂದು). ಶಾಸನ ಚಪಡನು ಕೇವಲ ಲಿಪಿಕಾರ ಎಂಬ ಅಂಶವನ್ನು ಹೇಳುತ್ತದೆಯೇ ಹೊರತು ಅವನು ಅದರ ಕಂಡರಣೆಕಾರನೂ ಆಗಿದ್ದ ಎಂಬ ಅಂಶವನ್ನು ಹೇಳುವುದಿಲ್ಲ.

ಒಂದು ಶಾಸನ ಸಿದ್ಧವಾಗಬೇಕಾದರೆ– ಶಾಸನದ ಪಾಠವನ್ನು ರಚಿಸಿಕೊಡುತ್ತಿದ್ದವನು (ಶಾಸನರಚಕ), ಆ ಪಾಠವನ್ನು ಕಲ್ಲಿನ ಮೇಲೆ ಬರೆದುಕೊಡುತ್ತಿದ್ದವನು (ಲಿಪಿಕಾರ), ಹಾಗೆ ಬರೆದುಕೊಟ್ಟದ್ದನ್ನು ಕಂಡರಿಸುತ್ತಿದ್ದವನು (ಶಿಲ್ಪಕಾರ)– ಈ ಮೂವರ ಕೈಯೂ ಕೂಡಬೇಕಾಗಿತ್ತು. ಆ ಒಂದೊಂದು ಕೆಲಸವನ್ನೂ ಬೇರೆ ಬೇರೆ ವ್ಯಕ್ತಿಗಳೇ ಮಾಡುತ್ತಿದ್ದರು. ಕೆಲವು ಸಲ ಅಪರೂಪದ ಸಂದರ್ಭಗಳಲ್ಲಿ, ಎರಡೆರಡು ಕೆಲಸಗಳನ್ನು ಇಲ್ಲವೆ ಮೂರೂ

ಕೆಲಸಗಳನ್ನು ಒಬ್ಬನೇ ವ್ಯಕ್ತಿ ಮಾಡುತ್ತಿದ್ದ. ಇಲ್ಲಿ ಚಪಡನು ತನ್ನನ್ನು 'ಲಿಪಿಕಾರ' ಎಂದಷ್ಟೇ ಕರೆದುಕೊಂಡಿರುವುದರಿಂದ ಅವನು ಶಾಸನ ಪಾಠವನ್ನು ಕಲ್ಲಿನ ಮೇಲೆ ಬರೆದುಕೊಟ್ಟಿರುವವನೇ ಹೊರತು, ಶಾಸನದ ಅಕ್ಷರಗಳನ್ನು ಕೊರೆಯುವ 'ಶಿಲ್ಪಿಕಾರ'ನ ಕೆಲಸವನ್ನು ಮಾಡಿದವನಲ್ಲ ಎಂಬುದು ಸ್ಪಷ್ಟ.

ಅದಲ್ಲದೆ, ಇದನ್ನು ಬರೆದವನು 'ಚಪಡ' ಎಂಬ ಹೆಸರಿನವನೋ (ಅಥವಾ ರೈಸ್ ಅವರು ಒಂದೆಡೆ ಓದಿರುವ ಹಾಗೆ) 'ಪದ' ಎಂಬ ಹೆಸರಿನವನೋ– ಇದು ಕೂಡಾ ಚರ್ಚಿತ ವಿಷಯವೇ. ಅದರ ಪ್ರಸ್ತಾಪ ಈಗ ಬೇಕೆನಿಸುವುದಿಲ್ಲ.

ಲಿಪಿಕಾರನ ಹೆಸರು ಎರಡು ಶಾಸನಗಳಲ್ಲಿ ಮಾತ್ರ ಇದೆಯೆ?: ಬ್ರಹ್ಮಗಿರಿ ಮತ್ತು ಸಿದ್ಧಾಪುರಗಳ ಈ ಎರಡು ಶಾಸನಗಳನ್ನು "ಕೊರೆದವನು ಗಾಂಧಾರ ಪ್ರದೇಶದ ಖರೋಷ್ಠೀ ಮಾತೃಭಾಷೆಯ, 'ಚಪಡ'ನೆಂಬ ಲಿಪಿಕಾರ. ಇವನೇ ಕಂಡರಿಸಿದ ಜಟ್ಟಿಂಗರಾಮೇಶ್ವರದ ಇನ್ನೊಂದು ಕಿರುಶಾಸನದಲ್ಲಿ ಈ ವಾಕ್ಯವಿಲ್ಲ, ಈ ಶಾಸನದಲ್ಲಿ ಈ ವಾಕ್ಯ ಅಳಿಸಿಹೋಗಿರಲು ಸಾಧ್ಯ....." ಎಂದು ಮುಂತಾಗಿ ಶೆಟ್ಟರ್ ಬರೆದಿದ್ದಾರೆ. ಈ ಹೇಳಿಕೆ ವಸ್ತುಸ್ಥಿತಿಗೆ ವಿರುದ್ಧವಾಗಿದೆ. ಜಟ್ಟಿಂಗರಾಮೇಶ್ವರದ ಶಾಸನದಲ್ಲಿ ಆ ವಾಕ್ಯವಿಲ್ಲ ಎನ್ನುವ ಅವರು ಆ ಶಾಸನವನ್ನು ಕಂಡರಿಸಿದ್ದು ಅವನೇ ಎಂದು ಹೇಗೆ ಹೇಳುತ್ತಾರೆ? 'ಚಪಡೇನ ಲಿಖಿತಂ ಲಿಪಿಕರೇಣ' ಎಂಬ ಮಾತು ಬ್ರಹ್ಮಗಿರಿಯ (ಮೊಳಕಾಲ್ಮುರು 21 ನೇ) ಶಾಸನದಲ್ಲಿ ಬಂದಂತೆ ಇತರ ಎರಡು ಶಾಸನಗಳಲ್ಲೂ ಇದೆ.[2] ಆದರೆ ಬ್ರಹ್ಮಗಿರಿ ಶಾಸನದಲ್ಲಿ ಆ ಅಕ್ಷರಗಳು ಪೂರ್ಣ ಉಳಿದಿದ್ದಂತೆ, ಉಳಿದೆರಡು ಶಾಸನಗಳಲ್ಲಿ ಹಾಗೆ ಪೂರ್ಣ ಉಳಿದಿಲ್ಲ; ಬಹುಪಾಲು ಅಕ್ಷರಗಳು ನಷ್ಟವಾಗಿವೆ. ಇದನ್ನು ಬಿ.ಎಲ್.ರೈಸ್ ಅವರ **ಚಿತ್ರದುರ್ಗ ಜಿಲ್ಲೆಯ ಶಾಸನಗಳ (ಎಪಿಗ್ರಾಫಿಯ ಕರ್ನಾಟಿಕ 11ನೇ)** ಸಂಪುಟದಲ್ಲಿ, ಮೊಳಕಾಲ್ಮೂರು ತಾಲ್ಲೂಕಿನ 14ನೇ ಶಾಸನದ ಕೊನೆಯಲ್ಲಿ ". . . ಕಟವಿಯೇ ಚ ಪ. . . . ಣ" ಎಂದೂ ಮತ್ತು 34ನೇ ಶಾಸನದ ಅಂತ್ಯದಲ್ಲಿ ". . . ಕತವಿಯೇ . ಪಡೇನ ಲಿ . ಕರೇಣ" ಎಂದೂ ಪಾಠವಿರುವಲ್ಲಿ, ಅನುಕ್ರಮವಾಗಿ ಆ ಎರಡೂ ಶಾಸನಗಳ ಅಡಿಟಿಪ್ಪಣಿಯಲ್ಲಿ ರೈಸ್ ಅವರು "ಆ ಪಂಕ್ತಿ ಖರೋಷ್ಠಿ ಲಿಪಿಯಲ್ಲಿ ಬರೆದಿದೆ" ಎಂದು ಎರಡು ಕಡೆಯಲ್ಲೂ ಸ್ಪಷ್ಟವಾಗಿ ಹೇಳಿದ್ದಾರೆ. ಇದರಿಂದ ಬ್ರಹ್ಮಗಿರಿಯ ಶಾಸನದಲ್ಲಿರುವ ರೀತಿಯ ಒಕ್ಕಣೆಯೇ ಉಳಿದ ಎರಡರಲ್ಲೂ ಇರುವುದು ಸ್ಪಷ್ಟವಾಗಿದೆ. ಆದ್ದರಿಂದ ಶೆಟ್ಟರ್ ಊಹೆ ಮಾಡಿ ಹೇಳುವ ಮಾತು– ಒಂದು 'ಶಾಸನದಲ್ಲಿ ಈ ವಾಕ್ಯ ಅಳಿಸಿ ಹೋಗಿರಲು ಸಾಧ್ಯ' ಎಂಬುದು– ಅಸಂಗತವೆಂದು ತಂತಾನೆ ಸ್ಪಷ್ಟವಾಗುತ್ತದೆ. ಅದು ಮೂರೂ ಶಾಸನಗಳಲ್ಲೂ ಕೆತ್ತಲ್ಪಟ್ಟಿತ್ತು ಎಂಬುದನ್ನು ಅವರು ಸರಿಯಾಗಿ ಗಮನಿಸಿಲ್ಲ ಎನ್ನುವುದಕ್ಕೆ ಸಾಕ್ಷಿಯಾಗಿದೆ. ಇದರ ಮೇಲೆ ಅವರು "ಅವಸರದಲ್ಲಿ ಮೊತ್ತಮೊದಲ ಬಾರಿಗೆ ಶಾಸನ ಕೊರೆಯಲಾರಂಭಿಸಿದ ಲಿಪಿಕಾರ ಯಾವುದೋ ಆತಂಕಕ್ಕೊಳಗಾಗಿ ಶಾಸನ ಪಾಠವನ್ನು ತಪ್ಪಾಗಿ ಕೆತ್ತಿರಬಹುದು" ಎಂದು ಶೆಟ್ಟರ್ ಅವರು ಊಹೆಯ ಕುದುರೆಯನ್ನು ಮತ್ತೂ ಮುಂದಕ್ಕೆ ಓಡಿಸುತ್ತಾರೆ. ಅಂದರೆ ಅದು ಕೂಡಾ ಅವರು ಅಂದಾಜಿನಿಂದ ಹೇಳಿರುವ ಹೇಳಿಕೆಯೇ. ಸಂಶೋಧನೆಗೆ ಸಂಬಂಧಿಸಿದ ಬರವಣಿಗೆಯಲ್ಲಿ ಇಂಥ ಅಂದಾಜಿನ ಹೇಳಿಕೆ ಜವಾಬ್ದಾರಿಯ ಹೇಳಿಕೆ ಎನಿಸುವುದಿಲ್ಲ.

ಪುಸ್ತಕ 37–38 'ಇಸಿಲ' ಕನ್ನಡ ಪದ ಅಲ್ಲ. ಅದು ಕನ್ನಡ 'ಎಸಿಲ್'ನ ಪ್ರಾಕೃತ ರೂಪ

ಶೆಟ್ಟರ್ ಅವರ ಲೇಖನದ ಶೀರ್ಷಿಕೆ : ಲೇಖಕರು ಲೇಖನಕ್ಕೆ ' 'ಇಸಿಲ' ಕನ್ನಡದ ಮೊದಲ ಪದವಲ್ಲ' ಎಂದು ಶೀರ್ಷಿಕೆ ಕೊಟ್ಟಿದ್ದಾರೆ. ಶೀರ್ಷಿಕೆ ನೋಡಿದಾಗ, ನಮಗೆ ಮೊದಲಿಗೆ ಅನ್ನಿಸುವುದು– 'ಇಸಿಲ' ಕನ್ನಡದ ಮೊದಲ ಪದವಲ್ಲ; ಮೊದಲ ಪದ ಬೇರೆ ಯಾವುದೋ ಇದೆ; ಅದು ಶೆಟ್ಟರ್ ಅವರಿಗೆ ಕಂಡಿದೆ; ಅವರು ಅದನ್ನು ಹೇಳಹೊರಟಿದ್ದಾರೆ– ಎಂದು. ಅವರ ಲೇಖನ ಓದಿದ ಮೇಲೆ, ಅದು ಕನ್ನಡದ ಮೊದಲ ಪದವಾಗುವುದಿರಲಿ, ಕನ್ನಡದ ಪದವೇ ಅಲ್ಲ; ಪ್ರಾಕೃತದ ಪದ ಎಂದಷ್ಟೆ ಅವರು ಹೇಳುತ್ತಿದ್ದಾರೆ ಅನ್ನಿಸುತ್ತದೆ. ಶೀರ್ಷಿಕೆ ಇಷ್ಟೊಂದು ಗೊಂದಲದ ಅನಿಸಿಕೆಗಳನ್ನು ಹುಟ್ಟಿಸುವುದು ಅಪೇಕ್ಷಣೀಯವಲ್ಲ. 'ಇಸಿಲ' ಕನ್ನಡದ ಪದ ಅಲ್ಲ; ಪ್ರಾಕೃತದ ಪದ; ಅಂದರೆ ಎಸಿಲ್ ಎಂಬ ಕನ್ನಡ ಪದದ ಪ್ರಾಕೃತ ರೂಪ – ಈ ಸಂಗತಿಯನ್ನು ಬಹುಹಿಂದೆಯೇ ಡಿ. ಎಲ್. ನರಸಿಂಹಾಚಾರ್ ಅವರೇ ಹೇಳಿದ್ದಾರೆ. ಆ ಕುರಿತ ಹಿನ್ನೆಲೆ ಹೀಗಿದೆ :

'ಇಸಿಲ' ಕುರಿತ ಹಿನ್ನೆಲೆ : ಬ್ರಹ್ಮಗಿರಿ ಶಾಸನದಲ್ಲಿ ಬರುವ 'ಇಸಿಲ' ಶಬ್ದವನ್ನು ಮೊತ್ತಮೊದಲು ಚರ್ಚೆಯ ಮುನ್ನೆಲೆಗೆ ತಂದವರು ಕನ್ನಡದ ಹಿರಿಯ ವಿದ್ವಾಂಸರಾಗಿದ್ದ ಡಿ. ಎಲ್. ನರಸಿಂಹಾಚಾರ್ ಅವರು. ದಿ. 07–03–1958 ರಂದು ಡಿ.ಎಲ್.ಎನ್. ಅವರು ಮೈಸೂರಿನ Linguistic Circleನಲ್ಲಿ ಇಂಗ್ಲಿಷಿನಲ್ಲಿ "The Oldest Datable Kannada Word" ಎಂಬ ವಿಷಯದ ಮೇಲೆ ಇಂಗ್ಲಿಷಿನಲ್ಲಿ ಭಾಷಣ ಮಾಡಿದ್ದರು. ಆ ಲೇಖನವನ್ನು ಇಂಗ್ಲಿಷಿನಲ್ಲಿ ಬರಹ ರೂಪಕ್ಕೂ ತಂದಿದ್ದರು. ಆದರೆ ಅವರು ಅದನ್ನು ಪ್ರಕಟಿಸಿರಲಿಲ್ಲ. (ತೀನಂಶ್ರೀ ಅವರು ಬಹುಹಿಂದೆಯೇ ಅದನ್ನು 'ಅಪ್ರಕಟಿತ ಲೇಖನ' ಎಂದು ಕರೆದಿರುವುದನ್ನು ಗಮನಿಸಬೇಕು). ಡಿ.ಎಲ್.ಎನ್. ಅವರು ಪ್ರಕಟಿಸದೆಹೋದ ಅವರ ಭಾಷಣವನ್ನು ಅವರ ಶ್ರದ್ಧಾವಂತ ವಿದ್ಯಾರ್ಥಿಯಾಗಿದ್ದ ಎಂ. ಚಿದಾನಂದಮೂರ್ತಿಯವರು ಭಾಷಣಕಾಲದಲ್ಲೇ ಟಿಪ್ಪಣಿ ಮಾಡಿಕೊಂಡು, ಮುಂದೆ ಅದನ್ನು ಸಂಗ್ರಹಿಸಿ, ಕನ್ನಡದಲ್ಲಿ "ತೇದಿಯುಳ್ಳ ಪ್ರಾಚೀನತಮ ಕನ್ನಡ ಪದ" ಎಂಬ ಶೀರ್ಷಿಕೆಯಲ್ಲಿ, (ಇದು ಡಿ.ಎಲ್.ಎನ್. ಅವರು ಇಂಗ್ಲಿಷಿನಲ್ಲಿ ಕೊಟ್ಟ ಶೀರ್ಷಿಕೆಯ ನೇರ ಭಾಷಾಂತರ ಎನ್ನುವುದು ಸ್ಪಷ್ಟ) **ಸಾಧನೆ** ಸಂಚಿಕೆಯಲ್ಲಿ[3] ಪ್ರಕಟಿಸಿದುದು ಕನ್ನಡಕ್ಕೆ ಸಂಬಂಧಿಸಿದ ಅದ್ಭುತ ಸಂಗತಿಯೊಂದನ್ನು ಉಳಿಸಿದಂತಾಯಿತಲ್ಲದೆ ಆ ಕುರಿತ ಚರ್ಚೆ ಬೆಳೆಯಲು ಕೂಡಾ ಕಾರಣವಾಯಿತು. ಶೆಟ್ಟರ್ ಅವರು ಹೊಸ ಸಂಗತಿಯನ್ನೇನೋ ಹೇಳುವರೆಂಬ ಧಾಟಿಯಲ್ಲಿ ಅದನ್ನೆಲ್ಲ ನೇತ್ಯಾತ್ಮಕ ಧ್ವನಿಯಲ್ಲಿ ಬದಿಗೆ ಸರಿಸಿರುವುದು ಆಶ್ಚರ್ಯಕರವಾಗಿದೆ.

ಡಿಎಲ್‌ಎನ್ ಅವರೇ ಬರೆದಿರುವ ಬರಹದಲ್ಲಿ ಏನು ಹೇಳಿದ್ದಾರೆ, ನೋಡಿ: "ಅಶೋಕನ ಬ್ರಹ್ಮಗಿರಿ ಶಾಸನದ ಮೊದಲ ಸಾಲಿನಲ್ಲಿ ಬರುವ ಆತನ ಮಹಾಮಾತ್ರರು ವಾಸವಾಗಿದ್ದ ಇಸಿಲ ಎಂಬ ಊರು, ಕನ್ನಡದ ಎಸಿಲ್ ಎಂಬ ಶಬ್ದಕ್ಕೆ ತಮಿಳಿನ ಜ್ಞಾತಿಶಬ್ದ 'ಎಯಿಲ್' ಎಂದಿದ್ದು, ಅದರ ಅರ್ಥ ಕೋಟೆ ಅಥವಾ ಕೋಟೆಯಿರುವ ಪಟ್ಟಣ ಎಂದಾಗುತ್ತದೆ. ಎಯಿಲ್ ನಾಡು ಎಂಬ ಶಬ್ದವು ಕೋಲಾರ ಜಿಲ್ಲೆಯ ತಮಿಳು ಶಾಸನಗಳಲ್ಲಿ ಎರಡು ಬಾರಿ ಉಕ್ತವಾಗಿದೆ".[4]

ಈಮೇಲಿನ ಡಿಎಲ್‌ಎನ್ ಅವರ ಬರಹದಿಂದ ಸ್ಪಷ್ಟವಾಗುವ ಸಂಗತಿಯೆಂದರೆ, ಅವರು 'ಇಸಿಲ' ಕನ್ನಡದ ಪದವೆಂದು ಹೇಳಿಲ್ಲ; (ಅದು ಪ್ರಾಕೃತ ಶಾಸನದಲ್ಲಿ ಬಂದಿರುವ

ಶಬ್ದವಾಗಿರುವುದರಿಂದ) ಅದು 'ಎಸಿಲ್' ಎಂಬ ಕನ್ನಡ ಪದದ ಪ್ರಾಕೃತೀಕೃತ ರೂಪ; ಅದಕ್ಕೆ ತಮಿಳಿನ ಜ್ಞಾತಿಶಬ್ದ 'ಎಯಿಲ್'- ಎಂದು ಮಾತ್ರ ಹೇಳಿದಂತಾಗಿದೆ. ಪ್ರಾಕೃತ ಶಬ್ದಕೋಶದಲ್ಲಿ 'ಇಸಿಲ' ಶಬ್ದ ಸಿಕ್ಕುವುದಿಲ್ಲ. ಏಕೆಂದರೆ ಅದು ಮೂಲತಃ ಪ್ರಾಕೃತದ ಶಬ್ದವಲ್ಲ. ಆದರೆ, 'ಇಸಿ' ಎಂಬುದರಿಂದ ಪ್ರಾರಂಭವಾಗುವ ಅನೇಕ ಸಮಾಸಪದಗಳು ಅಲ್ಲಿ ಸಿಕ್ಕುತ್ತವೆ. ಆ 'ಇಸಿ'ಗೆ ಮೂಲ ಸಂಸ್ಕೃತದ 'ಋಷಿ'. ಆದರೆ 'ಇಸಿಲ'ದಲ್ಲಿರುವ 'ಇಸಿ'ಗೂ 'ಋಷಿ'ಗೂ ಸಂಬಂಧವಿಲ್ಲ. ಏಕೆಂದರೆ, 'ಇಸಿಲ'ದಲ್ಲಿರುವ 'ಇಸಿ'ಗೆ 'ಋಷಿ' ಮೂಲ ಅಲ್ಲವೇ ಅಲ್ಲ. ಹಾಗಾಗಿ 'ಇಸಿ' ಇರುವ ಪ್ರಾಕೃತ ಪದಗಳನ್ನು 'ಇಸಿಲ'ದೊಂದಿಗೆ ತಾಳೆನೋಡುವುದು ಸಲ್ಲ. ಅಂದರೆ, 'ಇಸಿ' ಬರುವ ಸಮಾಸಪದಗಳು ಮತ್ತು 'ಇಸಿಲ', ಇವು ಪರಸ್ಪರ ಬೇರೆ ಬೇರೆಯೇ.

'ಇಸಿ'-'ಋಷಿ' ಶಬ್ದ ಸಂಬಂಧ : ಇದಲ್ಲದೆ ಶೆಟ್ಟರ್ ಅವರು 'ಇಸಿಲ' ಮತ್ತಿತರ ಶಬ್ದಗಳಲ್ಲಿರುವ 'ಇಸಿ' ಎಂಬುದು 'ಋಷಿ' ಎಂದು ಸಂಸ್ಕೃತೀಕರಿಸಲ್ಪಟ್ಟಿದೆ ಎಂದು ಹೇಳುತ್ತಾರೆ. ಇದು ತಿರುಗು-ಮುರುಗಾದ ಹೇಳಿಕೆ. 'ಋಷಿ' ಯೇ ಪ್ರಾಕೃತೀಕರಿಸಲ್ಪಟ್ಟು 'ಇಸಿ' ಆಗಿರಬಹುದೇ ಎಂಬ ಬಗ್ಗೆ ಅವರು ಯೋಚಿಸುವುದೇ ಇಲ್ಲ. 'ಋಷಿ'-'ಇಸಿ' ಶಬ್ದಗಳ ಸಂಬಂಧ ಹೊಸ ಸಂಗತಿಯೇನಲ್ಲ. ಬಹು ಹಿಂದೆಯೇ ವಿದ್ವಾಂಸರು 'ಋಷಿಲ' ಎಂಬುದೇ 'ಇಸಿಲ' ಆಗಿರುವ ಸಾಧ್ಯತೆಯ ಬಗ್ಗೆ ಆಲೋಚಿಸಿದ್ದರೆನ್ನುವುದು ಈಗಾಗಲೇ ತಿಳಿದ ವಿಷಯ. (ಚಿ.ಮೂ ಅವರು ದಾಖಲಿಸಿರುವ) ಡಿಎಲ್‌ಎನ್ ಅವರ ಈ ಮಾತುಗಳನ್ನು ನೋಡಿ: "ಕೆಲವರು ಇದು ಸಂಸ್ಕೃತದ 'ಋಷಿ'ಯಿಂದ ಬಂದಿದೆ ಎನ್ನುತ್ತಾರೆ. 'ಋಷಿ'ಯು 'ಇಸಿ' ಆಗುವುದು ಸಾಧ್ಯ. ಇದನ್ನು ಒಪ್ಪುವುದಾದರೆ, 'ಇಸಿಲ'ದ ಮೂಲ 'ಋಷಿಲ' ಆಗಬೇಕಾಗುತ್ತದೆ. ಋಷಿಲ ಎಂದರೆ ಏನು? ಗೊತ್ತಿಲ್ಲ. 'ಇಸಿಲ' ಊರು ಇದ್ದುದು ಇಂಡೋ-ಆರ್ಯನ್ ಭಾಷೆಗಳ ಪ್ರದೇಶದಲ್ಲಲ್ಲ, ಕರ್ನಾಟಕದಲ್ಲಿ. ಅದು ಬಹುತೇಕ ಆರ್ಯೇತರ ಪದ. ಆದ್ದರಿಂದ ಋಷಿಲ=ಇಸಿಲ ಎಂಬ ಸಮೀಕರಣವನ್ನು ತಿರಸ್ಕರಿಸಬಹುದು." ಪ್ರೊ. ಡಿಎಲ್‌ಎನ್ ಅವರು ಬಹು ಹಿಂದೆಯೇ ಹಾಗೆ ಹೇಳಿರುವುದು ಸೂಕ್ತವಾಗಿದೆ. ಆದರೆ ತಮ್ಮ ಪರಿಶೀಲನೆಯ ಹಿನ್ನೆಲೆಯಲ್ಲಿ, ಸ್ಥಳನಾಮವಾದ 'ಇಸಿಲ'ದ ಅರ್ಥ ಏನು? ನಿಷ್ಪತ್ತಿ ಏನು? ಇದಾವುದನ್ನೂ ಶೆಟ್ಟರ್ ಅವರು ತಮ್ಮ ಲೇಖನದಲ್ಲಿ ಹೇಳದೆ ಮುಂದೆ ಸಾಗುತ್ತಾರೆ.

ಶೆಟ್ಟರ್ ಅವರು 'ಇಸಿಲ' ಎಂಬುದು ಕೇವಲ ಸ್ಥಳನಾಮವಲ್ಲ; ಪ್ರಾಕೃತದಲ್ಲಿ ಅದೊಂದು ವ್ಯಕ್ತಿನಾಮವೂ ಹೌದು. ಅಂದರೆ ಅದು ಪುರುಷ ವ್ಯಕ್ತಿನಾಮದಂತೆ ಸ್ತ್ರೀ ವ್ಯಕ್ತಿನಾಮವೂ ಹೌದು ಎಂದು ಕೆಲವು ಶಾಸನೋಕ್ತಿಗಳನ್ನು ಉದಾಹರಿಸಿದ್ದಾರೆ. ಅಲ್ಲಿಗೆ 'ಇಸಿಲ' ಒಂದು ಪ್ರಾಕೃತ ಶಬ್ದ ಎಂದಷ್ಟೇ ಅವರು ಹೇಳಿದಂತಾಯಿತು. ಆದರೆ ಅದರ ಅರ್ಥವೇನೆಂಬುದನ್ನು ಅವರು ಹೇಳುವುದಿಲ್ಲ. ಅವರು ಹೇಳುವ 'ಇಸಿಲ' ಹೋಲುವ ಹೆಸರುಗಳು ಪ್ರಾಕೃತದ ವ್ಯಕ್ತಿನಾಮಗಳೇ ಇರಬಹುದು. ಪ್ರಾಕೃತ ಶಾಸನಗಳಲ್ಲಿ ಅದನ್ನು ಹೋಲುವ ವ್ಯಕ್ತಿನಾಮಗಳಿವೆ ಎಂದಾಕ್ಷಣಕ್ಕೆ ಇದು ಕೂಡಾ ಪ್ರಾಕೃತದ್ದೇ ಶಬ್ದ ಎಂದು ದಿಢೀರನೆ ನಿರ್ಣಯಕ್ಕೆ ಬರಬಹುದೆ? ಅದು ಮೂಲತಃ ಪ್ರಾಕೃತ ಶಬ್ದವಿರದೆ. ದ್ರಾವಿಡಮೂಲದ ಪ್ರಾಕೃತೀಕೃತ ಶಬ್ದವಾಗಿರಲೂ ಬಹುದು ಎಂಬ ಸಾಧ್ಯತೆಯ ಕಡೆ ಅವರು ಗಮನ ಹರಿಸದೇ ಹಾಗೇ ಮುಂದೆ ಸಾಗಿದ್ದಾರೆ.

ತೀನಂಶ್ರೀ ಅವರ ಅಭಿಪ್ರಾಯ ಏನಿತ್ತು? : ಡಿಎಲ್ಎನ್ ಅವರು ಆ ಭಾಷಣ ಮಾಡಿದ ದಿನ ಅಧ್ಯಕ್ಷತೆ ವಹಿಸಿದ್ದವರು ಹಿರಿಯ ವಿದ್ವಾಂಸರಾದ ತೀ. ನಂ. ಶ್ರೀಕಂಠಯ್ಯನವರು. ಡಿಎಲ್ಎನ್ ಅವರ ಹೊಳಹನ್ನು ಕುರಿತು ಅವರು ಹೀಗೆ ಬರೆದಿರುವುದನ್ನು ಗಮನಿಸಿ: "ಇಸಿಲ ಶಬ್ದವನ್ನು ಪ್ರಾಕೃತವೆಂದು ಹೇಳಿ 'ರಿಸಿ' ಎಂಬ ಶಬ್ದದಿಂದ ನಿಷ್ಪನ್ನವಾಗಿದೆಯೆಂದು ಹೇಳುವುದು ರೂಢಿ. ಆದರೆ ಈ ನಿಷ್ಪತ್ತಿಯಲ್ಲಿ ಕೆಲವು ತೊಂದರೆಗಳಿವೆ. ಪ್ರೊ. ಡಿ.ಎಲ್. ನರಸಿಂಹಾಚಾರ್ಯರು (ಖಚಿತವಾದ ಪ್ರಾಚೀನತಮ ಕನ್ನಡ ಶಬ್ದ ಎಂಬ ತಮ್ಮ ಅಪ್ರಕಟಿತ ಲೇಖನದಲ್ಲಿ) ತಮಿಳಿನ ಎಯಿಲ್ ಎಂಬ ಶಬ್ದಕ್ಕೆ ಕೋಟೆ ಎಂಬ ಅರ್ಥವಿದ್ದು ಅದರ ಜ್ಞಾತಿಶಬ್ದವಾದ ಕನ್ನಡದ ಎಸಿಲ್ ಎಂಬ ಶಬ್ದವೇ ಆರ್ಯೀಕರಣಗೊಂಡು 'ಇಸಿಲ' ಎಂಬ ರೂಪ ತಾಳಿದೆ ಎಂದು ಪ್ರತಿಪಾದಿಸಿದ್ದಾರೆ. ಪ್ರೊ. ಡಿ.ಎಲ್. ನರಸಿಂಹಾಚಾರ್ಯರ ವಿದ್ವತ್ಪೂರ್ಣವಾದ ಊಹೆ ಸರಿಯಾಗಿದ್ದ ಪಕ್ಷದಲ್ಲಿ (ಇದನ್ನು ಅಲ್ಲಗಳೆಯುವ ಬೇರಾವುದಾದರೂ ಸಮರ್ಥ ಪ್ರತಿಪಾದನೆಗಳಿರುವುದು ಈ ಲೇಖಕನಿಗೆ ತಿಳಿಯದು) ಎಸಿಲ್ ಎನ್ನುವುದು ವಿಶ್ವಾಸಾರ್ಹವಾದ ಮೊದಲ ಕನ್ನಡ ಪದಗಳಲ್ಲಿ ಒಂದೆಂದು ಹೇಳಬಹುದು" ಇಷ್ಟು ಸ್ಪಷ್ಟವಾಗಿರುವ ಅವರ ಬರಹದ ಬಗ್ಗೆ ಮತ್ತೇನೂ ಹೇಳಬೇಕಾದ ಅಗತ್ಯವಿಲ್ಲ.

ಶೆಟ್ಟರ್ ಅವರು ಲೇಖನದ ಕೊನೆಯಲ್ಲಿ ಪ್ರಾಕೃತದವೆಂದು ಹೆಸರಿಸಿರುವ ಕೋಟೂರ, ನೇಗೂರು, ಹಿರಿಯೂರು, ವರೂರು, ಕುಡೂರು, ಕುರವೂರು- ಎಂಬುವನ್ನು ನೋಡಿದರೆ, ಅವು ನಿಶ್ಚಯವಾಗಿ ಪ್ರಾಕೃತ ಶಬ್ದಗಳಲ್ಲ ಎನ್ನುವುದು ಎದ್ದು ಕಾಣುತ್ತದೆ. ಏಕೆಂದರೆ, 'ಊರು' ಎಂಬುದು ಸ್ಥಳಾರ್ಥದ ದ್ರಾವಿಡ ಶಬ್ದ ಎನ್ನುವುದು ಸ್ಪಷ್ಟವಿರುವುದರಿಂದ ಅವೆಲ್ಲವೂ ದ್ರಾವಿಡಮೂಲದ- ಅರ್ಥಾತ್ ಕನ್ನಡದವೇ ಆದ- ಸ್ಥಳನಾಮ ಶಬ್ದಗಳೆಂದೇ ಕಾಣುತ್ತದೆ. ಇವಲ್ಲದೆ ಅವರು ಉದಾಹರಿಸಿರುವ ಇನ್ನೂ ಕೆಲವು ಸ್ಥಳನಾಮಗಳೂ ಕೂಡಾ ದ್ರಾವಿಡಮೂಲದವಾಗಿರುವ ಸಾಧ್ಯತೆ ಇದೆ. ಅವುಗಳ ಬಗ್ಗೆಯೂ ಸೂಕ್ತ ಪರಿಶೀಲನೆಯಾಗಬೇಕಲ್ಲವೆ? ಒಟ್ಟಿನಲ್ಲಿ ಅಂಥ ಪರಿಶೀಲನೆಯ ಪರೀಕ್ಷೆಯಲ್ಲಿ ತೇರ್ಗಡೆಯಾಗದೆ 'ಇಸಿಲ'ದ ಬಗ್ಗೆ ಅವರು ಹೇಳುವ ವಿವರಣೆ ಅಂಗೀಕಾರಾರ್ಹ ಎನ್ನಿಸುವುದಿಲ್ಲ.

೩. ಶೆಟ್ಟರ್ ಅವರು ಮಾಡಿರುವ ವಿಷಯಾಂತರ : ಶೆಟ್ಟರ್ ಅವರು 'ಕೊಪ್ಪಳ' ಹೆಸರಿನ ಪೂರ್ವದ ರೂಪವಾದ 'ಕೂಪಣ' ಎಂಬುದರತ್ತ, ಹಾಗೆಯೇ ತೆಲುಗಿನ ಅತ್ಯಂತ ಪ್ರಾಚೀನ ಪದವೆನ್ನುವ 'ನಾಗಬು' ಎಂಬುದರತ್ತ ವಿಷಯಾಂತರ ಮಾಡಿ ಲೇಖನವನ್ನು ಲಂಬಿಸುತ್ತಾರೆ. ಶೀರ್ಷಿಕೆಯ ವಿಷಯಕ್ಕೆ ನೇರವಾಗಿ ಸಂಬಂಧಪಡದ ಆ ಅಂಶಗಳು ಗೊಂದಲ ಗೋಜಲುಗಳಿಗೆ ದಾರಿಮಾಡಿಕೊಡುತ್ತವೆ. 'ಇಸಿಲ' ಕುರಿತ ಚರ್ಚೆಯ ಸಂದರ್ಭದಲ್ಲಿ ಕೂಪಣ, ನಾಗಬು ಈ ಪದಗಳ ಪ್ರಸ್ತಾಪ ಅತ್ಯಗತ್ಯ ಎನಿಸುವುದಿಲ್ಲ; ಅವುಗಳ ಪ್ರಸ್ತಾಪ ಪೂರಕವೂ ಅಲ್ಲ (ಚಿತ್ರದುರ್ಗದ ಬಳಿಯ ಚಂದ್ರವಳ್ಳಿ ಶಾಸನದಲ್ಲಿ 'ಕುಪಣ' ಎಂಬ ರೂಪವೂ ದೊರೆಯುತ್ತದೆ, ಇರಲಿ).

"ಪ್ರಾಕೃತ ಶಾಸನಗಳ ಒಂದು ದೊಡ್ಡ ಭಂಡಾರವೇ ನಮ್ಮ ಮುಂದಿದೆ" ಎಂದು ಹೇಳುತ್ತ ಕೆಲವು ಸ್ಥಳನಾಮಗಳನ್ನು ಹೆಸರಿಸಿ ಅವುಗಳೊಡನೆ ಅವರು ಚಂದ್ರವಳ್ಳಿ

ಶಾಸನದಲ್ಲಿದ್ದಂತೆ ತಿಳಿಯಲಾದ 'ಪುನಾಟ'ವನ್ನೂ ಸೇರಿಸಿ "ಪ್ರಾಕೃತ ಭಂಡಾರ ಎಷ್ಟು ದೊಡ್ಡದೆಂಬುದು ಮನದಟ್ಟಾಗುವುದು" ಎಂದು ಉದ್ಗರಿಸಿದ್ದಾರೆ. ಇಲ್ಲಿ ಒಂದು ಮಾತನ್ನು ಅನಿವಾರ್ಯವಾಗಿ ಹೇಳಬೇಕಾಗಿದೆ. ಚಂದ್ರವಳ್ಳಿಯ ಶಾಸನ (1929ರಲ್ಲಿ) ಅದು ದೊರೆತ ಪ್ರಾರಂಭದಿಂದ ಪ್ರಾಕೃತ ಭಾಷೆಯದೆಂದು (ಎಂ.ಎಚ್. ಕೃಷ್ಣ ಅವರಿಂದ ಹಿಡಿದು ಈಚಿನವರ ವರೆಗೆ) ಭಾವಿಸಲಾಗಿತ್ತಾದರೂ, ಈಚೆಗೆ ಮೂರು ದಶಕಗಳ ಹಿಂದೆ (1984ರಲ್ಲಿ) ಪ್ರಸ್ತುತ ಲೇಖಕ ಕೈಕೊಂಡ ಮರುಪರಿಶೀಲನೆಯಿಂದ ಅದರ ಭಾಷೆ ಪ್ರಾಕೃತವಲ್ಲ, ಸಂಸ್ಕೃತ ಎಂಬುದು ತಿಳಿದುಬಂದಿತಲ್ಲದೆ, ಹಿಂದೆ ತಿಳಿಯಲಾಗಿದ್ದಂತೆ ಅದು ಮಯೂರವರ್ಮನ ಯಾವ ಜಯಗಳನ್ನೂ ಹೇಳುವುದಿಲ್ಲ, ಕೇವಲ (ಚಂದ್ರವಳ್ಳಿ) ಕೆರೆಯನ್ನು ಅವನು ಜೀರ್ಣೋದ್ಧಾರ ಮಾಡಿದ್ದನ್ನು ಮತ್ತು ಇಲ್ಲಿ ವನವಾಸದ ನೆಲೆಯೊಂದನ್ನು ಮಾಡಿಕೊಂಡಿದ್ದನ್ನು ಮಾತ್ರ ಹೇಳುತ್ತದೆಂದು ತಿಳಿದುಬಂದಿದೆ. ಹಿಂದೆ ಈ ಶಾಸನದಲ್ಲಿ, ತ್ರಿಕೂಟ, ಆಭೀರ, ಪಲ್ಲವ, ಪಾರಿಯಾತ್ರಿಕ, ಶಕಸ್ಥಾನ, ಸೇಂದ್ರಕ, ಮೌಖರಿ ಎನ್ನುವ ರಾಜ್ಯಗಳ ಜೊತೆಗೆ ಪುನ್ನಾಟವೂ ಇರುವುದಾಗಿ ಭಾವಿಸಲಾಗಿತ್ತು. ಆದರೆ ಆ ಶಾಸನದಲ್ಲಿ ಅಷ್ಟೆಲ್ಲ ರಾಜ್ಯಗಳ ಹೆಸರು ಇದ್ದಂತೆ ಭಾವಿತವಾದದ್ದು ಕಲ್ಲಿನ ನೈಸರ್ಗಿಕ ತಗ್ಗುಗೆರೆಗಳು ಹಾಗು ಕಚ್ಚುಗೆರೆಗಳಿಂದಾದ ಅಕ್ಷರಭ್ರಮೆಯ ಒಂದು ಆಕಸ್ಮಿಕವೇ ಹೊರತು ನಿಜವಲ್ಲ. ಹೀಗಾಗಿ ಪ್ರಾಕೃತವೇ ಅಲ್ಲದ, ಆ ಶಾಸನದಲ್ಲೇ ಇಲ್ಲದ 'ಪುನಾಟ' ಶಬ್ದವನ್ನು ಪ್ರಾಕೃತ ಭಾಷೆಯ ಶಬ್ದವೆಂದು ಹೇಳುವುದು ಹೇಗೆ ಸರಿ? ಚಂದ್ರವಳ್ಳಿ ಶಾಸನದ ನನ್ನ ಪುನರ್ಪರಿಶೀಲನೆಯ ಬಗ್ಗೆ ಶೆಟ್ಟರ್ ಅವರು ಅರಿಯದವರೇನಲ್ಲ.[6] ಆದರೂ ಅವರು ಈಗ ಹೀಗೇಕೆ ಬರೆದರೆಂದು ಆಶ್ಚರ್ಯವಾಗುತ್ತದೆ.

ಚಂದ್ರವಳ್ಳಿ ಶಾಸನದ ವಿಷಯ ಹಾಗಿರಲಿ, ಬೇರೆಯ ಶಾಸನಗಳಲ್ಲಿ ಸಿಗುವ 'ಪುನ್ನಾಟ' 'ಪುನಾಟ' ಮುಂತಾದುವಾದರೂ ಪ್ರಾಕೃತ ಪದಗಳೇ ಎಂದು ನೋಡಿದರೆ, ಅವು ಕೂಡಾ 'ಪುನ್ನಾಡು' ಎಂಬ ದ್ರಾವಿಡ ಶಬ್ದದ ಬೇರೆ ಬೇರೆ ರೂಪಗಳೇ ಆಗಿವೆ. ಡಿ.ಎಲ್. ನರಸಿಂಹಾಚಾರ್ ಇದನ್ನು ಕುರಿತು ಬರೆದಿರುವುದನ್ನು ಇಲ್ಲಿ ಉಲ್ಲೇಖಿಸುವುದು ಉಚಿತವೆನಿಸುತ್ತದೆ: "ಈಗಿನ ಹೆಗ್ಗಡೆದೇವನಕೋಟೆಗೆ ಆಗ ಪುನ್ನಾಟ ಎಂದು ಹೆಸರಾಗಿತ್ತು. ಇದನ್ನು ಪುನಲ ನಾಟ (ನದಿಗಳ ನಾಡು) ಎಂದು ಬಿಡಿಸಬಹುದು. ಕ್ರಿ.ಶ. ಆರನೆಯ ಶತಮಾನದ ತಮಿಳು ಕೃತಿ 'ಕಳಾವಳಿ' ಎಂಬ ಕಾವ್ಯದಲ್ಲಿ ಚೋಳ ಚೆಂಗಣ್ಣಾನ್ ಎಂಬುವನು ಪುನಲ್‌ನಾಡಿನ ದೊರೆ ಎಂದು ಹೇಳಲಾಗಿದೆ (IA XIII, ಪು. 258-265)"[7]. ಹೀಗೆ ಇಂಥ ಸಂಗತಿಯನ್ನು ಖಚಿತಮಾಡಿಕೊಳ್ಳದೆ, ಅಂಥ ಹೇಳಿಕೆ ಕೊಡುವುದು ಅವಸರದ, ಅಷ್ಟೇ ಅಲ್ಲ, ಅನಭಿಜ್ಞವಾದ ಹೇಳಿಕೆ ಎನಿಸುವುದಿಲ್ಲವೆ?.

'ಮಟ್ಟಪಟ್ಟಿ' ಹೆಸರು ಸರಿಯೆ? : 'ಪುನ್ನಾಟ'ದ ರೀತಿಯಲ್ಲೇ ಶೆಟ್ಟರ್ ಪ್ರಾಕೃತ ಭಾಷೆಯದೆಂದು ಪ್ರಸ್ತಾಪಿಸಿರುವ ಇನ್ನೊಂದು ಸ್ಥಳನಾಮ 'ಮಟ್ಟಪಟ್ಟಿ'. ಇದು ವಾಸ್ತವವಾಗಿ 'ಮಳಪಳಿ'. ಅದರ ಈಗಿನ ರೂಪ 'ಮಳವಳ್ಳಿ'. ಈ ಶಾಸನ ರಚಿಸಿದ ಕಾಲದಲ್ಲಿ, 'ಳ' ಅಕ್ಷರವು 'ಟ' ಅಕ್ಷರದ ಮೇಲೆ 'ಟ' ಇರುವಂತೆ ಅಥವಾ 'ಟ'ಕ್ಕೆ 'ಟ' ಒತ್ತು ಇರುವಂತೆ ಭ್ರಮೆಯಾಗುವ ಅಕ್ಷರವಾಗಿತ್ತಾದ್ದರಿಂದ, ಮೊದಲಿಗೆ ಈ ಶಾಸನ ಓದಿದ ಶಾಸನ ವಿದ್ವಾಂಸರು ಅದನ್ನು 'ಮಳಪಳಿ' ಎಂದು ಓದುವ ಬದಲು 'ಮಟ್ಟಪಟ್ಟಿ' ಎಂದು ಓದಿದ್ದರು. ಆಮೇಲೆ ಅದು

ಪುಸ್ತಕ 37-38 'ಇಸಿಲ' ಕನ್ನಡ ಪದ ಅಲ್ಲ. ಅದು ಕನ್ನಡ 'ಎಸಿಲ್'ನ ಪ್ರಾಕೃತ ರೂಪ

'ಮಟ್ಟಪಟ್ಟಿ' ಅಲ್ಲ, 'ಮಳಪಳಿ' ಎಂಬುದು ತಿಳಿಯಲು ಹಲವು ದಶಕಗಳೇ ಬೇಕಾಯಿತು. ಈ ಸಂಗತಿಯನ್ನು ಶೆಟ್ಟರ್ ಗಮನಿಸಿದ್ದಿದ್ದರೆ, ಬಹುಶಃ 'ಮಟ್ಟಪಟ್ಟಿ' ಎನ್ನುವುದನ್ನು ಪ್ರಾಕೃತ ಪದಗಳ ಪಟ್ಟಿಗೆ ಸೇರಿಸುತ್ತಿರಲಿಲ್ಲ. ಆದ್ದರಿಂದ ಆ ಸ್ಥಳನಾಮ ಅವರು ತಿಳಿದಿರುವಂತೆ ಪ್ರಾಕೃತ ಶಬ್ದವಲ್ಲವಾದ್ದರಿಂದ ಅದು ಪ್ರಾಕೃತ ಭಂಡಾರಕ್ಕೆ ಹೇಗೆ ಉದಾಹರಣೆಯಾದೀತು?

ತಗರ್ತಿ ಶಾಸನ ಕುರಿತು ಶೆಟ್ಟರ್ ಅವರ ಹೇಳಿಕೆ : ಇಲ್ಲಿ ಮತ್ತೊಂದು ವಿಚಾರ: ಶೆಟ್ಟರ್ ಅವರು ಕೆಲವುಸಲ ಹೀಗೆ sensational ಅಥವಾ ಭಾವೋದ್ರೇಕದ ಹೇಳಿಕೆ ನೀಡಿರುವುದು ಕಂಡುಬರುತ್ತದೆ. ಅದು ಅವರ ಜಾಯಮಾನವಾಗಿದ್ದರೆ ಅದಕ್ಕೆ ಅವರೇ ಹೊಣೆ. ಏಕೆಂದರೆ, ಅವರೇ ಹಿಂದೊಮ್ಮೆ (2013ರಲ್ಲಿ) "ಹಲ್ಮಿಡಿ ಶಾಸನ ಕನ್ನಡದ ಮೊದಲ ಶಾಸನವಲ್ಲ; ಗಂಗರ ಕಾಲದ ತಗರ್ತಿ ಅಗ್ರಹಾರದ (ಚಿತ್ರದುರ್ಗ ಜಿಲ್ಲೆ) ಶಾಸನ ಕನ್ನಡದ ಮೊದಲ ಶಾಸನವಾಗಿದೆ" ಎಂಬ ಹೇಳಿಕೆ ನೀಡಿದ್ದರು. ಅವರ ಹೇಳಿಕೆ ಅನೇಕ ಪತ್ರಿಕೆಗಳಲ್ಲಿ ಬಂದಿತ್ತು. ಆಶ್ಚರ್ಯವೆಂದರೆ ಅವರು ತಗರ್ತಿ ಎಂದು ಹೇಳುವ ಹೆಸರಿನ ಊರು ಚಿತ್ರದುರ್ಗ ಜಿಲ್ಲೆಯಲ್ಲಿ ಇಲ್ಲವೇ ಇಲ್ಲ. ಅದಕ್ಕಿಂತ ಹೆಚ್ಚಾಗಿ, ಅದು ಕನ್ನಡ ಮತ್ತು ನಾಗರೀ ಲಿಪಿಗಳ ಹಾಗೂ ಕನ್ನಡ ಮತ್ತು ಸಂಸ್ಕೃತ ಭಾಷೆಗಳ ವಿಚಿತ್ರ ಮಿಶ್ರಣವಿರುವ ತಾಮ್ರಶಾಸನ. ಯಾವ ರೀತಿಯಲ್ಲೂ ಅದನ್ನು ಶಿಲಾಶಾಸನವಾದ ಹಲ್ಮಿಡಿ ಶಾಸನಕ್ಕೆ ಹೋಲಿಸುವಂತಿಲ್ಲ. ಅಲ್ಲದೆ ಅದು ನೈಜ ಶಾಸನ ಕೂಡಾ ಅಲ್ಲ; ಹಲ್ಮಿಡಿ ಶಾಸನದ ತರುವಾಯ ಕೆಲವು ಶತಮಾನಾಂತರದಲ್ಲಿ, ಸೃಷ್ಟಿಸಲಾದ ಕೃತಕ ಶಾಸನ ಎಂಬುದನ್ನು ಪ್ರಸ್ತುತ ಲೇಖಕ ಆಗಲೇ ಸಾಧಾರವಾಗಿ (**ವಿಜಯವಾಣಿ ಮತ್ತು ವಿಜಯಕರ್ನಾಟಕ**) ಪತ್ರಿಕೆಗಳಲ್ಲಿ ಬರೆದದ್ದಲ್ಲದೆ, ಶೆಟ್ಟರ್ ಅವರಿಗೆ ಬರಹದ ಕಟಿಂಗ್‌ಗಳನ್ನು ಸಹ ಕಳಿಸಿಕೊಟ್ಟಿದ್ದುಂಟು.

ಅವರು ಅದನ್ನು ಗಣನೆಗೆ ತೆಗೆದುಕೊಳ್ಳದೆ, 2014ರ ಮೇ-ಜೂನ್ ತಿಂಗಳ **ಸಂಕ್ರಮಣ**ದಲ್ಲಿ ಅವರ ಲೇಖನದಲ್ಲಿ, ಹಾಗೇ **ಕನ್ನಡ ಲಿಪಿ, ಲಿಪಿಕಾರ ಮತ್ತು ಲಿಪಿವ್ಯವಸಾಯ** ಎಂಬ ಅವರ ಗ್ರಂಥದಲ್ಲಿ, ಮತ್ತೆ "ಹಲ್ಮಿಡಿ ಶಾಸನ, ಕನ್ನಡದ ಮೊದಲ ಶಾಸನವಲ್ಲ.... ಗಂಗರ ಕಾಲದ ತಗರ್ತಿ ಅಗ್ರಹಾರ (ಚಿತ್ರದುರ್ಗ ಜಿಲ್ಲೆ) ಶಾಸನ ಕನ್ನಡದ ಮೊದಲ ಶಾಸನವಾಗಿದೆ" ಎಂದು ಪುನರುಚ್ಚರಿಸಿದ್ದರಲ್ಲದೆ "ಹಲ್ಮಿಡಿಯಲ್ಲಿ ಕನ್ನಡ ಪ್ರವೇಶಿಸುವುದಕ್ಕಿಂತ ಮುಂಚೆಯೇ ತಗರ್ತಿ(ಕ್ರಿ.ಶ. 346)ಯಲ್ಲಿ ಕನ್ನಡದ ಶಾಸನವನ್ನು ಬರೆಸಲಾಗಿತ್ತು... ಎಪಿಗ್ರಾಫಿಯ ಕರ್ನಾಟಿಕದ ಸಂಪಾದಕರಾದ ಬಿ.ಎಲ್.ರೈಸ್ ಅವರ ಅಭಿಮತ ಇನ್ನೂ ಇತ್ಯರ್ಥವಾಗದೆ ಶತಮಾನಕ್ಕೂ ಹಿಂದೆ ಎಲ್ಲಿತ್ತೋ ಅಲ್ಲಿಯೇ ನಿಂತಿದೆ" ಎಂಬ ಒಂದು ವಿಚಿತ್ರ ಮಾತನ್ನೂ ಬರೆದಿದ್ದರು. ಪರಮಾಶ್ಚರ್ಯವೆಂದರೆ, ರೈಸ್ ಅವರ ಕಾಲದಲ್ಲಿ ಹಲ್ಮಿಡಿ ಶಾಸನ ಇನ್ನೂ ದೊರೆತೇ ಇರಲಿಲ್ಲ. ಅದು ಎಂ.ಎಚ್. ಕೃಷ್ಣ ಅವರಿಗೆ ದೊರೆತು ಅವರು ಅದನ್ನು ಓದಿ **ಮೈಸೂರು ಪುರಾತತ್ವ ವರದಿ**ಯಲ್ಲಿ ಪ್ರಕಟಿಸಿದ್ದು 1936ರಲ್ಲಿ. ಅಂದಮೇಲೆ ರೈಸ್ ಅವರು ತಾವು ನೋಡಿಯೇ ಇಲ್ಲದ ಹಲ್ಮಿಡಿ ಶಾಸನದ ಬಗ್ಗೆ ಏನು ಅಭಿಮತ ನೀಡಲು ಸಾಧ್ಯ? ರೈಸ್ ಹಾಗೆ ಹೇಳಿಕೆ ಕೊಟ್ಟಿರುವಂತೆ ಶೆಟ್ಟರ್ ಭಾವಿಸಿದ್ದಾದರೂ ಹೇಗೆ?- ಇಂಥ ಅಸಂಗತಗಳನ್ನು ಇವರು ಹೇಗಾದರೂ ಬರೆಯುತ್ತಾರೆ ಎನ್ನುವ ಪ್ರಶ್ನೆ ಮನಸ್ಸಿನಲ್ಲಿ ಹಾಯುತ್ತದೆ. ಇದೇ ವಿಷಯದ ಮೇಲೆ ಕರ್ನಾಟಕ ಇತಿಹಾಸ ಅಕಾದೆಮಿಯ ಸಮ್ಮೇಳನದಲ್ಲಿ ಸಂಪ್ರಬಂಧವೊಂದನ್ನು ಸಹ ಸಾದರಪಡಿಸಿದ್ದೆ.[8] ಅವರು ಹರಿಯಬಿಡುವ

ಮೇಲಿನಂಥ ಹೇಳಿಕೆಗಳ ಬಗೆಗಿನ ಪ್ರತಿಕ್ರಿಯೆಗಳನ್ನು ಗಮನಕ್ಕೆ ತೆಗೆದುಕೊಳ್ಳದೆ ತಮಗೆ ಏನು ಏನು, ಹೇಗೆ ಹೇಗೆ ತೋಚುತ್ತದೋ ಹಾಗೆ ಹಾಗೆ ಅದು ಅಧಿಕೃತವೆಂಬಂತೆ ಬರಹದಲ್ಲಿಡುವುದಕ್ಕೆ ಏನು ಹೇಳಬೇಕೋ ತಿಳಿಯದು. ಅಂಥದೇ ರೀತಿಯ ಅವರ ಈಚಿನ ಹೇಳಿಕೆಯೇ ಈ 'ಇಸಿಲ ಎಂಬುದು ಕನ್ನಡದ ಮೊದಲ ಪದವಲ್ಲ' ಎಂಬುದು.

ಅಶೋಕನ ಶಾಸನಗಳ ಉದ್ದೇಶ ಏನು? : ಇಲ್ಲಿ ಪ್ರಸ್ತಾಪಿಸಬೇಕೆಂದಿರುವ ಮತ್ತೊಂದು ವಿಚಾರವೆಂದರೆ, "ಮೊದಲೆರಡು ಶಾಸನಗಳಲ್ಲಿ 'ಸುವಣ್ಣಗಿರಿ' (ಸುವರ್ಣಗಿರಿ) ಮತ್ತು 'ಇಸಿಲ' ಎಂಬ ಎರಡು ಕೇಂದ್ರಗಳನ್ನು ಉಲ್ಲೇಖಿಸಿ, ಈ ಕೇಂದ್ರಗಳ ಅಧಿಕಾರಿಗಳು ಸೌಹಾರ್ದ ಸಂಪರ್ಕ ಏರ್ಪಡಿಸಿಕೊಳ್ಳಬೇಕೆಂಬ ಆರ್ಯಪುತ್ರನ ಆದೇಶವಿದೆ..." ಎಂದು ಶೆಟ್ಟರ್ ಬರೆದಿದ್ದಾರೆ. ಅದು ಕೂಡಾ ಶಾಸನದ ವಸ್ತುಸ್ಥಿತಿಗೆ ವಿರುದ್ಧವೇ ಇದೆ. ಏಕೆಂದರೆ, ಬ್ರಹ್ಮಗಿರಿ ಶಾಸನದಲ್ಲಿ ಸ್ಪಷ್ಟವಾಗಿ ಕಾಣುವಂತೆ, ತನ್ನ ಸಾಮ್ರಾಜ್ಯದ ಪ್ರಜೆಗಳು ಧರ್ಮ-ನೀತಿ-ಶಾಂತಿ ಮಾರ್ಗದಲ್ಲಿ ನಡೆಯಬೇಕೆಂದು ನಿರ್ದೇಶಿಸಲು ಅಶೋಕನು ತನ್ನ ಪ್ರಾಂತಾಧಿಕಾರಿಗಳಾದ ಮಹಾಮಾತ್ರರಿಗೆ ಸೂಚಿಸಿ, ಈ ಶಾಸನಗಳನ್ನು ಹಾಕಿಸಿದ್ದಾನೆಯೇ ಹೊರತು ಎರಡು ಆಡಳಿತ ಕೇಂದ್ರಗಳ ಅಧಿಕಾರಿಗಳು ಸೌಹಾರ್ದ ಸಂಪರ್ಕ ಏರ್ಪಡಿಸಿಕೊಳ್ಳಬೇಕೆಂದು ನಿರ್ದೇಶಿಸಲು ಸರ್ವಥಾ ಅಲ್ಲ. ಅಲ್ಲದೆ, ಅಶೋಕನ ಆ ನಿರ್ದೇಶನ ಕೇವಲ ಶೆಟ್ಟರ್ ಅವರು ಹೇಳುವ ಎರಡು ಶಾಸನಗಳಲ್ಲಿ ಮಾತ್ರ ಅಲ್ಲ, ಮೇಲೆ ಹೇಳಿದ ಮೂರು ಶಾಸನಗಳಲ್ಲೂ ಇದೆ. ಆದರೆ ಬ್ರಹ್ಮಗಿರಿಯದನ್ನು ಬಿಟ್ಟು ಉಳಿದ ಎರಡು ಶಾಸನಗಳಲ್ಲಿ ಅಕ್ಷರಗಳು ತುಂಬಾ ನಷ್ಟಗೊಂಡಿವೆ, ಅಷ್ಟೆ. ಆದರೂ ಆ ಶಾಸನಗಳ ಪಾಠಗಳಲ್ಲಿ ಈ ಅಂಶವನ್ನು ಸ್ಪಷ್ಟವಾಗಿ ಕಾಣಬಹುದು. ಆದರೆ ಶೆಟ್ಟರ್ ಅವರು 'ಎರಡು ಶಾಸನಗಳಲ್ಲಿ' ಎಂದು ಹೇಳುವುದು ಮಾತ್ರ ಆಶ್ಚರ್ಯಕರವಾಗಿದೆ.

ಒಟ್ಟಿನಲ್ಲಿ ಶೆಟ್ಟರ್ ಅವರು ತಾವು ಹಿಂದೆಂದೋ ಓದಿದ್ದ ಅಥವಾ ಕೇಳಿದ್ದ ಮಾಹಿತಿಯ ನೆನಪುಗಳ ಬಲದಿಂದ ಬರೆಯುತ್ತಾರೆಂದು ಕಾಣುತ್ತದೆ. ಹಾಗಿದ್ದಲ್ಲಿ, ತಮ್ಮ ನೆನಪು ಸರಿಯಿದೆಯೇ ಎಂದು ಪುನಃ ಆಯಾ ಲೇಖನ ಇತ್ಯಾದಿಗಳನ್ನು ನೋಡಿ ಅವರು ಖಚಿತಪಡಿಸಿಕೊಂಡಿದ್ದರೆ ಚೆನ್ನಾಗಿರುತ್ತಿತ್ತು. ಗತೇತಿಹಾಸದ ಕೆಲವು ಸಂಗತಿಗಳನ್ನು ತಮಗೆ ಇಷ್ಟಬಂದಂತೆ, ಕಲ್ಪನೆಯಿಂದ ಅಥವಾ ಅಂದಾಜಿನಿಂದ ಕಲಸುಮೇಲೋಗರ ಮಾಡಿ, ಅದರ ಅರಿವೇ ಬರದೆ ಓದುಗರು ಅವರ ಬರಹವೆಲ್ಲ ಸತ್ಯವೆಂದು ಪೂರ್ಣವಾಗಿ ನಂಬುವಂತೆ ಮಾಡುವ ಶೈಲಿಯಲ್ಲಿ ಮತ್ತು ಒಳ್ಳೆಯ ಭಾಷೆಯಲ್ಲಿ ಬರೆಯುತ್ತಾರೆ- ಎಂಬುದಕ್ಕೆ ಪ್ರಸ್ತುತ ಲೇಖನ ಸಾಕ್ಷಿಯಾಗಿದೆ. ಇಂಥ ಬರಹ ನಮಗೆ ಗತಕಾಲದ ಇತಿಹಾಸದ ಬಗ್ಗೆ ವಿಶ್ವಾಸಾರ್ಹ ಚಿತ್ರವನ್ನು ಕೊಡುತ್ತದೆಯೆ?

II. ಸೀತಾರಾಮ ಜಾಗೀರ್‌ದಾರ್ ಅವರ ಅಭಿಪ್ರಾಯ

'ಇಸಿ-'ಋಷಿ' ಶಬ್ದಸಂಬಂಧ ಏನು? : ಸೀತಾರಾಮ ಜಾಗೀರ್‌ದಾರ್ ಅವರು 'ಇಸಿಲ' ಕುರಿತು ಬರೆಯುತ್ತ, "ಇದು 'ಬುದ್ಧಿಲ' 'ಕಣ್ಣಿಲ' (ಕೃಷ್ಣಲ) ಶಬ್ದಗಳ ಹಾಗೆ 'ಇಸಿಲ'.. ಕಣ್ಣಿಲದಲ್ಲಿಯ 'ಲ' ತೆಗೆದರೆ ಕಣ್ಹಿ/ಕಣ್ಹ (ಕೃಷ್ಣ) ಎಂಬುದು ಉಳಿಯುವಂತೆ 'ಇಸಿಲ'ದಲ್ಲಿನ 'ಲ' ಬೇರ್ಪಡಿಸಿದರೆ ಉಳಿಯುವುದು 'ಇಸಿ' ಎಂಬುದು. ಲುಡರ್ಸ್ ಪಟ್ಟಿಕೆ (Luder's

List)ಯಲ್ಲಿನ ಕೆಳಗಿನ ಶಬ್ದಗಳು 'ಇಸಿ' ಶಬ್ದದ ಮೇಲೆ ಹೊಸಬೆಳಕನ್ನು ಚೆಲ್ಲುವುದನ್ನು ಕಾಣಬಹುದು" ಎನ್ನುತ್ತಾರೆ. ಹೀಗೆ ಹೇಳಿದವರೇ ಕೆಳಗೆ 'ಇಸಿ'ಯಿಂದ ಪ್ರಾರಂಭವಾಗುವ 16 ಶಬ್ದಗಳ ಪಟ್ಟಿಯನ್ನು ಕೊಟ್ಟಿದ್ದಾರೆ. ಅಲ್ಲಿ ಕಾಣುವ ಹೊಸ ಬೆಳಕು ಏನು ಎನ್ನುವುದನ್ನು ಮಾತ್ರ ಅವರು ಹೇಳುವುದಿಲ್ಲ. ಆ ಎಲ್ಲ ಶಬ್ದಗಳಲ್ಲೂ 'ಇಸಿ' ಎಂಬುದು 'ಋಷಿ'ಯ ಸಂಬಂಧ ಹೊಂದಿರುವುದನ್ನು ಕಂಸಗಳಲ್ಲಿ ತೋರಿಸಿದ್ದಾರೆ. "ಹೀಗೆಯೇ ಉದಾಹರಣೆಗಳನ್ನು ಇನ್ನೂ ಬೇಕಾದಷ್ಟು ಕೊಡಬಹುದು" ಎಂದೂ ಬರೆದಿದ್ದಾರೆ. ಹಾಗೆ ನೋಡಿದರೆ 'ಇಸಿ'ಯು 'ಋಷಿ'ಯ ಸಂಬಂಧವಿರುವ ಶಬ್ದ ಎನ್ನುವುದಕ್ಕೆ 16 ಶಬ್ದಗಳಷ್ಟು ಸಂಖ್ಯೆಯ ಉದಾಹರಣೆಗಳು ಬೇಕಾಗಿರಲಿಲ್ಲ. 'ಇಸಿ' ಎಂಬುದು ಸಂಸ್ಕೃತದ 'ಋಷಿ'ಯಿಂದ ಬಂದದ್ದು ಎನ್ನುವುದು ಹೊಸ ಸಂಗತಿಯೂ ಅಲ್ಲ. ಅದನ್ನು ವಿದ್ವಾಂಸರು ಹಿಂದೆಯೇ ಪ್ರಸ್ತಾಪಿಸಿದ್ದಾರೆ. ಸೀ.ಜಾ. ಅವರು ಹೇಳಿರುವಂತೆ ಅವರು ಕೊಟ್ಟಿರುವ 'ಲುಡರ್ಸ್ ಪಟ್ಟಿಕೆಯ ಶಬ್ದಗಳು' 'ಇಸಿ' ಶಬ್ದದ ಮೇಲೆ ಏನೂ ಹೊಸಬೆಳಕನ್ನು ಚೆಲ್ಲುವುದಿಲ್ಲ. 'ಋಷಿ' ಎಂಬುದು 'ಇಸಿ' ಆಗಿದ್ದರೆ, 'ಋಷಿಲ' ಎಂಬುದು 'ಇಸಿಲ' ಎಂದಾಗಬಹುದಾದರೂ ಅದರ ಅರ್ಥ ಏನಾಗುತ್ತದೆ ಎಂಬುದನ್ನು ಹೇಳಬೇಕಲ್ಲವೆ?

'ಇಸಿಲ'ವು ಸಾರನಾಥ ಸ್ಥಳವೆ? : ಮುಂದೆ ಅವರು "'ಇಸಿಲ' ಕನ್ನಡ ಶಬ್ದ ಅಥವಾ ದ್ರಾವಿಡ ಶಬ್ದ ಎಂಬುದಕ್ಕೆ ಅದನ್ನು ಕನ್ನಡ ಎಂದು ಮೊದಲು ಬರೆದಿರುವ ದಿ. ಪ್ರೊ. ಡಿಎಲ್ಎನ್ ಅವರು ಒಂದಾದರೂ ಪ್ರಯೋಗವನ್ನು ಕೊಟ್ಟಿಲ್ಲ. 'ಇಸಿಲ' ಕನ್ನಡ ಎಂಬುದು ಅವರ ಕಲ್ಪನೆ; ಅದಕ್ಕೆ ಆಧಾರವಿಲ್ಲ. ಅದು ಮೊದಲು ಕನ್ನಡ ಶಬ್ದವೇ ಅಲ್ಲ. ಅದು ಪ್ರಾಕೃತ ಶಬ್ದ. 'ಇಸಿಲ' ಎಂದರೆ ಇಸಿಲಪಟ್ಟಣ; ಅದು ವಾರಣಾಸಿ (ಕಾಶಿ) ಬಳಿ ಇರುವ ಸಾರನಾಥ"– ಹೀಗೆ ಸೀ.ಜಾ. ಅವರು ಹೇಳುತ್ತ ಹೋಗುತ್ತಾರೆ. ಅವರ ಈ ಬರವಣಿಗೆ ನೋಡಿದರೆ 'ಇಸಿಲ'ದ ಸಮಸ್ಯೆಯನ್ನು ಇವರು ಎಷ್ಟು ಬೇಗ ಪರಿಹರಿಸಿಬಿಟ್ಟರಲ್ಲ ಎಂದು ಆಶ್ಚರ್ಯವಾಗುತ್ತದೆ. ಆದರೆ ಅವರ ಹೇಳಿಕೆಯಲ್ಲೇ ಎಂಥ ಸಮಸ್ಯೆ ಇದೆ ಮುಂದೆ ನೋಡಿ: ಸಾರನಾಥ ಇರುವುದು ಬಹುದೂರದ ಉತ್ತರಪ್ರದೇಶ ರಾಜ್ಯದಲ್ಲಿ. ಅದಕ್ಕೆ ಪ್ರಾಚೀನ ಕಾಲದಲ್ಲಿ ಮೃಗದಾವ, ಮಿಗದಾಯ, ರಿಷಿಪತ್ತನ, ಇಸಿಪತನ ಮುಂತಾದ ಹೆಸರುಗಳಿದ್ದುದು ತಿಳಿಯುತ್ತದೆ. ಮೃಗದಾವ ಎಂದರೆ 'ಜಿಂಕೆವನ' ಎಂದರ್ಥ. ಇಸಿಪತನ ಎಂಬುದು ಪಾಳಿ ಭಾಷೆಯಲ್ಲಿ ಬಳಸಲಾಗಿರುವ ಹೆಸರು. ಅದರ ಅರ್ಥ ಬುದ್ಧನು ಜನ್ಮತಾಳುವುದನ್ನು ದೇವತೆಗಳು ಪವಿತ್ರಾತ್ಮರಿಗೆ ಪ್ರಕಟಿಸಲಿಕ್ಕಾಗಿ ಮೇಲಿನಿಂದಿಳಿದ ಸ್ಥಳ– ಹೀಗೆಲ್ಲ ವಿವರಣೆಗಳಿವೆ. ನಿಜ. ಇಲ್ಲಿ ಮತ್ತೊಮ್ಮೆ ಹೇಳಬೇಕಾಗಿದೆ: ಇವರು ಹೇಳಿರುವಂತೆ ಡಿಎಲ್ಎನ್ ಅವರು 'ಇಸಿಲ' ಕನ್ನಡ ಪದ ಎಂದು ಹೇಳಿಲ್ಲ. ಅದು ಮೂಲತಃ ಪ್ರಾಕೃತ ಶಬ್ದವಲ್ಲ; ಕನ್ನಡದ 'ಎಸಿಲ್' ಎಂಬ ಪದದಿಂದ ಮಾಡಿಕೊಂಡ ಪ್ರಾಕೃತ ರೂಪ ಅರ್ಥಾತ್ ತದ್ಭವ ರೂಪ. ಅದರ ವಿವರ ಮೇಲೆಯೇ ಬಂದಿರುವುದನ್ನು ಗಮನಿಸಬಹುದು.

ಅಂದರೆ ಸಾರನಾಥಕ್ಕೆ ಇದ್ದ ಪುರಾತನ ಹೆಸರುಗಳಲ್ಲಿ 'ಇಸಿಪತನ' ಎಂಬುದೂ ಒಂದು ಎಂಬುದು ಈ ವಿವರಣೆಯಿಂದ ವ್ಯಕ್ತವಾಗುತ್ತದೆ. ಇಲ್ಲಿ ಸೂಕ್ಷ್ಮವೊಂದನ್ನು ಗಮನಿಸಬೇಕು. ಅಲ್ಲಿ ಪುರಾತನ ಹೆಸರುಗಳಲ್ಲಿ ಒಂದಾಗಿ 'ಇಸಿಪತನ' ಎಂದಿದೆಯೇ ಹೊರತು 'ಇಸಿಲಪತನ' ಎಂದಿಲ್ಲ. ಹಾಗೇ ಬ್ರಹ್ಮಗಿರಿ ಶಾಸನದಲ್ಲಿ 'ಇಸಿಲ' ಎಂದು

ಮಾತ್ರ ಇದೆಯೇ ಹೊರತು 'ಇಸಿಪತನ' ಎಂದಾಗಲಿ 'ಇಸಿಲಪತನ' ಎಂದಾಗಲಿ ಇಲ್ಲ. ಹಾಗಿರುವಾಗ, 'ಇಸಿಲ' ಎನ್ನುವುದು 'ಇಸಿಪತನ' ಎಂದು ಕರೆಯಲಾಗಿರುವ ಸಾರನಾಥವೇ ಎಂದು ಹೇಗೆ ಸಾಬೀತಾಗುತ್ತದೆ? ಒಂದು ವೇಳೆ ಸೀ.ಜಾ. ಅವರು ಹೇಳುವಂತೆ ಇಸಿಲವೆನ್ನುವುದು ಸಾರನಾಥವೇ ಎನ್ನುವುದಾದರೆ, ಏನಾಗುತ್ತದೆ ಎಂಬುದನ್ನು ಸ್ವಲ್ಪ ನೋಡಿ: ಸಾರನಾಥ ಇರುವುದು ಬಹುದೂರದಲ್ಲಿ. ಶಾಸನ ಹೇಳುವ ಪ್ರಕಾರ, ಸುವರ್ಣಗಿರಿಯ ಮಹಾಮಾತ್ರರು ಕುಶಲವನ್ನು ವಿಚಾರಿಸಬೇಕಾದ್ದು, ದೇವಾನಾಂಪ್ರಿಯನ ಸಂದೇಶವನ್ನು ಹೇಳಬೇಕಾದ್ದು 'ಇಸಿಲ'ದ ಮಹಾಮಾತ್ರರಿಗೆ. ಆದ್ದರಿಂದ 'ಇಸಿಲ'ದ ಮಹಾಮಾತ್ರರೆನ್ನುವವರು ಪ್ರಸ್ತುತ ಶಾಸನ ಇರುವ ಸ್ಥಳಕ್ಕೆ ಹತ್ತಿರದ ಸ್ಥಳದವರೇ ಆಗಿರಬೇಕಾಗುತ್ತದೆ; ಬಹುದೂರದಲ್ಲಿರುವ ಸಾರನಾಥದವರಲ್ಲ. ಅದೇನಿದ್ದರೂ ಆ ಮಹಾಮಾತ್ರರು ಇಲ್ಲಿಯೇ ಬಹುಶಃ ಬ್ರಹ್ಮಗಿರಿಯಲ್ಲಿಯೇ ಇರುವ ಮಹಾಮಾತ್ರರಾಗಿರಬೇಕೆನ್ನುವುದು ವಿಹಿತ. ಸೀ.ಜಾ. ಅವರ ಹೇಳಿಕೆ ನೋಡಿದರೆ, ಬಹುದೂರದ ಸಾರನಾಥದ ಮಹಾಮಾತ್ರರಿಗೆ ಮುಟ್ಟಿಸಬೇಕಾದ ಸಂದೇಶವನ್ನು ಬ್ರಹ್ಮಗಿರಿಯ ಬಂಡೆಯ ಮೇಲೆ ಕೊರೆಯಿಸಿದ್ದಾರೆ ಎಂದಾಗುತ್ತದೆ. ಅದು ಹೇಗೆ ಸಾಧ್ಯ? ಆ ಸ್ಥಳ ಸಾರನಾಥವಾಗಿದ್ದರೆ ಶಾಸನವನ್ನು ಅಲ್ಲಿಯೇ ಕೊರೆಸಬೇಕಿತ್ತಲ್ಲವೆ? ಹಾಗೆ ಅಲ್ಲಿಯವರಿಗೆ ತಿಳಿಸಬೇಕಾದ್ದನ್ನು ಇಲ್ಲಿ ಕೊರೆಸಿದ್ದಾರೆಂದರೆ ಅದು ಔಚಿತ್ಯ ಎನಿಸುತ್ತದೆಯೆ?

ಬ್ರಹ್ಮಗಿರಿ ಪರಿಸರದಲ್ಲಿ ಕೋಟೆ ಇರಲಿಲ್ಲವೆ? : ಮುಂದೆ ಸೀ.ಜಾ. ಅವರು ಅಡಿಟಿಪ್ಪಣಿಯಲ್ಲಿ "ಬ್ರಹ್ಮಗಿರಿ, ಸಿದ್ದಾಪುರ ಹಾಗೂ ಜಟಿಂಗರಾಮೇಶ್ವರ ಸಂಕೀರ್ಣದಲ್ಲಿ 'ಕೋಟೆ' ಇದ್ದುದಕ್ಕೆ ಅದರ ಪಳೆಯುಳಿಕೆಯ ಆಧಾರವಿಲ್ಲ. ಮತ್ತೆ ಸಿದ್ಧಾಪುರದಲ್ಲಿನ 'ಸಿದ್ಧ' ಶಬ್ದವು ಇದನ್ನು ಕೋಟೆ ಎಂದು ಸೂಚಿಸದು"– ಎಂದು ಬರೆದಿರುವುದು ದಿಗ್ಭ್ರಮೆಯುಂಟುಮಾಡುತ್ತದೆ. ಇದು ಕ್ಷೇತ್ರಕಾರ್ಯ ಮಾಡದೆ, ಸೂಕ್ತ ಮಾಹಿತಿ ಅರಿಯದೆ, ದುಡುಕಿನಿಂದ ಹೇಳಿದ ಹೇಳಿಕೆಯಾಗಿದೆ. ಈ ಪರಿಸರದಲ್ಲಿ ಅವರು ಪ್ರತ್ಯಕ್ಷ ಓಡಾಡಿ ನೋಡಿದ್ದರೆ ದಪ್ಪ ಗೋಡೆಗಳ ಕೋಟೆಸುತ್ತುಗಳ ಪಳೆಯುಳಿಕೆಗಳು ಈಗಲೂ ಇರುವುದನ್ನು ಅವರು ಕಾಣುತ್ತಿದ್ದರು. ಕೆಸರು ಇಲ್ಲದೆ ದೊಡ್ಡ ಕಲ್ಲು ಗುಂಡುಗಳಿಂದ ಕಟ್ಟಿರುವ ಇಂಥ ಪ್ರಾಚೀನ ಗೋಡೆಗಳಿಗೆ 'ಸೈಕ್ಲೋಪರ ಗೋಡೆ' (Cyclopean Wall) ಎಂದು ಕರೆಯಲಾಗುತ್ತದೆಯಷ್ಟೆ? ಅಂಥ ಗೋಡೆಗಳು ಅಲ್ಲಿವೆ. ಚಿತ್ರದುರ್ಗ ಜಿಲ್ಲೆಯ ಕೋಟೆಗಳ ಬಗ್ಗೆ ಪಿಎಚ್.ಡಿ. ಮಾಡಿರುವ ಎಸ್. ತಿಪ್ಪೇಸ್ವಾಮಿ ಅವರು ಬರೆದಿರುವುದನ್ನು ಇಲ್ಲಿ ನೋಡಿ: "ಬ್ರಹ್ಮಗಿರಿಯಲ್ಲಿ ದಕ್ಷಿಣ ಮತ್ತು ಪೂರ್ವದ ಕಣಿವೆಯ ಬೆಟ್ಟಗಳನ್ನು ಉಪಯೋಗಿಸಿಕೊಂಡು ನಿರ್ಮಿಸಿರುವ ಗಿರಿದುರ್ಗವಿದೆ. ಬ್ರಹ್ಮಗಿರಿ ಕೋಟೆಯು ಜಿಲ್ಲೆಯ ಹಾಗೂ ಕರ್ನಾಟಕದ ಕೋಟೆಗಳಲ್ಲಿಯೇ ಅತ್ಯಂತ ವಿಶಿಷ್ಟವಾದ ಕೋಟೆಯಾಗಿದೆ"[7] ಪ್ರತ್ಯಕ್ಷ ನೋಡದೆ, ಉಚಿತ ಮಾಹಿತಿಯನ್ನೇ ತಿಳಿಯಹೋಗದೆ ಸೀ.ಜಾ. ಅವರು ಅಂಥ ಬೀಸು ಹೇಳಿಕೆ (sweeping statement) ಕೊಟ್ಟಿರೆನ್ನುವುದು ದಿಗ್ಭ್ರಮೆಯುಂಟುಮಾಡುವ ಸಂಗತಿ.

'ಸಿದ್ಧಾಪುರ' ಹೆಸರು ಅಶೋಕನ ಕಾಲದಲ್ಲಿತ್ತೆ? : ಸೀ.ಜಾ. ಅವರು ಮೇಲಿನ ಅಡಿಟಿಪ್ಪಣಿಯ ಅಂತ್ಯದಲ್ಲಿ "ಸಿದ್ಧಾಪುರದಲ್ಲಿನ 'ಸಿದ್ಧ' ಶಬ್ದವು ಇದನ್ನು ಕೋಟೆ ಎಂದು ಸೂಚಿಸದು"– ಎಂದಿದ್ದಾರೆ. ಅದು ಕೂಡಾ ವಿಚಾರಣೀಯವಾಗಿದೆ. ಅಶೋಕನ ಶಾಸನಗಳು ದೊರೆತಿರುವ

ಪುಸ್ತಕ 37–38 'ಇಸಿಲ' ಕನ್ನಡ ಪದ ಅಲ್ಲ. ಅದು ಕನ್ನಡ 'ಎಸಿಲ್'ನ ಪ್ರಾಕೃತ ರೂಪ

ಣ, ಬ್ರಹ್ಮಗಿರಿ, ಸಿದ್ದಾಪುರ ಮತ್ತು ಜಟಂಗರಾಮೇಶ್ವರ– ಈ ಸ್ಥಳಗಳು ಅಶೋಕನ ದಿಂದಲೂ ಅವೇ ಹೆಸರುಗಳನ್ನು ಹೊಂದಿದ್ದಂತೆ ಸಾಮಾನ್ಯವಾಗಿ ಅನ್ನಿಸುತ್ತದೆ. ರೆ, ಈ ಸ್ಥಳನಾಮಗಳು ಅಶೋಕನ ಕಾಲದಿಂದಲೂ ಇರುವ ಹೆಸರುಗಳಲ್ಲ. ಅಶೋಕನ ಕ್ಕೆ ಇವಕ್ಕೆ ಏನೇನು ಹೆಸರುಗಳಿದ್ದವೋ ಈಗ ತಿಳಿಯದು. ಆದರೆ, ಇವುಗಳಲ್ಲಿ ಟಂಗರಾಮೇಶ್ವರವು ಹೊಯ್ಸಳರ ಕಾಲಕ್ಕೆ 'ಬಲ್ಗೋಡಿ–ತೀರ್ಥ' ಎಂಬ ಹೆಸರನ್ನು ದಿದ್ದು ಮುಂದೆ ಇಲ್ಲಿಯ ದೇವರು ವಿಜಯನಗರ ಕಾಲಕ್ಕೆ 'ಜಟೋಗಿ/ಜಟಾಂಗಿ ಮೆಯ ದೇವರು' ಎಂದು ಕರೆಯಲ್ಪಟ್ಟು, ಮುಂದೆ ಆ ದೇವರು ಮತ್ತು ಆ ಸ್ಥಳ ಟಂಗರಾಮೇಶ್ವರ' ಎಂಬ ಹೆಸರನ್ನು ಪಡೆದಿರುವುದು ತಿಳಿದುಬರುತ್ತದೆ. ಅದೇ ರೀತಿ ದು ಕಾಲಕ್ಕೆ 'ಹಾನ್ಯ/ಹಾನ್ಯದಕೋಟೆ' ಎಂದಿದ್ದ ಹೆಸರು ಚಿತ್ರದುರ್ಗದ ಪಾಳೆಯಗಾರ ರೇಮದಕೇರಿನಾಯಕನ ಕಾಲಕ್ಕೆ (1734ರಲ್ಲಿ) 'ಸಿದ್ಧಾಪುರ' ಎಂದಾಗಿದೆ. ಹಾಗೆಯೇ ದು ಕಾಲಕ್ಕೆ 'ಕಂಪಿಲರಾಯನದುರ್ಗ' ಎಂದಿದ್ದ ಹೆಸರು ಅದೇ ಹಿರೇಮದಕೇರಿನಾಯಕನ ನೇ ಕಾಲಕ್ಕೆ 'ಬ್ರಹ್ಮಗಿರಿ' ಎಂಬ ಹೆಸರನ್ನು ಪಡೆದಿರುವುದು ತಿಳಿಯುತ್ತದೆ. ಹೀಗಾಗಿ ಹ್ಮಗಿರಿ, ಸಿದ್ದಾಪುರ ಮತ್ತು ಜಟಂಗರಾಮೇಶ್ವರ– ಈ ಯಾವ ಹೆಸರುಗಳೂ ಅಶೋಕನ ಲದವಲ್ಲ, ತುಂಬ ಈಚಿನ ಕಾಲದಲ್ಲಿ ಬಂದವು.[10] ಆದರೆ, ಅಶೋಕನ ಕಾಲದಲ್ಲಿ ದ್ಧಾಪುರ ಎಂಬ ಹೆಸರಿತ್ತು ಎಂದು ಷಿ.ಜಾ. ಅವರು ಭಾವಿಸಿದಂತಿದೆ. ಹಾಗಾಗಿಯೆ ವರು " 'ಸಿದ್ಧಾಪುರ'ದಲ್ಲಿನ 'ಸಿದ್ಧ' ಶಬ್ದವು ಇದನ್ನು ಕೋಟೆ ಎಂದು ಸೂಚಿಸದು" ಂದು ಬರೆದಿದ್ದಾರೆ. ಅಶೋಕನ ಕಾಲದಲ್ಲಿ ಇರದ 'ಸಿದ್ಧಾಪುರ' ಹೆಸರಿನಲ್ಲಿಯ 'ಸಿದ್ಧ' ಬ್ಬುವುದರ ಬಗ್ಗೆ ಷಿ.ಜಾ. ಪ್ರಸ್ತಾಪಿಸುತ್ತಿರುವುದಕ್ಕೆ ಯಾವ ಅರ್ಥ ಸಾಧ್ಯ? ('ಸಿದ್ಧ' ಂಬ ಶಬ್ದವಾದರೂ ಕೋಟೆ ಎಂಬ ಅರ್ಥವನ್ನು ಏಕೆ ಸೂಚಿಸಬೇಕೋ!).

ಇಸಿಲ'ದ ಬಗ್ಗೆ ತೀನಂಶ್ರೀ ಅವರ ಅಭಿಪ್ರಾಯವೇನಿತ್ತು? : ಮುಂದೆ ಷಿ.ಜಾ. ಅವರು ಇಸಿಲ'ದ ಬಗ್ಗೆ ಹೀಗೆ ಹೇಳಿದ್ದಾರೆ: "ದಿ. ಪ್ರೊ. ತೀ. ನಂ. ಶ್ರೀಕಂಠಯ್ಯನವರು ಆಗಲೆ ದು ಕನ್ನಡ ಶಬ್ದ ಅಲ್ಲ ಎಂದೂ, ಆ ವಾದವನ್ನು ಒಪ್ಪುವುದಕ್ಕೆ ಆಗುವುದಿಲ್ಲ ಎಂದೂ ಳಿಸಿದ್ದರು. ತೀನಂಶ್ರೀ ಅವರ ಅಭಿಪ್ರಾಯವೇ ಸರಿಯಾದದ್ದು. 'ಇಸಿಲ' ಕನ್ನಡ ಶಬ್ದ ಲ್ಲ, ಅದು ಪ್ರಾಕೃತ. ಪ್ರೊ. ಡಿಎಲ್‌ಎನ್ ಅವರ ಶಿಷ್ಯರು ಅದನ್ನು ವೈಭವೀಕರಿಸಿದ್ದಾರೆ ತ್ತೆ ಕೆಲವರು ಅದೇ ಸರಿ ಎಂದು ನಿರೂಪಿಸಿಕೊಂಡು ಹೋಗಿದ್ದಾರೆ. ಇವರ ಹೇಳಿಕೆಗಳಿಗೆ ಧಾರವಿಲ್ಲ." ಷಿ.ಜಾ. ಅವರು ಬರೆದಿರುವಂತೆ ತೀನಂಶ್ರೀ ಅವರು ನಿಜವಾಗಿಯೂ ಾಗೆ ಹೇಳಿದ್ದರೆ? ಅವರು ವಾಸ್ತವವಾಗಿ ಏನು ಹೇಳಿದ್ದರು?– ಎಂಬ ಪ್ರಶ್ನೆ ಬರುತ್ತದೆ. ದಕ್ಕೆ, ಮೇಲೆ ಉಲ್ಲೇಖಿಸಿರುವ ತೀನಂಶ್ರೀ ಅವರದೇ ಬರಹದಲ್ಲಿಯ ಮಾತುಗಳನ್ನು ಮನಿಸಿ: 'ಇಸಿಲ' ಕುರಿತಂತೆ ಅವರು ಹೇಳಿರುವ ಮಾತುಗಳಲ್ಲಿ 'ಅದು ಕನ್ನಡ ಶಬ್ದ ಹೌದೆ ಅಲ್ಲವೆ ಎಂಬ ಬಗ್ಗೆ ಏನನ್ನೂ ಹೇಳಿಲ್ಲ'; ಅಷ್ಟೇ ಅಲ್ಲ, 'ಡಿಎಲ್‌ಎನ್ ಅವರ ವಾದವನ್ನು ಒಪ್ಪುವುದಕ್ಕೆ ಆಗುವುದಿಲ್ಲ' ಎಂದೂ ಹೇಳಿಲ್ಲ. "ತಮಿಳಿನ 'ಎಯಿಲ್' ಮತ್ತು ನ್ನಡದ 'ಎಸಿಲ್' ಇವು ಪರಸ್ಪರ ಜ್ಞಾತಿಶಬ್ದಗಳು; ...ಕನ್ನಡದ 'ಎಸಿಲ್' ಶಬ್ದವೇ ಸರ್ಯಿೀಕರಣಗೊಂಡು 'ಇಸಿಲ' ಎಂಬ ರೂಪ ತಾಳಿದೆ' ಎಂಬ 'ಡಿ.ಎಲ್. ನರಸಿಂಹಾಚಾರ್ಯರ ವಿದ್ವತ್ಪೂರ್ಣ ವಾದ ಊಹೆ (brilliant conjecture) ಸರಿಯಾಗಿದ್ದ

ಪಕ್ಷದಲ್ಲಿ, ಎಸಿಲ್ ಎನ್ನುವುದು ವಿಶ್ವಾಸಾರ್ಹವಾದ ಮೊದಲ ಕನ್ನಡ ಪದಗಳಲ್ಲಿ ಒಂದೆಂದು ಹೇಳಬಹುದು"[11] ಎಂದು ಹೇಳಿದ್ದಾರೆಯೇ ಹೊರತು ನೇತ್ಯಾತ್ಮಕವಾಗಿ ಏನನ್ನೂ ಹೇಳಿಲ್ಲ. ತೀನಂಶ್ರೀ ಅವರ ಮಾತುಗಳನ್ನು ಸೀ.ಜಾ. ಅವರು ತಮ್ಮ ತರ್ಕಕ್ಕೆ ಬೇಕಾದಂತೆ ತಿರುಚಿರುವುದು ಸ್ಪಷ್ಟವಾಗಿದೆ. ಇಂಥ ತಿರಿಚುವಿಕೆ ಯಾರಿಗೂ ಶೋಭೆಯಲ್ಲ. ಹಾಗೆಯೇ, "ಪ್ರೊ. ಡಿಎಲ್ಎನ್ ಅವರ ಶಿಷ್ಯರು ಅದನ್ನು ವೈಭವೀಕರಿಸಿದ್ದಾರೆ" ಮುಂತಾದ ಮಾತುಗಳಲ್ಲಿ ಡಿಎಲ್ಎನ್ ಅವರ ಬಗ್ಗೆಯೋ ಅವರ ಶಿಷ್ಯರ ಬಗ್ಗೆಯೋ ಯಾವುದೋ ಕಹಿಧ್ವನಿ ಇರುವಂತಿದೆ. ಇದು ಕೂಡಾ ಅಪೇಕ್ಷಣೀಯವಲ್ಲ.

ಕೃತಜ್ಞತೆ: ಮೇಲೆ ಉಲ್ಲೇಖಿಸಿರುವ ಎಂ. ಚಿದಾನಂದಮೂರ್ತಿಯವರ ಲೇಖನ ಇದೀಗ **ಪ್ರೊಫೆಸರ್ ಡಿ.ಎಲ್. ನರಸಿಂಹಾಚಾರ್ಯರ ಹೆಚ್ಚಿನ ಬರಹಗಳು ಭಾಷಣಗಳು** (ಸಂ. ಟಿ.ವಿ. ವೆಂಕಟಾಚಲಶಾಸ್ತ್ರೀ) ಎಂಬ ಸಂಪುಟದಲ್ಲಿ ಮರುಪ್ರಕಟವಾಗಿದೆ. ಆ ಲೇಖನದ ಪ್ರತಿ ನನಗೆ ದೊರೆಯಲು ಕಾರಣರಾದ ಆ ಹಿರಿಯ ವಿದ್ವಾಂಸರಿಗೆ; ಹಾಗೆಯೇ **ಕನ್ನಡ ಕೈಪಿಡಿ ಸಂಪುಟ-1** (ಪರಿಷ್ಕೃತ ಆವೃತ್ತಿ) ಪುಸ್ತಕವನ್ನು ನನಗೆ ಅಧ್ಯಯನಕ್ಕಾಗಿ ನೀಡಿದ ಸಿ.ಎಂ. ತಿಪ್ಪೇಸ್ವಾಮಿ ಅವರಿಗೆ ನನ್ನ ಕೃತಜ್ಞತೆಗಳು.

ಟಿಪ್ಪಣಿಗಳು ಮತ್ತು ಆಕರ ಸೂಚಿ

1. ಬಿ.ಎಲ್.ರೈಸ್., 1902, **ಎಪಿಗ್ರಾಫಿಯ ಕರ್ನಾಟಿಕ ಸಂಪುಟ 11,** ಮೊಳಕಾಲ್ಮೂರು ಶಾ.ಸಂ. 21.
2. ಅದೇ., ಮೊಳಕಾಲ್ಮುರು ಶಾ.ಸಂ. 14 ಮತ್ತು 34.
3. **ಸಾಧನೆ, ತ್ರೈಮಾಸಿಕ** 1(3), 1972 ರ ಜುಲೈ-ಸೆಪ್ಟೆಂಬರ್, ಬೆಂಗಳೂರು ವಿಶ್ವವಿದ್ಯಾಲಯ.
4. ಬಿ.ಎಲ್.ರೈಸ್., 1905, **ಎಪಿಗ್ರಾಫಿಯ ಕರ್ನಾಟಿಕ ಸಂಪುಟ 10,** ಚಿಕ್ಕಬಳ್ಳಾಪುರ 20, 1302; ಕೋಲಾರ 111, 1027; ಮತ್ತು ನೋಡಿ: ಆರ್.ಆರ್. ದಿವಾಕರ್, (ಸಂ.), 1970, **ಕರ್ನಾಟಕದ ಪರಂಪರೆ ಸಂಪುಟ 1,** ಮೈಸೂರು ರಾಜ್ಯ ಸರಕಾರ, 1970, ಪು. 130.
5. ತೀ.ನಂ.ಶ್ರೀಕಂಠಯ್ಯ, 1970, 'ಭಾಷೆಗಳು', (ಸಂ.) ಆರ್.ಆರ್.ದಿವಾಕರ್, **ಕರ್ನಾಟಕದ ಪರಂಪರೆ- ಸಂಪುಟ 1,** ಮೈಸೂರು ರಾಜ್ಯ ಸರಕಾರ: ಬೆಂಗಳೂರು, ಪು. 90-91.
6. ನನ್ನ ಆ ಪುನರ್ಪರಿಶೀಲನೆಯ ಲೇಖನಕ್ಕೆ ಪತ್ರಮುಖೇನ ಸ್ವಾಗತಿಸಿ ಅಭಿನಂದಿಸಿದವರಲ್ಲಿ ಶೆಟ್ಟರ್ ಅವರೂ ಒಬ್ಬರು. ಅವರ ಪತ್ರ ಈಗಲೂ ನನ್ನ ಬಳಿ ಇದೆ.
7. ಡಿ.ಎಲ್.ನರಸಿಂಹಾಚಾರ್, 1970, 'ಶಾತವಾಹನರ ಕಾಲದ ಕರ್ನಾಟಕದ ಧರ್ಮ ಮತ್ತು ಸಮಾಜ', (ಸಂ.) ಆರ್.ಆರ್.ದಿವಾಕರ್, **ಕರ್ನಾಟಕದ ಪರಂಪರೆ- ಸಂಪುಟ 1,** ಮೈಸೂರು ರಾಜ್ಯ ಸರಕಾರ, ಬೆಂಗಳೂರು,ಪು. 130.
8. ಬಿ.ರಾಜಶೇಖರಪ್ಪ, 2016, **ಇತಿಹಾಸ ದರ್ಶನ ಸಂಪುಟ 31,** ಕರ್ನಾಟಕ ಇತಿಹಾಸ ಅಕಾದೆಮಿ: ಬೆಂಗಳೂರು. ಪು.102-109.
9. ಬಿ. ರಾಜಶೇಖರಪ್ಪ, (ಸಂ.), 2009, **ಚಿನ್ಮೂಲಾದ್ರಿ- 75ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಸ್ಮರಣ ಸಂಚಿಕೆ,** ಚಿತ್ರದುರ್ಗ, 2009, ಪು.33.
10. ನೋಡಿ : B.Rajashekharappa, 2013, 'Names of the Southernmost places where Asokan Inscriptions are found', (Ed.) M.D.Sampath, **Studies in Indian Place Names, vol. XXXIII,** Mysore, Pp.54-61.
11. ತೀ.ನಂ.ಶ್ರೀಕಂಠಯ್ಯ, 1970, ಪೂರ್ವೋಕ್ತ.

ITIHASA DARPANA (Quarterly)
A Peer Reviewed Journal of Historical Research in Kannada
ISSN 2321-3590
Book No.: 37-38.
April – September 2018
Author: Rajaram Hegde
Title: madyakālīna Karnatakada vīragallugaḷalli
sāvināceya lōka: badalāda kalpanegaḷu

ಮಧ್ಯಕಾಲೀನ ಕರ್ನಾಟಕದ ವೀರಗಲ್ಲುಗಳಲ್ಲಿ ಸಾವಿನಾಚೆಯ ಲೋಕ: ಬದಲಾದ ಕಲ್ಪನೆಗಳು

ರಾಜಾರಾಮ ಹೆಗಡೆ
ಪ್ರಾಧ್ಯಾಪಕರು
ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗ
ಕುವೆಂಪು ವಿಶ್ವವಿದ್ಯಾಲಯ
ಶಂಕರಘಟ್ಟ
ಮೊ: 9448682997.
rajaramainakai@gmail.com

ಪೀಠಿಕೆ: ದಕ್ಷಿಣ ಭಾರತೀಯ ಇತಿಹಾಸದಲ್ಲಿ ವೀರರ ಪೂಜಾ ಪರಂಪರೆಗೆ ವಿಶಿಷ್ಟ ಸ್ಥಾನ ಇತ್ತೆಂಬುದು ಇಲ್ಲಿನ ಶಾಸನ ಶಾಸ್ತ್ರ, ಪ್ರಾಕ್ತನ ಶಾಸ್ತ್ರ ಹಾಗೂ ಸಾಹಿತ್ಯಿಕ ಆಧಾರಗಳಿಂದ ವಿದಿತವಾಗುವ ಸಂಗತಿ. ಇಂದು ಗ್ರಾಮೀಣ ಪ್ರದೇಶಗಳಲ್ಲಿ ಅಲ್ಲಲ್ಲಿ ಕಂಡುಬರುವ ವೀರಗಲ್ಲುಗಳು ಈ ಪರಂಪರೆಗೆ ಸಾಕ್ಷಿಯಾಗಿವೆ. ಆದರಲ್ಲೂ ಕರ್ನಾಟಕದಲ್ಲಿ ರಾಷ್ಟ್ರಕೂಟ ಕಾಲದ ನಂತರ ಇಂಥ ವೀರಗಲ್ಲುಗಳನ್ನು ನೆಡುವ ಸಂಪ್ರದಾಯ ಜನಪ್ರಿಯವಾಯಿತು. ಅತ್ಯಂತ ಪ್ರಾಚೀನ ವೀರಗಲ್ಲುಗಳು ನಮಗೆ ತಮಿಳುನಾಡಿನಲ್ಲಿ ಸಿಗುತ್ತವೆ. ಇತ್ತೀಚಿನ ಸಂಶೋಧನೆಗಳ ಪ್ರಕಾರ ಸಾ.ಶ. (ಸಾಮಾನ್ಯ ಶಕೆ=ಕ್ರಿಸ್ತ ಶಕೆ) ಮೂರು ಶತಮಾನಗಳಷ್ಟು ಪೂರ್ವದಲ್ಲೇ ಅವು ಸಿಗುತ್ತವೆ.[1] ಸಂಗಂ ಸಾಹಿತ್ಯದಲ್ಲೂ ಕೂಡ ವೀರಪೂಜೆಗೆ ಹಾಗೂ ವೀರಗಲ್ಲುಗಳ ಸ್ಥಾಪನೆಗೆ ಸಂಬಂಧಿಸಿದಂತೆ ಸಾಕಷ್ಟು ಉಲ್ಲೇಖಗಳು ಬರುತ್ತವೆ. ದಕ್ಷಿಣ ಭಾರತದ ಇತರೆಡೆಗಳಲ್ಲಿ ಕೂಡ ಸಾ. ಶ. ಪ್ರಾರಂಭದಲ್ಲೇ ಮರಣಹೊಂದಿದವರಿಗೆ ಸ್ಮಾರಕ ಶಿಲೆಗಳನ್ನು ನೆಡಿಸುವ ಸಂಪ್ರದಾಯವಿತ್ತು. ನಾಗಾರ್ಜುನ ಕೊಂಡದಲ್ಲಿ ಸಾ.ಶ. ಪ್ರಾರಂಭದ ಶತಮಾನಗಳಿಗೆ ಸೇರಿದ ಕೆಲವು ಸ್ಮಾರಕ ಸ್ತಂಭಗಳು ಸಿಕ್ಕಿರುವುದರಿಂದ ಆ ಪ್ರದೇಶದಲ್ಲೂ ಈ ಸಂಪ್ರದಾಯ ಆ

ಕಾಲದಲ್ಲಿಯೇ ಪ್ರಚಲಿತದಲ್ಲಿದ್ದುದು ಸ್ಪಷ್ಟ.[2] ಕರ್ನಾಟಕದಲ್ಲಿ ಸಾ.ಶ. ಪ್ರಾರಂಭದಲ್ಲೇ ಇಂಥ ಆಚರಣೆಗಳು ಇದ್ದವು ಎಂಬುದು ಸನ್ನತಿ, ಬನವಾಸಿ ಪರಿಸರಗಳಲ್ಲಿ ಸಿಕ್ಕ ಶಾತವಾಹನ ಕಾಲದ ಛಾಯಾಸ್ತಂಭಗಳಿಂದ ತಿಳಿದುಬರುತ್ತದೆ. ಆದರೆ ಇವು ವೀರಗಲ್ಲುಗಳಲ್ಲ. ಕನ್ನಡದ ಮೊತ್ತಮೊದಲನೆಯ ಶಾಸನವೆಂದು ಸುಪ್ರಸಿದ್ಧವಾದ ಹಲ್ಮಿಡಿ ಶಾಸನವು ಯುದ್ಧದಲ್ಲಿ ಮಡಿದ ವೀರರಿಗೆ ದಾನವನ್ನು ದಾಖಲಿಸುತ್ತದೆ.

ಆದರೆ ಕದಂಬರ ಕಾಲದ ನಂತರ ಕರ್ನಾಟಕದಿಂದ ಆಳಿದ ಗಂಗ, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ, ವಿಜಯನಗರ ಮುಂತಾದ ಸಾಮ್ರಾಜ್ಯಗಳು ಹಾಗೂ ಅವುಗಳ ಅಧೀನದಲ್ಲಿ ಆಳಿದ ಕರ್ನಾಟಕದ, ಅನ್ಯ ರಾಜ್ಯಗಳ ಪ್ರಾದೇಶಿಕ, ಸ್ಥಾನಿಕ ಅರಸರ ಕಾಲದಲ್ಲಿ ಒಂದು ವಿಶಿಷ್ಟವಾದ ವೀರಗಲ್ಲು ಶಿಲ್ಪ ಹಾಗೂ ಪೂಜಾ ಪರಂಪರೆ ಬೆಳೆದು ಜನಪ್ರಿಯವಾಯಿತು. ಇದರ ಪರಿಣಾಮವಾಗಿ ಇಂದು ಕರ್ನಾಟಕವು ದಕ್ಷಿಣ ಭಾರತದಲ್ಲೇ ಅತ್ಯಂತ ಹೆಚ್ಚು ವೀರಗಲ್ಲುಗಳನ್ನು ಹೊಂದಿರುವ ರಾಜ್ಯವಾಗಿದೆ.[3] ಈ ವೀರಗಲ್ಲುಗಳು ಆಕೃತಿ ಹಾಗೂ ಪರಿಕಲ್ಪನೆಗಳ ದೃಷ್ಟಿಯಿಂದ ತಮ್ಮದೇ ಆದ ಒಂದು ವಿಶಿಷ್ಟ ಪರಂಪರೆಯನ್ನು ದಾಖಲಿಸುತ್ತವೆ. ಈ ಪರಂಪರೆಗೆ ಸೇರಿದ ವೀರಗಲ್ಲುಗಳು ಕೇವಲ ಪೂಜಾವಸ್ತುಗಳಾಗಿರದೇ, ಶಿಲ್ಪಶೈಲಿಯೊಂದರ ವಿಕಾಸಕ್ಕೂ ಸಾಕ್ಷಿಯಾಗಿವೆ. ಅಂದರೆ ಅವುಗಳ ಮೇಲೆ ವೀರರ ಜೀವನ ಹಾಗೂ ಮರಣೋತ್ತರ ಗತಿಗಳ ಕುರಿತು ಅದನ್ನು ಆಚರಿಸುವವರಿಗಿದ್ದ ಕಲ್ಪನೆಗಳನ್ನು ದೃಶ್ಯರೂಪದಲ್ಲಿ ಕೆತ್ತಲಾಗುತ್ತದೆ. ಇಂಥ ವೀರಗಲ್ಲುಗಳಲ್ಲಿ ಅತ್ಯಂತ ಪ್ರಾಚೀನ ಎನ್ನಬಹುದಾದದ್ದು ಚಿತ್ರದುರ್ಗದ ತಮ್ಮಟಗಲ್ಲು ಸ್ಥಳದಲ್ಲಿ ಸಿಕ್ಕಿದ್ದು, ಅದರ ಕಾಲವನ್ನು ಸುಮಾರು ಸಾ.ಶ. 500 ಕ್ಕೆ ಅಂದಾಜಿಸಲಾಗಿದೆ. ಇಂಥ ಪ್ರಾಚೀನ ವೀರಗಲ್ಲುಗಳು ತಲಕಾಡಿನ ಗಂಗರ ಪ್ರದೇಶದಲ್ಲಿ ಸಾಕಷ್ಟು ಸಿಗುತ್ತವೆ. ಸಾ.ಶ. 8ನೆಯ ಶತಮಾನದ ನಂತರ ಈ ಸಂಪ್ರದಾಯವು ಬಾದಾಮಿಯ ಚಾಲುಕ್ಯರ ಪ್ರದೇಶದಲ್ಲಿ ಕಾಣಿಸಿಕೊಂಡು ಕ್ರಮೇಣ ಮಧ್ಯ ಹಾಗೂ ಉತ್ತರ ಕರ್ನಾಟಕಗಳಲ್ಲಿ ಜನಪ್ರಿಯವಾಯಿತು. ಅಷ್ಟೇ ಅಲ್ಲ, ಈ ಸಾಮ್ರಾಜ್ಯಗಳ ಆಳ್ವಿಕೆಗೊಳಪಟ್ಟಿದ್ದ ನೆರೆಯ ರಾಜ್ಯಗಳ ಗಡಿ ಪ್ರದೇಶಗಳಲ್ಲೂ ಈ ಪದ್ಧತಿ ಪಸರಿಸಿತು. ಅದರಲ್ಲೂ ಮಧ್ಯ ಹಾಗೂ ದಕ್ಷಿಣ ಕರ್ನಾಟಕದಲ್ಲಿ 11 ರಿಂದ 13ನೆಯ ಶತಮಾನಗಳಲ್ಲಿ ಸಾಧಾರಣವಾಗಿ ಪ್ರತೀ ಹಳ್ಳಿಗಳಲ್ಲೂ ಒಂದು ಅಥವಾ ಒಂದಕ್ಕಿಂತ ಹೆಚ್ಚು ವೀರಗಲ್ಲುಗಳು ಅಸ್ತಿತ್ವಕ್ಕೆ ಬಂದವು. ಇಂಥ ವೀರಗಲ್ಲುಗಳನ್ನು ಯುದ್ಧದಲ್ಲಿ ಮಡಿದವರು, ತಮ್ಮ ಊರಿನ ಹಸುಗಳ, ಸ್ತ್ರೀಯರ ರಕ್ಷಣೆಗಾಗಿ ಮಡಿದವರು, ಅಥವಾ ನಾಡಿಗಾಗಿ ಹಾಗೂ ತನ್ನವರಿಗಾರಿನ್ನೂ ಅನೇಕ ವಿಧದಲ್ಲಿ ಬಲಿದಾನ ಮಾಡಿದವರು, ಕ್ರೂರ ಪ್ರಾಣಿಗಳ ಜೊತೆ ಹೋರಾಡಿ ಮಡಿದವರು ಇತ್ಯಾದಿ ವ್ಯಕ್ತಿಗಳಿಗಾಗಿ ನಿಲ್ಲಿಸಿರುವುದು ಕಂಡುಬರುತ್ತದೆ.

ಪ್ರಸ್ತುತ ಲೇಖನದಲ್ಲಿ ಈಗಾಗಲೇ ಪ್ರಸ್ತಾಪಿಸಿರುವಂತೆ ವೀರಗಲ್ಲುಗಳ ಮೇಲಿನ ಚಿತ್ರಣವನ್ನು ಅಧ್ಯಯನಕ್ಕೊಳಪಡಿಸಲಾಗಿದೆ. ಈ ಚಿತ್ರಣಗಳು ನಮಗೆ ಕರ್ನಾಟಕದಲ್ಲಿ ವೀರರ ಮರಣೋತ್ತರ ಗತಿಯ ಕುರಿತು ಬದಲಾಗುತ್ತಿದ್ದ ಕಲ್ಪನೆಗಳನ್ನು ಬಿಂಬಿಸುತ್ತವೆ. ದಕ್ಷಿಣ ಕರ್ನಾಟಕದಲ್ಲಿ ಗಂಗರ ಕಾಲದ ವೀರಗಲ್ಲುಗಳು ವೀರನು ಹೋರಾಡುವ ಹಾಗೂ ಮರಣಾನಂತರ ದೇವಕನ್ನಿಕೆಯರು ಅವನನ್ನು ಸ್ವರ್ಗಕ್ಕೆ ಒಯ್ಯುವ ಹಾಗೂ ಸ್ವರ್ಗದಲ್ಲಿ ಅವನು ದೇವತೆಯಾದ ಕಲ್ಪನೆಯನ್ನು ಚಿತ್ರಿಸುತ್ತವೆ. ಆದರೆ ಇವೇ ಕಲ್ಪನೆಯನ್ನು ವ್ಯವಸ್ಥಿತವಾಗಿ ದೇಶ ಮತ್ತು ಕಾಲದ ಅನುಕ್ರಮಣಿಕೆಯಲ್ಲಿ ಇಟ್ಟು ತೋರಿಸುವ ಪದ್ಧತಿಯನ್ನು

ಮಧ್ಯ ಮತ್ತು ಉತ್ತರ ಕರ್ನಾಟಕದ ಶಿಲ್ಪ ಸಂಪ್ರದಾಯಗಳು ಕಂಡುಹಿಡಿದವು. ಈ ವೀರಗಲ್ಲುಗಳು ಒಂದಕ್ಕಿಂತ ಹೆಚ್ಚು ಶಿಲ್ಪ ಪಟ್ಟಿಕೆಗಳನ್ನು ಹೊಂದಿದ್ದು ಅವುಗಳ ಎತ್ತರವು 4ರಿಂದ 8 ಅಡಿಗಳ ವರೆಗೆ ಹಾಗೂ ಅಗಲವು 2ರಿಂದ 4 ಅಡಿಗಳ ವರೆಗೆ ವ್ಯತ್ಯಾಸವಾಗುತ್ತದೆ (ಅಪವಾದಗಳೂ ಇರಬಹುದು). ಅವುಗಳಲ್ಲಿ ಸಾಧಾರಣವಾಗಿ ಮೂರು ಶಿಲ್ಪ ಪಟ್ಟಿಕೆಗಳಿರುತ್ತದೆ. ಕೆಲವೊಮ್ಮೆ, ತುಂಬಾ ವಿವರಪೂರ್ಣವಾಗಿ ಕೆತ್ತಿದ ಕಲ್ಲುಗಳಲ್ಲಿ ಐದರಿಂದ ಏಳು ಪಟ್ಟಿಕೆಗಳವರೆಗೆ ಇರುತ್ತವೆ. ಪಟ್ಟಿಕೆಗಳು ಎಷ್ಟೇ ಇದ್ದರೂ ಅವು ಮುಖ್ಯವಾಗಿ ವೀರಮರಣಕ್ಕೆ ಸಂಬಂಧಿಸಿದ ಮೂರು ಹಂತಗಳನ್ನು ಚಿತ್ರಿಸುತ್ತವೆ. ತೀರಾ ಕೆಳಗಿನ ಪಟ್ಟಿಕೆಯಲ್ಲಿ/ಗಳಲ್ಲಿ ವೀರನು ಹೋರಾಡುತ್ತ ಮರಣವನ್ನಪ್ಪುವ ದೃಶ್ಯವಿರುತ್ತದೆ. ನಡುವಿನ ಹಂತದಲ್ಲಿ ವೀರನು ಸ್ವರ್ಗಕ್ಕೇರುವ ದೃಶ್ಯವಿರುತ್ತದೆ. ಮೇಲಿನ ಪಟ್ಟಿಕೆಯಲ್ಲಿ ಅವನ ಸ್ವರ್ಗಸ್ಥನಾಗುವ ದೃಶ್ಯವಿರುತ್ತದೆ. ಈ ಶಿಲ್ಪ ಪಟ್ಟಿಕೆಗಳ ನಡುವೆ ಇರುವ ಖಾಲಿ ಸ್ಥಳದಲ್ಲಿ ಶಾಸನ ಬರವಣಿಗೆಯಿದ್ದು ವೀರನ ಹೆಸರು, ಹಿನ್ನೆಲೆ, ಕಾಲ, ಹೋರಾಟದ ವಿವರ, ಆಳುವ ಪ್ರಭು, ನೀಡಿದ ದಾನ ಇತ್ಯಾದಿ ಮಾಹಿತಿಗಳಿರುತ್ತವೆ. ಇಂಥ ಪಟ್ಟಿಕೆಗಳು ಹಾಗೂ ಶಾಸನಗಳು ಈ ಲೇಖನದಲ್ಲಿ ಚರ್ಚಿಸಲಾಗುತ್ತಿರುವ ಮಧ್ಯಕಾಲದ ಕರ್ನಾಟಕದ ವೀರಗಲ್ಲುಗಳಿಗೆ ಮಾತ್ರ ವಿಶಿಷ್ಟವಾಗಿರುವ ಲಕ್ಷಣಗಳು. ಇಂಥ ವೀರಗಲ್ಲುಗಳು ಕೇವಲ ಕರ್ನಾಟಕಕ್ಕೇ ಸೀಮಿತವಾಗಿಲ್ಲ. ಅವುಗಳನ್ನು ನೆರೆ ರಾಜ್ಯಗಳಾದ ಮಹಾರಾಷ್ಟ್ರ,[4] ಆಂಧ್ರ,[5] ಗೋವ,[6] ಹಾಗೂ ಕೇರಳಗಳಲ್ಲೂ[7] ನೋಡುತ್ತೇವೆ. ಇವು ಒಂದು ಪ್ರಕಾರದ ಕಥನ ಶಿಲ್ಪಗಳ ಸಾಲಿಗೆ ಸೇರುತ್ತವೆ. ಇಂಥ ಲಕ್ಷಣಗಳಿಲ್ಲದಿರುವ ವೀರಗಲ್ಲುಗಳು ಈ ಕಾಲ-ಪ್ರದೇಶದಲ್ಲಿ ಕಂಡುಬರುವುದಿಲ್ಲ ಎಂದಲ್ಲ. ಯಾವುದೇ ಕಥೆ ಹೇಳದೇ ಕೇವಲ ವೀರನೊಬ್ಬನ ಶಿಲ್ಪವನ್ನು ಕೆತ್ತುವ ಪದ್ಧತಿ ಕೂಡ ಈ ಮೇಲಿನ ಪದ್ಧತಿಯ ಜೊತೆಗೇ ಪ್ರಚಲಿತದಲ್ಲಿತ್ತು. ಗಂಗವಾಡಿಯಲ್ಲಿ ಈ ಪದ್ಧತಿ ಜನಪ್ರಿಯವಾಗಿತ್ತು. ಅಂಥ ವೀರಗಲ್ಲುಗಳನ್ನು ನೆಡುವ ಪದ್ಧತಿ ವಿಜಯನಗರ ಕಾಲಾನಂತರ ಕರ್ನಾಟಕದ ಉಳಿದ ಭಾಗಗಳಲ್ಲೂ ಜನಪ್ರಿಯವಾದುದು ಕಂಡುಬರುತ್ತದೆ. ಆದರೆ ಅವು ಈ ಲೇಖನಕ್ಕೆ ಪ್ರಸ್ತುತವಲ್ಲ.

ವೀರನ ಮರಣೋತ್ತರ ಗತಿಯ ಕುರಿತು ಸಾಹಿತ್ಯಿಕ ಚಿತ್ರಣಗಳು: ಈ ಮೇಲೆ ಉಲ್ಲೇಖಿಸಿದ ಕಥನ ಶಿಲ್ಪಗಳಿಗೆ ಆಧಾರವಾಗಿ ಅಂದಿನ ಕಾಲದಲ್ಲಿ ವೀರಮರಣದ ಕುರಿತ ಕಥೆಗಳು ಹಾಗೂ ಕಲ್ಪನೆಗಳು ಇದ್ದವು. ಅತ್ಯಂತ ಪ್ರಾಚೀನ ಕಾಲದಿಂದಲೇ ವೀರಮರಣಕ್ಕೆ ಸಂಬಂಧಿಸಿದ ಅಂಥ ಚಿತ್ರಣಗಳು ಸಾಹಿತ್ಯದಲ್ಲಿ ಸಿಗುತ್ತವೆ. ವೈದಿಕ ಸಾಹಿತ್ಯ, ಮಹಾಭಾರತ, ಪುರಾಣಗಳು, ಧರ್ಮಶಾಸ್ತ್ರಗಳು, ಕೌಟಿಲ್ಯನ ಅರ್ಥಶಾಸ್ತ್ರ ಹಾಗೂ ಇತರ ಸಂಸ್ಕೃತ ಗ್ರಂಥಗಳು ವೀರಮರಣ ಹಾಗೂ ಸ್ವರ್ಗದ ಕುರಿತು ತಿಳಿಸುತ್ತವೆ.[8] ತಮಿಳಿನ ಸಂಗಂ ಸಾಹಿತ್ಯ ಹಾಗೂ ಪ್ರಾಚೀನ ಕನ್ನಡ ಸಾಹಿತ್ಯದಲ್ಲೂ ಅದರ ಚಿತ್ರಣಗಳು ಬರುತ್ತವೆ. ಮಹಾಭಾರತದ ಶಲ್ಯ ಪರ್ವದಲ್ಲಿ ಯುದ್ಧದಲ್ಲಿ ಮಡಿದ ವೀರನನ್ನು ಅಪ್ಸರೆಯರು ಹರ್ಷೋದ್ಗಾರದಿಂದ ಸ್ವರ್ಗಕ್ಕೆ ಸ್ವಾಗತಿಸುವ ವರ್ಣನೆಯಿದೆ. ಅಂಥ ವೀರರನ್ನು ದೇವತೆಗಳು ಪೂಜಿಸುತ್ತಾರೆ ಹಾಗೂ ವೀರರು ಅಪ್ಸರೆಯರ ಸಹವಾಸದಲ್ಲಿ ಸ್ವರ್ಗಸುಖವನ್ನು ಅನುಭವಿಸುವುದನ್ನು ಅವರ ಪಿತೃಗಳು ನೋಡಿ ಆನಂದಿಸುತ್ತಾರೆ.[9] ಶಾಂತಿಪರ್ವದಲ್ಲಿ ಬರುವ ಅಂಬರೀಷನ ಕಥೆಯ ಸಂದರ್ಭದಲ್ಲಿ ಹೇಳಲಾದ ಪ್ರಕಾರ ಕ್ಷತ್ರಿಯನು ಯುದ್ಧದಲ್ಲಿ ತನ್ನ ವೈರಿಗೆ ಬೆನ್ನು ತೋರಿಸದೇ ಹೋರಾಡಿ ಸತ್ತರೆ ಅವನು ಇಂದ್ರಪದವಿಗೇರುತ್ತಾನೆ.[10] ವೀರಗಲ್ಲುಗಳ ಚಿತ್ರಣಗಳಿಗೆ ಹಿನ್ನೆಲೆಯಾಗಿ

ಇಂಥ ಕಲ್ಪನೆಗಳು ಇದ್ದವು ಎಂಬುದು ವೀರಗಲ್ಲು ಶಾಸನಗಳಲ್ಲಿ ನಮಗೆ ಸಿಗುವ ಎರಡು ಸಂಸ್ಕೃತ ಶ್ಲೋಕಗಳಲ್ಲಿ ಸ್ಪಷ್ಟವಾಗಿದೆ: 1. ಜಿತೇನ ಲಭ್ಯತೇ ಲಕ್ಷ್ಮೀ ಮೃತೇನಾಪಿ ಸುರಾಂಗನಾ/ ಕ್ಷಣ ವಿಧ್ವಂಸಿನಿ ಕಾಯೇ ಕಾ ಚಿಂತಾ ಮರಣೇ ರಣೆ//. (ಬದುಕಿದರೆ ಲಕ್ಷ್ಮಿ ದೊರೆಯುತ್ತಾಳೆ, ಮೃತನಾದರೆ ಸುರಾಂಗನೆ ದೊರೆಯುತ್ತಾಳೆ. ಕ್ಷಣಿಕವಾದ ಈ ಶರೀರಕ್ಕಾಗಿ ಯುದ್ಧದಲ್ಲಿ ಮರಣಹೊಂದಲು ಚಿಂತೆಯೇಕೆ?). ಈ ಶ್ಲೋಕವು ಪಂಚತಂತ್ರದಲ್ಲಿ ಬರುತ್ತದೆ ಎನ್ನಲಾಗಿದೆ.[11] ಈ ಶ್ಲೋಕಕ್ಕೆ ಸಂವಾದಿಯಾದ ಶ್ಲೋಕವು ಭಗವದ್ಗೀತೆಯಲ್ಲೇ ಕಾಣಿಸಿಕೊಳ್ಳುತ್ತದೆ.[12] ಮತ್ತೊಂದು ಶ್ಲೋಕ ಹೀಗಿದೆ: ದ್ವಾವಿಮೌ ಪುರುಷೌ ಲೋಕೇ ಸೂರ್ಯಮಂಡಲ ಭೇದಿನೌ/ ಪರಿವ್ರಾಡ್ ಯೋಗಯುಕ್ತಾಶ್ಚ ರಣೇಚಾಭಿಮುಖೇ ಹತಃ// (ಲೋಕದಲ್ಲಿರುವ ಯೋಗ ಜ್ಞಾನಿಯಾದ ತಪಸ್ವಿ ಹಾಗೂ ಯುದ್ಧಭೂಮಿಯಲ್ಲಿ ಹತನಾದ ವೀರ ಈ ಇಬ್ಬರು ಪುರುಷರು ಸೂರ್ಯಮಂಡಲವನ್ನು ಭೇದಿಸುವಂಥವರಾಗಿದ್ದಾರೆ). ಈ ಶ್ಲೋಕದ ಮೂಲರೂಪವೂ ಸ್ವಲ್ಪ ವ್ಯತ್ಯಾಸದೊಂದಿಗೆ ಮಹಾಭಾರತದಲ್ಲೇ ಕಾಣಿಸಿಕೊಳ್ಳುತ್ತದೆ.[13] ಕೌಟಿಲ್ಯನು ಸಲಹೆ ಕೊಡುವ ಪ್ರಕಾರ ಯುದ್ಧವು ಪ್ರಾರಂಭವಾಗುವ ಮೊದಲು ರಾಜನು ತನ್ನ ಸೈನಿಕರಿಗೆ ಯುದ್ಧದಲ್ಲಿ ಮಡಿದರೆ ಸಿಗಬಹುದಾದ ಮರಣೋತ್ತರ ಸದ್ಗತಿಯನ್ನು ಗ್ರಂಥಗಳ ಸಾಲುಗಳನ್ನುದ್ಧರಿಸಿ ಮನದಟ್ಟು ಮಾಡಿಕೊಡಬೇಕು.[14] ಸಂಗಂ ಸಾಹಿತ್ಯದಲ್ಲಿ ಕೂಡ ಯುದ್ಧದಲ್ಲಿ ಮಡಿದ ವೀರರು ಸ್ವರ್ಗ(ಮೇಲುಲೋಗಂ)ಕ್ಕೆ ಹೋಗಿ ದೇವಕನ್ನಿಕೆಯರ ಜೊತೆಗೆ ಸುಖಭೋಗವನ್ನು ಹೊಂದುವ ವರ್ಣನೆಗಳಿವೆ.[15]

ಕನ್ನಡದಲ್ಲಿ ವೀರಗಲ್ಲು ಶಾಸನಗಳನ್ನು ರಚಿಸಿದವರಿಗೆ ಸಂಸ್ಕೃತ, ತಮಿಳು ಭಾಷೆಗಳೇ ಬರಬೇಕೆಂದಿರಲಿಲ್ಲ. ಅವರಿಗೆ ಪಂಪ, ರನ್ನ, ಮುಂತಾದ ಜೈನ ಕವಿಗಳ ಕನ್ನಡ ವೀರಯುಗದ ಕಾವ್ಯಗಳಲ್ಲಿ ಇಂಥ ವರ್ಣನೆಗಳು ಸಿಗುತ್ತಿದ್ದವು. ಈ ಕವಿಗಳು ಮಹಾಭಾರತವನ್ನು ಕನ್ನಡದಲ್ಲಿ ರೂಪಾಂತರಿಸಿದ್ದರು. ಕನ್ನಡ ಶಾಸನಗಳ ಮೇಲೆ ಈ ಕವಿಗಳ ಪ್ರಭಾವವು ಸ್ಪಷ್ಟವಾಗಿಯೇ ಇದೆ.[16] ಕನ್ನಡ ಕವಿಗಳು ವೀರ ಸಿದ್ಧಾಂತ ಎಂಬ ಹೊಸ ಪರಿಕಲ್ಪನೆಯನ್ನೇ ರೂಪಿಸಿದ್ದರು ಎಂಬುದಾಗಿ ಎಂ.ಎಂ. ಕಲಬುರ್ಗಿಯವರು ಚರ್ಚಿಸುತ್ತಾರೆ.[17]

ವೀರನ ಸ್ವರ್ಗಾರೋಹಣ: ರಾಷ್ಟ್ರಕೂಟ ಮಾದರಿ : ಕರ್ನಾಟಕದ ವೀರಗಲ್ಲು ಶಿಲ್ಪಿಗಳು ಈ ಮೇಲಿನ ಸಾಹಿತ್ಯಿಕ ವರ್ಣನೆಗಳನ್ನು ಶಿಲಾ ಪಟ್ಟಿಕೆಗಳಲ್ಲಿ ವ್ಯವಸ್ಥಿತವಾಗಿ ದೃಶ್ಯರೂಪಕ್ಕಿಳಿಸುವ ಪ್ರಯತ್ನವನ್ನು ಮಾಡಿದರು ಹಾಗೂ ಈ ಪ್ರಯತ್ನವು ನಾವು ಚರ್ಚೆಗೆತ್ತಿಕೊಂಡಿರುವ ಈ ಮೇಲಿನ ಪ್ರಕಾರದ ಕರ್ನಾಟಕದ ವೀರಗಲ್ಲುಗಳಿಗೆ ಮಾತ್ರ ವಿಶಿಷ್ಟವಾಗಿದೆ. ಬಾದಾಮಿ ಚಾಲುಕ್ಯ ಕಾಲದಲ್ಲಿ ವೀರನ ಸ್ವರ್ಗಾರೋಹಣವನ್ನು ಎರಡು ಹಂತಗಳಲ್ಲಿ ಕಲ್ಪಿಸಿಕೊಂಡಂತೆ ತೋರುತ್ತದೆ. ಕೆಳಗಿನ ಪಟ್ಟಿಕೆಯು ವೀರನು ಹೋರಾಡಿ ಸಾಯುವ ದೃಶ್ಯವನ್ನು ಚಿತ್ರಿಸಿದರೆ, ಮೇಲಿನ ಪಟ್ಟಿಕೆಯು ಅಪ್ಸರೆಯರು ಅವನನ್ನು ಬಾಹುಗಳಲ್ಲಿ ಎತ್ತಿಕೊಂಡು ಸ್ವರ್ಗಕ್ಕೆ ಒಯ್ಯುವ ದೃಶ್ಯವನ್ನು ಚಿತ್ರಿಸುತ್ತದೆ.[18] ಈ ಚಿತ್ರಣವು ಇನ್ನೂ ಪರಿಷ್ಕರಣೆಗೆ ಒಳಪಟ್ಟು ಚಾಲುಕ್ಯರ ಅಂತ್ಯಕಾಲದಲ್ಲಿ ಹಾಗೂ ರಾಷ್ಟ್ರಕೂಟ ಕಾಲದಲ್ಲಿ ಈ ವೀರಗಲ್ಲುಗಳ ಒಂದು ಸಿದ್ಧ ಮಾದರಿ ರೂಪುಗೊಳ್ಳುತ್ತದೆ. ಈ ಮಾದರಿಯಲ್ಲಿ ಮೂರು ಶಿಲಾ ಪಟ್ಟಿಕೆಗಳು ಒಂದರ ಮೇಲೊಂದರಂತೆ ಯೋಜಿತವಾಗಿವೆ. 1. ಅತ್ಯಂತ ಕೆಳಗಿನ ಪಟ್ಟಿಕೆಯು ವೀರನು ಹೋರಾಡಿ ಮರಣವನ್ನಪ್ಪುವ ದೃಶ್ಯವನ್ನು ತೋರಿಸುತ್ತದೆ. 2. ಮಧ್ಯದ ಪಟ್ಟಿಕೆಯಲ್ಲಿ ವೀರನು ಭೂಲೋಕದಿಂದ ಸ್ವರ್ಗಾಭಿಗಮನವನ್ನು ಕೈಗೊಳ್ಳುವ

ಚಿತ್ರವಿರುತ್ತದೆ. ಈ ಮಾರ್ಗದಲ್ಲಿ ಅಪ್ಸರೆಯರು ಅವನನ್ನು ತಮ್ಮ ಹೆಗಲಮೇಲೆ ಹೊತ್ತು ಸಾಗುತ್ತಾರೆ. 3. ಅತ್ಯಂತ ಮೇಲಿನ ಪಟ್ಟಿಕೆಯಲ್ಲಿ ವೀರನು ಸ್ವರ್ಗಲೋಕದ ಮಂಟಪದೊಳಗೆ ಸಿಂಹಾಸನದಲ್ಲಿ ಕುಳಿತಿರುವಂತೆ ಚಿತ್ರಿಸಲಾಗುತ್ತದೆ. ಅಪ್ಸರೆಯರು ದ್ವಾರಪಾಲಕರಂತೆ ಅವನನ್ನು ಸೇವಿಸುತ್ತಿರುತ್ತಾರೆ. ಈ ಭವನದಲ್ಲಿ ವೀರನನ್ನು ಬಿಟ್ಟರೆ ಬೇರೆ ಯಾರೂ ಅವನಿಗಿಂತ ಮೇಲಿನ ವ್ಯಕ್ತಿಗಳನ್ನು ಚಿತ್ರಿಸಲಾಗಿಲ್ಲ (ಚಿತ್ರ-1).

ಅಂದರೆ ರಾಷ್ಟ್ರಕೂಟರ ಕಾಲದ ವೀರಗಲ್ಲುಗಳು ನಮಗೆ ಆ ಕಾಲದ ವೀರಪೂಜೆಯ ಕಲ್ಪನೆಯನ್ನು ಕಟ್ಟಿಕೊಡುತ್ತವೆ. ಅಷ್ಟೇ ಅಲ್ಲ, ವೀರಪೂಜೆಯ ಕೇಂದ್ರ ವಸ್ತುವಾದ ವೀರಗಲ್ಲುಗಳ ಮೇಲೆ ಕೆತ್ತಿರುವ ಶಿಲ್ಪಗಳು ಅದನ್ನು ಪೂಜಿಸುವ ಜನರಿಗೆ ವೀರಸ್ವರ್ಗದ ಕಲ್ಪನೆಯನ್ನು ಕಟ್ಟಿಕೊಡುವ ಕೆಲಸವನ್ನೂ ಮಾಡಿದವು ಎಂಬುದು ಮುಖ್ಯ. ಅದಕ್ಕಿಂತ ಮುಖ್ಯವಾಗಿ ಭಾರತೀಯರ ಲೋಕಕಲ್ಪನೆಯನ್ನು ವೀರಸ್ವರ್ಗಕ್ಕೆ ಅಳವಡಿಸಿ ದೃಶ್ಯರೂಪದಲ್ಲಿ ಒಂದು ಕಲ್ಲಿನ ಹಲಗೆಯ ಮೇಲೆ ಮೂರ್ತೀಕರಿಸುವ ಸಮರ್ಥವಾದ ಕೆಲಸವನ್ನು ಈ ಶಿಲ್ಪಿಗಳು ನಡೆಸಿರುವುದು ಗಮನಾರ್ಹ. ವೀರಗಲ್ಲುಗಳು ಭೂಮಿ, ಅಂತರಿಕ್ಷ ಹಾಗೂ ಸ್ವರ್ಗ ಎಂಬ ಮೂರು ಲೋಕಗಳನ್ನು ಸಾಂಕೇತಿಕವಾಗಿ ತೋರಿಸುತ್ತವೆ ಹಾಗೂ ಕೆಳಗಿನಿಂದ ಮೇಲಿನ ಲೋಕಗಳಿಗೆ ನಡೆಯುವ ವೀರನ ಆರೋಹಣವನ್ನು ಕಲ್ಲಿನ ಮೇಲೆ ಅಭಿನಯಿಸಿ ತೋರಿಸುತ್ತವೆ. ಬಹುಶಃ ವೀರಗಲ್ಲುಗಳ ಕಲೆಯ ಇತಿಹಾಸದಲ್ಲಿ ಇದೊಂದು ಕಲಾಕಾರರ ವಿಶೇಷ ಸಾಧನೆ ಎನ್ನಬಹುದು. ಕೆಳಗಿನ ಮೊದಲನೆ ಪಟ್ಟಿಕೆಯು ಭೂಲೋಕವನ್ನು ಪ್ರತಿನಿಧಿಸುತ್ತಲೇ ಭಾರತೀಯರ ಲೋಕ ಕಲ್ಪನೆಯಲ್ಲಿ ಭೂಲೋಕದ ಸ್ಥಾನವನ್ನೂ ಸೂಚಿಸುತ್ತದೆ. ಈ ಲೋಕದಲ್ಲಿ ವೀರನ ಮರಣಕ್ಕೆ ಕಾರಣವಾದ ಚಾರಿತ್ರಿಕ ಘಟನೆಯನ್ನು ಚರಿತ್ರೆ ನಡೆಯುವ ಭೂಮಿಯಲ್ಲಿ ಕೆತ್ತಲಾಗುತ್ತದೆ. ಮರಣಾನಂತರ ವೀರನು ಅಪ್ಸರೆಯರ ಹೆಗಲ ಮೇಲೆ ಕೈ ಹಾಕಿಕೊಂಡು ನಲಿದಾಡುತ್ತ ಅಂತರಿಕ್ಷದಲ್ಲಿ ಏರಿ ಸಾಗುತ್ತಿರುವ ದೃಶ್ಯವು ಮಧ್ಯದ ಪಟ್ಟಿಕೆಯಲ್ಲಿ ಚಿತ್ರಿತವಾಗಿರುತ್ತದೆ. ಕೆಲವೊಮ್ಮೆ ಆಕಾಶದ ಮೋಡಗಳನ್ನೂ ಚಿತ್ರಿಸಿರುತ್ತಾರೆ. ವೀರಗಲ್ಲಿನ



ಚಿತ್ರ-1

ಗಾತ್ರಕ್ಕನುಗುಣವಾಗಿ ಎರಡರಿಂದ 8–10 ಸುರಕನ್ನಿಕೆಯರವರೆಗೂ ಅಲ್ಲಿ ಚಿತ್ರಿಸಲ್ಪಟ್ಟಿರುತ್ತಾರೆ. ಅವರೆಲ್ಲ ಹೆಗಲ ಮೇಲೆ ಕೈ ಹಾಕಿಕೊಂಡಿರುತ್ತಾರೆ. ಜೊತೆಗೇ ಇತರ ಖೇಚರ ದೇವತೆಗಳಾದ ಗಂಧರ್ವ ಕಿನ್ನರರೂ ಕಾಣಿಸಿಕೊಳ್ಳುತ್ತಾರೆ. ಉಳಿದವರು ಕಲಶ, ಕನ್ನಡಿ, ಚಾಮರ, ಸಂಗೀತವಾದ್ಯಗಳನ್ನು ಹಿಡಿದುಕೊಂಡಂತೆ ತೋರಿಸಿರಬಹುದು. ಅಂದರೆ ಸಂಗೀತ ನೃತ್ಯಗಳ ಸಮೇತ ವೀರನನ್ನು ಅವರು ಹೊತ್ತೊಯ್ಯುತ್ತಿದ್ದಾರೆ ಎಂದು ಸೂಚಿಸಲಾಗಿರುತ್ತದೆ. ಭಾರತೀಯ ಲೋಕಕಲ್ಪನೆಯಲ್ಲಿ ಬರುವ ಅತ್ಯಂತ ಮೇಲಿನ ಸ್ವರ್ಗಲೋಕವು ವೀರಗಲ್ಲುಗಳ ಅತ್ಯಂತ ಮೇಲಿನ ಪಟ್ಟಿಕೆಯಲ್ಲಿ ಮೈದಳೆಯುತ್ತದೆ. ಸ್ವರ್ಗಲೋಕದಲ್ಲಿ ವೀರನೊಬ್ಬನೇ ತಾನೇ ಸ್ವತಃ ಇಂದ್ರನಂತೆ ಸಿಂಹಾಸನದಲ್ಲಿ ಕುಳಿತಿರುವ ದೃಶ್ಯವು ಪೂಜಿಸುವವರಿಗೆ ವೀರನೇ ಈ ಪೂಜಾ ಪಂಥದ ಏಕಮೇವ ಅಧಿದೈವವಾಗಿದ್ದ ಸಂಗತಿಯನ್ನು ಸೂಚಿಸುತ್ತವೆ. ಅಂದರೆ ವೀರಪೂಜೆಯು ಒಂದು ಸ್ವತಂತ್ರ ಕಲ್ಪನೆಯಾಗಿದ್ದು ಅವನು ಮರಣಾನಂತರ ಒಂದು ದೈವವಾಗಿ ಬದಲಾಗುವ ಸಂಗತಿಯನ್ನಷ್ಟೇ ಈ ವೀರಗಲ್ಲುಗಳು ತಿಳಿಸುತ್ತವೆ.

ರಾಷ್ಟ್ರಕೂಟೋತ್ತರ ಕಾಲದಲ್ಲಿ ಬದಲಾಗುವ ಚಿತ್ರಣಗಳು–ಸ್ವರ್ಗದಿಂದ ಶಿವಲೋಕದತ್ತ ವೀರನ ಪಯಣ: 10ನೆಯ ಶತಮಾನದಲ್ಲಿ ವೀರಗಲ್ಲುಗಳ ಚಿತ್ರಣಗಳು ಕುತೂಹಲಕಾರಿಯಾದ ಬದಲಾವಣೆಗಳನ್ನು ತೋರಿಸಲಾರಂಭಿಸುತ್ತವೆ. ಈ ನಿಟ್ಟಿನಿಂದ ನಾವು ಮೂರು ಘಟ್ಟಗಳನ್ನು ಗುರುತಿಸಬಹುದು. ಈ ಘಟ್ಟಗಳನ್ನು ಸ್ಥೂಲವಾಗಿ ಕೆಳಗಿನಂತೆ ಕಾಲಾನುಕ್ರಮಣಿಕೆಯಲ್ಲಿ ಗುರುತಿಸುತ್ತಿದ್ದೇನಾದರೂ ಇದು ಚಿತ್ರಣದ ಬದಲಾವಣೆಯನ್ನು ಗುರುತಿಸುವ ಪ್ರಯತ್ನವಷ್ಟೆ ಆಗಿದೆ. ಏಕೆಂದರೆ ವೀರಗಲ್ಲುಗಳ ಕಾಲದ ಕುರಿತು ಇನ್ನೂ ನಿಖರವಾದ ಅಧ್ಯಯನಗಳು ನಡೆದ ನಂತರವೇ ಅವುಗಳ ಕಾಲಾನುಕ್ರಮಣಿಕೆಯಲ್ಲಿ ನಿಖರತೆ ಸಾಧ್ಯ. ಆದರೆ ಬದಲಾವಣೆ ಈ ನಿಟ್ಟಿನಲ್ಲೇ ಆಗಿದೆ ಎಂಬುದರಲ್ಲಿ ಮಾತ್ರ ಸಂದೇಹವಿಲ್ಲ.

1. ಮೊದಲನೆಯ ಘಟ್ಟವು 10–11ನೆಯ ಶತಮಾನದಲ್ಲಿ ಕಾಣಿಸಿಕೊಳ್ಳುತ್ತದೆ. ಈ ಘಟ್ಟದಲ್ಲಿ ಕ್ರಮೇಣವಾಗಿ ಹೊಸ ಅಂಶಗಳು ಒಂದಾದ ನಂತರ ಒಂದರಂತೆ ಕಾಣಿಸಿಕೊಳ್ಳುತ್ತ ವೀರ ಸ್ವರ್ಗದ ಹೊಸ ಕಲ್ಪನೆಯೊಂದನ್ನು ರೂಪಿಸುವ ಪ್ರಕ್ರಿಯೆಯನ್ನು ನಿದರ್ಶಿಸುತ್ತವೆ. ಈ ಬದಲಾವಣೆಯ ಮೊದಲ ಸೂಚನೆಯು ಅತ್ಯಂತ ಮೇಲಿನ ಪಟ್ಟಿಕೆಯಲ್ಲಿ ಅಂದರೆ ಸ್ವರ್ಗಲೋಕದ ಕಲ್ಪನೆಯಲ್ಲಿ ಕಾಣಿಸಿಕೊಳ್ಳುತ್ತದೆ. ಇಲ್ಲಿ ವೀರನು ಕೇಂದ್ರದಲ್ಲಿ ಕುಳಿತಂತೇ ತೋರಿಸಿದರೂ ಕೂಡ, ಅವನ ಜೊತೆಗೆ ಶಿವ, ವಿಷ್ಣು, ದೇವಿ ಇತ್ಯಾದಿ ದೇವತೆಗಳು ಪ್ರಸ್ತುತರಾಗ ತೊಡಗುತ್ತಾರೆ. ಈ ಘಟ್ಟದಲ್ಲಿ ಶಿಲ್ಪಿಗಳು ಈ ಬದಲಾವಣೆಯನ್ನು ಅನೇಕ ರೀತಿಯಲ್ಲಿ ಪ್ರಯೋಗಿಸಿ ನೋಡಿರುವುದು ಕಂಡುಬರುತ್ತದೆ. ಗದಗ, ಬೆಟಗೇರಿ ಹಾಗೂ ಸುತ್ತಮುತ್ತಲಿನ ಕೆಲವು ವೀರಗಲ್ಲುಗಳಲ್ಲಿ ಸ್ವರ್ಗಲೋಕವನ್ನು ಪ್ರತಿನಿಧಿಸಿದ ಪಟ್ಟಿಕೆಗೂ ಹೊರತಾಗಿ ಒಂದು ಶಿವಲಿಂಗ ಅಥವಾ ವಿಷ್ಣು, ದೇವಿ ಇತ್ಯಾದಿ ದೇವತೆಗಳನ್ನು ಸೇರಿಸುವುದಕ್ಕೆ ಹೆಚ್ಚುವರಿ ಸ್ಥಳವನ್ನು ಕಲ್ಲಿನ ಮೇಲೆ ಉಪಯೋಗಿಸಲಾಗಿದೆ. ಇನ್ನೂ ಕೆಲವು ಉದಾಹರಣೆಗಳಲ್ಲಿ ಸ್ವರ್ಗಲೋಕದಲ್ಲೇ ವೀರನು ಮಧ್ಯದಲ್ಲಿ ಕುಳಿತಿದ್ದರೆ ಒಂದು ಮೂಲೆಯಲ್ಲಿ ಒಂದು ಲಿಂಗವನ್ನು ಅಥವಾ ಶಿವಾಲಯವನ್ನು ಕೆತ್ತಲಾಗಿದೆ (ಚಿತ್ರ –2). ಅದರೊಳಗೆ ವೀರನು ಕೈಮುಗಿದು ಕುಳಿತಿರುವ ಚಿತ್ರಗಳೂ ಕಾಣಿಸಿಕೊಳ್ಳುತ್ತವೆ. ಕೆಲವೊಮ್ಮೆ ಮೇಲೆ ಮತ್ತೊಂದು ಪ್ರತ್ಯೇಕ ಪಟ್ಟಿಕೆಯನ್ನು ಕೆತ್ತಿ ಅದರಲ್ಲಿ ವೀರನು ಶಿವಲಿಂಗದ ಎದುರು ಕೈಮುಗಿದು ಕುಳಿತಂತೆ ತೋರಿಸಲಾಗಿದೆ. ಅಂದರೆ ವೀರಪೂಜೆಯ ಪರಿಕಲ್ಪನೆಯಲ್ಲಿ

ಶಿವಲಿಂಗವು ತನ್ನ ಪ್ರಸ್ತುತತೆಯನ್ನು ಹೇಗೆ ಗಳಿಸಬೇಕೆಂಬುದರ ಕುರಿತು ಈ ಶಿಲ್ಪ ಸಂಪ್ರದಾಯಕ್ಕೆ ಒಂದು ಮಾದರಿ ಇನ್ನೂ ಸಿಕ್ಕಿಲ್ಲ.

2. ಈ ಘಟ್ಟದಲ್ಲಿ ಕೊನೆಗೂ ಶಿವಲಿಂಗವನ್ನು ಚಿತ್ರಿಸುವ ಕುರಿತು ಒಂದು ಮಾದರಿ ರೂಪುಗೊಳ್ಳುತ್ತದೆ. 11ನೆಯ ಶತಮಾನದಲ್ಲಿ ಈ ಮಾದರಿ ಅಂತಿಮವಾಗುತ್ತದೆ. ಈ ಮಾದರಿಯ ಪ್ರಕಾರ ಸ್ವರ್ಗಲೋಕದ ಪಟ್ಟಿಕೆಯಲ್ಲಿ ಶಿವಲಿಂಗವು ಮಧ್ಯದಲ್ಲಿ ಚಿತ್ರಿತವಾಗುತ್ತದೆ. ಪಟ್ಟಿಕೆಯ ಎಡಪಾರ್ಶ್ವದಲ್ಲಿ ಒಂದು ನಂದಿಯ ಚಿತ್ರವಿದ್ದರೆ ಬಲಭಾಗದಲ್ಲಿ ವೀರನು ಕೈಮುಗಿದು ಕುಳಿತಿರುವ ಚಿತ್ರವಿರುತ್ತದೆ. ಕೆಲವೊಮ್ಮೆ ಲಿಂಗದ ಬಲಭಾಗಕ್ಕೆ ಆಚಾರ್ಯನೊಬ್ಬ ಪೂಜೆ ನಡೆಸುವ ದೃಶ್ಯವಿರುತ್ತದೆ. ಲಿಂಗದ ಎದುರು ನಂದಿ ಕೂಡ ಇರಬಹುದು (ಚಿತ್ರ-3). ಅಂದರೆ ವೀರನು ದೇವಲೋಕದ ಕೇಂದ್ರದಿಂದ ಅಂಚಿಗೆ ಸರಿಯುವುದನ್ನು ಕಾಣುತ್ತೇವೆ. ಈ ಮೇಲಿನ ಎರಡೂ ಘಟ್ಟಗಳ ಬದಲಾವಣೆಗಳಲ್ಲಿಯೂ ವೀರನು ಸುರಾಂಗನೆಯರ ಹೆಗಲ ಮೇಲೆ ಬಾಹುಗಳನ್ನು ಬಳಸಿ ದೇವಲೋಕಕ್ಕೆ ಹೋಗುವ ಚಿತ್ರಣವಿರುತ್ತಿತ್ತು.



ಚಿತ್ರ-2

3. ಮೂರನೆಯ ಘಟ್ಟವು 12ನೆಯ ಶತಮಾನದಲ್ಲಿ ಕಾಣಿಸಿಕೊಳ್ಳುತ್ತದೆ. ಇದರ ಮೂರನೆಯ ಘಟ್ಟದಲ್ಲಿ ವೀರನು ಒಂದು ದೇವ ವಿಮಾನದಲ್ಲಿ ಕುಳಿತು ಸ್ವರ್ಗಕ್ಕೆ ಪಯಣಿಸುತ್ತಿರುವಂತೆ ತೋರಿಸುವ ಪದ್ಧತಿ ಜನಪ್ರಿಯವಾಯಿತು. ಈ ದೇವವಿಮಾನದೊಳಗೆ ವೀರನು ಕೈ ಮುಗಿದು ಪದ್ಮಾಸನದಲ್ಲಿ ಕುಳಿತಿರುತ್ತಾನೆ. ವಿಮಾನವನ್ನು ಸುರಾಂಗನೆಯರು ಹೊತ್ತೊಯ್ಯುತ್ತಿರುತ್ತಾರೆ ಅಥವಾ ವಿಮಾನದ ಸುತ್ತ ನೆರೆದು ಸಂಗೀತ ನೃತ್ಯಗಳೊಂದಿಗೆ ಅವರೂ ಸ್ವರ್ಗಕ್ಕೆ ಹಾರುತ್ತಿರುತ್ತಾರೆ. ಕೆಲವೊಮ್ಮೆ ಈ ದೃಶ್ಯವನ್ನು ಎರಡು ಅಥವಾ ಮೂರು ಪಟ್ಟಿಕೆಗಳನ್ನಾಗಿ ವಿಂಗಡಿಸಿ ಮಧ್ಯದ ಪಟ್ಟಿಕೆಯಲ್ಲಿ ವಿಮಾನವನ್ನು ತೋರಿಸಿರುತ್ತಾರೆ. ಹಾಗೂ ಅದರ ಮೇಲೆ ಮತ್ತು ಕೆಳಗೆ ಖೇಚರರು ಸಂಭ್ರಮದಿಂದ ಸಾಗುತ್ತಿರುತ್ತಾರೆ. ಎಲ್ಲಿಯೂ ಅಪ್ಪಿ ತಪ್ಪಿಯೂ ಕೂಡ ಯಾವುದೇ ಅಪ್ಸರೆಯು ವೀರನ ದೇಹದ ಭಾಗಗಳನ್ನು ಸ್ಪರ್ಶಿಸುತ್ತಿರುವಂತೆ ತೋರಿಸುವುದಿಲ್ಲ. ಶಿವಮೊಗ್ಗ ಹಾಗೂ ಉತ್ತರ ಕನ್ನಡದ ಮಲೆನಾಡಿನ ಪ್ರದೇಶದಲ್ಲಿ 13ನೆಯ ಶತಮಾನದ ನಂತರ ಕಾಲದಲ್ಲಿ ವೀರಗಲ್ಲುಗಳು 6–7 ಶಿಲಾ ಪಟ್ಟಿಕೆಗಳನ್ನು ಒಳಗೊಂಡು, 10 ಅಡಿಗೂ ಮಿಕ್ಕಿ ಎತ್ತರವಾಗಿದ್ದು ಭವ್ಯವಾಗಿ ರಚನೆಗೊಂಡವು. ಅವುಗಳಲ್ಲಿ ಒಂದು ಪಟ್ಟಿಕೆಯಲ್ಲಿ ವೀರನನ್ನು ಮೇನೆಯೊಳಗೆ ಹೊತ್ತುಕೊಂಡು ಹೋಗುವ



ಚಿತ್ರ–3



ಚಿತ್ರ–4

ದೃಶ್ಯ ಕೂಡಾ ಇರುತ್ತದೆ (ಚಿತ್ರ 4). ಈ ದೃಶ್ಯದ ಮಹತ್ವವೇನು ಎಂಬುದು ಸ್ಪಷ್ಟವಿಲ್ಲ. ಕೆಲವೊಮ್ಮೆ ಈ ಪಟ್ಟಿಕೆಯು ಯುದ್ಧ ದೃಶ್ಯಗಳ ಜೊತೆಗೆ ಬಂದರೆ ಇನ್ನೂ ಕೆಲವು ವೀರಗಲ್ಲುಗಳಲ್ಲಿ ಅಂತರಿಕ್ಷದಲ್ಲಿ ವಿಮಾನಕ್ಕಿಂತಲೂ ಮೇಲೆ ಬರುತ್ತದೆ.

ಇಂಥ ವೀರನು ಶಿವಭಕ್ತನಂತೆ ಚಿತ್ರಿತನಾಗಿರುತ್ತಾನೆ. ಅವನ ಮರಣದ ಅಂತಿಮ ಗತಿಯೇ ಶಿವ ಸಾಯುಜ್ಯ ಅಥವಾ ಶಿವಲೋಕಗಮನ. ಮೇಲಿನ ಪಟ್ಟಿಕೆಯಲ್ಲಿ ಸುರಕನ್ನಿಕೆಯರೊಡನೆ ರಮಿಸುವ ಕಲ್ಪನೆಗೆ ಬದಲಾಗಿ ಶಿವಸಾನಿಧ್ಯದಲ್ಲಿ ಸ್ಥಿರವಾಗಿ ನೆಲೆಸುವ ಕಲ್ಪನೆಯು ಈ ಘಟ್ಟದಲ್ಲಿ ಅಂತಿಮ ಹಂತವನ್ನು ತಲುಪುತ್ತದೆ. ಈ ಘಟ್ಟದಲ್ಲಿ ಕೆಲವೊಂದು ವೀರಗಲ್ಲುಗಳಲ್ಲಿ ಮೇಲಿನ ಪಟ್ಟಿಕೆಯಲ್ಲಿ ಜಿನಲೋಕ ಅಥವಾ ವಿಷ್ಣುಲೋಕಗಳೂ ಕಾಣಿಸಿಕೊಳ್ಳುತ್ತವೆ ಎಂಬುದೂ ಗಮನಾರ್ಹ. ಆದರೆ ಈ ಕಾಲದ ಬಹುಪಾಲು ವೀರಗಲ್ಲುಗಳಲ್ಲಿ ಶಿವಲೋಕದ ಚಿತ್ರಣವೇ ಕಂಡುಬರುತ್ತದೆ ಎಂಬುದು ಕುತೂಹಲಕಾರಿಯಾಗಿದೆ. ಈ ಘಟ್ಟದಲ್ಲಿ ಮೇಲಿನ ಪಟ್ಟಿಕೆಯ ವಿನ್ಯಾಸದಲ್ಲಿ ಕೆಲವೊಂದು ಮಾರ್ಪಾಡುಗಳು ಆಗಿರುವುದನ್ನು ಕೂಡ ನೋಡಬಹುದು: ಮಧ್ಯ ಭಾಗದಲ್ಲಿರುವ ಶಿವಲಿಂಗಕ್ಕೆ ಬದಲಾಗಿ ಶಿವ ದೇವಾಲಯವನ್ನು ಚಿತ್ರಿಸಲಾಗುತ್ತದೆ. ದೇವಾಲಯದ ಕಂಭಗಳು. ಶಿಖರ ಸಮಕಾಲೀನ ದೇವಾಲಯದ ಕಂಭಗಳ ಮಾದರಿಯಲ್ಲೇ ಇರುತ್ತವೆ. ದೇವಾಲಯದ ಗರ್ಭಗೃಹದೊಳಗೆ ಶಿವಲಿಂಗದ ಬಲಭಾಗದಲ್ಲಿ ಒಬ್ಬ ಯತಿ/ಪೂಜಾರಿ ನಿಂತುಕೊಂಡು ಲಿಂಗಕ್ಕೆ ಆರತಿ ಎತ್ತುತ್ತಿರುತ್ತಾನೆ. ಕೆಲವೊಮ್ಮೆ ಬಲಭಾಗದ ಸಂದಿಗೂ ಒಂದು ಮಂಟಪ

ಕಾಣಿಸಲಾಗಿರುತ್ತದೆ. ಹಾಗೂ ಎಡಭಾಗದ ವೀರನಿಗೂ ಮಂಟಪ ಕಾಣಿಸಿಕೊಳ್ಳುತ್ತದೆ. ಈ ಮಂಟಪಗಳ ನಡುವೆ ಒಬ್ಬ ಅಥವಾ ಕೆಲವರು ದೇವಾಲಯದ ಅಂಕಣಕ್ಕೆ ತೂಗುವ ಭೇರಿಯನ್ನು ಬಾರಿಸುತ್ತಿರುತ್ತಾರೆ, ಶಂಖವನ್ನು ಊದುತ್ತಿರುತ್ತಾರೆ. ಇದೀ ಸಂದರ್ಭವೇ ಶಿವದೇವಾಲಯದಲ್ಲಿ ಪೂಜೆ ನಡೆಯುವ ಘಟನೆಯನ್ನು ಚಿತ್ರಿಸುತ್ತಿದೆಯೆಂಬುದರಲ್ಲಿ ಸಂದೇಹವಿಲ್ಲ.

ಶಾಸನಗಳ ವರ್ಣನೆಗಳಲ್ಲಿ ಬದಲಾವಣೆಯ ಜಾಡು: ವೀರಗಲ್ಲುಗಳಲ್ಲಿ ಕಾಣಿಸಿಕೊಳ್ಳುವ ಈ ಬದಲಾವಣೆಗಳು ವೀರಗಲ್ಲಿನ ಶಾಸನಗಳಲ್ಲೂ ತಕ್ಕಮಟ್ಟಿಗೆ ದಾಖಲಾಗಿವೆ. ಈ ಕುರಿತು ಆರ್.ಶೇಷಶಾಸ್ತ್ರಿಯವರ **ಕರ್ನಾಟಕದ ವೀರಗಲ್ಲುಗಳು** ಎಂಬ ಗ್ರಂಥವು ಶಾಸನಗಳ ವಿವರದ ಕುರಿತು ತುಂಬಾ ವಿಸ್ತೃತವಾದ ಮಾಹಿತಿಯನ್ನು ನೀಡುತ್ತದೆ.[19] ಒಟ್ಟಾರೆಯಾಗಿ ಶಾಸನದ ವರ್ಣನೆಗಳಲ್ಲಿ ವೀರನ ಮರಣೋತ್ತರ ಗತಿಯನ್ನು ಕುರಿತು ಶಿವಲೋಕದ ಕಲ್ಪನೆಯನ್ನು ಬಿಟ್ಟರೆ ಶಿಲ್ಪಗಳಿಗೆ ಸಂವಾದಿಯಾದ ಇತರ ಬದಲಾವಣೆಗಳನ್ನು ಗುರುತಿಸುವುದು ಕಷ್ಟಸಾಧ್ಯ. ಶಾಸನದ ವರ್ಣನೆಗಳು ಸಂಸ್ಕೃತ ಹಾಗೂ ಕನ್ನಡ ಸಾಹಿತ್ಯದ ಚಿತ್ರಣಗಳನ್ನು ಅವಲಂಬಿಸಿವೆ ಹಾಗೂ ಇಂಥ ಚಿತ್ರಣಗಳು ರಾಷ್ಟ್ರಕೂಟ ಕಾಲಕ್ಕಾಗಲೇ ತಮ್ಮ ಪರಿಪೂರ್ಣ ರೂಪವನ್ನು ತಳೆದಿದ್ದವು. ಮಹಾಭಾರತದ ಅಂಬರೀಷನ ಕಥೆಯಲ್ಲಿಯೇ ಇಂಥ ವರ್ಣನೆಗಳು ಸಿದ್ಧವಾಗಿವೆ. ಅಲ್ಲಿ ವೀರಮರಣವನ್ನಪ್ಪಿದ ಸುದೇವನೆಂಬ ವೀರನನ್ನು ಅಪ್ಸರೆಯರು ಸುಂದರವಾದ ವಿಮಾನದಲ್ಲಿ ಕುಳ್ಳಿರಿಸಿಕೊಂಡು ಸ್ವರ್ಗಕ್ಕೆ ಒಯ್ದರು.[20] ನಂತರ ಪ್ರಚಲಿತದಲ್ಲಿ ಬಂದ ಪುರಾಣಗಳು ಈ ಚಿತ್ರಣವನ್ನು ಜನಪ್ರಿಯಗೊಳಿಸಿದವು.[21] ಈ ವರ್ಣನೆಗಳು ಕನ್ನಡ ಶಾಸನಗಳಲ್ಲೂ ಉದ್ದಕ್ಕೂ ಕಾಣಿಸಿಕೊಳ್ಳುತ್ತವೆ. ಉದಾಹರಣೆಗೆ ಸೊರಬದ ಮನಮನೆಯಲ್ಲಿರುವ ಸಾ.ಶ. ಸುಮಾರು 800 ರ ವೀರಗಲ್ಲಿನಲ್ಲಿ ಸತ್ತ ವೀರನನ್ನು ಇಂದ್ರನ ಬೆಸದಿಂದ ಬಂದ ಸುರವಧುಗಳು ಖೇಚರರು ವಿಮಾನದಲ್ಲಿ ಸುರಲೋಕಕ್ಕೆ ಒಯ್ದರು ಎಂಬ ಹೇಳಿಕೆ ಬರುತ್ತದೆ.[22] ಅದೇ ಪ್ರದೇಶದಲ್ಲಿ ಸುಮಾರು 350 ವರ್ಷಗಳ ನಂತರವೂ ಈ ಚಿತ್ರಣವು ಶಾಸನಗಳಲ್ಲಿ ಕಾಣಿಸಿಕೊಳ್ಳುತ್ತದೆ. ಸೊರಬದ 1165ರ ಶಾಸನವೊಂದರಲ್ಲಿ ವೀರ ಸುಭಟನನ್ನು ಸುರ ಕನ್ನೆಯರು "ಪುಷ್ಪ ವಿಮಾನದಲ್ಲಿ ಬೆಳುಗೊಡೆ, ಕಲಶ, ಕನ್ನಡಿ, ತೋರಣ, ಸುರ ದುಂದುಭಿ, ಚಾಮರಗಳನ್ನು ಹಿಡಿದು ಸಾಗಿಸಿ ಸುರಲೋಕದ ಸುಖವನ್ನು ತೋರಲಿಕ್ಕೆಂದು ಅಮರಾವತಿ ಪುರವನ್ನು ಹೊಕ್ಕರು" ಎಂದು ವರ್ಣಿಸಲಾಗಿದೆ.[23] ಸಾಧಾರಣವಾಗಿ ನಂತರದ ಶಾಸನಗಳಲ್ಲಿ ಸುರಲೋಕ, ದೇವಲೋಕ, ಸ್ವರ್ಗಲೋಕ ಇತ್ಯಾದಿಯಾಗಿ ಈ ಲೋಕವನ್ನು ಹೆಸರಿಸಲಾಗುತ್ತದೆ. ಅವನನ್ನು ಹೊತ್ತೊಯ್ಯುವ ಖೇಚರರನ್ನು ಸುರಕನ್ನಿಕೆಯರು, ದೇವಗಣಿಕೆಯರು, ಅಮರದೇವಕನ್ನೆಯರು, ಸುರಕಾಂತೆಯರು, ಸುರಗಣ, ದೇವಗಣ, ಅಪ್ಸರೆಯರು, ಇತ್ಯಾದಿಯಾಗಿ ಕರೆಯಲಾಗಿದೆ.[24] ಇಂಥ ಸಿದ್ಧವರ್ಣನೆಗಳಿಗೆ ಹೊರತಾಗಿಯೂ, 11ನೆಯ ಶತಮಾನದ ನಂತರದ ಶಾಸನಗಳಲ್ಲಿ ಸುರಲೋಕಕ್ಕೆ ಬದಲಾಗಿ ಶಿವಲೋಕವು ಕಾಣಿಸಿಕೊಳ್ಳತೊಡಗುತ್ತದೆ.[25] ಇಷ್ಟಾಗಿಯೂ ಸುರಲೋಕ ಕಲ್ಪನೆಯು ಮರೆಯಾಗುವುದಿಲ್ಲ. ಬದಲಾಗಿ ಶಿವಲೋಕವೂ ಸುರಲೋಕದ ಒಂದು ಪ್ರಕಾರವೋ ಎಂಬಂತೆ ಕಾಣಿಸಿಕೊಳ್ಳುತ್ತದೆ. ಅಷ್ಟಾಗಿಯೂ ಇದು ಕುತೂಹಲಕರವಾದ ಬದಲಾವಣೆ ಎನ್ನಲಡ್ಡಿಯಿಲ್ಲ. ಏಕೆಂದರೆ ವೀರಗಲ್ಲು ಶಿಲ್ಪಗಳಲ್ಲಿ ಆದ ಬದಲಾವಣೆಗೆ ಈ ವರ್ಣನೆಯು ಸಂವಾದಿಯಾಗಿದೆ.

ಒಂದು ಶಾಸನದ ಪ್ರಕಾರ ವೀರನನ್ನು ಸುರಕನ್ನಿಕೆಯರು ವಿಮಾನದಲ್ಲಿ ಕುಳ್ಳಿರಿಸಿಕೊಂಡು ಅತ್ಯುನ್ನತ ಸ್ವರ್ಗವಾದ ಕೈಲಾಸಪುರಕ್ಕೆ ಒಯ್ದರು ಹಾಗೂ ಮಹೇಶ್ವರನ ಪಾದಗಳನ್ನು ಅವನಿಗೆ ತೋರಿಸಿ ವೀರಾಸನದಲ್ಲಿ ಅವನೆದುರಿಗೆ ಕುಳ್ಳಿರಿಸಿದರು.[26] ಈ ವರ್ಣನೆಯ ಪ್ರಕಾರ ಶಿವಲೋಕವು ಇಂದ್ರನ ಸ್ವರ್ಗಕ್ಕಿಂತ ಉತ್ತಮವಾದುದು ಹಾಗೂ ಮೇಲೆ ಇರುವಂಥದ್ದು. 12ನೆಯ ಶತಮಾನದ ನಂತರ ವೀರನು ಕೈಲಾಸವಾಸಿಯಾಗಿ ಶಿವನ ಸಾಮೀಪ್ಯವನ್ನು ಹೊಂದುವುದೇ ಅವನ ಅಂತಿಮ ಗತಿ ಎಂಬ ಕಲ್ಪನೆ ಗಟ್ಟಿಗೊಂಡಿದ್ದನ್ನು ವೀರಗಲ್ಲು ಶಿಲ್ಪಗಳು ಸ್ಪಷ್ಟಪಡಿಸುತ್ತವೆ. ಅಂದರೆ ಸ್ವರ್ಗಲೋಕದ ಬದಲಾಗಿ ಶಿವಲೋಕವು ವೀರನ ಅಂತಿಮ ಗತಿಯಾಗಿ ಬದಲಾಗುತ್ತದೆ.

ಶಾಸನಗಳ ವಿಷಯವನ್ನು ಗಮನಿಸಿದಾಗ ಈ ಮೇಲಿನಂತೆ ಪರಲೋಕದ ಗ್ರಹಿಕೆಯ ಬದಲಾವಣೆ ನಡೆದುದರ ಸೂಚನೆ ಸಿಗುತ್ತದೆ. ಹಾಗೂ ಶಾಸನ ಶಿಲ್ಪಗಳಲ್ಲಿಯೂ ಅತ್ಯಂತ ಮೇಲಿನ ಫಲಕದಲ್ಲಿ ಶಿವಲಿಂಗದ ಚಿತ್ರಣ ಒಂದು ಸಾಮಾನ್ಯ ಸಂಗತಿಯಾಗಿ ಕಾಣಿಸುವುದರಿಂದ ವೀರನ ಅಂತಿಮ ಗತಿಯ ಕುರಿತು ಇಂಥದೊಂದು ಬದಲಾವಣೆಯು 10ನೆಯ ಶತಮಾನದ ನಂತರ ಕಾಣಿಸಿಕೊಂಡಿತೆಂದು ನಿರ್ಣಯಿಸಬಹುದು. ಆದರೆ ಇಲ್ಲಿ ಕುತೂಹಲಕಾರಿಯಾದ ಸಂಗತಿಯೆಂದರೆ ವೀರಗಲ್ಲು ಶಿಲ್ಪಗಳ ವಿವರವು ಇಷ್ಟನ್ನೇ ಹೇಳುವುದಿಲ್ಲ. ವೀರಗಲ್ಲುಗಳ ಅತ್ಯಂತ ಮೇಲಿನ ಶಿಲ್ಪ ಪಟ್ಟಿಕೆಯ ವಿವರಗಳು ಶಾಸನಗಳು ತಿಳಿಸದ ಮತ್ತೇನನ್ನೋ ಹೇಳುತ್ತಿವೆ ಎಂಬುದು ಸ್ಪಷ್ಟ. ವೀರನು ಶಿವಲೋಕ ಸೇರಿದ್ದಾನೆ ಎಂದು ತೋರಿಸಲು ಶಿವಲಿಂಗವಷ್ಟೇ ಸಾಕಾಗಿತ್ತು. ಬದಲಾಗಿ ಶಿಲ್ಪಗಳು ದೇವಾಲಯ ವಾಸ್ತು, ಶೈವ ಪೂಜಾರಿ, ಪೂಜಾ ವಿಧಾನ ಇತ್ಯಾದಿಗಳನ್ನೆಲ್ಲ ತೋರಿಸುವ ಅಗತ್ಯವಿರಲಿಲ್ಲ. ಅಂದರೆ ಈ ಪಟ್ಟಿಕೆಯು ತೋರಿಸುವುದು ಶಿವಲೋಕವನ್ನಲ್ಲ, ಬದಲಾಗಿ ಶಿವ ದೇವಾಲಯವನ್ನು. ಅದರಲ್ಲೂ ಈ ದೇವಾಲಯವನ್ನು ಸಮಕಾಲೀನ ಶೈವ ದೇವಾಲಯದಂತೇ ಚಿತ್ರಿಸಲಾಗಿರುತ್ತದೆ. ಅದರ ಕಂಭಗಳು, ಶಿಖರ, ಇತ್ಯಾದಿಗಳು ವೀರಗಲ್ಲನ್ನು ನಿಲ್ಲಿಸಿದ ಕಾಲದಲ್ಲಿ ಹೇಗಿದ್ದವೋ ಅದನ್ನು ಅನುಕರಿಸಿರುತ್ತವೆ. ಇದಕ್ಕೆ ಒಂದು ವಿವರಣೆ ಸಾಧ್ಯವಿದೆ: ಅದೆಂದರೆ ಶಿಲ್ಪಿಗಳು ಕಾಣದ ಶಿವಲೋಕವನ್ನು ತಾವು ಕಂಡ ದೇವಾಲಯದ ಹಾಗೇ ಕಲ್ಪಿಸಿಕೊಂಡಿರಬಹುದು. ಆದರೆ ಹಾಗಿದ್ದ ಪಕ್ಷದಲ್ಲಿ ಯತಿಯೊಬ್ಬರು ಲಿಂಗಕ್ಕೆ ಪೂಜೆ ನಡೆಸುವ ಸನ್ನಿವೇಶವನ್ನು ಚಿತ್ರಿಸುವ ಅಗತ್ಯವೇನಿತ್ತು? ದೇವಾಲಯದ ಮಾಡಿಗೆ ಕಟ್ಟಿದ ಭೇರಿಗಳನ್ನು ಬಾರಿಸುವ, ಆರತಿ ಎತ್ತುವ, ಶಂಖ ಊದುವ ಚಿತ್ರಗಳು ಏಕೆ ಬೇಕಿದ್ದವು? ಅಂದರೆ ಶಿಲ್ಪಿಗಳು ತಮ್ಮ ಕಾಲದ ಶಿವದೇವಾಲಯಗಳಲ್ಲಿ ಪೂಜೆ ನಡೆಯುವ ದೃಶ್ಯವನ್ನು ತೋರಿಸಲು ಇಲ್ಲಿ ಪ್ರಯತ್ನಿಸುತ್ತಿದ್ದಾರೆ ಎಂಬುದು ಸ್ಪಷ್ಟ. ವೀರನು ದೇವಾಲಯದ ಒಂದು ಪಾರ್ಶ್ವದಲ್ಲಿ ಕುಳಿತು ಈ ಪೂಜೆಗೆ ಸಾಕ್ಷಿಯಾಗಿದ್ದಾನೆ ಹಾಗೂ ಪೂಜೆಯಲ್ಲಿ ಭಾಗಿಯಾಗಿದ್ದಾನೆ. ಈ ಪಟ್ಟಿಕೆಯು ಶಿವಲೋಕವನ್ನು ತೋರಿಸುವ ಉದ್ದೇಶವನ್ನು ಹೊತ್ತಿಲ್ಲ. ಹಾಗಾದ ಪಕ್ಷದಲ್ಲಿ ಈ ಪಟ್ಟಿಕೆಯನ್ನು ಅರ್ಥೈಸುವುದು ಹೇಗೆ?

ವೀರತ್ವ ಹಾಗೂ ಮಧ್ಯಕಾಲೀನ ಕರ್ನಾಟಕದ ಶೈವ ದೇವಾಲಯಗಳ ಸಂಬಂಧ: ಪ್ರಸ್ತುತ ಲೇಖನದಲ್ಲಿ ಮಂಡಿಸುವ ವಾದವೆಂದರೆ ವೀರ ಪೂಜಾ ಪಂಥವು ಮಧ್ಯಕಾಲದ ಶೈವ ದೇವಾಲಯಗಳ ಪೂಜಾ ಪಂಥದ ಒಂದು ಅಂಗವಾಗುವುದನ್ನು ನಾವು ಈ ಮೇಲಿನ ಪಟ್ಟಿಕೆಯ ಚಿತ್ರಣಗಳಲ್ಲಿ ಕಾಣುತ್ತಿದ್ದೇವೆ. ಮಧ್ಯಕಾಲದ ಕರ್ನಾಟಕದಲ್ಲಿ 900ದ

13ನೆಯ ಶತಮಾನದವರೆಗೆ ಶೈವ ಪೂಜಾ ಪಂಥವು ಆಗಮಿಕ ವಿಧಿವಿಧಾನಗಳನ್ನಳವಡಿಸಿಕೊಂಡ ದೇವಾಲಯಗಳ ಮೂಲಕ ಜನಪ್ರಿಯವಾಯಿತು. ಎಷ್ಟರ ಮಟ್ಟಿಗೆಂದರೆ ದಕ್ಷಿಣ ಕರ್ನಾಟಕ ಹೊಯ್ಸಳರ ಪ್ರದೇಶವನ್ನು ಹೊರತುಪಡಿಸಿದರೆ ಉಳಿದ ಪ್ರದೇಶಗಳಲ್ಲಿ ವೈಷ್ಣವ ಪೂಜಾಪಂಥವು ಶೈವ ದೇವಾಲಯಗಳ ಒಂದು ಭಾಗವಾಗಿ ಬಹುತೇಕ ಮಾರ್ಪಟ್ಟಿತು. ಶಕ್ತಿ ಪೂಜೆ ಕೂಡ ಶೈವ ದೇವಾಲಯಗಳ ಆಶ್ರಯದಲ್ಲೇ ಅಸ್ತಿತ್ವ ಕಂಡುಕೊಂಡಿತು. ಈ ಶೈವ ದೇವಾಲಯಗಳನ್ನು ಜನಪ್ರಿಯಗೊಳಿಸುವಲ್ಲಿ ಕಾಳಾಮುಖ ಆಚಾರ್ಯರು ನಿರ್ಣಾಯಕ ಶಕ್ತಿಗಳಾಗಿದ್ದರು. ಕಾಳಾಮುಖ ಯತಿಗಳು ಇಂಥ ದೇವಾಲಯಗಳನ್ನು ಸ್ಥಾಪಿಸುವಲ್ಲಿ, ಅವಕ್ಕೆ ದಾನಗಳನ್ನು ತರುವಲ್ಲಿ ಹಾಗೂ ದೇವಾಲಯ ವಾಸ್ತು ಹಾಗೂ ಸಂಸ್ಥೆಯನ್ನು ಅಭೂತಪೂರ್ವವಾಗಿ ಬೆಳೆಸುವಲ್ಲಿ ಮುಖ್ಯ ಪಾತ್ರ ವಹಿಸಿದ್ದರು. ಅವರೇ ದಾನಗಳನ್ನು ಸ್ವೀಕರಿಸಿ ದೇವಾಲಯಗಳನ್ನು ನಿರ್ವಹಿಸುತ್ತಿದ್ದರು. ಕಾಳಾಮುಖ ಸಂಪ್ರದಾಯವು ಮೂಲತಃ ಆಗಮಿಕ ಸಂಪ್ರದಾಯದ ಭಾಗವಾಗಿದ್ದು ದೇವಾಲಯ ಪೂಜೆಯ ವಿಧಿವಿಧಾನಗಳನ್ನು ನಿರ್ದೇಶಿಸುವ ನಿರ್ವಹಿಸುವ ಕೆಲಸ ಮಾಡಿತು.[27] ಈ ದೇವಾಲಯಗಳು ಕಾಳಾಮುಖ ಸ್ಥಾನಗಳು ಎಂದೂ ಗುರುತಿಸಲ್ಪಟ್ಟಿದ್ದು ಶಿವ ದೇವಾಲಯದ ಬಲಭಾಗಕ್ಕೆ ಕಾಳಾಮುಖ ಯತಿಗಳ ಮಠಗಳ ಅವಶೇಷಗಳು ಇಂದಿಗೂ ಕಾಣಸಿಗುತ್ತವೆ. ಹಾಗೂ ಕಾಳಾಮುಖ/ಶೈವ ಆಚಾರ್ಯನು ಲಿಂಗದ ಬಲಭಾಗದಲ್ಲಿ ಉಪಸ್ಥಿತನಿದ್ದು ಪೂಜಾಕಾರ್ಯವನ್ನು ನೆರವೇರಿಸುವ ದೃಶ್ಯಗಳು ಈ ಕಾಲದ ದಾನ ಶಾಸನ ಹಾಗೂ ವೀರಗಲ್ಲುಗಳಲ್ಲಿ ಕಂಡುಬರುತ್ತದೆ. ಅಂದರೆ ದೇವಾಲಯಗಳನ್ನು ಶಿಲ್ಪದಲ್ಲಿ ಪ್ರತಿನಿಧಿಸುವಾಗ ಲಿಂಗದ ಬಲಭಾಗದಲ್ಲಿ ಆಚಾರ್ಯನನ್ನು ತೋರಿಸುವ ಪರಿಪಾಠ ಬೆಳೆಯಿತು. ಲಿಂಗದ ಎದುರು ಭಾಗದಲ್ಲಿ ನಂದಿಯ ವಿಗ್ರಹಗಳೂ ಕೂಡ ಈ ದೇವಾಲಯಗಳಲ್ಲಿ ಕಡ್ಡಾಯವಾಗಿ ಇರುತ್ತವೆ. ಅಷ್ಟೇ ಅಲ್ಲ, ನಂದಿ ಶಿವನ ಪರಿವಾರ ದೇವತೆ ಎಂಬುದು ಇಲ್ಲಿ ಗಮನಾರ್ಹ. ಶಿಲ್ಪಗಳಲ್ಲೂ ಕೂಡ ದೇವಾಲಯವನ್ನು ತೋರಿಸುವಾಗ ಲಿಂಗದ ಎದುರು ನಂದಿಯನ್ನು ತೋರಿಸುವ ರೂಢಿ ಹೀಗೆ ಪ್ರಚಲಿತದಲ್ಲಿ ಬಂದಿತು. ದೇವಾಲಯಗಳಲ್ಲಿ ಪೂಜೆ ನಡೆಯುವಾಗ ಭೇರಿ, ಶಂಖ, ಘಂಟೆ ಮುಂತಾದ ವಾದ್ಯಗಳನ್ನು ನುಡಿಸುವ ಪದ್ಧತಿ ಇದ್ದುದರಿಂದ ಈ ದೇವಾಲಯಗಳಲ್ಲಿ ವಾದ್ಯದವರು, ನೃತ್ಯದವರು ಮುಂತಾದ ಪರಿಚಾರಕರಿಗೆ ದಾನದತ್ತಿಗಳನ್ನೂ ಆ ಕಾಲದ ಶಾಸನಗಳು ದಾಖಲಿಸುತ್ತವೆ. ಇಲ್ಲಿ ಚರ್ಚೆಗೊಳಪಟ್ಟ ವೀರಗಲ್ಲುಗಳಲ್ಲಿ ಇಂಥ ದೇವಾಲಯದಲ್ಲಿ ಪರಿವಾರ ದೇವತೆಯಾಗಿ ವೀರನ ಮೂರ್ತಿಯೂ ಉಪಸ್ಥಿತಿ ಪಡೆದುದನ್ನು ಈ ಶಿಲ್ಪಗಳು ತೋರಿಸುತ್ತವೆ ಎಂಬುದು ಕೂಡ ಸ್ಪಷ್ಟ. ಅಂದರೆ ಈ ವೀರಗಲ್ಲುಗಳ ಶಿಲ್ಪಗಳು ಶಿವಲೋಕವನ್ನು ಪ್ರತಿನಿಧಿಸುತ್ತಿಲ್ಲ, ಬದಲಾಗಿ ಇಂಥ ದೇವಾಲಯ ವಾಸ್ತು ಸಂಕೀರ್ಣ ಹಾಗೂ ಪೂಜಾ ವಿಧಿಗಳನ್ನು ತೋರಿಸುತ್ತಿವೆ.

ವೀರಗಲ್ಲುಗಳ ಪೂಜೆಯು ದೇವಾಲಯ ಪೂಜೆಯ ಒಂದು ಭಾಗವಾಗಿ ಯಾವಾಗ ಮಾರ್ಪಟ್ಟಿತು ಎಂಬುದು ಸದ್ಯಕ್ಕೆ ಸ್ಪಷ್ಟವಿಲ್ಲ. ಆದರೆ ಅದು ಹಾಗೆ ಮಾರ್ಪಟ್ಟು ಜನಮನದ ಒಂದು ಭಾಗವಾದ ಪರಿಣಾಮವಾಗಿ ವೀರಗಲ್ಲುಗಳ ಈ ಶಿಲ್ಪಗಳು ಅವತರಿಸಿವೆ ಎಂಬುದು ಸ್ಪಷ್ಟ. ಕ್ರಮೇಣ ವೀರನ ಸ್ವರ್ಗಲೋಕ ವಾಸದ ಚಿತ್ರಣಕ್ಕಿಂತ ಅವನು ದೇವಾಲಯಗಳಲ್ಲಿ ಪೂಜೆಗೊಳ್ಳುವ ಶಕ್ತಿಯಾಗಿಯೇ ಜನಮನದಲ್ಲಿ ಪ್ರಸ್ತುತತೆ ಗಳಿಸತೊಡಗಿದನು. ಅದರ ಪರಿಣಾಮವಾಗಿ ಶಿಲ್ಪಗಳ ದೃಶ್ಯಗಳು ಬದಲಾದವು. ಆದರೆ ವೀರಗಲ್ಲಿನ ಮೇಲಿನ ಪಟ್ಟಿಕೆಯ

ದೃಶ್ಯಗಳು ಅಂತಿಮ ರೂಪ ತಳೆಯಲು ನೂರಾರು ವರ್ಷಗಳೇ ಬೇಕಾದವು ಎಂಬುದು ವೀರಗಲ್ಲುಗಳಲ್ಲಿ ನಿದರ್ಶನವಾಗಿದೆ. ಈ ಪ್ರಕ್ರಿಯೆಯ ಪ್ರಾರಂಭದಲ್ಲಿ ಉತ್ತರ ಕರ್ನಾಟಕದ ರೋಣ, ಹೂಲಿ, ಗದಗ, ಬೆಟಗೇರಿ ಇತ್ಯಾದಿ ಸ್ಥಳಗಳಲ್ಲಿ ಸಿಗುವ 10–11ನೆಯ ಶತಮಾನದ ವೀರಗಲ್ಲುಗಳಲ್ಲಿ ವೀರಸ್ವರ್ಗಕ್ಕೆ ಹೊರತಾಗಿ ಶಿವ ದೇವಾಲಯ ಹಾಗೂ ಬ್ರಹ್ಮ, ವಿಷ್ಣು, ಲಿಂಗ, ದುರ್ಗೆ, ಗಣೇಶ, ಕಾರ್ತಿಕೇಯ, ಸೂರ್ಯ ಇತ್ಯಾದಿ ದೇವತೆಗಳೂ ಕಾಣಿಸಿಕೊಳ್ಳತೊಡಗುತ್ತವೆ.[28] ಕಾಳಾಮುಖ ಶೈವ ದೇವಾಲಯಗಳಲ್ಲಿ ಈ ಎಲ್ಲಾ ದೇವತೆಗಳ ಮೂರ್ತಿಗಳನ್ನೂ ಸ್ಥಾಪಿಸಿ ಪೂಜೆ ಮಾಡುವ ಸಂಪ್ರದಾಯವಿತ್ತು ಎಂಬುದು ಇಂದು ಸಿಗುವ ದೇವಾಲಯ ಅವಶೇಷಗಳಲ್ಲಿ ನಿದರ್ಶಿತವಾಗಿದೆ ಹಾಗೂ ಬ್ರಹ್ಮ–ವಿಷ್ಣು–ಮಹೇಶ್ವರರ ಪ್ರತ್ಯೇಕ ಗುಡಿಗಳನ್ನೇ ತ್ರಿಕೂಟ ದೇವಾಲಯಗಳಲ್ಲಿ ನೋಡುತ್ತೇವೆ.[29] ಅಂದರೆ, ವೀರಪೂಜೆಯು ಈ ದೇವಾಲಯ ವಿಧಿಗಳ ಭಾಗವಾದ ನಂತರ ಶಿಲ್ಪಿಗಳಿಗೆ ಈ ಶಿವ ಪೂಜಾ ಸಂದರ್ಭದ ವಾಸ್ತವವನ್ನು ಕೂಡ ಚಿತ್ರಿಸುವ ಪ್ರಸ್ತುತತೆ ಉಂಟಾಯಿತು. ಆದರೆ ಸಾಂಪ್ರದಾಯಿಕ ಮಾದರಿ ಒಮ್ಮೆಲೇ ಕರಗತವಾಗಿರಲಿಲ್ಲ. ಈ ಹಂತವನ್ನು 10–11ನೆಯ ಶತಮಾನದ ವೀರಗಲ್ಲುಗಳು ನಿದರ್ಶಿಸುತ್ತವೆ. ಅಂತೂ 12ನೆಯ ಶತಮಾನದಲ್ಲಿ ಸಿದ್ಧ ಮಾದರಿಯೊಂದು ರೂಪುಗೊಂಡಿತು. ಇದು ಕೇವಲ ಶಿಲ್ಪಗಳ ಬದಲಾವಣೆ ಅಲ್ಲ ಎಂಬುದನ್ನು ಗಮನಿಸಬೇಕಾಗುತ್ತದೆ. ಅಂದರೆ ವೀರನ ಕಲ್ಪನೆಯಲ್ಲೇ ಬದಲಾವಣೆ ಆಗಿದೆ. ಹಾಗಾಗಿ ವೀರನನ್ನು ಕೇವಲ ದೇವಾಲಯದ ಭಾಗವಾಗಿ ಚಿತ್ರಿಸಿದಷ್ಟಕ್ಕೆ ಚಿತ್ರಣ ಪರಿಪೂರ್ಣವಾಗಲಾರದು. ವೀರನು ಇಲ್ಲಿ ಭಕ್ತನಾಗಿ ಕೂಡ ಬದಲಾಗುತ್ತಾನೆ. ಅಂದರೆ ವೀರನು ಹೇಗೇ ಮಡಿದಿರಲಿ, ಶಿವಪೂಜೆಯ ಸಂದರ್ಭದಲ್ಲಿ ಶಿವಲೋಕವನ್ನು ಸೇರಬೇಕಾದರೆ ಅವನೊಬ್ಬ ಮಹಾ ಭಕ್ತನಾಗಿಯೇ ಸೇರಬೇಕು. ಅವನು ಸ್ವರ್ಗಕ್ಕೆ ಏರುವಾಗ ಕೂಡ ವಿಮಾನದೊಳಗೆ ಕೈಮುಗಿದು ಕುಳಿತು ಈ ಉತ್ಸರ್ಗವನ್ನು ಪ್ರಾರಂಭಿಸುತ್ತಾನೆ. 12ನೆಯ ಶತಮಾನದ ನಂತರ ವೀರಗಲ್ಲುಗಳಲ್ಲಿ ಅಪ್ಸರೆಯರು ಅವನ ಹೆಗಲ ಮೇಲೆ ಕೈ ಹಾಕುವ ದೃಶ್ಯಗಳಿರುವುದಿಲ್ಲ. ವೀರನಿಗೆ ಈಗ ಸ್ವರ್ಗಸುಖವನ್ನು ಸೂರೆ ಹೊಡೆಯುವುದು ಅಂತಿಮ ಗತಿಯಲ್ಲ. ಬದಲಾಗಿ ಶಿವಪಾದವನ್ನು ಸೇರುವುದು ಅಂತಿಮ ಗತಿ. ಅಪ್ಸರೆಯರ ಕೆಲಸವೆಂದರೆ ಅವನನ್ನು ಸಕಲ ಸಂಭ್ರಮಗಳೊಂದಿಗೆ ಶಿವಲೋಕಕ್ಕೆ ತಲುಪಿಸುವುದು ಮಾತ್ರ. ವೀರನು ಶಿವಲೋಕಕ್ಕೆ ಹೋದಮೇಲೆ ಏನು ನಡೆಯುತ್ತದೆ ಎಂಬ ಚಿತ್ರಣ ಪ್ರಸ್ತುತತೆ ಕಳೆದುಕೊಳ್ಳುತ್ತದೆ. ಬದಲಾಗಿ ಅವನು ಶಿವದೇವಾಲಯದಲ್ಲಿ ಶಿವಲಿಂಗದ ಸನ್ನಿಧಿಯಲ್ಲಿ ಪರಿವಾರ ದೇವತೆಯಾಗಿ ಪೂಜೆಗೊಳ್ಳುವ ಚಿತ್ರಣ ಗಟ್ಟಿಯಾಗುತ್ತದೆ. ವೀರನು ಲಿಂಗದ ಬಲಭಾಗದಲ್ಲಿ ಪೂಜೆಗೊಳಪಟ್ಟ ಮೂರ್ತಿಯಂತೆ ಪದ್ಮಾಸನದಲ್ಲಿ ಕುಳಿತಿರುತ್ತಾನೆ. ಜೊತೆಗೇ ಲಿಂಗಕ್ಕೆ ಕೈಮುಗಿದಿರುತ್ತಾನೆ. ದೇವಾಲಯವೇ ಶಿವಲೋಕದ ಚಿತ್ರಣ ಕೂಡಾ ಆಗಿ ಬದಲಾಗುತ್ತದೆ. ಹಾಗಾಗಿ ಇದು ಶಿವಲೋಕ ಅಲ್ಲವೆಂದೂ ಅನ್ನಲಾಗದು. ಶಿವಲೋಕವು ದೇವಾಲಯ ಸಂಕೀರ್ಣವಾಗಿ ದೃಶ್ಯರೂಪ ತಳೆಯುತ್ತದೆ. ಅಂದರೆ ಪೂಜೆ. ಭಕ್ತಿಗಳ ಸಂದರ್ಭದಲ್ಲಿ ವೀರನ ಪರಲೋಕದ ಕಲ್ಪನೆಯೇ ಬದಲಾಗಿದೆ. ವಿಜಯನಗರ ಕಾಲದ ನಂತರ ಕೆಲವು ವೀರಗಲ್ಲುಗಳಲ್ಲಿ ವೀರನು ಈಹಾ ಮೃಗದ ರೂಪದಲ್ಲಿ ಚಿತ್ರಿತನಾಗಿ ಶಿವಲಿಂಗಕ್ಕೆ ಆರತಿ ಎತ್ತುವ ದೃಶ್ಯ ಇರುತ್ತದೆ. ಅಂದರೆ ವೀರನು ಮರಣಾನಂತರ ಒಬ್ಬ ವ್ಯಂತರ ದೇವತೆಯಾಗಿ ಶಿವನನ್ನು ಪೂಜಿಸುವ ಕಲ್ಪನೆಯು ಇಂಥ ಚಿತ್ರಣಗಳಲ್ಲಿ ಸ್ಪಷ್ಟಗೊಳ್ಳುತ್ತದೆ (ಚಿತ್ರ 5). ಆದರೆ ಈ ಕುರಿತು ಇನ್ನೂ ವಿಸ್ತೃತವಾದ ಸಂಶೋಧನೆಯ ಅಗತ್ಯವಿದೆಯಾದರೂ ಒಂದು ಊಹೆಯನ್ನು ಸಕಾರಣ ವಾಗಿಯೇ

ಮಾಡಬಹುದು: ಅದೆಂದರೆ ವೀರ ಪೂಜಾ ಪಂಥವು ಕ್ರಮೇಣ ದೇವಾಲಯ ಪೂಜಾ ಸಂಪ್ರದಾಯ ದೊಳಗೆ ಸೇರಿಕೊಂಡ ಪ್ರಕ್ರಿಯೆಯನ್ನು ಇದು ಸೂಚಿಸುತ್ತದೆ. ವೀರಗಲ್ಲುಗಳಿಗೆ ಸಂಬಂಧಿಸಿ ಈ ಮೇಲಿನ ಊಹೆಗೆ ಪೂರಕವಾಗಿ ನಮಗೆ ಸಾಕ್ಷ್ಯಾಧಾರಗಳೂ ಸಿಗುತ್ತವೆ. ಈ ವೀರಗಲ್ಲುಗಳ ಶಾಸನಗಳು ತಿಳಿಸುವಂತೆ ವೀರನು ಎಲ್ಲಿಯೇ ಹೋರಾಡಿ ಸತ್ತಿರಬಹುದು, ಆದರೆ ಅವನ ವೀರಗಲ್ಲನ್ನು ಅವನ ಹಳ್ಳಿಯ ದೇವಾಲಯದ ಅಂಗಳದಲ್ಲಿ ಒಂದು ದೇವತೆಯಾಗಿ ಸ್ಥಾಪಿಸುತ್ತಿದ್ದರು. ಈ ಶಾಸನಗಳು ದೇವಾಲಯದ ಆವರಣದಲ್ಲಿ ವೀರಗಲ್ಲುಗಳ ಪ್ರತಿಷ್ಠಾಪನೆಯ ವಿಧಿಗಳನ್ನು ಉಲ್ಲೇಖಿಸುತ್ತವೆ. ಪ್ರತಿಷ್ಠಾಪನೆ ಎನ್ನುವುದು ಆಗಮ ಸಂಪ್ರದಾಯದ ವಿಧಿಯಾಗಿದ್ದು ದೇವತೆಯನ್ನು



ಚಿತ್ರ-5


ಮೂರ್ತಿಯೊಳಗೆ ಆಹ್ವಾನಿಸುವುದನ್ನೂ ಒಳಗೊಳ್ಳುತ್ತವೆ. ಈ ವಿಧಿಯ ಮೂಲಕ ದೇವತೆ ಪ್ರತಿಮೆಯಲ್ಲಿ ನೆಲೆಸಿ ಒಂದು ಶಕ್ತಿಯಾಗಿ ಪೂಜಿಸುವವರ ಇಷ್ಟಾರ್ಥಗಳನ್ನು ನೆರವೇರಿಸುತ್ತಾನೆ. ಈ ರೀತಿಯಲ್ಲಿ ದೇವಾಲಯದ ಆವರಣದೊಳಗೆ ಹೊಸದೊಂದು ದೇವತೆ ಸೇರ್ಪಡೆಯಾಗುತ್ತದೆ. ಈ ಕಲ್ಲುಗಳಿಗೆ ಪೂಜೆ ಹಾಗೂ 'ಬೀರಗೂಳು' ಎಂಬ ನಿತ್ಯ ನೈಮಿತ್ತಿಕ ಪೂಜೆಗಳು ನಡೆಯುವುದನ್ನು ಕೆಲವು ಶಾಸನಗಳು ಉಲ್ಲೇಖಿಸುತ್ತವೆ. ಲಿಂಗದ ಜೊತೆಗೇ ವೀರಗಲ್ಲಿಗೆ ನಿತ್ಯ ಪೂಜೆ ಹಾಗೂ ಜಾತ್ರೆ ಉತ್ಸವ ಮುಂತಾದ ವಿಶೇಷ ಸಮಾರಂಭಗಳಲ್ಲಿ ವಿಶೇಷ ಪೂಜೆ ನಡೆಯುತ್ತಿತ್ತು. 'ಬೀರಗೂಳು' ಎಂಬುದು ವೀರನಿಗಾಗಿಯೇ ವಿಶೇಷವಾಗಿ ಏರ್ಪಡಿಸುತ್ತಿದ್ದ ಬಲಿಯಾಗಿತ್ತು. ಈ ಪೂಜೆಗಳನ್ನು ಆಗಮ ವಿಧಿಗಳನ್ನು ಬಲ್ಲ ದೇವಾಲಯದ ಆಚಾರ್ಯನೇ ನಡೆಸುತ್ತಿದ್ದನು. ವೀರರಿಗಾಗಿ ಪ್ರತ್ಯೇಕ ಗುಡಿಗಳನ್ನೂ ಕಟ್ಟಿಸಿದ್ದರೆಂಬುದು ಶಾಸನಗಳಿಂದ ತಿಳಿದು ಬರುತ್ತದೆ.[30] ಅನೇಕ ವೀರಗಲ್ಲು ಶಾಸನಗಳಲ್ಲಿ ವೀರಗಲ್ಲಿನ ಪೂಜೆಯ ನಿರ್ವಹಣೆಗಾಗಿ ದಾನಗಳನ್ನು ಅವರ ಬಂಧುಗಳು, ಆಳುವವರು ನೀಡಿದ ಉಲ್ಲೇಖಗಳಿವೆ.[31] ಪೂಜೆಯ ಹೊಣೆಯನ್ನು ದೇವಾಲಯದ ಆಚಾರ್ಯರಿಗೆ ವಹಿಸುತ್ತಿದ್ದರು. ಅಂದರೆ ವೀರಗಲ್ಲುಗಳ ಪೂಜೆಯು ನಿಯಮಿತವಾಗಿ ನಡೆದುಕೊಂಡು ಬರಬೇಕೆಂಬ ಸಲುವಾಗಿ ವಿಶೇಷ ಮುತುವರ್ಜಿ ವಹಿಸಲಾಗಿತ್ತೆಂಬುದು ಸ್ಪಷ್ಟ. ವೀರಗಲ್ಲುಗಳ ಶಿಲ್ಪಗಳು ಏನು ಸೂಚಿಸುತ್ತವೆಯೋ ಅದಕ್ಕೆ ಈ ಮಾಹಿತಿಗಳೆಲ್ಲ ಪೂರಕವಾಗಿಯೇ ಇವೆ ಎಂಬುದರಲ್ಲಿ ಸಂದೇಹವಿಲ್ಲ.

ಬಹುಶಃ ಅವನನ್ನು ದೇವತೆಯಾಗಿ ಒಳಗೊಳ್ಳುವಾಗ ವೀರನ ಕುಲದ ಅಥವಾ ಅವನ ಗ್ರಾಮದ ಮತ ಸಂಪ್ರದಾಯಗಳ ದೇವಸ್ಥಾನಗಳು ಹಾಗೂ ವಿಧಿಗಳು ನಿರ್ಣಾಯಕ ಪಾತ್ರ ವಹಿಸಿದಂತೆ ತೋರುತ್ತದೆ. ಏಕೆಂದರೆ ಅಪರೂಪಕ್ಕೆ ಶಿವಲಿಂಗದಂತೆ ವಿಷ್ಣು, ಜಿನರೂ ಕೂಡ ವೀರಗಲ್ಲುಗಳಲ್ಲಿ ಪ್ರಸ್ತುತತೆ ಪಡೆಯುತ್ತಾರೆ. ಅಂದರೆ ಈ ಮೇಲೆ ನಾವು ಚರ್ಚಿಸಿದ ವೀರಗಲ್ಲುಗಳು ಶಿವ ಪೂಜಾ ಸಂಪ್ರದಾಯವು ವೀರನನ್ನು ಒಳಗೊಂಡ ಬಗೆಯನ್ನು ದೃಷ್ಟಾಂತಪಡಿಸುತ್ತವೆ. ನಮಗೆ ತಿಳಿದು ಬರುವ ಮಾಹಿತಿಯ ಪ್ರಕಾರ ಇಂಥ ವೀರಗಲ್ಲುಗಳು ಸಿಗುವುದೇ ದೇವಾಲಯಗಳ ಅಂಗಳದಲ್ಲಿ. ಅವು ಜೈನ ಬಸ್ತಿಗಳ ಆವರಣದೊಳಗೆ ಸಿಕ್ಕರೆ ಅವುಗಳಲ್ಲಿ ಅತ್ಯಂತ ಮೇಲಿನ ಪಟ್ಟಿಕೆಯೊಳಗೆ ವೀರನು ಜಿನನನ್ನು ಪೂಜಿಸುವಂತೆ ತೋರಿಸಲಾಗುತ್ತದೆ (ಚಿತ್ರ 6). ಇದೇ ರೀತಿ ವಿಷ್ಣುವನ್ನು ತೋರಿಸುವ ವೀರಗಲ್ಲುಗಳೂ ಅಪರೂಪಕ್ಕೆ ಸಿಗುತ್ತವೆ (ಚಿತ್ರ 7). ಇಲ್ಲಿ ನಾವು ಪರಿಶೀಲಿಸುತ್ತಿರುವ ಪ್ರಕಾರದ ವೀರಗಲ್ಲುಗಳು ಆಯಾ ದೇವಾಲಯ ಪಂಥಗಳ ಹಾಗೂ ಸಂಕೀರ್ಣಗಳ ಭಾಗವಾಗಿಯೇ ಅಸ್ತಿತ್ವಕ್ಕೆ ಬಂದಂತಿದೆ. ಅಂದರೆ ಇಂದು ನಾವು ನೋಡುವ ಅಸಂಖ್ಯ ದೇವಾಲಯಗಳ ಅವಶೇಷಗಳ ಒಂದು ಭಾಗವಾಗಿ ಪ್ರಸ್ತುತ ಚರ್ಚಿಸಲಾಗುತ್ತಿರುವ ಈ ಕಲ್ಲುಗಳು ಕೂಡ ಉಳಿದು ಬಂದಿವೆ. ಅದರಲ್ಲೂ ಶೈವ ದೇವಾಲಯ ಪಂಥದ ಒಂದು ಭಾಗವಾಗಿಯೇ ಬಹುತೇಕ ವೀರಗಲ್ಲುಗಳು ಅಸ್ತಿತ್ವಕ್ಕೆ ಬಂದವು.

ಉಪಸಂಹಾರ: ವೀರಗಲ್ಲು ಸ್ಮಾರಕವೋ ಮೂರ್ತಿಯೊ? ಇದನ್ನು ಇನ್ನೂ ವಿವರವಾಗಿ ತಿಳಿದುಕೊಳ್ಳಬೇಕಾದರೆ ವೀರಗಲ್ಲು ಎಂದರೇನು? ಎಂಬುದನ್ನು ಸ್ಪಷ್ಟಗೊಳಿಸಿಕೊಳ್ಳುವ ಅಗತ್ಯವಿದೆ. ವೀರಗಲ್ಲುಗಳ ಅಧ್ಯಯನದಲ್ಲಿ ಇವನ್ನು ಸ್ಮಾರಕಗಳು ಎಂದು ವರ್ಣಿಸುವ ಪದ್ಧತಿಯಿದೆ. ಅದು ಇಂಗ್ಲೀಷಿನ 'ಮೆಮೋರಿಯಲ್ ಸ್ಟೋನ್' ಎಂಬ ಪರಿಭಾಷೆಯ ಕನ್ನಡ ತರ್ಜುಮೆಯಾಗಿದೆ. ಈ ಪರಿಭಾಷೆಯ ಹಿಂದೆ ಪರಿಕಲ್ಪನೆಯೊಂದಿದೆ: ಅದೆಂದರೆ ವೀರರ ಮರಣದ ನೆನಪಿಗಾಗಿ ನಿಲ್ಲಿಸಿದ ಕಲ್ಲುಗಳು ಅವು ಎಂಬರ್ಥ. ಅಂದರೆ ನಾಡಿಗಾಗಿ, ಜನರಿಗಾಗಿ ತನ್ನ ಬಲಿದಾನವನ್ನು ಮಾಡಿದ ವೀರನ ನೆನಪನ್ನು ಮುಂದಿನ ತಲೆಮಾರಿಗೆ ಮಾಡಿಕೊಡುವುದಕ್ಕಾಗಿ ಈ ಕಲ್ಲುಗಳನ್ನು ನೆಡುತ್ತಿದ್ದರು ಅಂತ ಭಾವಿಸಿಕೊಂಡು ಹೀಗೆ ಕರೆಯಲಾಗಿದೆ. ವೀರಗಲ್ಲುಗಳಲ್ಲಿ ಅವನ ಸಾವಿನ ಸಂದರ್ಭದ ಚಿತ್ರಣ ಹಾಗೂ ಶಾಸನದಲ್ಲಿ ಬರುವ ಅದರ ವರ್ಣನೆಗಳು ಕೂಡ ಇದಕ್ಕೆ ಪುಷ್ಟಿ ಕೊಡುವಂತೆ ತೋರಬಹುದು. ಸ್ಮಾರಕಗಳನ್ನು ಏಕೆ ನೆಡುತ್ತಾರೆಂದರೆ ಗತಕಾಲದ ಕೆಲವು ಘಟನೆಗಳನ್ನು ಹಾಗೂ ವ್ಯಕ್ತಿಗಳನ್ನು ನೆನಪಿನಲ್ಲಿ ಇರಿಸುವ ಸಲುವಾಗಿ. ಉದಾಹರಣೆಗೆ ಭಾರತದ ಸ್ವಾತಂತ್ರ್ಯ ಹೋರಾಟದ ಘಟನೆ ಹಾಗೂ ವ್ಯಕ್ತಿಗಳನ್ನು ಕುರಿತ ಸ್ಮಾರಕಗಳು ಅಥವಾ ಹುತಾತ್ಮ ಯೋಧರ ಸ್ಮಾರಕಗಳು ಎಲ್ಲರಿಗೂ ಗೊತ್ತು. ಆದರೆ ಈ ಸ್ಮಾರಕಗಳ ಒಂದು ಅಂಶ ಬಹಳ ಮುಖ್ಯ: ಅವು ಒಂದು ವ್ಯಕ್ತಿ ಹಾಗೂ ಘಟನೆಯ ಕುರಿತು ತಿಳಿಸಲು ಇವೆಯೇ ವಿನಃ ಪೂಜೆಗಲ್ಲ. ಅಂದರೆ ಅವುಗಳ ಕೆಲಸ ನೆನಪಿಸುವುದು. ಈ ಅರ್ಥದಲ್ಲಿ ವೀರಲ್ಲುಗಳು ಸ್ಮಾರಕಗಳಲ್ಲ. ಅಂದರೆ ಆ ಘಟನೆಯ ಅಥವಾ ವ್ಯಕ್ತಿಯ ನೆನಪಿಗಾಗಿ ನಿಲ್ಲಿಸಿದ ಕಲ್ಲುಗಳು ಇವಲ್ಲ. ನೆನಪಿಸುವ ಕೆಲಸವನ್ನೂ ಅವು ಮಾಡಿರುವ ಸಾಧ್ಯತೆಯನ್ನು ನಾನು ಅಲ್ಲಗಳೆಯುವುದಿಲ್ಲ. ಆದರೆ ವೀರಗಲ್ಲುಗಳ ಶಿಲ್ಪಗಳನ್ನು ಅರ್ಥೈಸುವ ಸಂದರ್ಭದಲ್ಲಿ ಅದು ಗೌಣ. ಅವು ವೀರರ ಮೂರ್ತಿಗಳು ಎಂಬುದನ್ನು ಗಮನಿಸುವುದು ಅವುಗಳ ಶಿಲ್ಪಗಳನ್ನು ಅರ್ಥೈಸಲು ನಮಗೆ ಮುಖ್ಯ. ಅವುಗಳೊಳಗೆ ವೀರ ಜಾಗೃತವಾಗಿ ದೇವತೆಯಂತೆ ಇರುತ್ತಾನೆ.



ಚಿತ್ರ-6



ಚಿತ್ರ-7

ಪೂಜೆಯನ್ನು ಸ್ವೀಕರಿಸುತ್ತಾನೆ. ಹಾಗೂ ಪರಿಣಾಮಗಳನ್ನು ಉಂಟುಮಾಡುತ್ತಾನೆ ಎಂಬ ನಂಬಿಕೆ ಇದರ ಹಿಂದಿದೆ. ಇದನ್ನು ವಿಷದೀಕರಿಸಲಿಕ್ಕಾಗಿ ಪ್ರಾಕ್ತನ ಹಾಗೂ ಜಾನಪದ ಆಧಾರಗಳನ್ನು ಪರಿಶೀಲಿಸಬಹುದು.

ಭಾರತದಲ್ಲಿ ವೀರಗಲ್ಲುಗಳನ್ನು ನೆಟ್ಟು ಪೂಜಿಸುವ ಸಂಪ್ರದಾಯಕ್ಕೆ ಎರಡು ಸಾವಿರ ವರ್ಷಗಳಿಗೂ ಮಿಕ್ಕಿ ಇತಿಹಾಸವಿದೆ. ಅತ್ಯಂತ ಪ್ರಾಚೀನ ವೀರಗಲ್ಲುಗಳು ತಮಿಳುನಾಡಿನಲ್ಲಿ ಸಾ.ಶ. ಪೂರ್ವ 3ನೆಯ ಶತಮಾನದಷ್ಟು ಹಿಂದಿನಿಂದ ಸಿಗುತ್ತವೆ. ಹಾಗೂ ಈಗ ಎರಡು ಸಾವಿರ ವರ್ಷದಷ್ಟು ಹಿಂದಿನ ಸಂಗಂ ಸಾಹಿತ್ಯದಲ್ಲಿ ಪೂಜಾ ವಿಧಿಗಳ, ವೀರನ ಕಲ್ಪನೆಯ ವರ್ಣನೆಗಳಿವೆ.[32] ಅವುಗಳನ್ನು 'ನೆಡುಕಲ್' ಎನ್ನುತ್ತಿದ್ದರು. ಈ ಕಲ್ಲುಗಳ ರೂಪದಲ್ಲಿ ವೀರನೇ ಪೂಜೆಗೊಳ್ಳುತ್ತಾನೆ ಎಂಬ ನಂಬಿಕೆಯಿತ್ತು. ವೀರಗಲ್ಲು ನೆಡುವ ಸಂಪ್ರದಾಯ ಕರ್ನಾಟಕದಲ್ಲೂ ಬೇರೆಯಾಗಿರಲಿಲ್ಲ. ಕನ್ನಡದಲ್ಲಿ ಅದನ್ನು 'ಕಲ್ನಾಟು' ಎಂದು ಕರೆಯಲಾಗಿದೆ.[33] ತಮಿಳಿನ 'ನೆಡುಕಲ್' ಕನ್ನಡದ 'ಕಲ್ನಾಟು' ಆಗಿದೆ. ಅವು ಮೂಲತಃ ನಿಲಿಸುಗಲ್ಲುಗಳಾಗಿದ್ದವು. ಕ್ರಮೇಣ ಅವುಗಳ ಮೇಲೆ ವೀರನ ಚಿತ್ರವನ್ನು ಕೊರೆಯುವ ಪದ್ಧತಿ ಬೆಳೆಯಿತು. ಈ ವೀರಗಲ್ಲುಗಳೆಲ್ಲವೂ ಮೂಲತಃ ಕಲ್ನಾಟುಗಳೇ. ಆದರೆ ಕಲ್ನಾಟುಗಳ ಮೇಲೆ ಚಿತ್ರ ಬಿಡಿಸುವ ಕ್ರಮದಲ್ಲಿ ಏಕರೂಪಿ ಬದಲಾವಣೆಗಳು ಬಂದಂತೆ ಕಾಣುವುದಿಲ್ಲ. ಕರ್ನಾಟಕದಲ್ಲಿ ಈ ಪದ್ಧತಿಯು ಕ್ರಮೇಣ ವಿಭಿನ್ನ ರೂಪವನ್ನು ತಳೆಯಿತು. ಅಂದರೆ

ವೀರಸ್ವರ್ಗದ ಕುರಿತ ಭಾರತೀಯರ ಪೌರಾಣಿಕ ಚಿತ್ರಣಗಳನ್ನು ದೃಶ್ಯರೂಪಕ್ಕಿಳಿಸುವ ಪ್ರಯತ್ನ ನಡೆಯಿತು. ಈ ಪ್ರಯತ್ನದ ಫಲವಾಗಿ ಕರ್ನಾಟಕದ ಶಿಲ್ಪಿಗಳು ಬಾದಾಮಿ ಚಾಲುಕ್ಯ ಕಾಲದಲ್ಲಿ ಚಿತ್ರಣದ ಒಂದು ಮಾದರಿಯನ್ನು ರೂಪಿಸಿದರು. ಹಾಗೂ 11ನೆಯ ಶತಮಾನದ ಸುಮಾರಿಗೆ ಪೌರಾಣಿಕ ವೀರ ಸ್ವರ್ಗದ ಕಲ್ಪನೆಯು ಭಕ್ತಿ ಹಾಗೂ ಪೂಜಾ ಪಂಥಗಳ ಪ್ರಭಾವದಿಂದ ಬದಲಾವಣೆಗೊಂಡು ಶಿಲ್ಪಗಳ ಮರು ನಿರೂಪಣೆ ಕೂಡ ನಡೆಯಿತು. ಈ ಮರು ನಿರೂಪಣೆಯು ವಿಜಯ ನಗರ ಕಾಲದಲ್ಲೂ ಮುಂದುವರೆಯಿತು. ಅಷ್ಟಾಗಿಯೂ ಕೂಡ ಕೇವಲ ವೀರನನ್ನು ಚಿತ್ರಿಸುವ ಪದ್ಧತಿ ಹಾಗೂ ಕೇವಲ ಕಲ್ಲನ್ನು ನೆಡುವ ಪದ್ಧತಿಗಳು ಮಾಯವಾದಂತೆ ಕಾಣುವುದಿಲ್ಲ. ಅದು ಜೊತೆ ಜೊತೆಗೇ ಅಸ್ತಿತ್ವದಲ್ಲಿ ಇದ್ದಂತೆ ತೋರುತ್ತದೆ. ವಿಜಯನಗರ ಕಾಲದಲ್ಲಿ, ಹಾಗು ದಕ್ಷಿಣ ಕರ್ನಾಟಕದಲ್ಲಿ ಕೇವಲ ವೀರನನ್ನು ಚಿತ್ರಿಸುವ ಪದ್ಧತಿ ಮತ್ತೆ ಜನಪ್ರಿಯವಾಗುತ್ತದೆ. ವೀರಪೂಜೆಯ ಪಂಥವು ಭಾರತೀಯ ಗ್ರಾಮಗಳಲ್ಲಿ ಇಂದಿಗೂ ಹಾಗೇ ಮುಂದುವರಿದುಕೊಂಡು ಬಂದಿದೆ. ಕೃಷಿಕರು, ಪಶುಸಂಗೋಪಕರು, ಬೇಟೆಗಾರ ಸಮುದಾಯಗಳೆಲ್ಲವೂ ಈ ಪೂಜಾ ಸಂಪ್ರದಾಯವನ್ನು ವೈವಿಧ್ಯಪೂರ್ಣವಾಗಿ ಆಚರಿಸುತ್ತವೆ. ಎಷ್ಟೋ ವೀರಗಲ್ಲುಗಳಿಗೆ ಇಂದಿಗೂ ಪೂಜೆ, ಜಾತ್ರೆ, ಉತ್ಸವಗಳು ನಡೆಯುತ್ತವೆ. ಪೂಜೆಗೊಳಪಡುವ ವಸ್ತುಗಳು ಬಹಳಷ್ಟು ಬಾರಿ ಕೇವಲ ಕಲ್ಲುಗಳ ರೂಪದಲ್ಲಿ ಇರುತ್ತವೆ.

ಕರ್ನಾಟಕದಲ್ಲಿ ರಾಜ್ಯ ಸಾಮ್ರಾಜ್ಯಗಳ ನಿರ್ಮಾಣದ ಪ್ರಕ್ರಿಯೆಯಲ್ಲಿ ಈ ವೀರಪೂಜೆಯ ಸಂಸ್ಕೃತಿಯು ದೇವಾಲಯಗಳ ವಿಶೇಷ ಆಶ್ರಯವನ್ನು ಪಡೆದು, ವಿವಿಧ ಮತಪಂಥಗಳ ಪುರಾಣಲೋಕದ ಸಂಸರ್ಗವನ್ನು ಹೊಂದಿ ಈ ಮೇಲೆ ತಿಳಿಸಿದ ಬದಲಾವಣೆಗಳನ್ನೆಲ್ಲ ಧರಿಸಿದಂತೆ ತೋರುತ್ತದೆ. ಒಟ್ಟಿನಲ್ಲಿ ನಾವು ಚರ್ಚೆಗೊಳಪಡಿಸಿದ ವೀರಗಲ್ಲುಗಳು ಕರ್ನಾಟಕದ ವೀರ ಪೂಜಾ ಪಂಥದಲ್ಲಿ ಮಧ್ಯಕಾಲದಲ್ಲಿ ನಡೆದ ಒಂದು ಐತಿಹಾಸಿಕ ಕ್ರಿಯಾಶೀಲತೆಯ ಅಧ್ಯಾಯವನ್ನು ತೆರೆದಿಡುತ್ತವೆ. ಇದರ ಫಲವಾಗಿ ಕರ್ನಾಟಕದ ಕಲೆಯ ಇತಿಹಾಸದಲ್ಲಿ ವೀರಗಲ್ಲುಗಳು ಕೂಡ ವಿನೂತನ ಸ್ಥಾನವನ್ನು ಅಲಂಕರಿಸುವಂತಾಯಿತು. ಇದು ಭಾರತೀಯ ಕಲೆಯ ಇತಿಹಾಸಕ್ಕೆ ಕರ್ನಾಟಕದ ಶಿಲ್ಪಿಗಳ ವಿಶಿಷ್ಟ ಕೊಡುಗೆ ಎಂದೂ ಹೇಳಬಹುದು.

ಟಿಪ್ಪಣಿಗಳು ಮತ್ತು ಆಕರ ಸೂಚಿ

1. ರಾಜನ್, 2014, 'ಲೈಫ್ ಆಫ್ಟರ್ ಡೆತ್: ಫ್ರಾಮ್ ಮೋರ್ಟಲ್ ರಿಮೇನ್ಸ್ ಟು ಮಾನ್ಯುಮೆನಟ್ಸ್'. ಪು.225–33.
2. ಸರ್ಕಾರ್, 1982, 'ದಿ ಛಾಯಾ ಸ್ತಂಭಾಸ್ ಆಫ್ ನಾಗಾರ್ಜುನಕೊಂಡ', ಪು.199–207.
3. ಸೆಟ್ಟರ್, 1982, 'ಮೆಮೊರಿಯಲ್ ಸ್ಟೋನ್ಸ್ ಇನ್ ಸೌಥ್ ಇಂಡಿಯಾ', ಪು.193.
4. ಖರೆ, 1982, 'ಮೆಮೊರಿಯಲ್ ಸ್ಟೋನ್ಸ್ ಇನ್ ಮಹಾರಾಷ್ಟ್ರ', ಪು.253.
5. ರೆಡ್ಡಿ, 1994, ಹಿರೋಸ್, ಕಲ್ಟ್ಸ್ ಎಂಡ್ ಮೆಮೊರಿಯಲ್ಸ್– ಆಂಧ್ರಪ್ರದೇಶ, ಸೋಡಿ.
6. ಗುರವ, 1982, 'ಹಿರೊ ಸ್ಟೋನ್ಸ್ ಆಫ್ ದಿ ಕದಂಬಾಸ್ ಆಫ್ ಗೋವ', ಪು.219–26.
7. ಸೆಟ್ಟರ್, 1982, ಪೂರ್ವೋಕ್ತ, 190–91.
8. ಕಾಣೆ, 1993, **ಹಿಸ್ಟರಿ ಆಫ್ ಧರ್ಮಶಾಸ್ತ್ರಾಸ್, ಸಂಪುಟ 4**, ಪು.165–67 ಮತ್ತು 1977, ಹಿಸ್ಟರಿ ಆಫ್ ಧರ್ಮಶಾಸ್ತ್ರಾಸ್, ಸಂಪುಟ 5, ಭಾಗ–2, ಪು.1213–15.
9. **ಶ್ರೀಮನ್ಮಹಾಭಾರತ**, ಸಂ.19, 5.35–37.
10. ಫಿಲಿಯೋಜ ಪಯಿರ್, 1982, 'ದಿ ಆಫ್ಟರ್ ಡೆತ್ ಡೆಸ್ಟಿನಿ ಆಫ್ ದಿ ಹಿರೊ ಅಕಾರ್ಡಿಂಗ್ ಟು ಮಹಾಭಾರತ', ಪು.4.

11. ಶ್ರೀಧರ, 2002, **ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಯುದ್ಧಕಲೆ**, ಪು.286.
12. **ಶ್ರೀಮದ್ಭಗವದ್ಗೀತಾ**, 2, 37.2
13. **ಶ್ರೀಮನ್ಮಹಾಭಾರತ**, ಸಂ.9, 33.61.
14. **ಕಾಣೆ**, 1993, ಪೂರ್ವೋಕ್ತ, ಪು.212.
15. ರಾಜನ್, 2000, **ಸೌಥ್ ಇಂಡಿಯನ್ ಮೆಮೊರಿಯಲ್ ಸ್ಟೋನ್ಸ್**, ಪು.70.
16. ಸೆಟ್ಟರ್ ಮತ್ತು ಕಲಬುರ್ಗಿ, 1982, 'ದಿ ಹಿರೊ ಕಲ್ಟ್: ಎ ಸ್ಟಡಿ ಆಫ್ ಕನ್ನಡ ಲಿಟರೇಚರ್ ಫ್ರಮ್ ನೈಂಥ್ ಟೊ ಟ್ವೆಲ್ಥ್ ಸೆಂಚುರಿ', ಪು.17–36.
17. ಕಲಬುರ್ಗಿ 2010, **ಮಾರ್ಗ ಸಂಪುಟ 1**, ಪು.75–80.
18. ಶೇಷಶಾಸ್ತ್ರಿ 2004, **ಕರ್ನಾಟಕದ ವೀರಗಲ್ಲುಗಳು**, ಚಿತ್ರ 234, 236.
19. ಅದೇ. ಕೃತಿಯನ್ನು ನೋಡಿ.
20. ಫಿಲಿಯೋಜ ಪಯೆರ್. 1982, ಪೂರ್ವೋಕ್ತ, ಪು.4–5.
21. **ಕಾಣೆ** 1977, ಪೂರ್ವೋಕ್ತ, ಪು.1213.
22. ರೈಸ್.1904, **ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ–3**, ಸೊರಬ ಶಾ.ಸಂ.22.
23. ಅದೇ. ಸೊರಬ ಶಾ.ಸಂ. 6.
24. ಶೇಷಶಾಸ್ತ್ರಿ 2004, ಪೂರ್ವೋಕ್ತ, ಪು.330–32.
25. ಅದೇ. ಪು.333–34.
26. ಅದೇ. ಪು.333.
27. ಲಾರೆಂಝನ್ 1972, **ದಿ ಕಾಪಾಲಿಕಾಸ್ ಎಂಡ್ ಕಾಳಾಮುಖಾಸ್, ಟೂ ಲಾಸ್ಟ್ ಶೈವೈಟ್ ಸೆಕ್ಟ್ಸ್**; ಫಿಲಿಯೋಝಾ ವಸುಂಧರ 2001, **ಕಾಳಾಮುಖ ಎಂಡ್ ಪಾಶುಪತ ಟೆಂಪಲ್ಸ್ ಇನ್ ಧಾರವಾಡ** ಹಾಗೂ 2011, **ಕಾಳಾಮುಖ ಟೆಂಪಲ್ಸ್ ಆಫ್ ಕರ್ನಾಟಕ– ಆರ್ಟ್ ಎಂಡ್ ಕಲ್ಚರಲ್ ಲೆಗಸಿ**. ನೋಡಿ.
28. ಶೇಷಶಾಸ್ತ್ರಿ 2004, ಪೂರ್ವೋಕ್ತ, ಪು.374.
29. ಫಿಲಿಯೋಝಾ ವಸುಂಧರಾ 2011, ಪೂರ್ವೋಕ್ತ ಹೆಗಡೆ ರಾಜಾರಾಮ 2006, **ಟೆಂಪಲ್ ಪೆಟ್ರೊನೇಜ್ ಇನ್ ಮಿಡೀವಲ್ ಕರ್ನಾಟಕ, ವಿಥ್ ಸ್ಪೆಶಿಯಲ್ ರೆಫರೆನ್ಸ್ ಟು ದಿ ಮಿಡೀವಲ್ ಕರ್ನಾಟಕ**. ನೋಡಿ.
30. ಚಿದಾನಂದ ಮೂರ್ತಿ 2008, **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಪು.278, 324–26.
31. ಶೇಷಶಾಸ್ತ್ರಿ 2004, ಪೂರ್ವೋಕ್ತ, ಪು.132–33.
32. ರಾಜನ್ 2000, ಪೂರ್ವೋಕ್ತ, ಪು.32–35.
33. ಶೇಷಶಾಸ್ತ್ರಿ 2004, ಪೂರ್ವೋಕ್ತ, ಪು.141–43.

* * *

- ಕಲಬುರ್ಗಿ ಎಂ ಎಂ., 2010, **ಮಾರ್ಗ ಸಂಪುಟ 1**, ಸಪ್ನಾ ಬುಕ್ ಹೌಸ್: ಬೆಂಗಳೂರು.
- ಕಾಣೆ ಪಿ.ವಿ. 1993, **ಹಿಸ್ಟರಿ ಆಫ್ ಧರ್ಮಶಾಸ್ತ್ರಾಸ್, ಸಂಪುಟ** 4. ಭಂಡಾರ್‌ಕರ್ ಓರಿಯೆಂಟಲ್ ರಿಸರ್ಚ್ ಇನಸ್ಟಿಟ್ಯೂಟ್: ಪೂಣಾ.
- ಕಾಣೆ ಪಿ.ವಿ. 1982, **ಹಿಸ್ಟರಿ ಆಫ್ ಧರ್ಮಶಾಸ್ತ್ರಾಸ್, ಸಂಪುಟ** 3, ಭಂಡಾರ್‌ಕರ್ ಓರಿಯೆಂಟಲ್ ರಿಸರ್ಚ್ ಇನಸ್ಟಿಟ್ಯೂಟ್: ಪೂಣಾ.
- ಕಾಣೆ ಪಿ.ವಿ. 1977, **ಹಿಸ್ಟರಿ ಆಫ್ ಧರ್ಮಶಾಸ್ತ್ರಾಸ್, ಸಂಪುಟ** 5, ಭಾಗ 2. ಭಂಡಾರ್‌ಕರ್ ಓರಿಯೆಂಟಲ್ ರಿಸರ್ಚ್ ಇನಸ್ಟಿಟ್ಯೂಟ್: ಪೂಣಾ.
- ಖರೆ ಪಿ. 1982, 'ಮೆಮೊರಿಯಲ್ ಸ್ಟೋನ್ಸ್ ಇನ್ ಮಹಾರಾಷ್ಟ್ರ'. ಸೆಟ್ಟರ್ ಎಸ್. ಹಾಗೂ ಗುಂಥೆರ್ ಸೊಂಥೈಮರ್ (ಸಂ.), **ಮೆಮೊರಿಯಲ್ ಸ್ಟೋನ್ಸ್, ಎ ಸ್ಟಡಿ ಆಫ್ ದೆರ್ ಒರಿಜಿನ್, ಸಿಗ್ನಿಫಿಕೆನ್ಸ್ ಎಂಡ್ ವೆರೈಟಿ**, ಇನ್ಸ್ಟಿಟ್ಯೂಟ್ ಆಫ್ ಆರ್ಟ್ ಹಿಸ್ಟರಿ, ಕರ್ನಾಟಕ ವಿಶ್ವವಿದ್ಯಾಲಯ: ಧಾರವಾಡ. ಪುಟ.251–54.
- ಗುರವ್ ಆರ್. ಎನ್. 1982, 'ಹಿರೊ ಸ್ಟೋನ್ಸ್ ಆಫ್ ದಿ ಕದಂಬಾಸ್ ಆಫ್ ಗೋವ', ಸೆಟ್ಟರ್ ಎಸ್. ಹಾಗೂ ಗುಂಥೆರ್ ಸೊಂಥೈಮರ್ (ಸಂ.), **ಮೆಮೊರಿಯಲ್ ಸ್ಟೋನ್ಸ್, ಎ ಸ್ಟಡಿ ಆಫ್ ದೆರ್ ಒರಿಜಿನ್, ಸಿಗ್ನಿಫಿಕೆನ್ಸ್ ಎಂಡ್ ವೆರೈಟಿ**, ಇನ್ಸ್ಟಿಟ್ಯೂಟ್ ಆಫ್ ಆರ್ಟ್ ಹಿಸ್ಟರಿ, ಕರ್ನಾಟಕ ವಿಶ್ವವಿದ್ಯಾಲಯ: ಧಾರವಾಡ. ಪುಟ.219–226.
- ಚಿದಾನಂದಮೂರ್ತಿ ಎಂ. 2008, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಚಿದಾನಂದ **ಸಂಗ್ರಹ ಸಂಪುಟ, ಭಾಗ 1**, ಸಪ್ನಾ ಬುಕ್ ಹೌಸ್: ಬೆಂಗಳೂರು.
- ಫಿಲಿಯೋಝಾ ಪಯೆರ್, 1982, 'ದಿ ಆಫ್ಟರ್ ಡೆತ್ ಡೆಸ್ಟಿನಿ ಆಫ್ ದಿ ಹಿರೊ ಅಕಾರ್ಡಿಂಗ್ ಟು

ಮಹಾಭಾರತ', ಸೆಟ್ಟರ್ ಎಸ್. ಹಾಗೂ ಗುಂಥರ್ ಸೊಂಥೈಮರ್ (ಸಂ.), **ಮೆಮೊರಿಯಲ್ ಸ್ಟೋನ್ಸ್, ಎ ಸ್ಟಡಿ ಆಫ್ ದೆರ್ ಒರಿಜಿನ್, ಸಿಗ್ನಿಫಿಕೆನ್ಸ್ ಎಂಡ್ ವೆರೈಟಿ**, ಇನ್ಸ್ಟಿಟ್ಯೂಟ್ ಆಫ್ ಆರ್ಟ ಹಿಸ್ಟರಿ. ಕರ್ನಾಟಕ ವಿಶ್ವವಿದ್ಯಾಲಯ: ಧಾರವಾಡ. ಪುಟ. 3–8.

- ಫಿಲಿಯೋಜ ವಸುಂಧರಾ, 2001, **ಕಾಳಾಮುಖ ಎಂಡ್ ಪಾಶುಪತ ಟೆಂಪಲ್ಸ್ ಇನ್ ಧಾರ್‌ವಾರ್**, ಕುಪ್ಪುಸ್ವಾಮಿ ಶಾಸ್ತ್ರಿ ರಿಸರ್ಚ್ ಇನಸ್ಟಿಟ್ಯೂಟ್: ಚೆನ್ನೈ
- ಫಿಲಿಯೋಜ ವಸುಂಧರಾ ಮತ್ತು ಫಿಲಿಯೋಝಾ ಪಯೆರ್, 2011, **ಕಾಳಾಮುಖ ಟೆಂಪಲ್ ಆಫ್ ಕರ್ನಾಟಕ– ಆರ್ಟ್ ಎಂಡ್ ಕಲ್ಚರಲ್ ಲೆಗಸಿ,** IGNCA, ಡಿ.ಕೆ. ಪ್ರಿಂಟ್ ವರ್ಲ್ಡ್: ನ್ಯೂ ದೆಹಲಿ.
- ರಾಜನ್ ಕೆ., 2000, **ಸೌಥ್ ಇಂಡಿಯನ್ ಮೆಮೊರಿಯಲ್ ಸ್ಟೋನ್ಸ್**, ಮನೂಪಥಿಪ್ಪಕಮ್: ತಂಜಾವೂರ್.
- ರಾಜನ್ ಕೆ. 2014, 'ಲೈಫ್ ಆಫ್ಟರ್ ಡೆತ್: ಫ್ರಾಮ್ ಮೋರ್ಟಲ್ ರಿಮೇನ್ಸ್ ಟು ಮಾನ್ಯುಮೆನಟ್ಸ್'. ವ್ಯಾಲೆರಿ ಗಿಲೆಟ್ (ಸಂ.), **ಮ್ಯಾಪಿಂಗ್ ದಿ ಕ್ರೊನಾಲಜಿ ಒ ಭಕ್ತಿ: ಮೈಲ್‌ಸ್ಟೋನ್ಸ್, ಸ್ಟೆಪಿಂಗ್ ಸ್ಟೋನ್ಸ್ ಎಂಡ್ ಸ್ಟಂಬ್ಲಿಂಗ್ ಸ್ಟೋನ್ಸ್**, ಫ್ರೆಂಚ್ ಇನ್ಸ್ಟಿಟ್ಯೂಟ್: ಪಾಂಡಿಚೆರಿ. ಪುಟ.221–39.
- ರಾಜಶೇಖರ ಎಸ್., 1982, 'ರಾಷ್ಟ್ರಕೂಟ ಹಿರೋ ಸ್ಟೋನ್ಸ್: ಎ ಸ್ಟಡಿ', ಸೆಟ್ಟರ್ ಎಸ್. ಹಾಗೂ ಗುಂಥೆರ್ ಸೊಂಥೈಮರ್ (ಸಂ.), **ಮೆಮೊರಿಯಲ್ ಸ್ಟೋನ್ಸ್, ಎ ಸ್ಟಡಿ ಆಫ್ ದೆರ್ ಒರಿಜಿನ್, ಸಿಗ್ನಿಫಿಕೆನ್ಸ್ ಎಂಡ್ ವೆರೈಟಿ,** ಇನ್ಸ್ಟಿಟ್ಯೂಟ್ ಆಫ್ ಆರ್ಟ ಹಿಸ್ಟರಿ, ಕರ್ನಾಟಕ ವಿಶ್ವವಿದ್ಯಾಲಯ: ಧಾರವಾಡ. ಪುಟ.227–30.
- ರೆಡ್ಡಿ ಚಂದ್ರಶೇಖರ, 1994, **ಹಿರೋಸ್, ಕಲ್ಟ್ಸ್ ಎಂಡ್ ಮೆಮೊರಿಯಲ್ಸ್– ಆಂಧ್ರಪ್ರದೇಶ್**, ನ್ಯೂ ಎರಾ ಪಬ್ಲಿಕೇಶನ್ಸ್: ಮಡ್ರಾಸ್.
- ರೈಸ್ ಬಿ.ಎಲ್. 1904, **ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ 3,** ಮೈಸೂರು ಸರ್ಕಾರದ ಕೇಂದ್ರ ಮುದ್ರಣಾಲಯ: ಮೈಸೂರು.
- ಲಾರೆಂಝೆನ್ ಡೇವಿಡ್, 1972, ದಿ **ಕಾಪಾಲಿಕಾಸ್ ಎಂಡ್ ಕಾಳಾಮುಖಾಸ್, ಟೂ ಲಾಸ್ಟ್ ಶಯವೈಟ್ ಸೆಕ್ಟ್ಸ್,** ಮೋತಿಲಾಲ್ ಬನಾರಸಿದಾಸ್: ದೆಹಲಿ.
- ಶೇಷಶಾಸ್ತ್ರಿ ಆರ್. 2004, **ಕರ್ನಾಟಕದ ವೀರಗಲ್ಲುಗಳು**, ಸಾಹಿತ್ಯ ಪ್ರಕಾಶನ: ಬೆಂಗಳೂರು.
- ಶ್ರೀಧರ್ ಹೆಚ್. ಈ. 2002, **ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಯುದ್ಧಕಲೆ,** ಶಿವರಾಮ ಕಾರಂತ ಅಧ್ಯಯನ ಕೇಂದ್ರ: ಪುತ್ತೂರು.
- **ಶ್ರೀ ಮನ್ಮಹಾಭಾರತ, ಸಂಪುಟ 9,** (ವ್ಯಾಸಭಾರತದ ಕನ್ನಡ ಅನುವಾದ) 2004, ಭಾರತ ದರ್ಶನ ಪ್ರಕಾಶನ: ಬೆಂಗಳೂರು.
- **ಶ್ರೀ ಮನ್ಮಹಾಭಾರತ, ಸಂಪುಟ 19,** (ವ್ಯಾಸಭಾರತದ ಕನ್ನಡ ಅನುವಾದ) 2008, ಭಾರತ ದರ್ಶನ ಪ್ರಕಾಶನ: ಬೆಂಗಳೂರು.
- **ಶ್ರೀಮದ್ಭಗವದ್ಗೀತೆ, 2011,** (ಕನ್ನಡ ಅನುವಾದ), ಕೀರ್ತನಾಚಾರ್ಯ ಲಕ್ಷ್ಮಣದಾಸ ವೇಲಂಕರ್. ಗೀತಾ ಪ್ರೆಸ್: ಗೋರಖ್‌ಪುರ.
- ಸರ್ಕಾರ್ ಹೆಚ್. 1982, 'ದಿ ಛಾಯಾ ಸ್ತಂಭಾಸ್ ಆಫ್ ನಾಗಾರ್ಜುನಕೊಂಡ', ಸೆಟ್ಟರ್ ಎಸ್. ಹಾಗೂ ಗುಂಥೆರ್ ಸೊಂಥೈಮರ್ (ಸಂ.), **ಮೆಮೊರಿಯಲ್ ಸ್ಟೋನ್ಸ್, ಎ ಸ್ಟಡಿ ಆಫ್ ದೆರ್ ಒರಿಜಿನ್, ಸಿಗ್ನಿಫಿಕೆನ್ಸ್ ಎಂಡ್ ವೆರೈಟಿ,** ಇನ್ಸ್ಟಿಟ್ಯೂಟ್ ಆಫ್ ಆರ್ಟ ಹಿಸ್ಟರಿ, ಕರ್ನಾಟಕ ವಿಶ್ವವಿದ್ಯಾಲಯ: ಧಾರವಾಡ. ಪುಟ. 199–207.
- ಸೆಟ್ಟರ್ ಎಸ್. ಹಾಗೂ ಗುಂಥೆರ್ ಸೊಂಥೈಮರ್ (ಸಂ), 1982, **ಮೆಮೊರಿಯಲ್ ಸ್ಟೋನ್ಸ್, ಎ ಸ್ಟಡಿ ಆಫ್ ದೆರ್ ಒರಿಜಿನ್, ಸಿಗ್ನಿಫಿಕೆನ್ಸ್ ಎಂಡ್ ವೆರೈಟಿ,** ಇನ್ಸ್ಟಿಟ್ಯೂಟ್ ಆಫ್ ಆರ್ಟ ಹಿಸ್ಟರಿ. ಕರ್ನಾಟಕ ವಿಶ್ವವಿದ್ಯಾಲಯ: ಧಾರವಾಡ.
- ಸೆಟ್ಟರ್ ಎಸ್. 1982, 'ಮೆಮೊರಿಯಲ್ ಸ್ಟೋನ್ ಇನ್ ಸೌಥ್ ಇಂಡಿಯಾ', ಸೆಟ್ಟರ್ ಎಸ್. ಹಾಗೂ ಗುಂಥೆರ್ ಸೊಂಥೈಮರ್ (ಸಂ), 1982, **ಮೆಮೊರಿಯಲ್ ಸ್ಟೋನ್ಸ್, ಎ ಸ್ಟಡಿ ಆಫ್ ದೆರ್ ಒರಿಜಿನ್, ಸಿಗ್ನಿಫಿಕೆನ್ಸ್ ಎಂಡ್ ವೆರೈಟಿ,** ಇನ್ಸ್ಟಿಟ್ಯೂಟ್ ಆಫ್ ಆರ್ಟ ಹಿಸ್ಟರಿ, ಕರ್ನಾಟಕ ವಿಶ್ವವಿದ್ಯಾಲಯ: ಧಾರವಾಡ. ಪುಟ.183–97.
- ಸೆಟ್ಟರ್ ಎಸ್. ಮತ್ತು ಕಲಬುರ್ಗಿ ಎಂ.ಎಂ. 1982, 'ದಿ ಹಿರೊ ಕಲ್ಟ್: ಎ ಸ್ಟಡಿ ಆಫ್ ಕನ್ನಡ ಲಿಟರೇಚರ್ ಫ್ರಮ್ 9ಥ್ ಟೊ 12ಥ್ ಸೆಂಚುರಿ', ಸೆಟ್ಟರ್ ಎಸ್. ಹಾಗೂ ಗುಂಥೆರ್ ಸೊಂಥೈಮರ್ (ಸಂ.), **ಮೆಮೊರಿಯಲ್ ಸ್ಟೋನ್ಸ್, ಎ ಸ್ಟಡಿ ಆಫ್ ದೆರ್ ಒರಿಜಿನ್, ಸಿಗ್ನಿಫಿಕೆನ್ಸ್ ಎಂಡ್ ವೆರೈಟಿ,** ಇನ್ಸ್ಟಿಟ್ಯೂಟ್ ಆಫ್ ಆರ್ಟ ಹಿಸ್ಟರಿ, ಕರ್ನಾಟಕ ವಿಶ್ವವಿದ್ಯಾಲಯ: ಧಾರವಾಡ. ಪು.17–36.
- ಹೆಗಡೆ ರಾಜಾರಾಮ, 2006, **ಟೆಂಪಲ್ ಪೇಟ್ರೊನೇಜ್ ಇನ್ ಮಿಡೀವಲ್ ಕರ್ನಾಟಕ, ವಿಥ್ ಸ್ಪೆಶಿಯಲ್ ರೆಫರೆನ್ಸ್ ಟು ದಿ ಮಿಡೀವಲ್ ಕರ್ನಾಟಕ,** ICHR ಪ್ರಾದೇಶಿಕ ಕಛೇರಿ: ಬೆಂಗಳೂರು. ■

ITIHASA DARPANA (Quarterly)
A Peer Reviewed Journal of Historical Research in Kannada
ISSN 2321-3590
Book No.: 37-38.
April – September 2018
Author: Hanumakshi Gogi
Title: Pampa mattu Aṇṇigere

ಪಂಪ ಮತ್ತು ಅಣ್ಣಿಗೆರೆ

ಹನುಮಾಕ್ಷಿ ಗೋಗಿ
ರಾಷ್ಟ್ರಕವಿ ಕುವೆಂಪು ರಸ್ತೆ
ನವನಗರ, ಹುಬ್ಬಳ್ಳಿ
9448272089
hanumakshigogi@gmail.com

**ಪಂಪಂ ಧಾತ್ರೀವಳಯನಿ
ಳಿಂಪಂ ಲಲಿತಾಲಂಕರಣಂ ಚತುರಂಗಬಲ
ಭಯಂಕರಣಂ ಪಂಚಶರೈಕ ರೂಪಂ
ಅಪಗತ ಪಾಪಂ ಕದಳೀಗರ್ಭ ಶ್ಯಾಮಂ ।**

ಎಂದು ತನ್ನನ್ನು ತಾನು ಹೊಗಳಿಕೊಳ್ಳುವ ಆದಿಕವಿ ಪಂಪನ ಮೂಲ ಹೆಸರು ಪಂಪಯ್ಯ. ರೋಣ ನಗರದ ತಹಸೀಲ್ ಕಛೇರಿಯಲ್ಲಿರುವ ತ್ರುಟಿತ ವೀರಗಲ್ಲೊಂದರಲ್ಲಿ ಇದೇ ಹೆಸರಿನ ಕಲಿಯೊಬ್ಬನಿದ್ದಾನೆ. ಕಾರಣ ಆ ಕಾಲದಲ್ಲಿ ಈ ಹೆಸರು ಸಾಮಾನ್ಯವಾಗಿ ಬಳಕೆಯಲ್ಲಿತ್ತು ಎನ್ನುವುದು ನಿರ್ವಿವಾದ. ಇದರಿಂದ ಪಂಪ>ಪಂಪಣ್ಣ>ಪಂಪನ ಎಂಬ ತೆಲುಗು ರೂಪ ಸಿದ್ಧಿಸುತ್ತದೆ. ಅವನ ಕಾವ್ಯಗಳಲ್ಲಿ ಉಲ್ಲೇಖಗೊಂಡಿರುವಂತೆ, ಗಿರಿಯಜ್ಜ ಮಾಧವ ಸೋಮಯಾಜಿ, ಮುತ್ತಜ್ಜ ಅಭಿಮಾನಚಂದ್ರದೇವ, ಅಜ್ಜ ಕೊಮರಯ್ಯ, ತಂದೆ ಅಭಿರಾಮದೇವರಾಯ ಎಂದು ವಿದ್ವಾಂಸರು ಪಂಪನ ವಂಶಾವಳಿಯನ್ನು ಈಗಾಗಲೇ ದೊರೆತ ಕಾವ್ಯಗಳ ಆಧಾರಗಳಿಂದ ಗುರುತಿಸಿದ್ದಾರೆ. ಗಂಗಾಧರಂ ಶಾಸನ ಹೇಳುವಂತೆ ಇವರು 'ಬೆಂಗಿನಾಡ ಸಪ್ತ ಗ್ರಾಮಗಳೊಳಗಣ ವೆಂಗಿಪಳು ಕಮ್ಮೆ ಬ್ರಾಹ್ಮಣಂ ಜಮದಗ್ನಿ ಪಂಚಾರ್ಷೇಯಂ ಶ್ರೀವತ್ಸ ಗೋತ್ರಂ ಗುಣ್ಡಿಕಉಳು ನಿಡುಂಗೊಣ್ಡೆಯ ನಿವಾಸಿಗಳು. ಎಂದರೆ ಇಂದಿನ ಆಂಧ್ರಪ್ರದೇಶದ ಬಾಪಟ್ಲ ಜಿಲ್ಲೆಯ

ಭಾಗವಾದ ಪ್ರಾಚೀನ ಬೆಂಗಿನಾಡಿನಲ್ಲಿ ಸಮಾವೇಶಗೊಂಡಿದ್ದ ಏಳು ಗ್ರಾಮಗಳಲ್ಲಿ ಒಂದಾದ ವೆಂಗಿಪಜಿ ಊರಿನ ಮೂಲ ನಿವಾಸಿಗಳು. ಕಮ್ಮೆ ಬ್ರಾಹ್ಮಣರು, ಜಮದಗ್ನಿ ಪಂಚಾರ್ಷೇಯರು, ಶ್ರೀವತ್ಸ ಗೋತ್ರದವರು. ಮೂಲತಃ ಬೆಂಗಿನಾಡ ಸಪ್ತಗ್ರಾಮಗಳೊಳಗಿರುವ ವೆಂಗಿಪಜಿ ಊರಿನವರಾದ ಇವರು ಬಹುಶಃ ಪಂಪನ ಅಜ್ಜ ಅಭಿಮಾನಚಂದ್ರನ ಕಾಲದಲ್ಲಿ ನಿಡುಂಗೊಂಡೆ ಊರಿಗೆ ಸ್ಥಳಾಂತರಗೊಂಡಿರಬೇಕು. ಕಾರಣ ಅಭಿಮಾನಚಂದ್ರನನ್ನು ಶಾಸನವು ನಿಡುಂಗೊಂಡೆ ಊರಿನವನು ಎಂದು ಹೆಸರಿಸಿದೆ. ಈ ಗುಂಡಿಕಜಿ ಮತ್ತು ನಿಡುಂಗೊಂಡೆ ಊರುಗಳು ಯಾವುವು? ಎಲ್ಲಿವೆ? ಎಂಬುದನ್ನು ಇನ್ನೂ ಸಂಶೋಧಿಸಬೇಕಿದೆ. ನಿಡುಂಗೊಂಡೆ ಎನ್ನುವುದು ಈಗಿನ ರೋಣ ತಾಲೂಕಿನ ನಿಡಗುಂದಿಯಾಗಿರಬಹುದು ಎಂದು ಎಂ.ಜಿ.ಮಂಜುನಾಥ ಅವರು ಊಹಿಸಿದ್ದಾರೆ. ಆದರೆ ರೋಣ ತಾಲೂಕಿನ ನಿಡಗುಂದಿಯಲ್ಲಿ ಕ್ಷೇತ್ರಕಾರ್ಯ ಮಾಡಿದಾಗ ಇದನ್ನು ಪುಷ್ಟೀಕರಿಸುವ ಯಾವ ಕುರುಹುಗಳೂ ದೊರೆಯಲಿಲ್ಲ. ಇಲ್ಲಿ ಕಜಿ ಎಂದರೆ ಝುರಿ, ಹಳ್ಳ ಎಂದಾಗಿದ್ದು, ರೋಣ ತಾಲೂಕಿನ ನಿಡಗುಂದಿಯ ಸುತ್ತ ಅಥವಾ ಹತ್ತಿರ ಇಂದು ಯಾವುದೇ ಝುರಿ ಹಳ್ಳಗಳಿಲ್ಲ. ಇದು ಬೋಧನದ ಹತ್ತಿರದ ನಿಡಗುಂದಿಯಾಗಿರಬಹುದು ಎನ್ನುತ್ತಾರೆ ಸೀತಾರಾಮ ಜಹಗೀರದಾರ ಅವರು. ಇದನ್ನೂ ಕ್ಷೇತ್ರಕಾರ್ಯದ ಮೂಲಕ ಪರಿಶೀಲಿಸಬಹುದಾಗಿದೆ.

9–10ನೆಯ ಶತಮಾನಗಳಲ್ಲಿ ಬೆಂಗಿನಾಡಿನ ಬೋಧನ ಭಾಗದಿಂದ ನೂರಾರು ಬ್ರಾಹ್ಮಣರ ಮನೆತನಗಳು ಇಂದಿನ ರೋಣ ತಾಲೂಕಿನ ಪರಿಸರಕ್ಕೆ ವಲಸೆ ಬಂದವು. ಇವುಗಳಲ್ಲಿ ಪಂಚತಂತ್ರದ ದುರ್ಗಸಿಂಹ ಮತ್ತು ಕಾವ್ಯಾವಲೋಕನದ ನಾಗವರ್ಮನ ಮನೆತನಗಳನ್ನು ಸೇರಿಸಬಹುದು. ಇಂದು ಸಯ್ಯಡಿಯಲ್ಲಿ (ರೋಣ ತಾಲೂಕಿನ ಸವಡಿ) ದುರ್ಗಸಿಂಹ ತಾನು ಕಟ್ಟಿಸಿದ್ದೇನೆಂದು ಪಂಚತಂತ್ರ ಕಾವ್ಯದಲ್ಲಿ ಹೇಳಿಕೊಳ್ಳುವ ಹರಿಹರ ಭವನ ಮತ್ತು ನಾಗವರ್ಮ ಆರಾಧಿಸಿದ ತನ್ನ ಕಾವ್ಯದಲ್ಲಿ ಹೇಳಿಕೊಂಡ 'ಸಯ್ಯಡಿಯ ನಾಕಿ ಪಿನಾಕಿ'ಯ ದೇವಸ್ಥಾನಗಳು ಇಂದಿಗೂ ಇವೆ. ಆದರೆ ರೋಣ ತಾಲೂಕಿನ ಯಾವುದೇ ಶಾಸನಗಳಲ್ಲಿ ಪಂಪನ ಪೂರ್ವಜರ ಹೆಸರುಗಳಿಲ್ಲ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಗಿರಿಯಜ್ಜ ಮಾಧವ ಸೋಮಯಾಜಿ, ಮುತ್ತಜ್ಜ ಅಭಿಮಾನಚಂದ್ರರ ಹೆಸರುಗಳು ಬ್ರಾಹ್ಮಣರ ಸಂಸ್ಕೃತ ಭಾಷಾ ಮೂಲದವು. ಅಜ್ಜ ಕೊಮರಯ್ಯ, ತಂದೆ ಭೀಮಪಯ್ಯ, ಮಗ ಪಂಪಯ್ಯನ ಹೆಸರುಗಳು ದೇಶಿ ಹೆಸರುಗಳು. ತಮ್ಮ ಜಿನವಲ್ಲಭನ ಹೆಸರು ಮಾತ್ರ ಮತ್ತೆ ಮಾರ್ಗೀಯ ಶೈಲಿಯದು. ಇವರು ಅಜ್ಜ ಕೊಮರಯ್ಯ ಇಲ್ಲವೆ ತಂದೆ ಭೀಮಪಯ್ಯನ ಕಾಲದಲ್ಲಿ ಬ್ರಾಹ್ಮಣದಿಂದ ಜೈನಕ್ಕೆ ಧರ್ಮವನ್ನು ಬದಲಾಯಿಸಿದುದರ ಕಾರಣದಿಂದಾಗಿ (ಮತಾಂತರ) ಇವರ ಹೆಸರುಗಳಲ್ಲಿ ಇಂತಹ ಮಹತ್ತರ ಬದಲಾವಣೆ ಕಾಣುತ್ತೇವೆ ಎನ್ನಿಸುತ್ತಿದೆ. ಅದರಲ್ಲಿಯೂ ತಂದೆ ಭೀಮಪಯ್ಯ 'ಅವನಿತಳಾಕಾಶ ವ್ಯಾಪ್ತಕೀರ್ತಿ. ನಿಜಗುಣಮಣಿ ರತ್ನಾಕರ. ಅಜ್ಞಾನ ತಮೋನಿಕಪರಂ' ಎಂದು ಹೆಸರಾಂತ ಮಹಾನುಭಾವ. ಮುಂದೆ ಪಂಪನಿಗೆ ಪಶ್ಚಿಮ ಚಾಳುಕ್ಯ ಸಾಮಂತ ಅರಿಕೇಸರಿ ಧರ್ಮಪುರ ಅಗ್ರಹಾರವನ್ನು ಅಬ್ರಾಹ್ಮಣನಾದ ಪಂಪನಿಗೆ ದಾನವಾಗಿ ಕೊಟ್ಟುದರಿಂದ. ಪಂಪ ತನ್ನ ಕೊನೆಗಾಲವನ್ನು ಧರ್ಮಪುರ ಅಗ್ರಹಾರದಲ್ಲಿ ಕಳೆದಿರಬೇಕು ಹಾಗೂ ಅಕಾಲಿಕ ಮರಣ ಹೊಂದಿರಬೇಕೆಂದು ತೋರುತ್ತದೆ ಎನ್ನುತ್ತಾರೆ ಎಂ.ಎಂ. ಕಲಬುರ್ಗಿಯವರು. ಇದಲ್ಲದೆ ಅವರು ಕಾವ್ಯಗಳನ್ನು ಪ್ರತಿ ಮಾಡಿದವರ

ಅಜ್ಞಾನದಿಂದ ಇಲ್ಲವೆ ಅಕ್ಷರ ಸಾದೃಶ್ಯದಿಂದ ಭೀಮಪಯ್ಯ ಎನ್ನುವ ಹೆಸರೇ ಅಭಿರಾಮದೇವರಾಯ ಆಯಿತೆನ್ನುವ ಸಂಭಾವ್ಯತೆಯ ಎಡೆಗೆ ನಮ್ಮ ಗಮನ ಸೆಳೆದಿದ್ದಾರೆ.

ಅಣ್ಣಿಗೆರೆಯು ಆದಿಕವಿ ಪಂಪನ ಜನ್ಮಸ್ಥಾನವೆಂದು ಮುಳಿಯ ತಿಮ್ಮಪ್ಪಯ್ಯ, ವೆಂಕಟರಮಣಯ್ಯ, ಆರ್.ಸಿ.ಹಿರೇಮಠ, ಡಿ.ಕೆ.ಭೀಮಸೇನರಾಯ, ವಿ.ಜಿ.ಕುಲಕರ್ಣಿ, ಎಂ.ಚಿದಾನಂದಮೂರ್ತಿ, ಎಂ.ಎಂ.ಕಲಬುರ್ಗಿ, ಪಿ.ಬಿ.ದೇಸಾಯಿ ಮತ್ತು ಇನ್ನೂ ಅನೇಕ ವಿದ್ವಾಂಸರು ಪ್ರತಿಪಾದಿಸುತ್ತಾರೆ. ಅಂತೆಯೇ ಅವನ ಇತಿವೃತ್ತಗಳ ಬಗ್ಗೆ ಚರ್ಚೆ ನಡೆಸಿದ್ದಾರೆ. ಇದಕ್ಕೆ ಆಧಾರವೆಂದರೆ ಅವನ ತಮ್ಮ ಜಿನವಲ್ಲಭನ ಸು.10ನೆಯ ಶತಮಾನದ ಗಂಗಾಧರಂ (ಕುರ್ಕಿಯಾಲ್– ಕರೀಂ ನಗರ ಜಿಲ್ಲೆ) ಶಾಸನ. ಅಲ್ಲಿ ಬರುವ– "ನಿಡುಂಗೊಂಡೆಯ ಅಭಿಮಾನಚಂದ್ರನ ಮರ್ಮಂ ಭೀಮಪಯ್ಯನ, ಬೆಳ್ವೊಲದಣ್ಣಿಗೆಜೆಯ ಜೋಇಸ ಸಿಂಘನ ಮರ್ಮ್ಮಳಬ್ಬಣಬ್ಬೆಯ ಮಗಂ' ಎನ್ನುವ ವಾಕ್ಯವೇಷ್ಟನ. ಇಲ್ಲಿ ಜಿನವಲ್ಲಭನನ್ನು ಬೆಳ್ವೊಲದ ಅಣ್ಣಿಗೆಜೆಯ ಜೋಇಸ ಸಿಂಘನ ಮರ್ಮ್ಮಳ್ ಅಬ್ಬಣಬ್ಬೆಯ ಮಗಂ ಎಂದಿದ್ದು, ಈ ಮರ್ಮಳ್ ಶಬ್ದದ ಪುರುಷವಾಚಿ ಮರ್ಮ್ಮಂ ಅಥವಾ ಮಮ್ಮಂ. 'ಮಮ್ಮಂ ಲಖ್ಖಯ್ಯ' ಎಂಬ ಶಬ್ದದ ಬಳಕೆ ಇದೇ ಅಣ್ಣಿಗೆರೆಯ ಕ್ರಿ.ಶ.1202ರ ಶಾಸನದ 84 ನೆಯ ಸಾಲಿನಲ್ಲಿ ಬಳಕೆಗೊಂಡಿದೆ. ಈ ಶಬ್ದದ ಕುರಿತು ಸಾಕ್ಷಾಧಾರಗಳೊಂದಿಗೆ ಕಲಬುರ್ಗಿಯವರು ವಿವರಿಸಿದ್ದಾರೆ. ಈ ಮರ್ಮ್ಮ ಶಬ್ದದ ಸ್ತ್ರೀಲಿಂಗ ರೂಪವೇ ಮರ್ಮ್ಮಳ್>ಮಮ್ಮಳ್> ಮೊಮ್ಮಗಳು ಆಗುತ್ತದೆ.

ಈ ಶಬ್ದವೇಷ್ಟನವನ್ನು ಬೆಳ್ವೊಲ ನಾಡಿನಲ್ಲಿರುವ, ಅಣ್ಣಿಗೆರೆಯ ನೆಲೆಯಾಗಿರುವ, ಜೋಇಸ ಸಿಂಘನ ಮೊಮ್ಮಗಳಾದ ಅಬ್ಬಣಬ್ಬೆಯ ಮಗ ಜಿನವಲ್ಲಭನೆಂದು ಅರ್ಥೈಸಬಹುದು. ಇಲ್ಲಿ ಅಬ್ಬಣಬ್ಬೆಯು ಜೋಇಸ ಸಿಂಘನ ಮೊಮ್ಮಗಳೆಂದರೆ ಮಗನ ಮಗಳೋ ಅಥವಾ ಮಗಳ ಮಗಳೋ ಎಂಬುದು ಸ್ಪಷ್ಟವಾಗುವುದಿಲ್ಲ. ಮಗಳ ಮಗಳಾಗಿದ್ದರೆ ಮಾತ್ರ ಅಬ್ಬಣಬ್ಬೆಯ ಜನ್ಮಸ್ಥಾನ ಅಣ್ಣಿಗೆರೆಯಾಗುತ್ತದೆ. ಆದರೆ ಅಬ್ಬಣಬ್ಬೆಯ ಮಗನ ಜನ್ಮಸ್ಥಾನ ಆಕೆಯ ತವರೂರು ಎಂದರೆ ಅಬ್ಬಣಬ್ಬೆಯ ತಾಯಿಯನ್ನು ಮದುವೆ ಮಾಡಿಕೊಟ್ಟ ಊರಾಗುತ್ತದೆ. ಮಗನ ಮಗಳಾಗಿದ್ದರೆ ಅಬ್ಬಣಬ್ಬೆಯ ತಾಯಿಯ (ಜೋಇಸ ಸಿಂಘನ ಸೊಸೆ) ತವರೂರು ಅಬ್ಬಣಬ್ಬೆಯ ಜನ್ಮಸ್ಥಾನವಾಗುತ್ತದೆ. ಅದು ಬೇರೆ ಊರಾಗಿರಬಹುದು. ಇಲ್ಲವೇ ಅಬ್ಬಣಬ್ಬೆಯ ತಾಯಿಯ ತವರೂರೂ ಅಣ್ಣಿಗೆರೆಯೇ ಆಗಿದ್ದರೆ ಅಣ್ಣಿಗೆರೆ ಜನ್ಮಸ್ಥಾನವಾಗುತ್ತದೆ. ಇನ್ನು ಅಬ್ಬಣಬ್ಬೆಯ ಮಗನ ಜನ್ಮಸ್ಥಾನ ಅಬ್ಬಣಬ್ಬೆಯ ತಂದೆ-ತಾಯಿಯರಿರುವ ಊರಾಗುತ್ತದೆ. ಕಾರಣ ಮಗನ ಮಗಳಾಗಿದ್ದರೆ ಮಾತ್ರ ಭಾರತೀಯ ಸಂಪ್ರದಾಯದಂತೆ ಅವಳ ಚೊಚ್ಚಿಲು ಮಗುವಿನ ಹೆರಿಗೆ ಅಣ್ಣಿಗೆರೆಯಲ್ಲಿ ಆಗುತ್ತದೆ. ಮಗಳ ಮಗಳಾಗಿದ್ದರೆ ಆಗುವ ಸಾಧ್ಯತೆ ಬಹಳ ಕಡಿಮೆ. ಕಾರಣ ಪಂಪನ ಜನ್ಮಸ್ಥಾನ ಅಣ್ಣಿಗೆರೆ ಎನ್ನುವುದು ಸಂಶಯಕ್ಕೆ ಎಡೆಮಾಡಿಕೊಡುತ್ತದೆ.

ಗಂಗಾಧರಂ ಶಾಸನದನ್ವಯ ಜಿನವಲ್ಲಭನ ತಾಯಿ ಅಬ್ಬಣಬ್ಬೆ ಎನ್ನುವುದು ಸರಿ. ಜಿನವಲ್ಲಭನನ್ನು ಶಾಸನದಲ್ಲಿ ಮೂರು ಬಾರಿ ಪಂಪಾರ್ಯಾನುಜ, ಪಂಪಾಭಿದಾನಾನುಜ, ಸನ್ನ ಪಂಪನ ತಮ್ಮ ಎಂದು ದಾಖಲಿಸಲಾಗಿದೆ. ಎಂದರೆ ಜಿನವಲ್ಲಭ ಪಂಪನ ತಮ್ಮ. ಆದರೆ ಅಬ್ಬಣಬ್ಬೆ ಪಂಪನ ತಾಯಿ ಅಥವಾ ಅಬ್ಬಣಬ್ಬೆಯ ಮಗ ಪಂಪ ಎಂದು ಶಾಸನದಲ್ಲಿ ಎಲ್ಲಿಯೂ ನೇರವಾಗಿ ಹೇಳಿಲ್ಲ. ಒಂದು ವೇಳೆ ಮಗನಾಗಿದ್ದರೆ 'ಬೆಳ್ವೊಲದಣ್ಣಿಗೆಜೆಯ ಜೋಇಸ ಸಿಂಘನ ಮರ್ಮ್ಮಳಬ್ಬಣಬ್ಬೆಯ ಮಗಂ ಪಂಪಂ

ಮೇಣ್ ಜಿನವಲ್ಲಭಂ' ಎಂದೇಕೆ ಈ ಶಾಸನವು ಹೇಳಲಿಲ್ಲ? ಹೇಳಿದ್ದರೆ ಅಬ್ಬಣಬ್ಬೆ ತಾಯಿ ಎಂದು ಒಪ್ಪಬಹುದಿತ್ತು. ಇದಲ್ಲದೇ ಪಂಪನ ಎರಡೂ ಕಾವ್ಯಗಳಲ್ಲಿ ತಾಯಿಯ ಹೆಸರಿಲ್ಲ. ಕಾರಣ ಅಬ್ಬಣಬ್ಬೆ ಪಂಪನ ತಾಯಿಯೇ ಅಥವಾ ಮಲತಾಯಿಯೇ? ಎನ್ನುವ ಸಂಶಯ ಸಹಜವಾಗಿ ಉತ್ಪನ್ನವಾಗುತ್ತದೆ. ಒಂದು ವೇಳೆ ಅವಳು ಮಲತಾಯಿಯಾಗಿದ್ದರೆ ಎಂದರೆ ಭೀಮಪಯ್ಯನ ಎರಡನೆಯ ಹೆಂಡತಿಯಾಗಿದ್ದು, ಪಂಪ ಮೊದಲನೆಯ ಹೆಂಡತಿಯ ಮಗನಾಗಿದ್ದರೆ ಅವನ ಜನ್ಮಸ್ಥಾನ ಅಣ್ಣಿಗೆರೆ ಆಗುವುದು ಬಹುದೂರದ ಮಾತು ಅಷ್ಟೇ ಅಲ್ಲ, ಅಸಾಧ್ಯದ ಮಾತು.

ಮೊದಲ ಬಾರಿಗೆ ಈ ಕುರಿತು ಈಗಾಗಲೇ ಚೌಧರಿ ಮತ್ತು ಅನಂತಯ್ಯನವರು **ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ**ಯಲ್ಲಿ ಪಂಪ ಮತ್ತು ಜಿನವಲ್ಲಭರು ಏಕೋದರರೋ ಬಹೂದರರೋ ಎನ್ನುವ ಬಗ್ಗೆ ಚರ್ಚಿಸಿದ್ದಾರೆ. ಇನ್ನು ವಿದ್ವಾಂಸರು ಕೊಡುವ ಇನ್ನೊಂದು ಕಾರಣವೆಂದರೆ ಪಂಪನ ತಾಯಿಯ ತವರೂರು ಅಣ್ಣಿಗೆರೆ. ಇಲ್ಲಿಯ ದೇಶಪಾಂಡೆಯವರ ಮನೆತನದಲ್ಲಿ ತಲೆತಲಾಂತರಗಳಿಂದ ಪಂಪನ ತಂದೆ ಭೀಮಪಯ್ಯ ಎಂಬ ಹೆಸರು ಕಂಡುಬರುತ್ತದೆ. ಇದು ಪಂಪನ ತಂದೆಯ ಹೆಸರು. ಆದರೆ ಸಾಮಾನ್ಯವಾಗಿ ಸಾಂಪ್ರದಾಯಿಕವಾಗಿ ಗಂಡುಮಕ್ಕಳ ಮನೆಯಲ್ಲಿ ಹಿರಿಯರಾದ ಅಜ್ಜಮುತ್ತಜ್ಜಂದಿರ ಹೆಸರನ್ನು ಮೊಮ್ಮಕ್ಕಳು, ಮರಿಮೊಮ್ಮಕ್ಕಳಿಗೆ ತಲೆಮಾರುಗಳವರೆಗೆ ಇಡಲಾಗುತ್ತದೆಯೇ ಹೊರತು ಹೆಣ್ಣುಮಕ್ಕಳ ಮನೆಯಲ್ಲಲ್ಲ. ಇಟ್ಟರೂ ಬಹಳ ಕ್ವಚಿತ್ತಾಗಿ. ಪಂಪನ ತಂದೆಯ ಊರು ಆಂಧ್ರಪ್ರದೇಶದ ಗುಂಡಿಹಳ್ಳ ತೀರದ ನಿಡುಂಗೊಣ್ಡೆ ಎಂದು ಗಂಗಾಧರಂ ಶಾಸನದಲ್ಲಿಯೇ ಸ್ಪಷ್ಟವಾಗಿ ಹೇಳಲಾಗಿದೆ. ಹಾಗಾಗಿ ಪಂಪನ ನಿಡುಂಗೊಂಡೆಯ ಮನೆತನದಲ್ಲಿ ಈ ಹೆಸರು ತಲೆಮಾರುಗಳವರೆಗೆ ಪುನರುಕ್ತಗೊಳ್ಳುವುದು ನಂಬಲರ್ಹವಾದ ಸಂಗತಿ. ಈಗ ಜೈನರಾಗಿರುವ ಇಂದಿನ ಅಣ್ಣಿಗೆರೆಯ ದೇಶಪಾಂಡೆಯವರ ಮನೆತನದಲ್ಲಿ ಹೀಗೆ ಇಡಲು ಮತ್ತು ಮುಂದುವರೆದುಕೊಂಡು ಬರಲು ಏನರ್ಥವಿದೆ? ಪಂಪ ಮತ್ತು ಜಿನವಲ್ಲಭರ ನಂತರ ಅವರ ಮನೆತನ ಮುಂದುವರೆಯಲಿಲ್ಲವೇ? ಅವರಿಗೆ ಮಕ್ಕಳಾಗಲಿಲ್ಲವೇ? ಅವರ ವಂಶಜರು ಏನಾದರು? ಎಂಬಿತ್ಯಾದಿ ವಿವರಗಳು ಲಭ್ಯವಿಲ್ಲ. ಇದಲ್ಲದೆ ಪಂಪ **ಆದಿಪುರಾಣ**ವನ್ನು ರಚಿಸಿರುವುದರಿಂದ ಮನೆದೈವ ವೃಷಭನಾಥ. ಇದನ್ನು ಸಾಕ್ಷೀಕರಿಸುವ ಪುರಾವೆಯೆಂದರೆ ಜಿನವಲ್ಲಭ 'ತಮ್ಮ ಕುಲದೈವಮುಂ ಚಕ್ರೇಶ್ವರಿಯುಮಂ' ವೃಷಭಾದ್ರಿಯಲ್ಲಿ ಕೆತ್ತಿಸಿರುವುದು. ವೃಷಭನಾಥನ ಯಕ್ಷಿಯೇ ಚಕ್ರೇಶ್ವರಿ. ಆದರೆ ಇಂದು ದೇಶಪಾಂಡೆಯವರ ಮನೆಯಲ್ಲಿ ಪೂಜಿತಳಾಗುತ್ತಿರುವವಳು ಪದ್ಮಾವತಿ ಯಕ್ಷಿ. ಈಕೆ ಪಾರ್ಶ್ವನಾಥ ತೀರ್ಥಂಕರನ ಯಕ್ಷಿಯಾಗಿದ್ದಾಳೆ ಎನ್ನುವುದು ಗಮನಾರ್ಹ.

ಗಂಗಾಧರಂ ಶಾಸನದಲ್ಲಿ ಬರುವ
ಬರೆದುದೇ ತಾಂಬ್ರಶಾಸನಮದೇಯಮೇ ಧರ್ಮ್ಮಪುರಂ ನೆಗೞ್ತೆವೆ
ತ್ತರಿಗನ ಕೊಟ್ಟುದೇ ನೆಗೞ್ದ ಪಂಪನ ಪೆತ್ತುದೆ ಪೇೞಿಮೆನ್ದು ನೀ
ಮ್ಮರುಳೆ ಪಲರ್ಮ್ಮೆಯುಂ ಪಲಬರಂ ಬೆಸಗೊಳ್ಳದೆ ಪೋಗಿ ನೋಡ ಸು
ಸ್ಥಿರ ವೃಷಭಾಚಲೋನ್ನತ ಶಿಳಾತಳದೊಳ್ಬರೆದಕ್ಕರಂಗಳಂ ॥

ಎನ್ನುವ ಪದ್ಯವನ್ನು ಗಮನಿಸಿದಾಗ, ಜಿನವಲ್ಲಭನ ಈ ಶಾಸನದ ಹೊರತಾಗಿ, ಅರಿಕೇಸರಿಯು ಅಂದಿನ ಕಾಲದ ಬಚ್ಚೆ ಸಾಸಿರದಲ್ಲಿದ್ದ ನಿಜ ದ್ವಿಜಾವಸಥ ಧರ್ಮಪುರವನ್ನು ಅಗ್ರಹಾರವನ್ನಾಗಿ ಮಾಡಿ ಬ್ರಾಹ್ಮಣನಲ್ಲದ ಜೈನನಾಯ ಪಂಪನಿಗೆ ಕೊಡುವಾಗ,

ವೃಷಭಾಚಳದಲ್ಲಿ ಶಿಲಾಶಾಸನವನ್ನು ಬರೆಸಿದನೆಂದೂ ಸೂಚಿಸುವುದರಿಂದ, ಬಹುಶಃ ಅಗ್ರಹಾರವನ್ನು ಕೊಡುವಾಗ ನೀಡಿರಬಹುದಾದ ಆ ತಾಮ್ರಶಾಸನ ಮತ್ತು ಶಿಲಾಶಾಸನಗಳನ್ನು ಹುಡುಕಬೇಕಾಗಿದೆ. ಏಕೆಂದರೆ ಬ್ರಾಹ್ಮಣರಿಗೆ ಅಗ್ರಹಾರ ನೀಡಿದಾಗ ಬಹುತೇಕ ತಾಮ್ರಶಾಸನಗಳನ್ನು ಈ ಕಾಲದಲ್ಲಿ ನೀಡಲಾಗಿದೆ. ಅಂತೆಯೇ ಅರಿಕೇಸರಿ ಬರೆಸಿದ ಶಾಸನಗಳಲ್ಲಿ ವಿವರಗಳು ದೊರೆಯಬಹುದಾಗಿದೆ. ನಮ್ಮ ಹಲವು ಪ್ರಶ್ನೆಗಳಿಗೆ ಅಲ್ಲಿ ಉತ್ತರವೂ ದೊರೆಯಬಹುದು. ಆದರೆ ಆ ಶಾಸನಗಳು ಲಕ್ಕುಂಡಿಯ ಅತ್ತಿಮಬ್ಬೆಯ ಮೂಲ ಶಾಸನದಂತೆ ಕಾಲನ ಹಾಗೂ ಮಳೆ-ಗಾಳಿಗಳ ಹೊಡೆತಕ್ಕೆ ಅಥವಾ ಬ್ರಾಹ್ಮಣ-ಜೈನ ಧಾರ್ಮಿಕ ಸಂಘರ್ಷಗಳಿಗೆ ತುತ್ತಾಗಿ ಹಾಳಾಗಿವೆಯೋ, ಒಡೆದು ಹೋಗಿವೆಯೋ, ನಾಶವಾಗಿವೆಯೋ, ಇಲ್ಲವೇ ಕಳೆದುಹೋಗಿವೆಯೋ ತಿಳಿಯದು.

ಪಂಪ ತನ್ನ ಬಾಲ್ಯದ ಬಹುಮುಖ್ಯ ಸಮಯವನ್ನು ಬೆಳ್ವೊಲ ಹಾಗೂ ಬನವಾಸಿಯ ಪರಿಸರಗಳಲ್ಲಿ ಕಳೆದಿದ್ದಾನೆ ಎನ್ನುವುದರಲ್ಲಿ ಸಂಶಯವಿಲ್ಲ. ಆ ಕಾರಣದಿಂದಾಗಿಯೇ ಬನವಾಸಿ ದೇಶವನ್ನು ಪ್ರೀತಿಯಿಂದ ನೆನೆಯುತ್ತಾನೆ ಮತ್ತು ಪುಲಿಗೆರೆಯ ಕನ್ನಡದಲ್ಲಿ ಕಾವ್ಯಗಳನ್ನು ರಚಿಸಿದ್ದೇನೆ ಎಂದು ಹೇಳಿಕೊಂಡದ್ದನ್ನು ವಿದ್ವಾಂಸರೆಲ್ಲರೂ ಒಪ್ಪಿದ್ದಾರೆ. ಕವಿರಾಜಮಾರ್ಗಕಾರನ 'ತಿರುಳ್ಗನ್ನಡ', ರನ್ನನ 'ಎರಡುನೂರರ ಕನ್ನಡ' ಪಂಪನ 'ರಾಜದ್ರಾಜಕವೆನಿಸಿದ ಸಾಜದ ಪುಲಿಗೆರೆಯ ಕನ್ನಡ' ಇದೇ ಆಗಿತ್ತು. ಬಹುಜನ ಮೆಚ್ಚಿದ, ಉಪಯೋಗಿಸಿದ, ಸುಂದರವಾದ ಪ್ರಮಾಣಿತ ಭಾಷೆಯಾಗಿತ್ತು ಈ ತಿರುಳ್ಗನ್ನಡ.

ಚಿಕ್ಕ ವಯಸ್ಸಿನಲ್ಲಿ (40 ವರ್ಷ ಕ್ರಿ.ಶ. 941ರಲ್ಲಿ **ಆದಿಪುರಾಣ** ರಚಿತಗೊಂಡಿದೆ. ಅದಕ್ಕಿಂತಲೂ ಮುಂಚೆಯೇ ವಿಕ್ರಮಾರ್ಜುನ ವಿಜಯ ಕಾವ್ಯ ರಚಿತಗೊಂಡಿತ್ತು ಎಂದು ಆಂತರಿಕ ಸಾಕ್ಷ್ಯಾಧಾರಗಳಿಂದ ಗುರುತಿಸಬಹುದು ಎನ್ನುತ್ತಾರೆ ಕಲಬುರ್ಗಿಯವರು. ಪಂಪಭಾರತ ರಚನೆಗೊಂಡ ಮಿತಿಯನ್ನು ಎಲ್ಲಿಯೂ ಪಂಪ ಹೇಳಿಕೊಂಡಿಲ್ಲ) ಮಹತ್ವದ ಎರಡು ಕೃತಿಗಳನ್ನು ರಚಿಸಿದ್ದು, ಕ್ರಿ.ಶ.946ರ ಕರೀಂ ನಗರ ಶಾಸನದಲ್ಲಿ ಆತನ **ವಿಕ್ರಮಾರ್ಜುನ ವಿಜಯ** ಕಾವ್ಯದಲ್ಲಿಯ 5 ಪದ್ಯಗಳು ಉದ್ಧೃತಗೊಂಡಿದ್ದನ್ನು ಇಲ್ಲಿ ಸ್ಮರಿಸಬಹುದು. ಇದರಿಂದ ಕ್ರಿ.ಶ.946ರ ಕಾಲಕ್ಕಾಗಲೇ **ವಿಕ್ರಮಾರ್ಜುನ ವಿಜಯ** ರಚನೆಗೊಂಡಿತ್ತೆಂದು ತಿಳಿದುಬರುತ್ತದೆ ಎನ್ನುತ್ತಾರೆ ಕಲಬುರ್ಗಿಯವರು. ಗಂಗಾಧರಂ ಶಾಸನದ ಕಾಲಕ್ಕಾಗಲೇ ಮಡಿದ ಪಂಪನು (ಕ್ರಿ.ಶ.946-50) ಜೀವನದ ಕೊನೆಯ ಹಂತದಲ್ಲಿ ಸಂಸಾರವನ್ನು ತ್ಯಜಿಸಿ ಮುನಿಯಾಗಿದ್ದನೇ? ಸೀತಾರಾಮ ಜಹಗೀರದಾರ ಅವರು ಹೇಳುವಂತೆ ಶುಭನಂದಿ ಹೆಸರಿನ ಮುನಿಯಾಗಿ ಬೋಧನದಲ್ಲಿ ಸಮಾಧಿ ಮರಣವನ್ನು ಹೊಂದಿದನೇ? ಎಂಬ ಪ್ರಶ್ನೆ ಮತ್ತು ಸಂಶಯಗಳು ನಮ್ಮನ್ನು ಕಾಡುತ್ತಿವೆ. ಆದರೆ ಗಂಗಾಧರಂ ಶಾಸನದಲ್ಲಿ ಎಲ್ಲಿಯೂ ಶಾಸನ ರಚನಾಕಾಲವನ್ನು ನಮೂದಿಸಿಲ್ಲ. ಧರ್ಮಪುರ ಅಗ್ರಹಾರವನ್ನು ಅರಿಕೇಸರಿ ಉಡುಗೊರೆಯಾಗಿ ನೀಡಿದ ಮತ್ತು ತಮ್ಮ ಜಿನವಲ್ಲಭನು ವೃಷಭಾದ್ರಿಯ ಉತ್ತರ ದಿಶಾಭಾಗದಲ್ಲಿ ಚಕ್ರೇಶ್ವರಿ, ಕುಲದೈವ, ಆದ್ಯಂತ ಜಿನಬಿಂಬಗಳು, ಕವಿತಾ ಗುಣಾರ್ಣವ ಎಂಬ ಕೆರೆ, ತ್ರಿಭುವನತಿಲಕ ಎಂಬ ಬಸದಿ, ಮದನವಿಳಾಸವೆಂಬ ಉದ್ಯಾನಗಳನ್ನು ಅಣ್ಣನ ಸ್ಮಾರಕಗಳಾಗಿ ನಿರ್ಮಿಸಿದನೆಂಬ, ತನ್ನ ಹೆಗ್ಗಳಿಕೆಗಳನ್ನು ದಾಖಲಿಸುವ ಶಾಸನವನ್ನು ಜಿನವಲ್ಲಭ ಬರೆಸಿದನೆಂಬ ವಿವರಗಳ ಹೊರತಾಗಿ ಪಂಪನ ಜೀವನದ ಬೇರೆ ವಿವರಗಳು ಲಭ್ಯವಿಲ್ಲ. ಈ ಶಾಸನದಲ್ಲಿ 'ಪಂಪನ ಉಲ್ಲೇಖವಿದ್ದರೂ ಅದೆಲ್ಲ ಆನುಷಂಗಿಕ. ಮುಖ್ಯ ವಿಷಯ ಜಿನವಲ್ಲಭನ ಕೀರ್ತಿ ಘೋಷಣೆ. ಅದಕ್ಕಾಗಿ ಪಂಪನನ್ನೇ ಮುಖ್ಯ

ವಿಷಯವಾಗಿಟ್ಟುಕೊಂಡು ಬರೆದ ಬೇರೊಂದು ಶಾಸನವಿರಬೇಕೆನಿಸುತ್ತದೆ. ಅದು ರಾಷ್ಟ್ರಕೂಟ ಚಕ್ರವರ್ತಿಯ ಪ್ರಶಸ್ತಿ ಮತ್ತು ಸಾಮಂತನಾದ ಅರಿಕೇಸರಿಯ ವಂಶಾವಳಿಗಳಿಂದ ಪ್ರಾರಂಭವಾಗಿ ಪಂಪನ ವಂಶಾವಳಿ ಹಾಗೂ ವರ್ಣನೆ, **ವಿಕ್ರಮಾರ್ಜುನ ವಿಜಯ** ರಚನೆಗೊಂಡ ಘಟನೆ, ಅದಕ್ಕೆ ಮೆಚ್ಚಿ ಅರಿಕೇಸರಿ ನೀಡಿದ ದಾನ ವಿವರಣೆ ಇತ್ಯಾದಿ ವಿಷಯಗಳನ್ನೊಳಗೊಂಡಿರಬೇಕು' ಎಂದು ಎಂ.ಎಂ.ಕಲಬುರ್ಗಿಯವರು ಹೇಳಿದುದು ಸತ್ಯವಾದ ಮಾತು ಮತ್ತು ಆ ಕಾಲದ ದಾನಶಾಸನಗಳ ವಾಸ್ತವ ವಿಷಯಾನುಪೂರ್ವಿಯೇ ಆಗಿದೆ. ಇವುಗಳೊಂದಿಗೆ ಧರ್ಮಪುರ ಅಗ್ರಹಾರದ ಸೀಮಾ ವಿವರಗಳು ಮತ್ತು ಫಲಶ್ರುತಿಗಳನ್ನೂ ಅದು ಒಳಗೊಂಡಿರಬೇಕು ಎಂದು ನಾವು ಸೇರಿಸಬಹುದು. ಅದನ್ನೇ ಗಂಗಾಧರಂ ಶಾಸನದ ಈ ಪದ್ಯ ಒಡನುಡಿಯುತ್ತದೆ–

ವಿನುತ ಚಳುಕ್ಯ ವಂಶಪತಿ ಮಿಕ್ಕರಿಕೇಸರಿ ಸನ್ದ ವಿಕ್ರಮಾ ।
ರ್ಜುನ ವಿಜಯಕ್ಕೆ ಧರ್ಮಪುರಮೆನ್ದು ಮದೀಯಮಿದೆನ್ದು ಕೀರ್ತಿಶಾ ।
ಸನಮೆನೆ ಕೊಟ್ಟ ಶಾಸನದ ಪಂಪನನಾ ನಂಬಿದುದೊನ್ದು ಜೈನ ಶಾ ।
ಸನದ ನೆಗಟ್ತೆಯಂ ವೃಷಭಪರ್ವತಮನ್ತದು ತಾನೆ ಪೇಳದೇ ॥

ವಾಗ್ವಧೂವರವಲ್ಲಭ, ಸತ್ಕವಿತ್ವದ ಸಮ್ಯಕ್ತ್ವ ರತ್ನಾಕರನೆನಿಸಿದ ಪಂಪನ ತಮ್ಮ ಜಿನವಲ್ಲಭನೇ ಈ ಶಾಸನವನ್ನು ಬರೆದಿರಬಹುದೆಂದು ವಿದ್ವಾಂಸರು ಊಹಿಸಿರುವುದರಿಂದ ಕನ್ನಡ, ಸಂಸ್ಕೃತ, ತೆಲುಗುಭಾಷೆಗಳಲ್ಲಿಯೂ ಜಿನವಲ್ಲಭ ಕವಿಯಾಗಿ ಬಹುಭಾಷಾ ಬಲ್ಲಿದನಾಗಿದ್ದನೆಂಬುದಕ್ಕೆ ಸಾಕ್ಷಿಯನ್ನು ಒದಗಿಸುತ್ತದೆ. ಆದರೆ ಆತನ ಯಾವುದೇ ಕಾವ್ಯಗಳು ಇದುವರೆಗೆ ದೊರೆತಿಲ್ಲ. ಬ್ರಹ್ಮಶಿವ ತನ್ನ **ಸಮಯ ಪರೀಕ್ಷೆ**ಯಲ್ಲಿ ಜಿನವಲ್ಲಭನ ಕುರಿತು ಹೀಗೆ ಹೇಳಿದ್ದಾನೆ–

ಜಿನವಲ್ಲಭನಮಳ ಯಶೋ
ಧನನುತ್ತಮ ರಾಜಪೂಜಿತಂ ಬುಧನಿಳಯಂ ।
ಜಿನಪಾದಾಂಬುಜ ಮಧುಕರ ।
ನೆನೆ ನೆಗಳ್ದಂ ಪಂಪರಾಜನೂರ್ಜಿತ ತೇಜಂ ॥

ಜಿನವಲ್ಲಭನು ಶ್ರೇಷ್ಠ ಯಶಸ್ಸನ್ನು ಉಳ್ಳವನು. ಉತ್ತಮರಾದ ರಾಜರಿಂದ ಪೂಜಿತನು. ವಿದ್ವಾಂಸರಿಗೆ ಆಶ್ರಯದಾತನು. ಜಿನರ ಪಾದಕಮಲಗಳಲ್ಲಿ ದುಂಬಿಯಂತೆ ಇರುವವನು. ಪಂಪರಾಜನ ತೇಜವನ್ನು ಹೆಚ್ಚಿಸಿದವನು ಎಂದು ಈ ಪದ್ಯವನ್ನು ಅರ್ಥೈಸಬಹುದು. ಜಿನವಲ್ಲಭನ ಅಣ್ಣ ಪಂಪನೂ ತಮ್ಮನಂತೆ ಬಹುಭಾಷಾ ವಿದ್ವಾಂಸನಾಗಿ ಪ್ರಾಂತಭಾಷೆಯಾದ ಕನ್ನಡದಲ್ಲಿ ಎರಡು ಮಹಾಕಾವ್ಯಗಳನ್ನು ರಚಿಸಿದಂತೆ ಮಾತೃಭಾಷೆಯಾದ ತೆಲುಗಿನಲ್ಲಿಯೂ ಕಾವ್ಯಗಳನ್ನು ಬರೆದಿರಬಹುದೆಂಬ ಸಂಭಾವ್ಯ ಊಹೆ ಮಾಡಬಹುದು. ಆದರೆ ಇದುವರೆಗೆ ಆತನ ಬೇರೆ ಕೃತಿಗಳು ದೊರೆತಿಲ್ಲ. ಆತನ ಕೃತಿಗಳ ಶೋಧವಾಗಬೇಕಿದೆ. ಇವೆಲ್ಲವುಗಳನ್ನು ಖಚಿತಪಡಿಸಿಕೊಳ್ಳಲು ಆಧಾರಗಳ ಅವಶ್ಯಕತೆ ಇದೆ.

ಗಂಗಾಧರಂ ಶಾಸನದಲ್ಲಿ 'ಕೊಣ್ಡಕುನ್ದೆಯ ದೇಸಿಗಗಣದ ಪೊತ್ತಗೆಯ ಬಟಿಯ ಪಣ್ಡರಂಗವಲ್ಲಿಯ ಜಯಣನ್ದಿಸಿದ್ಧಾನ್ತ ಭಟಾರರ ಗುಡ್ಡಂ ಜಿನವಲ್ಲಭಂ' ಎಂದು ಆತನ ಗುರುಗಳ ವಿವರಗಳನ್ನು ನೀಡುತ್ತಿದ್ದು, ಇಲ್ಲಿಯ ಪಂಡರಂಗವಲ್ಲಿ ಎಂಬ ಸ್ಥಳನಾಮ ಎಲ್ಲಿಯದು? ಜಯಣನ್ದಿ ಸಿದ್ಧಾಂತ ಭಟಾರರು ಯಾರು? ಎಂಬುದನ್ನು ಹಾಗೂ ಅವರ

ಗುರುಪರಂಪರೆಯನ್ನು ಗುರುತಿಸಬೇಕಿದೆ. ಪಂಪನ ಕಾವ್ಯಗಳಲ್ಲಿಯೂ ಮಲಧಾರಿ ಸಿದ್ಧಾಂತ, ಪಂಪನ ದೀಕ್ಷಾಗುರು ದೇವೇಂದ್ರಮುನಿ ಮತ್ತು ಜಯಣನ್ದಿ ಸಿದ್ಧಾಂತಿಗಳ ವಿವರಗಳಿವೆ. **ಸಿರಿ ಭೂವಲಯ** ಕೃತಿಯಲ್ಲಿ ಜಯಣನ್ದಿ ಸಿದ್ಧಾಂತ ಭಟಾರರ ಹೆಸರಿದೆ. ಇವರೇ ಶಾಸನೋಕ್ತ ಜಿನವಲ್ಲಭನ ಗುರುಗಳಾಗಿರಬಹುದು.

ಪಂಡರಂಗವಲ್ಲಿಯನ್ನು ವಿದ್ವಾಂಸರು ಪಂಡರಪುರವೆಂದು ಗುರುತಿಸಿದ್ದಾರೆ. ಇದಕ್ಕೆ ಪೂರಕವಾಗಿ ಹುಬ್ಬಳ್ಳಿಯ ಶಾಸನ (ಕ್ರಿ.ಶ.1248)ದಲ್ಲಿ ಬರುವ 'ಶ್ರೀ ಪಂಡರಂಗೆಯ ಶ್ರೀ ವಿಠಲದೇವರ ವಾರಿ' ಎಂಬ ಉಲ್ಲೇಖವನ್ನು ಗಮನಿಸಬಹುದು. ಇದು ಪಾಂಡುರಂಗನ + ಪಳ್ಳಿ > ಪಾಂಡುರಂಗನಪಳ್ಳಿ > ಪಾಂಡುರಂಗಪಳ್ಳಿ > ಪಂಡರಂಗಪಳ್ಳಿ > ಪಂಡರಂಗಪಲ್ಲಿ>ಪಂಡರಂಗವಲ್ಲಿ ಆಗಿರಬಹುದು. ಅದರಂತೆ ಪಂಡರಂಗಪಳ್ಳಿಯು ಜನರ ಬಾಯಿಯಲ್ಲಿ ಪಂಡರಂಗೆ ಆಗಿರಬಹುದು. ಇದನ್ನು ಪಂಡರ + ಕೆಯ್ > ಪಂಡರಗೆಯ್ > ಪಂಡರಗೆ ಎಂದು ವ್ಯುತ್ಪತ್ತಿ ಹೇಳಬಹುದು. ಇದರಿಂದ ಈಗಿನ ಪಂಡರ + ಪುರ > ಪಂಡರಪುರ ಎಂಬ ಈಗಿನ ಹೆಸರು ಸಿದ್ಧಿಸಿರಬಹುದು.

ಪಂಪ ತನ್ನ ಕಾವ್ಯಗಳಲ್ಲಿ ಬನವಾಸಿಯ ನಿಸರ್ಗ ಸೌಂದರ್ಯವನ್ನು ಪರಿಪರಿಯಾಗಿ ವರ್ಣಿಸುತ್ತ, ತನ್ನ ಮನಸ್ಸು ಯಾವಾಗಲೂ ಬನವಾಸಿ ನಾಡನ್ನು ನೆನೆಯುತ್ತದೆ. ಇಲ್ಲಿ ಮನುಷ್ಯನಾಗಿ ಹುಟ್ಟದೇ ಹೋದರೂ ಮರಿದುಂಬಿಯಾಗಿ ಇಲ್ಲವೇ ಕೋಗಿಲೆಯಾಗಿ ಹುಟ್ಟಬೇಕು ಎಂದು ಮನದುಂಬಿ ಹಾರೈಸುತ್ತಾನೆ. ಒಂದು ವೇಳೆ ಹುಟ್ಟೂರು ಅಣ್ಣಿಗೆರೆ ಆಗಿದ್ದರೆ ಅಣ್ಣಿಗೆರೆ ನಗರ ಇಲ್ಲವೆ ಬೆಳ್ವೊಲ ನಾಡುಗಳ ಉಲ್ಲೇಖವನ್ನು ಎರಡೂ ಕಾವ್ಯಗಳಲ್ಲಿ ಎಲ್ಲಿಯೂ ಮಾಡಿಲ್ಲ ಏಕೆ ಎನ್ನುವ ಪ್ರಶ್ನೆಯನ್ನು ಹುಟ್ಟುಹಾಕುತ್ತದೆ. ಆ ಕಾಲದಲ್ಲಿ ಇವೆರಡೂ ಇದ್ದವು ಎನ್ನುವುದನ್ನು ಗಂಗಾಧರಂ ಶಾಸನವೇ ಗುರುತಿಸುತ್ತದೆ.

ಬೆಂಜಮಿನ್ ಲೂಯಿಸ್ ರೈಸ್ ಮೊದಲ ಬಾರಿಗೆ ಆದಿಕವಿ ಪಂಪನ ಕುರಿತು ಬರೆದರಲ್ಲದೆ 1882ರಲ್ಲಿ ಆತನ ಕೃತಿ **ವಿಕ್ರಮಾರ್ಜುನ ವಿಜಯ (ಪಂಪಭಾರತ)**ವನ್ನು ಪ್ರಕಟಿಸಿದರು. ಎಸ್.ಜಿ.ನರಸಿಂಹಾಚಾರ್ಯರು 1900ರಲ್ಲಿ **ಆದಿಪುರಾಣ**ವನ್ನು ಹೊರತಂದರು. ಕನ್ನಡ ಸಾಹಿತ್ಯ ಪರಿಷತ್ತು 1931ರಲ್ಲಿ **ಪಂಪಭಾರತ**ದ ಪರಿಷ್ಕೃತ ಆವೃತ್ತಿಯನ್ನು ಹೊರತಂದಿತು. ತದನಂತರ ಅದರ ಹಲವಾರು ಆವೃತ್ತಿಗಳು, ದೀಪಿಕೆಗಳು, ಹೊಸಗನ್ನಡ ಅನುವಾದಗಳು, ಕಾವ್ಯಗಳ ಕುರಿತ ಮಹಾಪ್ರಬಂಧಗಳು ಪ್ರಕಟಗೊಂಡವು. ಇವುಗಳಲ್ಲಿ ಪಂಪನ ಕುರಿತು ಹೊಸ ಚರ್ಚೆಗಳು ನಡೆದಿರುವುದಿಲ್ಲ.

ಈ ಎಲ್ಲ ಕಾರಣಗಳಿಂದ ಪಂಪನು ಅಣ್ಣಿಗೆರೆಯಲ್ಲಿ ಹುಟ್ಟಿರಬಹುದೆಂಬ, ಆತನ ತಾಯಿ ಅಬ್ಬಣಬ್ಬೆ ಇರಬಹುದೆಂಬ ಪ್ರಮೇಯಗಳು ಸಂಶಯಾತೀತವಲ್ಲ. ಸಂಶಯಕ್ಕೆ ಎಡೆಮಾಡಿ ಕೊಡುವಂಥವುಗಳು ಎಂದು ತೀರ್ಮಾನಿಸಬೇಕಾಗಿದೆ. ಆದರೆ ಭೀಮಪಯ್ಯನ ಒಬ್ಬ ಹೆಂಡತಿ ಅಬ್ಬಣಬ್ಬೆ ಹಾಗೂ ಆಕೆಯ ಮಗ ಜಿನವಲ್ಲಭ. ಈತನ ಅಣ್ಣ ಪಂಪ. ಗಂಗಾಧರಂ ಶಾಸನ ಬರೆಸುವ ಕಾಲಕ್ಕಾಗಲೇ ಪಂಪ ನಿಧನನಾಗಿದ್ದ. ಇವರಿಬ್ಬರೂ ಸಂಸಾರಿಗಳಾಗಿದ್ದರೆಂಬುದಕ್ಕೆ ಶಾಸನದಲ್ಲಾಗಲೀ ಕಾವ್ಯಗಳಲ್ಲಾಗಲೀ ಯಾವುದೇ ಪುರಾವೆಗಳು ದೊರೆಯುವುದಿಲ್ಲ ಎಂದು ಸದ್ಯದ ಮಟ್ಟಿಗೆ ಹೇಳಬಹುದಾಗಿದೆ. ತಾಯಿ ಮತ್ತು ಜನ್ಮಸ್ಥಾನಗಳನ್ನು ಪುಷ್ಟೀಕರಿಸುವ ಖಚಿತ ಆಧಾರಗಳು ದೊರೆತಾಗ ಮಾತ್ರ ಈ ಪ್ರಮೇಯವನ್ನು ಒಪ್ಪಬಹುದು. ■

ವಿಶೇಷ ಸಂಚಿಕೆಗೆ
ಸಂಶೋಧನಾ ಪ್ರಬಂಧಗಳ ಆಹ್ವಾನ

ಕನ್ನಡದ ಏಕೈಕ ಇತಿಹಾಸ ಸಂಶೋಧನಾ ತ್ರೈಮಾಸಿಕ ನಿಯತಕಾಲಿಕೆ **ಇತಿಹಾಸ ದರ್ಪಣಕ್ಕೆ** ಈಗ ಹತ್ತನೇ ವರ್ಷದ ಸಂಭ್ರಮ. ಕಳೆದ ಒಂಭತ್ತು ವರ್ಷಗಳಿಂದ ನಿರಂತರವಾಗಿ ಹೊರ ಬರುತ್ತಿರುವ **ಇತಿಹಾಸ ದರ್ಪಣವು** ಇತಿಹಾಸ ಸಂಶೋಧನೆಗೆ ತನ್ನದೇಯಾದ ಕೊಡುಗೆಯನ್ನು ನೀಡುತ್ತಾ ಬರುತ್ತಿರುವುದು ನಿಮಗೆ ತಿಳಿದಿರುವ ವಿಷಯವೇ ಆಗಿದೆ. ನಾಡಿನ ಮತ್ತು ಹೊರನಾಡಿನ ಹಾಗೂ ವಿದೇಶಗಳ ಸುಮಾರು 150ಕ್ಕೂ ಹೆಚ್ಚು ವಿದ್ವಾಂಸರ, ಇತಿಹಾಸಕಾರರ, ಸಂಶೋಧನಾ ವಿದ್ಯಾರ್ಥಿಗಳ 500ಕ್ಕೂ ಮಿಕ್ಕ ಪ್ರಬಂಧಗಳನ್ನು ಈವರೆಗೆ ಪ್ರಕಟಿಸಿದೆ. ಆ ಮೂಲಕ ಹಲವು ಮಹತ್ವದ ಐತಿಹಾಸಿಕ ಚರ್ಚೆಗಳನ್ನು ಹುಟ್ಟುಹಾಕಿದೆ.

ಪ್ರಸ್ತುತ ದಶಮಾನೋತ್ಸವದ ಸಂಭ್ರಮಕ್ಕೆ ಅಣಿಯಾಗುತ್ತಿರುವ **ಇತಿಹಾಸ ದರ್ಪಣ** ಬಳಗವು ಹತ್ತನೆಯ ವಸಂತವನ್ನು ಪೂರೈಸುವ ಸಂದರ್ಭದಲ್ಲಿ 40ನೆಯ ಸಂಚಿಕೆಯನ್ನು ಒಂದು ಅರ್ಥಪೂರ್ಣ ಆಕರ ಗ್ರಂಥವಾಗಿ ರೂಪಿಸಲು ನಿಶ್ಚಯಿಸಿದೆ. ಆದ್ದರಿಂದ ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿದಂತೆ ಸ್ಥಿರೀಕರಿಸಲ್ಪಟ್ಟಿರುವ ವಾದ, ಅಭಿಪ್ರಾಯ ಮತ್ತು ಮಂಡನೆಗಳನ್ನು ಹೊಸ ಶೋಧ / ಭಿನ್ನ ಆಯಾಮ / ಸೈದ್ಧಾಂತಿಕ ನೆಲೆಯಲ್ಲಿ ಮರುವ್ಯಾಖ್ಯಾನಿಸುವಂತಹ ಯಾವುದೇ ವಿಷಯ ಮತ್ತು ಚಾರಿತ್ರಿಕ ನೆಲೆಯನ್ನು ಕುರಿತ ಸಂಶೋಧನಾ ಪ್ರಬಂಧಗಳನ್ನು ನಾಡಿನ ಮತ್ತು ಹೊರನಾಡಿನ ಕೆಲವು ಆಯ್ದ ಇತಿಹಾಸಕಾರರಿಂದ ಆಹ್ವಾನಿಸಲಾಗುತ್ತಿದೆ.

ಈ ಸಂದರ್ಭದಲ್ಲಿ **ಇತಿಹಾಸ ದರ್ಪಣದ** ಚಂದಾದಾರರಿಂದಲೂ ಪ್ರಬಂಧಗಳನ್ನು ಆಹ್ವಾನಿಸಲು ಬಳಗ ನಿರ್ಧರಿಸಿದೆ. ಈ ಹಿನ್ನೆಲೆಯಲ್ಲಿ ಮೇಲಿನ ಆಶಯಗಳನ್ನು ಕೇಂದ್ರೀಕರಿಸಿದ ಗುಣಾತ್ಮಕ ಸಂಶೋಧನಾ ಪ್ರಬಂಧಗಳನ್ನು ಓದುಗರು ಇತಿಹಾಸ ದರ್ಪಣಕ್ಕೆ ಕಳುಹಿಸಿ ಕೊಡಬಹುದಾಗಿರುತ್ತದೆ.

ಪ್ರಬಂಧಗಳು '**ಇತಿಹಾಸ ದರ್ಪಣಕ್ಕೆ** ಲೇಖನ ಕಳುಹಿಸುವ ಮುನ್ನ...' (ವಿವರಗಳಿಗೆ ಕೊನೆಯ ಪುಟ ನೋಡಿ) ಎಂಬ ಭಾಗದಲ್ಲಿ ತಿಳಿಸಿರುವ ಸೂಚನೆಗಳಿಗೆ ಅನುಗುಣವಾಗಿರಬೇಕು.

ಪ್ರಬಂಧವನ್ನು ಕಳುಹಿಸಿಕೊಡಬೇಕಾದ
ಇಮೇಲ್ ಐ.ಡಿ.: itihasadarpana@gmail.com

– ಸಂಪಾದಕರು

ITIHASA DARPANA (Quarterly)
A Peer Reviewed Journal of Historical Research in Kannada
ISSN 2321-3590
Book No.: 37-38.
April – September 2018
Author: Sunkam Govardhan
Title: 'Bengaḷūru parisarada rājakiya avalōkana ...'.

ಬೆಂಗಳೂರು ಪರಿಸರದ ರಾಜಕೀಯ ಅವಲೋಕನ
(ಹೊಯ್ಸಳೋತ್ತರ ಯುಗದಿಂದ ನಾಡಪ್ರಭುಗಳ ಆಗಮನದವರೆಗೆ)

– 1 –

ಬೆಂಗಳೂರು ಪರಿಸರವು ಪ್ರಾಗ್ಐತಿಹಾಸಿಕ ಕಾಲಘಟ್ಟದಿಂದಲೂ ಜನವಸತಿಯ ನೆಲೆಯಾಗಿದ್ದರೂ ಮಧ್ಯಕಾಲದಲ್ಲಿ ಇದು ಉನ್ನತ ಸ್ಥಾನಕ್ಕೇರಿದ್ದು ಮಾತ್ರ ವಿಶೇಷವಾದ ಸಂಗತಿಯಾಗಿದೆ. ಗಂಗರ ಕಾಲದಿಂದಲೇ ಈ ಪ್ರದೇಶದಲ್ಲಿ ಸ್ಥಿರವಾದ ಆಡಳಿತವು ನೆಲೆಗೊಂಡಂತೆ ತೋರುತ್ತದೆ. ಗಂಗರ ನಂತರ ಬೆಂಗಳೂರು ಪರಿಸರದಲ್ಲಿ ಅತ್ಯಂತ **ಮೊಟುಕಾದ** ನೆಲೆಯಲ್ಲಿ ಆಡಳಿತವನ್ನು ನಡೆಸಿದವರು ಹೊಯ್ಸಳರು. ಆದರೆ ಹೊಯ್ಸಳರ ಆರಂಭಿಕ ಅರಸರುಗಳ ಸ್ಪಷ್ಟವಾದ ಚಾರಿತ್ರಿಕ ದಾಖಲೆಗಳು ಈ ಪ್ರದೇಶದ ಸಾಮಾಜಿಕ ಸಂಚಲನದಲ್ಲಿ ಮುನ್ನೆಲೆಯಲ್ಲಿ ಇಲ್ಲ. ಬದಲಿಗೆ ಗಂಗರ ನಂತರ ಬೆಂಗಳೂರು ಪರಿಸರದ ನಿಜವಾದ **ಇತಿಹಾಸ** ರೂಪಿಸಿದವರು ಚೋಳರೇ. ಚೋಳರ ಆಡಳಿತದ ಪರಿಣಾಮವಾಗಿ ಬೆಂಗಳೂರು ಪರಿಸರವು ಅನೇಕ ರೀತಿಯ ಬದಲಾವಣೆಗಳಿಗೆ ತುತ್ತಾಗಬೇಕಾಯಿತು. ಮೊದಲ ಬಾರಿಗೆ ಈ ಪರಿಸರದಲ್ಲಿ ನೆಲೆಗೊಂಡ ನಾಗರಿಕರಿಗೆ ಪರಕೀಯ ಆಡಳಿತದ ದರ್ಶನವಾದಂತೆ ತೋರುತ್ತದೆ. ಚೋಳರು ಆಡಳಿತದ ಎಲ್ಲಾ ಹಂತಗಳಲ್ಲೂ ಭಾಷಾ ರಾಜಕಾರಣವನ್ನು ಎತ್ತಿ ಹಿಡಿದವರು. ತಮಿಳು ಬದುಕಿನ ಮಾದರಿಗಳನ್ನು ಅವರ ಆಳ್ವಿಕೆಯ ಎಲ್ಲಾ ವಲಯಗಳಲ್ಲೂ

ಸುಂಕಂ ಗೋವರ್ಧನ
ಸಂಶೋಧನ ವಿದ್ಯಾರ್ಥಿ
ಡಾ.ಡಿ.ವಿ.ಗುಂಡಪ್ಪ ಕನ್ನಡ
ಅಧ್ಯಯನ ಕೇಂದ್ರ
ತುಮಕೂರು ವಿಶ್ವವಿದ್ಯಾನಿಲಯ,
ತುಮಕೂರು
ಮೊ: 9535762464.
sunkamgovardhan@gmail.com

ಹೇರುವುದರ ಮೂಲಕ ತಮಿಳುಮಯ ಆಡಳಿತ ಮತ್ತು ಸಂಸ್ಕೃತಿಯನ್ನು ಈ ಪರಿಸರದಲ್ಲೂ ಪಸರಿಸಿದರು. ಅದನ್ನು ಅವರು ಎರಡು ವಲಯಗಳಲ್ಲಿ ಆಗು ಮಾಡಿದರು. ಮೊದಲನೆಯದು. ಸ್ಥಳೀಯ ಆಡಳಿತವನ್ನು ತಮಿಳು ಸಂಪ್ರದಾಯದಂತೆ ವಿಸ್ತರಿಸಿದ್ದು. ಎರಡನೆಯದು ತಮಿಳು ಭಾಷಿಕ ಅಧಿಕಾರಿಗಳನ್ನು ಈ ನೆಲದಲ್ಲಿ ನೆಲೆಯೂರಿಸಿ ತಮ್ಮ ಸ್ಥಿರೀಕರಣಕ್ಕೆ ಯಾವುದೇ ರೀತಿಯ ಪ್ರತಿರೋಧವೂ ಉಂಟಾಗದಂತೆ ನೋಡಿಕೊಂಡಿದ್ದು. ಈ ಮೊದಲನೆಯ ಪರಿಣಾಮದಿಂದ ತಮಿಳು ರಾಜಕಾರಣದ ಮಾದರಿಗಳು ಬೆಂಗಳೂರು ಪರಿಸರಕ್ಕೆ ಪರಿಚಿತಗೊಂಡರೆ ಎರಡನೆಯ ಕಾರಣದ ದೆಸೆಯಿಂದ ತಮಿಳು ಆಡಳಿತಗಾರರು. ಬ್ರಾಹ್ಮಣರು. ಕರಕುಶಲ ಕಲಾವಿದರು. ನಿರ್ಮಾಣ ಪಟುಗಳು. ಈ ಪರಿಸರದಲ್ಲಿ ಇಲ್ಲಿನ ಸ್ಥಳೀಯರಿಗಿಂತ ಹೆಚ್ಚು ಸ್ವತಂತ್ರವಾಗಿಯೂ ಹಾಗೂ ರಾಜಕೀಯ ಬೇಡಿಕೆಯುಳ್ಳ ವ್ಯಕ್ತಿಗಳಾಗಿಯೂ ಹೆಸರುವಾಸಿಯಾದರು.

ಚೋಳ ದೊರೆಗಳಿಗೆ ಸರಿಸಾಟಿಯಾಗಿ ಅವರ ಬಿರುದಾವಳಿಗಳನ್ನೇ ತಮ್ಮ ಹೆಸರುಗಳನ್ನಾಗಿ ರೂಪಿಸಿಕೊಳ್ಳುತ್ತಿದ್ದ ಸ್ಥಳೀಯ ತಮಿಳು ಅಧಿಕಾರಿಗಳು ಇಲ್ಲಿನ ಭೂಭಾಗವನ್ನು ಚೋಳ ಅರಸನಾದ ರಾಜೇಂದ್ರ ಚೋಳನ ಹೆಸರುಗಳಲ್ಲಿ ಕರೆಯಲು ಆರಂಭಿಸಿದರು. ಹಾಗೆಯೇ ಕೆಲವು ಗ್ರಾಮಗಳನ್ನು ಸೇರಿಸಿ 'ತನಿಯಾರ್' ಗಳಾಗಿ ರೂಪಿಸಲಾಗುತ್ತಿತ್ತು. ಈ ತನಿಯಾರ್‌ಗಳೆಂದರೆ ದೊಡ್ಡ ಗ್ರಾಮಗಳು ಎಂದಷ್ಟೇ ಅರ್ಥ. ಹಲವು ಗ್ರಾಮಗಳನ್ನು ಸೇರಿಸಿ 'ಕೂಟ್ರ'ಗಳೆಂದು ಕರೆಯಲಾಯಿತು. ಈ ಕೂಟ್ರಗಳೆಂದರೆ ನಮ್ಮಲ್ಲಿ ನಾಡುಗಳು ಇದ್ದ ಹಾಗೆ. ಹಲವು ಕೂಟ್ರಗಳು ಸೇರಿ 'ವಳನಾಡು'ಗಳೆಂದು ಕರೆಯಲಾಗುತ್ತಿತ್ತು. ಕೆಲವು ವಳನಾಡುಗಳನ್ನು ಸೇರಿಸಿ 'ಮಂಡಲ'ಗಳನ್ನಾಗಿ ರೂಪಿಸಲಾಯಿತು. ಚೋಳರ ಆಡಳಿತದಲ್ಲಿ ಈ ಮಂಡಲಗಳೇ ದೊಡ್ಡದು. ಉದಾಹರಣೆಗೆ ಮುಡಿಗೊಂಡ ಚೋಳ ಮಂಡಲದಲ್ಲಿ ಗಂಗೈಕೊಂಡ ಚೋಳ ವಳನಾಡು ಹಾಗೂ ವೀರರಾಜೇಂದ್ರ ಚೋಳ ವಳನಾಡುಗಳೆಂಬ ಎರಡು ವಳನಾಡುಗಳು ಇದ್ದವು. ಈ ವಳನಾಡುಗಳಲ್ಲಿ ಅನೇಕ ನಾಡುಗಳು ಇರುತ್ತಿದ್ದವು. ಈಗಾಗಲೇ ಪ್ರಸಿದ್ಧಗೊಂಡಿದ್ದ ಕನ್ನಡದ ನಾಡುಗಳನ್ನು ತಮಿಳೀಕರಣಗೊಳಿಸುವುದರ ಮೂಲಕ ಎಲ್ಲಾ ನಾಡುಗಳನ್ನೂ ಅವರು ಬಳಸಿಕೊಂಡರು.

ಕನ್ನಡದ ಅರಸರಾದ ಹೊಯ್ಸಳರಲ್ಲಿ ಆರಂಭಿಕ ಅರಸರು ಚೋಳರನ್ನು ಸೋಲಿಸಿ ಅವರ ಕೈವಶವಾಗಿದ್ದ ಭೂಭಾಗವನ್ನು ವಶಪಡಿಸಿಕೊಂಡರೇ ವಿನಃ ಅವರ ಆಡಳಿತ ಕ್ರಮವನ್ನು ಬದಲಾಯಿಸುವ ಸಾಹಸಕ್ಕೆ ಕೈಹಾಕಲಿಲ್ಲ. ಇನ್ನು ಎರಡನೆಯ ಬಲ್ಲಾಳನ ನಂತರ ಅವನ ಮಗನಾದ ವೀರನರಸಿಂಹನು ತಮಿಳು ಚೋಳರೊಂದಿಗೆ ಉತ್ತಮ ಸಂಬಂಧವನ್ನು ಸ್ಥಾಪಿಸಿಕೊಳ್ಳುವುದರ ಮೂಲಕ ಚೋಳ ಹಾಗೂ ಹೊಯ್ಸಳ ಪ್ರದೇಶಗಳು ಅಭಿನ್ನವಾಗಿ ರೂಪುಗೊಂಡವು. ಇದರ ಪರಿಣಾಮವಾಗಿ ಹೊಯ್ಸಳರ ಆಳ್ವಿಕೆಯ ಕಾಲಘಟ್ಟದಲ್ಲೂ ಬಹಳ ಮುಖ್ಯವಾದ ಅಧಿಕಾರ ಕೇಂದ್ರಗಳಲ್ಲಿ ತಮಿಳು ಅಧಿಕಾರಿಗಳೇ ಮುಂದುವರೆದರು. ಅವರುಗಳು ಎಂದಿನ ತಮ್ಮ ಭಾಷಾಭಿಮಾನ ಹಾಗೂ ಸ್ಥಳೀಯ ಆಡಳಿತದ ಮಾದರಿಯನ್ನು ಇಲ್ಲಿಯೂ ಮುಂದುವರೆಸಿದರು.

ಬೆಂಗಳೂರು ಪರಿಸರದ ಹೊಯ್ಸಳರ ನಿಜವಾದ ಇತಿಹಾಸವೆಂದರೆ ಅದು ಮೂರನೆಯ ಬಲ್ಲಾಳನ ಇತಿಹಾಸವೇ ಎನ್ನುವಷ್ಟು ಆತನ ಆಡಳಿತದ ಹಲವು ಮಗ್ಗುಲುಗಳನ್ನು ಈ ಪರಿಸರದ ಶಾಸನಗಳು ಅನಾವರಣಗೊಳಿಸುತ್ತವೆ. ಗಂಗ, ಚೋಳರ ಕಾಲದ

ನಿರ್ಮಾಣವಾದ ಕೆರೆಗಳ ದೆಸೆಯಿಂದ ಈ ಪರಿಸರದಲ್ಲಿ ಕೃಷಿ ಚಟುವಟಿಕೆಗಳು ಈಗಾಗಲೇ ತಮ್ಮ ಅಸ್ತಿತ್ವವನ್ನು ಸ್ಥಾಪಿಸಿಕೊಂಡಿದ್ದವು. ಕಾವೇರಿ ಪರಿಸರದ ಸಮೃದ್ಧವಾದ ಕೃಷಿವ್ಯವಸ್ಥೆಯಿಂದ ಆಕರ್ಷಿತರಾದ ಅಯ್ಯಾವೊಳೆಯ ಐನೂರ್ವರ ಶಾಖೆಗಳು ದಕ್ಷಿಣದಲ್ಲೂ ತಲೆಯೆತ್ತಿ ನಿಲ್ಲಲು ಆರಂಭವಾಗಿದ್ದೂ ಈ ಕಾಲಘಟ್ಟದಲ್ಲಿಯೇ. ಬೆಂಗಳೂರು ಪರಿಸರದಲ್ಲಿನ ಉತ್ಪಾದಕ ಸಂಘಗಳು ಚೋಳರ ರಾಜಧಾನಿಯನ್ನು ತಲುಪಲು ಇಲ್ಲಿಂದ ಉತ್ತಮ ಸಾರಿಗೆ ವ್ಯವಸ್ಥೆಯೂ ಹಾಗೂ ಮುಖ್ಯ ಹೆದ್ದಾರಿಯೂ ಇಲ್ಲಿಂದ ರೂಪುಗೊಂಡಿತ್ತು. ಹಾಗಾಗಿ ಇಲ್ಲಿನ ಸಮೃದ್ಧವಾದ ಕೃಷಿ ಉತ್ಪಾದನೆಯನ್ನು ವಿಸ್ತೃತಗೊಳಿಸಿ ನಾಡಿನ ಮೂಲೆಮೂಲೆಯಲ್ಲಿ ಸಂತೆಗಳನ್ನು ಸ್ಥಾಪಿಸಿ ಮಾರುಕಟ್ಟೆ ವ್ಯವಸ್ಥೆಯನ್ನು ಬಲಪಡಿಸುವುದರ ಜೊತೆಗೆ ಕರಕುಶಲ ಕಲೆಗಾರರಿಗೆ ವಿಶೇಷವಾದ ಅವಕಾಶಗಳನ್ನು ಒದಗಿಸಿದವರು ಕೂಡ ಈ ಹೊಯ್ಸಳರೇ. ಹಲವಾರು ವರ್ತಕ ಶಾಖೆಗಳು ಇವರ ಕಾಲದಲ್ಲಿ ಪ್ರವರ್ಧಮಾನರಾಗಿ ವ್ಯಾಪಾರದಲ್ಲಿ ಒಳ್ಳೆಯ ಪ್ರಗತಿಯು ಉಂಟಾಯಿತು. ಹೊಯ್ಸಳ ಸಾಮ್ರಾಜ್ಯವನ್ನು ಉಳಿಸಿಕೊಳ್ಳಲು ದಾಯಾದಿಗಳಲ್ಲಿ ವಿಪರೀತ ಅಂತಃಕಲಹಗಳು ಒಂದು ಕಡೆ ನಡೆಯುತ್ತಿದ್ದರೆ ಇದ್ದಷ್ಟೂ ವಿಸ್ತಾರವಾದ ಭೂಭಾಗದ ಆಳ್ವಿಕೆಯು ಸಮರ್ಪಕವಾಗಿ ನಡೆಯುವುದೇ ಕಷ್ಟವಾಗಿತ್ತು. ಇಂತಹ ಸಂದರ್ಭದಲ್ಲಿ ಹೊಯ್ಸಳ ಚಕ್ರವರ್ತಿಗಳು ತಮಗೆ ನಿಷ್ಠರಾಗಿದ್ದ ದಂಡನಾಯಕರು, ಮಹಾಮಂಡಲೇಶ್ವರರು, ಸಾಮಂತರಾಜರಿಂದ ಆಡಳಿತವನ್ನು ನಡೆಸುವ ಸಂಪ್ರದಾಯವನ್ನು ಮುಂದುವರೆಸಿದರು. ಬಹುತೇಕ ಈ ರೀತಿಯ ಆಡಳಿತವು ವಂಶ ಪಾರಂಪರ್ಯವಾಗಿ ಮುಂದುವರೆಯುತ್ತಿತ್ತು. ಹಾಗೂ ಈ ಅಧಿಕಾರಿಗಳು ರಾಜಸ್ವದ ಅವಶ್ಯಕತೆಗಳಿಗೆ ಅನುಗುಣವಾಗಿ ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ವರ್ಗಾವಣೆಗೊಳ್ಳುತ್ತಿದ್ದರು.

ಹೊಯ್ಸಳರ ನಂತರ ಇಡೀ ದಕ್ಷಿಣ ಭಾರತವು ವಿಜಯನಗರದ ಅರಸರ ಆಳ್ವಿಕೆಗೆ ಒಳಪಟ್ಟಾಗ ಹಲವಾರು ನಾಡಪ್ರಭುಗಳು ಹಾಗೂ ಆಳರಸರ ಮೂಲಕ ಈ ಪ್ರದೇಶದ ಆಡಳಿತವು ಸುಲಭವಾಗಿ ಸಾಗುವಂತೆ ನೋಡಿಕೊಳ್ಳಲಾಯಿತು. ಪ್ರಸ್ತುತ ಲೇಖನವು ಬೆಂಗಳೂರು ಪರಿಸರದ ಅಂದರೆ ಬೆಂಗಳೂರು, ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಕೋಟೆ, ನೆಲಮಂಗಲ, ಮಾಗಡಿ ತಾಲ್ಲೂಕುಗಳ ಶಾಸನಗಳನ್ನು ಅನುಲಕ್ಷಿಸಿ ನಾಡಪ್ರಭುಗಳಾದ ಕೆಂಪೇಗೌಡರ ಆಳ್ವಿಕೆಗೆ ಪೂರಕವಾಗುವಂತಹ ಪರಿಸರವು ನಿರ್ಮಾಣವಾದ ಹಿನ್ನಲೆಯನ್ನು ಪ್ರಧಾನವಾಗಿ ಚರ್ಚಿಸುತ್ತದೆ. ಕೆಂಪೇಗೌಡರ ಪೂರ್ವಿಕರು ಈ ಭಾಗದಲ್ಲಿ ಮೊದಲಿಂದಲೇ ಆಳ್ವಿಕೆಯಲ್ಲಿ ಇದ್ದರೇ ಅಥವಾ ಕೆಂಪೇಗೌಡರೇ ಈ ಪರಿಸರದ ನಿಜವಾದ ಇತಿಹಾಸವನ್ನು ರೂಪಿಸಿದ ಐತಿಹಾಸಿಕ ವ್ಯಕ್ತಿಯೇ? ಎಂಬ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳಲು ಈ ಲೇಖನವನ್ನು ಬರೆಯಲಾಗಿದೆ. ಅದಕ್ಕೆ ಪೂರ್ವಭಾವಿಯಾಗಿ ಈಗ ಹೊಯ್ಸಳರ ಆಡಳಿತದ ಪರಿಣಾಮವನ್ನು ಸ್ಥೂಲವಾಗಿ ತಿಳಿಯುವುದರ ಮೂಲಕ ಹೊಯ್ಸಳೋತ್ತರ ಯುಗದಲ್ಲಿ ಆದ ಬದಲಾವಣೆಗಳು ನಾಡಪ್ರಭು ಕೆಂಪೇಗೌಡರನ್ನು ಹೇಗೆ ಮುನ್ನೆಲೆಗೆ ಬರುವಂತೆ ಪ್ರೇರೇಪಿಸಿತು ಎಂಬ ವಿಷಯದ ಕಡೆಗೆ ನಮ್ಮ ಗಮನವನ್ನು ಸೆಳೆಯುವಂತಾಗಬಹುದು ಎಂಬ ಉದ್ದೇಶವನ್ನು ಈ ಲೇಖನವು ಒಳಗೊಂಡಿದೆ.[1]

– 2 –

ಹೊಯ್ಸಳರ ನಂತರ ಏಕಾಏಕಿಯಾಗಿ ಇಡೀ ದಕ್ಷಿಣ ಭಾರತದ ಎಲ್ಲಾ ಆಡಳಿತವನ್ನೂ ವಿಜಯನಗರದ ಅರಸರು ತಮ್ಮ ತೆಕ್ಕೆಗೆ ತೆಗೆದುಕೊಂಡಾಗ ನಾಡಿನ ಆಡಳಿತದಲ್ಲಿ ಆಮೂಲಾಗ್ರ

ಬದಲಾವಣೆಗಳನ್ನು ತರಲಾರಂಭಿಸಿದರು. ವಿಜಯನಗರದ ರಾಜಧಾನಿಯು ವಿಜಯನಗರ ಅಥವಾ ಹಂಪೆಯಲ್ಲಿ ಕೇಂದ್ರೀಕೃತವಾಗಿದ್ದರಿಂದ ದೂರದೂರದ ಪ್ರದೇಶದ ಆಳ್ವಿಕೆಯ ಸುಭಗತೆಗಾಗಿ ಹಲವು ಮಾರ್ಪಾಟುಗಳನ್ನು ಉದ್ದೇಶಪೂರ್ವಕವಾಗಿಯೇ ಅವರು ಮಾಡಬೇಕಾಯಿತು. ಹೊಯ್ಸಳರು ಯಾವ ಯಾವ ಪ್ರದೇಶಗಳಲ್ಲಿ ತಮಿಳು ಅಧಿಕಾರಿಗಳನ್ನು ಮುಂದುವರೆಸಿದ್ದರೋ ಅದನ್ನು ಮೊದಲನೆಯದಾಗಿ ಕೊನೆಗಾಣಿಸಿ ಆ ಜಾಗಗಳಲ್ಲಿ ಕನ್ನಡ ಮೂಲದ ನಾಯಕರನ್ನು ನೆಲೆಗೊಳಿಸುವ ಸಣ್ಣ ಪ್ರಯತ್ನವನ್ನು ನಿಧಾನವಾಗಿ ಹಾಗೂ ಜನಾಭಿಪ್ರಾಯಕ್ಕೆ ಮನ್ನಣೆ ದೊರಕುವಂತೆ ವಿಜಯನಗರದ ಅರಸರು ಕೈಗೊಂಡರು.

ತೆರಿಗೆ ವ್ಯವಸ್ಥೆ ಯಾವುದೇ ರಾಜ್ಯದ ಪ್ರಧಾನವಾದ ಪೋಷಕವಾದ ಸಂಗತಿಯಾಗುವುದರಿಂದ ಇದುವರೆಗೆ ಇದ್ದಂತಹ ತೆರಿಗೆ ವ್ಯವಸ್ಥೆಯಲ್ಲಿ ಹಲವು ಬದಲಾವಣೆಗಳನ್ನು ಮಾಡಲಾಯಿತು. ಇನ್ನು ನಾಡುಗಳ ವಿಂಗಡಣೆಯನ್ನು ಪ್ರಧಾನವಾಗಿ ತುಂಡರಿಸಿ ಇಡೀ ರಾಜ್ಯದ ಆಡಳಿತ ಕೇಂದ್ರಗಳನ್ನು ಪುನರ್‌ರಚಿಸಲಾಯಿತು. ಇಂತಹ ಸಂದರ್ಭಗಳಲ್ಲಿ ಅದುವರೆವಿಗೂ ವಿಶೇಷವಾಗಿ ಖ್ಯಾತಿಗೊಳಿಸಿದ್ದ ನಾಡುಗಳಲ್ಲಿ ಅನೇಕವು ತೆರೆಮರೆಗೆ ಸರಿದು, ಹೊಸ ನಾಡಕೇಂದ್ರಗಳನ್ನು ರೂಪಿಸುವುದರ ಮೂಲಕ ಹಳೆಯ ಕೇಂದ್ರಗಳು ನಿಧಾನವಾಗಿ ಲಯವಾಗುವಂತಹ ವ್ಯವಸ್ಥೆಯನ್ನು ವಿಜಯನಗರದ ಅರಸರು ಆರಂಭಿಸಿದರು. ಮಂಡಲಗಳ ಪ್ರಾಧಾನ್ಯತೆಯನ್ನು ಗೌಣಗೊಳಿಸಿ ಹೊಸ ರೀತಿಯ ಸೀಮೆ, ವಳಿತ, ಪಟ್ಟಡಿ, ವೇಂಠೆ, ಚಾವಡಿ ಮುಂತಾದ ಆಡಳಿತ ಹಾಗೂ ನ್ಯಾಯಿಕ ಕೇಂದ್ರಗಳನ್ನು ಸ್ಥಾಪಿಸಲಾಯಿತು.[2] ಇವೆಲ್ಲವಕ್ಕೂ ಮುಖ್ಯವಾಗಿ ಮೊದಲನೆಯ ಬಾರಿಗೆ 'ರಾಜ್ಯ'ವೆನ್ನುವ ಅತೀ ದೊಡ್ಡ ಆಡಳಿತ ಘಟಕದ ರಾಜಧಾನಿಯನ್ನು ಸ್ಥಾಪಿಸುವುದರ ಮೂಲಕ ಅಧಿಕಾರದ ಅತ್ಯಂತ ದೊಡ್ಡ ದೊಡ್ಡ ಕೇಂದ್ರಗಳನ್ನು ಈ 'ರಾಜ್ಯಕೇಂದ್ರ'ದಿಂದ ನಿರ್ವಹಿಸುವ ವ್ಯವಸ್ಥೆಯನ್ನು ಜಾರಿಗೆ ತಂದರು. ಇದೊಂದು ರೀತಿಯಲ್ಲಿ ಭೂಮಾಲಿಕತ್ವದಲ್ಲಿಯೂ, ಹೊಸತೆರಿಗೆ ವ್ಯವಸ್ಥೆಯಲ್ಲಿಯೂ, ರಾಜಕಾರಣದ ಪುನರ್ಭರಣದಲ್ಲಿಯೂ ನಾಡಜನರಿಗೆ ಹೆಚ್ಚಿನ ಅನುಕೂಲಕರವಾದ ವಾತಾವರಣವನ್ನು ಉಂಟು ಮಾಡಿತು.

ವಿಜಯನಗರದ ಅರಸರು ಆರಂಭದಲ್ಲಿ ಈ ತಮಿಳು ಸಂಪ್ರದಾಯದ ಆಡಳಿತ ಹಾಗೂ ಆಡಳಿತಾಧಿಕಾರಿಗಳನ್ನು ಏಕಾಏಕಿಯಾಗಿ ತೆಗೆದು ಹಾಕದೇ ಸ್ವಲ್ಪಸ್ವಲ್ಪವಾಗಿ ಅವರ ಆಡಳಿತವನ್ನು ಮೊಟಕುಗೊಳಿಸುತ್ತಾ ಸಾಗಿ ಕ್ರಮೇಣ ಹಳೆಯ ಮಾದರಿಗಳೆಲ್ಲವನ್ನೂ ಇನ್ನಿಲ್ಲದಂತೆ ಶೂನ್ಯಗೊಳಿಸಿದರು. ಇದಕ್ಕೆ ಉದಾಹರಣೆಯಾಗಿ ವಿಜಯನಗರದ ಆರಂಭದಲ್ಲಿ ಕಾಣುವಂತಹ ತಮಿಳು ಅಧಿಕಾರಿಗಳ ಹೆಸರುಗಳು ನಂತರ ಒಂದೇ ಶತಮಾನದಲ್ಲಿ ಕಣ್ಮರೆಯಾಗುವುದನ್ನು ಗಮನಿಸಬಹುದು. ಆಡಳಿತವನ್ನು ಸ್ಥಳೀಯ ಅರಸರಿಗೆ ನೀಡುವ ಪರಿಪಾಠವನ್ನು ಈ ಅರಸರು ಆರಂಭಿಸಿದರು. ಮಹಾಸಾಮಂತನಿಗೆ ಸರ್ವಾಧಿಕಾರವನ್ನು ನೀಡಿ ಅವನ ಅಡಿಯಲ್ಲಿ ಅನೇಕ ಸ್ಥಳೀಯ ಪಾಳೆಯಪಟ್ಟುಗಳಿಗೆ ವಿಶೇಷವಾದ ಸ್ಥಾನಮಾನಗಳನ್ನು ಒದಗಿಸಿ ಅವರನ್ನು ಮುನ್ನೆಲೆಗೆ ತರುವ ವಿಶೇಷವಾದ ಪ್ರಯತ್ನವನ್ನು ಇವರು ನಡೆಸಿದರು. ಆ ನಂತರ ಬಹುತೇಕ ನಾಡಪ್ರಭುಗಳು ಕನ್ನಡ ಮೂಲದವರೇ ಆಗಿರುವುದನ್ನು ಪ್ರಧಾನವಾಗಿ ಗಮನಿಸಬೇಕಾಗುತ್ತದೆ.

ಇನ್ನೊಂದು ಮುಖ್ಯವಾದ ಸಂಗತಿಯೆಂದರೆ ಹೊಯ್ಸಳರ ಕಾಲದಲ್ಲಿ ಅತ್ಯಂತ ಪ್ರಚಲಿತವಾಗಿದ್ದ ಸರ್ವಾಧಿಕಾರವು ವಿಜಯನಗರದ ಕಾಲದಲ್ಲಿ ಬಹುತೇಕ ಇಲ್ಲವಾಯಿತು.

ದಂಡನಾಯಕರು, ಮಹಾಮಂಡಲೇಶ್ವರರ ಪದವಿಗಳು ಈ ಹಿಂದಿನಂತೆ ಸರ್ವಾಧಿಕಾರವನ್ನು ಹೊಂದಿರಲಿಲ್ಲ. ಹೊಯ್ಸಳರಲ್ಲಿ ಅತೀ ಸಮರ್ಥ ದಂಡನಾಯಕರು ಹಾಗೂ ಮಹಾಮಂಡಲೇಶ್ವರರು ರಾಜ್ಯದ ಆಡಳಿತವನ್ನು ನಡೆಸುವ ಹಂತಕ್ಕೆ ಏರುತ್ತಿದ್ದರು. ಇವರ ಆಡಳಿತದ ಭೂಭಾಗವು ವಿಸ್ತಾರವಾಗಿತ್ತು. ಹಾಗಾಗಿ ದಂಗೆಗಳನ್ನು ಅಡಗಿಸಲು, ಕಂದಾಯಗಳನ್ನು ಸಂಗ್ರಹಿಸಲು ಕೆಲವು ತೊಡಕುಗಳಿದ್ದವು. ಇದನ್ನು ಸೂಕ್ಷ್ಮವಾಗಿ ಅರಿತಿದ್ದ ವಿಜಯನಗರದ ಅರಸರು ಮಹಾಮಂಡಲೇಶ್ವರ ಪದವಿಯನ್ನು ತೆಗೆದುಹಾಕಿದಂತೆ ತೋರುತ್ತದೆ. ಏಷ್ಟೋ ವಿಜಯನಗರದ ಅರಸರೇ ತಮ್ಮನ್ನು ತಾವು 'ಮಹಾಮಂಡಲೇಶ್ವರ' ಎಂಬ ಬಿರುದಿನಿಂದ ಕರೆದುಕೊಂಡಿದ್ದಾರೆ ಎಂದರೆ ಈ ಪದದ ಔಚಿತ್ಯವನ್ನು ನಾವು ಮನಗಾಣಬೇಕಾಗಿದೆ. ಪದಶಃ ಅರ್ಥವಾದ 'ಈ ವಿಸ್ತಾರವಾದ ಭೂಮಿಯ ಅಧಿಪತಿ' ಎಂಬಷ್ಟೇ ಅರ್ಥಕ್ಕೆ ಅದನ್ನು ನಿಯತಗೊಳಿಸಿದರು. ದಂಡನಾಯಕರು ಕೇವಲ ದಂಡನಾಯಕರಾಗಿ ಅಂದರೆ ಸೈನ್ಯದ ನಿರ್ವಹಣೆಗೆ ಮಾತ್ರ ಸೀಮಿತರಾದಂತೆ ತೋರುತ್ತದೆ. ಮಹಾಸಾಮಂತಾಧಿಪತಿಗಳಿಗೆ ವಿಜಯನಗರ ಕಾಲದಲ್ಲಿ ವಿಶೇಷವಾದ ಪ್ರಾಧಾನ್ಯತೆಯೂ ದೊರೆಯಿತು.

ಹಾಗಾದರೆ ರಾಜ್ಯದ ನಿರ್ವಹಣೆಯ ಸಲುವಾಗಿ ವಿಜಯನಗರದ ಅರಸರು ಕೈಗೊಂಡ ಪ್ರಮುಖ ಕಾರ್ಯವೇನು? ಎಂಬ ಪ್ರಶ್ನೆ ಮೂಡುತ್ತದೆ. ಇದೇ ಇವರ ವಿಶೇಷತೆಯೂ ಹೌದು. ರಾಜ್ಯಾದಾಯದ ಪ್ರಮುಖ ಮೈಲಿಗಲ್ಲೂ ಹೌದು. ವಿಜಯನಗರದ ಅರಸರ ಕಾಲದಲ್ಲಿ ಪ್ರಥಮಬಾರಿಗೆ ಅಧಿಕಾರ ವಿಕೇಂದ್ರೀಕರಣವು ಸರಿಯಾದ ದಾರಿಯಲ್ಲಿ ನಡೆಯಿತು. ಹಿಂದಿನಿಂದ ಸಾಮ್ರಾಜ್ಯಕ್ಕೆ ನಿಷ್ಠರಾಗಿದ್ದ ಮನೆತನಗಳನ್ನು ಗುರುತಿಸಿ ಅವರನ್ನು ಆಡಳಿತದ ಮುನ್ನೆಲೆಗೆ ತರುವ ಮೂಲಕ ಹೊಸ ಸಾಮಾಜಿಕ ವ್ಯವಸ್ಥೆಯನ್ನು ಇವರ ಕಾಲದಲ್ಲಿ ರೂಪಿಸಲಾಯಿತು. ಹೀಗೆ ಗುರುತಿಸಿದ ಮನೆತನಗಳಿಗೆ 'ಅಮರನಾಯಕರು' ಎಂದು ಕರೆಯಲಾಯಿತು. ವಿಜಯನಗರದ ಅರಸರು ಹೀಗೆ ಕೆಲವರನ್ನು ಗುರುತಿಸಿ ಅವರಿಗೆ ಸೀಮಿತವಾದ ನಾಡುಗಳ ಆಡಳಿತವನ್ನು ಒದಗಿಸುವುದರ ಮೂಲಕ ಎರಡು ಮುಖ್ಯವಾದ ಸಂಗತಿಗಳಿಗೆ ಕಾರಣಕರ್ತರಾದರು. ಇದರಲ್ಲಿ ಮೊದಲನೆಯದಾಗಿ ಎಲ್ಲರೂ ಇವರನ್ನು ಚಕ್ರವರ್ತಿಗಳೆಂದು ಮನಸಾರೆ ಒಪ್ಪಿಕೊಳ್ಳುವುದೇ ಅಲ್ಲದೇ ಸಮಸ್ತ ಭೂಮಿಯ ನಿಜವಾದ ಒಡೆಯನೆಂದರೆ ಈ ಚಕ್ರವರ್ತಿಯೇ ಎಂಬ ತೀರ್ಮಾನಕ್ಕೆ ಬರುವಂತಾಯಿತು. ಇದು ಸಾಮ್ರಾಜ್ಯದ ಅತ್ಯುಚ್ಚ ಪದವಿಯಾದ ರಾಜಧಾನಿಯ ಮೇಲಿನ ಆಕ್ರಮಣವನ್ನು ಇಲ್ಲವಾಗಿಸಿತು. ಇನ್ನು ಎರಡನೆಯದು, ಅಮರನಾಯಕರು ತಮಗೆ ಆಡಳಿತಕ್ಕೆಂದು ನೀಡಿದ ಪ್ರದೇಶದ ನಿಜವಾದ ಅಧಿಕಾರವನ್ನು ಹೊಂದಿದ್ದರಿಂದ ನಾಡಿನ ಸರ್ವತೋಮುಖ ಅಭಿವೃದ್ಧಿಯ ಕಡೆಗೆ ಗಮನವನ್ನು ನೀಡಲು ಆರಂಭಿಸಿದರು.

ನಾಡಿನ ಆಡಳಿತವು ಚಿಕ್ಕಚಿಕ್ಕ ಘಟಕಗಳಿಂದ ಕೂಡಿದ್ದರಿಂದ ಆಡಳಿತದ ನಿರ್ವಹಣೆಯೂ ಸುಲಭವಾಯಿತು. ಜಾತಿಪ್ರಧಾನ ಆಡಳಿತ ವ್ಯವಸ್ಥೆಗೆ ವಿಜಯನಗರದ ಅರಸರ ಮಹತ್ತರ ಕೊಡುಗೆಯೆಂದರೆ ಬಹುತೇಕ ಎಲ್ಲಾ ಕೋಮಿನ ಅಲಕ್ಷಿತ ಸಮುದಾಯಗಳಿಗೂ ಆಡಳಿತದ ರುಚಿಯನ್ನು ತೋರಿಸಿದ್ದು ದೊಡ್ಡ ಸಾಧನೆಯಾಯಿತು. ಅಬ್ರಾಹ್ಮಣ, ಅಕ್ಷತ್ರಿಯ ಪಂಗಡಗಳೆಲ್ಲಾ ಆಡಳಿತದ ಮುಂಚೂಣಿಗೆ ಬರುವಂತಾಯಿತು. ಇದು ಮಾನಸಿಕವಾಗಿ ಅವರನ್ನು ಋಣಿಗಳನ್ನಾಗಿಸಿ ಆಡಳಿತವನ್ನು ಎಂದಿಗಿಂತಲೂ ಹೆಚ್ಚು ಸೂಕ್ಷ್ಮವಾಗಿಸಲಾಯಿತು. ಬಹುತೇಕ ಬೇಟೆ, ಕೃಷಿ, ಸಣ್ಣಕೈಗಾರಿಕೆ, ವ್ಯಾಪಾರದ ಹಿನ್ನೆಲೆಯಲ್ಲಿದ್ದ ಈ ಅಮರನಾಯಕರು ಸ್ಥಳೀಯ ಪ್ರಭುಗಳಾಗುವಷ್ಟು ಹಿರಿತನವನ್ನು

ಸಂಪಾದಿಸಿಕೊಂಡರು. ಹೇಳಿಕೇಳಿ ಸಮಾಜವೆಂದರೆ ಶ್ರಮಿಕ ಕುಟುಂಬಗಳ ಮೊತ್ತವೇ ಆಗಿರುವುದರಿಂದ ಈ ಶ್ರಮಿಕ ಪ್ರಭುಗಳು ತಮ್ಮ ಶ್ರಮ ಸಂಸ್ಕೃತಿಯನ್ನು ರಾಜ್ಯದ ಪ್ರಮುಖ ಆದಾಯವನ್ನಾಗಿ ರೂಪಿಸುವ ಗುರುತರವಾದ ಕಾರ್ಯವನ್ನು ಮಾಡಲು ಅತ್ಯಂತ ಸಮರ್ಥರಾಗಿದ್ದರು. ಈ ಆಡಳಿತದ ಚುಕ್ಕಾಣಿಯನ್ನು ಹಿಡಿದ ಅವರು ಆಡಳಿತದ ಕಾರ್ಯಕ್ಷಮತೆಯನ್ನು ಅತ್ಯಂತ ಕಸುಬುದಾರರಂತೆ ನಿರ್ವಹಿಸಿದ್ದು ಈ ಯುಗದ ಪ್ರಮುಖ ಸಾಧನೆಯಾಗಿತ್ತು.

ಈ ಅಮರನಾಯಕರು ಯಾರೂ ಹೊರಗಿನಿಂದ ಬಂದಂತೆ ತೋರುವುದಿಲ್ಲ. ಬದಲಿಗೆ ಅವರೆಲ್ಲರೂ ಇಲ್ಲಿನ ಸ್ಥಳೀಯರೇ ಆಗಿದ್ದರು. ವಿವಿಧ ಕುಲಕಸುಬುಗಳ ಅಧಿಕೃತವಾದ ವಕ್ತಾರರಾದ ಇವರು ಸ್ಥಳೀಯ ಮಾಹಿತಿಯನ್ನು ಹಾಗೂ ಸಂಪನ್ಮೂಲವನ್ನೂ ಸಮರ್ಥವಾಗಿ ಅರಿತವರಾಗಿದ್ದರು. ಎಲ್ಲಾ ವರ್ಣೀಯರಿಗೂ ಇದರಿಂದ ಸಹಾಯವಾಗುವಂತಹ ಸಂದರ್ಭ ನಿರ್ಮಾಣವಾಯಿತು. ಸಾಮ್ರಾಜ್ಯದ ರಕ್ಷಣೆಗೆಂದು ಈ ಸ್ಥಳೀಯ ಅರಸರು ತಮಗೆ ಸಾಧ್ಯವಾಗುವಷ್ಟು ಮಟ್ಟಿಗೆ ಸೈನ್ಯವನ್ನು ಜಮಾಯಿಸಿಕೊಂಡು ಅವರು ಸೈನಿಕ ಶಿಕ್ಷಣವನ್ನೂ ನೀಡುತ್ತಾ ಯುದ್ಧ ಸಂದರ್ಭಗಳಲ್ಲಿ ಚಕ್ರವರ್ತಿಗಳಿಗೆ ಸಹಾಯವಾಗಿ ನಿಲ್ಲುತ್ತಿದ್ದರು. ಉಳಿದಂತೆ ಅವರು ತಮ್ಮ ಕೃಷಿ ಹಾಗೂ ಕರಕುಶಲ ಚಟುವಟಿಕೆಗಳಲ್ಲಿ ಮಗ್ನರಾಗುತ್ತಿದ್ದರು. ಕೇಂದ್ರವು ರಕ್ಷಣಾವ್ಯವಸ್ಥೆಯನ್ನು ನೋಡಿಕೊಳ್ಳುವ ಜವಾಬ್ದಾರಿ ಹಾಗೂ ಅಧಿಕಾರಗಳನ್ನು ಈ ಸ್ಥಳೀಯ ಅರಸರಿಗೆ ನೀಡಿದ್ದರಿಂದಲೇ ಅಮರನಾಯಕರು ವಿಶೇಷವಾದ ಅಸ್ಮಿತೆಯನ್ನೂ ಹೊಂದಿದ್ದು ಸುಳ್ಳಲ್ಲ. ಇದರಿಂದ ಸ್ಥಳೀಯ ಸಾಹಿತ್ಯ ಹಾಗೂ ಸಂಸ್ಕೃತಿಗೂ ಪ್ರಾಧಾನ್ಯತೆಯು ಸಿಕ್ಕಂತಾಯಿತು.

ಈ ಹಿನ್ನೆಲೆಯಲ್ಲಿ ಬೆಂಗಳೂರು ಪರಿಸರದ ಆಡಳಿತವು ಪ್ರಮುಖವಾಗಿ ಯಾರ ಕೈಯಲ್ಲಿತ್ತು ಎಂಬುದನ್ನು ಈ ಮುಂದಿನ ಭಾಗದಲ್ಲಿ ಪ್ರಮುಖವಾಗಿ ಚರ್ಚಿಸುವುದು ಅನಿವಾರ್ಯವೆಂದು ನಂಬುತ್ತೇನೆ. ಇನ್ನು ಮುಂದೆ ಪ್ರಸ್ತುತ ಪ್ರಬಂಧವು ಆವರಣದಲ್ಲಿ ಸೂಚಿಸುವ ಸಂಖ್ಯೆಗಳು ಆಯಾ ತಾಲ್ಲೂಕುಗಳ ಶಾಸನಗಳ ಸಂಖ್ಯೆಯೆಂದು ತಿಳಿಯುವುದು. ಹಾಗೂ ತಾಲ್ಲೂಕುಗಳನ್ನು ಈ ಮುಂದಿನಂತೆ ಸಂಕ್ಷೇಪಗೊಳಿಸಿ ಸೂಚಿಸಲಾಗಿದೆ. ಹಾಗೂ ಎಲ್ಲರಿಗೂ ತಿಳಿದಿರುವಂತೆ ಈ ತಾಲ್ಲೂಕುಗಳು ಹಾಗೂ ಅವುಗಳ ಸಂಖ್ಯೆಗಳು ಬಿ.ಎಲ್. ರೈಸರ **ಎಪಿಗ್ರಾಫಿಯಾ ಕರ್ಣಾಟಿಕಾ 9ನೆಯ ಸಂಪುಟ**ದಿಂದ ಆರಿಸಿಕೊಳ್ಳಲಾಗಿದೆ. ಸಂಕ್ಷೇಪಗಳು: ಬೆಂ=ಬೆಂಗಳೂರು. ನೆಲ=ನೆಲಮಂಗಲ. ಮಾ=ಮಾಗಡಿ. ದೊಡ್ಡ=ದೊಡ್ಡಬಳ್ಳಾಪುರ. ದೇವ=ದೇವನಹಳ್ಳಿ. ಹೊಸ=ಹೊಸಕೋಟೆ.

– 3 –

ವಿಜಯನಗರದ ಮೊದಲನೆಯ ಅರಸನಾದ ವೀರ ಹರಿಯಪ್ಪ ಒಡೆಯನ (1336–1356) ಬಾಣಸವಾಡಿಯ ಕ್ರಿ.ಶ. 1340ರ ಶಾಸನವು [ನೆಲ 19] ಮಯಿಲೆಯ ನಾಯಕನು ಕುಕ್ಕಲ ನಾಡನ್ನು ಆಳುತ್ತಿದ್ದ ಸಂಗತಿಯನ್ನು ತಿಳಿಸುತ್ತದೆ. ಕ್ರಿ.ಶ. 1346ರಲ್ಲಿ ಇರುಂಬಲಿಯೂರಿನ ಮಹಾಜನರು. ವೇಯೂರು ನಾಡಿನ ಕೆಲವರು ವಲ್ಲಪ್ಪ ದಣ್ಣಾಯಕನ ಮುಂದಾಳುತ್ವದಲ್ಲಿ 'ಶೇವಿಡ ಪೆರ್ಗ್ಗಡೆಯಾರ್' ಗೆ ಉದ್ಭೈಯ್ಯನಪಳ್ಳಿಯಲ್ಲಿ ಚತುಸ್ಸೀಮೆಯನ್ನು ಗುರುತಿಸಿ ಅದರ ಒಳಗಡೆ ಇರುವ ಭೂಮಿಯನ್ನು ದಾನವಾಗಿ ನೀಡಿದರು. ಈ ದಾನವು ಸರ್ವಮಾನ್ಯ ದಾನವಾಗಿದ್ದು 'ಪೂರ್ವಾದಾಯ' ಅಂದರೆ ಈ ಹಿಂದೆ ಬರಬೇಕಾಗಿದ್ದ ಆದಾಯಗಳು ಹಾಗೂ 'ಅಪೂರ್ವಾಯ' ಅಂದರೆ ಇನ್ನು ಮುಂದೆ ಬರಬೇಕಾಗುವ ತೆರಿಗೆಗಳನ್ನು

ಸೇರಿಸಿ ದಾನ ನೀಡಲಾಯಿತು ಎಂದು ದೊಡ್ಡ ಕನ್ನೆಲ್ಲಿಯ [ಬೆಂ 47] ಶಾಸನವು ತಿಳಿಸುತ್ತದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ದಾನ ನೀಡಿರುವುದು ವಲ್ಲಪ್ಪ ದಣ್ಣಾಯಕನ ಅಧ್ಯಕ್ಷತೆಯಲ್ಲಿ. ಈತ ಹೊಯ್ಸಳರ ಕಾಲದಿಂದ ಆಡಳಿತದಲ್ಲಿ ಇದ್ದವನು. ಮೂರನೆಯ ಬಲ್ಲಾಳನ ಸೋದರಳಿಯ ಈತ. ಮುಂದೆ ಹರಿಯಪ್ಪ ಒಡೆಯನೊಡನೆಯೂ ಸಂಬಂಧವನ್ನು ಬೆಳೆಸಿದವನು. ಬೆಂಗಳೂರು ಪರಿಸರದ ಆಡಳಿತವು ಇವನದ್ದಾಗಿತ್ತು. ಆದರೆ ಈತ ತಮಿಳು ಪಕ್ಷಪಾತಿಯಾಗಿದ್ದಂತೆ ತೋರುತ್ತದೆ. ಹಾಗಾಗಿಯೇ ಆ ಈ ಶಾಸನದಲ್ಲಿ ಅಂತರ್ಗತವಾಗಿರುವ ಪ್ರಧಾನವಾದ ವಿಷಯ ವಸ್ತುಗಳು ತಮಿಳೀಕರಣಗೊಂಡಿರುವುದನ್ನು ಗಮನಿಸಬೇಕು. ವಿಜಯನಗರದ ಅರಸು ಹರಿಹರನ ಮಗಳನ್ನು ಈತ ಮದುವೆಯಾಗಿದ್ದ ಹಾಗೂ ಬೆಂಗಳೂರು ಪರಿಸರದಲ್ಲಿ ವೆಪ್ಪೂರು ನಾಡು ಹಾಗೂ ತೊರೆವಳಿನಾಡಿನ ಅಧಿಕಾರವೂ ಇವನ ಅಧೀನತೆಯಲ್ಲಿಯೇ ಇತ್ತು. ಈತ ಬಹಳ ಚತುರನಾದ ಆಡಳಿತಗಾರನೂ ಹಾಗೂ ಚಕ್ರವರ್ತಿಗಳ ಬಂಧುವೂ ಆಗಿದ್ದುದರಿಂದ ಈತನ ಆಡಳಿತವು ನಿರಂಕುಶವಾಗಿತ್ತು.

ಇಂತಹದ್ದೇ ಇನ್ನೊಂದು ಉದಾಹರಣೆಯೆಂದರೆ ಇದೇ ವರ್ಷ ಎಂದರೆ ಕ್ರಿ.ಶ. 1346ರಲ್ಲಿ ಹರಿಯಪ್ಪ ಹಾಗೂ ಬುಕ್ಕಣ್ಣ ಒಡೆಯರ ಆಳ್ವಿಕೆಯಲ್ಲಿ ನಿಗರಿಲಿ ಚೋಳಮಂಡಲಕ್ಕೆ ಸೇರಿದ ರಾಜೇಂದ್ರಚೋಳ ವಳನಾಡಿನ ಸಣ್ಣನಾಡಿನ ತೊರೆವಳನಾಡಿನಲ್ಲಿದ್ದ ತೆಂಪರುವಿನ ಜನರೆಲ್ಲಾ ಸೇರಿ ಸೆಂಜಿ ಅಗ್ರಹಾರದ ನಿವಾಸಿಯಾದ ಗಂಗಾಧರನಿಗೆ ಕೆಲವು ದಾನಗಳನ್ನು ನೀಡಿದರು [ಬೆಂ 59]. ಈತ ಹೊರಗಿನಿಂದ ಬಂದವನು. ಆದರೂ ಈತನಿಗೆ ದಾನ ನೀಡಲಾದ ಭೂಮಿಯನ್ನು ಮಾರುವ ಹಾಗೂ ಭೋಗ್ಯಕ್ಕೆ ನೀಡುವ ಹಕ್ಕನ್ನು ನೀಡಲಾಯಿತು. ಈ ಶಾಸನವು ವಿಜಯನಗರದ ಅರಸರ ಕಾಲದಲ್ಲೂ ನಿಗರಿಲಿ ಚೋಳಮಂಡಲ ಹಾಗೂ ರಾಜೇಂದ್ರ ಚೋಳ ವಳನಾಡಿನ ಉಲ್ಲೇಖಗಳನ್ನು ಮಾಡುವುದನ್ನು ಗಮನಿಸಬೇಕು. ಹಾಗಾದರೆ ವಿಜಯನಗರದ ಅರಸರು ಇದನ್ನು ನೋಡಿಕೊಂಡು ಸುಮ್ಮನಿದ್ದರೇ ಎಂದು ಪ್ರಶ್ನಿಸಿಕೊಳ್ಳಬೇಕಾಗುತ್ತದೆ. ಇದು ದೊರೆಗಳ ಗಮನಕ್ಕೆ ಬಂದಂತಿಲ್ಲ. ಇಂಥಹ ಕೆಲವು ಉದಾಹರಣೆಗಳು ಶಾಸನಗಳಾಗುತ್ತಾ ಇದ್ದಾಗ ಎಚ್ಚೆತ್ತುಕೊಂಡ ಪ್ರಭುಗಳು ತಕ್ಷಣ ಕಾರ್ಯಪ್ರವೃತ್ತರಾಗಿ ಹೊಸ ಆಡಳಿತವನ್ನು ಪರಿಚಯಿಸಿರಬೇಕು.

ಈ ಮಾತಿಗೆ ಪೂರಕವಾಗಿ ಇದೇ ಪರಿಸರದಲ್ಲಿ ಮುಂದಿನ ವರ್ಷ ಎಂದರೆ ಕ್ರಿ.ಶ. 1347ರಲ್ಲಿ ಹರಿಯಪ್ಪ ಒಡೆಯನು . . ಕಳನಾಡ ಪ್ರಭುವಾದ ಗೌಡಪ್ಪನ ಮಗನಾದ ಹೊನ್ನಪ್ಪನಿಗೆ ಅಧಿಕಾರವನ್ನು ನೀಡಿದ್ದನ್ನು [ಬೆಂ 97] ಈ ಹಿನ್ನಲೆಯಲ್ಲಿ ಗಮನಿಸಬೇಕು.

ಹಿಂದಿನಿಂದಲೂ ಅಸ್ತಿತ್ವದಲ್ಲಿದ್ದ ಯಲಹಂಕ ನಾಡಿಗೆ ಇದೇ ಅರಸನ ಕಾಲದಲ್ಲಿ ವಿಶೇಷವಾದ ಸ್ಥಾನಮಾನಗಳು ದೊರಕುವಂತಾಯಿತು. ಈ ಇಡೀ ಪ್ರದೇಶವು ಮಹಾಸಾಮಂತಾಧಿಪತಿ ಮೈಲೆಯನಾಯಕನ ಆಡಳಿತದಲ್ಲಿತ್ತು. ಈ ಮೈಲೆಯನಾಯಕನು ಕುಕ್ಕಲನಾಡನ್ನು ಆಳುತ್ತಿದ್ದ ಅರಸನಾಗಿದ್ದನು. ಹಾಗಾಗಿ ಯಲಹಂಕ ನಾಡಿನ ಅಧಿಪತ್ಯವು ವಿಜಯನಗರದ ಆರಂಭದಲ್ಲಿ ಕುಕ್ಕಲನಾಡಿನ ಅಧಿಕಾರದ ವ್ಯಾಪ್ತಿಯಲ್ಲಿಯೇ ಅಂತರ್ಗತವಾಗಿತ್ತೇ ವಿನಃ ಸ್ವಂತ ಅಧಿಕಾರವನ್ನು ಹೊಂದಿರಲಿಲ್ಲ ಎಂಬ ವಿಷಯವನ್ನು ಮುಖ್ಯವಾಗಿ ತಿಳಿಯಬೇಕಾಗಿದೆ. ಈ ಮೈಲೆಯ ನಾಯಕನು ಎಲಹಕ್ಕ ನಾಡಪ್ರಭು ಬೈರಿದೇವ ಮತ್ತಿತರರಿಗೆ ವಿಶೇಷ ಪ್ರಾಶಸ್ತ್ಯವನ್ನು ನೀಡಿದ್ದಿರಬೇಕು. ಹಾಗಾಗಿ ಇವರೆಲ್ಲರೂ ಸೇರಿ ಬೈರಿಸೆಟ್ಟಿಯ ಮಗನಾದ ಕರಿಯ ನಾಯಕನಿಗೆ ಕೊಡುಗೇ ಹಳ್ಳಿಯನ್ನು

ಸರ್ವಮಾನ್ಯವಾಗಿ ನೀಡಿದರು [ದೇವ 50]. ಇದನ್ನು ತಿಳಿಸುವ ಕ್ರಿ.ಶ. 1348ರ ಶಾಸನವು ದೇವನಹಳ್ಳಿ ತಾಲ್ಲೂಕಿನ ಕಟಗೇನ ಹಳ್ಳಿ ಗ್ರಾಮದಲ್ಲಿರುವುದರಿಂದ ಶಾಸನೋಕ್ತ ಕೊಡಿಗೇಹಳ್ಳಿಯು ಇಂದಿನ ಕಟಗೇನ ಹಳ್ಳಿಯೇ ಆಗಿರುವ ಸಾಧ್ಯತೆಯು ಹೆಚ್ಚಿದೆ.

ಇನ್ನೊಂದು ಮುಖ್ಯವಾದ ಸಂಗತಿಯೆಂದರೆ ಈ ಶಾಸನದಲ್ಲಿ 'ಎಲಹಕ್ಕ ನಾಡಪ್ರಭುಗಳು' ಎಂಬ ಒಕ್ಕಣೆಯಿದ್ದು ಅವರುಗಳ ಹೆಸರುಗಳು "ಬೈರಿದೇವ. ಮಾಚಿದೇವ. ಮರಿಗೋಪಾಲಸ್ವಾಮಿಯಪ್ಪ. ಕನ್ನಗೌಡದೇವ?. ಬೈಯಪ್ಪ. ಅಲ್ಲಾಳಜೀಯರು ಒಳಗಾದ ಸಮಸ್ತ ಗೌಡಗಳು" ಎಂದಿರುವುದರಿಂದ ಇದನ್ನು ಇವರೆಲ್ಲಾ ಸಹೋದರರು ಎಂಬಂತೆ ಕೆಲವು ವಿದ್ವಾಂಸರು ಗೊಂದಲಕ್ಕೆ ಒಳಗಾಗಿದ್ದಾರೆ. ಬಹುಶಃ ಇವರ್‍ಯಾರೂ ಯಲಹಂಕ ನಾಡಪ್ರಭು ಕೆಂಪೇಗೌಡನ ಪೂರ್ವಿಕರಾಗಿದ್ದ ಸಾಧ್ಯತೆಯಿಲ್ಲ. ಇವರೆಲ್ಲಾ ಯಲಹಂಕದ ಪ್ರಮುಖ ಗೌಡರಷ್ಟೇ ಆಗಿದ್ದರು. ಬಹುಶಃ ಎಲಹಕ್ಕ ನಾಡಪ್ರಭು ಎಂದರೆ ಬೈರಿದೇವನೊಬ್ಬನಿರಬಹುದು. ಇದರ ಬಗ್ಗೆ ಹೆಚ್ಚಿನ ಸಂಶೋಧನೆಯ ಅವಶ್ಯಕತೆಯಿದೆ.

ಬೆಂಗಳೂರು ಪರಿಸರದ ಈ ಭಾಗದ ಆಳ್ವಿಕೆಯ ಪರಿ ಇಂತಾದರೆ ಇಂದಿನ ವಿಜಯಪುರ ಪ್ರದೇಶದಲ್ಲಿಯೂ ಶುದ್ಧ ಕನ್ನಡ ಅರಸನಾದ ನಾಗಣ್ಣ ಒಡೆಯನ ಆಳ್ವಿಕೆಯು ಈ ಕಾಲದಲ್ಲಿ ಪ್ರವರ್ಧಮಾನಕ್ಕೆ ಬಂದಿತು. ನಾಗಣ್ಣ ದಣ್ಣಾಯಕ ಎಂದು ಈತನನ್ನು ಕರೆಯಲಾಗಿದೆ. ದಂಡನಾಯಕನಾಗಿದ್ದ ಈತನ ನಿಷ್ಠೆಯನ್ನು ಗಮನಿಸಿಯೇ ಈತನನ್ನು ವಿಜಯನಗರ ಕಾಲದಲ್ಲಿ ಹೊಸದಾಗಿ ರೂಪುಗೊಂಡ ಸಾದಲಿ ರಾಜ್ಯದ ಒಡೆಯನನ್ನಾಗಿ ಮಾಡಲಾಗಿತ್ತು. ಈ ಸಾದಲಿ ರಾಜ್ಯವು ಇಂದಿನ ಶಿಡ್ಲಘಟ್ಟ ಪರಿಸರದಲ್ಲಿದ್ದು ವಡಿಗೇನಹಳ್ಳಿಯು (ಇಂದಿನ ವಿಜಯಪುರ) ಕೂಡ ಈ ಪರಿಸರಕ್ಕೆ ಹತ್ತಿರವಾಗಿಯೇ ಇತ್ತು. ಈತನ ಕಾಲದಲ್ಲಿ ಅಂಜಡುನಾಡಿನ ವಡಿಗೆಯ ಹಳ್ಳಿಯನ್ನು ಮಹಾಸಾಮಂತಾಧಿಪತಿಯಾದ ದರಂಕಿಯ ನಾಯಕನ ಮಗನಾದ ಪೆಮ್ಮೆಯ ನಾಯಕನು ನೋಡಿಕೊಳ್ಳುತ್ತಿದ್ದನು [ದೇವ 29].

ವಿಜಯನಗರದ ಮೊದಲ ದೊರೆ ವೀರಹರಿಯಪ್ಪ ಒಡೆಯನು ಬಿಟ್ಟು ಬೆಂಗಳೂರು ಪರಿಸರದಲ್ಲಿ ಬಹಳ ಪ್ರಯಾಸ ಪಟ್ಟು ಕನ್ನಡಮಯ ಸ್ಥಳೀಯ ಅರಸರನ್ನು ತುಂಬುತ್ತಾ ಸಾಗಿದನು. ಮೊದಲನೆಯ ಹರಿಹರರಾಯನನ್ನು ಈ ಪರಿಸರದ ಶಾಸನಗಳು ಅತ್ಯಂತ ಪ್ರೀತಿಯಿಂದ ಹರಿಯಪ್ಪ ಒಡೆಯ. ವೀರ ಹರಿಯಪ್ಪ ಒಡೆಯ ಎಂದು ಕರೆದವು. ಈತನ ನಂತರ ಅಧಿಕಾರಕ್ಕೆ ಬಂದ ಒಂದನೆಯ ಬುಕ್ಕರಾಯನು (ಕ್ರಿ.ಶ. 1356–1377) ಈ ಪರಿಸರದ ಆಡಳಿತವನ್ನು ಹಿಂದೆಯೇ ಬಲ್ಲವನಾದ್ದರಿಂದ ಅನೇಕ ರೀತಿಯ ಬದಲಾವಣೆಯನ್ನು ಉಂಟು ಮಾಡಿದನು. ಹರಿಹರನಿಗಿಂತ ಬುಕ್ಕನಿಗೆ ಈ ಪರಿಸರದ ನಾಡಿಮಿಡಿತವು ತೀವ್ರವಾಗಿ ಗೊತ್ತಿತ್ತು. ಇಲ್ಲಿನ ಸ್ಥಳೀಯ ಅವಶ್ಯಕತೆಗಳನ್ನು ಇವನು ಚೆನ್ನಾಗಿಯೇ ಬಲ್ಲವನಾಗಿದ್ದ. ವೀರಬುಕ್ಕಣ್ಣ ಒಡೆಯನ ಕಾಲದಲ್ಲಿ ಕೈವಾರ ನಾಡನ್ನು ತಮಿಳು ಭಾಷಿಕನಾದ ಬ್ರಹ್ಮರಾಯನು ಆಳ್ವಿಕೆ ನಡೆಸುತ್ತಿದ್ದನು. ಇದನ್ನು ಕ್ರಿ.ಶ. 1358ರ ಬುಳ್ಳಹಳ್ಳಿಯ ಶಾಸನವು [ದೇವ 28] ತಿಳಿಸುತ್ತದೆ. ಇದಕ್ಕೆ ಮುಖ್ಯಕಾರಣ ಆಗ ಬುಕ್ಕರಾಯನು ಬಸವಾಪಟ್ಟಣದ ಕಡೆಗಿನ ಆಂತರಿಕ ಸಮಸ್ಯೆಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದನು. ಕ್ರಿ.ಶ. 1359ರಲ್ಲಿ ಬುಕ್ಕಣ್ಣ ಒಡೆಯನು ಬಸವಾಪಟ್ಟಣದಲ್ಲಿ ಇದ್ದ ಸಂಗತಿಯನ್ನು ಹುರಳೀಚಿಕ್ಕನಹಳ್ಳಿಯ ಶಾಸನವು [ನೆಲ 23] ತಿಳಿಸುತ್ತದೆ. ಆಗ ಮಹಾಸಾಮಂತಾಧಿಪತಿಯಾದ ಮೈಲೆಯ ನಾಯಕನ ತಮ್ಮಂದಿರಾದ ಯೋಜಯ ನಾಯಕ ಹಾಗೂ ಸಂತೆಯ ನಾಯಕರು ಇಲ್ಲಿ ಆಳ್ವಿಕೆ ನಡೆಸುತ್ತಿದ್ದರು. ಅಂದರೆ ಕುಕ್ಕಲನಾಡಿನ ಜೊತೆಗೆ ಇದೀ

ಬೆಂಗಳೂರು ಪರಿಸರವು ಇವರ ಕೈಯಲ್ಲೇ ಇದ್ದುದ್ದು ವೇದ್ಯವಾಗುತ್ತದೆ. ಈ ವೇಳೆಗೆ ವಲ್ಲಪ್ಪ ದಣ್ಣಾಯಕರ ಪ್ರಾಮುಖ್ಯತೆಯು ಈ ಪರಿಸರದಲ್ಲಿ ಕಡಿಮೆಯಾಗುತ್ತಾ ಬಂದಿತ್ತು. ಯಲಹಂಕ, ಕುಕ್ಕಲನಾಡು ಪ್ರದೇಶಗಳ ಅಧಿಪತ್ಯದಿಂದ ವಲ್ಲಪ್ಪನು ವೆಪ್ಪೂರು ನಾಡಿನ ಆಡಳಿತಕ್ಕೆ ಸೀಮಿತವಾದದ್ದು ವಿಶೇಷವಾದ ಸಂಗತಿಯಾಗಿದೆ. ಅರಿಯಪ್ಪ ಒಡೆಯರ (ವೀರ ಹರಿಹರ ಮಹಾರಾಯ) ಮಹಾಮಂಡಳೇಶ್ವರನಾಗಿದ್ದ ಈತ ವೆಪ್ಪೂರು ನಾಡಿನ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಸಂಗತಿಯನ್ನು ಕ್ರಿ.ಶ. 1361ರ ಶಾಸನವು ತಿಳಿಸುತ್ತದೆ [ಬೆಂ 101]. ಇದಕ್ಕೆ ಕಾರಣ ವೆಪ್ಪೂರು ನಾಡು ಕನ್ನಡ ಹಾಗೂ ತಮಿಳು ನಾಡುಗಳನ್ನು ಸಂಧಿಸುವ ಪ್ರದೇಶವಾಗಿತ್ತು. ಇಲ್ಲಿ ನಿರಂತರ ಸಂಘರ್ಷಗಳು ಜರುಗುತ್ತಿದ್ದವು. ಅತ್ಯಧಿಕ ಸುಂಕವು ಈ ಪ್ರದೇಶದಿಂದ ಸಂಚಯನಗೊಳ್ಳುತ್ತಿತ್ತು. ಈ ರೀತಿಯ ಸುಂಕಗಳು ಬಹುಶಃ ಸಾರಿಗೆಯಿಂದ ಉತ್ಪನ್ನವಾಗುತ್ತಿತ್ತು ಎಂದೆನಿಸುತ್ತದೆ. ಹಾಗಾಗಿ ದೀರ್ಘವಾದ ಭೂಪ್ರದೇಶದ ಬದಲಿಗೆ ವಲ್ಲಪ್ಪ ದಣ್ಣಾಯಕನು ವೆಪ್ಪೂರು ನಾಡಿನ ಆಡಳಿತದಲ್ಲಿ ತನ್ನನ್ನು ತಾನು ಪೂರ್ಣವಾಗಿ ತೊಡಗಿಸಿಕೊಂಡಂತೆ ತೋರುತ್ತದೆ.

ಬುಕ್ಕರಾಯನು ರಾಜಧಾನಿಯೇ ಮುಂತಾದ ಕಡೆ ತುಂಬಾ ತೀವ್ರತರವಾಗಿ ತೊಡಗಿಸಿಕೊಂಡಿದ್ದನಾದ್ದರಿಂದ ಸ್ವಲ್ಪ ಕಾಲದವರೆಗೆ ಬೆಂಗಳೂರು ಪರಿಸರದ ಆಡಳಿತವನ್ನು ಸರಿಯಾಗಿ ನಿರ್ವಹಿಸಲು ಆತನಿಗೆ ಸಾಧ್ಯವಾಗಿರಲಿಲ್ಲ. ಹಾಗಾಗಿ ತನ್ನ ಮಗನಾದ ಕಂಪಣ್ಣ ಒಡೆಯನ ಸುಪರ್ದಿಗೆ ಈ ಬೆಂಗಳೂರು ಪರಿಸರದ ಆಡಳಿತವನ್ನು ಕ್ರಿ.ಶ. 1363ರ ಸುಮಾರಿಗೆ ವಹಿಸಿದ್ದನು. ಮುಳಬಾಗಿಲ ಪ್ರಾಂತ್ಯಾಧಿಕಾರಿಯಾಗಿದ್ದ ಕಂಪಣ್ಣನು ತನಗೆ ಆತ್ಮೀಯನಾಗಿದ್ದ ಕಾಮೆಯ ನಾಯಕನ ಮೂಲಕ ಈ ಪರಿಸರವನ್ನು ನೋಡಿಕೊಂಡನು. ಈ ಕಾಮೆಯ ನಾಯಕನು ಎಲಹಂಕವನ್ನು ಮುಳವಾಗಿಲು ರಾಜ್ಯದ ಅಧೀನತೆಗೆ ತಂದನು, ಈ ರಾಜ್ಯದಲ್ಲಿದ್ದ ಪ್ರಮುಖ ಗವುಡರಾದ ಎಲಹಂಕ ನಾಡಿನ ಅಲ್ಲಾಳ ಜೀಯನ ಮಗನಾದ ತಣ್ಣೆಯಪ್ಪನಿಗೆ ತೊರೆವಳಿನಾಡಿನಲ್ಲಿ ಇದ್ದ ಬೆಳತ್ತೆಯ ಆಡಳಿತವನ್ನು ವಹಿಸಿಕೊಟ್ಟನು. [ಬೆಂ 81]. ಬುಕ್ಕಣ್ಣ ಒಡೆಯನ ಕಾಲದಲ್ಲೂ ಇಲ್ಲಿ ಕೆಲವು ತಮಿಳು ಭಾಷಿಕರು ಇನ್ನೂ ಏಳಿಗೆಯಲ್ಲಿದ್ದರು. ಆದರೆ ವಿಶೇಷವಾದ ಸಂಗತಿಯೆಂದರೆ ಈಗ ಮುನ್ನಲೆಯಲ್ಲಿದ್ದವರು ದೇವಾಲಯಗಳ ಆಡಳಿತವರ್ಗದಲ್ಲಿ ಮಾತ್ರ ತಮ್ಮ ಸ್ಥಾನವನ್ನು ಉಳಿಸಿಕೊಂಡಿದ್ದರೇ ವಿನಃ ನಾಡಿನ ರಾಜಕೀಯ ಆಡಳಿತದಲ್ಲಿ ಅಲ್ಲ ಎನ್ನುವುದು ಮುಖ್ಯವಾಗುತ್ತದೆ. ಆದರೆ ದೇಗುಲಗಳ ಅಧಿಕಾರದಲ್ಲಿದ್ದು ಸ್ಥಳೀಯ ಸಂಸ್ಕೃತಿಯನ್ನು ರೂಪಿಸುತ್ತಿದ್ದ ಈ ತಮಿಳು ಭಾಷಿಕರು ಆಗ ಪ್ರಚಲಿತದಲ್ಲಿ ಇಲ್ಲದೇ ಇದ್ದ ಆಡಳಿತ ಕ್ರಮವನ್ನೂ ದಾಖಲಿಸಿದ್ದೂ ಕೇವಲ ಬಲ್ಲಪ್ಪ ದಣ್ಣಾಯಕನ ಬಲದಿಂದಲೇ ಹೊರತು ಅನ್ಯಥಾ ಅಲ್ಲ. ಕ್ರಿ.ಶ 1363ರ ಮಡಿವಾಳದ ಸೋಮೇಶ್ವರ ದೇವಾಲಯದ ಶಾಸನವೊಂದು [ಬೆಂ 67] "ನಿಗಿರಿಲಿ ಚೋಳಮಂಡಲದ ರಾಜೇಂದ್ರ ಚೋಳ ವಳನಾಡಿನಲ್ಲಿರುವ ವೆಪ್ಪೂರು ನಾಡು. ಈ ವೆಪ್ಪೂರು ನಾಡಿಗೆ ಸೇರಿದ ತಾಮರೈಕ್ಕೆರೈ (ಇಂದಿನ ತಾವರೆಕೆರೆ) ಯಲ್ಲಿರುವ ಸೋಮನಾಥ ದೇವರಿಗೆ" ಕೆಲವು ದಾನಗಳನ್ನು ಕೊಟ್ಟ ವಿಷಯವನ್ನು ತಿಳಿಸುತ್ತದೆ. ಈ ದೇವಾಲಯದಲ್ಲಿ ಅಂದು ಸ್ಥಾನಪತಿಯಾಗಿ ಕಾರ್ಯನಿರ್ವಹಿಸುತ್ತಿದ್ದವನು ತಮಿಳು ಭಾಷಿಕನಾದ ತಂಬಣ ಜೀಯರ್. ಈತ ಪೂರ್ತಿಯಾಗಿ ಸುವರ್ಣದಲ್ಲಿ ದಾನ ಪಡೆಯುವಷ್ಟು ಪ್ರಭಾವಶಾಲಿ ವ್ಯಕ್ತಿಯಾಗಿದ್ದುದರಿಂದ ಕನ್ನಡ ಅರಸನಾದ ಕಂಪಣ್ಣ ಒಡೆಯನ ಕೃಪಾಪೋಷಣೆ ಇದ್ದುದರಿಂದ ತನ್ನ ತಮಿಳು ಅಭಿಮಾನವನ್ನು ಮೆರೆಯರಿಯದೆ ಮೆರೆದಿದ್ದಾನೆ.

ವೀರಬುಕ್ಕಣ್ಣ ಒಡೆಯನು ದೊಡ್ಡಬಳ್ಳಾಪುರ ಪ್ರಾಂತ್ಯದಲ್ಲಿ ತನ್ನ ಆಡಳಿತವನ್ನು ಸಮರ್ಪಕವಾಗಿ ಜಾರಿಗೊಳಿಸಲು ಹಿಂದಿನಿಂದಲೂ ಇವರಿಗೆ ನಿಷ್ಠರಾಗಿದ್ದ ಹುಲುಕುಡಿ ನಾಡಪ್ರಭುಗಳನ್ನು ಬೆಳೆಸಿದನು [ದೊಡ್ಡ 39]. ಹುಲುಕುಡಿ ನಾಡಪ್ರಭುಗಳಲ್ಲಿ ಮಹಾಸಾಮಂತಾಧಿಪತಿಯಾದ ಬೊಮ್ಮೆಯ ನಾಯಕನು ಕ್ರಿ.ಶ. 1367ರಲ್ಲಿ ಹುಲುಕುಡಿ ನಾಡನ್ನು ಆಳುತ್ತಿದ್ದನು. ಇದರ ಮೂಲಕ ದೊಡ್ಡಬಳ್ಳಾಪುರ ಪ್ರಾಂತ್ಯದಲ್ಲಿ ಇವರ ಆಳ್ವಿಕೆ ಅಭಾದಿತವಾಗಿ ನಡೆಯುವಂತಾಯಿತು. ಕುಕ್ಕಲನಾಡಿನ ಮೈಲೆಯನಾಯಕನ ನಂತರ ಹೊಸಕೋಟೆ ಪ್ರಾಂತ್ಯದಲ್ಲಿ ಮಹಾಸಾಮಂತಾಧಿಪತಿಯಾದ ಲಿಂಗೆಯ ನಾಯಕನು ಆಡಳಿತದಲ್ಲಿ ಮುನ್ನೆಲೆಗೆ ಬಂದನು. ಈತನು ಎಲಹಕ್ಕ ನಾಡಿನ ಪ್ರಭುಗಳೊಡನೆ ಉತ್ತಮ ರಾಜಕೀಯ ಬಾಂಧವ್ಯತೆಯನ್ನು ಹೊಂದಿದ್ದನು. ಈ ಕಾಲದಲ್ಲಿ ಅಂದರೆ ಕ್ರಿ.ಶ. 1367ರಲ್ಲಿ ಎಲಹಕ್ಕ ನಾಡಿನ ಒಡೆತನವು ಬೈರಿದೇವನದಾಗಿತ್ತು. ಈತನೊಂದಿಗೆ ಅಧಿಕಾರದಲ್ಲಿ ಸಹಾಯಕರಾಗಿ ನಿಂತ ಕನ್ನಗೌಡ, ಶಾಲಿಯಪ್ಪ ಒಡೆಯರ ಕೈಯಲ್ಲಿತ್ತು [ಹೊಸ 117]. ಮತ್ತೆ ಮೈಲೆಯ ನಾಯಕನ ಮಗನಾದ ದೇವಯ್ಯನಾಯಕನು ಮಹಾಸಾಮಂತಾಧಿಪತಿಯಾಗಿ ಮರುನಾಮಕರಣವಾಗಿ ಆಡಳಿತವನ್ನು ಆತನ ಮನೆತನದವರೇ ಮುಂದುವರೆಸಿದರು ಎಂಬುದನ್ನು ಗಮನಿಸಬೇಕು. ಇವರು ಯಲಹಂಕನಾಡಿನ ಹಲವು ಮುಖ್ಯ ಘಟನೆಗಳಲ್ಲಿ ಜೊತೆಜೊತೆಗೆ ನಡೆದಿದ್ದನ್ನು ಇತಿಹಾಸವು ದಾಖಲಿಸಿದೆ. ಈ ದೇವಯ್ಯ ನಾಯಕನು ಇಳೈಪಾಕ್ಕು ನಾಡಿನ (ಯಲಹಂಕನಾಡಿನ ತಮಿಳೀಕರಣ) ದೇವಸಮುದ್ರವನ್ನು ಕ್ರಿ.ಶ. 1376ರಲ್ಲಿ ದಾನವಾಗಿ ನೀಡಿದ ಸಂಗತಿಯನ್ನು ಗಮನಿಸಬಹುದು [ಬೆಂ 132].

ಸಾದಲಿ ರಾಜ್ಯವನ್ನು ಆಳುತ್ತಿದ್ದ ಕ್ರಾಂತಿಕಾರ ರಾಯರ ಗಂಡ ನಾಗಣ್ಣ ಒಡೆಯನ ಮಂತ್ರಿಯಾದ ಪೆಟ್ಟಯರಸ, ರಾಜರಸರ ಆಜ್ಞೆಯ ಮೇರೆಗೆ ಪುಲ್ಲಿಯೂರು ನಾಡಿನ ಮಹಾಪ್ರಭುವಾದ ಮಲೈಮಂಡಲ ಪೆರುಮಾಳ ಎಂದು ಹೆಸರಾಗಿದ್ದ ನಂಬಿ ಇರವಿ ಸೆಟ್ಟಿಯಾರನು ಪಸಿಗೈಪಳ್ಳಿಯನ್ನು(ಇಂದಿನ ಹೊಸಕೋಟೆ ತಾಲ್ಲೂಕಿನ ಹಸಿಗಾಳ) ಆತನ ಮೊಮ್ಮಕ್ಕಳಿಗೆ ದಾನವಾಗಿ ನೀಡಿದನು [ಹೊಸ 108]. ಹಾಗೆ ದಾನವಾಗಿ ನೀಡುವಾಗಲೂ ತಾನೊಬ್ಬ ನಿಜವಾದ ಅಧಿಕಾರಿಯಂತೆ ವರ್ತಿಸಿದ್ದಾನೆ. ತನ್ನ ಮಗಳ ಮಗನಾದ ಇರವಿಯಣ್ಣನ್, ಕೇಶವ ಸೆಟ್ಟಿಯರಿಗೆ ಹಸಿಗಾಳವನ್ನು ದಾನವಾಗಿ ನೀಡುವುದರ ಜೊತೆಗೆ ಒಂದೂಕಾಲು ಹಣಕ್ಕೆ ಕಡಿಮೆಯಿಲ್ಲದಂತೆ ದಾನ ಪಡೆದವರು ತೆರಿಗೆ ಕಟ್ಟಿಕೊಂಡು ಮುನ್ನಡೆಯಬೇಕೆಂದು ಕಟ್ಟಳೆ ವಿಧಿಸಿದ್ದಾನೆ. ಕನ್ನಡ-ತೆಲಗು ದ್ವಿಭಾಷಿಕ ವಲಯದಲ್ಲಿದ್ದ ನಾಗಣ್ಣ ಒಡೆಯನು ತಮಿಳು ಮಂತ್ರಿಯನ್ನು ಹೊಂದಿದ್ದನು ಎಂದರೆ ಬಹುಶಃ ತಮಿಳು ಪ್ರದೇಶದಿಂದ ಕೆಲವು ಕಾಲದ ಮಟ್ಟಿಗಾದರೂ ಈ ಭಾಗಕ್ಕೆ ವರ್ಗಾವಣೆಯಾಗಿ ಅಧಿಕಾರಿಗಳು ಬಂದಿರಬಹುದು ಎಂದೆನಿಸುತ್ತದೆ. ಈ ಊಹೆಯು ಸರಿಯಾಗುವುದೇ ಆದರೆ ಬೆಂಗಳೂರು ಪರಿಸರದಲ್ಲಿ ಯಾವ ದೊಡ್ಡ ನಾಡಪ್ರಭುಗಳೂ ಅಸ್ತಿತ್ವದಲ್ಲಿ ಇದ್ದಿರಲಿಲ್ಲ ಎಂಬುದಕ್ಕೆ ಆಧಾರವಾಗುತ್ತದೆ. ಇಲ್ಲಿ ನಾಡಪ್ರಭುಗಳು ವಿಶೇಷವಾದ ಆಡಳಿತದಲ್ಲಿ ಇದ್ದಿದ್ದರೆ ಇಲ್ಲಿಗೆ ಹೊರಗಿನಿಂದ ಅಧಿಕಾರಿಗಳು ಬರಬೇಕಿರಲಿಲ್ಲ ಅಲ್ಲವೇ?

ಇಮ್ಮಡಿ ಬುಕ್ಕರಾಯನ ನಂತರ ಎರಡನೆಯ ಹರಿಹರನು (ಕ್ರಿ.ಶ.1377–1404) ಈ ಪ್ರಾಂತ್ಯದಲ್ಲಿಯೂ ತನ್ನ ಛಾಪನ್ನು ಒತ್ತಿದನು. ಇವನ ಕಾಲದಲ್ಲಿ ಕ್ರಿ.ಶ. 1380ರಲ್ಲಿ ನಾಗಣ್ಣ ಒಡೆಯನ ಮಗನಾದ ದೇವಪ್ಪ ಒಡೆಯನು ಮುನ್ನೆಲೆಗೆ ಬಂದನು. ಹುಲ್ಲೂರು ನಾಡಿಗೆ ಸೇರಿದ ಬಿಕ್ಕಗೊಂಡನ ಹಳ್ಳಿಯನ್ನು ಮಾದರಾಜ ಸಮುದ್ರವನ್ನಾಗಿ ಇವನ

ಕಾಲದಲ್ಲಿಯೇ ಪರಿವರ್ತಿಸಿದ್ದು [ಹೊಸ 113]. ಕ್ರಿ.ಶ. 1382ರಲ್ಲಿ ಪೀಲವಲ ಸಿಂಹರಾಯ, ನಾಗೇಯ ನಾಯಕರು ತೊರೆವಳಿ ನಾಡಿನ ಬನಹಳ್ಳಿಯ ಪೂರ್ವದಲ್ಲಿದ್ದ ಪುರುಷೋತ್ತಮ ದೇವನು ಕಟ್ಟಿಸಿದ್ದ ಪೆಮ್ಮಸಮುದ್ರವನ್ನು ದಾನವಾಗಿ ನೀಡಿದನು [ಹೊಸ 154]. ಇಮ್ಮಡಿ ಹರಿಹರರಾಯನ ಕಾಲದಲ್ಲಿ ಯಥೇಚ್ಛವಾದ ಸಾರ್ವಜನಿಕ ಕಾರ್ಯಗಳು ಈ ಭಾಗದಲ್ಲಿ ನಡೆದವು. ಇವುಗಳಿಗೆ ಅರಸನು ಪ್ರೋತ್ಸಾಹವನ್ನು ನೀಡಿದನು. ಕ್ರಿ.ಶ. 1385ರಲ್ಲಿ ತೆಪ್ಪದ ನಾಗಣ್ಣ ಒಡೆಯನು ಪುಲ್ಲಿಯೂರಿನ ವರದರಾಜ ದೇವಾಲಯಕ್ಕೆ ಹಲವು ದಾನಗಳನ್ನು ನೀಡಿದನು [ಹೊಸ 93]. ಆಗ ಪುಲ್ಲಿಯೂರು ನಾಡಿನ ಅಧಿಕಾರಿಯಾಗಿ ತುರುವರ್ ನಂಬಿರವಿಶೆಟ್ಟಿ ಆಡಳಿತದಲ್ಲಿದ್ದನು. ಸೈನಿಕ ವಿಠ್ಠಲನಾಥನು ಕ್ರಿ.ಶ 1388ರಲ್ಲಿ ಕೆರೆಯೊಂದನ್ನು ನಿರ್ಮಿಸಿ ತೂಬೊಂದನ್ನು ಇರಿಸಿದನು [ಮಾ 20]. ಸಣ್ಣೆ ನಾಡಿನ ಕಿಟ್ಟಯ್ಯನೂರಿನ ದೇವಾಲಯಕ್ಕೆ ದಾನ ನೀಡಲಾಯಿತು [ಹೊಸ 118]. ಕೋಪಯ ನಾಯಕನ ಮಗನಾದ ಮುತ್ತೆಯ ನಾಯಕನಿಂದ ದಕ್ಷಿಣಾಮೂರ್ತಿ ಚಕ್ರವರ್ತಿಗಳಿಗೆ ಕ್ರಿ.ಶ. 1404ರಲ್ಲಿ ದಾನ ನೀಡಲ್ಪಟ್ಟಿತು [ಹೊಸ 160].

ಇಲ್ಲೆಲ್ಲಾ ಗಮನಿಸಬೇಕಾದ ಸಂಗತಿಯೆಂದರೆ ಇಮ್ಮಡಿ ಹರಿಹರನ ಕಾಲದಲ್ಲಿ ಸ್ವಲ್ಪ ಪ್ರಮಾಣದಲ್ಲಿ ತಮಿಳು ಅಧಿಕಾರಿಗಳು, ತಮಿಳು ಸ್ಥಾನಿಕರು ಪ್ರಬಲರಾದರು. ತೊರೆವಳಿ ನಾಡು ಹಾಗೂ ವೆಪ್ಪೂರು ನಾಡುಗಳು ಇನ್ನೂ ತಮಿಳು ಅಧಿಕಾರಿಗಳ ಕೈಯಲ್ಲಿಯೇ ಇತ್ತು. ಉಳಿದಂತೆ ಇನ್ನುಳಿದ ನಾಡುಗಳ ಆಡಳಿತವು ಕನ್ನಡಿಗರಾದ ಅಳರಸರ ಕೈಯಲ್ಲಿತ್ತು.

ವಿಜಯನಗರದ ಪ್ರಖ್ಯಾತ ದೊರೆ ಒಂದನೇ ದೇವರಾಯನ (ಕ್ರಿ.ಶ. 1406–1422) ಕಾಲದಲ್ಲಿ ಅಂಜಡು ನಾಡಿಗೆ ಸೇರಿದ ತಿಮ್ಮನಾಯಕನು ಮಂಗಸಮುದ್ರವನ್ನು 15 ಭಾಗಗಳನ್ನಾಗಿಸಿ ದಾನ ನೀಡಿದನು [ದೇವ 32]. ದೇವರಾಯನ ಅಧಿಕಾರಿಯಾದ ಹಯಕಸನು ಕುಕ್ಕಲನಾಡಿಗೆ ಸೇರಿದ ಕನ್ನಳ್ಳಿಯ ತಿರುಮಲೆನಾಥನ ದೇವಾಲಯಕ್ಕೆ ಎರಡು ಮಗ್ಗಗಳನ್ನು ಕ್ರಿ.ಶ. 1408ರಲ್ಲಿ ದಾನವಾಗಿ ನೀಡಿದನು [ಬೆಂ 122]. ಬೆಂಗಳೂರು ಪರಿಸರದಲ್ಲಿ ನೇಕಾರರನ್ನು ನೆಲೆಗೊಳಿಸುವ ಹಾಗೂ ಅವರ ಕಲೆಗೆ ಸಾಕಷ್ಟು ನೆರವು ನೀಡುವ ಸಂಪ್ರದಾಯವು ಈ ಕಾಲದಲ್ಲಿ ವಿಶೇಷವಾಗಿ ನಡೆಯಿತು. ಇಂತಹ ಘಟನೆಗಳೇ ಕೆಂಪೇಗೌಡರು ಮುಂದೆ ಬೆಂಗಳೂರು ಪೇಟೆಯಲ್ಲಿ ನೇಕಾರರಿಗೆ ಎಂದೇ ವಿಶೇಷವಾದ ವ್ಯವಸ್ಥೆಯನ್ನು ಮಾಡಿಕೊಡಲು ಸಹಕಾರಿಯಾದ ಅಂಶವೆಂದು ಮನಗಾಣಬೇಕಾಗಿದೆ. ಕನ್ನಳ್ಳಿಯ ದೇವಾಲಯಕ್ಕೆ ಎರಡು ಮಗ್ಗಗಳನ್ನು ದಾನವಾಗಿ ನೀಡಿದರು ಎಂದಾದರೆ ಆ ಮಗ್ಗಗಳಿಂದ ಬರುತ್ತಿದ್ದ ಆದಾಯವಾದರೂ ಹಿರಿದಾಗಿರಬೇಕು. ಸಾಮಾನ್ಯವಾಗಿ ದೇವಾಲಯಗಳಿಗೆ ಕೃಷಿ ಭೂಮಿಯ ದಾನವನ್ನು ನೀಡುವುದು ವಾಡಿಕೆ. ಆದರೆ ಕುಲಕಸುಬುಗಳ ಮೂಲಕ ವ್ಯಾಪಾರಾಭಿವೃದ್ಧಿಗೆ ಸಹಕಾರಿಯಾಗುವಂತಹ ಮಗ್ಗಗಳನ್ನು ದಾನ ನೀಡುವುದರ ಮೂಲಕ ಈ ಪರಿಸರದಲ್ಲಿ ಅಳರಸರಿಂದ ಗುಡಿಕೈಗಾರಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರಕುವಂತಾಯಿತು. ಇದಕ್ಕೆ ಕಾರಣ ಸ್ಥಳೀಯ ಆಡಳಿತವಲ್ಲದೇ ಬೇರಲ್ಲ.

ಕ್ರಿ.ಶ. 1410ರಲ್ಲಿ ಯಲಹಂಕದ ಕೋಟೆಯಲ್ಲಿ ಗೋಪಾಲಕೃಷ್ಣ ದೇವಾಲಯದ ಮುಂದಿರುವ ದೀಪಮಾಲೆ ಕಂಬವನ್ನು ಬೊಮ್ಮಣ್ಣಸೆಟ್ಟಿಯ ಮಗನಾದ ಮಾಚಿರೂಪ ಸೆಟ್ಟಿಯು ಮಾಡಿಸಿಕೊಟ್ಟ ವಿಷಯವನ್ನು ನಾವು ಈ ಹಿನ್ನೆಲೆಯಲ್ಲಿಯೇ ಗಮನಿಸಬೇಕು. ಬೇರೆಡೆಯಿಂದ ಯಲಹಂಕದ ಪೇಟೆಗೆ ವ್ಯಾಪಾರದ ಕಾರಣಕ್ಕೆ ವಲಸೆ ಬಂದ ವರ್ತಕ

ಜನರು ತಾವು ನೆಲೆ ನಿಂತ ತಾಣದಲ್ಲಿ ಧಾರ್ಮಿಕ ಕಾರ್ಯಗಳಲ್ಲಿ ಕೈಜೋಡಿಸುವುದರ ಮೂಲಕವಾಗಿ ತಮ್ಮ ವ್ಯಾಪಾರವನ್ನು ವಿಸ್ತರಿಸಿಕೊಂಡದ್ದನ್ನು ನಾವು ಗಮನಿಸಬೇಕು [ಬೆಂ 16]. ಈ ಶಾಸನ ನಮಗೆ ತಿಳಿಸುವಂತೆ ಈ ಕಾಲದಲ್ಲಾಗಲೇ ಯಲಹಂಕದಲ್ಲಿ ಒಂದು ಭದ್ರವಾದ ಪೇಟೆ ಹಾಗೂ ಕೋಟೆಗಳು ಅಸ್ತಿತ್ವದಲ್ಲಿದ್ದು ಇದನ್ನು ವ್ಯವಸ್ಥಿತವಾಗಿ ನಿರ್ವಹಿಸಲಾಗುತ್ತಿತ್ತು. ಎಲ್ಲಕ್ಕಿಂತ ಮುಖ್ಯವಾಗಿ ವೀರ ದೇವರಾಯನ ಮಂತ್ರಿಯಾದ ಹಿರಣ(ಹಿರಿಯಣ್ಣ) ದಣ್ಣಾಯಕ ಒಡೆಯರು ಕ್ರಿ.ಶ. 1410ರಲ್ಲಿ ಬಹುಶಃ ಪಾಠಶಾಲೆಯೊಂದಕ್ಕೆ ಯಲಹಂಕ ನಾಡಿನ ದೇವರಾಯಸಮುದ್ರವನ್ನು ದಾನವಾಗಿ ನೀಡಿದ ಸಂಗತಿಯಿಂದ ವಿದ್ಯಾಭ್ಯಾಸಕ್ಕೆ ದೊರಕಿದ ಪ್ರೋತ್ಸಾಹವನ್ನು ಗಮನಿಸಬಹುದಾಗಿದೆ (ಈ ದೇವರಾಯ ಸಮುದ್ರವೆಂಬುದು ಇಂದಿನ ರಾಮಯ್ಯ ಆಸ್ಪತ್ರೆಗೆ ಸಮೀಪದಲ್ಲಿರುವ ದೇವಸಂದ್ರವೇ ಆಗಿದೆ). ಕನ್ನೆಲ್ಲಿಯ ತಿರುಮಲೆನಾಥನನ್ನು ಮಗ್ಗಗಳ ದಾನಗಳಿಂದ ಭರಪೂರ ಮಾಡಿದ ನೆನಪಿನ ಒತ್ತಟ್ಟಿನಲ್ಲಿಯೇ ಸಮೇತನಹಳ್ಳಿಯ ಶಾಸನವೊಂದು ಕೇಶವನಾಥ ದೇವರಿಗೆ ನಂದಾದೀಪಕ್ಕಾಗಿ ಇಂತಹುದೇ ಮಗ್ಗಗಳನ್ನು ದಾನ ನೀಡಿರುವ ವಿಷಯವನ್ನು ನಮಗೆ ತಿಳಿಸುತ್ತದೆ [ಹೊಸ 149].

ವಿಸ್ತಾರವಾದ ಸಾಮ್ರಾಜ್ಯವನ್ನು ನೋಡಿಕೊಳ್ಳಲು ದೇವರಾಯನೊಬ್ಬನಿಗೆ ಕಷ್ಟವಾಗಿತ್ತು. ಹಾಗಾಗಿ ಕ್ರಿ.ಶ. 1411ರ ಸುಮಾರಿಗೆ ದೇವರಾಯನ ಮಗನಾದ ಶ್ರೀ ವೀರ ವಿಜಯ ಬುಕ್ಕರಾಯನು ಬೆಂಗಳೂರು ಪರಿಸರದ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು. ಈತನ ಕಾಲದಲ್ಲಿ ಎರುಮರೈ ನಾಡಿನ ಸುಂಕಾಧಿಕಾರಿಗಳಾದ ಕಾರೈಕಿಳನ್, ಮಲಿಯಾರ್, ಅಳಗಿಯ ವರದರ್ ಶೊಕ್ಕಾರ್‌ಗಳು ಎರುಮರೈ ನಾಡಿನ ಸಮಯಮಂತ್ರಿಪಳ್ಳಿಯ ಮಗ್ಗಗಳ ತೆರಿಗೆಯನ್ನು ಮನ್ನಾ ಮಾಡಿ ಅದನ್ನು ಕೇಶವ ದೇವರ ನಂದಾದೀಪಕ್ಕೆ ವರ್ಗಾಯಿಸಿಲಾಯಿತು. ತಮಿಳಿನ ಆಕ್ರಮಣವನ್ನು ತಡೆಯಲು ಆಡಳಿತದಲ್ಲಿ ನಿರಂತರವಾಗಿ ಶ್ರಮಿಸುತ್ತಿದ್ದರೂ ದೇಗುಲಗಳ ಆಳ್ವಿಕೆಯ ವಿಷಯದಲ್ಲಿ ಇದನ್ನು ವಿಜಯನಗರದ ಅರಸರು ನಿಯಂತ್ರಿಸಲು ಬಹಳ ಪ್ರಯಾಸವಾಗುತ್ತಿತ್ತು. ಇಲ್ಲಿ ಹೇಳಲಾಗಿರುವ ಸುಂಕಾಧಿಕಾರಿಗಳು ಮುಳುಬಾಗಿಲು ನಾಡಿನ ಅಧಿಕಾರಿಗಳಾಗಿದ್ದರು. ಸಮಯಮಂತ್ರಿ ಪಳ್ಳಿ ಎಂಬುದು ಇಂದಿನ ಹೊಸಕೋಟೆ ತಾಲ್ಲೂಕಿನ ಸಮೇತನಹಳ್ಳಿಯ ತಮಿಳೀಕರಣವೇ ಆಗಿದೆ.

ಬೆಂಡಿಗಾನಹಳ್ಳಿಯ ಶಾಸನವೊಂದರ ಪ್ರಕಾರ [ಹೊಸ 63] ದೇವರಾಯನಿಗೆ ಕ್ರಿ.ಶ. 1412ರ ಸುಮಾರಿಗೆ ಸೋಣ್ಣೆಯ ನಾಯಕನೆಂಬ ಪ್ರಧಾನಿಯಿದ್ದು ಆತ ಬಹುತೇಕ ಹೊಸಕೋಟೆ ಪ್ರಾಂತ್ಯದ ಅಧಿಕಾರಿಯಾಗಿದ್ದನೆಂಬ ವಿಷಯ ತಿಳಿದುಬರುತ್ತದೆ.

ಒಂದನೆಯ ದೇವರಾಯನ ನಂತರ ರಾಮಚಂದ್ರರಾಯ{ಕ್ರಿ.ಶ. 1422} ವೀರವಿಜಯ ಬುಕ್ಕರಾಯರ (ಕ್ರಿ.ಶ. 1422–24) ಆಳ್ವಿಕೆಯಿತ್ತಾದರೂ ಅವರು ತಮ್ಮನ್ನು ತಾವು ಉಳಿಸಿಕೊಳ್ಳಲು ಹರಸಾಹಸ ಪಡುತ್ತಿದ್ದರಾದ ಕಾರಣ ತಮ್ಮ ಛಾಪನ್ನು ಒತ್ತಲು ವಿಫಲರಾದರೆಂದೇ ಭಾವಿಸಬೇಕು. ತದನಂತರ ವಿಜಯನಗರದ ಅತ್ಯಂತ ಮಹತ್ವಾಕಾಂಕ್ಷೀ ರಾಜನಾದ ಎರಡನೆಯ ದೇವರಾಯನ (ಕ್ರಿ.ಶ. 1424–1446) ಕಾಲದಲ್ಲಿ ಬೆಂಗಳೂರು ಪರಿಸರವು ಈ ಹಿಂದೆಂದಿಗಿಂತಲೂ ಹೆಚ್ಚು ಪ್ರವರ್ಧಮಾನಕ್ಕೆ ಬಂದಿತು.

ಈತನ ಆಡಳಿತದಲ್ಲಿ ಪೆನವಲಿ ನಾಯಕನ ಮಗನಾದ ಕಾಡಣ್ಣ ನಾಯಕನು ತಿನ್ನಲು (ಇಂದಿನ ತಿಂಡ್ಲು) ತಿರುಮಲಗೌಡನ ಮಗನಾದ ಬಾಚಯ ಗೌಡನಿಗೆ ಕ್ರಿ.ಶ.

1430ರಲ್ಲಿ ಭೂದಾನವನ್ನು ನೀಡಿದನು [ದೇವ 2]. ದೊಡ್ಡಬೊಮ್ಮಸಂದ್ರದ ಶಾಸನದ ಪ್ರಕಾರ [ಬೆಂ 26] ಕುಕ್ಕಲನಾಡ ಪ್ರಭು ಬುಕ್ಕರಾಯನು ಪ್ರೌಢರಾಯನ ಕಾಲದಲ್ಲಿ ಕುಕ್ಕಲ ನಾಡಿಗೆ ಸೇರಿದ ಬೊಮ್ಮಹಳ್ಳಿಯನ್ನು ಸರ್ವಮಾನ್ಯವಾಗಿ ದಾನ ನೀಡಿದನು. ಅಗ್ರಹಾರಕ್ಕೆ ದಾನ ಬಿಟ್ಟಿರುವುದರ ಹಿನ್ನೆಲೆಯಲ್ಲಿ ಇಲ್ಲಿ ತೆರಿಗೆ ವ್ಯವಸ್ಥೆಯು ಚೆನ್ನಾಗಿಯೇ ಇತ್ತು ಎಂದು ತಿಳಿಯಬಹುದು. ಹಾಗೂ ಕುಕ್ಕಲನಾಡಿನ ಪ್ರಭುವಿನ ಹೆಸರೂ ಬುಕ್ಕನಾಯಕ ಎಂದಿರುವುದು ಚಕ್ರವರ್ತಿಗಳ ಹೆಸರುಗಳು ಹೇಗೆ ಪ್ರಭಾವಶಾಲಿಯಾಗಿತ್ತು ಎಂದು ತಿಳಿಯಬಹುದು. ಬುಕ್ಕರಾಯನ ಪ್ರಭಾವವು ಬೆಂಗಳೂರು ಪರಿಸರದಲ್ಲಿ ವಿಶೇಷವಾಗಿ ಹಬ್ಬಿದ್ದನ್ನು ಈ ನಾಡಪ್ರಭುವಿನ ಹೆಸರಿನ ಪ್ರಭಾವದ ದೆಸೆಯ ಆಧಾರದಿಂದ ಕಂಡುಕೊಳ್ಳಬಹುದು.

ದೇವರಾಯನು ತನ್ನ ಆಪ್ತರನ್ನೆಲ್ಲಾ ನಾಡಿನ ಮೂಲೆಮೂಲೆಯಲ್ಲಿ ಆಳ್ವಿಕೆ ನಡೆಸುವಂತೆ ಅನೇಕ ಪ್ರದೇಶಗಳನ್ನು ಬಿಟ್ಟುಕೊಟ್ಟು ಅವರು ಸಾಮ್ರಾಜ್ಯಕ್ಕೆ ನಿಷ್ಠರಾಗಿರುವಂತೆ ನೋಡಿಕೊಂಡನು. ಕ್ರಿ.ಶ. 1431ರಲ್ಲಿ ದೇವರಾಯನ ಮಹಾಪ್ರಧಾನನಾಗಿದ್ದ ಮಂಗಪ್ಪ ದಣ್ಣಾಯಕನ ಕುಮಾರನಾದ ಪ್ರತಾಪರಾಯನಿಗೆ ಶಿವನಸಮುದ್ರಸೀಮೆಯನ್ನು ಬಿಟ್ಟುಕೊಟ್ಟನು. ಆ ಸಂದರ್ಭದಲ್ಲಿ ಹಾಕಿಸಲಾದ ಶಾಸನವೊಂದು ಕೋಡಿಗೇಹಳ್ಳಿಯಲ್ಲಿದ್ದು [ಬೆಂ 127] ಆ ಶಾಸನವು “ದೇವರಾಯ ಮಹಾರಾಯರ ಸಮ್ಮುಖದ ನಿರೂಪದಿಂದ” ನೀಡಲಾದ ದಾನವನ್ನು ತಿಳಿಸುತ್ತದೆ. ಶಿವನಸಮುದ್ರದ ಒಳಗಣ ಊರ ಮುಂದಣ ಸೋಮೇದೇವರ ನೈವೇದ್ಯ, ಅಂಗರಂಗ ಭೋಗಕ್ಕೆ, ಪ್ರತಾಪರಾಯನ ನಾಯಕತನಕ್ಕೆ ಕೊಟ್ಟಂತಹ ಶಿವನಸಮುದ್ರದ ಕೆಳಗೆ ಸಲ್ಲುವ ಯಲಹಂಕ ನಾಡಲ್ಲಿ ತರಗೆಯ ಅಷ್ಟಾ ಬಾಗೆಯ ಒಳಗಣ ದೇವಸಮುದ್ರ ಗ್ರಾಮದ ಕಾಲುವಳ್ಳಿಯಾದ ವಿರೂಪಾಕ್ಷಪುರ ಗ್ರಾಮವನ್ನು ಗುತ್ತಿಗೆಗೆ ನೀಡಿರುವುದು ವಿಶೇಷವಾಗಿದೆ. ಹೀಗೆ ಗುತ್ತಿಗೆ ನೀಡುವಾಗ ಈ ಹಿಂದೆ ಇದ್ದ ಗುತ್ತಿಗೆ ಪ್ರಮಾಣವು ಹದಿನಾರೂ ವರೆ (16 1/2) ಗದ್ಯಾಣವಾಗಿದ್ದು ಅಂದಿನ ಆದಾಯದಂತೆ ಹೆಚ್ಚುವರಿ 3 1/2 ಗದ್ಯಾಣವನ್ನು ಸೇರಿಸಿ ಹೊಸದಾಗಿ 20 ಗದ್ಯಾಣಕ್ಕೆ ಗುತ್ತಿಗೆ ನೀಡಿರುವುದೇ ಈತ ತನ್ನ ಕಾರ್ಯವನ್ನು ಹೇಗೆ ಲಾಭಕರವಾಗಿ ಆರಂಭಿಸುವುದರ ಮೂಲಕ ರಾಜ್ಯಾದಾಯವನ್ನೂ ಹೆಚ್ಚು ಮಾಡಲು ಹೇಗೆ ಕಾರ್ಯಪ್ರವೃತ್ತನಾದನು ಎಂದು ತಿಳಿಸುತ್ತದೆ.

ಕ್ರಿ.ಶ. 1433ರಲ್ಲಿ ದೇವರಾಯನ ಅಧೀನತೆಯಲ್ಲಿ ತೊರೆವಳನಾಡಿನ ಆಡಳಿತವು ಮಹಾಪ್ರಭು ಮಾಚಿದೇವನದ್ದಾಗಿತ್ತು [ಹೊಸ 155]. ಸೊಂಡೆಯಕೊಪ್ಪದ (ಇಂದಿನ ನೆಲಮಂಗಲ ಬಳಿಯಿರುವ ಸೊಂಡೆಕೊಪ್ಪ) ಪ್ರದೇಶವು ಸೊಂಡೆಯ ಕೊಪ್ಪ ಎಂಬ ವೇಂಠೆಯ ಪ್ರಧಾನ ಆಡಳಿತಕ್ಕೆ ಒಳಪಟ್ಟಿದ್ದು ಮಲ್ಲರಸನು ಹೆಜ್ಜುಂಕದ ಅಧಿಕಾರಿಯಾಗಿದ್ದನು. ಈತನನ್ನು ನಿಯುಕ್ತಗೊಳಿಸುವುದರ ಹಿಂದೆ ಪಟ್ಟಣದ ರಾಯಣ್ಣನ ಕೈವಾಡವೂ ಇತ್ತೆಂದು ಈ ಶಾಸನದಿಂದ ಊಹಿಸಬಹುದಾಗಿದೆ [ಬೆಂ 8]. ಕ್ರಿ.ಶ. 1440ಕ್ಕೆ ಸೇರಿದ ಈ ಶಾಸನವು ಅತ್ಯಂತ ಪ್ರಮುಖವಾದ ವಿಷಯವೊಂದನ್ನು ನಮ್ಮ ಗಮನಕ್ಕೆ ತರುತ್ತದೆ. ಈ ಹಿಂದೆ ಅಥವಾ ಇಲ್ಲಿಯವರೆಗೆ ಅಂದರೆ ಕ್ರಿ.ಶ. 1440ರವರೆಗೆ ಸೊಂಡೆಯಕೊಪ್ಪದ ವೇಂಠೆಯಕ್ಕೆ ಯಾರಾದರೂ ಸುಂಕದ ಅಧಿಕಾರಿಗಳು ಬರಲೀ ಅವರೆಲ್ಲರೂ ದೊಮ್ಮಲೂರಿನ ಚೊಕ್ಕನಾಥ ದೇವರಿಗೆ ಸೊಂಡೆಯಕೊಪ್ಪ ವೇಂಠೆಯಕ್ಕೆ ಸೇರಿದ ಗ್ರಾಮಗಳಿಗೆ ಬಂದಂತಹ ಹೆಜ್ಜುಂಕದ ವರ್ತನೆಯನ್ನು ಉಡುಗೊರೆಯಾಗಿ ನೀಡುತ್ತಿದ್ದರು. ಹಾಗಾಗಿ ಮಲ್ಲರಸನು ಇಲ್ಲಿ ಅಧಿಕಾರವನ್ನು ವಹಿಸಿಕೊಂಡ ತಕ್ಷಣ ಈ ಪದ್ಧತಿಯನ್ನು ಮುಂದುವರೆಸುವಂತೆ ದಾನವನ್ನು ನೀಡಿದನು. ಇದು ಅಧಿಕಾರಿಗಳಾಗಿ ಬರುವವರು ಇಂದಿನ ಲೆಕ್ಕಾಚಾರದಲ್ಲಿ ಮತ

ಮಾನ್ಯಗಳಿಗೆ ನಿಷ್ಠರಾಗಿದ್ದು ಅಲ್ಲಿಂದಲೇ ತಮ್ಮ ಪ್ರಭಾವವನ್ನು ಉಳಿಸಿಕೊಂಡಂತಹ ಮಾದರಿಯಲ್ಲಿ ಇರುತ್ತದೆ ಎಂಬುದನ್ನು ಊಹಿಸಬಹುದಾಗಿದೆ.

ವಿರೂಪಾಕ್ಷರಾಯನನ್ನು ಉಲ್ಲೇಖಿಸುವ ಶಾಸನವೊಂದು ದೇವನಹಳ್ಳಿ ತಾಲ್ಲೂಕಿನ ಧರ್ಮಪುರ ಗ್ರಾಮದಲ್ಲಿದೆ. ಆದರೆ ಇದರಲ್ಲಿ ಸ್ಪಷ್ಟವಾಗಿ ಕಾಲದ ಉಲ್ಲೇಖವಿದ್ದು ಅದು "1369ನೆಯ ಪ್ರಭವ ಸಂವತ್ಸರದ ಕಾರ್ತೀಕ ಶುದ್ಧ 15" ಎನ್ನುತ್ತದೆ. ಆದರೆ ಇಮ್ಮಡಿ ವಿರೂಪಾಕ್ಷರಾಯನ ಕಾಲ ಕ್ರಿ.ಶ. 1465–1485 ಆಗುತ್ತದೆ. ಈತ ಎರಡನೆಯ ದೇವರಾಯನ ತಮ್ಮನಾದ ಪ್ರತಾಪರಾಯನ ಮಗನಾಗಿದ್ದನು. ಅಂದರೆ ಶಾಸನ ಹೇಳುವ ಕಾಲ ಕ್ರಿ.ಶ. 1447 ಆಗುತ್ತದೆ. ಬಹುಶಃ ಶಾಸನೋಕ್ತ ವಿರೂಪಾಕ್ಷನು ಮೊದಲನೆಯ ವಿರೂಪಾಕ್ಷನೇ ಎಂದು ಹುಡುಕಿದರೆ ಆತನ ಕಾಲವು ಕ್ರಿ.ಶ. 1404–05 ಆಗಿರುವುದರಿಂದ ಆತನಲ್ಲ ಎಂದೆನಿಸುತ್ತದೆ. ಹಾಗಾದರೆ ವಾಸ್ತವ ಸಂಗತಿ ಏನು ಎಂಬ ಪ್ರಶ್ನೆ ಮೂಡುತ್ತದೆ.

ಈ ಕ್ರಿ.ಶ. 1447ರ ಶಾಸನದಲ್ಲಿ ಉಕ್ತನಾಗಿರುವ ಅರಸ ನಿಸ್ಸಂಶಯವಾಗಿ ಇಮ್ಮಡಿ ವಿರೂಪಾಕ್ಷನೇ ಆಗಿರುತ್ತಾನೆ. ಆದರೆ ಆತ ಚಕ್ರವರ್ತಿಯಾಗುವ ಮುನ್ನ ಬೆಂಗಳೂರು ಪರಿಸರವಾದ ಚೆನ್ನರಾಯಪಟ್ಟಣ ಪರಿಸರದಲ್ಲಿ ಆಡಳಿತದಲ್ಲಿ ನಿರತನಾಗಿದ್ದನು. ಕ್ರಿ.ಶ. 1146ರ ಸುಮಾರಿಗೆ ಎರಡನೆಯ ದೇವರಾಯನ ಆಳ್ವಿಕೆ ಮುಕ್ತಾಯವಾದ ತಕ್ಷಣ ಅವನ ಮಗನಾದ ಮಲ್ಲಿಕಾರ್ಜುನನು ಪಟ್ಟಕ್ಕೆ ಬಂದು ಕ್ರಿ.ಶ. 1446–1465ರವರೆಗೆ ಆಳಿದನು. ಇವನ ನಂತರ ಇವನ ಮಗನಾದ ರಾಜಶೇಖರನೂ ಬಹುಶಃ ಆಡಳಿತಕ್ಕೆ ಬರದೇ ಇದ್ದುದರಿಂದ ಕ್ರಿ.ಶ. 1465ರಲ್ಲಿ ವಿರೂಪಾಕ್ಷರಾಯನೇ ವಿಜಯನಗರದ ಚಕ್ರವರ್ತಿಯಾಗಿ ಸುಮಾರು ಕ್ರಿ. ಶ. 1485ರವರೆಗೆ ಆಡಳಿತ ನಡೆಸಿದನು. ಈಗಾಗಲೇ ತಿಳಿಸಿದ ಹಾಗೆ ಬಹಳ ಮುಖ್ಯವಾದ ಸಂಗತಿಯೆಂದರೆ ಆತ ಚಕ್ರವರ್ತಿಯಾಗುವ ಮೊದಲು ಇಂದಿನ ದೇವನಹಳ್ಳಿ ತಾಲ್ಲೂಕಿನ ಚೆನ್ನರಾಯಪಟ್ಟಣ ಹೋಬಳಿಯ ಆಸುಪಾಸಿನ ಪ್ರದೇಶದ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು ಎಂದು ಊಹಿಸಬಹುದಾಗಿದೆ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಈತನು ನಲ್ಲೂರು ನಾಡಿನ ಅಧಿಪತಿಯಾಗಿ ಕಾರ್ಯ ನಿರ್ವಹಿಸಿದನು.

ಇಮ್ಮಡಿ ದೇವರಾಯ ಮಹಾರಾಯನ ನಂತರ ಆತನ ಮಗನಾದ ಮಲ್ಲಿಕಾರ್ಜುನರಾಯ ಪಟ್ಟಕ್ಕೆ ಬಂದು ಕ್ರಿ.ಶ 1446–1465ರವರೆಗೆ ಆಡಳಿತವನ್ನು ನಡೆಸಿದನು. ಈ ಮಲ್ಲಿಕಾರ್ಜುನನ ಮಗನಂತಿದ್ದ ಜುಂಜಣರಾಯನು ಕ್ರಿ.ಶ. 1464ರಲ್ಲಿ ನೆಲಮಂಗಲ ಸೀಮೆಯ ಆಡಳಿತದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿದ್ದನು [ದೊಡ್ಡ 51] ಹಾಗೂ ಕ್ರಿ.ಶ. 1467ರಲ್ಲಿ ಮಲ್ಲಿಕಾರ್ಜುನನ ಅನುಪಸ್ಥಿತಿಯಲ್ಲಿ ಆತನನ್ನು ನೆನಪಿಸಿಕೊಂಡು ಕಜಗಿಯ ಅಮರನಾಯಕರು ಜಾಲದ ಭೀಮಶೆಟ್ಟಿಯವರಿಗೆ ಕೊಡುಗೆಯನ್ನು ನೀಡಿದ್ದಾನೆ [ದೇವ 56]. ಹಾಗಾಗಿ ಕಜಗಿಯ ಅಮರನಾಯಕರು ಕೂಡ ಪ್ರಮುಖರಾಗಿದ್ದರು ಅಥವಾ ಆಡಳಿತದಲ್ಲಿದ್ದರು. ಕ್ರಿ. ಶ. 1475ರ ಸುಮಾರಿಗೆ ಶಂಭುವನ ಹಳ್ಳಿಯ ತಳ್ಳಿಕಾರ ತಿಮ್ಮನಾಯಕರ ಮಕ್ಕಳು ತಿರುಮಲ ನಾಯಕರು ಈ ಪ್ರದೇಶದಲ್ಲಿ ಜನಪ್ರಿಯರಾಗಿದ್ದರು [ಮಾ 44].

ಸಂಗಮ ವಂಶದ ಆಡಳಿತದ ನಂತರ ವಿಜಯನಗರವು ಸಾಳುವ ವಂಶಕ್ಕೆ ತಿರುಗಿದಾಗ ಬೆಂಗಳೂರು ಪರಿಸರದ ರಾಜಕೀಯದ ಮೇಲೆ ವಿಶೇಷವಾದ ಪರಿಣಾಮವನ್ನು ಬೀರಿತು. ಅಷ್ಟು ಹೊತ್ತಿಗಾಗಲೇ ಬೆಂಗಳೂರು ಅಸ್ತಿತ್ವಕ್ಕೆ ಬಂದಿತ್ತು. ಅತ್ಯಂತ ಎತ್ತರದಲ್ಲಿ ಒಳ್ಳೆಯ ಅಚ್ಚುಕಟ್ಟಿನ ಭಾಗದಲ್ಲಿ ಬೆಂಗಳೂರು ರೂಪುಗೊಂಡಿತ್ತಾದ್ದರಿಂದ ಈ ಪ್ರದೇಶದ ಒಡೆತನವು

ಒಂದು ಪ್ರತಿಷ್ಠೆಯ ಸಂಗತಿಯಾಗಿತ್ತು. ಆದರೆ ಸಾಳುವ ದೊರೆಗಳು ಸಮರ್ಥ ಪ್ರತಿನಿಧೀಕರಣವನ್ನು ಸ್ಥಾಪಿಸಲಾಗದೇ ತಮ್ಮನ್ನು ತಾವು ಉಳಿಸಿಕೊಳ್ಳಲು ಹೋರಾಡಬೇಕಾಯಿತು. ಸಾಳುವ ನರಸಿಂಹರಾಯನ (ಕ್ರಿ.ಶ. 1485–91) ನಂತರ ದೊರೆಗಳಾಗಿ ತಿಮ್ಮ ಭೂಪಾಲ (ಕ್ರಿ.ಶ. 1491) ಎರಡನೇಯ ನರಸಿಂಹರಾಯನು (ಕ್ರಿ.ಶ. 1491–1505) ಹೆಸರುಗಳಿದ್ದರೂ ತುಳುವ ವಂಶದ ನರಸನಾಯಕ (ಕ್ರಿ.ಶ. 1491–1503), ವೀರನರಸಿಂಹರಾಯ (ಕ್ರಿ.ಶ. 1503–1509) ನಂತರ ಕೃಷ್ಣದೇವರಾಯನ ಆಳ್ವಿಕೆಯು (ಕ್ರಿ.ಶ. 1509–1529) ಅಭಾದಿತವಾಗಿ ನಡೆಯಿತು.

ದೊರೆ ಶ್ರೀ ನರಸಿಂಗರಾಯ ಮಹಾರಾಯರಿಗೆ ಪುಣ್ಯವಾಗಲಿ ಎಂದು ಕ್ರಿ.ಶ. 1489ರಲ್ಲಿ ಕಂಬಾಳ ಸಿದ್ದೇರ ಒಡೆಯರಿಗೆ ತಾಳೆಕೆರೆ ಗ್ರಾಮವನ್ನು ಕಾಳಿಸಾಲೆಯರು ದಾನ ನೀಡಿದರು [ನೆಲ 47]. ದೊಡ್ಡಬಳ್ಳಾಪುರ ಪ್ರಾಂತ್ಯದಲ್ಲಿ ಕ್ರಿ.ಶ. 1493ರಲ್ಲಿ ಕಠಾರಿಸಾಳುವ, ಸಾಳುವ ಇಮ್ಮಡಿರಾಯ ಮಹಾರಾಯರ ಕೊಮಾರನಾದ ಸಾಳುವ ದೇವಪ್ಪ ನಾಯಕರು ತಿಪ್ಪೂರ ಸೀಮೆಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಹುಲುಕುಡಿ ನಾಡಿನ ಆಡಳಿತವು ಹುಲುಕುಡಿ ನಾಡಪ್ರಭು ಬಯಣ್ಣಗೌಡರ ಮಗನಾದ ಬಯ್ಯಪ್ಪಗೌಡನದಾಗಿತ್ತು. ಈ ತಿಪ್ಪೂರು ಸ್ಥಳಕ್ಕೆ ಸಲ್ಲುವ ಹೆಜಜೀಯ ಸೀಮೆ (ಹೆಜ್ಜಾಜಿ ಸೀಮೆ) ಯಲ್ಲಿರುವ ವರದೋಹಳ್ಳಿ ಹಾಗೂ ಅರಸೀಮೆಯಲ್ಲಿರುವ ಬೈರಾಪುರ ಎಂಬ ಗ್ರಾಮಗಳು ಇವರಲ್ಲಿ ಉಲ್ಲೇಖಗೊಂಡಿದ್ದು ಇಲ್ಲೆಲ್ಲಾ ದೇವಪ್ಪ ನಾಯಕನ ಆಡಳಿತವಿದ್ದುದು ಸ್ಪಷ್ಟವಾಗಿದೆ.

ಕ್ರಿ.ಶ 1495ರಲ್ಲಿ ಇಮ್ಮಡಿ ನರಸಿಂಗರಾಯರು ಪೃಥ್ವೀರಾಜ್ಯವನ್ನು ಮಾಡುತ್ತಿರಲು ಮಹಾಮಂಡಲೇಶ್ವರ ಶ್ಯಾಮಯ್ಯದೇವ ಮಹಾಅರಸುಗಳ ಕುಮಾರ ಅನಂತಯ್ಯದೇವ ಮಹಾ ಅರಸುವಿನ ಆಡಳಿತ ಇಂದಿನ ಕೆಂಗೇರಿಯ ಸುತ್ತಮುತ್ತಲ ಪ್ರದೇಶದಲ್ಲಿತ್ತು. ಇದರೊಂದಿಗೆ ಕುಕ್ಕಲನಾಡಿನ ಆಡಳಿತವೂ ಇವನ ಕೈಯಲ್ಲಿಯೇ ಇತ್ತು. "ನಮ್ಮ ನಾಯಕತನಕ್ಕೆ ಸಲ್ಲುವ ಕುಕ್ಕಲನಾಡಿನ ಅರ್ಧಬಾಗೆಯ ಕನ್ನೆಲ್ಲಿಯ ಸ್ಥಳದ ಗಂಗದಿಹಳ್ಳಿ ಎಂಬ ಹಳ್ಳಿಯನ್ನು ತಿಮ್ಮಣ್ಣರಾಜಪುರ ಎಂದು ಕರೆದು ಇಮ್ಮಡಿ ನರಸಿಂಗರಾಯರಿಗೆ ಪುಣ್ಯವಾಗಲಿಯೆಂದು ಧಾರೈಸಿ ದಾನ ನೀಡಲಾಗಿದೆ." ಈ ತಿಮ್ಮಣ್ಣ ರಾಜನು ಇಮ್ಮಡಿ ನರಸಿಂಹರಾಯರ ಅಣ್ಣನೆಂಬ ಸಂಗತಿಯನ್ನು ಗಮನಿಸಬೇಕು [ಬೆಂ 123].

ಇದೇ ಸಂದರ್ಭದಲ್ಲಿ ಹೊಸಕೋಟೆ ಪ್ರಾಂತ್ಯದಲ್ಲಿ ಮಹಾಪ್ರಧಾನನಾದ ಗಾಡೆ ಅಣ್ಣಾಯಕನು ಆಡಳಿತವನ್ನು ನೋಡಿಕೊಳ್ಳುತ್ತಿದ್ದನು. ಈತನ ಕೈಕೆಳಗೆ ಜಗಪ ಹಾಗೂ ತಿಮ್ಮಯ್ಯರೆಂಬ ಅಧಿಕಾರಿಗಳಿದ್ದರು [ಹೊಸ 23]. ಮಾಗಡಿ ಪರಿಸರದಲ್ಲಿ [ಮಾ 31] ಇದೇ ಕಾಲದಲ್ಲಿ ಇಮ್ಮಡಿ ನರಸಿಂಗರಾಯರಿಗೆ ಪುಣ್ಯವಾಗಲಿ ಎಂದು ಮಾನುಗಲ್ಲಿನ ಶಂಕರದೇವನಿಗೆ ದಾನ ನೀಡಲಾಗಿದೆ. ದೇವನಹಳ್ಳಿಯ ಬೂದಿಗೆರೆ ಹೋಬಳಿಯ ಸುಂದರಹಳ್ಳಿಯ ಕ್ರಿ.ಶ. 1495ರ ಶಾಸನವೂ ಸಹ ಇವರಿಗೆ ಪುಣ್ಯವಾಗಲಿ ಎಂದು ದಾನ ನೀಡಿದ್ದನ್ನು ತಿಳಿಸುತ್ತದೆ [ದೇವ 66]. ಅಂದರೆ ಸಾಳುವ ವಂಶದ ನರಸಿಂಹನ ಕಾಲದಲ್ಲಿ ಅವನು ಆಡಳಿತವನ್ನು ನಡೆಸಲು ತುಂಬಾ ಕಷ್ಟಪಡುತ್ತಿದ್ದನು. ಅವನ ಒಳಿತಿಗಾಗಿ ನಾಡಿನ ಹಲವು ಮೂಲೆಗಳಲ್ಲಿ ಹರಕೆಗಳು ಸಂದಾಯವಾಗುತ್ತಿದ್ದವು. ಹಲವು ದೇವಾಲಯಗಳಲ್ಲಿ ಅವನ ಒಳಿತಿಗಾಗಿ ವಿಶೇಷವಾದ ಪೂಜೆಗಳು ಹಾಗೂ ದಾನಗಳು ಸಂದಾಯವಾಗುತ್ತಿರುವಾಗ ಕೆಂಪೇಗೌಡರ ಪೂರ್ವಿಕರು ಈ ರೀತಿಯ ಆಚರಣೆಗಳಲ್ಲಿ ತೊಡಗಿದ್ದುದು ಶಾಸನಗಳಲ್ಲಿ ವರದಿಯಾಗಿಲ್ಲ.

ಸಾಳುವ ವಂಶದ ನಂತರ ತುಳುವ ವಂಶದ ಅರಸರು ವಿಜಯನಗರದ ಚುಕ್ಕಾಣಿಯನ್ನು ಹಿಡಿದರು. ಸಾಳುವ ನರಸಿಂಹ ರಾಯನ ನಂತರ ತುಳುವ ನರಸನಾಯಕನು ವಿಜಯನಗರವನ್ನು ಆಕ್ರಮಿಸಿಕೊಂಡನು. ಈತನ ಇಬ್ಬರು ಮಕ್ಕಳಾದ ವೀರನರಸಿಂಹ ಹಾಗೂ ಕೃಷ್ಣದೇವರಾಯರು ವಿಜಯನಗರದ ಸರ್ವಾಂಗೀಣ ಅಭಿವೃದ್ಧಿಗೆ ಕಾರಣಕರ್ತರಾದರೆ ಇನ್ನುಳಿದ ಅಚ್ಯುತರಾಯ ಹಾಗೂ ರಂಗರಾಯನ ಕಾಲದಲ್ಲಿ ಸಾಮ್ರಾಜ್ಯದ ಪದಚ್ಯುತಿಯು ಆರಂಭವಾದಂತೆ ತೋರುತ್ತದೆ. ವೀರನರಸಿಂಹನನ್ನು ಮೊದಲಿಂದಲೇ ಪಕ್ಕಕ್ಕೆ ತಳ್ಳುತ್ತಾ ಕೃಷ್ಣದೇವರಾಯನು ಮುನ್ನಲೆಯಲ್ಲಿಯೇ ಇದ್ದದ್ದು ಹಾಗೂ ಸಾಮ್ರಾಜ್ಯದ ಸರ್ವೋನ್ನತ ಅರಸನಾಗಿ ರೂಪುಗೊಂಡಿದ್ದು ವಿಶೇಷವಾದದ್ದು. ವೀರನರಸಿಂಹ (ಕ್ರಿ.ಶ. 1503–1509) ಹಾಗೂ ಕೃಷ್ಣದೇವರಾಯರು (ಕ್ರಿ.ಶ. 1509–1529) ಬೆಂಗಳೂರು ಪರಿಸರವನ್ನು ತಮ್ಮ ಆಡಳಿತದ ಪರಿಣಾಮವಾಗಿ ಅತ್ಯುನ್ನತ ಸ್ಥಾನಕ್ಕೆ ಕೊಂಡೊಯ್ದರು. ಇವರ ನಂತರ ಅಚ್ಯುತರಾಯ (ಕ್ರಿ. ಶ. 1529–1542), ಒಂದನೆಯ ವೆಂಕಟಪತಿರಾಯ (ಕ್ರಿ.ಶ. 1542) ಹಾಗೂ ವೀರಸದಾಶಿವರಾಯರ (ಕ್ರಿ.ಶ. 1542–1570) ಕಾಲದಲ್ಲಿ ಬೆಂಗಳೂರು ನಾಡಪ್ರಭು ಅಥವಾ ಯಲಹಂಕ ನಾಡಪ್ರಭು ಕೆಂಪೇಗೌಡರು ಪ್ರವರ್ಧಮಾನರಾಗಿ ನಾಡಿನ ಅಸ್ಮಿತೆಯ ದ್ಯೋತಕವಾಗಿ ತಮ್ಮ ಆಡಳಿತವನ್ನು ನಡೆಸಿದರು.

ಕೃಷ್ಣದೇವರಾಯನ ಕಾಲದಲ್ಲಿ ಈ ಹಿಂದಿನ ಎಲ್ಲಾ ವಿಜಯನಗರದ ಅರಸರ ಕಾಲಕ್ಕಿಂತ ಹೆಚ್ಚು ಯುದ್ಧಗಳು ನಡೆದದ್ದು ಸಾಮ್ರಾಜ್ಯ ವಿಸ್ತರಣೆ ಅಭೂತಪೂರ್ವವಾಗಿ ನಡೆದದ್ದು ವಿದಿತವಾಗಿಯೆ ಇದೆ. ಹಾಗಾಗಿ ನಾಡಿನ ಮೇಲೆ ನಿಷ್ಠೆಯಿದ್ದ ಎಲ್ಲರನ್ನೂ ರಾಯನು ಆಡಳಿತದ ರುಚಿ ತೋರಿಸಿ ಸೆಳೆದುಕೊಂಡನು. ಹಲವು ನಿಷ್ಠಾವಂತ ಸೇವಕರಿಗೆ ಅಮರನಾಯಕತನ ಪದವಿಯನ್ನು ನೀಡಿ ಅವರನ್ನು ಆಡಳಿತದ ಮುನ್ನೆಲೆಗೆ ತರಲು ಪ್ರಯತ್ನಿಸಿದನು.

– 4 –

ಇಷ್ಟು ದೀರ್ಘವಾಗಿ ಬೆಂಗಳೂರು ಪರಿಸರದ ರಾಜಕೀಯ ಚಿತ್ರಣವು ನಮ್ಮ ಮುಂದಿರುವುದರಿಂದ ನಾವು ಈಗಾಗಲೇ ತಿಳಿದಿದ್ದ ಸಂಗತಿಗಳಿಗಿಂತ ಈಗ ನಮ್ಮ ಮುಂದಿರುವ ದಾಖಲೆಗಳ ಮೂಲಕ ತಿಳಿಯಬಹುದಾದ ಬಹುಮುಖ್ಯ ಸಂಗತಿಯೆಂದರೆ ಇಡೀ ಬೆಂಗಳೂರು ಪರಿಸರದಲ್ಲಿ ಯಾವುದೇ ಒಬ್ಬ ಹಾಗೂ ಒಂದು ಕುಟುಂಬದ ನಿರಂಕುಶ ಪ್ರಭುತ್ವವು ಇರಲಿಲ್ಲ. ವಿಜಯನಗರದ ಆಳರಸರ ಅಧೀನತೆಯಲ್ಲಿ ಹಲವು ಅಧಿಕಾರಿಗಳು ಇಲ್ಲಿನ ಸ್ಥಳೀಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಇಂತವರಲ್ಲಿ ಅತ್ಯುಚ್ಚ ಪ್ರಮಾಣದ ಅಧಿಕಾರವಲಯವೆಂದರೆ ಮಹಾಸಾಮಂತಾಧಿಪತಿ ಹಾಗೂ ಅತೀ ಕೆಳಗಣ ಪ್ರಮಾಣದ ಅಧಿಕಾರದ ವ್ಯಾಪ್ತಿ ಗೌಡಪ್ರಜೆಗಳದ್ದಾಗಿದೆ.

ಬೆಂಗಳೂರು ಪರಿಸರದ ರಾಜಕೀಯ ಇತಿಹಾಸದಲ್ಲಿ ಕುಕ್ಕಲನಾಡು ಹಾಗೂ ಕುಕ್ಕಲನಾಡಿನ ಪ್ರಭುಗಳು ಮುನ್ನಲೆಯಲ್ಲಿದ್ದರು. ಕುಕ್ಕಲನಾಡನ್ನೂ ಒಳಗೊಂಡು ಅದರ ಸುತ್ತಮುತ್ತಲಿನ ಪ್ರಾಂತ್ಯವನ್ನು ಈ ಅರಸರ ಪ್ರಭಾವಶಾಲಿಯು ಪ್ರಭಾವಳಿಯೇ ನೋಡಿಕೊಳ್ಳುತ್ತಿತ್ತು. ಹೀಗಿರುವಲ್ಲಿ ಯಲಹಂಕ ನಾಡಿಗೆ ವಿಶೇಷವಾದ ಪ್ರಾಶಸ್ತ್ಯವಿದ್ದು ಯಲಹಂಕ ನಾಡಪ್ರಭುಗಳಾದ ಕೆಂಪೇಗೌಡನ ಪೂರ್ವಿಕರು ಅತ್ಯಂತ ಪ್ರಾಚೀನ ಕಾಲದಿಂದಲೂ ಯಲಹಂಕ ನಾಡಿನ ಆಳರಸರಾಗಿದ್ದರು ಎಂಬ ವಿದ್ವಾಂಸರ ಅಭಿಪ್ರಾಯಗಳಲ್ಲಿ ಯಾವುದೇ ಹುರುಳಿಲ್ಲ.

ಯಲಹಂಕ ನಾಡು ಎಂಬುದು ಒಂದು ಪ್ರಾಚೀನ ಆಡಳಿತ ಘಟಕ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ಈ ನಾಡಿನ ಆಡಳಿತ ಕೇಂದ್ರವಾದ ಯಲಹಂಕವು ಬಹಳ ದೊಡ್ಡ ವರ್ತುಲ ಕೇಂದ್ರವಾಗಿತ್ತು. ದೊಡ್ಡಬಳ್ಳಾಪುರ ಮಾರ್ಗವಾಗಿ ಹಾಗೂ ದೇವನಹಳ್ಳಿಯ ಮೂಲಕವಾಗಿ ತೆಲಗು ಪ್ರಾಂತ್ಯಗಳಿಗೆ ಹೋಗುವ ಹೆದ್ದಾರಿಗಳು ಇಲ್ಲಿ ಕವಲೊಡೆಯುತ್ತಿದ್ದುದರಿಂದ ಇಲ್ಲಿನ ಸಾರಿಗೆ ತೆರಿಗೆಗಾಗಿ ಈ ನಾಡನ್ನು ಮುಖ್ಯನೆಲೆಯಾಗಿ ರೂಪಿಸಿದ್ದಿರಬೇಕು. ಯಲಹಂಕದಲ್ಲಿ ಬ್ರಾಹ್ಮಣ ಶಾಹಿ ಪರಿಸರಕ್ಕಿಂತ ವ್ಯಾಪಾರ ಶಾಹಿ ಪರಿಸರವು ಈಗಾಗಲೇ ಪ್ರಬಲವಾಗಿತ್ತು. ಕನ್ನಡ ನಾಡಿನ ಹಲವೆಡೆಗಳಂತೆಯೇ ಈ ನಾಡಿನ ಆಡಳಿತವನ್ನು ಅನೇಕ ಗೌಡಪ್ರಜೆಗಳು ನೋಡಿಕೊಂಡಿರುವುದರಲ್ಲೂ ಯಾವುದೇ ಅನುಮಾನಗಳಿಲ್ಲ. ಆದರೆ ಬಹಳ ಮುಖ್ಯವಾಗಿ ಗಮನಿಸಬೇಕಾಗಿರುವುದು ಯಲಹಂಕ ನಾಡಿನ ಆಳರಸರಿಗೂ ಹಾಗೂ ಹಿರಿಯ ಕೆಂಪೇಗೌಡರಿಗೂ ಯಾವುದೇ ರೀತಿಯ ಸಂಬಂಧವಿರುವುದು ಖಚಿತವಾದ ಆಧಾರಗಳಿಂದ ದೃಢೀಕರಿಸಲಾಗುವುದಿಲ್ಲ. ಆಳರಸ ಎನ್ನುವ ಪರಿಕಲ್ಪನೆಯೇ ಈ ಕಾಲಕ್ಕೆ ಇರಲಿಲ್ಲ. ಮಹಾಸಾಮಂತಾಧಿಪತಿಯು ಸಾಮ್ರಾಜ್ಯಕ್ಕೆ ಉತ್ತರದಾಯಿಯಾಗಿದ್ದನು. ಎಲ್ಲಾ ನಾಡಿನ ಸುಂಕವನ್ನು ಸಂಗ್ರಹಿಸಿ ಈ ಮಹಾಸಾಮಂತಾಧಿಪತಿಗೆ ವರ್ಗಾವಣೆ ಮಾಡಲು ಈ ನಾಡಗೌಡರು ಪ್ರಮುಖ ಕಾರಣಕರ್ತರಾಗಿದ್ದರು. ಕೆಂಪೇಗೌಡರಿಗೆ ಸಂಬಂಧಿಸಿದಂತೆ ಯಾವ ದಾಖಲೆಗಳೂ ಅವರ ಪೂರ್ವಿಕರು ಯಲಹಂಕ ನಾಡನ್ನು ಆಳಿರುವುದಕ್ಕೆ ಸ್ಪಷ್ಟವಾದ ಪುರಾವೆಗಳನ್ನು ಒದಗಿಸುವುದಿಲ್ಲ. ಯಲಹಂಕವನ್ನು ತಮ್ಮ ಪ್ರಮುಖ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ಮುನ್ನಲೆಗೆ ಬಂದ ಕಾರಣವಾಗಿ ಕೆಂಪೇಗೌಡರ ವಂಶೀಯರು ತಮ್ಮನ್ನು ತಾವು ಯಲಹಂಕ ನಾಡಪ್ರಭುಗಳು ಎಂದು ಕರೆದುಕೊಂಡರೇ ವಿನಃ ಅನ್ಯಥಾ ಅಲ್ಲ.

ಇದುವರೆಗೂ ಗಮನಿಸಿರುವ ಹಾಗೆ ಯಲಹಂಕ ನಾಡಿನ ಆಡಳಿತವು ಬೇರೆಬೇರೆ ದರ್ಜೆಯ ಅಧಿಕಾರಿಗಳದ್ದಾಗಿತ್ತು. ಒಂದು ವೇಳೆ ಯಲಹಂಕ ನಾಡಿನ ಆಡಳಿತವು ಒಂದು ಸ್ಥಿರ ಆಡಳಿತ ಘಟಕವಾಗಿದ್ದಿದ್ದರೆ ಅದನ್ನು ಕೆಂಪೇಗೌಡರ ವಂಶೀಯರೇ ಆಳ್ವಿಕೆ ನಡೆಸಿದ್ದರೆ ಅದರ ಖಚಿತವಾದ ದಾಖಲೆಗಳು ಸ್ವಲ್ಪಪ್ರಮಾಣದಲ್ಲಾದರೂ ಸಿಗಬೇಕಾಗಿತ್ತಲ್ಲವೇ? ಕೇವಲ ಹೆಸರುಗಳ ಬಗ್ಗೆ ಇರುವ ಸಮೀಕರಣದಿಂದ ಕೆಂಪೇಗೌಡರ ಪೂರ್ವಿಕರಿಗೂ ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ ಗೌಡಪ್ರಜೆಗಳಿಗೂ ಸಂಬಂಧವನ್ನು ಕಲ್ಪಿಸುವುದು ಸೂಕ್ತವಾಗುವುದಿಲ್ಲ. ತಮ್ಮ ಮೂಲ ಹೆಸರುಗಳನ್ನು ಮರೆಸುವಂತೆ ಬೇರೆಯ ಹೆಸರುಗಳನ್ನು ಅವರುಗಳು ಇಟ್ಟುಕೊಳ್ಳುವ ಪ್ರಮೇಯವಂತೂ ಖಂಡಿತವಾಗಿ ಇದ್ದಿರಲಾರದು. ಹಿರಿಯ ಕೆಂಪೇಗೌಡರ ತಂದೆಯಾದ ಕೆಂಪನಂಜೇಗೌಡರೇ ಬೆಂಗಳೂರು ಪರಿಸರದಲ್ಲಿ ಆಡಳಿತವನ್ನು ನಡೆಸಿದ್ದಿದ್ದರೆ ಜನಮಾನಸದಲ್ಲಿ ಕೆಂಪೇಗೌಡರ ಬಗೆಗೆ ಇಷ್ಟೊಂದು ಕಥಾನಕಗಳು ರೂಪುಗೊಳ್ಳುತ್ತಲೇ ಇರಲಿಲ್ಲ. ಬೆಂಗಳೂರು ಕೆಂಪೇಗೌಡರ ವಂಶೀಯರ ಬಗ್ಗೆ ಅನೇಕ ಗೊಂದಲಗಳಿವೆ. ಕೇವಲ ಅಭಿಮಾನ ಪೂರಿತವಾದ ಸಂಗತಿಗಳು ಇತಿಹಾಸವಾಗುವುದಿಲ್ಲ. ಬೆಂಗಳೂರು ಕೆಂಪೇಗೌಡರಿಗಿಂತ ಹಿಂದೆಯೇ ಇದ್ದ ಯಾವ ವ್ಯಕ್ತಿಗಳೂ ಅತ್ಯಂತ ಪ್ರಸಿದ್ಧರಾದ ಅರಸುರುಗಳೂ ಆಗಿರಲಿಲ್ಲ ಎಂಬುದೂ ಸ್ಪಷ್ಟವಾಗಿದೆ. ಎಂ.ಜಿ. ಮಂಜುನಾಥರು ಸಿದ್ಧಪಡಿಸಿದ **ಯಲಹಂಕ ನಾಡಪ್ರಭುಗಳ ಶಾಸನಸಂಪುಟದಲ್ಲಿ**[3] ಕೆಂಪನಂಜೇಗೌಡರ ಬಗೆಗೆ ಇರುವ ಎರಡು ಶಾಸನಗಳ ವಿಶ್ವಾಸಾರ್ಹತೆಯನ್ನು ನಮ್ಮ ತಲೆಮಾರಿನ ಪ್ರಮುಖ ವಿದ್ವಾಂಸರು[4] ಅನುಮಾನದಿಂದಲೇ ನೋಡುತ್ತಿದ್ದಾರೆ. ಆದರೂ ಆ

ಎರಡು ಶಾಸನಗಳು ಕೆಂಪನಂಜೇ ಗೌಡರದ್ದಿರಬಹುದು ಎಂದು ಒಪ್ಪಿಕೊಂಡರೂ ಕೆಲವು ಮುಖ್ಯವಾದ ಪ್ರಶ್ನೆಗಳು ಎದುರಾಗುತ್ತವೆ.

ತಾವೇ ಸಿದ್ದಪಡಿಸಿದ ಯಲಹಂಕ ನಾಡಪ್ರಭುಗಳ ಶಾಸನಸಂಪುಟದ ಆಧಾರದಿಂದ ಎಂ.ಜಿ. ಮಂಜುನಾಥರು ಸ್ಥಾಪಿಸಲು ಹೊರಟಿರುವ ಮುಖ್ಯವಾದ ಸಂಗತಿಯೆಂದರೆ ಕೆಂಪ ನಂಜೇಗೌಡರು ಕೃಷ್ಣದೇವರಾಯನ ಕಾಲದಲ್ಲಿ ಮಾಗಡಿ ಪರಿಸರವನ್ನು ಅಮರನಾಯಕತನದಿಂದ ಆಳುತ್ತಿದ್ದರು. ಈ ಸಂಗತಿಯು ಬಹುಶಃ ಕೃಷ್ಣದೇವರಾಯನು ಹಲವು ಸಣ್ಣಪುಟ್ಟ ಅರಸರನ್ನು ಗುರುತಿಸಿ ಅವರಿಗೆ ಅಮರನಾಯಕತನವನ್ನು ನೀಡಿದುದರಲ್ಲಿ ಕೆಂಪನಂಜೇಗೌಡರೂ ಕೂಡ ಒಬ್ಬರು ಎಂದೆನಿಸುವಷ್ಟು ನೋಡಲು ಸರಳವಾಗಿದೆ. ಈ ಶಾಸನದಲ್ಲಿ ಅವರು ಸ್ಪಷ್ಟವಾಗಿ ಮೂಡಿಸಿರುವಂತೆ "ಶ್ರೀಮನ್ಮಹಾಕೃಷ್ಣರಾಯರ ಕಾಲದಲ್ಲಿ ಯಲವಂಕನಾಡಪ್ರಭು ಅಮರನಾಯಕ ಕೆಂಪ್ಪನಂಜೇಗವುಡರು" ಎಂಬ ಉಲ್ಲೇಖವೂ ಗಮನಾರ್ಹ. ಹಾಗಾದರೆ ಈ ಅಮರನಾಯಕತನವನ್ನು ಇನ್ಯಾರೂ ಅಲ್ಲದೇ ಕೃಷ್ಣದೇವರಾಯರೇ ತಮ್ಮ ಆಳ್ವಿಕೆಯ ಕಾಲದಲ್ಲಿ ಯಲಹಂಕನಾಡಿನ ಪ್ರಭು ಕೆಂಪನಂಜೇಗೌಡನಿಗೆ ನೀಡಿದರು ಎಂಬ ಅರ್ಥವನ್ನು ನೀಡುತ್ತದೆಯಲ್ಲವೇ?

ಕೆಂಪನಂಜೇಗೌಡನಿಗಿಂತ ಹಿಂದೆ ವಿದ್ವಾಂಸರು ಭಾವಿಸಿರುವ ಜಯಗೌಡ, ಗಿಡ್ಡೇಗೌಡ, ನಾಚೇಗೌಡರು ಆಡಳಿತ ನಡೆಸಿರುವುದಕ್ಕೆ ಯಾವುದೇ ಖಚಿತವಾದ ಆಧಾರಗಳಿಲ್ಲ. ಆದರೆ ಇವರು ಖಂಡಿತವಾಗಿಯೂ ಕೆಂಪೇಗೌಡರ ಪೂರ್ವಿಕರು ಎಂದು ನಂಬಬಹುದು.

ಕೆಂಪನಂಜೇಗೌಡರ ಕಾಲಕ್ಕಾಗಲೇ ಬೆಂಗಳೂರು ಪ್ರಮುಖ ಪಟ್ಟಣವಾಗಿ ಅಲ್ಲವಾದರೂ ಕ್ರಿ.ಶ. 1402ರ ನಂತರದಿಂದ ಬೆಂಗಳೂರು ವಳಿತದ ಕೇಂದ್ರವಾಗಿ ಪ್ರಸಿದ್ಧವಾಗಿತ್ತು. ಹಿರಿಯ ಕೆಂಪೇಗೌಡರ ತಂದೆಯಾದ ಕೆಂಪನಂಜೇಗೌಡರನ್ನು 'ಬೆಂಗಳೂರು ಕೆಂಪ ನಂಜೇಗೌಡ' ಎಂದು ಶಾಸನಗಳು ಉಲ್ಲೇಖಿಸಿವೆ. ಹಾಗಾಗಿ ಬೆಂಗಳೂರು, ಯಲಹಂಕ ಹಾಗೂ ಮಾಗಡಿ ಪ್ರದೇಶಗಳು ಇವರ ಆಳ್ವಿಕೆಗೆ ಆರಂಭದಲ್ಲಿಯೇ ದೊರೆತಿವೆ ಎಂದೆನಿಸುತ್ತದೆ. ಪ್ರಸ್ತುತ ಪ್ರಬಂಧದ ಪ್ರಧಾನವಾದ ವಿಷಯ ನಾಡಪ್ರಭುಗಳ ಚರಿತ್ರೆಯನ್ನು ಸಂಕಥಿಸುವ ಉದ್ದೇಶವನ್ನು ಹೊಂದಿರದೇ ನಾಡಪ್ರಭುಗಳ ಆಗಮನಕ್ಕೆ ಪೂರ್ವದಲ್ಲಿ ಇದ್ದಂತಹ ಪೂರಕ ಪರಿಸರವನ್ನು ಮಾತ್ರ ಗುರುತಿಸುವುದಾಗಿದೆ.

ಈ ಎಲ್ಲಾ ಮೇಲಿನ ಶಾಸನೋಕ್ತ ಅಂಶಗಳನ್ನು ಗಮನಿಸಿದರೆ ಅಪ್ಪಟ ಕನ್ನಡದ ಅರಸರ ಅನ್ವೇಷಣೆಯಲ್ಲಿ ಕ್ರಮೇಣ ಪ್ರಯತ್ನಗಳು ಸಾಗಿ, ಖಚಿತವಾದ ಹಾಗೂ ಪರಿಣಾಮಕಾರಿಯಾದ ಆಡಳಿತದ ಅಗತ್ಯತೆಯಿತ್ತು. ಇದನ್ನು ನಾಡಪ್ರಭುಗಳಾದ ಕೆಂಪೇಗೌಡರು ಸಾಧಿಸಿದರು ಎಂದೂ ತೋರುತ್ತದೆ. ಹಿರಿಯ ಕೆಂಪೇಗೌಡರ ತಂದೆಯಾದ ಕೆಂಪನಂಜೇಗೌಡರೇ ಸದ್ಯಕ್ಕೆ ಈ ವಂಶದ ಮೊದಲ ಅರಸನಿರಬಹುದು. ಒಂದು ವೇಳೆ ಈತನಿಗೆ ಕೃಷ್ಣದೇವರಾಯನು ಬಹುಶಃ ಮಾಗಡಿ ಪರಿಸರದ ಆಳ್ವಿಕೆಯನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ನಿಜವಾಗಿಯೂ ವಹಿಸಿದನು ಎಂದು ತಿಳಿಯುವುದಾದರೆ ಆತನನ್ನು ಬೆಂಗಳೂರು ಕೆಂಪ ನಂಜೇಗೌಡರು ಎಂದು ಕರೆಯುವ ಅವಶ್ಯಕತೆಯಾದರೂ ಏನಿತ್ತು. (ಈ ಶಾಸನದಲ್ಲಿ ಕೆಂಪನಂಜೇಗೌಡರ ಹೆಸರು ಇರುವುದೇ ಅನುಮಾನಾಸ್ಪದವಾಗಿದೆ) ಒಂದು ವೇಳೆ ಅದು ನಿಜವೆಂದು ತಿಳಿಯುವುದೇ ಆದರೆ ಇದಕ್ಕೆ ಕಾರಣ ಮಾಗಡಿ

ಪರಿಸರವು ಅಲ್ಲಿಯವರೆಗೂ ಯಾವ ಆಡಳಿತದ ಅರಸರ ಮುಖ್ಯಕೇಂದ್ರವಾಗಿರದೇ ಅದು ಕೇವಲ ಅಂಚಿನ ಪ್ರದೇಶವಾಗಿತ್ತು. ಇಲ್ಲಿದ್ದ ಹಲವು ಬುಡಕಟ್ಟು ವೀರರನ್ನು ಮಣಿಸಿ ನಿರಂತರವಾಗಿ ನಡೆಯುತ್ತಿದ್ದ ಕೃಷ್ಣದೇವರಾಯನ ಕಾಲದ ಯುದ್ಧಗಳಲ್ಲಿ ಅವರನ್ನು ಅಣಿಗೊಳಿಸುವುದು ಇವರ ಪ್ರಮುಖ ಉದ್ದೇಶವಾಗಿದ್ದಿರಬಹುದು.

ನಮ್ಮ ಮುಂದೆ ಇರುವ ಬಹಳ ಮುಖ್ಯವಾದ ಇನ್ನೊಂದು ಪ್ರಶ್ನೆಯನ್ನು ಪರಿಹರಿಸಿಕೊಳ್ಳಬೇಕಾದ ಅವಶ್ಯಕತೆಯಿದೆ. ಯಲಹಂಕ ನಾಡನ್ನು ತಲೆತಲಾಂತರದಿಂದ ಕೆಂಪೇಗೌಡರ ವಂಶೀಯರೇ ಆಡಳಿತ ನಡೆಸುತ್ತಿದ್ದಿದ್ದರೆ ವಿಜಯನಗರದ ಚಕ್ರವರ್ತಿಯಾದ ಕೃಷ್ಣದೇವರಾಯನು ಹಿರಿಯ ಕೆಂಪೇಗೌಡರ ತಂದೆಯಾದ ಕೆಂಪನಂಜೇಗೌಡರಿಗೆ ಅಮರನಾಯಕತನವನ್ನು ಕೊಡುವ ಉದ್ದೇಶವಾದರೂ ಏನಿತ್ತು? ಈ ಪ್ರಶ್ನೆಯ ಉಪಪ್ರಶ್ನೆಯಾದ ಯಲಹಂಕದ ಆಡಳಿತದ ಜೊತೆಗೆ ತಳುಕು ಹಾಕಿಕೊಂಡಿರುವ ಗೌಡಪ್ರಜೆಗಳು ಕೆಂಪೇಗೌಡನ ವಂಶೀಯರೇ ಎಂಬ ಪ್ರಶ್ನೆಯನ್ನೂ ಗಮನಿಸುವುದು ಒಳಿತು. ಹಲವು ಜನ ವಿದ್ವಾಂಸರು ಒಪ್ಪಿರುವಂತೆ ಯಲಹಂಕದ ಆಡಳಿತದ ಜೊತೆ ತಳಕು ಹಾಕಿಕೊಂಡಿರುವ ಗೌಡಪ್ರಜೆಗಳು ಕೆಂಪೇಗೌಡನ ವಂಶೀಯರೇ ಆಗಿದ್ದರೆ ಮತ್ತೊಮ್ಮೆ ಅವರಿಗೆ ಅಮರನಾಯಕತನವನ್ನು ಒದಗಿಸಿ ಅವರನ್ನು ಆಡಳಿತದ ಮುಖ್ಯವಾಹಿನಿಗೆ ತರಲಾಯಿತು ಎಂದು ಹೇಗೆ ತಾನೆ ನಂಬುವುದು? ನಾಡಪ್ರಭುಗಳ ಆಳ್ವಿಕೆಗೂ ಅಮರನಾಯಕತನದ ಆಳ್ವಿಕೆಗೂ ಅಂತಹ ವ್ಯತ್ಯಾಸವಾದರೂ ಏನಿತ್ತು?

ಅಥವಾ ಇದನ್ನು ಹೀಗೂ ನೋಡಬಹುದು. ಈ ಹಿಂದೆ ಆಡಳಿತ ನಡೆಸುತ್ತಿದ್ದ ಯಲಹಂಕ ನಾಡನ್ನು ಬಿಟ್ಟು ಮಾಗಡಿ ಪ್ರಾಂತ್ಯದ ಅಮರನಾಯಕತನವನ್ನು ನೀಡಿದರೇ? ಎಂಬುದು ಕೂಡ ಮುಖ್ಯವಾದ ಪ್ರಶ್ನೆಯಾಗುತ್ತದೆ. ಯಾಕೆಂದರೆ ಯಲಹಂಕವು ಅತ್ಯಂತ ಮಹತ್ವದ ಕೇಂದ್ರದಲ್ಲಿ ಆಯಕಟ್ಟಿನ ಜಾಗದಲ್ಲಿಯೂ ಹಾಗೂ ಮುಖ್ಯವಾದ ಹೆದ್ದಾರಿಯ ತೀರದಲ್ಲಿಯೂ ಇರುವುದರಿಂದ ಇಲ್ಲಿ ಕೃಷಿ ಆದಾಯದ ಜೊತೆಗೆ ಹೆದ್ದಾರಿ ಸುಂಕವೂ ಸಿಗುವ ಅವಕಾಶವಿತ್ತು. ಅದನ್ನು ತೊರೆದು ಮಾಗಡಿಯಂತಹ ಹೆದ್ದಾರಿಯಲ್ಲಿಲ್ಲದ ಹೆಚ್ಚಿನ ಆದಾಯವಾಗಲೀ, ಜನವಸತಿಯಿಂದ ಬರುವ ತೆರಿಗೆಯಿಂದ ಬರಬಹುದಾದ ಆದಾಯವು ಇಲ್ಲದೇ ಇರುವ ಪ್ರದೇಶದ ಅಮರನಾಯಕತನವನ್ನು ಸ್ವೀಕರಿಸಿದನು ಎಂಬುದನ್ನು ಅರ್ಥೈಸುವುದಾದರೂ ಹೇಗೆ?

ಇನ್ನೊಂದು ಹೇಳಿಕೆಯಂತೆ ಕೆಂಪೇಗೌಡರು ಕೂಡ ಅಚ್ಯುತರಾಯನ ಕಾಲದಲ್ಲಿ ಬೆಂಗಳೂರು ಪರಿಸರವನ್ನು ಅಮರನಾಯಕತನಕ್ಕೆ ಪಡೆದ ಸಂಗತಿಯಿದೆ.[5] ಹಾಗಾದರೆ ಕೃಷ್ಣದೇವರಾಯನು ಹಿರಿಯ ಕೆಂಪೇಗೌಡರ ತಂದೆಗೆ ಮಾಗಡಿ ಪರಿಸರವನ್ನು ಅಮರನಾಯಕತನಕ್ಕೆ ನೀಡಿದ ನಂತರ ಕೆಲವೇ ವರ್ಷಗಳ ಅಂತರದಲ್ಲಿ 1532ರಲ್ಲಿ ಮತ್ತೆ ಅವನ ಮಗನಿಗೆ ಬೆಂಗಳೂರು ಪರಿಸರವನ್ನು ಅಮರನಾಯಕತನಕ್ಕೆ ನೀಡಿದರು ಎಂಬ ಹೇಳಿಕೆಯು ಬಾಲಿಶವಲ್ಲವೇ? ಹಾಗಿದ್ದ ಪಕ್ಷದಲ್ಲಿ ಅಮರನಾಯಕತನವೆಂಬುದು ಅನುವಂಶೀಯವಲ್ಲವೇ? ತಂದೆಗೆ ಒಂದು ಪ್ರದೇಶದ ಆಳ್ವಿಕೆಯನ್ನು ಈ ಅಮರನಾಯಕತನದ ಮೂಲಕ ನೀಡಿದ ಮೇಲೆ ಮಗನಿಗೆ ಮತ್ತೆ ಅದೇ ಅಧಿಕಾರವನ್ನು ಇನ್ನೊಂದು ಪ್ರದೇಶದಲ್ಲಿ ನೀಡುವ ಔಚಿತ್ಯವಾದರೂ ಏನಿತ್ತು ಎಂಬ ಪ್ರಶ್ನೆ ಮೂಡುವುದಿಲ್ಲವೇ?

ಬೆಂಗಳೂರು ಪರಿಸರದ ಎಲ್ಲಾ ಈ ಕಾಲೀನ ಶಾಸನಗಳನ್ನು ಆಧಾರವಾಗಿ ಇಟ್ಟುಕೊಂಡು ಹೇಳುವುದಾದರೆ ಕೆಂಪೇಗೌಡರಿಗಿಂತ ಪೂರ್ವಕಾಲಘಟ್ಟದಲ್ಲಿ ಯಲಹಂಕ ನಾಡಿನ ಆಡಳಿತವನ್ನು ನೋಡಿಕೊಳ್ಳುತ್ತಿದ್ದವರಿಗೂ ಕೆಂಪೇಗೌಡರಿಗೂ ಇರುವ ಸಂಬಂಧವನ್ನು ಕುರಿತು ಯಾವುದೇ ರೀತಿಯ ಖಚಿತವಾದ ಆಧಾರಗಳಿಲ್ಲ.

ಕೆಂಪೇಗೌಡರ ಆಗಮನದವರೆಗೂ ಬೆಂಗಳೂರು ಪರಿಸರವು ಸ್ವಲ್ಪಮಟ್ಟಿಗಿನ ಧಾರ್ಮಿಕ ಕೇಂದ್ರವಾಗಿತ್ತೇ ಹೊರತು ಪೂರ್ಣಪ್ರಮಾಣದ ಆರ್ಥಿಕ ಕೇಂದ್ರವಾಗಿರಲಿಲ್ಲ. ಕೃಷಿಗೆ ಪೂರಕವಾಗುವಂತಹ ಕೃಷಿವ್ಯವಸ್ಥೆ ಈ ಪರಿಸರದಲ್ಲಿ ಇದ್ದಿತ್ತಾದರೂ ಬೆಂಗಳೂರು ಕೇಂದ್ರದಲ್ಲಿ ಯಾವುದೇ ದೊಡ್ಡದೊಡ್ಡ ಮಾರುಕಟ್ಟೆ ವ್ಯವಸ್ಥೆ ಇರಲಿಲ್ಲ. ನಾಡಿನ ಹೋರಾಟಗಾರರ, ಸೈನಿಕರ, ಯುದ್ಧವೀರರ ತಾಣವಾಗಿತ್ತೇ ಹೊರತು ಯಾವುದೇ ಅರಸುಮನೆತನದ ಲೋಕೋತ್ತರವಾದ ರಾಜಧಾನಿಯಾಗಿರಲೂ ಇಲ್ಲ. ಹಾಗೂ ಯಾವುದೇ ಅರಸುಮನೆತನದ ಪ್ರಮುಖ ಆಡಳಿತ ಕೇಂದ್ರವೂ ಆಗಿರಲಿಲ್ಲ. ಸುಸಜ್ಜಿತವಾದ ಯಾವ ಪೇಟೆಯಾಗಲೀ ಹಾಗೂ ಕೋಟೆಯಾಗಲೀ ಈ ಪರಿಸರದಲ್ಲಿ ಅಸ್ತಿತ್ವದಲ್ಲಿ ಇರಲಿಲ್ಲ. ಇವೆಲ್ಲವನ್ನೂ ಆಗುಮಾಡಿ ಇಲ್ಲಿ ಸ್ಥಿರವಾದ ರಾಜ್ಯವೊಂದನ್ನು ಕಟ್ಟಿ ಹಿರಿಯ ಕೆಂಪೇಗೌಡರು ಕೆರೆಯನ್ನೂ ಪೇಟೆಯನ್ನೂ ಇದಕ್ಕೆ ಹೊಂದಿಕೊಂಡಂತೆ ಸುಭದ್ರವಾದ ಕೋಟೆಯೊಂದನ್ನು ನಿರ್ಮಿಸಿ ಬೆಂಗಳೂರು ಪರಿಸರವನ್ನು ಮುನ್ನಲೆಗೆ ತಂದು ಸ್ಥಿರವಾದ ರಾಜ್ಯವನ್ನು ಕಟ್ಟಿದರೇ ಹೊರತು ಅವರ ಪೂರ್ವಿಕರಾರೂ ಈ ಸಾಹಸವನ್ನು ಮಾಡಲಿಲ್ಲ. ಈ ಕಾರಣಕ್ಕಾಗಿಯೇ ಜನಮಾನಸದಲ್ಲಿ ಬೆಂಗಳೂರು ಹಿರಿಯ ಕೆಂಪೇಗೌಡರು ಇನ್ನೂ ನೆನಪಾಗಿ ಉಳಿಯಲು ಸಾಧ್ಯವಾಯಿತು.

ಟಿಪ್ಪಣಿಗಳು ಮತ್ತು ಆಕರ ಸೂಚಿ

1. ಆರಂಭದಿಂದ ಹೊಯ್ಸಳರವರೆಗಿನ ಕಾಲಘಟ್ಟದ ಬೆಂಗಳೂರು ಪರಿಸರದ ಇತಿಹಾಸವನ್ನು ಕುರಿತು ನೋಡಿ: ಹಂ.ಗು.ರಾಜೇಶ್, 2013, 'ಬದಲಾವಣೆಯತ್ತ ಆರಂಭಿಕ ಮಧ್ಯಕಾಲೀನ ಬೆಂಗಳೂರು ಪರಿಸರ(950–1350) : ಹೊಸ ಪರಿವೀಕ್ಷಣೆಗಳ ವಿಶ್ಲೇಷಣೆ', **ಇತಿಹಾಸ ದರ್ಪಣ (ತ್ರೈಮಾಸಿಕ), ಪುಸ್ತಕ 18**; ಜುಲೈ–ಸೆಪ್ಟೆಂಬರ್ 2013, ಬೆಂಗಳೂರು : ಪುಟಗಳು 11–42.
2. ಸೀಮೆ, ವಳಿತ, ಪಟ್ಟಡಿ, ವೇಂಠೆ, ಚಾವಡಿಗಳ ಬಗೆಗಿನ ವಿವರಣಾತ್ಮಕ ಮಾಹಿತಿಗಾಗಿ ನೋಡಿ : ಕೆ.ವಿ. ಕೃಷ್ಣಮೂರ್ತಿ, 2011, **ಶಾಸನ ಮಂಥನ**, ತುಮಕೂರು ವಿಶ್ವವಿದ್ಯಾನಿಲಯ: ತುಮಕೂರು.
3. ಎಂ.ಜಿ. ಮಂಜುನಾಥ, 2006, **ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ**, ಶ್ರೀ ಕೆಂಪೇಗೌಡ ಅಧ್ಯಯನ ಪೀಠ, ಬೆಂಗಳೂರು ವಿಶ್ವವಿದ್ಯಾಲಯ: ಬೆಂಗಳೂರು.
4. **ಇತಿಹಾಸ ದರ್ಪಣ (ತ್ರೈಮಾಸಿಕ), ಪುಸ್ತಕ 36**; ಜನವರಿ–ಮಾರ್ಚ್ 2018ರಲ್ಲಿ ಹಂ.ಗು.ರಾಜೇಶ್ ಅವರ ಸಂಪಾದಕೀಯ 'ಚರಿತ್ರೆಯ ಹೊಸ ಸವಾಲುಗಳು' ಪು.8–9 ಮತ್ತು ಎಸ್. ಗಂಗಾಂಜಿಕೆ ಅವರ 'ಹೊಸ ಪರಿವೀಕ್ಷಣೆಯ ಹಿನ್ನೆಲೆಯಲ್ಲಿ ನಾಡಪ್ರಭು ಕೆಂಪೇಗೌಡನ ಇತಿಹಾಸದ ಗೊಂದಲಗಳೊಂದಿಗೆ ಒಂದು ಸಂವಾದ' ಪು.37–80 ನೋಡಿ. ಇನ್ನೂ ಹೆಚ್ಚಿನ ಚರ್ಚೆಗಳನ್ನು ವಿಜಯ್ ಪೂಣಚ್ಚ ತಂಬಂಡ ಅವರ ಸಂಪಾದಕತ್ವದ **ಚರಿತ್ರೆ ಅಧ್ಯಯನ** ನಿಯತಕಾಲಿಕೆಗೆ ಸ್ವೀಕೃತವಾಗಿರುವ ಹಂ.ಗು.ರಾಜೇಶ್ ಅವರ 'ಚಿತಾಸಕವರ್ಗ ಮತ್ತು ಚಾರಿತ್ರಿಕ ರಾಜಕರಣದ ಹಿನ್ನೆಲೆಯಲ್ಲಿ ಸಮಾಧಿಯ ಕೆಂಪೇಗೌಡನಿಗಾಗಿ ಹುಡುಕಾಟ' ಪ್ರಬಂಧದಲ್ಲಿ ಗಮನಿಸಬಹುದು.
5. ಎಂ.ಜಿ. ಮಂಜುನಾಥ, 2006, ಪೂರ್ವೋಕ್ತ, ಶಾಸನ ಸಂಖ್ಯೆ 13, ಪುಟ 26.

ITIHASA DARPANA (Quarterly)
A Peer Reviewed Journal of Historical Research in Kannada
ISSN 2321-3590
Book No.: 37-38.
April – September 2018
Author: Rahamat Tarikere
Title: 'sachivāyatta prabhutva' hāgū
Kannaḍa rājakīya paṭyagaḷu

'ಸಚಿವಾಯತ್ತ ಪ್ರಭುತ್ವ' ಹಾಗೂ ಕನ್ನಡ ರಾಜಕೀಯ ಪಠ್ಯಗಳು

ರಹಮತ್ ತರೀಕೆರೆ
ಪ್ರಾಧ್ಯಾಪಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ 583 276
ಮೊ: 94802 49101
rtarikere@gmail.com

ಕ್ಷತ್ರಿಯ ದೊರೆಗಳ ಶೌರ್ಯ ಬಣ್ಣಿಸುವ ಪಠ್ಯಗಳ ಪರಂಪರೆಯು ಕನ್ನಡದಲ್ಲಿ ಕಳೆದ ಸಾವಿರ ವರ್ಷಗಳಿಂದಲೂ ಇದೆ. **ವಿಕ್ರಮಾರ್ಜುನ ವಿಜಯ, ಸಾಹಸಭೀಮ ವಿಜಯ, ಕಂಠೀರವ ನರಸರಾಜ ವಿಜಯ** ಶೀರ್ಷಿಕೆಗಳೇ ಇದನ್ನು ಸಾರುತ್ತವೆ. ವಿಶೇಷವೆಂದರೆ, ಸ್ಥಳೀಯ ರಾಜರು ಬ್ರಿಟಿಶರ ವಸಾಹತುಶಾಹಿ ಯುದ್ಧಗಳಲ್ಲಿ ತರಗೆಲೆಗಳಂತೆ ಉದುರುತ್ತಿದ್ದ ಕಾಲಘಟ್ಟದಲ್ಲಿ, ಅವರನ್ನು ಹೊಗಳುವ ಪಠ್ಯಗಳಿಗಿಂತ, ಅವರ ದುರ್ಬಲತೆಯನ್ನೂ ಚತುರವಾಗಿ ಆಡಳಿತ ಸಂಭಾಳಿಸಿದ ಮಂತ್ರಿಗಳ ದಕ್ಷತೆಯನ್ನು ಹೇಳುವ ಪಠ್ಯಗಳು ಸೃಷ್ಟಿಯಾದವು. 1799– 1947ರ ಒಂದೂವರೆ ಶತಮಾನದ ವಸಾಹತುಶಾಹಿಯ ನೇರ ಮತ್ತು ಪರೋಕ್ಷ ಆಳ್ವಿಕೆಯಲ್ಲಿ, ಮೈಸೂರು ಸಂಸ್ಥಾನ ಕಂಡ ರಾಜಕೀಯ ಏಳುಬೀಳುಗಳಿಗೆ ಪ್ರತಿಸ್ಪಂದಿಸುತ್ತ ಈ ರಾಜಕೀಯ ಪಠ್ಯಗಳು ಮೂಡಿದವು. ಇವುಗಳಲ್ಲಿ, ಸೈನ್ಯಬಲ ಧರ್ಮಯುದ್ಧ ರಣಶೌರ್ಯಗಳಿಗಿಂತ, ವಣಿಕರಾಗಿ ಬಂದು ತಂತ್ರಗಾರಿಕೆಯಿಂದ ದೇಶವನ್ನು ವಶಪಡಿಸಿಕೊಂಡ ಬ್ರಿಟಿಶರ ಚಾತುರ್ಯವು, ಪ್ರಮುಖ ರಾಜಕೀಯ ಮೌಲ್ಯವಾಗಿ ಪ್ರತಿಪಾದಿತವಾಯಿತು. ಈ ಪಠ್ಯಸರಣಿಯನ್ನು, ಕೆಂಪುನಾರಾಯಣನ **ಮುದ್ರಾಮಂಜೂಷವು** (1823) ಉದ್ಘಾಟಿಸಿತೆನ್ನಬಹುದು. ಅದರಲ್ಲಿ ಚಾಣಕ್ಯನು ಚಂದ್ರಗುಪ್ತನಿಗೆ

'ದಂಡನೀತಿ ಶಾಸ್ತ್ರ'ದ ಬಗ್ಗೆ ವಿವರಿಸುತ್ತ, ಅಲ್ಲಿ ಸ್ವಾಯತ್ತ (ದೊರೆಯಧೀನ) ಸಚಿವಾಯತ್ತ (ಮಂತ್ರಿಯಧೀನ ವಿಷಯ) ಉಭಯಾಯತ್ತ (ಇಬ್ಬರೂ ಚರ್ಚಿಸಿ ನಿರ್ಣಯ ತೆಗೆದುಕೊಳ್ಳುವ) ವಿಷಯಗಳಿವೆಯೆಂದೂ, ಸಚಿವಾಯತ್ತ ವಿಷಯದಲ್ಲಿ ದೊರೆ ಪ್ರಶ್ನೆ ಮಾಡುವಂತಿಲ್ಲವೆಂದೂ ವಿವರಿಸುವನು. ಇದಕ್ಕೆ ಪೂರಕವಾಗಿ 'ಮಂತ್ರಸಿದ್ಧಿಯುಳ್ಳ ಅರಸು' 'ದಕ್ಷನಾದ ಸಚಿವ' ಎಂಬ ನುಡಿಗಟ್ಟುಗಳೂ ಪಠ್ಯದಲ್ಲಿ ಬರುತ್ತವೆ. ಸಚಿವಾಯತ್ತ ತತ್ವವನ್ನು ಎತ್ತಿಹಿಡಿಯುವ 'ಮಂಜೂಷ'ವನ್ನು ಅನುಸರಿಸಿ, ಡಿವಿಜಿಯವರ **ದಿವಾನ್ ರಂಗಾಚಾರ್ಲು** (1910); **ವಿದ್ಯಾರಣ್ಯರು ಮತ್ತು ಅವರ ಕಾಲ** (1922) ಹಾಗೂ **ಮೈಸೂರಿನ ದಿವಾನರು**; ಗಳಗನಾಥರ **ಮಾಧವ ಕರುಣಾವಿಲಾಸ** (1924); ಎಂ.ಎಸ್. ಪುಟ್ಟಣ್ಣನವರ **ಮಹಮೂದ ಗವಾನ ಎಂಬ ಮಹಾಮಂತ್ರಿಯ ಚರಿತ್ರೆ** (1922); ಯಂ.ರಾಮರಾಯರ **ಪೂರ್ಣಯ್ಯನವರು** (1926) ಹಾಗೂ **ಮಂತ್ರಿಶ್ರೇಷ್ಠರಾದ ಸರ್ ಸಾಲಾರ್‌ಜಂಗ್** (1926); ಮಿರ್ಜಾ ಇಸ್ಮಾಯಿಲರ ಬಗ್ಗೆ ಅಧ್ಯಾಯವುಳ್ಳ ಸಿ.ಕೆ.ವೆಂಕಟರಾಮಯ್ಯನವರ **ಆಳಿದ ಮಹಾಸ್ವಾಮಿಯವರು** (1941)– ಮುಂತಾದ ಪಠ್ಯಗಳು 20ನೇ ಶತಮಾನದ ಮೊದಲರ್ಧದಲ್ಲಿ ಪ್ರಕಟವಾದವು. ಪ್ರಧಾನಮಂತ್ರಿಗಳೇ ನಾಯಕರಾಗಿರುವ ಈ ಪಠ್ಯಗಳ ಶೀರ್ಷಿಕೆಗಳಲ್ಲಿ 'ಮಹಾಮಂತ್ರಿ' 'ಮಂತ್ರಿಶ್ರೇಷ್ಠ' 'ಕರುಣಾವಿಲಾಸ' ಇತ್ಯಾದಿ ವಿಶೇಷಣಗಳಿವೆ. ಸಂಸ್ಥಾನವು ಮಂತ್ರಿಗಳಿಗೂ ಅಧಿಕಾರಿಗಳಿಗೂ ಅವರ ಸೇವೆಯನ್ನು ಮನ್ನಿಸಿ ರಾಜಮಂತ್ರ ಪ್ರವೀಣ ಇತ್ಯಾದಿ ಬಿರುದು ಕೊಡುತ್ತಿತ್ತು. ಅಮಾತ್ಯಕೇಂದ್ರಿತ ಈ ಪಠ್ಯಗಳು ರಾಜಕೀಯ ಅರಾಜಕತೆ ಮತ್ತು ಒಳ್ಳೆಯ ಆಳ್ವಿಕೆಗೆ ದೊರೆಗಿಂತ ದಿವಾನರು ಅಥವಾ ಸಮರ್ಥ ಆಡಳಿತಶಾಹಿ ಮುಖ್ಯವೆಂಬ ತತ್ವಪ್ರತಿಪಾದನೆ ಮಾಡಿದವು. 'ರಾಜತಂತ್ರ'ದ ಮಹತ್ವ ಸಾರುವಂತಹ ಇವುಗಳ ವಸ್ತುವಿನ್ಯಾಸ, ಭಾಷೆ, ಆಶಯಗಳನ್ನು ಪರಿಶೀಲಿಸುವುದು ಈ ಲೇಖನದ ಯತ್ನವಾಗಿದೆ.

'ಮಂಜೂಷ'ದ ಪರಿಭಾಷೆಯಲ್ಲಿ ಅಮಾತ್ಯರಾದ ಈ ದಿವಾನರನ್ನು 18ನೇ ಶತಮಾನದಲ್ಲಿ ದಳವಾಯಿ, ಸರ್ವಾಧಿಕಾರಿ ಎನ್ನಲಾಗುತ್ತಿತ್ತು. ದಿವಾನ್ ಎಂಬ ಫಾರಸಿ ಶಬ್ದ ಚಾಲ್ತಿಗೆ ಬಂದಿದ್ದು ಹೈದರ್–ಟಿಪ್ಪು ಕಾಲದಲ್ಲಿ. ಚಿಕ್ಕದೇವರಾಜನಂತಹ ಬಲಿಷ್ಠ ದೊರೆಯ ಬಳಿಕ ಸಂಸ್ಥಾನದಲ್ಲಿ ದುರ್ಬಲ ದೊರೆಯನ್ನು ಬದಿಗೆ ಸರಿಸಿ ದಿವಾನರೇ ಆಳ್ವಿಕೆ ನಡೆಸುವ ಪದ್ಧತಿ ಕೂಡ 18ನೇ ಶತಮಾನದಲ್ಲಿ ಶುರುವಾಯಿತು. ಬಾಲಕರು ಪಟ್ಟಕ್ಕೇರುವ ಸನ್ನಿವೇಶಗಳೂ ಪಳಗಿದ ದಿವಾನರನ್ನು ಪರ್ಯಾಯ ನಾಯಕರನ್ನಾಗಿ ರೂಪಿಸಿದವು. ಆರನೇ ಚಾಮರಾಜ ಒಡೆಯರ್ (1732–1734) ಕಾಲದಲ್ಲಿ ದಳವಾಯಿ ದೇವರಾಜಯ್ಯ ಮತ್ತು ಕರಾಚೂರಿ ನಂಜರಾಜಯ್ಯ ಅಕ್ಷರಶಃ ಸರ್ವಾಧಿಕಾರಿಗಳಾಗಿದ್ದರು. ದೊರೆಗೆ ಪಟ್ಟಕಟ್ಟುವ ಹಾಗೂ ಆತ ಸ್ವತಂತ್ರವಾಗಿ ಅಧಿಕಾರ ಚಲಾಯಿಸಿದರೆ ಅಧಿಕಾರದಿಂದ ಕೆಳಗಿಳಿಸಿ ಸೆರೆಯಲ್ಲಿಡುವ ಸಾಮರ್ಥ್ಯವನ್ನು ಅವರು ಹೊಂದಿದ್ದರು. ಈ ಪದ್ಧತಿ ತುಸುಮಟ್ಟಿಗೆ ಹೈದರ್ ದಳವಾಯಿಕೆಯಲ್ಲೂ ಇತ್ತು. ಹೈದರನು ಬೆಟ್ಟದ ಚಾಮರಾಜ (1770–1776) ಹಾಗೂ ಖಾಸಾ ಚಾಮರಾಜರ (1776–1796) ಕಾಲದಲ್ಲಿ ಸರ್ವಾಧಿಕಾರಿಯಾಗಿದ್ದವನು. ಚಿಕ್ಕವಯಸ್ಸಿಗೆ ಪಟ್ಟವೇರಿದ ಮುಮ್ಮಡಿ ಕೃಷ್ಣರಾಜ ಹಾಗೂ ನಾಲ್ವಡಿಯವರ ಕಾಲದಲ್ಲಿ ಹಿರಿಯ ವಯಸ್ಸಿನ ಪೂರ್ಣಯ್ಯ, ರಂಗಾಚಾರ್ಲು, ಶೇಷಾದ್ರಿ ಅಯ್ಯರ್ ದೊರೆಗಿಂತ ಪ್ರಬಲರಾಗಿದ್ದರು. ಖಾಸಾ ಚಾಮರಾಜನನ್ನು ಹೈದರ್ ಪಟ್ಟಕ್ಕೆ ಆಯ್ಕೆ ಮಾಡಿದ ಬಗ್ಗೆ ಸ್ವಾರಸ್ಯಕರ ಐತಿಹ್ಯವಿದೆ. ಹೈದರನು ಎಲ್ಲ ರಾಜಕುಮಾರರನ್ನು ಕರೆಯಿಸಿ ಹಣ್ಣು ತಿಂಡಿ ಕತ್ತಿ ಇತ್ಯಾದಿ ಪದಾರ್ಥಗಳನ್ನು ಎದುರಿಗಿಟ್ಟು ಬೇಕಾದ್ದನ್ನು ಆರಿಸಿಕೊಳ್ಳುವಂತೆ

ಸೂಚಿಸಿದನೆಂದೂ, ಎಲ್ಲರೂ ತಿನಿಸನ್ನು ಆರಿಸಿಕೊಳ್ಳುವಾಗ ಚಾಮರಾಜನು ಕತ್ತಿ-ನಿಂಬೆಹಣ್ಣನ್ನು ತೆಗೆದುಕೊಂಡನೆಂದೂ, ಹೈದರ್ ಅವನನ್ನು ದೊರೆಯೆಂದು ಘೋಷಿಸಿದನೆಂದೂ ಈ ಮಿತ್ ಹೇಳುತ್ತದೆ. ಒಡೆಯರ ವಂಶಾವಳಿಗಳೂ ಇದನ್ನು ಉಲ್ಲೇಖಿಸುತ್ತವೆ. ಈ ಐತಿಹ್ಯವು ದೊರೆಯಾಗುವವನ ಕ್ಷಾತ್ರಗುಣವನ್ನು ಮಾತ್ರವಲ್ಲ, ಅವನನ್ನು ರೂಪಿಸುತ್ತಿರುವ ಸರ್ವಾಧಿಕಾರಿಯ ಮಹತ್ವವನ್ನೂ ಸೂಚಿಸುತ್ತಿದೆ.

ಮುಮ್ಮಡಿಯವರ ಪದಚ್ಯುತಿಯಿಂದ (1831) ಚಾಮರಾಜ ಒಡೆಯರ್ ಅಧಿಕಾರಕ್ಕೆ ಬರುವ ತನಕ (1881), ಅರ್ಧಶತಮಾನ ಕಾಲ ಮೈಸೂರು ಸಂಸ್ಥಾನದ ಆಡಳಿತವು ಕಮಿಶನರ ಕೈಯಲ್ಲಿತ್ತು. ಗವರ್ನರ್ ಮತ್ತು ವೈಸರಾಯರಿಗೆ ಹೊಣೆಗಾರರಾಗಿದ್ದ ಅವರು ಪರ್ಯಾಯ ದಿವಾನರೇ ಆಗಿದ್ದು, ಸಮಸ್ತ ಅಧಿಕಾರವನ್ನು ಕೇಂದ್ರೀಕರಿಸಿಕೊಂಡಿದ್ದರು. ಮಾರ್ಕ್ ಕಬ್ಬನ್ (1834–61) ಹಾಗೂ ಬೌರಿಂಗ್ (1861–1870) ಸಶಕ್ತ ಕಮಿಶನರುಗಳಾಗಿದ್ದರು. ರಾಜನು ಕಮಿಶನರುಗಳಿಂದ ತನಗಾಗುತ್ತಿದ್ದ ಅಪಮಾನ ಕುರಿತು ಗವರ್ನರಿಗೆ ಬರೆದಿರುವ ಪತ್ರಗಳೂ ಕಮಿಶನರ ನಿರಂಕುಶತನವನ್ನು ಸೂಚಿಸುತ್ತವೆ.[1] ಇದಕ್ಕೆ ನವರತ್ನ ರಾಮರಾಯರು ತಮ್ಮ ಆತ್ಮಕತೆಯಲ್ಲಿ ಸ್ನೇಹಿತರೊಬ್ಬರ ಬಗ್ಗೆ ಹೇಳುವ ಪ್ರಸಂಗವು ಪೂರಕವಾಗಬಲ್ಲದು: "ಶಿವೋಜಿರಾಯರ ಪೂರ್ವಿಕರೊಬ್ಬರು ಮಂಟಗೋಮರಿ ಎಂಬ ಒಬ್ಬ ಬ್ರಿಟಿಷ್ ಅಧಿಕಾರಿಯ ಹತ್ತಿರ ಮುಂಬಯಿ ಪ್ರಾಂತದಲ್ಲಿ ಕೆಲಸ ಮಾಡುತ್ತಿದ್ದರಂತೆ. ಅವರ ದಕ್ಷತೆಯನ್ನೂ ನಿಯತ್ತನ್ನೂ ನೋಡಿ ಮೆಚ್ಚಿದ್ದ ಆ ಸರದಾರನು ತಾನು ಕಮಿಶನರ್‌ರ ಕಾಲದಲ್ಲಿ ಮೈಸೂರು ಸಂಸ್ಥಾನಕ್ಕೆ ದೊಡ್ಡ ಪದವೀಧರನಾಗಿ ಬಂದಾಗ, ಅವರನ್ನು ತನ್ನ ಸಂಗಡ ಕರೆದುಕೊಂಡು ಬಂದು, ಕೆಲವೇ ದಿನಗಳಲ್ಲಿಯೇ ಸಾಹೇದಾರಿ ಕೆಲಸಕ್ಕೆ ಏರಿಸಿದನಂತೆ. ಆ ಕೆಲಸದಲ್ಲಿ ಕೆಲವು ದಿನಗಳಿದ್ದು ನಿವೃತ್ತರಾದ ಅವರಿಗೆ ಅವರು ಕೇಳಿದ ಕಡೆ ಕೇಳಿದಷ್ಟು ಜಮೀನು ಕೊಟ್ಟನಂತೆ. ಆ ಸರದಾರನ ಭಾವಚಿತ್ರವನ್ನು ನಾನು ಶಿವೋಜಿರಾಯರ ಮನೆಯಲ್ಲಿ ಉಚ್ಚಸ್ಥಾನದಲ್ಲಿ ನೋಡಿದ್ದೇನೆ. ನೂರಾರು ಎಕರೆ ಜಮೀನನ್ನೂ ಭಾರಿ ಅಧಿಕಾರಗಳನ್ನೂ ಯಥೇಚ್ಛವಾಗಿ ಕೊಡಬಲ್ಲ, ಇತರರ ಸ್ವತ್ತಿನ ಮೇಲೆ ನಿರವಗ್ರಹವಾದ ಸ್ವಾತಂತ್ರ್ಯವಿದ್ದ ಹಿಂದಿನ ಬ್ರಿಟಿಷ್ ಸಾಹೇಬರುಗಳ ದರ್ಪ ಗೌರವ ಕೀರ್ತಿಗಳನ್ನು, ಈಚಿನ ಅಲ್ಪಾಧಿಕಾರವುಳ್ಳ ಇತತರು ಪಡೆಯಲು ಸಾಧ್ಯವೇ?"[2]

ಈ ವಿವರಣೆಯಲ್ಲಿರುವ ಉಚ್ಚಸ್ಥಾನ, ಭಾರೀಅಧಿಕಾರ, ನಿರವಗ್ರಹವಾದ ಸ್ವಾತಂತ್ರ್ಯ, ದರ್ಪ ಗೌರವ ಕೀರ್ತಿ ಮೊದಲಾದ ಪದಪುಂಜಗಳು, ಬ್ರಿಟಿಶರಿಗಿದ್ದ ಆತ್ಯಂತಿಕ ಅಧಿಕಾರದ ಸ್ವರೂಪವನ್ನು ಕಾಣಿಸುತ್ತಿವೆ. ದೇವರ ಅಥವಾ ಮಹಾರಾಜರ ಚಿತ್ರಪಟಗಳ ಹಾಗೆ ಆಂಗ್ಲಾಧಿಕಾರಿಗಳ ಚಿತ್ರಪಟವನ್ನಿಟ್ಟು ಗೌರವಿಸುವುದು, ಬ್ರಿಟಿಶ್ ಆಳ್ವಿಕೆಯ ಬಗ್ಗೆ ಅಧಿಕಾರಸ್ಥ ವರ್ಗದಲ್ಲಿದ್ದ ಮನೋಭಾವದ ಪ್ರತೀಕವಾಗಿದೆ. ಅವರನ್ನು ಸರದಾರರೆಂದೂ ಪರ್ಯಾಯ ದೊರೆಗಳೆಂದೂ ಜನರೂ ರಾಜಕೀಯ ಚರಿತ್ರಕಾರರೂ ಪರಿಭಾವಿಸಿದ್ದರು. ಅಧಿಕಾರಿಗಳಿಗಿದ್ದ ಈ ಪರಮಾಧಿಕಾರಗಳು ಚಾಮರಾಜರ ಹಾಗೂ ನಾಲ್ವಡಿಯವರ ಕಾಲದಲ್ಲಿ ಕಡಿಮೆಗೊಂಡವು. ಇದಕ್ಕೆ ಕಾರಣ, 1857ರ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಶ್ ಸರ್ಕಾರವು ದೇಶಿಯರಿಗೆ ಹೆಚ್ಚು ಅಧಿಕಾರ ಕೊಡುವ ರಾಜಕೀಯ ನೀತಿಯನ್ನು ಅನುಸರಿಸಿದ್ದು. ನಾಲ್ವಡಿಯವರ ಆಡಳಿತದ ಕಾಲದಲ್ಲಿ (1902–1940) ದೊರೆ ಹೆಚ್ಚು ಸ್ವತಂತ್ರವಾಗಿ ಅಧಿಕಾರ ಹೊಂದಿದ್ದನು.

ದಿವಾನರೇ ನಾಯಕರಾಗುವ ಪರಂಪರೆ ಬಹುಶಃ ಪೂರ್ಣಯ್ಯನವರಿಂದ ಶುರುವಾಯಿತು. ಅವರ ನಿರ್ಗಮನದ ಬಳಿಕ ಬಕ್ಷಿ ಬಾಲಾಜಿರಾವ್, ಬಾಬಾರಾಯ ರಾಮರಾವ್, ಸಿದ್ಧರಾಜ ಅರಸು, ಲಿಂಗರಾಜ ಅರಸು, ವೆಂಕಟರಾಜೇ ಅರಸು ದಿವಾನರಾದರು. ಹೆಚ್ಚಿನವರು ಸೈನಿಕಸೇವೆಯ ಹಿನ್ನೆಲೆಯವರು, ದುರ್ಬಲರು, ಆಂಗ್ಲರ ಹಿಡಿತದಲ್ಲಿದ್ದವರು. ಒಡೆಯರಾಳ್ವಿಕೆ ಮತ್ತೆ ಆರಂಭವಾದ ಬಳಿಕ (1881), ಕ್ರಮವಾಗಿ ರಂಗಾಚಾರ್ಲು, ಶೇಷಾದ್ರಿ ಅಯ್ಯರ್, ಪಿ.ಎನ್.ಮಾಧವರಾವ್, ತಂಬೂಚೆಟ್ಟಿ, ಪಿ.ಎನ್. ಕೃಷ್ಣಮೂರ್ತಿ, ಎಂ. ವಿಶ್ವೇಶ್ವರಯ್ಯ, ಕಾಂತರಾಜೇ ಅರಸು, ಮಿರ್ಜಾ ಇಸ್ಮಾಯಿಲ್, ಎನ್. ಮಾಧವರಾವ್ ಮುಂತಾದವರು ಬಂದರು. ಕೊನೆಯ ದಿವಾನರು ಆನಂದರಾವ್ (1941–1947). ಪೂರ್ಣಯ್ಯನವರ ಬಳಿಕ ಆಡಳಿತಾತ್ಮಕ ದಕ್ಷತೆಗೆ ಹೆಸರಾದವರೆಂದರೆ ರಂಗಾಚಾರ್ಲು, ಶೇಷಾದ್ರಿ ಹಾಗೂ ಮಿರ್ಜಾ. ವಿಶೇಷವೆಂದರೆ, ರಂಗಾಚಾರ್ಲು–ಮಿರ್ಜಾ ಬಗ್ಗೆ ಇರುವಷ್ಟು ಪದ್ಯಗಳು ಪೂರ್ಣಯ್ಯನವರ ಮೇಲಿಲ್ಲ. ಒಡೆಯರ ಅಧಿಕಾರ ಕಸಿದುಕೊಂಡವರೆಂಬ ಆಪಾದನೆಯುಳ್ಳ ಹೈದರ್–ಟಿಪ್ಪುವಿಗೆ ಅವರು ನಿಷ್ಠರಾಗಿದ್ದುದು ಹಾಗೂ ಮುಮ್ಮಡಿಯವರ ಜತೆ ಏರ್ಪಟ್ಟಿದ್ದ ವೈಮನಸ್ಸುಗಳು ಇದಕ್ಕೆ ಕಾರಣವಿರಬಹುದು. ಟಿಪ್ಪು ಮೇಲಿನ ಲಾವಣಿಗಳು ವಿಶ್ವಾಸಘಾತಕ ಎಂದೇ ಚಿತ್ರಿಸುತ್ತವೆ. ಆದರೆ ದಿವಾನರಾಗಿ ಪೂರ್ಣಯ್ಯನವರ ಆಡಳಿತ ಶೈಲಿ ಸಮರ್ಥರ ಮೂಲಕ ಮಾತ್ರವಲ್ಲ, ರಾಜಕೀಯ ಎದುರಾಳಿಗಳ ಮೂಲಕವೂ ಪ್ರಕಟವಾಯಿತು. ಕೊಡಗಿನ ದೊಡ್ಡವೀರರಾಜೇಂದ್ರನು ನಾಲ್ಕನೇ ಮೈಸೂರು ಯುದ್ಧದ ಬಳಿಕ ಬ್ರಿಟಿಶರಿಗೆ ಬರೆದ ಪತ್ರದಲ್ಲಿ ಇದನ್ನು ಕಾಣಬಹುದು.

"ಯೀಗ ಪೂರ್ನೈಯ್ಯಗೆ ಸರ್ವಾಧಿಕಾರಿಕೆ ಆಗಿಯಿದೆ ಆ ಪೂರ್ನೈಯನು ಬಾಂಮ್ಮಣ ಯಿದ್ದಾನೆ ಅವನ ಜಾತ್ತಿಗೂ ನಮ್ಮ ಜಾತ್ತಿಗೂ ಆಗುವುದಿಲ್ಲ ಮೊದಲು ನವಾಬ ಹೈದರನ ದಿವಸ್ತದಲ್ಲು ಟೀಪು ಸುಲುತಾನನ ದಿವಸ್ತಲ್ಲು ಯೀ ಪೂರ್ನೈಯನು ಯಿಲ್ಲಸಲ್ಲದ ಚುದ್ರೋಪದ್ರ ಹೇಳಿ ಬಹಳ ದೊರೆನ ಹಾಳುಮಾಡಿದಂತ್ತವ ನಮಗೆ ನಂಮ್ಮ ರಾಜ್ಯಕ್ಕೆ ಸಹ ಯಿವನ ಕಡೆಯಿಂದ ಬಹಳ ದುಕ್ಕ ತಟ್ಟಿಯಿದೆ"[3] ಇಲ್ಲಿರುವ ಭಯ–ತಕರಾರು ದೊರೆಯ ಬಗ್ಗೆಯಲ್ಲ, ದಿವಾನನ ಕುರಿತದ್ದು. ರಾಜಕೀಯ ಚಾಣಾಕ್ಷತೆಗೆ ಹೆಸರಾಗಿದ್ದ ಪೂರ್ಣಯ್ಯ (1846–1812) ಬಿಗಿಯಾದ ಆಡಳಿತಕ್ಕೆ ಹೆಸರಾಗಿದ್ದವರು. ಹೈದರ್ ತೀರಿಕೊಂಡಾಗ ಸಾವಿನ ಸುದ್ದಿಯನ್ನು ಅಡಗಿಸಿಟ್ಟು ದೂರದಲ್ಲಿದ್ದ ಟಿಪ್ಪುವನ್ನು ಕರೆಯಿಸಿಕೊಂಡು ಅರಾಜಕತೆಯಾಗದಂತೆ ರಾಜ್ಯಭಾರ ವರ್ಗಾಯಿಸಿದ್ದು, ಅವರ ಜಾಣ್ಮೆಗೆ ಸಾಕ್ಷಿಯಾಗಿತ್ತು. ಇದು ಟಿಪ್ಪು ಕೊನೆತನಕ ಪೂರ್ಣಯ್ಯನವರ ಮೇಲೆ ಗೌರವವಿರಿಸಲು ಕಾರಣವಾಯಿತು. "ಸುಲ್ತಾನನು ಯಾವುದೊಂದು ಮಹತ್ವದ ವಿಚಾರವನ್ನಾದರೂ ಅವರ ಆಲೋಚನೆಯನ್ನು ಕೇಳದೆ ನಿರ್ವಹಿಸುತ್ತಿದ್ದುದುದು ಅಪೂರ್ವ" ಎಂದು ಚರಿತ್ರಕಾರರು ವ್ಯಾಖ್ಯಾನಿಸುವುದರಲ್ಲಿ ತಪ್ಪೇನಿಲ್ಲ.[4]

ಮೈಸೂರು ಸಂಸ್ಥಾನದಲ್ಲಿ ಮುಮ್ಮಡಿ ಅಧಿಕಾರಕ್ಕೇರಿದ್ದು ಚಾರಿತ್ರಿಕ ತಿರುವಿನ ಘಟನೆ. ವೈರುಧ್ಯವೆಂದರೆ, ಮರುಆರಂಭವಾದ ಒಡೆಯರಾಳ್ವಿಕೆಗೆ, ಅವರು ರಾಜಕೀಯವಾಗಿ ದ್ವೇಷಿಸುತ್ತಿದ್ದ ಹೈದರ್–ಟಿಪ್ಪುಗಳ ದಿವಾನರಾಗಿದ್ದ ಪೂರ್ಣಯ್ಯನವರೇ ದಿವಾನರಾಗಿದ್ದು. ಈ ಪ್ರಸಂಗವನ್ನು ಎಂ.ಎಸ್.ಪುಟ್ಟಣ್ಣನವರು ವಿವರಿಸುತ್ತಾರೆ: "ಕೃಷ್ಣರಾಜ ಒಡೆಯರವರಿಗೆ ಮೈಸೂರ ರಾಜರೆಂದು ಪಟ್ಟವನ್ನು ಕಟ್ಟಿ, ಜನರಲ್ ಹಾರಿಸ್, ಕರನಲ್ ವೆಲ್ಲಿಸ್ಲಿ (ಡ್ಯೂಕ್ ಆಫ್ ವೆಲ್ಲಿಂಗಟನ್) ಈ ಕಂಪನಿ ಸರದಾರರು ಖ್ಯಾತಿಯನ್ನು ಪಡೆದರು. ಈ ಸರದಾರರ

ಅನುಮತಿಯನ್ನು ಪಡೆದು ದಿವಾನ ಪೂರ್ಣಯ್ಯನವರು ಮೇಲೆ ಹೇಳಿದ ಇಬ್ಬರು ರಾಜಪುತ್ರಿಯರನ್ನೂ ತಂದು ದೊರೆಗೆ ಮದುವೆ ಮಾಡಿದ್ದರು."[5] ಗಮನಿಸಬೇಕಾದ ಅಂಶಗಳೆಂದರೆ, ಬ್ರಿಟಿಶರು ದೇಶೀಯ ದೊರೆಗೆ ಪಟ್ಟಕಟ್ಟುತ್ತಿರುವುದು; ದೊರೆಯ ಲಗ್ನವನ್ನು ಆಂಗ್ಲ ಸರದಾರರ 'ಅನುಮತಿ' ಪಡೆದು ಮಾಡುತ್ತಿರುವುದು. ಇದು ರಾಜನ ಮೇಲೆ ಮಂತ್ರಿಗಿರುವ ಹೊಣೆಗಾರಿಕೆಯನ್ನೂ ಮಾತ್ರವಲ್ಲ, ರಾಜಮಂತ್ರಿಗಳಿಬ್ಬರ ಮೇಲೂ ಇರುವ ಬ್ರಿಟಿಶ್ ಸರ್ಕಾರದ ಯಜಮಾನಿಕೆಯನ್ನೂ ಖಚಿತಗೊಳಿಸುತ್ತದೆ.

ಒಡೆಯರ ಮೇಲೆ ಹುಟ್ಟಿದ ಬಹುತೇಕ ಪತ್ರಗಳು ಪೂರ್ಣಯ್ಯನವರನ್ನು ಗೌರವಾನ್ವಿತವಾಗಿ ಚಿತ್ರಿಸುತ್ತವೆ. ದುರ್ಬಲ ಅಥವಾ ಅಪ್ರಾಪ್ತ ವಯಸ್ಸಿನ ದೊರೆಯ ಆಳ್ವಿಕೆಯಲ್ಲಿ ಮಂತ್ರಿ ಮಹತ್ವವನ್ನು ಸೂಚಿಸುವ ರಾಜಕೀಯ ಸನ್ನಿವೇಶದಲ್ಲಿ, ಅಮಾತ್ಯ ಮಹತ್ವವನ್ನು ಸಾರುವ ಇಂತಹ ಪತ್ರಗಳಿಗೆ ಒತ್ತಾಸೆ ನಿರ್ಮಿಸಿತು. ಪರಸ್ಪರ ರಾಜಕೀಯ ಹಗೆಗಳಾಗಿದ್ದ ದೊರೆಗಳಿಗೆ ದಿವಾನರಾಗಿ ಕಾರ್ಯನಿರ್ವಹಿಸುವ ಪೂರ್ಣಯ್ಯನವರ ಅವಸ್ಥೆ 'ಮಂಜೂಷ'ದಲ್ಲಿ ಬರುವ ಅಮಾತ್ಯ ರಾಕ್ಷಸನದು ಕೂಡ. ಆಸ್ಥಾನವೈದ್ಯನ ಮಗನಾಗಿದ್ದ ಕೆಂಪುನಾರಾಯಣ, ಪೂರ್ಣಯ್ಯನವರ ಆಡಳಿತಕ್ಕೆ ಸಾಕ್ಷಿಯಾಗಿದ್ದವನು. ಆತ ಟಿಪ್ಪುವನ್ನು ನಂದರನ್ನಾಗಿ, ಬ್ರಿಟಿಶರನ್ನು ಚಾಣಕ್ಯನಾಗಿ, ರಾಕ್ಷಸನನ್ನು ಪೂರ್ಣಯ್ಯನನ್ನಾಗಿ ಕಲ್ಪಿಸಿಕೊಂಡಿದ್ದರೆ ಸೋಜಿಗವಿಲ್ಲ. ಚಾಣಕ್ಯನಿಗೆ ತನ್ನ ಉದ್ದೇಶಗಳಿಗೆ ಉಪಕರಣವಾಗುವ ರಾಜಕುಮಾರನನ್ನು ಪಟ್ಟಕ್ಕೆ ತರುವಲ್ಲಿ, ತನಗಾಗದ 'ದುಷ್ಟ'ರನ್ನು ಶಿಕ್ಷಿಸುವ ಆಶಯವೂ ಇತ್ತು. ಬ್ರಿಟಿಶರಿಗೆ ಮುಮ್ಮಡಿಯನ್ನು ಪಟ್ಟಕ್ಕೇರಿಸುವಲ್ಲಿ ಉಳಿದಿದ್ದ ಟಿಪ್ಪುವಿನ ಬೆಂಬಲಿಗರನ್ನು ಹದ್ದುಬಸ್ತಿನಲ್ಲಿಡುವ ಆಶಯವಿತ್ತು. ಹೀಗಾಗಿ, ಕವಿಯು ಟಿಪ್ಪು-ಬ್ರಿಟಿಷರು-ಪೂರ್ಣಯ್ಯ-ಒಡೆಯರ ಕೂಡುಕತೆಯನ್ನು ಕ್ರಿಸ್ತಪೂರ್ವ ಕಾಲದ ಚಂದ್ರಗುಪ್ತ ಚಾಣಕ್ಯರ ಕಥೆಯ ಮೂಲಕ ಪರೋಕ್ಷವಾಗಿ ಕಟ್ಟಿದಂತೆ ಭಾಸವಾಗುತ್ತದೆ. ಆಡಳಿತದಲ್ಲಿ ಪಳಗಿದ ವಯೋವೃದ್ಧ ಪೂರ್ಣಯ್ಯನವರಿಗೆ ತರುಣ ದೊರೆಯ ಜತೆ ತಕ್ಕ ಹೊಂದಾಣಿಕೆ ಸಾಧ್ಯವಾಗಲಿಲ್ಲ. ಅವರು ದೊರೆಯನ್ನು ಉಪೇಕ್ಷಿಸಿ ಅಧಿಕಾರ ಚಲಾಯಿಸುತ್ತಿದ್ದರು ಎಂದು ವ್ಯಾಖ್ಯಾನಗಳಿವೆ. ತಮ್ಮ ನಂತರ ದಿವಾನಗಿರಿ ತನ್ನ ವಂಶದವರಿಗೇ ಹೋಗಬೇಕೆಂಬ ತಹತಹ ಅವರಿಗಿದ್ದುದನ್ನು ವಿರೋಧಿಸುವ ಲಾಬಿಯೂ ಅರಮನೆಯಲ್ಲಿ ಏರ್ಪಟ್ಟಿತ್ತು. ದಿವಾನ-ದೊರೆ ನಡುವಣ ಸಂಘರ್ಷವನ್ನು, ಕರ್ನಲ್ ಕೋಲ್ ಮದರಾಸಿನ ಗವರ್ನರಿಗೆ ಬರೆದ ಗುಪ್ತವರದಿಗಳಲ್ಲಿ ವಿವರಿಸುತ್ತಾನೆ.[6]

ಕಡೆಗೆ ಪೂರ್ಣಯ್ಯ ನಿವೃತ್ತಿ ಪಡೆದು(1811) ಶ್ರೀರಂಗಪಟ್ಟಣಕ್ಕೆ ಹೋದ ಮರುವರ್ಷವೇ ನಿಧನರಾದರು. ಅವರ ನಿವೃತ್ತಿಯಲ್ಲಿ ಬ್ರಿಟಿಶರ ಪಾತ್ರವನ್ನು ಕನ್ನಡ ಪತ್ರಗಳು ಕಾಣಿಸುವುದಿಲ್ಲ. ವಾಸ್ತವವಾಗಿ ಬ್ರಿಟಿಶರಿಗೆ ಕಂಪನಿ ಹಿತಾಸಕ್ತಿ ರಕ್ಷಿಸುವ ಸ್ಥಳೀಯ ದೊರೆ/ದಿವಾನರ ಅಗತ್ಯವಿತ್ತು. ಈ ಹಿನ್ನೆಲೆಯಲ್ಲಿ ವಸಾಹತುಶಾಹಿ ಪತ್ರಗಳು ದೊರೆಯ ಅಪಮಾನ ಮತ್ತು ದಿವಾನರ ಅಸಹನೆಗಳನ್ನು ವಿವರವಾಗಿ ಚಿತ್ರಿಸುವುದಿಲ್ಲ. ಪೂರ್ಣಯ್ಯನ ವಂಶಜರು ದಿವಾನರಾಗಿದ್ದ ಕಾಲಾವಧಿಯಲ್ಲಿ ಆಸ್ಥಾನಲೇಖಕರಿಗೆ ಈ ಕುರಿತು ನಿಷ್ಠುರವಾಗಿ ಚಿತ್ರಿಸುವುದು ಕಷ್ಟವೂ ಇರಲಿಲ್ಲ. ಆದರೆ ಈ ಒತ್ತಡವಿಲ್ಲದ ಕಾಲದಲ್ಲಿದ್ದ ದೇವಚಂದ್ರನು ಪೂರ್ಣಯ್ಯವನರ ಬಗ್ಗೆ ಕಟುವಾಗಿ ಬರೆಯುತ್ತಾನೆ. ಇದಕ್ಕೆ ಕಾರಣ, ಪೂರ್ಣಯ್ಯನವರ ಆಳ್ವಿಕೆ ಜೈನರಿಗೆ ಅನುಕೂಲವಾಗಿರಲಿಲ್ಲ. ಆದರೆ ಟಿಪ್ಪುವನ್ನು ದುರಂತನಾಯಕನಂತೆ ಚಿತ್ರಿಸುವ ಲಾವಣಿಗಳು ಪೂರ್ಣಯ್ಯನವರನ್ನು ಖಳನಂತೆ ಕಾಣಿಸುತ್ತವೆ. ಬಲಿಷ್ಠ ಎದುರಾಳಿಯ ವಿರುದ್ಧ ಹೋರಾಡಿ

ಪುತಾತ್ಮರಾದವರೇ ಜನಪದಕ್ಕೆ ನಾಯಕರಾಗುವುದರಿಂದ. ರಾಜಿಮಾಡಿಕೊಂಡು ಅಧಿಕಾರದಲ್ಲಿ ಮುಂದುವರೆದವರು ಅದಕ್ಕೆ ನಂಬಿಕೆದ್ರೋಹಿಗಳಂತೆ ಕಾಣುವುದು ಸಹಜ; ಆಳುವವರ್ಗವನ್ನು ನಿರ್ವಚಿಸುವ ವಿಷಯದಲ್ಲಿ ಆಸ್ಥಾನದ ಅಕ್ಷರಸ್ಥ ಪಠ್ಯಗಳಿಗೂ ಜನಪದ ಕಥನಗಳಿಗೂ ಇರುವ ಲೋಕದೃಷ್ಟಿ ಮತ್ತು ರಾಜಕೀಯ ಪ್ರಜ್ಞೆಯ ತಾತ್ವಿಕ ವ್ಯತ್ಯಾಸವಿದು.

ಒಡೆಯರ ಆಳ್ವಿಕೆಯಲ್ಲಿ ಸರ್ವಾಧಿಕಾರಿಯಾಗಿದ್ದ ಹೈದರನ ಸೈನಿಕ ಸಾಹಸ ಕುರಿತ **'ಹೈದರನಾಮೆ'**ಯು 18ನೇ ಶತಮಾನದ ಕೊನೆಯ ಭಾಗದಲ್ಲಿಯೇ ಪ್ರಕಟವಾಗಿತ್ತು. ಅದು ಸರ್ವಾಧಿಕಾರಿ ದೊರೆಯಾಗಿ ರೂಪಾಂತರಗೊಳ್ಳುವ ಕತೆಯೂ ಹೌದು. ಆದರೆ ಸಚಿವಾಯತ್ತ ಪ್ರಭುತ್ವದ ಪ್ರತಿಪಾದನೆಯನ್ನು ವ್ಯವಸ್ಥಿತವಾಗಿ ಮಾಡುವುದು 'ಮಂಜೂಷ'ವೇ. ಕವಿ ಆರಂಭದಲ್ಲಿ ಘೋಷಿಸುವ ಆಶಯದಲ್ಲಿ ಇದು ಸ್ಪಷ್ಟವಾಗುತ್ತದೆ: "ಸಕಲಶ್ರೇಯಸ್ಸನ್ನೂ ಅಪೇಕ್ಷಿಸುವ ಅರಸರೂ ಮಂತ್ರಾಲೋಚನಾಪೇಕ್ಷಿಗಳಾದ ಮಂತ್ರಿಗಳೂ ಅವಶ್ಯವಾಗಿ ವಿಚಾರಿಸಿ ತಿಳಿದು ನಡೆಯುವುದಕ್ಕೆ ಯೋಗ್ಯವಾಗಿರುವಂತೆ ಕಾಮಂದಕಾದಿ ಮುನಿಗಳಿಂದ ಹೇಳಲ್ಪಟ್ಟ ದಂಡನೀತಿ ಶಾಸ್ತ್ರಪ್ರಯೋಗದಲ್ಲಿ ಪ್ರವೀಣನಾದ ಚಾಣಕ್ಯನೆಂಬ ಬ್ರಾಹ್ಮಣಶ್ರೇಷ್ಠನು ತನಗೆ ಅವಮಾನವನ್ನು ಮಾಡಿದ ನವನಂದರನ್ನು ಕಪಟದಿಂದ ನಿಗ್ರಹಿಸಿ ಶರಣಾಗತನಾದ ಚಂದ್ರಗುಪ್ತನಿಗೆ ಆ ನಂದರಾಜ್ಯಾಧಿಪತ್ಯವನ್ನು ಉಂಟುಮಾಡಿದನೆಂದು ಸಂಕ್ಷೇಪವಾಗಿ ಪುರಾಣದಲ್ಲಿ ಹೇಳಿದ ಕಥೆಯನ್ನು ಈಗ ಕೆಂಪುನಾರಾಯಣನೆಂಬ ಕವಿಯು ಕರ್ಣಾಟ ಭಾಷೆಯಿಂದ ವಿಸ್ತರಿಸಿ ಇದಕ್ಕೆ ಮುದ್ರಾಮಂಜೂಷವೆಂಬ ಪೆಸರಿಟ್ಟು ಪೇಳ್ವೆನ್".

ಈ ಪೂರ್ವಪೀಠಿಕೆಯು ಸೂತ್ರಧಾರನು ನಾಟಕದ ಕತೆಯನ್ನು ಸಂಕ್ಷಿಪ್ತವಾಗಿ ತಿಳಿಸುವಂತಿದೆ. ಇದು 'ಅರಸುಗಳಿಗಿದು ವೀರ, ದ್ವಿಜರಿಗೆ ಪರಮವೇದದ ಸಾರ, ಮಂತ್ರಿಜನಕೆ ಬುದ್ಧಿಗುಣ' ಎನ್ನುತ್ತ ತನ್ನ ಕಾವ್ಯವು ರಾಜಕೀಯ ಪಠ್ಯವೂ ಆಗಿದೆ ಎಂದು ಕುಮಾರವ್ಯಾಸ ಸೂಚಿಸುವುದನ್ನು ನೆನಪಿಸುತ್ತದೆ. ಇಲ್ಲೂ ಕುಮಾರವ್ಯಾಸ ಬಳಸುವ 'ಅರಸ' ಮತ್ತು 'ಮಂತ್ರಿ' ಶಬ್ದಗಳ ಪ್ರಸ್ತಾಪವಿದೆ. ಆದರೆ ಮಂಜೂಷಕಾರನು 'ಅರಸು' ಶಬ್ದ ಬಳಸುವುದಕ್ಕೆ ಆತನ ಆಶ್ರಯದಾತರು ಅರಸು ಕುಲದವರಾಗಿರುವ ಕಾರಣವಿದ್ದೀತು. ಕುಮಾರವ್ಯಾಸನು ಅರಸು ದ್ವಿಜ ಮಂತ್ರಿಯರನ್ನು ಕ್ರಮವಾಗಿ ತಂದರೆ, ಇಲ್ಲಿ ಅರಸು ಮತ್ತು ಮಂತ್ರಿಯನ್ನು ಮಾತ್ರ ಸೂಚಿತವಾಗುತ್ತಿದೆ. ಪೀಠಿಕೆಯು ಅರಸು ಮತ್ತು ಅಮಾತ್ಯರ ಲಕ್ಷಣವನ್ನು 'ಸಕಲಶ್ರೇಯಸ್ಸನ್ನೂ ಅಪೇಕ್ಷಿಸುವ' ಹಾಗೂ 'ಮಂತ್ರಾಲೋಚನಾಪೇಕ್ಷಿ' ಎಂಬ ಕಾರ್ಯಭಾರಸೂಚಕ ವಿಶೇಷಣಗಳಲ್ಲಿ ಸ್ಪಷ್ಟಪಡಿಸುತ್ತಿದೆ. ಇಲ್ಲಿ ಅಧಿಕಾರದ ವಿಭಜನೆ ಮತ್ತು ಅನನ್ಯತೆ ಎರಡೂ ಖಚಿತಗೊಂಡಿವೆ. ಸಕಲರ ಶ್ರೇಯಸ್ಸನ್ನು ಹಾರೈಸುವ ಅರಸಿನ ಆಶಯವನ್ನು ಜಾರಿ ತರುವವನು ಮಂತ್ರಾಲೋಚನೆ ಮಾಡಬಲ್ಲ ಮಂತ್ರಿ. 'ಮಂತ್ರ' ಶಬ್ದವು ಧಾರ್ಮಿಕಲೋಕದ 'ಮಂತ್ರ'ವನ್ನೂ ರಾಜಕೀಯ ಲೋಕದ 'ಆಲೋಚನೆ'ಯನ್ನೂ ಒಳಗೊಂಡಿದ್ದು, ರಾಜಕಾರಣವು ಒಂದು ಧರ್ಮವೆಂದು ಧ್ವನಿಸುತ್ತಿದೆ. ಕನ್ನಡ ಪಠ್ಯಗಳಲ್ಲಿ ಚತುರ ಮಂತ್ರಿಗಳ ಚಿತ್ರಣಗಳಿವೆ. **'ಆದಿಪುರಾಣ'**ದಲ್ಲಿ ಭರತ ಬಾಹುಬಲಿ ಮಾಡಲು ನಿರ್ಧರಿಸಿದ ಸಾಮೂಹಿಕ ಯುದ್ಧವನ್ನು ತಪ್ಪಿಸುವವರು ಮಂತ್ರಿಗಳು. ಆದರೆ ಇವರು ಚಾಣಕ್ಯ, ಪೂರ್ಣಯ್ಯ, ರಂಗಾಚಾರ್ಲು ಅವರಂತೆ ಕಥಾನಾಯಕರಲ್ಲ. ಸಾಲಾರಜಂಗನ ಚರಿತ್ರೆಯಲ್ಲಿ ಲೇಖಕ "ಪ್ರಕೃತ ನಮ್ಮ ಚರಿತ್ರನಾಯಕನಾದ ಸಾಲಾರ್‌ಜಂಗ್ ಬಹದ್ದೂರನು ದೇಶೀಯ ಸಂಸ್ಥಾನಗಳ ಮಂತ್ರವರ್ಗದಲ್ಲಿ ಉತ್ತಮ ತರಗತಿಗೆ ಸೇರಿದವನು. ಈತನ ಕಾಲದಲ್ಲಿ ಹೈದರಾಬಾದು ಸಂಸ್ಥಾನವು ಅತಿಶಯ ಅಭಿವೃದ್ಧಿಗೆ ಸ್ಥಿತಿಗೆ ಬಂದು ಸಂಪನ್ನವು

ಮರ್ಯಾದೆಯಿಂದ ಸುರಕ್ಷಿತವಾಗಿ ವಾಸಿಸಲು ಯೋಗವಾಯಿತು" ಎಂದು ಮುನ್ನುಡಿಯಲ್ಲಿ ಹೇಳುವರು. ಇಲ್ಲಿ 'ಚರಿತ್ರನಾಯಕ' ಎಂಬ ಪರಿಭಾಷೆ ಮಾರ್ಮಿಕವಾಗಿದೆ. ದೊರೆಗಳು ನಾಯಕರಾಗಿರುವ ಪಠ್ಯಗಳಲ್ಲಿಯೂ ಮಂತ್ರಿಮಹತ್ವವೇ ತುಂಬಿಕೊಂಡಿದೆ. ಮುಮ್ಮಡಿಯವರ ಮೇಲೆ ಪಠ್ಯರಚಿಸುವ ಲಿಂಗಣ್ಣಯ್ಯನವರು 'ವಿಷಮ ಸನ್ನಿವೇಶಗಳು: ಮಹಾರಾಜರ ಅಡಳಿತ ವಿಚಕ್ಷಣೆ' ಎಂಬ ಅಧ್ಯಾಯವನ್ನು 'ಮಂತ್ರಿಯುಳ್ಳಾ ರಾಜ್ಯವೆಂತಿರಿಸಿದಂತಕ್ಕು, ಮಂತ್ರಿಯಿಲ್ಲದವನ ಸಾಮ್ರಾಜ್ಯ ಕೀಲ್ಗಳೆದ ಜಂತ್ರದಂತಕ್ಕು ಸರ್ವಜ್ಞ' ಎಂಬ ವಚನದಿಂದ ಆರಂಭಿಸುವರು. ಬಿಕ್ಕಟ್ಟಿನ ಸನ್ನಿವೇಶಗಳಲ್ಲಿ ದೊರೆಯ ಯಶಸ್ಸಿಗೆ ಕಾರಣವಾಗುವವನು ಮಂತ್ರಿ ಎಂಬ ಗ್ರಹಿಕೆ ಇಲ್ಲಿನದು. ಚಾಮರಾಜೇಂದ್ರ ಒಡೆಯರ್ ಕುರಿತ ಲಿಂಗಯ್ಯನವರ ಪಠ್ಯ, ದೊರೆಯ ಯಶಸ್ಸಿಗೆ ದಿವಾನರು ಕಾರಣ ಎಂಬ ಧೋರಣೆಯಲ್ಲೇ ರೂಪುಗೊಂಡಿದೆ: "ರಾಜರು ಸರ್ವಗುಣ ಸಂಪನ್ನರಾದರೂ ಅವರಿಗೆ ಸುಮಂತ್ರಿಗಳಿರಬೇಕು. ಅಂತಹ ಸುಮಂತ್ರಿಗಳ ಸಹಾಯದಿಂದ ಅವರು ತಮಗೆ ಬರುವ ಬಾಧೆಗಳನ್ನೂ ವಿಪತ್ತುಗಳನ್ನೂ ಪರಿಹರಿಸಿಕೊಂಡು ಸೌಭಾಗ್ಯವನ್ನು ಪಡೆಯಬಹುದು. ರಾಜಾಂಗಕ್ಕೆ ಸೇರಿದ ಅಧಿಕಾರಿಗಳಲ್ಲಿ ಆಯಾ ಸ್ಥಾನಕ್ಕೆ ಯೋಗ್ಯರಾದವರನ್ನೇ ಹುಡುಕಿ ಇಟ್ಟುಕೊಳ್ಳಬೇಕಾದುದೇ ರಾಜರಿಗಿರಬೇಕಾದ ಪರಿಜ್ಞಾನವು. ಈ ಅಧಿಕಾರಿಗಳಲ್ಲೆಲ್ಲಾ ಮಂತ್ರಿತ್ವವು ಸರ್ವಶ್ರೇಷ್ಠವಾದುದು. ಅದಕ್ಕೆ ಯುಕ್ತಾಯುಕ್ತ ಪರಿಜ್ಞಾನಶೀಲರೂ ದಕ್ಷರೂ ಆದ ಮಂತ್ರಿಶ್ರೇಷ್ಠರನ್ನು ಇಟ್ಟುಕೊಳ್ಳಬೇಕು. ಅವರ ಹೊರತು ರಾಜ್ಯಭಾರವನ್ನು ನಿರ್ವಹಿಸಲು ಆಗುವುದಿಲ್ಲ."

'ಮಂಜೂಷ'ದ ಪಾತ್ರಗಳ ಮಾತುಕತೆಯಲ್ಲೂ ಪತ್ರಗಳಲ್ಲೂ ರಾಜನೀತಿ ಶಾಸ್ತ್ರಗಳಿಂದಲೂ ಹೆಕ್ಕಿ ಜೋಡಿಸಿದ ಹೇಳಿಕೆಗಳಿವೆ. ಇವು ಸಾಮಾನ್ಯವಾಗಿ ದೊರೆ-ಮಂತ್ರಿಯರ ಸಮಾಲೋಚನ ಸನ್ನಿವೇಶಗಳಲ್ಲಿ ಬರುತ್ತವೆ. ಇದಕ್ಕೆ ತಕ್ಕಂತೆ ಕಥಾನಾಯಕನು 'ದಂಡನೀತಿ ಶಾಸ್ತ್ರಪ್ರಯೋಗದಲ್ಲಿ ಪ್ರವೀಣ'ನು: "ಶುಕ್ರಾಚಾರ್ಯನಿಂದ ಪ್ರಣೀತವಾದ ದಂಡನೀತಿಶಾಸ್ತ್ರಾಧ್ಯಯನದಿಂದ ನಾನು ಅವರಿಗೆ ಧರ್ಮಪುತ್ರನಾದುದು ಸತ್ಯವಾದರೆ, ಶುಕ್ರಾಚಾರ್ಯ ಪ್ರಣೀತವಾದ ಕಾಲದಂಡೋಪಾದಿಯಲ್ಲಿರುವ ದಂಡನೀತಿಯಿಂದಲೇ ನಿಮ್ಮಂ ನಿಗ್ರಹಿಸಿ ಬಿಚ್ಚಿರುವ ಈ ನನ್ನ ಶಿಖೆಯಂ ಬಂಧಿಸುವೆನು" ಎಂದು ಶಪಥ ತೊಟ್ಟವನು. ಪೀಠಿಕೆಯಲ್ಲಿ ಕವಿ ತನ್ನ ಕಥಾನಾಯಕ 'ಬ್ರಾಹ್ಮಣಶ್ರೇಷ್ಠ'ನಾಗಿದ್ದು ದೊರೆಗೆ ಕಡಿಮೆಯಿಲ್ಲ ಎಂದು ಪರೋಕ್ಷವಾಗಿ ಸೂಚಿಸಿಯಾಗಿದೆ. ಈ ಕಥಾನಾಯಕ ಅವಮಾನಿಸಿದವರನ್ನು 'ಕಪಟದಿಂದ ನಿಗ್ರಹ' ಮಾಡಿದವನು. 'ಕುಟಿಲ' ಶಬ್ದದಿಂದ ನಿಷ್ಪತ್ತಿಯಾಗಿರುವ 'ಚಾಣಕ್ಯ'ನ ಹೆಸರು ಕೌಟಿಲ್ಯವು ತಂತ್ರಗಾರಿಕೆಯ ನುಡಿಗಟ್ಟಾಗಿದೆ. ದುರ್ಬಲರು ಸಬಲರ ಮೇಲೆ ಯುದ್ಧಮಾಡಿ ಗೆಲುವು ಸಾಧಿಸುವ ಕಡೆಯಲ್ಲೆಲ್ಲ ಕುಟಿಲತೆ ರಾಜಕೀಯ ಮೌಲ್ಯವಾಗಿ ಮಾನ್ಯಗೊಳ್ಳುತ್ತದೆ. ಕವಿ, ಬ್ರಿಟಿಶರು ಮೈಸೂರು ಸಂಸ್ಥಾನವನ್ನು ಒಳಗೊಂಡಂತೆ ಭಾರತದ ರಾಜ್ಯಗಳನ್ನು ಒಡೆದಾಳುವ ತಂತ್ರದಿಂದ ಗೆಲ್ಲುತ್ತಿದ್ದುದಕ್ಕೆ ಸಾಕ್ಷಿಯಾದವನು. ಹೀಗಾಗಿಯೆ 'ಮಂಜೂಷ'ವು ಚಾಣಕ್ಯನೆಂಬ ವ್ಯಕ್ತಿಕೇಂದ್ರಿತ ಕಥನಕ್ಕಿಂತ ತಂತ್ರಗಾರಿಕೆ ಮುಖ್ಯವಾಗುವ ರಾಜನೀತಿಯ ಅನ್ವಯಿಕತೆಯ ಪಠ್ಯ ಕೂಡ. ಪಠ್ಯದ ಮಹತ್ವ ಇರುವುದು ಅದರ ಕಲಾತ್ಮಕ ಸಾಧನೆಯಲ್ಲಲ್ಲ; ಸಂಕೀರ್ಣವಾದ ಚಾರಿತ್ರಿಕ ಸನ್ನಿವೇಶದಲ್ಲಿ ನಿರ್ದಿಷ್ಟ ರಾಜಕೀಯ ಸಂದೇಶವನ್ನು ನೀಡುತ್ತಿರುವುದರಲ್ಲಿ. ಕಂಪನಿಯ ರಾಜ್ಯವಿಸ್ತರಣೆ ಮತ್ತು ವಣಿಕನೀತಿಯ ಯುದ್ಧಗಳಿಂದ ನಿರ್ವಚಿಸಲ್ಪಟ್ಟ ಒಡೆಯರ ರಾಜಕೀಯ ಬಿಕ್ಕಟ್ಟಿನ ಹಿನ್ನೆಲೆಯಿಲ್ಲದಿದ್ದರೆ, ಬಹುಶಃ ಕ್ರಿಸ್ತಪೂರ್ವ ಕಾಲದ ಗಂಗಾಬಯಲಿನ ಚಾಣಕ್ಯನ

ಕಥೆ ಕನ್ನಡದಲ್ಲಿ ಮರುಹುಟ್ಟು ಪಡೆಯುತ್ತಿರಲಿಲ್ಲ. 'ಅವಮಾನವಂ ಮಾಡಿದ ನವನಂದರಂ ಕಪಟದಿಂದ ನಿಗ್ರಹಿಸುವ' ಹಾಗೂ 'ಶರಣಾಗತನಾದ ಚಂದ್ರಗುಪ್ತನಿಗೆ ನಂದರಾಜ್ಯಾಧಿಪತ್ಯವನ್ನು ಉಂಟುಮಾಡುವ' ಚಾಣಕ್ಯನ ಉದ್ದೇಶಗಳು, ಅವನ ವ್ಯಕ್ತಿವಿಶಿಷ್ಟ ಗುಣಗಳಾಗಿ ಕಂಡರೂ, ಇವು ಆಡಳಿತದಲ್ಲಿದ್ದು ದಂಡನೀತಿಶಾಸ್ತ್ರ ಪ್ರಯೋಗಿಸುವ ಎಲ್ಲರಲ್ಲಿರುವ ಮೂಲಭೂತ ಪರಿಕರಗಳು. ಸಾಮಾನ್ಯರ ಬದುಕಿನಲ್ಲಿ ಕುಟಿಲತೆ ಕಪಟಗಳು ವಂಚನೆ ವಿಶ್ವಾಸಘಾತಕತನದ ನೇತ್ಯಾತ್ಮಕ ಸಂಗತಿಗಳಾದರೆ, ರಾಜಕಾರಣದಲ್ಲಿ ಅವು ಆಡಳಿತ ಮತ್ತು ಯುದ್ಧತಂತ್ರದ ಕುಶಲತೆಗಳು. 'ಮಂಜೂಷ'ದಲ್ಲಿ ಅಧಿಕಾರಸ್ಥ ರಾಜರನ್ನು ಕೊಂದು ಹೊಸರಾಜರನ್ನು ಕೂರಿಸುವ ಅಧಿಕಾರ ಬದಲಾವಣೆಯ ಕಥನ ಮಾತ್ರವಿಲ್ಲ; ಅಧಿಕಾರ ಪಲ್ಲಟದಲ್ಲಿ ನಡೆಯುವ ಪಿತೂರಿ ಮಸಲತ್ತು ಪ್ರತಿತಂತ್ರಗಳ ಕಥನವೂ ಇದೆ. ಇಲ್ಲಿ ರಾಜನೀತಿ ಹೇಳಿಕೆಗಳ ಮೂಲಕ ಮಾತ್ರವಲ್ಲ, ಕತೆಗಳ ಮೂಲಕವೂ ಪ್ರಕಟವಾಗುತ್ತದೆ.

'ಮಂಜೂಷ'ವು ಆಡಳಿತಶಾಸ್ತ್ರದಲ್ಲಿ ವ್ಯಕ್ತಿಯ ಸಾಹಸಗಾಥೆಯನ್ನು ಬೆರೆಸುವ ಕಥನವಿನ್ಯಾಸದಲ್ಲಿ ರೂಪಿತಗೊಂಡಿದೆ. ಇಲ್ಲಿ ಚಾಣಕ್ಯ, ರಾಕ್ಷಸ, ಶಬರವರ್ಮ ಎಂಬ ಮೂವರು ಅಮಾತ್ಯರಿದ್ದಾರೆ. ರಾಕ್ಷಸನು ಅಮಾತ್ಯನಾಗಿ ಅಧಿಕಾರ ವಹಿಸಿಕೊಂಡ ಬಳಿಕ ರಾಜ್ಯದಲ್ಲಿ ಕೈಗೊಳ್ಳಲು ಇಚ್ಛಿಸಿರುವ ಕಾರ್ಯಗಳನ್ನು ವಿವರಿಸುವುದು ಸಚಿವಾಯತ್ತ ಮಾದರಿಯನ್ನು ಸ್ಪಷ್ಟಪಡಿಸುತ್ತದೆ: "ಅಯ್ಯಾ ಕುಮಾರನೇ, ಆರ್ಯ ಚಾಣಕ್ಯಂ ಮಾಡಿದ ಉಪಕಾರಕ್ಕೆ ನಾವು ಯಾವ ಪ್ರತ್ಯುಪಕಾರಮಂ ಮಾಡಬಲ್ಲೆವು? ಅವರ ಸ್ಮರಣೆಗೋಸ್ಕರ ನಿನ್ನ ಆಜ್ಞೆಯಾದಲ್ಲಿ ಅವರು ವಿಶ್ರಮಿಸಿಕೊಂಡಿದ್ದ ಪರ್ಣಶಾಲಾ ಸ್ಥಳದಲ್ಲಿ ವಿಷ್ಣ್ವಾಲಯಮಂ ಕಟ್ಟಿಸಿ, ಅಲ್ಲಿ ಶ್ರೀ ಲಕ್ಷ್ಮೀನೃಸಿಂಹದೇವರಂ ಪ್ರತಿಷ್ಠೆಮಾಡಿಸಿ, ಆ ದೇವರ ಸನ್ನಿಧಿಯಲ್ಲಿ ನಮ್ಮ ಆರ್ಯ ವಿಷ್ಣುಗುಪ್ತರ ವಿಗ್ರಹಮಂ ಪ್ರತಿಷ್ಠಿಸಿ, ಅತಿ ಸಂಭ್ರಮದಿಂದ ನಿತ್ಯೋತ್ಸವ ಪಕ್ಷೋತ್ಸವ ಮಾಸೋತ್ಸವ ಸಂವತ್ಸರೋತ್ಸವಗಳಿಗೆ ಸರ್ವಮಾನ್ಯಂಗಳಂ ಮಾಡಿ, ಅವರು ಕುಳಿತಿದ್ದ ಕಡೆಯಲ್ಲೆಲ್ಲವೂ ಅನ್ನಸತ್ರಗಳಂ ಕಟ್ಟಿಸಿ ಅವರು ಸಂಚರಿಸಿದ ಪ್ರದೇಶಗಳಲ್ಲಿ ಅಗ್ರಹಾರ ತಟಾಕ ಕೂಪಾರಾಮಂಗಳಂ ನಿರ್ಮಿಸಿ ನೈಮಿಶ್ಯಾರಣ್ಯಮಾರ್ಗಂಗಳಂ ಅರವಟಿಗೆ ಸಾಲುತೋಪು ಸರೋವರ ಪುಷ್ಪವಾಟಿ ಇವುಗಳಿಂದಲಂಕೃತಗಳಂ ಗೆಯ್ಯುವೆನು" ಎನ್ನುತ್ತಾನೆ. ಇದಕ್ಕುತ್ತರವಾಗಿ ಚಂದ್ರಗುಪ್ತನು "ಸ್ವಾಮೀ ಯಜಮಾನರೇ, ನನ್ನ ಪಿತಾಮಹರಾದ ಸರ್ವಾರ್ಥಸಿದ್ಧಿರಾಜರು ನನ್ನ ತಂದೆಯಾದ ಮೌರ್ಯನೂ ನನ್ನ ಆಚಾರ್ಯನಾದ ಚಾಣಕ್ಯರೂ ಇವರೆಲ್ಲರ ಸ್ಥಾನಕ್ಕೆ ತಾವೇ ಪ್ರತಿನಿಧಿಗಳಾಗಿರುವುದರಿಂದ ಈ ದಿನ ಮೊದಲ್ಗೊಂಡು ಯಾವ ಕೆಲಸಗಳಂ ಹೇಗೆ ನಡಸಬೇಕೋ ನನ್ನಂ ಕೇಳದೆ ತಾವೇ ಆ ರೀತಿಯಲ್ಲಿ ನಡೆಸಬೇಕು" ಎಂದುತ್ತರಿಸುವನು. ಅಮಾತ್ಯನು 'ನಿನ್ನ ಆಜ್ಞೆಯಾದಲ್ಲಿ' ಎಂದರೆ, ರಾಜ 'ನನ್ನಂ ಕೇಳದೆ' ಮಾಡಬಹುದು ಎನ್ನುವನು. ರಾಜ-ಮಂತ್ರಿಯರ ಈ ಅಧಿಕಾರ ವಿನ್ಯಾಸಕ್ಕೆ ಕ್ಷತ್ರಿಯ ಶರಣಾಗತಿ-ಬ್ರಾಹ್ಮಣ ಪರಮಾಧಿಕಾರದ ವಿನ್ಯಾಸವೂ ಇದೆ. ಈ ವಿನ್ಯಾಸದ ಮಾತುಕತೆಗಳು 'ಮಂಜೂಷ'ದಲ್ಲಿ ಮತ್ತೆ ಮತ್ತೆ ಬರುತ್ತವೆ. ಪರ್ವತರಾಜನು ಕಾಮಾಟದೇಶದವರ ಯುದ್ಧಸಿದ್ಧತೆ ಕೇಳಿದಾಗ ಅವನ ಮಂತ್ರಿ 'ಎಷ್ಟು ಗುಣಸಂಪನ್ನನಾದರೂ ಆತನಿಗೆ ನೀತಿಜ್ಞರಾದ ಮಂತ್ರಿಗಳಿಲ್ಲದೆ ಇರುವುದರಿಂದ ಕಾರ್ಯವನ್ನು ನಿರ್ವಹಿಸಲಾರನು' ಎಂದು ಖಂಡಿತದನಿಯಲ್ಲಿ ಹೇಳುತ್ತಾನೆ. 'ಮಂಜೂಷ'ವು ಅಮಾತ್ಯ ಪ್ರಭುತ್ವವನ್ನು ವ್ಯಕ್ತಿಕೇಂದ್ರಿತವಾಗಿ ಮಾತ್ರವಲ್ಲ, ಒಂದು ರಾಜಕೀಯ ಪದ್ಧತಿಯನ್ನು ಕೇಂದ್ರದಲ್ಲಿಟ್ಟು ಚಿತ್ರಿಸುತ್ತದೆ. ರಾಕ್ಷಸನನ್ನು ಮಂತ್ರಿಯಾಗಿ ಉಳಿಸಿಕೊಳ್ಳಲು ನಂದರು "ರಾಜಕಾರ್ಯವೇನಿದ್ದರೂ ಆತನ ಮುಖದಿಂದಲೇ ಮಾಡಿಸುತ್ತ ಮೊದಲಿಗಿಂತಲೂ

ಅತ್ಯಧಿಕವಾಗಿ ದೇಶಗಳನ್ನೂ ಉಂಬಳಿಯನ್ನೂ ಕೊಟ್ಟು ಬಹುಸನ್ಮಾನ" ಮಾಡುತ್ತ ಓಲೈಸುವರು. ಅದಕ್ಕೆ ರಾಕ್ಷಸನು "ಬಹುಸಂತುಷ್ಟನಾಗಿ ನಿದ್ರಾಹಾರವಂ ಲಕ್ಷಿಸದೆ ರಾಜ್ಯತಂತ್ರ ವಿಚಾರವಂ" ಮಾಡುವನು.[8]

ಮಲಯಕೇತು ಅಮಾತ್ಯರಾಕ್ಷಸನಿಗೆ "ಅಮಾತ್ಯರೇ, ಚಂದ್ರಗುಪ್ತನು ಸ್ವತಂತ್ರನಾಗಿ ರಾಜ್ಯಭಾರಮಂ ನಿರ್ವಹಿಸಲಾರನೇ?" ಎಂದು ಕೇಳಿದಾಗ ರಾಕ್ಷಸನ ಜವಾಬು ಮಾರ್ಮಿಕವಾಗಿದೆ: "ಆತನು ಅಷ್ಟಕ್ಕೆ ಯೋಗ್ಯನಲ್ಲ. ಯಾಕಂದರೆ ತನ್ನ ಬಾಹುಬಲದಿಂದ ರಾಜ್ಯಮಂ ಸಂಪಾದಿಸಿದ ಅರಸರಿಗೆ ಮಾತ್ರ ಪ್ರಭುತ್ವ ನಿರ್ವಾಹವು ಘಟಿಸುವುದೆಂದು ಹೇಳಬೇಕು. ಈಗ ಚಂದ್ರಗುಪ್ತನಿಗೆ ಚಾಣಕ್ಯನ ಬುದ್ಧಿಬಲದ ಅವಲಂಬನವಿಲ್ಲದುದರಿಂದ ರಾಜ್ಯ ನಿರ್ವಾಹಮಂ ಮಾಡುವುದಕ್ಕೆ ಸಾಮರ್ಥ್ಯವು ಹೇಗೆ ಘಟಿಸೀತು? ಲೋಕದಲ್ಲಿ ಸ್ತನ್ಯಪಾನದಿಂದ ಜೀವಿಸುವ ಶಿಶುವು ಸ್ತನ್ಯವಿಲ್ಲದಿದ್ದರೆ ಹೇಗೆ ಜೀವಿಸಲಾರದೊ ಅದೇ ರೀತಿಯಲ್ಲಿ ಮಂತ್ರಿಸಿದ್ಧಿಯುಳ್ಳ ಅರಸು ದಕ್ಷನಾದ ಸಚಿವನಂ ಬಿಟ್ಟು ರಾಜ್ಯತಂತ್ರಮಂ ನಿರ್ವಹಿಸಿಲಾರನು.". ಇದನ್ನು ಹೇಳುವಾಗ ಜೈಟಸರಿಂದ ಬಳುವಳಿಯಾಗಿ ರಾಜ್ಯಪಡೆದ ಮುಮ್ಮಡಿ ಮನಸ್ಸಿನಲ್ಲಿರಬಹುದು. ದೊರೆಯನ್ನು ಶಿಶುವಿಗೂ ಅಮಾತ್ಯನನ್ನು ಎದೆಹಾಲುಣಿಸುವ ತಾಯಿಗೂ ಸಮೀಕರಿಸುವ ರೂಪಕವು ಸಾಂಕೇತಿಕವಾಗಿದೆ. ಇದಕ್ಕೆ ತಕ್ಕಂತೆ ಚಂದ್ರಗುಪ್ತನಿಗೆ ಚಾಣಕ್ಯನು ಕುಮಾರಕನೇ ಎಂದು ಕರೆಯುವನು. ಚಾಣಕ್ಯನು ದೊರೆಗೆ ರಾಕ್ಷಸನನ್ನು ಅಮಾತ್ಯನಾಗಿ ಸ್ವೀಕರಿಸಬೇಕು ಎಂದು ಮಾಡುವ ಆದೇಶವಿದು: "ತಂದೆಗೆ ಮಗನೂ ಗುರುವಿಗೆ ಶಿಷ್ಯನೂ ಯಾವ ಪ್ರಕಾರ ವಿಧೇಯರಾಗಿರುವರೋ ಆ ರೀತಿಯಲ್ಲಿ ಇದ್ದುಕೊಂಡು ಅವರಾಜ್ಞೆಯಂ ಸ್ವಲ್ಪವಾದರೂ ಮೀರದೆ ಅವರಿಂದ ಅಭಿವೃದ್ಧಿಗೆ ಬರುವ ಸಕಲ ಸಾಮ್ರಾಜ್ಯ ಪದವಿಯನ್ನನುಭವಿಸುತ್ತ ಸುಖದಿಂದಿರುವವನಾಗು": 'ಅವರಾಜ್ಞೆಯಂ ಮೀರದೆ' ಮತ್ತು 'ಅವರಿಂದ ಅಭಿವೃದ್ಧಿಗೆ ಬರುವ' ಎಂಬ ನುಡಿಗಳು, ಅಧಿಕಾರವನ್ನು ದೊರೆಯಿಂದ ಮಂತ್ರಿಗೆ ವರ್ಗಾಯಿಸುತ್ತಿವೆ. ಇದನ್ನು ಚಂದ್ರಗುಪ್ತ "ಸ್ವಾಮೀ ಯಜಮಾನರೇ, ತಾವು ಅಪ್ಪಣೆ ಕೊಡಿಸಿದ ವಾಕ್ಯವನ್ನು ವೇದವಾಕ್ಯವೆಂದು ಮನಸ್ಸಿನಲ್ಲಿ ತಿಳಿದು ಈ ಶರೀರವಿರುವವರೆಗೂ ನಡೆಯುವೆನು... ಯಜಮಾನರಾದ ನೀವಿರ್ವರೂ ನನ್ನ ರಾಜ್ಯತಂತ್ರಮಂ ನಿರ್ವಹಿಸಲುದ್ಯುಕ್ತರಾಗಿರುವಲ್ಲಿ ನಾನು ಜಯಶೀಲನಾಗುವುದಕ್ಕೆ ಸಂಶಯಮುಂಟೆ?" ಎಂದು ಒಪ್ಪಿಕೊಳ್ಳುವನು. ಇಲ್ಲಿ ದೊರೆಯದು ಶಾಸ್ತ್ರೀಯ ಅಗತ್ಯ; ಅಕ್ಷರಶಃ ದೈನಿಕ ರಾಜ್ಯಯಂತ್ರವನ್ನು ನಿರ್ವಹಿಸುವುದು ಅಮಾತ್ಯ. ಡಿವಿಜಿ "ರಂಗಾಚಾರ್ಯರ ಪ್ರಾಬಲ್ಯ" ಎಂಬ ನುಡಿಗಟ್ಟನ್ನು ಬಳಸುವುದು ಇದೇ ಅರ್ಥದಲ್ಲಿ.

ಪಟ್ಟದರಾಣಿಯಲ್ಲದ, ಉಪಪತ್ನಿಯ ಹೊಟ್ಟೆಯಲ್ಲಿ ಹುಟ್ಟಿ ಕುಲಕೀಳರಿಮೆ ಅನುಭವಿಸುತ್ತಿರುವ ಹಾಗೂ ದಾಯಾದಿಗಳಿಂದ ಹಿಂಸೆಗೊಳಗಾದ ರಾಜಕುವರನೊಬ್ಬ, ಅಧಿಕಾರ ಪಡೆಯಲು ರಾಜತಂತ್ರ ನಿಪುಣನೊಬ್ಬನ ಮೊರೆಹೊಗುವ; ನಿಪುಣನು ಅದನ್ನು ಸವಾಲಾಗಿ ಸ್ವೀಕರಿಸಿ ರಾಜಕುಮಾರನ ಬಯಕೆಯನ್ನೂ ವೈಯಕ್ತಿಕ ಸಂಕಲ್ಪವನ್ನೂ ಒಟ್ಟಿಗೆ ಈಡೇರಿಸುವಂತೆ ಕಾರ್ಯನಿರ್ವಹಿಸುವ ಕಥಾವಿನ್ಯಾಸ 'ಮಂಜೂಷ'ದಲ್ಲಿದೆ. ಕಥೆ ಮುಗಿಯುವುದು ಅಮಾತ್ಯನು "ಸಕಲ ರಾಜ್ಯತಂತ್ರಮಂ ಮೊದಲಿಗಿಂತ ಅತಿಶಯವಾಗಿ ವಿಚಾರಿಸುತ್ತ ಇರುವುದರಿಂದ ಆ ಮಹಾರಾಜನು ಸಂತೋಷಮಂ ಸಾಮ್ರಾಜ್ಯ ಪದವಿಯನ್ನನುಭವಿಸುತ್ತಿದ್ದನೆಂಬಲ್ಲಿಗೆ." ರಾಜ ಸಂತೋಷದಿಂದ ಸಾಮ್ರಾಜ್ಯ ಪದವಿಯನ್ನು ಅನುಭವಿಸಲು ಸಾಧ್ಯವಾಗಿರುವುದು ಮಂತ್ರಿ 'ಸಕಲ ರಾಜ್ಯತಂತ್ರವಂ

ವಿಚಾರಿಸುತ್ತಿರುವುದರಿಂದ'. ಅಮಾತ್ಯನ ಹಿರಿತನ ಮತ್ತು ಉಚ್ಚವರ್ಣಗಳು ಕೆಳವರ್ಣದ ಕಿರಿವಯಸ್ಸಿನ ದೊರೆಯ ಮೇಲೆ ಸಂಪೂರ್ಣ ಹಿಡಿತ ಸಾಧಿಸಿವೆ. ಇಂಥದೇ ರಾಜಕೀಯ ಸನ್ನಿವೇಶ ಮುಮ್ಮಡಿ-ಪೂರ್ಣಯ್ಯನವರ ಕಾಲದಲ್ಲಿದಲ್ಲಿತ್ತು. ಪೂರ್ಣಯ್ಯ ದಿವಾನರಾಗಿ ಮುಂದುವರೆದಿದ್ದರೆ ಮುಮ್ಮಡಿಯ ರಾಜ್ಯಾಧಿಕಾರ ಉಳಿಯುತ್ತಿತ್ತೇ ಎನ್ನುವುದು ಊಹಾಪ್ರಶ್ನೆ. ಆದರೆ ಸಮರ್ಥ ಅಧಿಕಾರಿಗಳಿಲ್ಲದ ಕಾರಣ ಕೊಟ್ಟು ಬ್ರಿಟಿಶರು ದೊರೆಯನ್ನು ಅಧಿಕಾರದಿಂದ ಕೆಳಗಿಳಿಸಿದ್ದು ಮಾತ್ರ ದಿಟ.

ವಸಾಹತುಶಾಹಿ ಕಾಲಘಟ್ಟದ ಅಮಾತ್ಯಕೇಂದ್ರಿತ ಕಥನಗಳು, ಅಮಾತ್ಯರ ಅಸಾಧಾರಣ ಶಕ್ತಿಯನ್ನು ಮಾತ್ರವಲ್ಲ, ರಾಜರ ದೌರ್ಬಲ್ಯಗಳನ್ನೂ ಹೇಳುತ್ತವೆ. ಇದು ಸೈನಿಕರು ತಮ್ಮ ಬಲದಿಂದ ದೊರೆತನ ನಿಂತಿದೆ ಎಂದು ಮಾತಾಡಿಕೊಂಡಿದ್ದನ್ನು ಕೇಳಿಸಿಕೊಳ್ಳುವ ಭರತ ಚಕ್ರವರ್ತಿ, ತನ್ನ ಬಾಗಿದ ಬೆರಳನ್ನು ನೆಟ್ಟಗಾಗಿಸಲು ಸೈನ್ಯಕ್ಕೆ ಅಸಾಧ್ಯವಾಗುವ ಸನ್ನಿವೇಶ ನಿರ್ಮಿಸಿ, ಅವರ ಗ್ರಹಿಕೆ ಹುಸಿಯೆಂದು ಕಾಣಿಸುವ ಸನ್ನಿವೇಶವನ್ನು (ರತ್ನಾಕರವರ್ಣಿಯ **ಭರತೇಶ ವೈಭವ**) ನೆನಪಿಸುತ್ತದೆ. ಚಂದ್ರಗುಪ್ತನು ಚಾಣಕ್ಯನನ್ನು ಮೀರಿ ಸ್ವತಂತ್ರವಾಗಿ ರಾಜ್ಯಭಾರ ಮಾಡಲು ಹೋಗಿ ಕೈಸುಟ್ಟಕೊಳ್ಳುವ ಪ್ರಸಂಗ ಇದಕ್ಕೆ ನಿದರ್ಶನ: "ಬಾಲಕನಾದ ನನ್ನಿಂದ ತಿಳಿಯದೆ ನಡೆಸಲ್ಪಟ್ಟ ವಾಗಪರಾಧಗಳನ್ನು ಕ್ಷಮಿಸಬೇಕು. ತಮ್ಮ ಚರಣಾನುಗ್ರಹದಿಂದ ಬೆಟ್ಟದಂತಿದ್ದ ನನ್ನ ಸಕಲವಿಧ ವಿಪತ್ತೂ ಮಂಜಿನಂತೆ ಪರಿಹಾರಮಾಗಿ ಈ ನಂದರಾಜ್ಯದ ಮಹಾಸಾಮ್ರಾಜ್ಯ ಪದವಿಯು ಮೊದಲಿಗಿಂತ ಅತಿಶಯಮಾಗಿ ನನ್ನ ಸ್ಥಿರವಾಯಿತು. ಅಣುವಿನೋಪಾದಿಯಲ್ಲಿರುವ ನನ್ನನ್ನು ಕೈಹಿಡಿದು ಮೇರುಪರ್ವತವಾಗಿ ಮಾಡಿದಿರಿ. ಈ ಕೀರ್ತಿಯು ಆಚಂದ್ರಾರ್ಕಮಾಗಿ ಯಜಮಾನರ ಚರಣಕ್ಕೆ ಬಂದಿತು" ಎಂದು ದೊರೆ ಚಾಣಕ್ಯನ ಕಾಲಿಗೆರಗುತ್ತಾನೆ. ಆಗ ಚಾಣಕ್ಯನು "ಅಯ್ಯಾ ಕುಮಾರನೇ, ಬ್ರಾಹ್ಮಣನು ಭಿಕ್ಷುಕನಂತೆ ತೋರುತ್ತಿದ್ದರೂ ಆತನ ತೇಜಸ್ಸು ಉಲ್ಲಂಘಿಸುವುದಕ್ಕೆ ಶಕ್ಯವಾದಿತೇ? ಬ್ರಾಹ್ಮಣಾಪಮಾನವು ಐಶ್ವರ್ಯಹಾನಿಯು" ಎಂದು ಬುದ್ಧಿವಾದ ಹೇಳುವನು. ಬ್ರಾಹ್ಮಣ ವಿರೋಧಿಗಳ ಕೊಲೆ ಪಾಪವಲ್ಲವೆಂದೂ ಚಾಣಕ್ಯ ವ್ಯಾಖ್ಯಾನಿಸುವನು. ಇದಕ್ಕವನು ಕೊಡುವ ನಿದರ್ಶನ "ಗೋವುಗಳನ್ನೂ ಪ್ರಜೆಗಳನ್ನೂ ಬಾಧಿಸುವ ಹುಲಿಗಳ ನಿಗ್ರಹದಂತೆ ದುಷ್ಟರಾದ ನಂದನಿಗ್ರಹದಿಂದ ಪ್ರತ್ಯವಾಯ ಬರಲಾರದು"; ಇಲ್ಲಿ ಹಸು-ಹುಲಿಗಳ ಮುಖಾಮುಖಿಯು ಬ್ರಾಹ್ಮಣ-'ದುಷ್ಟಕ್ಷತ್ರಿಯ'ರದ್ದು. ಸಚಿವಾಯತ್ತ ಪಠ್ಯಗಳು ದ್ವಿಜಶ್ರೇಷ್ಠತೆಯ ಕಲ್ಪನೆಯನ್ನು ಸ್ಮೃತಿಕಾರರಿಂದ ಪಡೆದುಕೊಂಡಿವೆ ಮತ್ತು ಸಾಮಾಜಿಕ ಶ್ರೇಣೀಕರಣವನ್ನು ಸ್ಪಷ್ಟವಾಗಿ ಪ್ರತಿಪಾದಿಸುತ್ತವೆ. ಇದಕ್ಕೆ ಪೂರಕವಾಗಿ ಮಂಜೂಷದಲ್ಲಿ ಚಂದ್ರಗುಪ್ತ-ಅಮಾತ್ಯರ ಜೋಡಿಯನ್ನು ಯುಧಿಷ್ಠಿರ-ಧೌಮ್ಯ, ಇಂದ್ರ-ಬೃಹಸ್ಪತಿ, ವೃಷಪರ್ವ-ಶುಕ್ರಾಚಾರ್ಯರಿಗೆ ಮಾಡುವ ಹೋಲಿಕೆಯನ್ನು ಗಮನಿಸಬೇಕು. ಇಲ್ಲಿ ಬರುವ ಅಮಾತ್ಯರು-ರಾಜಗುರುಗಳ ಹಿನ್ನೆಲೆ ಬ್ರಾಹ್ಮಣವಾಗಿದ್ದು, ಅವರ ಸರ್ವಾಧಿಕಾರದ ಹಿಂದೆ ಸಾಮಾಜಿಕ ಯಜಮಾನಿಕೆಯೂ ಕೆಲಸ ಮಾಡಿದೆ. ತಂಬೂಚೆಟ್ಟಿ, ಕಾಂತರಾಜೇಅರಸ್, ಮಿರ್ಜಾ ಮುಂತಾದ ಕೆಲವರನ್ನು ಬಿಟ್ಟರೆ, ವಸಾಹತುಶಾಹಿ ಕಾಲದಲ್ಲಿ ಆಳಿದ ಬಹುತೇಕ ದಿವಾನರು ಬ್ರಾಹ್ಮಣರಾಗಿದ್ದರು. ನವರತ್ನ ರಾಮರಾಯರು ಸಂಸ್ಥಾನದ ಸೇವೆಗೆ ಸೇರಿದ ದಿನ ಗುರುವಾದ ಪ್ರೊ. ಟೇಟ್ ಅವರನ್ನು ಕಾಣಲು ಹೋಗುವರು. ಅವರಿಬ್ಬರ ನಡುವೆ ನಡೆಯುವ ಸಂಭಾಷಣೆ ಪರೋಕ್ಷವಾಗಿ ದಿವಾನರದು ಮಾತ್ರವಲ್ಲ, ಜಾತಿಯ ಮಹತ್ವವನ್ನೂ ಹೇಳುತ್ತಿದೆ. ರಾಮರಾಯರು ತಾವಿನ್ನೂ ಡ್ಯೂಟಿರಿಪೋರ್ಟ್ ಮಾಡಿಕೊಂಡಿಲ್ಲ ಎಂದಾಗ ಟೇಟ್

ಅವರು "ಓ, ಅದು ಸಣ್ಣ ವಿಷಯ, ಮುಖ್ಯವಾದ ಡ್ಯೂಟಿ ಏನು ಅಂತ ತಿಳಿದಿದ್ದಿ? ದಿವಾನರ ಮನೆಗೆ ಹೋಗೋದು; ಬಗ್ಗಿ ಕೈ ಕೈಮುಗಿಯೋದು; ಸ್ವಾಮಿ ಪ್ರೊಮೋಷನ್ ಎನ್ನುವುದು... ಬ್ರಾಹ್ಮಣನಾದ ನಿನಗೇನೂ ಸರ್ವೀಸಿನಲ್ಲಿ ಕಷ್ಟವಿರಲಾರದು. ಬ್ರಾಹ್ಮಣರಲ್ಲದವರನ್ನು ಗೋಳು ಹೊಯ್ದುಕೊಳ್ಳುತ್ತಾರಂತೆ. ಚನ್ನಿಗಪ್ಪ ಹೇಳಿದ."[9] ಅಮಾತ್ಯರ ಬ್ರಾಹ್ಮಣ ಹಿನ್ನೆಲೆಗೆ ವಿರಕ್ತಿ ಮತ್ತು ದುಡಿಮೆಗಳೂ ಸೇರಿಕೊಂಡರೆ, ಆ ಪದವಿ ಮತ್ತಷ್ಟು ಅಧಿಕೃತತೆ ಪಡೆಯುತ್ತದೆ. "ಚಾಣಕ್ಯನು ಆಶಾಪಾಶ ವಿಮುಕ್ತನಾದುದರಿಂದಲೇ ಪ್ರಭುವಾದ ಚಂದ್ರಗುಪ್ತನಂ ಲಕ್ಷೀಕರಿಸಿದೆ ತನ್ನ ಕುಮಾರನಂ ಕಂಡಂತೆ-ಎಲೈ ಅರಸೇ, ಬಾರೈ ಎನ್ನುತ್ತ ಮಾತನಾಡಿಸುವನು. ವಿರಕ್ತನಾದವನಿಗೆ ಯಾವುದು ತಾನೇ ವಿಷಯಮಾದೀತು?" ಎಂದು ಪಠ್ಯ ವಿವರಣೆ ಕೊಡುತ್ತದೆ.

'ಮಂಜೂಷ'ವು ಚಾಣಕ್ಯ-ರಾಕ್ಷಸರೆಂಬ ಅಮಾತ್ಯರ ರಾಜತಾಂತ್ರಿಕ ಬಲಾಬಲದ ಕಥನವೂ ಆಗಿದೆ. ಅಮಾತ್ಯರ ತಿಕ್ಕಾಟಗಳು ಮೈಸೂರು ಸಂಸ್ಥಾನದಲ್ಲೂ ಇದ್ದವು. ಚಾಣಕ್ಯನು ರಾಕ್ಷಸನನ್ನು ತನ್ನ ಉತ್ತರಾಧಿಕಾರಿಯಾಗಿ ನೇಮಿಸುವಂಥ ಪದ್ಧತಿಯೂ ಇಲ್ಲಿತ್ತು. ದಿವಾನರ ನಿವೃತ್ತಿ-ನಿಯುಕ್ತಿಗಳ ನಡುವೆ ದಿವಾನರ ಭಾಷೆ ಜಾತಿ ಸ್ವಭಾವಾದಿ ಕಾರಣಗಳಿಂದ ಬಿಕ್ಕಟ್ಟು ತಲೆದೋರುತ್ತಿದ್ದವು. ತಮಿಳು-ಕನ್ನಡ; ಶೂದ್ರ ಹಾಗೂ ಬ್ರಾಹ್ಮಣ, ಹಿಂದು-ಮುಸ್ಲಿಂ; ಮರಾಠಿ-ಕನ್ನಡ ಮೂಲದ ದಿವಾನರ ಸಂಘರ್ಷಗಳನ್ನು 20ನೇ ಶತಮಾನದ ಪಠ್ಯಗಳು ಕಾಣಿಸುತ್ತವೆ. ಈ ಸಂಘರ್ಷಗಳಿಗೆ ಪ್ರಬಲ ಜಾತಿ-ಪಂಗಡಗಳು ಅಧಿಕಾರ ಹಿಡಿಯಲು ಮಾಡುವ ಪೈಪೋಟಿಯನ್ನೂ ಆಯಾ ಸಮುದಾಯದ ದಿವಾನರು ಬಂದಾಗ ಉಳಿದ ಸಮುದಾಯಗಳು ಪಡುವ ತಲ್ಲಣದ ಆಯಾಮವೂ ಇದೆ. "ರಂಗಾಚಾರ್ಯರ ಪ್ರಾಬಲ್ಯವನ್ನು ಕಂಡು ಸಹಿಸಲಾರದವರೂ ಅವರನ್ನು ಕೆಳಕ್ಕೆಳೆದು ಅವರ ಪದವಿಗೆ ತಾವು ಹತ್ತಬೇಕೆಂದಿದ್ದವರೂ ಎಲ್ಲರೂ ಸೇರಿ ಕೆಲವು ದಿನಗಳಿಂದ ರಂಗಾಚಾರ್ಯರ ಮೇಲೆ ದೂರು ಹೊರಿಸಲು ಯತ್ನಿಸುತ್ತಿದ್ದರು" ಎಂದು ಡಿವಿಜಿ ದಾಖಲಿಸುತ್ತಾರೆ.[10]

ಇದಕ್ಕೆ ದಿವಾನಗಿರಿಯು ಪ್ರಬಲವಾದ ಅಧಿಕಾರ ಕೇಂದ್ರವಾಗಿದ್ದುದೂ ಒಂದು ಕಾರಣ. ತಮಿಳುನಾಡು ಮೂಲದ ರಂಗಾಚಾರ್ಲು ತಮ್ಮ ಉತ್ತರಾಧಿಕಾರಿಯಾಗಿ ಶೇಷಾದ್ರಿ ಅಯ್ಯರರನ್ನು ಸೂಚಿಸುತ್ತಾರೆ. ತಮಿಳು ಮೂಲದ ಅಯ್ಯರ್ ಕನ್ನಡಿಗರಾದ ಕೃಷ್ಣಮೂರ್ತಿಯವರನ್ನು ಮೊದಲಿಗೆ ಶಿಫಾರಸ್ಸು ಮಾಡುವುದಿಲ್ಲ. "ಕೃಷ್ಣಮೂರ್ತಿಗಳನ್ನು ನಬಾಯಿಸಿ, ತಮ್ಮ ಕಡೆಯ-ತಮ್ಮ ಪ್ರಿಯ ಶಿಷ್ಯರೆಂದು ಭಾವಿತರಾದ-ಒಬ್ಬರನ್ನು ತಮ್ಮ ತರುವಾಯ ದಿವಾನಗಿರಿಗೆ ತರಬೇಕೆಂದು ಬಹಳಮಟ್ಟಿಗೆ ತರದೂದು ಮಾಡುತ್ತಿದ್ದರೆಂಬುದು ಬಹಿರಂಗ ಗುಟ್ಟು. ತಮ್ಮ ನೈಸರ್ಗಿಕ ಧರ್ಮಬುದ್ಧಿಗೆ ತಾವು ಮಾಡಿದ ವ್ಯಾವಹಾರಿಕ ಅನ್ಯಾಯವು ಪಶ್ಚಾತ್ತಾಪವನ್ನು ತಂದಿರಬೇಕು. ಸಾಯುವ ಹಿಂದಿನ ದಿನ ಜಹಗೀರದಾರರನ್ನು ಕರೆಯಿಸಿಕೊಂಡು, ಅವರ ಸಂಗಡ ಪ್ರೇಮದಿಂದ ಮಾತನಾಡಿ, ದಿವಾನಗಿರಿಗೆ ಅವರನ್ನೇ ಮಹಾರಾಜರವರಲ್ಲಿ ಶಿಪಾರ್ಸು ಮಾಡಿ ಒಪ್ಪಿಸಿರುವುದಾಗಿ ತಿಳಿಸಿ- ತಮ್ಮಲ್ಲಿ ನನಗೆ ಸರ್ವಾತ್ಮನ ದ್ವೇಷವಿಲ್ಲ-ದೇವರು ತಮ್ಮನ್ನು ಕ್ಷೇಮವಾಗಿಟ್ಟು ತಮ್ಮಿಂದ ನಮ್ಮ ದೇಶಕ್ಕೂ ಪ್ರಭುಗಳಿಗೂ ದೀರ್ಘಕಾಲ ಸೇವೆ ಸಲ್ಲಿಸಿ, ತಮಗೆ ತಮ್ಮ ಪೂರ್ವಿಕರಂತೆ ಯಶಸ್ಸು ಕೂಡಲಿ ಎಂದು ಹಾರೈಸುತ್ತಾರೆ."[11] ಇಲ್ಲಿ ಪೂರ್ವಿಕರು ಎಂದರೆ ಪೂರ್ಣಯ್ಯ. ಈ ಪ್ರಕರಣವು ಮಾಸ್ತಿಯವರ 'ಪಂಡಿತನಮರಣ ಶಾಸನ' ಕತೆಯ ಪ್ರಸಂಗವನ್ನೇ ಹೋಲುತ್ತದೆ. ಚಿಕದೇವರಾಜನ ಕಾಲದಲ್ಲಿ ನಡೆದ ಈ ಘಟನೆಯಲ್ಲಿ ಜೈನಮಂತ್ರಿ ವಿರೂಪಾಕ್ಷ ಪಂಡಿತನು

ಶ್ರೀವೈಷ್ಣವರಿಂದ ಕೊಲೆಯಾಗುತ್ತಾನೆ; ಆದರೆ ಪ್ರಾಣಬಿಡುವ ಮುನ್ನ ತನ್ನೆದುರಾಳಿಯೂ ಶ್ರೀವೈಷ್ಣವನೂ ಆದ ತಿರುಮಲಾರ್ಯನೇ ಪ್ರಧಾನಿಯಾಗಬೇಕೆಂದು ಸೂಚಿಸುತ್ತಾನೆ.

ಕನ್ನಡದ ರಾಜಕೀಯ ಪತ್ರಗಳು ದಿವಾನರ ನಿರ್ಗಮನದ ಪ್ರಸಂಗಗಳನ್ನು ಕಾಣಿಸುವ ಬಗೆ ಕುತೂಹಲಕರ. ಅಮಾತ್ಯ ವಿರೂಪಾಕ್ಷ ಪಂಡಿತನದು ರಕ್ತಸಿಕ್ತ ನಿರ್ಗಮನವಾದರೆ, ಪೂರ್ಣಯ್ಯ, ವಿಶ್ವೇಶ್ವರಯ್ಯ, ಮಿರ್ಜಾರದು ಕಹಿನಿರ್ಗಮನ. ಕೊನೆಯ ಮೂವರ ನಿರ್ಗಮನಗಳಿಗೆ ದೊರೆಯೊಟ್ಟಿಗಿನ ವೈಯಕ್ತಿಕ ಹಾಗೂ ತಾತ್ವಿಕ ಭಿನ್ನಮತ ಕಾರಣ. "1940ರಲ್ಲಿ ಹೊಸ ಮಹಾರಾಜರು ಅಧಿಕಾರವನ್ನು ವಹಿಸಿಕೊಂಡ ಕ್ಷಣದಿಂದಲೇ ದಿವಾನರನ್ನು ಅವರ ಸ್ಥಾನದಿಂದ ತೆಗೆದುಹಾಕಲು ಸಿದ್ಧತೆ ನಡೆಸಿದರು. ಮಿರ್ಜಾ ಅವರು ತಮ್ಮ ಆಡಳಿತ ಕಕ್ಷೆಯೊಳಗೆ ಯಾರೂ ಯಾವ ರೀತಿಯಲ್ಲೂ ತಲೆಹಾಕುವುದನ್ನು ಸಹಿಸುವುದಿಲ್ಲವೆಂದು ಹೊಸ ಮಹಾರಾಜರಿಗೆ ಗೊತ್ತಿದ್ದ ವಿಷಯವೇ ಆಗಿತ್ತು. ತಮ್ಮ ತಂದೆಗೆ ಆಗಿದ್ದ ಅನುಭವಗಳು ಇವರಿಗೆ ಪರಿಚಯವಿದ್ದವು. ಆದರೆ ಈಗ, ದಿವಾನರಿಗೂ ಮಹಾರಾಜರಿಗೂ ಇದ್ದ ಸಂಬಂಧದಲ್ಲಿ ಒಂದು ಗುಣಾತ್ಮಕವಾದ ವ್ಯತ್ಯಾಸವಿತ್ತು. ಹಿಂದಿನ ಯುವರಾಜ ಸಿಂಹಾಸನವೇರಿದ ರಾಜಕುಮಾರನಾಗಿದ್ದರೂ ಯಾವುದೇ ಅಧಿಕಾರವು ಅವರ ಕೈಯಲ್ಲಿರಲಿಲ್ಲ. ಎಲ್ಲ ಅಧಿಕಾರವೂ ದಿವಾನರ ಕೈಯಲ್ಲೇ ಇತ್ತು. ಆದರೆ ಈಗಿನ ಮಹಾರಾಜರಿಗೆ ದಿವಾನರನ್ನು ತಮ್ಮ ಅಧಿಕಾರ ಬಲದಿಂದ ತಳ್ಳಿಹಾಕುವ ಸಾಮರ್ಥ್ಯ ಇತ್ತು" ಎಂದು ಇತಿಹಾಸಕಾರರು ವಿಶ್ಲೇಷಿಸುವರು.[12]

'ಎಲ್ಲ ಅಧಿಕಾರವನ್ನೂ ಕೈಯಲ್ಲಿರಿಸಿಕೊಂಡಿದ್ದ' ದಿವಾನಗಿರಿ ನಂತರದ ದೊರೆಗಳ ಕಾಲದಲ್ಲಿ ನಿಂತುಹೋಯಿತು. ಇದನ್ನು ವಿಷಾದ ಸಂಭ್ರಮವಿಲ್ಲದೆ ಮೇಲಿನ ವಿಶ್ಲೇಷಣೆ ದಾಖಲಿಸುತ್ತಿದೆ. ಈ ನಿರ್ಲಿಪ್ತಿ ಡಿವಿಜಿಯವರಲ್ಲಿಲ್ಲ. ರಾಜಕೀಯ ಭಿನ್ನಮತವಿದ್ದರೂ, ಮಿರ್ಜಾರ ನಿರ್ಗಮನದ ಧೀಮಂತಿಕೆಯನ್ನು ದುರಂತ ನಾಟಕದ ಪಾತ್ರವೊಂದರ ಅಂತಿಮ ಕ್ಷಣಗಳಂತೆ ಅವರು ಕಾಣಿಸುವರು. ಮಾಜಿ ದಿವಾನ ವಿಶ್ವೇಶ್ವರಯ್ಯ ಹಾಗೂ ಹಾಲಿ ದಿವಾನ ಮಿರ್ಜಾರ ನಡುವೆ ತಾತ್ವಿಕ ಭಿನ್ನಮತಗಳಾಚೆ ಇದ್ದ ಮಾನವೀಯ ಸಂಬಂಧವನ್ನು ಚಿತ್ರಿಸುವರು. ಮಾಸ್ತಿಯವರೂ **ಚಿಕವೀರರಾಜೇಂದ್ರ**ದಲ್ಲಿ ದಿವಾನ್ ಕುಂಟಬಸವಯ್ಯನ ದುರಂತ ನಿರ್ಗಮನವನ್ನು ಹೀಗೇ ಕಟ್ಟಿಕೊಡುವರು. ಪೂರ್ಣಯ್ಯ, ರಂಗಾಚಾರ್ಲು ಅವರಂತೆ ಬಸವಯ್ಯನೂ ಅತಿಸಾಮಾನ್ಯ ನೆಲೆಯಿಂದ ಸರ್ವಾಧಿಕಾರಿ ಪದವಿಗೇರಿದವನು. ಆದರೆ ದೊರೆಯ ಅನೈತಿಕತೆ-ದುಷ್ಟತನಗಳಿಗೆ ಅವನು ಬೆಂಬಲವಾಗಿ ನಿಲ್ಲುತ್ತಾನೆ. ಅವನನ್ನು ದೊರೆಯಾಗಿಸಲು ಚಾಣಕ್ಯನಂತೆಯೇ ಹಠದಿಂದ ಯತ್ನಿಸುವ ತಂತ್ರಗಾರ್ತಿ ಭಗವತಿಯ ಪಾತ್ರವೂ ಅಲ್ಲಿದೆ. ಆಕೆಯ ಯತ್ನ ವಿಫಲವಾಗಿ ದೊರೆಯ ರಾಜ್ಯಭ್ರಷ್ಟತೆಯಲ್ಲೂ ಬಸವಯ್ಯನ ಆತ್ಮಹತ್ಯೆಯಲ್ಲೂ ಕಥೆ ಕೊನೆಗೊಳ್ಳುತ್ತದೆ. ದೊರೆ ಮತ್ತು ದಿವಾನರ ದುಷ್ಟಕೂಟದಲ್ಲಿ ರಾಜ್ಯದ ಪ್ರಜೆಗಳು ಪಾಡುಪಡುವುದನ್ನು ಕಾಣಿಸುವ **ಚಿಕವೀರರಾಜೇಂದ್ರ** ಒಂದು ನೈತಿಕ ರಾಜಕಾರಣದ ಪಠ್ಯ. ಇದಕ್ಕೆ ಹೋಲಿಸಿದರೆ, ಡಿವಿಜಿಯವರ **ರಂಗಾಚಾರ್ಲು**, ದೊರೆಗೂ ರಾಜ್ಯಕ್ಕೂ ತನ್ನನ್ನು ತೆತ್ತುಕೊಂಡ ತ್ಯಾಗಮಯಿ ಅಧಿಕಾರಿಯ ಕಥನ.

ದೊರೆಯ ಸಹಪಾಠಿ-ಗೆಳೆಯ ದಿವಾನನಾಗುವ ವಿಶಿಷ್ಟ ಪರಂಪರೆಯೊಂದು ಮೈಸೂರು ಸಂಸ್ಥಾನದಲ್ಲಿದೆ. ಚಿಕದೇವರಾಜನಿಗೆ ಮಂತ್ರಿಗಳಾಗಿದ್ದ ತಿರುಮಲಾರ್ಯ-ವಿರೂಪಾಕ್ಷ ಪಂಡಿತ ಇಬ್ಬರೂ ಬಾಲ್ಯದ ಗೆಳೆಯರು; ನಾಲ್ವಡಿ-ಮಿರ್ಜಾರ ಸಂದರ್ಭದಲ್ಲೂ ಇದು ಮುಂದುವರೆಯಿತು. ಅಲ್ಲದಂತೆ ವಯಸ್ಸಿನಲ್ಲಿ ಹಿರಿಯರು ಪ್ರಧಾನಿಗಳಾಗಿರುವುದೇ

ಹೆಚ್ಚು. ಪ್ರಧಾನಿಯನ್ನು ಹಾಲುಣಿಸುವ ತಾಯಿ ತಂದೆ ಗುರುವಿಗೂ, ದೊರೆಯನ್ನು ಶಿಶು ಮಗ ಶಿಷ್ಯನಿಗೂ ಹೋಲಿಸುವ ಉಪಮೆಗಳನ್ನು ಸಚಿವಾಯತ್ತ ಪ್ರಭುತ್ವದ ವ್ಯವಸ್ಥೆಯು ಹುಟ್ಟಿಸಿತು. ಈ ಉಪಮೆಗಳು ರಾಜನನ್ನು ಸೃಷ್ಟಿಸುವ (ಕಿಂಗ್‌ಮೇಕಿಂಗ್) ಕಾರ್ಯದ ಭಾಗವಾಗಿವೆ. ಚಿಕ್ಕವಯಸ್ಸಿನ ರಾಜಕುಮಾರನನ್ನು ದೊರೆಯಾಗಿ ರೂಪಿಸುವಾಗ ಹಿರಿಯರಾದ ಅಮಾತ್ಯರನ್ನು ಸಹಜವಾಗಿಯೇ ಉಪಮೆಗಳು ಪೋಷಕ ಸ್ಥಾನಕ್ಕೇರಿಸುತ್ತವೆ. ನಾಟಕೀಯವಾದ ರಾಜಕೀಯ ಬೆಳವಣಿಗೆಗಳಿಂದ ಬಾಲಕರನ್ನು ಪಟ್ಟಕ್ಕೇರಿಸುವ ಮತ್ತು ದಿವಾನರು ಗುರು ತಂದೆಯರ ಸ್ಥಾನದಲ್ಲಿ ನಿಂತು ದೊರೆಗಳನ್ನು ರೂಪಿಸುವ ಸನ್ನಿವೇಶಗಳು ಮೈಸೂರು ಅರಮನೆಯಲ್ಲಿ ಮತ್ತೆ ಮತ್ತೆ ಬಂದವು. ಇವು ಸಹ ದಿವಾನಕೇಂದ್ರಿತ ಪಠ್ಯಗಳ ವಿನ್ಯಾಸವನ್ನು ರೂಪಿಸಿದವು. ಈ ಹಿನ್ನೆಲೆಯಲ್ಲಿ ಚಾಣಕ್ಯ-ಚಂದ್ರಗುಪ್ತರ ಲಕ್ಷಣಗಳು ಪೂರ್ಣಯ್ಯ-ಮುಮ್ಮಡಿ, ರಂಗಾಚಾರ್ಲು-ಚಾಮರಾಜ ಸಮಾನ ಪಾತಳಿಯ ನಿದರ್ಶನಗಳು. ರಾಜಕುಮಾರನ್ನು ದೊರೆಯನ್ನಾಗಿ ರೂಪಿಸಿಸುವ ದಿವಾನರ ಕುರಿತ ಕೆಲವು ಉಲ್ಲೇಖಗಳನ್ನು ಗಮನಿಸಬಹುದು:

ಅ. "ಮಂತ್ರಿವರ್ಯನಪ್ಪ ಪೂರ್ಣಯ್ಯನಂತುಟ ಅರಗುವರಂಗೆ ಪಟ್ಟಬಂಧ ವಿಧಿಯಂ ನಿರ್ವರ್ತಿಸಿ ಮಹಾರಾಣಿಯನುಮತದಿಂದ ರಾಜ್ಯಭಾರಭರಮಂ ಕೆಯ್ಕೊಂಡು ಮಹೀಶೂರೊಳ್ ನೂತರನಮಪ್ಪರಮನೆಯೊಂದಂ ನಿರ್ಮಾಪಿಸಿಯದರೊಳ್ ರಾಣೀವಾಸದೊಡನರಗುವರನಂ ನಿಲಿಸಿ, ನಿಷ್ಣಾತರಪ್ಪುಪಾಧ್ಯಾಯರಿಂ ಸಂಸ್ಕೃತ ಕರ್ಣಾಟಕ ಮಹಾರಾಷ್ಟ್ರ ಪಾರ್ಸಿ ಮೊದಲಾದ ಪಲವುಂ ಭಾಷೆಗಳುಮಂ ರಾಜನೀತಿಯುಮುಂ ಸಂಗೀತ ಸಾಹಿತ್ಯಾದಿ ಸಕಲ ಕಲೆಗಳುಮಂ ಗಜಾಶ್ವಾರೋಹಣಾದಿ ಅರಸು ಬಿಜ್ಜೆಗಳುಮಂ ಕಲಿವಂತೆ ನಿರವಿಸಿ, ಟಿಪ್ಪುವಿನತಿನೃಶಂಸತೆಯಿಂ ನೊಂದ ನಾಡುಂ ಪಲವಗೆಯಿಂದ ನೇರ್ಪಡಿಸಿ ರಾಜ್ಯಮನೆಚ್ಚರಿಕೆಯಿನೆಸಗುತಿರ್ದಂ" [13]

ಇಲ್ಲಿರುವ 'ಮಂತ್ರಿವರ್ಯನಪ್ಪ ಪೂರ್ಣಯ್ಯ'ನ ಕಾರ್ಯಗಳನ್ನು ಸೂಚಿಸುವ ನಿರ್ವರ್ತಿಸಿ, ಕೆಯ್ಕೊಂಡು, ನಿರ್ಮಾಪಿಸಿ, ನಿಲಿಸಿ, ನಿರವಿಸಿ, ನೇರ್ಪಡಿಸಿ-ಇತ್ಯಾದಿ ಸರಣಿ ಕ್ರಿಯಾಪದಗಳು ದಿವಾನರ ಕರ್ತವ್ಯ ನಿಭಾವಣೆಯ ಸೂಚಕವಾಗಿವೆ. ಟಿಪ್ಪುವಿನ ಅತಿನೃಶಂಸತೆಯಿಂದ ನಾಡು ನೊಂದಿದ್ದರೆ ಅದಕ್ಕೆ ದಿವಾನರೂ ಕಾರಣ ಎಂಬುದನ್ನು ಈ ವ್ಯಾಖ್ಯಾನವು ಮರೆಯುತ್ತಿದೆ.

ಆ. ಮುಮ್ಮಡಿ ಮರಣಶಯ್ಯೆಯಲ್ಲಿದ್ದಾಗ ಅಧಿಕಾರಿಗಳನ್ನು ಕರೆಸಿಕೊಂಡು 'ಅಯ್ಯಾ, ನನ್ನ ಕಾಲವು ಮುಗಿದುಹೋದಂತಿದೆ. ನನ್ನ ಪುನಃ ರಾಜ್ಯಭಾರ ಮಾಡುವ ಅದೃಷ್ಟವಿಲ್ಲದೆ ಹೋಯಿತು. ಮುಂದೆ ಈ ಮಗುವಿಗೆ ವಿದ್ಯಾಬುದ್ಧಿಗಳನ್ನು ಕಲಿಸಿ ರಾಜ್ಯಾಧಿಕಾರವನ್ನು ಕೊಡಿಸಿ ಕಾಪಾಡಿಕೊಂಡು ಬರುವ ಭಾರವು ನಿಮ್ಮದಾಗಿದೆ" ಎಂದು ಹೇಳಿಕೊಂಡರೆಂದು ಬರೆಯುವ ಶಿಂಗ್ರಯ್ಯ, ಮುಮ್ಮಡಿಯವರ ಆಶಯವನ್ನು ರಂಗಾಚಾರ್ಲು ಈಡೇರಿಸಿದ್ದನ್ನೂ ಹೀಗೆ ವಿವರಿಸುತ್ತಾರೆ: "ಶ್ರೀಚಾಮರಾಜೇಂದ್ರ ಒಡೆಯರವರನ್ನು ಅವರ ಮಹತ್ತದವಿಗೆ ಅರ್ಹರನ್ನಾಗಿ ಮಾಡುವ ಕಾರ್ಯದಲ್ಲಿ ರಂಗಾಚಾರ್ಯರು ಕರಣಪೂರ್ವಕವಾಗಿ ಶ್ರದ್ಧೆವಹಿಸಿ ಕರ್ತವ್ಯಶೀಲನಾದ ತಂದೆಯು ತನ್ನ ಮಗನ ವಿದ್ಯಾಭ್ಯಾಸಕ್ಕಾಗಿ ಹೇಗೆ ಶ್ರಮತೆಗೆದುಕೊಳ್ಳುವನೋ ಹಾಗೆ, ಹಗಲೂ ಇರುಳು ಶ್ರಮಿಸುತ್ತಿದ್ದರು. ರಾಜರ ಪಾಠ ಪ್ರವಚನಗಳಿಗೆ ಮಾತ್ರವೇ ಅಲ್ಲದೆ ಅವರ ಮಿತ್ರಗೋಷ್ಠಿ ಅವರ ಆಟಪಾಟಗಳು, ಅವರ ಅಂಗಸಾಧನೆ, ಆರೋಗ್ಯ, ಉಡುಪು ತೊಡಪುಗಳು ನಡೆನುಡಿಗಳು ವಿಶ್ವಾಸ

ದ್ವೇಷಗಳು ಇವುಗಳಿಗೆಲ್ಲಾ ರಂಗಾಚಾರ್ಯರು ಕ್ಷಣೇಕ್ಷಣೇ ಗಮನಕೊಟ್ಟು ಮಹಾರಾಜರ ಮನೋವೃತ್ತಿಯನ್ನು ತಿದ್ದುತ್ತಿದ್ದರು. ಮಹಾರಾಜರವರು ಇದನ್ನು ಜ್ಞಾಪಕದಲ್ಲಿರಿಸಿ, ರಂಗಾಚಾರ್ಯರಲ್ಲಿ ಗುರುಭಕ್ತಿಯನ್ನೂ ಪಿತೃಭಕ್ತಿಯನ್ನೂ ಇಟ್ಟಿದ್ದರೆಂಬುದು ಅವರ ನಡೆಯಿಂದಲೂ ಅವರ ಕಾಗದಗಳಿಂದಲೂ ತಿಳಿದುಬರುತ್ತದೆ. ಯಾರು ರಾಜರ ಬುದ್ಧಿಯನ್ನು ರಾಜಧರ್ಮಗಳಲ್ಲಿ ಪ್ರವೇಶಗೊಳಿಸಿ, ಅವರು ಧರ್ಮಿಷ್ಠರಾಗುವಂತೆ ಮಾಡುತ್ತಾನೆಯೋ ಆತನು ದೇಶಕ್ಕೆಲ್ಲ ಉಪಕಾರ ಮಾಡಿದವನಾಗುತ್ತಾನೆ" [14]

ಇ. "ಮ॥ ರಂಗಾಚಾರ್ಯರು ಅರಮನೆಯ 'ಕಂಟ್ರೋಲರ್' ಆಗಿ ದಯಮಾಡಿಸಿದ ಕೆಲವು ದಿವಸಗಳೊಳಗಾಗಿ– ಅರಮನೆಯ ಆಡಳಿತಗಳಲ್ಲಿದ್ದ ನ್ಯೂನಾತಿರಿಕ್ತಗಳನ್ನು ಪರಿಹಾರ ಮಾಡಿ, ಕ್ರಮಪಡಿಸಿದ ತರುವಾಯ– ಶ್ರೀಮನ್ಮಹಾರಾಜರವರನ್ನು ಭರತಖಂಡದ ಪ್ರಭುಗಳಲ್ಲಿ ಅಗ್ರಗಣ್ಯರನ್ನಾಗಿ ಮಾಡಬೇಕೆಂಬ ಕುತೂಹಲದಿಂದಲೂ, ಮೈಸೂರು ರಾಜ್ಯಭಾರವು ಸಾಂಕುಶ ಪ್ರವರ್ತನಕ್ಕೆ ಮಾತೃಸ್ಥಾನವಾಗಿರುವಂತೆ ಮಾಡಬೇಕೆಂಬ ಕುತೂಹಲದಿಂದಲೂ ಪ್ರೇರಿತರಾಗಿ, ಮಹಾರಾಜರವರ ವಿದ್ಯಾಭ್ಯಾಸದ ಏರ್ಪಾಡುಗಳನ್ನು 'ಗಾರ್ಡಿಯನ್'ರ ಮೂಲಕ ಕ್ರಮಪಡಿಸುವುದಕ್ಕೆ ಪ್ರಾರಂಭಮಾಡಿದರು. ಸಕಲಶಾಸ್ತ್ರಗಳಲ್ಲಿಯೂ, ಸಕಲ ವ್ಯವಹಾರಗಳಲ್ಲಿಯೂ ಅದ್ವಿತೀಯ ಪಂಡಿತರಾದ ಮ॥ ಜಯರಾಮರಾಯರು ಶ್ರೀಮನ್ಮಹಾರಾಜರವರಿಗೆ ವಿದ್ಯಾಗುರುಗಳಾಗುವಂತೆ ಏರ್ಪಾಡು ಮಾಡಿದರು... ಪಾಠಹೇಳುವುದಕ್ಕೆ ಇವರನ್ನೆಲ್ಲಾ ನಿಯಮಿಸಿದಾಗ್ಯೂ, ರಾಜಧರ್ಮಗಳನ್ನು ಏಕಾಂತವಾಗಿ ಉಪದೇಶ ಮಾಡುವ ಕೆಲಸವನ್ನು ತಾವೇ ಇಟ್ಟುಕೊಂಡರು. ಪ್ರಭುಗಳಾದವರು ಮನೋವಾಕ್ಕಾಯಗಳಲ್ಲಿ ಹೇಗೆ ಧರ್ಮದಿಂದ ನಡೆದುಕೊಳ್ಳಬೇಕೋ, ರಾಜ್ಯಭಾರ ಮಾಡುವುದರಲ್ಲಿ ಹೇಗೆ ಗುಣೈಕಪಕ್ಷಪಾತಿಗಳಾಗಿರಬೇಕೋ, ದುಷ್ಟನಿಗ್ರಹ ಶಿಷ್ಟಪರಿಪಾಲನೆಗಳನ್ನು ಮಾಡುವುದರಲ್ಲಿ ಹೇಗೆ ನಿರಾಲಸ್ಯರಾಗಿರಬೇಕೋ, ಪ್ರಜೆಗಳ ಕಷ್ಟನಿಷ್ಠುರಗಳನ್ನು ತಿಳಿದುಕೊಂಡು ಪರಿಹಾರ ಮಾಡುವುದರಲ್ಲಿ ಹೇಗೆ ಅಸಾಧಾರಣವಾದ ಆದರವನ್ನೂ ಉತ್ಸಾಹವನ್ನೂ ಹೊಂದಿರಬೇಕೊ, ಪ್ರಭುಪದವಿಯು ಅತ್ಯಂತ ವಿಜೃಂಭಣೆಯುಳ್ಳದ್ದಾದರೂ ಕಾರ್ಯತಃ ಎಷ್ಟು ಕಷ್ಟಸಾಧ್ಯವಾದದ್ದೋ, ಒಂದು ಕುಟುಂಬವನ್ನು ಸರಿಯಾಗಿ ಇಟ್ಟುಕೊಳ್ಳಬೇಕಾದರೆ ಆ ಕುಟುಂಬದ ಯಜಮಾನನಿಗೆ ಎಷ್ಟು ಕಷ್ಟಸಾಧ್ಯವಾಗುವುದೋ, ಲಕ್ಷಾಂತರ ಕುಟುಂಬಗಳನ್ನು ಸುಖವಾಗಿಟ್ಟುಕೊಂಡಿರತಕ್ಕ ಕೆಲಸವು ಹೇಗೆ ಪ್ರಭುವಾದವರಿಗೆ ಸೇರಿಸುವುದೋ, ಈ ಕೆಲಸವನ್ನು ಸರಿಯಾಗಿ ಮಾಡಿ ಮನುಮಾಂಧಾತರೇ ಮೊದಲಾದವರು ಹೇಗೆ ಕೃತಯುಗಾಲಂಕರಾಭೂತರಾದರೋ, ವರ್ತಮಾನ ಕಾಲದಲ್ಲಿ ಹೇಗೆ ಪ್ರಜಾರಂಜಕರು ಅವತಾರ ಪುರುಷರಂತೆ ಗಣಿಸಲ್ಪಡುವರೋ, ಅಂಥಾ ಕೀರ್ತಿಯನ್ನು ಸಂಪಾದಿಸಬೇಕಾದರೆ ಪ್ರಭುಪದವಿಗೆ ಬರತಕ್ಕವರು ಹೇಗೆ ಅಹೋರಾತ್ರಿಗಳಲ್ಲಿಯೂ ಪ್ರಜೆಗಳ ಯೋಗಕ್ಷೇಮ ಚಿಂತನೆಯನ್ನು ಮಾಡುತ್ತಲಿರಬೇಕೋ, ಹಾಗೆ ಮಾಡುತ್ತಿರತಕ್ಕ ಪ್ರಭುಗಳಲ್ಲಿ ದೇವತಾನಿರ್ವಿಶೇಷವಾದ ಭಕ್ತಿಯು ಪ್ರಜೆಗಳಿಗೆಲ್ಲಾ ಹೇಗೆ ಉಂಟಾಗಿರುವುದೋ, ಈ ವಿಷಯದಲ್ಲಿ ಉದಾಸೀನರಾದ ಪ್ರಭುಗಳಿಗೆ ಪ್ರಜೆಗಳ ಪ್ರೀತಿಯು ತಪ್ಪಿ ಪ್ರಭುಪದವಿಗೂ ಕೂಡ ನ್ಯೂನತೆಯು ಹೇಗೆ ಬರುವುದೋ–ಇವುಗಳನ್ನೆಲ್ಲಾ ಮ॥ ರಂಗಾಚಾರ್ಯರವರು ಶ್ರೀ ಚಾಮರಾಜೇಂದ್ರ ಒಡೆಯರವರಿಗೆ ಪ್ರತಿನಿತ್ಯದಲ್ಲಿಯೂ ಬಹಳ ಮನೋಹರ ಇತಿಹಾಸಗಳ ಪೂರ್ವಕ ಉಪದೇಶ ಮಾಡುತಿದ್ದರು. ..ಅವುಗಳ ಮಹಿಮೆಯಿಂದ ಶ್ರೀ ಚಾಮರಾಜೇಂದ್ರ ಒಡೆಯವರವರ ಕಾಲದಲ್ಲಿ ಇಂಡಿಯಾದ ದೇಶದ 'ನೇಟಿವ್ ಸಂಸ್ಥಾನ'ಗಳಲ್ಲಿ ಮೈಸೂರುರಾಜ್ಯವು ಅಗ್ರಗಣ್ಯವಾದ ಪದವಿಯನ್ನು ಹೊಂದಿತು."

ಇಲ್ಲಿನ ಮುಖ್ಯ ಮಾತೆಂದರೆ, ಮಂತ್ರಿಗಳು ದೊರೆಗೆ ರಾಜಧರ್ಮ ಉಪದೇಶಿಸಿ ಅತ್ಯುತ್ತಮ ಪ್ರಭುವಾಗಿಸುವ ಹೊಣೆ ಹೊರುವುದು; ಈ ಕ್ರಮದಲ್ಲಿ ರೂಪುಗೊಂಡ ದೊರೆ ಅಂತಿಮವಾಗಿ ದಿವಾನರಿಗೆ ನಿಷ್ಠವಾಗಿರುವುದು. ರಂಗಾಚಾರ್ಲು ಅರಮನೆಗೆ ಬಂದಾಗ ಎಚ್ಚರವಿರಲು ಚಾಮರಾಜೇಂದ್ರ ಒಡೆಯರ್ ಗುಪ್ತವಾದ ವ್ಯವಸ್ಥೆ ಮಾಡಿಕೊಂಡಿದ್ದನ್ನು; ದಿವಾನರಿಗೆ ಅಸಮಾಧಾನವಾಗುತ್ತದೆಯೆಂದು ದೊರೆ ಮಧ್ಯಾಹ್ನದ ನಿದ್ದೆ ಮಾಡುತ್ತಿರಲಿಲ್ಲವೆಂಬುದನ್ನು ಡಿವಿಜಿ ದಾಖಲಿಸುತ್ತಾರೆ. ಇದಕ್ಕೆ ಕಾರಣ ಮಂತ್ರಿಯ ಹಿರಿತನ ಮಾತ್ರವಲ್ಲ, ಆತನ ನಾಡನಿಷ್ಠೆ ಮತ್ತು ದೊರೆಯನ್ನು ಟೀಕಿಸಿಯೂ ಬದುಕಬಲ್ಲ ಧೀಮಂತಿಕೆ ಕೂಡ.

ದಿವಾನಕೇಂದ್ರಿತ ಕಥನಗಳು ಅವರ ದಕ್ಷತೆಯನ್ನೂ, ಅನಿರೀಕ್ಷಿತ ರಾಜಕೀಯ ಬಿಕ್ಕಟ್ಟನ್ನು ಅವರು ಬಗೆಹರಿಸುವ ಜಾಣ್ಮೆಯನ್ನೂ, ಮಾನದಂಡವಾಗಿಸಿಕೊಂಡಿವೆ. ದೇವಚಂದ್ರನಂತಹ ಜೈನನು ಜೈನಮೌಲ್ಯಗಳಾದ ಅಸ್ತೇಯ ಅಹಿಂಸೆ ಅಪರಿಗ್ರಹಗಳ ಚೌಕಟ್ಟಿಗೆ ಬಾರದ ಬ್ರಿಟಿಶರನ್ನು ತನ್ನ ಧಾರ್ಮಿಕ ನೈತಿಕತೆಯಿಂದ ಮೌಲ್ಯಮಾಪನಮಾಡುವುದಿಲ್ಲ. ಬದಲಿಗೆ ಅವರ ತಂತ್ರಗಾರಿಕೆಯನ್ನು ಮೌಲ್ಯವೆಂದು ಹೊಗಳುತ್ತಾನೆ. ಅವನು ಉಲ್ಲೇಖಿಸುವ ಕತೆಗಳಲ್ಲೂ ಉಪಾಯಗಾರಿಕೆ ಮಹತ್ವದ ಸಂಗತಿಯಾಗಿದೆ. ಕಪ್ಪ ಸಲ್ಲಿಸಲಾಗದ ಮೈಸೂರಿನ ಸಾಮಂತ ರಾಜಗೌಡನು ದೊರೆಯ ಕೋಪವನ್ನು ತನ್ನ ಚತುರಮಂತ್ರಿಯ ಮೂಲಕ ಶಮನಿಸುವ ಕತೆ ಇದರಲ್ಲೊಂದು. ದೊರೆ ಹಲವು ಸಲ ಹೇಳಿಕಳಿಸಿದರೂ ಹೋಗದೆ ಚಿಂತಾಕ್ರಾಂತನಾಗಿದ್ದ ರಾಜಗೌಡನು ತನ್ನಬದಲಿಗೆ ಮಂತ್ರಿ ಶಾಂತಯ್ಯನನ್ನು ಸಂಧಾನಕ್ಕೆ ಕಳಿಸುವನು. "ಸ್ವಾಮಿಗತಿಹಿತರಪ್ಪ ಬುದ್ಧಿಯುಳ್ಳ ಮಂತ್ರಿ ನಿಯೋಗಿ ಸಾಮಂತಾದಿಗಳಿಂದ ನೃಪನ ಕಾರ್ಯಮಾಗಲ್ವೇಳ್ಕುಮದರಿಂದ ದೂತಪ್ರೇಷಣೆಯಂ ಮಾಳ್ಪುದೆನಲ್ಕೆ ತನ್ನಲ್ಲಿರ್ದ ಪೆರ್ಗಡೆಗಳಂ ಪೋಗಲವೇಳಲವರು ತಮ್ಮಿಂದಂ ಧೈರ್ಯಸ್ಥೈರ್ಯದೊಳಂ ನೀತಿನಿಧಾನದೊಳಂ ನೀನೆ ಸಂಪನ್ನನಪ್ಪುದರಿಂ ಪೋಗಿ ನಿನ್ನ ಬಲ್ಲಿಂದದಿಂದೆನ್ನೊಳು ರಾಯಂ ಪ್ರೀತನಪ್ಪಂತು ಮಾಳ್ಪುದು' ಎಂದು ನಮ್ರವಾಗಿ ಕೋರುವನು. ಶಾಂತಯ್ಯನು ತನ್ನ ಮಾತುಗಾರಿಕೆಯಿಂದ ಒಡೆಯರ ಕೋಪವನ್ನು ನಿವಾರಿಸಿದ್ದಲ್ಲದೆ ಬಹುಮಾನಿತನಾಗಿ ಮರಳುವನು. ಈ ಸನ್ನಿವೇಶದಲ್ಲಿ ಮಂತ್ರಿಗುಣಗಳನ್ನು ಹೇಳುವ "ತಂತ್ರಾಲೋಚನವಿಜ್ಞೇಯಃ ವೃಢಚಿತ್ತೋ ಜಿತೇಂದ್ರಿಯಃ ಶಾಂತೋ ನಿರ್ಲೋಭಿಃ ನೀತಿಜ್ಞೋ ರಾಜಮಂತ್ರೀ ಪ್ರಚಕ್ಷತೇ" ಮುಂತಾದ ಶ್ಲೋಕಗಳನ್ನು ಪಠ್ಯವು ಜೋಡಿಸುತ್ತದೆ. ಬಹುತೇಕ ಪಠ್ಯಗಳು ದಿವಾನರು ರಾಜ್ಯವನ್ನು ಆರ್ಥಿಕ ಸಂಕಟಗಳಿಂದ ಉಳಿಸುವ ಕಥನಗಳನ್ನು ಒಳಗೊಂಡಿವೆ.

ಅ. 'ಟೀಪು ಸುಲ್ತಾನನ ದೌಲತ್ತು ಹೋಗಿ ಈ ಸೀಮೆಯ ನಿಜವಾದ ದೊರೆಗಳ ಅಂಕುರವಾಗಿದ್ದ ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರಿಗೆ ಇಂಗ್ಲಿಷ್ ಸರ್ಕಾರದವರು ಪಟ್ಟವನ್ನು ಕಟ್ಟಿ, ಮಂತ್ರಿಯಾದ ಪೂರ್ಣಯ್ಯನನ್ನು ಇಲ್ಲಿನ ದಿವಾನಗಿರಿಗೆ ನೇಮಕ ಮಾಡಿದರು. ಈ ಸಚಿವಶ್ರೇಷ್ಠನು ರಾಜ್ಯವನ್ನು ಬಿಗಿಯಾಗಿ ಇಟ್ಟುಕೊಂಡು ಜನರ ಸೌಖ್ಯಕ್ಕೂ ಸರ್ಕಾರದ ಸುವರ್ಣಾದಾಯಕ್ಕೂ ಲೋಪ ಬಾರದಂತೆ ಏರ್ಪಾಡು ಮಾಡಿ, ಹಸ್ತಾಂತರದಲ್ಲಿ ವಿಶೇಷವಾಗಿ ದ್ರವ್ಯವನ್ನು ಶೇಖರಿಸಿದ್ದೂ ಅಲ್ಲದೆ, ಕಾಲೋಚಿತವಾಗಿ ವಾಡಿಕೆಯಾಗಿದ್ದ ರೀತಿಯಲ್ಲಿ ಮಹಾರಾಜರ ವಿದ್ಯಾಭ್ಯಾಸಕ್ಕೂ ಅವರ ಪುರೋವೃದ್ಧಿಗೂ ಬೇಕಾದ ಏರ್ಪಾಡುಗಳನ್ನು ಮಾಡಿದನು."[16]

ಆ. "ನಮ್ಮ ಕಥಾನಾಯಕರು ಅಧಿಕಾರಸೂತ್ರಗಳನ್ನು ಕೈಗೆ ತೆಗೆದುಕೊಂಡಾಗ ಇದ್ದ ಸ್ಥಿತಿಯನ್ನು ಅವರು ಅಧಿಕಾರ ನಿವೃತ್ತರಾದಾಗ ಇದ್ದ ಸ್ಥಿತಿಯೊಂದಿಗೆ ಹೋಲಿಸಿ ನೋಡಿದರೆ,

ಅವರು ಈ ಮೈಸೂರು ದೇಶದ ಭಾಗ್ಯವಿಧಾತರೋ ಎಂಬಂತೆ ಆ ಕಾಲದಲ್ಲಿ ದೊರೆತು, ಇದನ್ನು ಅಭಿವೃದ್ಧಿಸ್ಥಿತಿಗೆ ತರುವುದರಲ್ಲಿ ತನುಮನಧನಗಳನ್ನು ವ್ಯಯಿಸಿ ಹೇಗೆ ಕೀರ್ತಿಶರೀರಿಗಳಾದವರೆಂಬುದನ್ನು ಮನಗಾಣಬಹುದು."[17]

ಇ. "ಬ್ರಿಟಿಶ್ ಸರ್ಕಾರದವರಿಗೆ ಕೊಡಬೇಕಾದ 80 ಲಕ್ಷ ರೂಪಾಯನ್ನು ಅವರು ಯಾವ ನಿಮಿಷದಲ್ಲಿ ಕೇಳುವರೋ ಅಂತಹ ಕಷ್ಟದಲ್ಲಿ ರಾಜ್ಯಕ್ಕೆ ಇನ್ನೇನು ಅಪೋಹ ಬರುವುದೋ, ಬಡ್ಡಿಗಾಗಿಯೇ ನಾಲ್ಕು ಲಕ್ಷ ರೂಪಾಯಿ ಕೊಡಬೇಕಲ್ಲಾ ಎಂಬ ಚಿಂತೆಯಲ್ಲಿ ಮಗ್ನರಾಗಿ ರಂಗಾಚಾರ್ಯರು, ಬ್ರಿಟಿಷ್ ಸರ್ಕಾರದೊಡನೆ ಸಂಧಾನ ಮಾಡಿ ತಮ್ಮ ಯುಕ್ತಿ ಚಮತ್ಕೃತಿ ಸಾಮರ್ಥ್ಯಗಳಿಂದ ಅವರನ್ನು ಒಪ್ಪಿಸಿ ಮೈಸೂರು ದೇಶಕ್ಕೆ ಅನುಕೂಲವಾದ ಪ್ರತ್ಯುತ್ತರಗಳನ್ನು ತರಿಸಿಕೊಂಡರು."[18]

ಇಲ್ಲಿ ಇಲ್ಲಿ ದಿವಾನನನ್ನು 'ಸಚಿವಶ್ರೇಷ್ಠ' ಎನ್ನಲಾಗುತ್ತಿದೆ. ಆತನನ್ನು 'ಜನರ ಸೌಖ್ಯ'ದ ಬಗ್ಗೆ ಚಿಂತಿಸುವ ಕಾಳಜಿಯುಳ್ಳ ಆರ್ಥಿಕಶಿಸ್ತಿನ ಅಧಿಕಾರಿಯನ್ನಾಗಿ ಕಾಣಿಸಲಾಗುತ್ತಿದೆ. ಇದಕ್ಕೆ ಕಾರಣ, ವಸಾಹತುಶಾಹಿಯು ಸಂಪನ್ಮೂಲಗಳನ್ನು ಲೂಟಿಮಾಡುತ್ತಿದ್ದುದು; ಕಷ್ಟದಲ್ಲಿದ್ದ ಜನರು ಹೆಚ್ಚು ತೆರಿಗೆ ಕೊಡಲು ನಿರಾಕರಿಸುತ್ತಿದ್ದುದು; ರಾಜಕೀಯ ಅಭದ್ರತೆಯಲ್ಲಿದ್ದ ಅರಸರು ಧಾರ್ಮಿಕ ದಾನದತ್ತಿಗಳ ಮೂಲಕ ಹಣವನ್ನು ವ್ಯಯಿಸುತ್ತಿದ್ದುದು; ಅವರ ಕೈಸಾಲಗಳು; ಬ್ರಿಟಿಶರಿಗೆ ತೆರಬೇಕಿದ್ದ ಪೊಗದಿಯ ಭಾರ; ಕಲೆಯ ಹೆಸರಲ್ಲಿ ದೊಡ್ಡ ಪೋಷಿತವರ್ಗವನ್ನು ಸಾಕಿಕೊಂಡಿದ್ದು ಸಂಸ್ಥಾನದ ಆರ್ಥಿಕ ಸಂಕಷ್ಟಕ್ಕೆ ಕಾರಣವಾಗಿದ್ದವು. ರಂಗಾಚಾರ್ಲು ಅರಮನೆಯ ಕಂಟ್ರೋಲರಾಗಿ ನಿಯುಕ್ತರಾದಾಗ (1868) ರಾಜ್ಯದಲ್ಲಿದ್ದ ಅರಾಜಕತೆಯ ಚಿತ್ರವಿದು. "ಒಂದು ಕಡೆ ಮಾಮೂಲೆಂಬ ನೆವದಿಂದ ಕೈಚಾಚುತ್ತಿದ್ದ ಬಂಧು ಆಶ್ರಿತ ವರ್ಗಗಳವರು; ಇನ್ನೊಂದು ಕಡೆ ಜವಾಬ್ದಾರಿಯಿಲ್ಲದೆ ಚಾಕರಿಯ ಹೆಸರಿನಿಂದ ದೋಚುತ್ತಿದ್ದ ಪರಿವಾರದವರು; ಮತ್ತೊಂದು ಕಡೆ ಲೆಕ್ಕಪತ್ರದ ನಿರ್ಬಂಧವಿಲ್ಲದೆ ಆಡಳಿತ ನಡೆಸುತ್ತಿದ್ದ ಗುಮಾಸ್ತರು; ಇನ್ನೊಂದು ಕಡೆ ಇದೇ ಸಮಯವೆಂದು ಬಾಯಿಬಿಟ್ಟುಕೊಂಡಿದ್ದ ಸಾಲಕೊಟ್ಟವರು.. ಅರಮನೆಯ ಹಣದಿಂದ ಜೀವಿಸುತ್ತಿದ್ದವರು 619 ಮಂದಿ ರಾಜಬಂಧುಗಳಲ್ಲದೆ, 9687 ಮಂದಿ ಇತರ ಜನರಿದ್ದರು. ಇವರಲ್ಲಿ ಪುರೋಹಿತರು, ಪಂಡಿತರು, ಸಂಗೀತಗಾರರು, ವೈದ್ಯರು, ಓಲೆಕಾರರು, ಒಡೆಯರುಗಳು, ಗೊಲ್ಲರು, ಕಟ್ಟಿಯವರು, ಭಲ್ಲೆಯವರು, ರಾಚೇವಾರರು, ಕಂದಾಚಾರದವರು, ಶಿಪಾಯಿಗಳು, ಜಟ್ಟಿಗಳು, ಮಾಹುತರು, ಮೇಳಗಾರರು, ಮಷಾಲ್ಜಿಯವರು, ನರ್ತಕರು, ವಿನೋದಗಾರರು– ಇವರೇ ಮೊದಲಾದ ತೆರತೆರದ ಪರಿವಾರದವರು, 24 ಇಲಾಖೆಗಳಲ್ಲಿ ಸೇರಿದವರು ಇವರೆಲ್ಲರ ಒಟ್ಟು ಸಂಬಳವು ವರ್ಷಕ್ಕೆ 689424 ರೂಪಾಯಿ. ಇದರಲ್ಲಿ ನಿರರ್ಥಕವಾಗಿ ಹೋಗುತ್ತಿದ್ದುದೇ ಬಹುಭಾಗ."[19] ಹೀಗಾಗಿ ಕನ್ನಡ ಪತ್ರಗಳಿಗೆ ರಾಜಕೀಯ ಬಿಕ್ಕಟ್ಟುಗಳನ್ನು ನಿವಾರಿಸುವ ವಿಷಯಕ್ಕಿಂತ ಆರ್ಥಿಕಶಿಸ್ತು, ದಿವಾನರ ದಕ್ಷತೆಯನ್ನು ಅಳೆಯುವ ಮಾನದಂಡವಾಯಿತು.

ಸಚಿವಾಯತ್ತ ಪ್ರಭುತ್ವ ತತ್ತ್ವವನ್ನೊಪ್ಪುವ ಪೂರ್ಣಯ್ಯ, ರಂಗಾಚಾರ್ಲು, ಶೇಷಾದ್ರಿ, ವಿಶ್ವೇಶ್ವರಯ್ಯ, ಮಿರ್ಜಾ ಕುರಿತ ಪತ್ರಗಳು, 'ಮಂಜೂಷ'ದ ಪಡಿಯಚ್ಚುಗಳಂತೆ ತೋರುತ್ತವೆ. ಇವು ದಿವಾನರ ಆಡಳಿತ ವೈಖರಿ ಪ್ರಾಮಾಣಿಕತೆ ದುಡಿಮೆ ಮುನ್ನೋಟಕ್ಕೆ ಸಂಬಂಧಿಸಿದಂತೆ ಮೈಸೂರು ಸೀಮೆಯಲ್ಲಿದ್ದ ದಂತಕತೆಗಳನ್ನು ಉಲ್ಲೇಖಿಸುತ್ತವೆ. ಪೂರ್ಣಯ್ಯನವರ ಬಗ್ಗೆ ಇರುವ ಕಥೆಯೊಂದು ಹೀಗಿದೆ: "ಒಂದು ದಿನ ಸಂಧ್ಯಾಕಾಲದಲ್ಲಿ ಒಬ್ಬ ಬ್ರಾಹ್ಮಣ ಅಮಲ್ದಾರನು ಸೂರ್ಯನಿಗೆ ಎದ್ದುನಿಂತು ಅರ್ಘ್ಯಕೊಡದೆ ಕುಳಿತಲ್ಲಿಂದಲೇ ಚೊಗಸೆ

ನೀರನ್ನೆತ್ತಿ ಚೆಲ್ಲಿಸುದನ್ನು ಕಂಡು, ಆತನನ್ನು ಸಸ್ಪೆಂಡು ಮಾಡಿದ್ದರಂತೆ. ಗಾಬರಿಗೊಂಡ ಅಮಲ್ದಾರನು ದಿವಾನರನ್ನು ಕಂಡು, ತನ್ನ ಅಪರಾಧವೇನೋ ಅಪ್ಪಣೆಕೊಡಿಸಬೇಕೆಂದು ಬೇಡಿಕೊಳ್ಳಲು, ಅಲ್ಲವಯ್ಯ, ನಿಮ ಜನ್ಮಸಾರ್ಥಕ್ಯಕ್ಕಾಗಿ ಸೂರ್ಯ ಭಗವಾನನಿಗೆ ಕೊಡುವ ಅರ್ಘ್ಯದ ವಿಷಯದಲ್ಲೇ ಅಷ್ಟುಮಟ್ಟಿನ ಅಲಕ್ಷ್ಯಭಾವದಿಂದ ನಡೆದುಕೊಳ್ಳುವ ನೀವು, ಇನ್ನು ಸರಕಾರಿ ಕೆಲಸವನ್ನು ಎಷ್ಟುಮಟ್ಟಿನ ಶ್ರದ್ಧೆಯಿಂದ ಮಾಡಬಲ್ಲಿರಿ!' ಎಂದು ಆಕ್ಷೇಪಿಸಿ ಬುದ್ಧಿಹೇಳಿದರಂತೆ. [20]

ರಂಗಾಚಾರ್ಲು ಬರುತ್ತಾರೆಂದರೆ ಹೆದರಿ ರಾಜನು ನಿದ್ದೆಮಾಡದಿರಲು ಮಾಡಿಕೊಂಡಿದ್ದ ವ್ಯವಸ್ಥೆಯನ್ನು ಚಿತ್ರಿಸುವ ಡಿವಿಜಿ, ದಿವಾನರನ್ನು ಸಂಸ್ಥಾನದ ಉದ್ಧಾರಕ್ಕವತರಿಸಿದ ದೈವವೆಂಬ ಧಾಟಿಯಲ್ಲಿ ಚಿತ್ರಿಸುವರು. "ಮುಂದೆ ದಿವಾನ್‌ಗಿರಿಗೆ ಬರತಕ್ಕವರು ತಮ್ಮಂತೆ ಯಂತ್ರ ನಿರ್ಮಾಪಕರಾಗಿರಬೇಕಾದ ಅವಶ್ಯಕತೆಯಿಲ್ಲದೆ, ಆ ಯಂತ್ರವನ್ನು ನಡೆಸತಕ್ಕ ಯಂತ್ರಚಾಲಕರಾಗಿ (ಫೋರ್‌ಮ್ಯಾನ್) ಮಾತ್ರ ಇದ್ದರೆ ಸಕಲಾಡಳಿತಗಳೂ ಚರಿತಾರ್ಥವಾಗುವಂತೆ ಮಾಡಿಕೊಟ್ಟರು" ಎಂದೂ "ನಾಲ್ಕೈದು ವರುಷಗಳಾದರೂ ದಿವಾನ್‌ಗಿರಿ ಮಾಡುವುದಕ್ಕೆ ಇವರಿಗೆ ಅವಕಾಶ ಉಂಟಾಗಿದ್ದರೆ ಕೃತಯುಗ ಧರ್ಮವು ಈ ಕಲಿಯುಗದಲ್ಲಿಯೇ ನಡೆಯುವಂತೆ ಮಾಡುತ್ತಿದ್ದರು" ಎಂದು ವ್ಯಾಖ್ಯಾನಿಸುವರು. [21]

ಇಲ್ಲಿರುವ ಯುಗಗಳ ಪರಿಭಾಷೆ ಅವತಾರದ ಕಲ್ಪನೆಯಿಂದ ಬಂದುದು. ಇದಕ್ಕೆ ಪೂರಕವಾಗಿ ದಿವಾನರ ಚರಿತ್ರೆಗಳು ಅಮಾತ್ಯ ಮಹತ್ವ ಕುರಿತ ಹೇಳಿಕೆಗಳನ್ನು ಪ್ರಾಚೀನ ಗ್ರಂಥಗಳಿಂದ ಉದ್ಧರಿಸುತ್ತವೆ. ಡಿವಿಜಿ 'ಸನ್ಮಂತ್ರಿಣಾ ವರ್ಧಯತೇ ನೃಪಾಣಾಂ' ಎಂಬ ಶ್ಲೋಕವನ್ನು ಉದಾಹರಿಸುತ್ತಾರೆ. ರಂಗಾಚಾರ್ಯರ ರಾಜನೀತಿಜ್ಞ ಹೇಳಿಕೆಗಳನ್ನುಲ್ಲೇಖಿಸಿ 'ರಂಗಾಚಾರ್ಯರ ಮತ' ಎಂದು ಕರೆಯುತ್ತಾರೆ. ಮತವೆಂದರೆ ಅಭಿಪ್ರಾಯ, ದರ್ಶನ ಎಂಬರ್ಥ. ತಮ್ಮ ಚಿಂತನೆ, ಬರವಣಿಗೆ ಹಾಗೂ ರಾಜಕೀಯ ನಡೆಗಳ ಮೂಲಕ ದಿವಾನರು ಹೊಸ ರಾಜಕೀಯ ತತ್ವಶಾಸ್ತ್ರವನ್ನೇ ನಿರ್ಮಿಸಿದರು ಎಂಬುದು ಇಲ್ಲಿನ ಧ್ವನಿ. ಮೈಸೂರಿನ ದಿವಾನರನ್ನು ಪಶ್ಚಿಮದ ರಾಜಕೀಯ ಚಿಂತಕರ ಜತೆಗಿಟ್ಟು ತೂಗುವ ಮಾತುಗಳೂ ಬರುತ್ತವೆ. "ಲಾರ್ಡ್ ಲಿಟ್ಟನ್‌ರೇ ಮೊದಲಾದ ಅನೇಕ ರಾಜ್ಯತಂತ್ರಜ್ಞರು ಮ॥ ರಂಗಾಚಾರ್ಯರ ಸರ್ವತೋಮುಖವಾದ ಪ್ರಜ್ಞೆಯನ್ನು ನೋಡಿ ವಿದ್ವತ್ತಿನಲ್ಲಿಯೂ ಅನನ್ಯ ಸಾಧಾರಣವಾದ ರಾಜ್ಯತಂತ್ರಜ್ಞತೆಯಲ್ಲಿಯೂ ಅವರು ಮಿ॥ ಗ್ಲಾಡ್‌ಸ್ಟನ್‌ರವರಿಗೂ ಕೂಡ ಕಡಿಮೆಯಾದವರಲ್ಲವೆಂದು ಸ್ವಲ್ಪವೂ ಮತ್ಸರವಿಲ್ಲದೆ ಘಂಟಾಘೋಷವಾಗಿ ಹೇಳುವುದಕ್ಕೆ ಉಪಕ್ರಮಿಸಿದರು" ಎಂದು ಸಮಕಾಲೀನರಾಗಿದ್ದ ವೆಂಕಟಕೃಷ್ಣಯ್ಯನವರು ಹೇಳುತ್ತಾರೆ.[22]

ಮೈಸೂರಿನ ದಿವಾನರ ಕಾರ್ಯವಿಧಾನದಲ್ಲಿ ಅನೇಕ ಸಮಸ್ಯೆಗಳಿದ್ದವು. ಸ್ವಜನಪಕ್ಷಪಾತವು ಅವುಗಳಲ್ಲೊಂದು. ತಮ್ಮ ವಂಶಜರೇ ದಿವಾನರಾಗಬೇಕೆಂದು ಹಠಹಿಡಿಯುವ ಪೂರ್ಣಯ್ಯ, ದೊರೆಯ ಜತೆಗೇರ್ಪಡಿಸಿಕೊಂಡ ವಿರಸವನ್ನು ಪತ್ರಗಳು ತರುವುದಿಲ್ಲ. ಇದಕ್ಕೆ ಕಾರಣ ನಾಯಕಪ್ರಧಾನ ಕಥನಗಳಲ್ಲಿ ವಿಮರ್ಶಾತ್ಮಕ ಧೋರಣೆ ತಾಳಲಾಗದ; ರಾಜಕೀಯ ಚರಿತ್ರೆಯನ್ನು ವ್ಯಕ್ತಿಕೇಂದ್ರಿತವಾಗಿ ಕಾಣಿಸುವ ಪತ್ರತತ್ವ ದಿವಾನರ ವಂಶಜರು ಲೇಖಕರ ಸಮಕಾಲೀನರಾಗಿದ್ದು ಅಧಿಕಾರದಲ್ಲಿರುವುದು. ಪಿ. ಕೃಷ್ಣಮೂರ್ತಿಯವರು ದಿವಾನರಾಗಿದ್ದ ಕಾಲದಲ್ಲಿ ಹುಟ್ಟಿದ ಪತ್ರಗಳಲ್ಲಿ ಈ ಅಳುಕನ್ನು ಸ್ಪಷ್ಟವಾಗಿ ಗಮನಿಸಬಹುದು. "ಶ್ರೀಮನ್ಮಹಾರಾಜರು ಆಳ್ವಿಕೆಯನ್ನು ಸ್ವೀಕರಿಸಿದರೂ, ದಿವಾನ್ ಪದವಿಯನ್ನು ತಾವೇ ವಹಿಸಿರುವಂತೆ ಅನುಕೂಲಗೊಳಿಸುವುದಾಗಿ" ರೆಸಿಡೆಂಟ್ ಕೋಲ್

ಹೇಳಿದನೆಂದೂ, "ವೃದ್ಧಾಪ್ಯದಿಂದಲೂ ವಯಸ್ಸಿಗೆ ಸಹಜವಾದ ಚಿಂತಾ ಮತ್ತು ಆಲಸ್ಯಾದಿಗಳಿಂದಲೂ ಬಹುಮಟ್ಟಿಗೆ ಝುರ್ಝುರಿತರಾಗಿದ್ದ ಪೂರ್ಣಯ್ಯನವರು ಮುಂದೂ ಅಧಿಕಾರ ಮಾಡಲು ಇಷ್ಟವಿಲ್ಲದೆ ವಿಶ್ರಾಂತಿಯನ್ನು ಹೊಂದಬಯಸಿ, 1811ನೆಯ ಡಿಶಂಬರಿನಲ್ಲಿ ಶ್ರೀರಂಗಪಟ್ಟಣಕ್ಕೆ ಪ್ರಯಾಣಮಾಡಿದರು" ಎಂದೂ [23] ಪೂರ್ಣಯ್ಯ "ವಯಸ್ಕರಾದ ಮಹಾರಾಜರ ಮನಸ್ಸಿನಲ್ಲಿ ಸಕಲ ಸದ್ಗುಣಗಳೂ ಮೂಡುವಂತೆ ರಾಜನೀತಿಗಳನ್ನು ತಿಳಿಸುತ್ತಿದ್ದರು" ಎಂದೂ ಪಠ್ಯಗಳು ಉಪಾಯವಾಗಿ ಕಹಿಸಂಘರ್ಷವನ್ನು ನಿವಾರಿಸಿಬಿಡುತ್ತವೆ. [24] ಆದರೆ ಡಿವಿಜಿಯವರು ಜಯಚಾಮರಾಜೇಂದ್ರ ಒಡೆಯರ್–ಮಿರ್ಜಾ ಅವರ ತಿಕ್ಕಾಟವನ್ನು ಸೂಕ್ಷ್ಮವಾಗಿ ಕಾಣಿಸುವರು.

ದಿವಾನಕೇಂದ್ರಿತ ಪಠ್ಯಗಳು ದಿವಾನರ ವಸಾಹತುಶಾಹಿ ಆಳ್ವಿಕೆಪರವಾದ ನಿಲುವನ್ನು ಹೆಚ್ಚು ಚರ್ಚಿಸುವುದಿಲ್ಲ. ಇದಕ್ಕೆ ಕಾರಣ, ಬಹುತೇಕ ಲೇಖಕರು ವಸಾಹತುಶಾಹಿ ಆಳ್ವಿಕೆಯನ್ನು ಒಪ್ಪಿಕೊಂಡಿದ್ದವರಾಗಿದ್ದು; ರಾಷ್ಟ್ರೀಯ ವಿಮೋಚನ ಹೋರಾಟಗಳ ಪರವಾಗಿ ಇರದಿದ್ದುದು. ವಸಾಹತುಶಾಹಿ ಚೌಕಟ್ಟಿನೊಳಗೇ ದೇಶೀಯರ ಆಡಳಿತ ಸ್ವಾತಂತ್ರ್ಯದ ಪರವಾಗಿದ್ದ ರಂಗಾಚಾರ್ಲು, ತಮ್ಮನ್ನು ರೂಪಿಸಿದ ಬ್ರಿಟಿಶ್ ಗುರುಗಳಿಗೂ ಅಧಿಕಾರಿಗಳಿಗೂ ನಿಷ್ಠವಾಗಿದ್ದಷ್ಟೇ, ಹೊಣೆಗಾರಿಕೆಯಿಲ್ಲದ ಬ್ರಿಟಿಶ್ ಅಧಿಕಾರಿಗಳ ವಿಷಯದಲ್ಲಿ ನಿಷ್ಠುರವಾಗಿದ್ದ ಚಿತ್ರಗಳು ಡಿವಿಜಿಯವರಲ್ಲಿವೆ. ಆದರೆ ಹೆಚ್ಚಿನ ಪಠ್ಯಕಾರರು ದಿವಾನರು ಬ್ರಿಟಿಶ್ ಚಕ್ರಾಧಿಪತ್ಯಕ್ಕೆ ಮಾಡಿದ ಸೇವೆಯನ್ನು ಅಳುಕಿಲ್ಲದೆ ವೈಭವೀಕರಿಸುತ್ತಾರೆ. "ಶಿಪಾಯಿದಂಗೆಗೆ ಸಂಸ್ಥಾನವನ್ನು ಒಳಪಡದಂತೆ, ಬ್ರಿಟಿಷ್ ಪ್ರಭುವರ್ಗದವರಿಗೆ ಮಹಾಭಯವನ್ನು ಉಂಟುಮಾಡುತ್ತಿದ್ದ ಪ್ರಜಾವರ್ಗದವರ ಮನಸ್ಸಮುದ್ರದ ಮೇರೆ ಮೀರದಂತೆ ಅವರ ಆಶಯವೆಂಬ ಕೆರೆಯ ಒಡ್ಡು ಒಡೆಯದಂತೆ, ಮಹಾಧೈರ್ಯದಿಂದ ತಡೆಗಟ್ಟಿದುದೂ ಸಾಲಾರಜಂಗನ ರಾಜನೀತಿ ನೈಪುಣ್ಯವನ್ನೂ ಕರ್ತವ್ಯನಿಷ್ಠೆಯನ್ನೂ ಧೈರ್ಯಸಾಹಸಗಳನ್ನೂ ರಾಜಭಕ್ತಿ–ಪ್ರಜಾಸೇವೆಗಳಲ್ಲಿದ್ದ ಆತನ ಅನನ್ಯಪರತೆಯನ್ನೂ ವ್ಯಕ್ತಗೊಳಿಸುತ್ತವೆ" ಎಂಬ ವ್ಯಾಖ್ಯಾನವನ್ನು ಗಮನಿಸಬಹುದು.[25]

ಹೀಗೆ ಬಹುತೇಕ ದಿವಾನ ಚರಿತ್ರೆಗಳು ದ್ವಿಜಶ್ರೇಷ್ಠತೆ, ಸನಾತನಪ್ರಜ್ಞೆ, ರಾಜಪ್ರಭುತ್ವ ಮತ್ತು ವಸಾಹತುಶಾಹಿಗಳನ್ನು ಸಮ್ಮತಿಸುವ ಸಾಮಾಜಿಕ ಧಾರ್ಮಿಕ ರಾಜಕೀಯ ಚೌಕಟ್ಟುಗಳಲ್ಲೇ ರೂಪುಗೊಂಡಿವೆ. ನಾಲ್ವಡಿ ಮತ್ತು ಮಿರ್ಜಾರ ಆಳ್ವಿಕೆಯು ಎಷ್ಟೇ ಸಾಮಾಜಿಕವಾಗಿ ಕ್ರಾಂತಿಕಾರಕವಾಗಿದ್ದರೂ, ಸ್ವಾತಂತ್ರ್ಯಚಳುವಳಿಯನ್ನು ಹೊಸಕಿಹಾಕುವ ವಿಷಯದಲ್ಲಿ ನಿರ್ದಯವಾಗಿತ್ತು. ಹೀಗಾಗಿ ವಸಾಹತುಪ್ರಜ್ಞೆಯು ದಿವಾನರ ಮತ್ತು ಒಡೆಯರ ಚರಿತ್ರೆಯ ಅವಿನಾಭಾಗವಾಯಿತು. ಚಾಮರಾಜೇಂದ್ರ ಒಡೆಯರವರು, ರಂಗಾಚಾರ್ಲು ಹೆಸರನ್ನು ದಿವಾನಗಿರಿಗೆ ಘೋಷಿಸುವಾಗ(1881) ಶಿಂಗ್ರಯ್ಯನವರು ಸೋಜಿಗದಿಂದ ಹೀಗೆ ವ್ಯಾಖ್ಯಾನಿಸುವರು: "ರಾಜರ ಸಂಪತ್ತಿಗೆ ಕಲ್ಪವೃಕ್ಷಪ್ರಾಯರಾಗಿರುವ ಪ್ರಜೆಗಳನ್ನು ಧರ್ಮದಿಂದ ಪರಿಪಾಲನೆ ಮಾಡುವುದೇ ಪ್ರಭುಗಳ ಧರ್ಮವಾಗಿದೆ. ಅಂತಹ ರಾಜರುಗಳಲ್ಲಿ ರಾಜಮರ್ಯಾದೆಯನ್ನೂ ವಿಶ್ವಾಸವನ್ನೂ ವಿಧೇಯತ್ವವನ್ನೂ ತೋರಿಸುವುದು ಪ್ರಜೆಗಳಿಗೆ ಮುಖ್ಯ ಕರ್ತವ್ಯವಾಗಿರುವುದು...ಈ ವಿಷಯದಲ್ಲಿ ರಾಜಪುತ್ರ ಸಂಸ್ಥಾನದ ಇತಿಹಾಸ ಲೇಖಕರರಲ್ಲಿ ಪ್ರಸಿದ್ಧರಾದ ಕರ್ನಲ್ ಜೇಮ್ಸ್‌ಟಾಡ್ ಸಾಹೇಬರು ಬರೆದಿರುವುದೇನೆಂದರೆ, ಯಾವ ದೇಶದಲ್ಲಿ ರಾಜ್ಯಭಾರವು ರಾಜರ ಇಚ್ಛಾಧೀನವಾಗಿರದೆ ನ್ಯಾಯನಿಬಂಧನೆಗೆ ಅಧೀನವಾಗಿರುವುದೋ ಮತ್ತು ಮತ್ತು ರಾಜರು ಆ ನ್ಯಾಯನಿಬಂಧನೆಗಳನ್ನನುಸರಿಸಿ ರಾಜಕಾರ್ಯಗಳನ್ನು ಮಾಡುವುದು ತಮ್ಮ ಕರ್ತವ್ಯವೆಂದೆಣಿಸಿ ನಡೆವರೋ, ಆ ದೇಶದ ಪ್ರಜೆಗಳು ಎಷ್ಟು ಪುಣ್ಯವಂತರೋ?" [26]

ಇಲ್ಲಿ ದಿವಾನರ ಪ್ರಸ್ತಾಪವಿಲ್ಲ. ಬದಲಿಗೆ ಪಾಶ್ಚಿಮಾತ್ಯ ನ್ಯಾಯ ಕಾನೂನುಗಳ ಚೌಕಟ್ಟು ಭಾರತೀಯ ರಾಜಪ್ರಭುತ್ವಕ್ಕೆ ಅಳವಡುತ್ತಿರುವ ಸಂಭ್ರಮವಿದೆ. ರಂಗಾಚಾರ್ಲು ಕಾಲಕ್ಕೆ ಈ ಕಾನೂನಿನ ಆಡಳಿತವು ಮೈಸೂರಿಗೆ ಪ್ರವೇಶಿಸಿತು. ಮೈಸೂರು ಸಂಸ್ಥಾನದಲ್ಲಿ ದಕ್ಷ ಅಧಿಕಾರಶಾಹಿಯ ಸಂಕೇತವಾಗಿ ದಿವಾನರು ನಾಯಕರಾಗಿರುವ ಪಠ್ಯಗಳು ಮಾತ್ರ ಹುಟ್ಟಲಿಲ್ಲ. ಅವರ ಪುತ್ಥಳಿ ಹಾಗೂ ಸ್ಮಾರಕ ಭವನಗಳು ಸಹ ಸ್ಥಾಪನೆಗೊಂಡವು. ಮೈಸೂರು ಅರಮನೆಯ ಎದುರು ಸ್ವತಃ ದೊರೆಯೇ ಮುನ್ನಿಂತು ಆಂಗ್ಲ ಇಂಜಿನಿಯರುಗಳ ವಿನ್ಯಾಸದಲ್ಲಿ ಕಟ್ಟಿಸುವ ರಂಗಾಚಾರ್ಲು ಸ್ಮಾರಕ ಭವನ ಇವುಗಳಲ್ಲೊಂದು. ಪಾಶ್ಚಿಮಾತ್ಯ ಶಿಕ್ಷಣ ಪಡೆದ ದೊರೆಯಿಂದ, ಅದೇ ಮಾದರಿಯಲ್ಲಿ ಶಿಕ್ಷಣ ಪಡೆದು ರಾಜಕಾರಣ ಮಾಡಿದ ರಂಗಾಚಾರ್ಲು ಅವರ ನೆನಪಿನ ಈ ಭವನವು ಯೂರೋಪಿನ ರೋಮನ್ ಶೈಲಿಯಲ್ಲಿಯೇ ಕಟ್ಟುಗೊಂಡಿದ್ದು (1885)ಈ ದೃಷ್ಟಿಯಿಂದ ಮಾರ್ಮಿಕವಾಗಿದೆ. ದಿವಾನಕೇಂದ್ರಿತ ಕಥನಗಳ ವಿಸ್ತರಣೆಯಂತೆಯೂ ತಾರ್ಕಿಕ ಅಂತ್ಯದಂತೆಯೂ ಈ ಕಟ್ಟಡವಿದೆ.

ಟಿಪ್ಪಣಿಗಳು ಮತ್ತು ಆಕರ ಸೂಚಿ

1. ನೋಡಿ: ತಿ.ತಾ.ಶರ್ಮ, 1996, **ಮೈಸೂರು ಇತಿಹಾಸದ ಕಳೆದುಹೋದ ಪುಟಗಳು**
2. ನವರತ್ನ ರಾಮರಾವ್, 1954, **ಕೆಲವು ನೆನಪುಗಳು**, ಪು. 136.
3. ಶರ್ಮ ತಿ.ತಾ., (ಸಂ.) 1973, **ಚಾರಿತ್ರಿಕ ದಾಖಲೆಗಳು**, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು. ಪು. 133
4. ಯಂ. ರಾಮರಾವ್, 1931, **ಪೂರ್ಣಯ್ಯನವರು**, ಪು. 20
5. ಎಂ.ಎಸ್. ಪುಟ್ಟಣ್ಣ, 1910, **ಕುಣಿಗಲು ರಾಮಶಾಸ್ತ್ರಿಗಳ ಚರಿತ್ರೆ**, ಪು. 89
6. ಪೂರ್ಣಯ್ಯನವರ ಆಶಯವು ಸರಿಯಾಗಿ ಒಂದು ಶತಮಾನದ ಬಳಿಕ, ಅವರ ಮರಿಮೊಮ್ಮಗ ಪಿ.ಎನ್. ಕೃಷ್ಣಮೂರ್ತಿ ದಿವಾನರಾಗುವ (1901–1906) ಮೂಲಕ ಈಡೇರಿತು.
7. ಎಂ. ಶಿಂಗ್ರಯ್ಯ, 1905, **ಶ್ರೀ ಚಾಮರಾಜೇಂದ್ರ ಒಡೆಯರವರ ಚರಿತ್ರೆ**, ಪು. 111
8. ಮೈಸೂರು ಸಂಸ್ಥಾನದಲ್ಲಿ ಅಕ್ಷರಶಃ "ನಿದ್ರಾಹಾರವಂ ಲೆಕ್ಕಿಸದೆ ರಾಜ್ಯತಂತ್ರ ವಿಚಾರವಂ" ಮಾಡಿದ ದಿವಾನರೆಂದರೆ ರಂಗಾಚಾರ್ಲು. ಅವರ ವಿರಾಮರಹಿತ ದುಡಿಮೆಯ ಬಗ್ಗೆ ಕಳವಳಿಸಿ ದೊರೆ ಬರೆದ ಸ್ವಾರಸ್ಯಕರ ಪತ್ರಗಳನ್ನು ಡಿವಿಜಿ ದಾಖಲಿಸುತ್ತಾರೆ.
9. ನವರತ್ನ ರಾಮರಾವ್, 1954, ಪೂರ್ವೋಕ್ತ, ಪು. 18
10. ಡಿವಿಜಿ, 1910, **ದಿವಾನ್ ರಂಗಾಚಾರ್ಲು**, ಪು. 34
11. ನವರತ್ನ ರಾಮರಾವ್, 1954, ಪೂರ್ವೋಕ್ತ, ಪು. 306
12. ಎಸ್.ಚಂದ್ರಶೇಖರ್, 2006, 'ಮಿರ್ಜಾ ಇಸ್ಮಾಯಿಲರ ರಾಜೀನಾಮೆ: ಒಂದು ವಿಶ್ಲೇಷಣೆ', **ವಸಾಹತುಕಾಲೀನ ಕರ್ನಾಟಕ**, ಪು. 298
13. ಪಂಡಿತ ಶೇಷಯ್ಯಂಗಾರ್, 1947, **ಶ್ರೀಮನ್ಮಹೀಶೂರ ನರಪತಿ ಶ್ರೀಮನ್ನಾಲ್ವಡಿ ಕೃಷ್ಣರಾಜ ವಂಶಾಭ್ಯುದಯಂ**, ಪು. 50
14. ಎಂ. ಶಿಂಗ್ರಯ್ಯ, 1905, ಪೂರ್ವೋಕ್ತ, ಪು. 51 ಹಾಗೂ 30.
15. ಡಿವಿಜಿ, 1910, ಪೂರ್ವೋಕ್ತ, ಮುನ್ನುಡಿ, ಪು.8
16. ಸುಜಾತ ಎಚ್.ಎಸ್., (ಸಂ.), 2003, 'ಮುಮ್ಮಡಿ ಶ್ರೀ ಕೃಷ್ಣರಾಜೇಂದ್ರ ಒಡೆಯರ ಬಿಲ್ಲುಗಾರಿಕೆ', **ಪುಟ್ಟಣ್ಣನವರ ಕನ್ನಡ ಮತ್ತು ಇಂಗ್ಲಿಷ್ ಲೇಖನಗಳು**, ಪು. 71
17. ಯಂ. ರಾಮರಾವ್, 1931, ಪೂರ್ವೋಕ್ತ, ಮುನ್ನುಡಿ.
18. ಎಂ. ಶಿಂಗ್ರಯ್ಯ, 1905, ಪೂರ್ವೋಕ್ತ, ಪು.3.
19. ಡಿವಿಜಿ, 1910, ಪೂರ್ವೋಕ್ತ, ಪು.28.
20. ಯಂ. ರಾಮರಾವ್, 1931, ಪೂರ್ವೋಕ್ತ, ಪು.45
22. ಡಿವಿಜಿ, 1910, ಪೂರ್ವೋಕ್ತ, ಪು.8–9
23. ಯಂ. ರಾಮರಾವ್, 1931, ಪೂರ್ವೋಕ್ತ, ಪು.40.
24. ಓ.ಎಲ್.ಲಿಂಗಣ್ಣಯ್ಯ, 1940, **ಶ್ರೀ ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರು**, ಪು.31
25. ಯಂ.ರಾಮರಾವ್, 1926, **ಹೈದರಾಬಾದಿನ ಮಂತ್ರಿಶ್ರೇಷ್ಠರಾದ ಸರ್ ಸಾಲಾರ್ ಜಂಗ್**, ಮುನ್ನುಡಿ.
26. ಎಂ. ಶಿಂಗ್ರಯ್ಯ, 1905, ಪೂರ್ವೋಕ್ತ, ಪು.111

* * *

- ಕೆಂಪುನಾರಾಯಣ, 1823, **ಮುದ್ರಾಮಂಜೂಷವು,** (ಸಂ.) ವೆಂಕಟಾಚಲ ಶಾಸ್ತ್ರಿ ಟಿ.ವಿ., 1998, ಸಾಹಿತ್ಯ ಅಕಾದೆಮಿ: ನವದೆಹಲಿ.
- ಗಳಗನಾಥ ಮಾಧವ ಕರುಣಾ ವಿಲಾಸ, 1923, (**ಗಳಗನಾಥ ಕಾದಂಬರಿ ಸಂಪುಟ–1**), 1999, ಕನ್ನಡ ವಿಶ್ವವಿದ್ಯಾನಿಲಯ: ಹಂಪಿ.
- ಚಂದ್ರಶೇಖರ್ ಎಸ್., (ಅನು.) ಸಿ. ನಾಗಣ್ಣ, 2000, **ದಕ್ಷಿಣ ಭಾರತ ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ,** ಕನ್ನಡ ವಿಶ್ವವಿದ್ಯಾಲಯ: ಹಂಪಿ.
- ಚಂದ್ರಶೇಖರ್ ಎಸ್., 2006, **ವಸಾಹತುಕಾಲೀನ ಕರ್ನಾಟಕ,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ: ಬೆಂಗಳೂರು.
- ಚಿನ್ನಸ್ವಾಮಿ ಸೋಸಲೆ (ಸಂ.), 2012, **ದಿವಾನ್ ಮಿರ್ಜಾ ಎಂ. ಇಸ್ಮಾಯಿಲ್ ಕಾಲದ ಮೈಸೂರು ಸಂಸ್ಥಾನ,** ಕನ್ನಡ ವಿಶ್ವವಿದ್ಯಾನಿಲಯ: ಹಂಪಿ.
- ಡಿವಿಜಿ, 1910, **ದಿವಾನ್ ರಂಗಾಚಾರ್ಲು, ಡಿವಿಜಿ ಪತ್ರಶ್ರೇಣಿ: 6,** (ಸಂ.) ಹಾ.ಮಾ ನಾಯಕ, (1994) ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ: ಬೆಂಗಳೂರು.
- ಡಿವಿಜಿ, 1922, ವಿದ್ಯಾರಣ್ಯರು ಮತ್ತು ಅವರ ಕಾಲ, **ಡಿವಿಜಿ ಪತ್ರಶ್ರೇಣಿ: 4,** (ಸಂ.) ಹಾ.ಮಾ ನಾಯಕ, (1996) ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ: ಬೆಂಗಳೂರು.
- ಡಿವಿಜಿ, 1971, **ಮೈಸೂರಿನ ದಿವಾನರು,** ಕಾವ್ಯಾಲಯ: ಮೈಸೂರು.
- ತಿ.ತಾ.ಶರ್ಮ, 1996, **ಮೈಸೂರು ಇತಿಹಾಸದ ಹಳೆಯ ಪುಟಗಳು,** ನವನೀತ ಪ್ರಕಾಶನ: ಬೆಂಗಳೂರು.
- ತಿ.ತಾ.ಶರ್ಮ, (ಸಂ.) 1973, **ಚಾರಿತ್ರಿಕ ದಾಖಲೆಗಳು,** ಕನ್ನಡ ಸಾಹಿತ್ಯ ಪರಿಷತ್ತು: ಬೆಂಗಳೂರು.
- ದೇವಚಂದ್ರ, 1835, **ರಾಜಾವಳಿ ಕಥಾಸಾರ,** (ಸಂ.) ಜಿ.ಎಸ್.ಸಣ್ಣಯ್ಯ, 1988, ಮೈಸೂರು ವಿಶ್ವವಿದ್ಯಾನಿಲಯ: ಮೈಸೂರು.
- ದೊಡ್ಡವೀರರಾಜೇಂದ್ರ, 1799, **ರಾಜೇಂದ್ರನಾಮೆ,** (ಸಂ.) ತಿ.ತಾ.ಶರ್ಮ, 1971, ಚಾರಿತ್ರಿಕ ದಾಖಲೆಗಳು, ಕನ್ನಡ ಸಾಹಿತ್ಯ ಪರಿಷತ್ತು: ಬೆಂಗಳೂರು.
- ನಲ್ಲಪಶೆಟ್ಟಿ,?, **ಹೈದರ್‌ನಾಮಾ,** (ಸಂ.) ತಿ.ತಾ.ಶರ್ಮ, 1971, ಚಾರಿತ್ರಿಕ ದಾಖಲೆಗಳು, ಕನ್ನಡ ಸಾಹಿತ್ಯ ಪರಿಷತ್ತು: ಬೆಂಗಳೂರು.
- ನವರತ್ನ ರಾಮರಾವ್, 1954, **ಕೆಲವು ನೆನಪುಗಳು** (ಆತ್ಮಕತೆ), ಜೀವನ ಕಾರ್ಯಾಲಯ, ಬೆಂಗಳೂರು.
- ಪಂಡಿತ ಶೇಷಯ್ಯಂಗಾರ್, 1947, **ಶ್ರೀಮನ್ಮಹೀಶರೂ ನರಪತಿ ಶ್ರೀಮನ್ನಾಲ್ವಡಿ ಕೃಷ್ಣರಾಜ ವಂಶಾಭ್ಯುದಯಂ,** ಅರಮನೆ ಪ್ರಕಟಣೆ: ಮೈಸೂರು.
- ಪುಟ್ಟಣ್ಣ ಎಂ.ಎಸ್., 1910 (1953), **ಕುಣಿಗಲು ರಾಮಶಾಸ್ತ್ರಿಗಳ ಚರಿತ್ರೆ,** ಕಾವ್ಯಾಲಯ: ಮೈಸೂರು.
- ಪುಟ್ಟಣ್ಣ ಎಂ.ಎಸ್., 1915 (2013), ಮಾಡಿದ್ದುಣ್ಣೋ ಮಹಾರಾಯ, ವಸಂತ ಪ್ರಕಾಶನ: ಬೆಂಗಳೂರು.
- ಮಿಸಕಿನ್ ನಸಿರುದ್ದಿನ್, (ಅನು.) ಮುನಸಿ ಮಹಮ್ಮದ ಖಾಸಿಂ, 1891, (ಸಂ.) ಎಸ್.ಎಲ್. ಶ್ರೀನಿವಾಸ ಮೂರ್ತಿ, ವಿ. ವಸಂತಶ್ರೀ, 2011, **ಜಂಗ್‌ನಾಮಾ,** ಜೀವನ ಕಾರ್ಯಾಲಯ ಟ್ರಸ್ಟ್: ಬೆಂಗಳೂರು.
- ಮುಮ್ಮಡಿ ಕೃಷ್ಣರಾಜ ಒಡೆಯರ್, (ಸಂ.) ಬಿ. ರಾಮಕೃಷ್ಣರಾವ್, 1916, **ಶ್ರೀಮನ್ಮಹಾರಾಜರವರ ವಂಶಾವಳಿ,** ಅರಮನೆ ಪ್ರಟಣೆ: ಮೈಸೂರು.
- ರಾಮರಾವ್ ಯಂ., 1926, **ಹೈದರಾಬಾದಿನ ಮಂತ್ರಿಶ್ರೇಷ್ಠರಾದ ಸರ್ ಸಾಲಾರ್ ಜಂಗ್,** ಸುಬೋಧ ಕುಸಮಾಂಜಲಿ: ಬೆಂಗಳೂರು.
- ರಾಮರಾವ್ ಯಂ., 1931, **ಪೂರ್ಣಯ್ಯನವರು,** ಸುಬೋಧ ಪ್ರಕಟಾಲಯ: ಬೆಂಗಳೂರು.
- ಲಿಂಗ್ರಯ್ಯ ಎಂ., 1905, **ಶ್ರೀ ಜಯಚಾಮರಾಜೇಂದ್ರ ಒಡೆಯರವರ ಚರಿತ್ರೆ,** ಅರಮನೆ ಪ್ರಕಟಣೆ: ಮೈಸೂರು.
- ಲಿಂಗಯ್ಯ ಎಂ. 1941, **ನಾಲ್ವಡಿ ಶ್ರೀಕೃಷ್ಣರಾಜ ಒಡೆಯರವರು,** ವೆಸ್ಲಿಪ್ರೆಸ್ ಮತ್ತು ಪಬ್ಲಿಷಿಂಗ್ ಹೌಸ್: ಮೈಸೂರು.
- ಲಿಂಗಣ್ಣಯ್ಯ ಟಿ.ಎಲ್., 1940, **ಶ್ರೀ ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರು,** ಶ್ರೀಶೈಲ ಕುಮಾರೀ ಗ್ರಂಥಮಾಲೆ: ಬೆಂಗಳೂರು.
- ಲಿಂಗದೇವರು ಹಳೆಮನೆ, (ಸಂ.), 2009, **ಧೀರ ಟಿಪ್ಪುವಿನ ಲಾವಣಿಗಳು,** ವಿಸ್ಮಯ ಪ್ರಕಾಶನ: ಮೈಸೂರು.
- ಸುಜಾತಾ ಎಚ್.ಎಸ್., (ಸಂ), 2003, **ಪುಟ್ಟಣ್ಣನವರ ಕನ್ನಡ ಮತ್ತು ಇಂಗ್ಲಿಷ್ ಲೇಖನಗಳು,** ಸುಹಾಸ ಪ್ರಕಟಣೆಗಳು: ಮೈಸೂರು.
- ವೆಂಕಟರಾಮಯ್ಯ ಸಿ.ಕೆ., 1941, **ಅಳಿದ ಮಹಾಸ್ವಾಮಿಯವರು,** ಬೆಂಗಳೂರು ಪ್ರೆಸ್: ಬೆಂಗಳೂರು.

■

ITIHASA DARPANA (Quarterly)
A Peer Reviewed Journal of Historical Research in Kannada
ISSN 2321-3590
Book No.: 37-38.
April – September 2018
Author: T. Murugeshi
Title: Kāḷāvara ondu chāritrika adhyayana

ಕಾಳಾವರ ಒಂದು ಚಾರಿತ್ರಿಕ ಅಧ್ಯಯನ

ಟಿ. ಮುರುಗೇಶಿ
ಸಹ ಪ್ರಾಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು
ಪುರಾತತ್ವಶಾಸ್ತ್ರ ವಿಭಾಗ,
ಎಂ.ಎಸ್.ಆರ್.ಎಸ್.ಕಾಲೇಜು, ಶಿರ್ವ-
574116. ಉಡುಪಿ.
ಮೊ: 9482520933.
murugesh.turuvekere01@gmail.com

ಉಡುಪಿ ಜಿಲ್ಲೆ, ಕುಂದಾಪುರ ತಾಲೂಕಿನ ಕಾಳಾವರ ಒಂದು ಅಪರೂಪದ ಕಾಳಿಂಗಸರ್ಪದ ಆರಾಧನಾ ಕೇಂದ್ರ. ಈ ಕೇಂದ್ರದ ಬಲಭಾಗದಲ್ಲಿ ಮಹಾಲಿಂಗೇಶ್ವರ ದೇವಾಲಯವಿದೆ. ದೇವಾಲಯದ ಅಂತರಾಳದ ದ್ವಾರದ ಎಡ-ಬಲಗಳಲ್ಲಿ ಎರಡು ವಿಜಯನಗರದ ಶಾಸನಗಳಿವೆ. ಕಾಳಾವರದ ಮೆಕ್ಕೆಗದ್ದೆ ಎಂಬಲ್ಲಿ ಮತ್ತೊಂದು ಶಾಸನವಿದೆ. ಈ ಇಡೀ ದೇವಾಲಯು ಸಂಕೀರ್ಣ ಈಗ ಜೀರ್ಣೋದ್ಧಾರವಾಗುತ್ತಿದೆ. ದೇವಾಲಯದ ವಾಸ್ತುರಚನೆ, ಶಿಲ್ಪಗಳು ಮತ್ತು ಶಾಸನಗಳ ಹಿನ್ನೆಲೆಯಲ್ಲಿ ಕಾಳಾವರದ ಸಮಗ್ರ ಚಾರಿತ್ರಿಕ ಅಧ್ಯಯನವನ್ನು ನಡೆಸುವ ಒಂದು ಚಿಕ್ಕ ಪ್ರಯತ್ನವೇ ಈ ಪ್ರಬಂಧದ ಉದ್ದೇಶವಾಗಿದೆ.


ಕಾಳಾವರ ಹೆಸರಿನ ಹಿನ್ನೆಲೆ: ಉಡುಪಿ ಜಿಲ್ಲೆಯಾದ್ಯಂತ ಕೊರಗ, ಬಂಟ ಮತ್ತು ಇತರ ಸಮುದಾಯದಲ್ಲಿ ಕಾಡಿ, ಕಾಡ್ತಿ, ಕಾಡಿಶೆಟ್ಟಿ, ಕಾಡ್ತಿಶೆಟ್ಟಿ, ಹೆಸರುಗಳು ಜನಪ್ರಿಯವಾಗಿವೆ. ಕಾಡ್ಯನಾಟ್ಯ ಪ್ರಾಚೀನ ಧಾರ್ಮಿಕ ಮತ್ತು ಜನಪದ ರಂಗಕಲೆಯಾಗಿದೆ. ಇದರಿಂದ, ಕಾಳಾವರ ಹೆಸರಿನ ಮೂಲರೂಪ ಕಾಡ್ಯ ಅಥವಾ ಕಾಡಿಳ ಆಗಿರುವ ಸಾಧ್ಯತೆಯಿದೆ. ಕಾಡಿ ಎಂದರೆ, ಕಾಳಿಂಗಸರ್ಪದ ಜನಪದ ರೂಪ. ಶಾಸನದಲ್ಲಿಯೂ ಕಾಡಿಳ ಎಂಬ ಉಲ್ಲೇಖವೇ ಇದೆ.

ಆದರೆ, ಕಾಳಾವರದ ಶಾಸನಗಳಲ್ಲಿ, ಕಾಳಾಉರ ಎಂಬ ಉಲ್ಲೇಖ ಕಂಡುಬರುತ್ತದೆ. ಕಂದಉರ (ಕಂದಾವರ), ಬ್ರಹ್ಮಉರ (ಬ್ರಹ್ಮಾವರ), ಕಾಂತಉರ (ಕಾಂತಾವರ), ಉದೆವೂರ (ಉದಯಪುರ), ಎಂಬ ಮುಂತಾದ ಹೆಸರುಗಳಲ್ಲಿ ಕಂಡುಬರುವಂತೆ ಹೆಸರಿನ ಅಂತ್ಯ ಪ್ರತ್ಯಯಗಳು ವರ ಆಗಿ ಬದಲಾಗಿರುವುದು ಕಂಡುಬರುತ್ತದೆ. ಪು>ವ ಆಗಿರುವ ಉದಾಹರಣೆಗಳು ಸಂಧಿಸ್ಥಾನದಲ್ಲಿ ಧಾರಾಳವಾಗಿ ಕಂಡುಬರುತ್ತವೆ. ಅವು ಸಾಮಾನ್ಯವಾಗಿ ಪುರ ಎಂಬ ಸಂಸ್ಕೃತ ವಾರ್ಗಿಕ ಅಂಟಿರುವ ಸ್ಥಳನಾಮಗಳಲ್ಲಿ ಪ್ರವರ್ತಿಸಿರುವುದು ವಿಚಾರಣೀಯ. ಉದಾ: ಬ್ರಹ್ಮಪುರ-ಬ್ರಹ್ಮಾವರ, ಉದಯಪುರ-ಉದಿಯಾವರ, ಅರ್ಥಪುರ-ಅತ್ತಾವರ, ಸ್ಕಂದಪುರ-ಕಂದಾವರ, ಕಾಳಾವರ<ಕಾಲ+ಪುರ, ಎಂಬ ಚಾರಿತ್ರಿಕ ನಿಷ್ಪತ್ತಿಯನ್ನು ರಘುಪತಿ ಕೆಮ್ತೂರ್ ರವರು ಅಭಿಪ್ರಾಯ ಪಟ್ಟಿದ್ದಾರೆ. ಈ ಅಭಿಪ್ರಾಯ ಸಾಂಸ್ಕೃತಿಕ ಅಧ್ಯಯನ ದೃಷ್ಟಿಯಿಂದ ಮುಖ್ಯವಾಗುತ್ತದೆ.

ದೇವಾಲಯದ ವಾಸ್ತು: ಮಹಾಲಿಂಗೇಶ್ವರ ದೇವಾಲಯವನ್ನು, ದೊಡ್ಡ-ದೊಡ್ಡ ಕಲ್ಲು ಚಪ್ಪಡಿಗಳನ್ನು ಉಪಯೋಗಿಸಿ ಸಮ ಚತುರಶ್ರ ಶೈಲಿಯಲ್ಲಿ ನಿರ್ಮಿಸಲಾಗಿದೆ. ದೇವಾಲಯದ ವಾಸ್ತು ಅತ್ಯಂತ ಪ್ರಾಚೀನ ಶೈಲಿಯನ್ನು ಹೊಂದಿದ್ದಿತು. ದೇವಾಲಯ ಒಂದು ಗರ್ಭಗೃಹ, ಅಂತರಾಳವನ್ನು ಒಳಗೊಂಡಿದೆ. ಗರ್ಭಗೃಹ ಅಂತರಾಳಕ್ಕಿಂತ ತಗ್ಗಾಗಿದೆ. ಗರ್ಭಗೃಹದ ಮಧ್ಯಭಾಗದಲ್ಲಿ ಪಾಣಿಪೀಠ ಸಹಿತವಾದ ಒಂದು ಶಿವಲಿಂಗವಿದೆ. ಶಿವಲಿಂಗದ ಸುತ್ತ ವಿಶಾಲವಾದ ಪ್ರದಕ್ಷಿಣಾ ಪಥವಿದೆ. ಗರ್ಭಗೃಹದ ಸುತ್ತ ಮತ್ತೊಂದು ಪ್ರದಕ್ಷಿಣಾ ಪಥವಿದೆ. ಅಂತರಾಳದ ಎಡ-ಬಲ ಅಥವಾ ಉತ್ತರ-ದಕ್ಷಿಣ, ಪೂರ್ವ ದಿಕ್ಕಿನಿಂದ ಮೂರು ಪ್ರವೇಶ ದ್ವಾರಗಳಿವೆ. ಗರ್ಭಗುಡಿಗೆ ಮತ್ತೊಂದು ಪ್ರವೇಶ ದ್ವಾರವಿದೆ. ಎಲ್ಲಾ ದ್ವಾರಗಳ ಎತ್ತರ ಕಿರಿದಾಗಿದ್ದು ತಲೆಬಾಗಿಯೇ ಒಳಪ್ರವೇಶಿಸಬೇಕಿತ್ತು. ಗರ್ಭಗೃಹದ ಮೇಲ್ಭಾಗದಲ್ಲಿ ಮಾಳಿಗೆಯಿದ್ದು ಮಾಳಿಗೆಯ ಮುಮ್ಮುಖದಲ್ಲಿ ಗರುಡನ ಕೆತ್ತನೆಯ ಲಾಂಛನವುಳ್ಳ ಮರದ ಹಲಗೆಯಿದೆ. ಇನ್ನು ತೀರ್ಥ ಮಂಟಪ ಮತ್ತು ಸುತ್ತು ಪೌಳಿಗಳು ನಂತರದ ಸೇರ್ಪಡೆಗಳು. ಈ ದೇವಾಲಯದ ಬಲಭಾಗದಲ್ಲಿಯೇ ಕಾಳಿಂಗನ ಆರಾಧನಾ ಕೇಂದ್ರವಿದೆ. ದೇವಾಲಯದಲ್ಲಿ ಹ್ಯಾಗುಳಿ, ಚೌಂಡಿ ಮುಂತಾದ ಪರಿವಾರ ದೈವಗಳಿವೆ.

ದೇವಾಲಯದ ಹೊರಭಾಗದಲ್ಲಿ ಒಂದು ಮರದ ಕಟ್ಟೆಯಿದ್ದು ಅದರ ಪಕ್ಕದಲ್ಲಿ ಸ್ವಲ್ಪ ತುಂಡಾದ ಕಲ್ಲಿನ ಶಿಲ್ಪವೊಂದಿದೆ. ಕಾಳಿಂಗ ಆಲಯದ ಹಿಂಭಾಗದಲ್ಲಿ ಮರದ ಕೆಳಗೆ ರಾಶಿಯಿದ್ದ ಮಣ್ಣಿನ ಮಡಕೆಗಳನ್ನು ತೆಗೆಯಲಾಗಿದೆ. ಆದರೂ ಭೂಸ್ತರದಲ್ಲಿ ಇನ್ನೂ ರಾಶಿಗಟ್ಟಲೆ ಮಡಕೆಗಳು ಸೇರಿಕೊಂಡಿವೆ. ಅವುಗಳನ್ನು ಮುರ್ಲೆಗಳೆಂದು ತುಳುವಿನಲ್ಲಿ ಕರೆಯಲಾಗುತ್ತದೆ.

ಶಾಸನೋಕ್ತ ವಿಷಯಗಳು: ಕಾಳಾವರದಲ್ಲಿ ವಿಜಯನಗರ ಕಾಲದ ಮೂರು ಶಾಸನಗಳು ಪತ್ತೆಯಾಗಿವೆ. ಮೊದಲ ಶಾಸನ ಸಂಗಮ ದೊರೆ 2ನೇ ದೇವರಾಯನ ಕ್ರಿ.ಶ. 1438 ನೇ ಕಾಲದ್ದು, ಎರಡನೇ ಶಾಸನ ತುಳುವ ನರಸಿಂಹನ ಕ್ರಿ.ಶ. 1508ನೇ ಕಾಲದ್ದು ಮತ್ತು ಕಾಳಾವರದ ಮೆಕ್ಕೆಗದ್ದೆಯಲ್ಲಿನ ಮೂರನೇ ಶಾಸನ ಸಹ 2ನೇ ದೇವರಾಯನ ಕಾಲಕ್ಕೆ ಸೇರಿದ ಶಾಸನವಾಗಿದೆ.



2ನೇ ದೇವರಾಯನ ಮೆಕ್ಕೆಗದ್ದೆ ಶಾಸನ

2ನೇ ದೇವರಾಯನ ಶಾಸನದಲ್ಲಿ, ಕಾಳಾವರದ ದುಗ್ಗಣ್ಣ ನಾಯಕ ಎಂಬುವನು, ತಿರುಮಲೆಯ ಭಂಡಾರಿ ನಾಯಕರ ಮೂಲಕ ಚಕ್ರವರ್ತಿಯ ಬಳಿಗೆ ತೆರಳಿ ಮಾಡಿಕೊಂಡ ಬಿನ್ನಹದ ಮೇರೆಗೆ, ಕಾಳಉರ ಎಂಬ ಪ್ರದೇಶವನ್ನು ರಾಯರು ಸರ್ವಮಾನ್ಯವಾಗಿ ದುಗ್ಗಣ ನಾಯಕನಿಗೆ ನೀಡಿದ ವಿಷಯವನ್ನು ಈ ಶಾಸನದಲ್ಲಿ ಪ್ರಸ್ತಾಪಿಸಲಾಗಿದೆ. ಆಗ, ಚಂಡರಸ ಒಡೆಯರು ಬಾರಕೂರು ರಾಜ್ಯದ ರಾಜ್ಯಪಾಲರಾಗಿ ಆಳ್ವಿಕೆಯನ್ನು ನಡೆಸುತ್ತಿದ್ದರೆಂದು, ಈ ಶಾಸನಕ್ಕೆ ಚಂಡರಸ ವೊಡೆಯರ ವೊಪ್ಪ, ಶ್ರೀ ತ್ರಿಯಂಬಕ, ನಾಲ್ವತ್ತು ನಾಡುಹದಿನಾರರ ಪ್ರಮಾಣವನ್ನು ಶಾಸನ ಹೆಸರಿಸುತ್ತದೆ.

ಮೂರನೇ ಶಾಸನ, ಸಹ 2ನೇ ದೇವರಾಯನ ಕಾಲಕ್ಕೆ ಸೇರಿದೆ. ಶಾಸನದಲ್ಲಿ ಕಾಲವನ್ನು ಉಲ್ಲೇಖಿಸಿರುವ ಭಾಗ ತ್ರುಟಿತವಾಗಿದೆ. ಈ ಶಾಸನ ಕಾಳಾವರದಲ್ಲಿ ಒಂದು ಕೆರೆಯನ್ನು ನಿರ್ಮಿಸಿ, ಅದರ ಮಧ್ಯದಲ್ಲಿ, ಕೃಷ್ಣನನ್ನು ಪ್ರತಿಷ್ಠೆ ಮಾಡಿಸಿದ ವಿಷಯವನ್ನು ದಾಖಲಿಸಿದೆ. ಆಗ, ಗೋವೆಯ ಬಾಚಣ್ಣ ಒಡೆಯರು ಬಾರಕೂರಿನ ರಾಜ್ಯಪಾಲರಾಗಿದ್ದ ವಿಷಯವನ್ನು ತಿಳಿಸುತ್ತದೆ.

ತುಳುವ ನರಸಿಂಹನ ಶಾಸನದಲ್ಲಿ, ವಿಜಯನಗರ ಸಾಮ್ರಾಜ್ಯವನ್ನು ಆಳ್ವಿಕೆ ಮಾಡಿದ ತುಳುವ ರಾಜಮನೆತನದ ಸ್ಥಾಪಕ 2ನೇ ನರಸಿಂಹನನ್ನು ಯಿಂಮಡಿ ವೀರ

ವಸಂನ್ತ ನರಸಿಂಹರಾಯನೆಂದು ಹೆಸರಿಸುತ್ತದೆ. ಉಡುಪಿ ಜಿಲ್ಲೆಯಲ್ಲಿ ಈತನ ಅನೇಕ ಶಾಸನಗಳು ಈಗಾಗಲೇ ಪ್ರಕಟವಾಗಿವೆ. ಈತನ ಪ್ರಧಾನಿಯಾಗಿ ವಿಠಂಮರಸ ಒಡೆಯ ಹಾಗೂ ಬಾರಕೂರಿನ ರಾಜ್ಯಪಾಲನಾಗಿ ಬಸವರಸ ಒಡೆಯರು ಆಳ್ವಿಕೆ ನಡೆಸುತ್ತಿದ್ದರೆಂದು ಶಾಸನ ತಿಳಿಸುತ್ತದೆ. ಪ್ರಸ್ತುತ ಸಂಶೋಧಿಸಿದ ಶಾಸನವು 2ನೇ ನರಸಿಂಹನ ಆರನೇ ಶಾಸನವಾಗಿದೆ.

ಶಾಸನವು ಮೂವರು ಮುಕಾಲಡಿಗಳನ್ನು ಉಲ್ಲೇಖಿಸುತ್ತದೆ. ಮಾಬಳಿಯ ದೇವಸ್ವದ ಸ್ಥಾನ ಮುಕಾಲಡಿಗಳು. ಕಂದಾವರದ ಉಡುಪ ಭಟ್ಟರು ಮತ್ತು ಮುಳವಲಿಯ ನಾಯರು. ಈ ಮೂವರು ಮುಕಾಲಡಿಗಳು ಒಪ್ಪಿ ಶಾಸನವನ್ನು ಬರೆಸಿದರೆಂದು ಹೇಳಲಾಗಿದೆ. ಹಾಗಾದರೆ, ಈ ಮುಕಾಲಡಿಗಳು ಯಾರು? ಅವರ ಸ್ಥಾನಮಾನಗಳು ಏನು ಎಂಬ ಪ್ರಶ್ನೆ ಇಲ್ಲಿ ಉದ್ಭವಿಸುತ್ತದೆ. ತುಳುನಾಡಿನ ಬಂಟ ಸಮುದಾಯದಲ್ಲಿ ಮುಕ್ಕಾಲ್ದಿ ಹಾಗೂ ಮುಕ್ಕಾಲು ಶೆಟ್ರು ಎಂಬ ಪದಗಳು ಬಳಕೆಯಲ್ಲಿವೆ. ಬಹುಶಃ, ಶಾಸನೋಕ್ತ ಮುಕ್ಕಾಲಡಿ ಎಂಬ ಪದವೆ ಮುಕ್ಕಾಲ್ದಿ ಎಂಬ ಆಡುನುಡಿಯಾಗಿ ಬಳಕೆಗೆ ಬಂದಿರಬಹುದೆನಿಸುತ್ತದೆ. ಈ ಹಿನ್ನೆಲೆಯಲ್ಲಿ ಇಂದಿರಾ ಹೆಗ್ಗಡೆಯವರ ಮಾತುಗಳು ಪರಿಶೀಲನೆಗೆ ಯೋಗ್ಯವಾಗಿವೆ. "................... ಆದರೂ, ರಾಜನ್ ದೈವಗಳ, ಶಕ್ತಿ ದೇವತೆಗಳ ಅರ್ಚಕರಾಗಿ ಬಂಟರೇ ಬೇಕು. ಬಂಟ ಅರ್ಚಕರನ್ನು 'ಮುಕ್ಕಾಲ್ದಿ' ಎನ್ನುತ್ತಾರೆ. ಕುಂದಾಪುರದ ಕಡೆ 'ಮುಕ್ಕಾಲು ಸೆಟ್ರು' ಎನ್ನುತ್ತಾರೆ. ಇವರು ಕೆಲವಡೆ ದರ್ಶನ ಪಾತ್ರಿಗಳಾಗಿ ಇರುತ್ತಾರೆ." ಆದರೆ, ಶಾಸನದಲ್ಲಿ ಕಂದಾವರದ ಉಡುಪ ಭಟ್ಟರನ್ನು ಸಹ ಮುಕ್ಕಾಲಡಿಗಳು ಎಂದು ಕರೆಯಲಾಗಿದೆ. ಆದ್ದರಿಂದ, ಮುಕ್ಕಾಲಡಿಗಳು ಎಂಬ ಶಬ್ದ ಕೇವಲ ಒಂದು ಸಮುದಾಯಕ್ಕೆ ಸೀಮಿತವಾಗಿರಲಿಲ್ಲ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ.

ಶಾಸನದಲ್ಲಿ ಮೂವರು ಮುಕ್ಕಾಲಡಿಗಳು ಒಪ್ಪಿ ಶಾಸನವನ್ನು ಬರೆಸಿ, ಪಡು ಕಾಳಾವರದ ಮಹದೇವ ದೇವರಿಗೆ, ಕಾಡಿ ದೇವರಿಗೆ, ಶಾಸ್ತಾವು ದೇವರಿಗೆ ಮತ್ತು ಮಹಾಚವೂಲ್ತಿ ಮಲೆಯ ಶಕ್ತಿಗೆ, ಬ್ರಾಹ್ಮಣರ ಭೋಜನಕ್ಕೆ ದೇವಸ್ವದ ಭೂಮಿಯನ್ನು ಗೇಣಿಗೆ ನೀಡಿ ದೇವಾಲಯದ ಧಾರ್ಮಿಕ ಕಾರ್ಯಗಳು ಸಾಂಗವಾಗಿ ನಡೆಯುವುದಕ್ಕೆ ಬೇಕಾದ ವ್ಯವಸ್ಥೆಯನ್ನು ಅವರು ಮಾಡಿದ್ದನ್ನು ಶಾಸನ ವಿವರವಾಗಿ ದಾಖಲಿಸುತ್ತದೆ. ಈ ವಿವರಗಳು ದೇವಾಲಯದ ಆಡಳಿತ ವ್ಯವಸ್ಥೆಯಲ್ಲಿ ಮುಕ್ಕಾಲಡಿಗಳು ಹೊಂದಿದ್ದ ಪ್ರಭಾವವನ್ನು ಸ್ಪಷ್ಟಪಡಿಸುತ್ತದೆ. ಆದ್ದರಿಂದ, ಮುಕ್ಕಾಲಡಿಗಳು, ದೇವಾಲಯದ ಆಡಳಿತವನ್ನು ನಡೆಸುತ್ತಿದ್ದ ಒಂದು ಆಡಳಿತ ಮಂಡಳಿಯಾಗಿತ್ತು ಎಂದು ಪರಿಗಣಿಸಬಹುದು ಹಾಗೂ ಸಮಾಜದ ವಿವಿಧ ವರ್ಗಗಳನ್ನು ಪ್ರತಿನಿಧಿಸುತ್ತಿದ್ದ ಒಂದು ವ್ಯವಸ್ಥೆಯಾಗಿತ್ತು ಎಂದು ತಿಳಿಯಬಹುದು.

ಶಾಸನೋಕ್ತ ಮುಕ್ಕಾಲಡಿಗಳಲ್ಲಿ ಒಬ್ಬರು ಮಾಬಳಿಯ ದೇವಸ್ವದ ಸ್ಥಾನ ಮುಕ್ಕಾಲಡಿಗಳು. ಬಹುಶಃ ಅವರು ಸ್ಥಾನಿಕ ಬ್ರಾಹ್ಮಣರಾಗಿರಬಹುದು. ಕಂದಾವರದ ಉಡುಪ ಭಟ್ಟರು ಹೆಬ್ಬಾರ ಪಂಗಡಕ್ಕೆ ಸೇರಿದ ಸ್ಮಾರ್ತ ಬ್ರಾಹ್ಮಣರು. ಇನ್ನು ಮುಳವಲಿ ನಾಯರು ಬಂಟ ಸಮುದಾಯಕ್ಕೆ ಸೇರಿದವರು. ಇದು ಅತ್ಯಂತ ಸ್ಪಷ್ಟವಾಗಿ ಮುಕ್ಕಾಲಡಿಗಳು ವಿವಿಧ ಸಮುದಾಯಗಳನ್ನು ಒಳಗೊಂಡ ಒಂದು ಆಡಳಿತ ಸಂಸ್ಥೆಯಾಗಿತ್ತು ಎಂದು ತಿಳಿದು ಬರುತ್ತದೆ.

ನಾಡವರು ಮತ್ತು ನಾಯರು ಒಂದೇ ಸಮುದಾಯದವರೇ ಅಥವಾ ಬೇರೆಯೆ ಎಂಬ ಪ್ರಶ್ನೆ ಚರ್ಚಾಸ್ಪದ ವಿಷಯವಾಗಿದೆ. ಆದರೆ, ಪ್ರಸ್ತುತ ಅಧ್ಯಯನದ ಶಾಸನದಲ್ಲಿಯೇ ನರಸಿಂಗಾಡಿನ ಮಗಳು ಕಿಳಾಬಳಿಯ ಬಿರುಬಾಲೆ ಸೆಟಿತ್ತಿಗೆ ಉಳ್ಳ ಸ್ಥಳ ಎಂದು ಉಲ್ಲೇಖಿಸಲಾಗಿದೆ. ಈ ಉಲ್ಲೇಖ ಅತ್ಯಂತ ಖಚಿತವಾಗಿ ನಾಯರರು ಬಂಟ ಸಮುದಾಯಕ್ಕೆ ಸೇರಿದ ಒಂದು ಸಮುದಾಯ ಎಂದು ಸ್ಪಷ್ಟವಾಗುತ್ತದೆ. ಅಲ್ಲದೆ, ಕಿಳಾಬಳಿ ಎಂಬ ಬಳಿ ಬಂಟರಲ್ಲಿ ಇಂದಿಗೂ ಪ್ರಚಲಿತದಲ್ಲಿರುವ ಒಂದು ಬಳಿಯಾಗಿರುವುದು ಸಹ ಗಮನಿಸಬೇಕಾದ ಸಂಗತಿಯಾಗಿದೆ.

ಶಾಸನದ ಧಾರ್ಮಿಕ ಮತ್ತು ಸಾಮಾಜಿಕ ಮಹತ್ವ: ಪ್ರಸ್ತುತ ಅಧ್ಯಯನದ ಶಾಸನವು ತುಳುನಾಡಿನ ಧಾರ್ಮಿಕ ಮತ್ತು ಸಾಮಾಜಿಕ ಚರಿತ್ರೆಯ ಅಧ್ಯಯನದ ದೃಷ್ಟಿಯಿಂದ ಅತ್ಯಂತ ಮಹತ್ವದ ದಾಖಲೆಯಾಗಿದೆ. ಶಾಸನದಲ್ಲಿ ಕಾಳಾವರದ ಮಹದೇವರ (ಶಿವ) ಅಮೃತಪಡಿ, ನಂದಾದೀವಿಗೆ, ಮಾಲೆ ಮತ್ತಿತರ ಧಾರ್ಮಿಕ ಕಾರ್ಯಗಳಿಗೆ ನೀಡಿದ ದಾನವನ್ನು ದಾಖಲಿಸಲಾಗಿದೆ. ಶೈವ ಪರಿವಾರದಲ್ಲಿಯೇ ಗುರುತಿಸಲ್ಪಡುವ ನಂದಿ, ಶಾಸ್ತಾವು, ಮಹಾಚವುಲ್ತಿ (ಚಾಮುಂಡಿ?) ಮತ್ತು ಕಾಡಿಳದೇವರು (ಕಾಳಿಂಗ) ದೇವತೆಗಳಿಗೆ ದಾನ ನೀಡಿರುವುದನ್ನು ಶಾಸನಾಧ್ಯಯನದಿಂದ ತಿಳಿಯಬಹುದಾಗಿದೆ. ಇದರಿಂದ ವಿಜಯನಗರ ಕಾಲದಲ್ಲಿ ಕಾಳಾವರದ ಈ ದೇವಾಲಯ ಶೈವ ಪ್ರಧಾನ ದೇವಾಲಯವಾಗಿತ್ತೆಂದು ತಿಳಿದು ಬರುತ್ತದೆ.

ಪ್ರಸ್ತುತ ಶಾಸನದಲ್ಲಿ ಬ್ರಾಹ್ಮಣ, ನಾಯರು, ಬಂಟ, ಬೆಸವರ (ಬೆಸ್ತ?), ಮತ್ತು ಕುಂಬಾರ ಸಮುದಾಯಗಳನ್ನು ಉಲ್ಲೇಖಿಸಲಾಗಿದೆ. ಇದು, ದೇವಾಲಯದ ದೈನಂದಿನ ಚಟುವಟಿಕೆ ಹಾಗೂ ವಿವಿಧ ಸಮುದಾಯಗಳ ಸಹಭಾಗಿತ್ವದ ಸಾಮಾಜಿಕ ಅಧ್ಯಯನದ ದೃಷ್ಟಿಯಿಂದ ಮಹತ್ವವಾಗಿದೆ.

ಮೇಲಿನ ಶಾಸನೋಕ್ತ ವಿಚಾರಗಳು, ದೇವಾಲಯದ ವಾಸ್ತು, ಶಿಲ್ಪ, ಜಾನಪದೀಯ ಅಂಶಗಳ ಹಿನ್ನೆಲೆಯಲ್ಲಿ ಕಾಳಾವರದ ಚಾರಿತ್ರಿಕ ಬೆಳವಣಿಗೆಯ ವಿವಿಧ ಮಜಲುಗಳನ್ನು ಅರ್ಥೈಸಿಕೊಳ್ಳಲು ಪ್ರಯತ್ನಿಸಬಹುದಾಗಿದೆ.

ವೈದಿಕ ಸಂಸ್ಕೃತಿಯ ಪೂರ್ವದಲ್ಲಿ, ಕಾಳಾವರ ಬಹುಜನ ಸಂಸ್ಕೃತಿಯ ಒಂದು ಜನಪ್ರಿಯ ಆರಾಧನಾ ಕೇಂದ್ರವಾಗಿದ್ದಂತೆ ತಿಳಿದುಬರುತ್ತದೆ. ಬಹುಜನ ಸಂಸ್ಕೃತಿಯ ಆರಾಧನಾ ಕೇಂದ್ರಗಳನ್ನು ತುಳುನಾಡಿನಲ್ಲಿ, ಬೆರ್ಮೆರ ಸಾನ, ನಾಗ ಬೆರ್ಮೆರ್, ಆಲಡೆ, ಕಾಡ್ಯನ ಮನೆ ಮುಂತಾದ ಹೆಸರುಗಳಿಂದ ಕರೆಯಲ್ಪಡುತ್ತಿದ್ದುದು ಸ್ಥಳೀಯ ಸಾಂಸ್ಕೃತಿಕ ಹಿನ್ನೆಲೆಯನ್ನು ಅವಲೋಕಿಸಿದಾಗ ತಿಳಿಯುತ್ತದೆ. ಕಾಳಾವರದ, ಕಾಳಿಂಗಸರ್ಪ ಆರಾಧನಾ ಕೇಂದ್ರವೂ, ಕೇವಲ ಕಾಳಿಂಗನ ಆರಾಧನೆಗೆ ಸೀಮಿತವಾಗಿರಲಿಲ್ಲ. ಶಾಸನದಲ್ಲಿಯೇ, ನಾಗ ದೇವಾಲ್ಯ, ಕಾಡಿಳ ದೇವರು, ಶಾಸ್ತಾವು, ಮಹಾಚವುಲ್ತಿ ಉಲ್ಲೇಖಗಳಿವೆ.

ಹಳೆಯ ದೇವಾಲಯದ ವಾಸ್ತುವನ್ನು ಪರಿಶೀಲಿಸಿದರೆ, ದೇವಾಲಯ ಅತ್ಯಂತ ಸ್ಪಷ್ಟವಾಗಿ ವಿಜಯನಗರ ಪೂರ್ವದ ದೇವಾಲಯ ಎಂದು ವಿದಿತವಾಗುತ್ತದೆ. ಬಹುಜನ ಉಪಾಸನಾ ಕೇಂದ್ರದಲ್ಲಿ ದೇವಾಲಯದ ರಚನೆ, ನಿಧಾನವಾಗಿ ಜನರನ್ನು ಶೈವ ಪರಂಪರೆಯ

ಕಡೆಗೆ ಸೆಳೆವ ತಂತ್ರದ ಭಾಗವಾಗಿದೆ. ಸುಮಾರು 11-12ನೇ ಶತಮಾನದಲ್ಲಿ ನಿರ್ಮಿಸಲಾದ ದೇವಾಲಯ ಆಗಮೋಕ್ತವಾಗಿ ನಿರ್ಮಾಣವಾಗಿದೆ. ದೇವಾಲಯದ ಹೊರಗೆ ಇರುವ ತುಂಡಾದ ಕಲ್ಲಿನ ಶಿಲ್ಪ ಸ್ವಲ್ಪ ಅಸ್ಪಷ್ಟವಾಗಿದ್ದರೂ, ನಿಧಾನವಾಗಿ ಪರಿಶೀಲಿಸಿದರೆ, ಒಂದು ಸ್ಥಂಭದ ಮೇಲೆ ಯೋಗ ಸಾಧನೆ ಮಾಡುತ್ತಿರುವ ಜೋಗಿ ಪುರುಷನ ಶಿಲ್ಪವೆಂದು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಇದರಿಂದ, ಕಾಳಾವರದ ಮಹಾಲಿಂಗೇಶ್ವರ ದೇವಾಲಯ ನಾಥ ಪಂಥಕ್ಕೆ ಸೇರಿದ ದೇವಾಲಯ ಎನ್ನುವುದು ಖಚಿತ. ಶಾಸನದಲ್ಲಿಯೇ ತ್ರಿಯಂಬಕೇಶ್ವರ ಎಂಬ ಉಲ್ಲೇಖವಿದೆ. ತ್ರಯಂಬಕೇಶ್ವರ ನಾಥಪಂಥದ ಪ್ರಬಲ ಕೇಂದ್ರ ಎಂಬುದು ಸರ್ವವಿದಿತ ಸಂಗತಿಯಾಗಿದೆ. ತಿರುಮಲೆ ಭಂಡಾರಿ ನಾಯಕನ ಪ್ರಭಾವದಿಂದ ಕಾಳಾವರದ ಮೇಲಿನ ಹಕ್ಕು ದುಗ್ಗಣ ನಾಯಕನಿಗೆ ಸರ್ವಮಾನ್ಯವಾಗಿ ನೀಡಲ್ಪಟ್ಟಿತು. ನಂತರ, ಅಲ್ಲಿ ಕೆರೆಯ ಮಧ್ಯದಲ್ಲಿ ಕೃಷ್ಣನ ದೇವಾಲಯವನ್ನು ನಿರ್ಮಿಸಲಾಯಿತು. ಆ ಮೂಲಕ, ಬಹುಜನ ಸಂಸ್ಕೃತಿಯ ದೇವರು ಮತ್ತು ದೈವಗಳನ್ನು, ಶೈವ ಮತ್ತು ವೈಷ್ಣವ ಪರಂಪರೆಯ ಅಧೀನ ಗಣಗಳೆಂದು ನಂಬಿಸುವ ಕಾರ್ಯವನ್ನು ಕೈಗೊಳ್ಳಲಾಗಿದೆ. ಆದರೆ, ಇಂದು ಅಲ್ಲಿ ಕೃಷ್ಣ ದೇವಾಲಯದ ಯಾವುದೇ ಕುರುಹುಗಳಿಲ್ಲ, ಕೇವಲ ಗರುಡ ಲಾಂಛನ ಶಿಲ್ಪದ ಮರದ ಹಲಗೆಯೊಂದು ಮಾತ್ರವೇ ಉಳಿದಿದೆ. ಜೊತೆ ಜೊತೆಯಲ್ಲಿಯೇ ವೈದಿಕ ಪ್ರವೇಶ, ಫಲವತ್ತಾದ ಭೂಮಿಗಳನ್ನು ಮೂಲದವರೊಂದಿಗೆ ದಾನ ಮಾಡಿ, ಬಹುಸಂಸ್ಕೃತಿಯ ಆರಾಧನಾ ಕೇಂದ್ರವನ್ನು ವೈದೀಕೀಕರಣಗೊಳಿಸಿರುವುದು ಶಾಸನಾಧ್ಯಯನದಿಂದ ಸ್ಪಷ್ಟವಾಗುತ್ತದೆ. ಇದರಿಂದ, ಪ್ರಾಚೀನ ಅವೈದಿಕ ಧಾರ್ಮಿಕ ಮತ-ಪಂಥಗಳ ಕೇಂದ್ರವಾಗಿದ್ದ ಕಾಡಿಳ, ವಿಜಯನಗರ ಕಾಲದಲ್ಲಿ ರಾಜಪ್ರಭುತ್ವದ ಬೆಂಬಲದಿಂದ ಸಂಸ್ಕೃತದ ಯಜಮಾನಿಕೆಯೊಂದಿಗೆ ಕಾಲ+ಪುರ>ಕಾಳಾವರವಾಗಿ ಬದಲಾಗಿದೆ ಎನ್ನುವುದು ಸುವೇದ್ಯವಾಗುತ್ತದೆ.

ಟಿಪ್ಪಣಿಗಳು ಮತ್ತು ಆಕರ ಸೂಚಿ

1. ರಾಮಕೃಷ್ಣ ಆಚಾರ್ ಪಾಲ್ತಾಡಿ, 2008, **ನಾಗಬೆರ್ಮೆರ್**, ದ್ರಾವಿಡ ವಿಶ್ವವಿದ್ಯಾನಿಲಯ: ಕುಪ್ಪಂ. ಪು. 48-51.
2. ಅದೇ. ಪು. 52.
3. ಮುರುಗೇಶಿ ಟಿ., 2018, 'ಎಂಡನೇ ದೇವರಾಯನ ಕಾಳಾವರದ ಶಾಸನ', **ತುಳುವ. ಸಂ. 8. ಸಂ. 2.** ಉಡುಪಿ. ಪು. 11-13.
4. ಅಪ್ರಕಟಿತ.
5. **ಉದಯವಾಣಿ,** ಮಾ. 07. 2018, 'ಕಾಳಾವರ : ಶಾಸನಪತ್ತೆ'. ಪು.2.
6. **South Indian Inscriptions,** Vol. 27. 2011. No. 157. 158. 159. 160. Pp. 255-268.
7. ಇಂದಿರಾ ಹೆಗ್ಡೆ . 2009. **ಬಂಟರು ಒಂದು ಸಮಾಜೋ ಸಾಂಸ್ಕೃತಿಕ ಅಧ್ಯಯನ.** ಕನ್ನಡ ಪುಸ್ತಕ ಪ್ರಾಧಿಕಾರ: ಬೆಂಗಳೂರು. ಪು. 257.
8. Gururaj Bhat P., 1975. **Studies in Tuluva History and Culture.** Udupi Pp. 224-227.
9. Ibid. Pp. 245.
10. ರಾಮಕೃಷ್ಣ ಆಚಾರ್ ಪಾಲ್ತಾಡಿ, 2008, ಪೂರ್ವೋಕ್ತ,. ಪು. Viii.

■

ITIHASA DARPANA (Quarterly)
A Peer Reviewed Journal of Historical Research in Kannada
ISSN 2321-3590
Book No.: 37-38.
April – September 2018
Author: Avinash V.
Title: vasāhatuṣāhi Koḍaginalli vilīna prakriye: staḷīyara pratikriyegalu

ವಸಾಹತುಶಾಹಿ ಕೊಡಗಿನಲ್ಲಿ ವಿಲೀನ ಪ್ರಕ್ರಿಯೆ: ಸ್ಥಳೀಯರ ಪ್ರತಿಕ್ರಿಯೆಗಳು

ಅವಿನಾಶ್ ವಿ.
ಉಪನ್ಯಾಸಕರು
ಆರ್.ಬಿ.ಎ.ಎನ್.ಎಂ.ಎಸ್. ಕಾಲೇಜು
ಬೆಂಗಳೂರು–560 042
ಮೊ:.9739321858
Email:avinash.avi922@gmail.com

ಕೊಡಗಿನಲ್ಲಿ ಶಾಸನೀಯ ಅಧಿಕಾರದ ಮೂಲವನ್ನು 1834ರಲ್ಲಿ ಫ್ರೇಸರ್‌ನ ಘೋಷಣೆಯಿಂದಲೇ ಕಾಣಬಹುದು. ಮುಂದೆ, 1861ರ ಕಾಯ್ದೆಯಿಂದ ರಚಿಸಿದ ಶಾಸನೀಯ ಕೌನ್ಸಿಲ್‌ಗಳು ಆಧುನಿಕ ಪ್ರಭುತ್ವದ ಲಕ್ಷಣಗಳನ್ನು ಹೊಂದಿರಲಿಲ್ಲ. ಆದ್ದರಿಂದ ಅದು ಹಲವಾರು ಟೀಕೆಗಳಿಗೆ ಒಳಗಾಗಿತ್ತು. ಅದರ ಫಲವಾಗಿ 1892 ಕೌನ್ಸಿಲ್ ಕಾಯ್ದೆಯನ್ನು ಜಾರಿಗೊಳಿಸಿ ಶಾಸನೀಯ ಕೌನ್ಸಿಲ್‌ಅನ್ನು ವಿಸ್ತೃತಗೊಳಿಸಿ ಚುನಾವಣೆಯ ಅಂಶವನ್ನು ಆಚರಣೆಗೆ ತಂದರು. ಕೊಡಗಿನ ಶಾಸನೀಯ ಸದಸ್ಯರುಗಳಿಗೆ "ರಾಜಕೀಯ ಪ್ರಜ್ಞೆಯ" ಬೆಳವಣಿಗೆಯ ಫಲವಾಗಿ ಅವರು ಹೆಚ್ಚು ಹೆಚ್ಚು ಆಡಳಿತಾತ್ಮಕ ಸುಧಾರಣೆಗಳನ್ನು ಅಪೇಕ್ಷಿಸಿದರು. ಕೊಡಗಿನ ವಿವಿಧ ಸಮುದಾಯಗಳಿಗೆ ವಿಶೇಷ ಪ್ರಾತಿನಿಧ್ಯವನ್ನು ಕೊಡಲಾಗಿತ್ತು. ಇವರನ್ನು ಆಯ್ಕೆ ಮಾಡಲು ಪ್ರತ್ಯೇಕ ಜಮ್ಮ ಚುನಾಯಕ ಸಮುದಾಯವಿದ್ದಿತು. ಈ ರೀತಿಯಾಗಿ ಪ್ರತ್ಯೇಕ ಚುನಾಯಿತರ ಪಟ್ಟಿಯ ಮತದ ಆಧಾರದ ಮೇಲೆ ಕೋಮುವಾರು ಪ್ರಾತಿನಿಧ್ಯದ ತತ್ವವನ್ನು ಜಾರಿಗೊಳಿಸಲಾಯಿತು. ಶಾಸನ ಸಭೆಗಳಿಗೆ ಸಂಬಂಧಿಸಿದಂತೆ ಚೀಫ್ ಕಮಿಷನರ್ ಆಡಳಿತದ

ಪ್ರಾಂತ್ಯಗಳಲ್ಲಿ ಒಂದೇ ರೀತಿಯ ಕಾನೂನುಗಳಿದ್ದು, ಅವುಗಳನ್ನು ಶಾಸನೀಯ ವಿಧಾನಗಳಿಂದ ಸುಧಾರಿಸಲಾಗಿತ್ತು. ಈ ಶಾಸನ ಸಭೆಗಳಲ್ಲಿ ಯಾವುದೇ ಬಿಲ್‌ಗಳನ್ನು ಅಂಗೀಕರಿಸುವಾಗ ಚೀಫ್ ಕಮಿಷನರ್‌ನ ಸಮ್ಮತಿ ಅವಶ್ಯವಿದ್ದಿತ್ತು.

ಚೀಫ್ ಕಮಿಷನರ್ ಕ್ಯಾಬಿನೆಟ್‌ನ ಮುಖ್ಯಸ್ಥನಾಗಿದ್ದನು. ಭಾರತದ ಕೇಂದ್ರಿಯ ಶಾಸನ ಸಭೆಗೆ ಪ್ರತಿ ಪ್ರಾಂತ್ಯದಿಂದ ಒಬ್ಬ ಪ್ರತಿನಿಧಿಯನ್ನು ಕಳಿಸುವುದು ಚೀಫ್ ಕಮಿಷನರ್ ಮತ್ತು ಶಾಸನ ಸಭೆಯ ಸದಸ್ಯರ ಕರ್ತವ್ಯವಾಗಿತ್ತು. ಏಕೆಂದರೆ ಪ್ರಾಂತ್ಯವೊಂದರ ಕಾಯ್ದೆಗೆ ಸಂಬಂಧಿಸಿದಂತೆ ಚರ್ಚಿಸಲು ಪ್ರತಿ ಪ್ರಾಂತ್ಯದ ಪ್ರತಿನಿಧಿ ಇರಲೇಬೇಕಿತ್ತು. ಮುಂದೆ. ಸ್ಥಳೀಯ ಸರ್ಕಾರದ ಹಣಕಾಸು ಇಲಾಖೆಯು ವಾರ್ಷಿಕವಾಗಿ ಮಂಡಿಸುವ ತನ್ನ ಬಜೆಟ್‌ಗಳ ಸಂಪೂರ್ಣ ವಿವರಣೆಯು ಚೀಫ್ ಕಮಿಷನರ್‌ನ ಸಮಗ್ರ ಸಮಾಲೋಚನೆಯ ಮೇರೆಗೆ ಅಂಗೀಕಾರವಾಗುತಿತ್ತು. ಕೊಡಗಿನ ಶಾಸನ ಸಭೆಯು ತನ್ನ ಕಾರ್ಯವನ್ನು ನಿಷ್ಠೆಯಿಂದ ನಿರ್ವಹಿಸುತಿತ್ತು ಮತ್ತು ಅದು ಶಾಸನೀಯ ಅಧಿಕಾರವನ್ನು ಹೊಂದಿತ್ತು. ಅ ಮೂಲಕ ತತ್ವಗಳ ಆಧಾರದ ಮೇಲೆ ಪ್ರಾಮಾಣಿಕ ಆಡಳಿತದ ಅಸ್ತಿತ್ವಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿತ್ತು. ಶಾಸನ ಸಭೆ ಶಾಸನೀಯ, ಆಡಳಿತಾತ್ಮಕ ಹಾಗೂ ಹಣಕಾಸಿನ ಅಧಿಕಾರಗಳನ್ನು ಹೊಂದಿದ್ದರೂ ಕೂಡ ಕೆಲ ನಿರ್ಬಂಧಗಳಿಗೆ ಒಳಗಾಗಿತ್ತು. ಅಂದರೆ ಕೆಲ ಮಸೂದೆಗಳನ್ನು ಜಾರಿಗೊಳಿಸುವಾಗ ಚೀಫ್ ಕಮಿಷನರ್ ಕೇಂದ್ರಿಯ ಸರ್ಕಾರದ ಅನುಮತಿಯನ್ನು ಪಡೆಯಬೇಕಿತ್ತು. ಶಾಸನ ಸಭೆಯು ಅಂಗೀಕರಿಸುವ ಮಸೂದೆ ಪ್ರಾಂತೀಯ ಲಕ್ಷಣಗಳನ್ನು ಒಳಗೊಂಡಿರಬೇಕಿತ್ತು. ಈ ಹಂತದಲ್ಲಿ ಇದರಲ್ಲಿ ಪಂಚಾಯತ್ ರಾಜ್ ಬಿಲ್ ಪ್ರಮುಖವಾಗಿದೆ. ಪಂಚಾಯತ್ ರಾಜ್ ಬಿಲ್‌ನ ಮೂಲಕ ಹಳ್ಳಿಗಳ ಅಭಿವೃದ್ಧಿ ಯೋಜನೆಗೆ ಚಾಲನೆ ನೀಡಲಾಯಿತು. ಮುಂದೆ ಆಡಳಿತವನ್ನು ಪರಿಣಾಮಕಾರಿಯಾಗಿ ನಡೆಸಲು ವಿವಿಧ ಸಮಿತಿಗಳನ್ನು ರಚಿಸಿ ಅವುಗಳ ಕಾರ್ಯ ವಿಧಾನಗಳನ್ನು ಹೆಚ್ಚಿಸಲಾಯಿತು. ಇದರಲ್ಲಿ ಮುಖ್ಯವಾಗಿ ಸಾರ್ವಜನಿಕ ವಲಯದ ಅಭಿವೃದ್ಧಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿರುವುದನ್ನು ಕಾಣಬಹುದು. ಅದರೊಂದಿಗೆ ಸಾರ್ವಜನಿಕರ ಅಭಿವೃದ್ಧಿಗೆ ಪೂರಕವಾಗುವಂತೆ ಬಜೆಟ್‌ಗಳನ್ನು ಸಂರಚಿಸಿ; ಅವುಗಳ ಚಾಲನೆಗೆ ಸಾರ್ವಜನಿಕರು ಮತ ಹಾಕುವ ಮೂಲಕ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವಂತೆ ತಿಳಿಸಿತ್ತು. ಹಾಗೆಯೇ ಅವುಗಳನ್ನು ಸಕಾಲದಲ್ಲಿ ಅನುಷ್ಠಾನಗೊಳಿಸಲು ಕಾನೂನು ರೂಪಿಸಲಾಯಿತು. ಕೊಡಗಿನ ಶಾಸನ ಸಭೆಯ ಸದಸ್ಯನಾದ ಬೆಳ್ಳಿಯಪ್ಪ ಕೊಡಗಿನ ಕಂದಾಯ ಇಲಾಖೆಯು ಅತ್ಯಂತ ನಿಧಾನಗತಿಯಲ್ಲಿ ಕೆಲಸ ನಿರ್ವಹಿಸುತ್ತಿದೆ ಎಂದು ಆಪಾದನೆಯನ್ನು ಮಾಡುತ್ತಾನೆ ಅದರೊಂದಿಗೆ ಆ ಇಲಾಖೆಯಲ್ಲಿ ಶೀಘ್ರಗತಿಯಲ್ಲಿ ಬದಲಾವಣೆಯನ್ನು ತರುವಂತೆ ಒತ್ತಡವನ್ನು ಹೇರುತ್ತಾನೆ. ಮುಂದೆ. ಕೊಡಗಿನ ಪ್ರತಿಯೊಂದು ತಾಲೂಕು ತನ್ನ ಪ್ರತಿನಿಧಿಯನ್ನ ಶಾಸನ ಸಭೆ (ಎಲ್.ಸಿ.)ಗೆ ಕಳುಹಿಸುವಂತೆ ಕೋರಲಾಯಿತು. ಮಹಿಳೆಗೆ ಮತ ಹಾಕುವ ಅಧಿಕಾರ ನೀಡಿದ್ದು, ಆ ಕಾಲದ ಬಹುದೊಡ್ಡ ಸಾಮಾಜಿಕ ಪರಿವರ್ತನೆಯಾಗಿದೆ. ಚೀಫ್ ಕಮಿಷನರ್‌ಗಳು ಕೊಡಗಿನಲ್ಲಿ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವಾಗ ಹಲವಾರು ಸಂಕಷ್ಟಗಳಿಗೆ ಒಳಗಾಗುತ್ತಿದ್ದರು. ಆದರೂ ಕಮಿಷನರ್‌ಗಳು ಬಹಳ ವಿವೇಕಯುಕ್ತವಾ

ಕಾರ್ಯನಿರ್ವಹಿಸುತ್ತಿದ್ದರು. ಹೀಗಾಗಿ ಅವರು ಅನುಷ್ಠಾನಗೊಳಿಸಿದ ಶಾಸನ ಸಭೆಯಿಂದ ಕೊಡಗರು ತಮ್ಮ ಅಭಿಪ್ರಾಯಗಳ ಮಂಡನೆ ಹಾಗೂ ತಮ್ಮ ವಿವಿಧ ರೀತಿಯ ವಾದಗಳಿಗೆ ಕಮಿಷನರ್‌ಗಳು ಅವಕಾಶ ಮಾಡಿಕೊಟ್ಟರು. ಇದರಿಂದಾಗಿ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಕೊಡಗರು ಬ್ರಿಟಿಷ್‌ರನ್ನು ಹಿಂಬಾಲಿಸುವ ವರ್ಗವಾಗಿ ರೂಪುಗೊಂಡಿದ್ದರು. ಇದಕ್ಕೆ ಮುಖ್ಯ ಕಾರಣವೆಂದರೆ ಕಮಿಷನರ್‌ಗಳು ನೀಡಿದ ಆಂತರಿಕ ಸ್ವಾತಂತ್ರ್ಯ ಮತ್ತು ಅವಕಾಶಗಳೇ ಆಗಿವೆ.

ವಿಲೀನ ಪ್ರಕ್ರಿಯೆ ಮತ್ತು ಸ್ಥಳೀಯರ ನಿಲುವುಗಳು

ಭಾರತದ ಗೃಹ ಕಛೇರಿಯು ತನ್ನ ಗುಪ್ತ ಕಡತದಲ್ಲಿ ಕೊಡಗನ್ನು ಮದ್ರಾಸ್ ಪ್ರಾಂತ್ಯದೊಂದಿಗೆ ವಿಲೀನಗೊಳಿಸುವುದರಿಂದ ಕೇಂದ್ರ ಸರ್ಕಾರದ ಮಹತ್ವದ ಸೌಲಭ್ಯಗಳು ಹಾಗೆಯೇ ಆಡಳಿತದ ವಿಧಾನವು ಸುಲಭವಾಗುತ್ತದೆ ಎಂದು ಚರ್ಚಿಸಿರುತ್ತದೆ. ಈ ಕಾರಣದಿಂದಲೇ ಕೊಡಗನ್ನು ಮದ್ರಾಸ್ ಪ್ರಾಂತ್ಯದೊಂದಿಗೆ ವಿಲೀನಗೊಳಿಸುವ ವರದಿಯನ್ನು ನೀಡುವಂತೆ ಚೀಫ್ ಕಮಿಷನರ್‌ಗೆ ಸೂಚಿಸಿತ್ತು. ಸರ್ಕಾರದ ಆಜ್ಞೆಯಿಂದ ಕಾರ್ಯ ಪ್ರವೃತ್ತನಾದ ಚೀಫ್ ಕಮಿಷನರ್ ತನ್ನ ವರದಿಯಲ್ಲಿ ವಸಾಹತು ಪೂರ್ವದಲ್ಲಿ ಕೊಡಗಿನ ಸಂಸ್ಕೃತಿ, ಆರ್ಥಿಕತೆ, ಸಾಮಾಜಿಕ ಮತ್ತು ರಾಜಕೀಯವು ರಾಜನ ಆಳ್ವಿಕೆಯಲ್ಲಿ ಅಸಮಾನತೆಯಿಂದ ಕೂಡಿತ್ತು. ಈ ಕಾರಣದಿಂದಲೇ 1834ರಲ್ಲಿ ಗರ್ವನರ್ ಜನರಲ್ ಲಾರ್ಡ್ ವಿಲಿಯಂ ಬೆಂಟಿಂಕ್‌ನ ಘೋಷಣೆಯ ಮೇರೆಗೆ ಕೊಡಗು ಬ್ರಿಟಿಷ್ರ ನೇರ ನಿಯಂತ್ರಣಕ್ಕೆ ಒಳಪಟ್ಟು ಅದನ್ನು ಪ್ರತ್ಯೇಕ ರಾಜ್ಯವನ್ನಾಗಿಸಿ ಆಡಳಿತ ನಡೆಸಲಾಯಿತು. ಕೊಡಗು ದುರ್ಗಮ ಅರಣ್ಯಗಳಿಂದ ಸುತ್ತುವರಿದಿದ್ದು, ಸದಾ ಮಳೆ ಮತ್ತು ಸೂಕ್ತವಾದ ಸಾರಿಗೆ ಹಾಗೂ ಸಂಪರ್ಕದ ಕೊರತೆಯಿಂದ ಈ ಜನರು ಹೊರಗಿನ ಪ್ರಪಂಚದ ಜನರೊಂದಿಗೆ ವ್ಯವಹರಿಸಲು ಸಾಧ್ಯವಾಗದೆ ದೂರವಿದ್ದರು. ಆದರೆ ಕಮಿಷನರ್‌ಗಳ ಆಡಳಿತವು ಪರಿಚಯಿಸಿದ ಹಲವಾರು ಮಹತ್ವದ ಸುಧಾರಣೆಗಳಿಂದ ಕೊಡಗು ಮಾದರಿ ರಾಜ್ಯವಾಗ ತೊಡಗಿತ್ತು. ಆದರೆ, ಕೇಂದ್ರ ಅಭಿವೃದ್ಧಿ ಕಾರ್ಯಕ್ರಮಗಳು ಸೂಕ್ತ ಸಮಯದಲ್ಲಿ ಕೊಡಗಿಗೆ ತಲುಪುತ್ತಿಲ್ಲ. ಹೀಗಾಗಿ ಕೊಡಗಿನ ಯುವಜನರಿಗೆ ಮತ್ತು ಶಿಕ್ಷಿತರಿಗೆ ಸೂಕ್ತವಾದ ಉದ್ಯೋಗ ದೊರೆಯದೆ ನಿರುದ್ಯೋಗಿಗಳಾಗಿದ್ದಾರೆ. ಆದ್ದರಿಂದ ಕೊಡಗಿನ ಭವಿಷ್ಯದ ಆಡಳಿತದ ಹಿತದೃಷ್ಟಿಯಿಂದ ವಿಲೀನತೆಯೂ ಅತ್ಯಂತ ಅವಶ್ಯಕತೆಯಿಂದ ಕೂಡಿದೆ ಎಂದು ತಿಳಿಸುತ್ತಾನೆ.

19ನೆಯ ಶತಮಾನದಲ್ಲಿ ಕೊಡಗನ್ನು ಮದ್ರಾಸ್ ಪ್ರಾಂತ್ಯದೊಂದಿಗೆ ವಿಲೀನಗೊಳಿಸಬೇಕೆನ್ನುವ ಚರ್ಚೆಗಳು ತೀವ್ರವಾಯಿತು. ಈ ಕುರಿತಂತೆ ಕೊಡಗಿನ ಚೀಫ್ ಕಮಿಷನರ್‌ಗಳಾದ ಡೊನೋಲ್ಡ್ ರಾಬರ್ಟ್‌ಸನ್ (1903). ಜೆ.ಎ.ಬೌರ್ಡಿಲನ್ (1905) ಮತ್ತು ಎಸ್.ಎಮ್.ಫ್ರೇಸರ್(1907) ರವರು ತಮ್ಮದೇ ವಿಭಿನ್ನ ಅಭಿಪ್ರಾಯವನ್ನು ನೀಡುತ್ತಾರೆ. ಅವರು ಹೇಳುವಂತೆ ಕೊಡಗರು ವಿಭಿನ್ನ ಹಾಗೂ ವಿಶಿಷ್ಟವಾದ ಜನಾಂಗ; ಅವರ ಸಂಸ್ಕೃತಿ ಆಚರಣೆ ಅತ್ಯಂತ ಆಕರ್ಷಣೆಯಿಂದ ಕೂಡಿದೆ. ಇದು ಭಾರತದ ಇತರ

ಪ್ರಾಂತ್ಯಗಳಲ್ಲಿಯೇ ಅತ್ಯಂತ ಸಣ್ಣ ಪ್ರಾಂತ್ಯ. ಇದರ ಒಟ್ಟು ವಿಸ್ತೀರ್ಣ 1600 ಚದರ ಮೈಲು ಆಗಿದೆ. ಇದರ ಒಟ್ಟು ಜನಸಂಖ್ಯೆ 1,75,000 ರಷ್ಟಿಯಿದೆ. ಇದರ ವಾರ್ಷಿಕ ಕಂದಾಯ ಕೇವಲ 10 ಲಕ್ಷವಾಗಿದೆ. ಈ ಎಲ್ಲಾ ಕಾರಣದಿಂದ ಮತ್ತು ಆಡಳಿತದ ಅನಿವಾರ್ಯತೆಯಿಂದಾಗಿ ಈ ಪುಟ್ಟ ಪ್ರಾಂತ್ಯವನ್ನು ಮದ್ರಾಸ್ ಸರ್ಕಾರದ ಅಧೀನಕ್ಕೆ ಒಳಪಡಿಸುವುದರಿಂದ ಸ್ಥಳೀಯರಿಗೆ ಅಧಿಕ ಲಾಭವಾಗುತ್ತದೆ ಎಂದು ಹೇಳುತ್ತಾರೆ.

ಈ ಕುರಿತಂತೆ ಮುಂದೆ 1917ರಲ್ಲಿ ಕೂರ್ಗ್ ಲ್ಯಾಂಡ್ ಹೋಲ್ಡರ್ಸ್ ಅಸೋಸಿಯೆಷನ್ ಸರ್ಕಾರದ ವಿಲೀನ ಪ್ರಕ್ರಿಯೆಯನ್ನು ವಿರೋಧಿಸಿ ಪ್ರಶ್ನಿಸುವ ಮೂಲಕ ತಮ್ಮ ಅಸಮಾಧಾನವನ್ನು ಭಾರತದ ವೈಸ್‌ರಾಯ್ ಮಾಂಟೆಗ್ಯುರವರಿಗೆ ಪತ್ರದ ಮೂಲಕ ತಿಳಿಸುತ್ತಾರೆ. ಹಾಗೆಯೇ ಕೊಡಗಿಗೆ ಒಂದು ಪ್ರತ್ಯೇಕವಾದ ಸಂವಿಧಾನಿಕ ಆಡಳಿತ ಸುಧಾರಣ ಕಾನೂನನ್ನು ರಚಿಸುವ ಮೂಲಕ ಪ್ರಸ್ತುತ ಇರುವ ಆಡಳಿತವನ್ನು ಹಾಗೆಯೇ ಮುಂದುವರಿಸುವಂತೆ ಕೇಳಿಕೊಳ್ಳುತ್ತಾರೆ. ಕೊಡಗು ಬ್ರಿಟಿಷ್ ಸರ್ಕಾರದ ನೇರ ಆಡಳಿತದಲ್ಲಿ ಸುಭದ್ರವಾಗಿದ್ದು, ಈ ಕಾರಣ ಸರ್ಕಾರದಿಂದ ಪೂರ್ಣ ಪ್ರಮಾಣದ ಲಾಭವನ್ನು ಪಡೆಯಲು ಸಾಧ್ಯವಾಗುತ್ತಿದೆ. ಹೀಗಿರುವಾಗ ಸರ್ಕಾರದ ವಿಲೀನ ಪ್ರಕ್ರಿಯೆ ಸ್ಥಳೀಯರಲ್ಲಿ ಅಸಮಾಧಾನ ಮೂಡಲು ಪ್ರಾರಂಭವಾಗಿದೆ ಎಂದು ಕೂರ್ಗ್ ಪ್ಲಾಂಟರ್ಸ್ ಅಸೋಸಿಯೆಷನ್ ತನ್ನ ಸದಸ್ಯರುಗಳ ಸಹಿಯೊಂದಿಗೆ ಸರ್ಕಾರಕ್ಕೆ ಮನವಿ ಸಲ್ಲಿಸುತ್ತದೆ. ಆದರೆ, ಕೊಡಗಿನ ಸ್ಥಳೀಯ ಸಂಘಟನೆಗಳ ಪ್ರತಿಕ್ರಿಯೆಗಳಿಂದ ಸರ್ಕಾರಕ್ಕೆ ಯಾವುದೇ ರೀತಿಯಲ್ಲಿ ಪರಿಣಾಮ ಬೀರಲಿಲ್ಲ. ಬದಲಿಗೆ, ಕೊಡಗಿನ ಕಮಿಷನರ್ ಸಿ.ಎ. ಸೌಟರ್ ಸರ್ಕಾರದ ವಿಲೀನ ಪ್ರಕ್ರಿಯೆಯಲ್ಲಿ ತೀವ್ರವಾದ ಗೊಂದಲವಿದೆ ಎಂದು ಸರ್ಕಾರಕ್ಕೆ ವರದಿಯನ್ನು ಮಾಡುತ್ತಾನೆ. ಚೀಫ್ ಕಮಿಷನರ್ ಸರ್ ಡೊನಾಲ್ಡ್ ರಾಬರ್ಟ್‌ಸನ್ ಕೂರ್ಗ್ ಕಮಿಷನ್ ವರದಿಯನ್ನು ಅಭ್ಯಸಿಸಿ, ಸಿ.ಎ. ಸೌಟರ್‌ನ ಹೇಳಿಕೆಯನ್ನು ಬೆಂಬಲಿಸುತ್ತಾನೆ. ಇದರೊಂದಿಗೆ ಪ್ರಸ್ತುತ ಸನ್ನಿವೇಶವು ಕೊಡಗನ್ನು ಮದ್ರಾಸ್ ಪ್ರಾಂತ್ಯದೊಂದಿಗೆ ವಿಲೀನಗೊಳಿಸುವ ಪ್ರಕ್ರಿಯೆಗೆ ಸೂಕ್ತ ಸಮಯವಲ್ಲವೆಂದು ತಿಳಿಸುತ್ತಾನೆ. ಆದರೆ, ಭಾರತ ಸರ್ಕಾರ ಕೊಡಗನ್ನು ಮದ್ರಾಸ್ ಪ್ರಾಂತ್ಯದೊಂದಿಗೆ ವಿಲೀನಗೊಳಿಸಿ, ಆ ಮೂಲಕ ಕೊಡಗಿನ ಚೀಫ್ ಕಮಿಷನರ್ ಹುದ್ದೆಯನ್ನು ವಜಾಗೊಳಿಸಿ, ಅಲ್ಲಿ ಕಲೆಕ್ಟರ್ ಆಡಳಿತವನ್ನು ಜಾರಿಗೊಳಿಸುವ ಪ್ರಯತ್ನದಲ್ಲಿತ್ತು. ಇದನ್ನು ಅರಿತ ಭಾರತ ಸರ್ಕಾರದ ಸಹ ಕಾರ್ಯದರ್ಶಿ ಜೆ. ಬೌರ್ಡಿಲಿನ್ ಸರ್ಕಾರದ ಕ್ರಮವನ್ನು ಉದ್ದೇಶಿಸಿ, ಕೊಡಗರು ಧೈರ್ಯಶಾಲಿಗಳು ಮತ್ತು ನಿಷ್ಠಾವಂತ ಸಮುದಾಯದವರು, ಹೀಗಾಗಿ ಅವರುಗಳು ಪ್ರಸ್ತುತ ಸರ್ಕಾರದ ಆಡಳಿತದಲ್ಲಿ ಸಂತುಷ್ಟರಾಗಿದ್ದಾರೆ. ಆದರೆ, ಸರ್ಕಾರ ಕೊಡಗು ಪುಟ್ಟ ಪ್ರಾಂತ್ಯ ಮತ್ತು ಅದರ ರಾಷ್ಟ್ರೀಯತೆಯೂ ಸಣ್ಣದಾಗಿದೆ ಎಂದು ಅಲಕ್ಷ್ಯ ಮಾಡಿ ಚೀಫ್ ಕಮಿಷನರ್ ಹುದ್ದೆಯನ್ನು ವಜಾಗೊಳಿಸುವುದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ. ಇದರ ಬದಲು ಚೀಫ್ ಕಮಿಷನರ್ ಹುದ್ದೆಯನ್ನು ಹಾಗೆಯೇ ಮುಂದುವರಿಸುವುದರಿಂದ ಸರ್ಕಾರಕ್ಕೆ ಸ್ಥಳೀಯರ ಸಹಕಾರ ಮತ್ತು ರಾಜ್ಯದಲ್ಲಿ ಶಾಂತಿ ನೆಲೆಸಲು ಸಾಧ್ಯವಾಗುತ್ತದೆ. ಇಲ್ಲವಾದಲ್ಲಿ ಕೊಡಗಿನ ಜನಸಂಖ್ಯೆ ತೀರಾ ವಿರಳವಾಗಿದೆ ಎಂದು ಮದ್ರಾಸ್‌ನ ಸಬ್ ಕಲೆಕ್ಟರ್‌ನ ಅಧೀನ

ಒಳಪಡಿಸಿದಲ್ಲಿ ಈ ಜನರು ದಂಗೆ ಎದ್ದು ಸರ್ಕಾರದ ವಿರುದ್ಧ ಹೋರಾಟ ನಡೆಸುತ್ತಾರೆ ಎಂದು ಎಚ್ಚರಿಸುತ್ತಾನೆ.

ಕೊಡಗನ್ನು ಕಲೆಕ್ಟರ್‌ನ ಅಧೀನಕ್ಕೆ ಒಳಪಡಿಸದೆ ಪ್ರತ್ಯೇಕತೆಯನ್ನು ಮುಂದುವರಿಸಿ, ಸ್ಥಳೀಯ ಸದಸ್ಯರುಗಳಿಂದ ಪ್ರತ್ಯೇಕವಾದ ಶಾಸನ ಸಭೆಯನ್ನು ರೂಪಿಸಿ ಆಡಳಿತ ನಡೆಸುವುದರಿಂದ ಅಭಿವೃದ್ಧಿಗೆ ಹೆಚ್ಚು ಸಹಕಾರಿಯಾಗುತ್ತದೆ. ಆಗ ಸರ್ಕಾರಕ್ಕೆ ಯಾವುದೇ ಹಣಕಾಸಿನ ಸಮಸ್ಯೆ ಕಂಡುಬರುವುದಿಲ್ಲ. ಒಂದು ವೇಳೆ ಕೊಡಗನ್ನು ಮದ್ರಾಸ್ ಸರ್ಕಾರದ ಅಧೀನಕ್ಕೆ ಒಳಪಡಿಸಿದ್ದರೆ ಅದರಿಂದ ಆಡಳಿತದಲ್ಲಿ ಯಾವುದೇ ಸಮಾತೋಲನವಿರುವುದಿಲ್ಲ ಎಂದು ಚೀಫ್ ಕಮಿಷನರ್ ವರದಿ ಮಾಡುತ್ತಾನೆ. ಹಾಗೆಯೇ, ಕೊಡಗನ್ನು ಮದ್ರಾಸ್ ಪ್ರಾಂತ್ಯದೊಂದಿಗೆ ವಿಲೀನಗೊಳಿಸುವುದರ ಕುರಿತಂತೆ ಸಾರ್ವಜನಿಕ ಅಭಿಪ್ರಾಯವನ್ನು ಪಡೆಯಲು ಸರ್ಕಾರಕ್ಕೆ ಸಕಾಲದಲ್ಲಿ ಸಾಧ್ಯವಾಗಲಿಲ್ಲವೆಂದು ಕೇಂದ್ರ ಸರ್ಕಾರಕ್ಕೆ ತಿಳಿಸುತ್ತಾನೆ. ಮುಂದೆ, ಕೊಡಗಿನ ಜನರು ಈ ವಿಲೀನ ಪ್ರಕ್ರಿಯೆಯ ಕರಪತ್ರವನ್ನು ಪ್ರಕಟಿಸುವ ಮೂಲಕ ಮದ್ರಾಸ್ ಪ್ರಾಂತ್ಯಕ್ಕೆ ಸೇರ್ಪಡೆಗೊಳ್ಳುವುದನ್ನು ವಿರೋಧಿಸುತ್ತಾರೆ. ಆ ಕರಪತ್ರದಲ್ಲಿ ಅವರುಗಳು ಭೂಕಂದಾಯವು ಮದ್ರಾಸ್ ಪ್ರಾಂತ್ಯದಲ್ಲಿ ಅತ್ಯಂತ ಅಧಿಕವಾಗಿದೆ. ಹಾಗೆಯೇ ನಮ್ಮ ಭೂಕಂದಾಯ ವ್ಯವಸ್ಥೆಯು ವಿಭಿನ್ನವಾಗಿದೆ. ಮುಖ್ಯವಾಗಿ ಕೊಡಗು ತನ್ನ ರಾಷ್ಟ್ರೀಯತೆಯನ್ನು ಕಳೆದುಕೊಳ್ಳುತ್ತದೆ ಎಂದು ತಿಳಿಸುವ ಮೂಲಕ ಜನರನ್ನು ಎಚ್ಚರಿಸುತ್ತಾರೆ. ಇದನ್ನು ಗಮನಿಸಿದ ಕೂರ್ಗ್ ಲ್ಯಾಂಡ್ ಹೋಲ್ಡರ್ಸ್ ಒಂದು ವೇಳೆ ಕೊಡಗು ಮದ್ರಾಸ್ ಸರ್ಕಾರದ ಅಧೀನಕ್ಕೆ ಒಳಗಾದರೆ ಅಲ್ಲಿ ಕಾರ್ಮಿಕರನ್ನು ನಿಯಂತ್ರಿಸುವ ಹಾಗೆಯೇ ರಕ್ಷಿಸುವ ಯಾವುದೇ ಕಾನೂನು ಇಲ್ಲ. ಒಟ್ಟಿನಲ್ಲಿ ಅವರುಗಳ ಮೇಲೆ ಯಾವುದೇ ಹೆಚ್ಚಿನ ಅಧಿಕಾರವಿರುವುದಿಲ್ಲ ಎಂದು ತಿಳಿಸುತ್ತದೆ. ಹಾಗೆಯೇ ಅದನ್ನು ಮುಂದುವರಿಸಿ ನಮ್ಮ ನಾಡಿನ ಭೂ ವ್ಯಾಜ್ಯಗಳ ಕುರಿತಂತೆ ಕೊಡಗಿನ ನ್ಯಾಯಾಲಯಗಳಿಗೆ ಅವಕಾಶವಿರುವುದಿಲ್ಲ. ಬದಲಿಗೆ ಮದ್ರಾಸಿನ ನ್ಯಾಯಾಲಯವನ್ನು ಹೆಚ್ಚು ಅವಲಂಬಿಸ ಬೇಕಾಗುತ್ತದೆ. ಇದರಿಂದ ನಮ್ಮ ಅಸ್ಮಿತೆಯನ್ನು ನಾವೇ ಕಳೆದು ಕೊಳ್ಳಬೇಕಾಗುತ್ತದೆ. ಅದರೊಂದಿಗೆ, ಮದ್ರಾಸ್‌ನಲ್ಲಿ ಶಿಕ್ಷಣವು ಹೆಚ್ಚು ಪ್ರಗತಿಯನ್ನು ಸಾಧಿಸಿದೆ. ಹೀಗಾಗಿ ಎಲ್ಲಾ ಸರ್ಕಾರಿ ಹುದ್ದೆಗಳು ಅವರುಗಳಿಗೆ ಮೀಸಲಾಗಿರುತ್ತದೆ. ಇದರಿಂದ ಕೊಡಗಿನ ಜನರಿಗೆ ಯಾವುದೇ ಪ್ರಯೋಜನವಿಲ್ಲ. ಅಲ್ಲದೆ ಇನ್ನೂ ಹೆಚ್ಚಿನ ನಿರ್ಲಕ್ಷ್ಯಕ್ಕೆ ಒಳಗಾಗಬೇಕಾಗುತ್ತದೆ ಎಂದು ತಿಳಿಸುತ್ತದೆ. 1918ರಲ್ಲಿ ಕಮಿಷನರ್ ಕೊಡಗನ್ನು ಮದ್ರಾಸ್ ಪ್ರಾಂತ್ಯದೊಂದಿಗೆ ಸೇರಿಸುವ ಕುರಿತಂತೆ ಭಾರತ ಸರ್ಕಾರದೊಂದಿಗೆ ಚರ್ಚೆಯಲ್ಲಿದ್ದು, ಈ ಕುರಿತಂತೆ ಕಮಿಷನರ್‌ನ ಮೂಲಕ ಕೊಡಗಿನ ಜನರ ಶಾಸನಾತ್ಮಕ ಅಭಿಪ್ರಾಯವನ್ನು ತಿಳಿಯಲು ಸಲಹಾ ಸಮಿತಿಯನ್ನು ರಚಿಸುತ್ತಾನೆ. ಆದರೆ, ಆ ಸಮಿತಿ ಜನರ ಅಭಿಪ್ರಾಯವನ್ನು ಸಂಗ್ರಹಿಸಲು ವಿಫಲವಾಗಿರುತ್ತದೆ. ಇದಕ್ಕೆ ಮುಖ್ಯ ಕಾರಣ ಕೊಡಗರು ಯಾವುದೇ ಪ್ರತಿಕ್ರಿಯೆಯನ್ನು ನೀಡದೆ ಇರುವುದಾಗಿದೆ. ಮುಂದೆ, ಮದ್ರಾಸ್ ಪ್ರಸಿಡೆನ್ಸಿಯೂ ಕಾಸರಗೋಡನ್ನು ಉತ್ತರ ಮಲಬಾರ್‌ನ ಪ್ರಧಾನ ಕಛೇರಿಯಾಗಿ ಮಾಡಿತ್ತು. ಕೊಡಗು ಮತ್ತು ದಕ್ಷಿಣ ಕನ್ನಡದ ಪ್ರಧಾನ ಕಛೇರಿಯಾಗಿ ಮಂಗಳೂರನ್ನು ಗುರುತಿಸುವ ಕಾರ್ಯದಲ್ಲಿ ತೊಡಗಿತ್ತು. ಈ ಮಧ್ಯೆ ಮದ್ರಾಸ್ ಸರ್ಕಾರ

ಸಂಪರ್ಕದ ಸಮಸ್ಯೆಯನ್ನು ಎದುರಿಸುತಿತ್ತು. ಇದಕ್ಕೆ ಮುಖ್ಯ ಕಾರಣವೆಂದರೆ ಕೊಡಗು ಪಶ್ಚಿಮ ಘಟ್ಟಗಳಿಂದ ಸುತ್ತುವರಿದಿದ್ದು, ಇಲ್ಲಿ ರೈಲು ಮಾರ್ಗವನ್ನು ಗೊತ್ತುಪಡಿಸುವುದು ಕಷ್ಟಸಾಧ್ಯವಾಗಿರುತ್ತದೆ. ಪ್ರಸುತ್ತ ಕೊಡಗಿನಲ್ಲಿ ಸುವ್ಯವಸ್ಥಿತವಾದ ಕಾನೂನು ವ್ಯವಸ್ಥೆಯಿದ್ದು, ಇದಕ್ಕೆ ಸೂಕ್ತವಾದ ಅಧಿಕಾರಿಗಳ ಮಾರ್ಗದರ್ಶನದ ಕೊರತೆ ಇದೆ ಎಂದು ನೇಮಕಗೊಂಡ ಕಮಿಷನರ್ ಸಮಸ್ಯೆಗಳ ನಿವಾರಣೆಯಲ್ಲಿ ನಿರಾಸಕ್ತಿಯನ್ನು ತೋರಿರುತ್ತಾನೆ. ಈ ಕುರಿತಂತೆ ಮದ್ರಾಸ್‌ನ ಅಧಿಕಾರಿಗಳು ನಿರಂತರವಾಗಿ ಪ್ರವಾಸವನ್ನು ಕೈಗೊಳ್ಳುತ್ತಿದ್ದರು. ಮಂಗಳೂರನ್ನು ಕೊಡಗಿನ ಮತ್ತು ದಕ್ಷಿಣ ಕನ್ನಡದ ಕೇಂದ್ರ ಕಛೇರಿಯಾಗಿಸುವ ಅವರ ಯೋಜನೆ ಯಶಸ್ವಿಯಾಗಲಿಲ್ಲ.

ದಕ್ಷಿಣ ಕೊಡಗಿನಲ್ಲಿ ಕಂಡುಬಂದ ಕಾಫಿಯ ಪ್ರಯೋಗದಿಂದಾಗಿ ತೋಟಗಾರಿಕೆಯ ಮುಖ್ಯ ಕೇಂದ್ರವಾಗಿಸಿದೆ. ಈ ಕಾರಣದಿಂದಲೇ ಕಮಿಷನರ್ ಕೊಡಗನ್ನು ಮದ್ರಾಸ್ ಪ್ರಾಂತ್ಯದೊಂದಿಗೆ ಒಗ್ಗೂಡಿಸುವುದರ ಕುರಿತಂತೆ ಒಲವನ್ನು ವ್ಯಕ್ತಪಡಿಸಿದ್ದು. ಇದಕ್ಕೆ ಮುಖ್ಯ ಕಾರಣವೆಂದರೆ, ಕೊಡಗನ್ನು ಮದ್ರಾಸ್ ಪ್ರಾಂತ್ಯಕ್ಕೆ ಸೇರ್ಪಡೆಗೊಳಿಸುವುದರಿಂದ ಸಂಪರ್ಕ ವ್ಯವಸ್ಥೆಯಲ್ಲಿ ಸುಧಾರಣೆಯಾಗುತ್ತದೆ. ಹಾಗೆಯೇ ಕೊಡಗಿಗೆ ರೈಲು ಸಂಪರ್ಕ ದೊರೆಯುತ್ತದೆ. ಇದರೊಂದಿಗೆ ಕೇಂದ್ರ ಕಾರ್ಯಾಲಯದ (ಕಛೇರಿ) ಪ್ರಮುಖ ಅಭಿವೃದ್ಧಿ ಕಾರ್ಯಗಳು ಕೊಡಗಿಗೂ ಅನ್ವಯಿಸುತ್ತವೆ. ಕೊಡಗಿನ ಕಮಿಷನರ್‌ನ ಚಿಂತನೆಗಳನ್ನು ಮನಗಂಡ ಶಾಸನ ಸಭೆಯ ಪ್ರತಿನಿಧಿಗಳು ಕೊಡಗರು ಮತ್ತು ಕೊಡಗೇತರರು ಕೊಡಗನ್ನು ಮದ್ರಾಸ್ ಪ್ರಾಂತ್ಯದೊಂದಿಗೆ ವಿಲೀನಗೊಳಿಸುವುದನ್ನು ಒಕ್ಕೊರಲಿನಿಂದ ವಿರೋಧಿಸುತ್ತಿರುವುದನ್ನು ಚೀಫ್ ಕಮಿಷನರ್ ಕೇಂದ್ರ ಸರ್ಕಾರದ ಗಮನಕ್ಕೆ ತರುತ್ತಾನೆ. 1928ರಲ್ಲಿ ಕೊಡಗಿನ ಅಫೀಸಿಯೇಟಿಂಗ್ ಚೀಫ್ ಕಮಿಷನರ್ ಆದ ವಿಲಿಯಂ ಬಾರ್ಟನ್‌ರವರು ಇಂಡಿಯನ್ ಸ್ಯಾನಿಟರಿ ಕಮಿಷನ್‌ಗೆ ತನ್ನ ಮೆಮೊರಾಂಡಂನ ಮೂಲಕ ವಿಲೀನ ಪ್ರಕ್ರಿಯೆಯ ಲಾಭಾಂಶಗಳ ಕುರಿತು ಮಾಹಿತಿ ನೀಡುತ್ತಾನೆ. ಬಾರ್ಟನ್ ಹೇಳುವಂತೆ ಬ್ರಿಟಿಷ್ ಆಡಳಿತದ ಕೊಡಗಿನಲ್ಲಿ ಯಾವುದೇ ಮೂಲಭೂತವಾದ ಅಭಿವೃದ್ಧಿ ಕಾರ್ಯಗಳು ಕಂಡುಬಂದಿರುವುದಿಲ್ಲ. ಹಾಗೆಯೇ ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳು ಕೊಡಗಿಗೆ ಸೂಕ್ತ ಸಮಯದಲ್ಲಿ ತಲುಪಲು ಕೊಡಗಿನ ಭೌಗೋಳಿಕತೆ ದೊಡ್ಡ ಸಮಸ್ಯೆಯಾಗಿದೆ. ಮುಖ್ಯವಾಗಿ ಸೂಕ್ತ ಶಿಕ್ಷಣದ ಮೂಲಕ ಯಾವುದೇ ಪದವಿಯನ್ನು ಹೊಂದಿರುವ ಸಚಿವರು ಹಾಗೂ ಸದಸ್ಯರುಗಳಿಲ್ಲ. ಅದರೊಂದಿಗೆ ಸ್ಥಳೀಯ ಯಾವ ಒಬ್ಬ ನಾಯಕನೂ ಕೇಂದ್ರ ಸರ್ಕಾರದೊಂದಿಗೆ ನೇರ ಸಂಪರ್ಕವನ್ನು ಇಟ್ಟುಕೊಂಡಿಲ್ಲ. ಹೀಗಾಗಿ ಸರ್ಕಾರದ ವೆಚ್ಚವನ್ನು ಸ್ಥಳೀಯ ಸಂಪನ್ಮೂಲಗಳಿಂದ ಭರಿಸಲಾಗುತ್ತಿದೆ. ಈ ಕಾರಣದಿಂದಾಗಿ ಅದರ ಅಭಿವೃಧಿಯು ಸಕಾಲದಲ್ಲಿ ನಡೆಯಲು ಸಾಧ್ಯವಾಗುತ್ತಿಲ್ಲ. ಕೊಡಗನ್ನು ಮದ್ರಾಸ್ ಪ್ರಾಂತ್ಯದೊಂದಿಗಿನ ವಿಲೀನಕ್ಕೆ ಕೊಡಗರು ಸಮ್ಮತಿಸಿದಲ್ಲಿ ಅವರ ಮಕ್ಕಳಿಗೆ ಉತ್ತಮ ಶಿಕ್ಷಣ ಮತ್ತು ಉತ್ತಮವಾದ ವೃತ್ತಿಗಳು ದೊರೆಯುವ ಮೂಲಕ ಕೊಡಗರಿಗೆ ಹೊರ ಜಗತ್ತಿನೊಂದಿಗೆ ಸಂಪರ್ಕ ದೊರೆಯಲು ಸಾಧ್ಯವಾಗುತ್ತದೆ. ಮುಖ್ಯವಾಗಿ ಕೊಡಗಿನ ಯುವಕರಿಗೆ ಉತ್ತಮ ಅವಕಾಶಗಳು ದೊರೆಯುವ ಮೂಲಕ ಅವರ ಭವಿಷ್ಯವನ್ನು

ಅವರು ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ತಿಳಿಸುತ್ತಾನೆ. ಆದರೆ, ಈ ಕುರಿತಂತೆ ರಿಚರ್ಡ್ ಬರ್ಕ್‌ರವರು ಕೊಡಗರ ಸಂಘಟನೆಯನ್ನು ಅಭ್ಯಸಿಸಿ, ಭಾರತ ಸರ್ಕಾರಕ್ಕೆ ಪತ್ರ ಬರೆಯುತ್ತಾನೆ. ಆ ಮೂಲಕ ಮೂಲ ನಿವಾಸಿಗಳಾದ ಕೊಡಗರ ಮೂರು ಪ್ರಮುಖ ಅಂಶಗಳ ಕುರಿತಂತೆ ತಿಳಿಸುತ್ತಾನೆ. ಅವುಗಳೆಂದರೆ:

1) ಕೊಡಗನ್ನು ಮದ್ರಾಸ್ ಪ್ರಾಂತ್ಯ ಅಥವಾ ಕರ್ನಾಟಕದೊಂದಿಗೆ ವಿಲೀನಗೊಳಿಸುವ ಬದಲು, ಕೊಡಗಿಗೆ ಸಂಪೂರ್ಣವಾದ ಪ್ರಾದೇಶಿಕ ಸ್ಥಾನಮಾನವನ್ನು ನೀಡಬೇಕು.
2) ಕೊಡಗನ್ನು ಒಂದು ರಾಜ್ಯವೆಂದು ಪರಿಗಣಿಸಿ, ಅದನ್ನು ಶಾಸನಾತ್ಮಕಗೊಳಿಸಬೇಕು.
3) ಸ್ಥಳೀಯವಾಗಿ ಹಲವಾರು ಬದಲಾವಣೆಯ ಅವಶ್ಯಕತೆಯಿರುವುದರಿಂದ ವಿಲೀನೀಕರಣದ ವಿಷಯದ ಕುರಿತು ಚರ್ಚಿಸುವುದನ್ನು ಬಿಡಬೇಕು.

ಇದರೊಂದಿಗೆ ಕೊಡಗಿನ ಬಹುಸಂಖ್ಯಾತ ಜನರು ಕೊಡಗು ಸ್ವತಂತ್ರ ರಾಜ್ಯವಾಗಿ ಇರಲು ಇಚ್ಚಿಸುತ್ತಿದ್ದಾರೆ. ಆದರೆ ಕೊಡಗಿನ ಯುವ ಸಮುದಾಯಕ್ಕೆ (ಮುಖ್ಯವಾಗಿ ಶಿಕ್ಷಣ ಮತ್ತು ಉದ್ಯೋಗಕ್ಕೆ) ಇಲ್ಲಿ ಯಾವುದೇ ಅವಕಾಶವಿರುವುದಿಲ್ಲ. ಹಾಗೆಯೇ ದೊಡ್ಡ ರಾಜ್ಯಗಳಲ್ಲಿ ದೊರೆಯುತ್ತಿರುವ ಅವಕಾಶಗಳು ಕೊಡಗಿನಂತಹ ಪುಟ್ಟ ರಾಜ್ಯಕ್ಕೆ ದೊರೆಯದಿರುವುದರಿಂದ ಇದು ಅಭಿವೃದ್ಧಿಯಿಂದ ವಂಚಿತ ರಾಜ್ಯವಾಗಿದೆ ಎಂದು ತಿಳಿಸುತ್ತಾನೆ. ಕೊಡಗಿನ ಆರ್ಥಿಕತೆ ಮದ್ರಾಸ್‌ನ ಆರ್ಥಿಕತೆಯೊಂದಿಗೆ ಸಮವಾಗಿರಲು ಸಾಧ್ಯವಿಲ್ಲ. ಆದರೆ ಮದ್ರಾಸ್‌ನ ಇತರ ಜಿಲ್ಲೆಗಳಿಗೆ ಹೋಲಿಸಿದರೆ, ಕೊಡಗು ಬಹುಬೇಗ ಆರ್ಥಿಕವಾಗಿ ಅಭಿವೃದ್ಧಿಯನ್ನು ಸಾಧಿಸುತ್ತಿದೆ. ಇದರೊಂದಿಗೆ ಶಾಂತಿಯನ್ನು ಕಾಯ್ದುಕೊಳ್ಳುವಲ್ಲಿ ಸಫಲವಾಗಿದೆ. ಆದರೆ ಕೊಡಗು ಮದ್ರಾಸ್ ಪ್ರಾಂತ್ಯದೊಂದಿಗೆ ಸೇರುವುದರಿಂದ ಅದರ ಆರ್ಥಿಕತೆಯಲ್ಲಿ ಯಾವುದೇ ದೊಡ್ಡ ಪ್ರಮಾಣದಲ್ಲಿ ಸುಧಾರಣೆಯಾಗಿರುವುದಿಲ್ಲ. ಕೊಡಗಿನ ಅಭಿವೃದ್ಧಿ ಹಾಗೂ ಅದರ ನಿರೀಕ್ಷೆಯಂತೆ ಆಡಳಿತದ ಬದಲಾವಣೆಗೆ ಅವಶ್ಯಕತೆಯಿರದೆ, ಜನರು ಆರ್ಥಿಕ ಸುಧಾರಣೆಗಾಗಿ ಆಧುನಿಕ ಕೃಷಿ ಹಾಗೂ ಕೈಗಾರಿಕಾ ಅಗತ್ಯತೆಗಳಿಗಾಗಿ ಶ್ರಮಿಸುತ್ತಿದ್ದಾರೆ. ಕೊಡಗಿನ ಎಲ್ಲಾ ಪ್ರಾಂತ್ಯದ ವಿವಿಧ ರೈತರು 16 ಮನವಿಗಳೊಂದಿಗೆ ಕೊಡಗು ಯಾವುದೇ ಕಾರಣಕ್ಕೂ ಮದ್ರಾಸ್ ಸರ್ಕಾರದೊಂದಿಗೆ ಸೇರ್ಪಡೆಯಾಗಬಾರದು. ಹಾಗೆಯೇ ಪ್ರಸ್ತುತ ಆಡಳಿತ ವ್ಯವಸ್ಥೆಯನ್ನೇ ಮುಂದುವರಿಸುವಂತೆಯೂ ಮದ್ರಾಸ್ ಪ್ರಾಂತ್ಯಕ್ಕೆ ಸೇರ್ಪಡೆಯಾಗುವುದರಿಂದ ನೈಜ ರೈತರ ಅಸ್ತಿತ್ವಕ್ಕೆ ಧಕ್ಕೆಯಾಗುತ್ತದೆಂದೂ ಅರವತ್ತೊಕ್ಲು ಹಳ್ಳಿಯ ರೈತರು ಮತ್ತು ಕೂರ್ಗ್ ಲ್ಯಾಂಡ್ ಹೋಲ್ಡರ್ಸ್ ಅಸೋಸಿಯೆಷನ್‌ನ ಸದಸ್ಯರು ಮದ್ರಾಸ್ ಪ್ರಾಂತ್ಯಕ್ಕೆ ಸೇರ್ಪಡೆಗೊಳ್ಳುವುದರ ಪ್ರಯೋಜನ ಹಾಗೂ ಅಪ್ರಯೋಜನದ ಕುರಿತಂತೆ ನಿರಾಸಕ್ತಿಯನ್ನು ಪತ್ರದ ಮೂಲಕ ವ್ಯಕ್ತಪಡಿಸಿದರು. ಸ್ಥಳೀಯ ನಿವಾಸಿಗಳಾದ ಕೊರವಂಡ ಪೊನ್ನಪ್ಪ ಹಾಗೂ ನಂಜಪ್ಪನವರು ಕೊಡಗು ಪ್ರಾಂತ್ಯವು ಮದ್ರಾಸ್ ಪ್ರಾಂತ್ಯದೊಂದಿಗೆ

ಸೇರ್ಪಡೆಗೊಳ್ಳುವುದನ್ನು ವಿರೋಧಿಸುತ್ತಾ ಕೂರ್ಗ್ ಡಿಸ್ಟ್ರಿಕ್ಟ್ ಸಮಾರಂಭದಲ್ಲಿ ಕಾರ್ಯದರ್ಶಿಯಾದ ವೆಂಕಟಪ್ಪಯ್ಯನವರಿಗೆ ಸರ್ಕಾರದ ಆದೇಶವನ್ನು ಕಡೆಗಣಿಸುವಂತೆ ಒತ್ತಾಯಿಸುತ್ತಾರೆ. ಕೂರ್ಗ್ ಅಸೋಸಿಯೆಷನ್ ಬೆಂಗಳೂರು ಇದು ಕೂಡ ಈ ಸೇರ್ಪಡೆಯನ್ನು ವಿರೋಧಿಸುತ್ತಿದೆ. ಮುಂದೆ, ಕೂರ್ಗ್ ರೆಜಿಮೆಂಟ್‌ನ ಸಿಪಾಯಿಗಳು ಮತ್ತು ಅಧಿಕಾರಿಗಳು ಪ್ರಸ್ತುತ ಸರ್ಕಾರ ಆಡಳಿತದಿಂದ ಮದ್ರಾಸ್ ಪ್ರಾಂತ್ಯದ ಸರ್ಕಾರದಲ್ಲಿ ಕೆಲಸ ನಿರ್ವಹಿಸಲು ನಿರಾಸಕ್ತಿಯನ್ನು ತೋರುತ್ತಾರೆ. ಈ ಕುರಿತಂತೆ ಹಲವಾರು ಮೆಮೊರಂಡಂನ ಮೂಲಕ ಕೊಡಗಿನ ಪೇಲಾರಂಡ ಬೆಳ್ಳಿಯಪ್ಪ, ಕೊರವಂಡ ಪೊನ್ನಪ್ಪ ಮತ್ತು ಅಪ್ಪಾರಂಡ ಅಪ್ಪಚ್ಚು ಕೊಡಗನ್ನು ಮದ್ರಾಸ್ ಪ್ರಾಂತ್ಯದೊಂದಿಗೆ ಸೇರ್ಪಡಿಸುವುದು ಕೊಡಗಿನ ಜನರ ಕುರಿತಂತೆ ಸರಿಯಲ್ಲ. ಕಾರಣ ಕೊಡಗು ಶಿಕ್ಷಣದಲ್ಲಿ ಪ್ರಗತಿಯನ್ನು ಸಾಧಿಸಲಿಲ್ಲ. ಶಾಸನ ಸಭೆಯಲ್ಲಿ ಪ್ರಕಟಿಸುವ ನೀತಿ ಹಾಗೂ ನಿಯಮಗಳ ಪಾಲನೆಗೆ ಸಾಧ್ಯವಾಗುತ್ತಿಲ್ಲ. ಹಾಗೆಯೇ ಗವರ್ನರ್ ಜನರಲ್ ಕೊಡಗಿನ ಜನರ ಆಸಕ್ತಿಯನ್ನು ಪೂರೈಸಲು ನಿರಾಸಕ್ತಿಯನ್ನು ತೋರಿದ್ದಾರೆ. ಹೀಗಿರುವಾಗ ಕೊಡಗು ಮದ್ರಾಸ್ ಪ್ರಾಂತ್ಯಕ್ಕೆ ಸೇರ್ಪಡೆಗೊಳ್ಳುವುದು ಸರಿಯಲ್ಲ ಎಂದು ತಿಳಿಸುತ್ತಾರೆ.

1930 ಸೆಪ್ಟಂಬರ್ 20ರಂದು ಭಾರತ ಸರ್ಕಾರವು ಕೊಡಗಿನ ಪ್ರಸ್ತುತ ಸನ್ನಿವೇಶಕ್ಕೆ ಅನುಗುಣವಾಗುವಂತೆ ಯಾವುದೇ ಸಂವಿಧಾನಿಕ ಬದಲಾವಣೆಯ ಅವಶ್ಯಕತೆಯಿರುವುದಿಲ್ಲ. ಯಾವುದೇ ಸಂವಿಧಾನಾತ್ಮಕ ಅಭಿವೃದ್ಧಿಗೆ ಸಂಬಂಧಿಸಿದಂತೆ ಚೀಫ್ ಕಮಿಷನರ್ ಸಕಾಲದಲ್ಲಿ ಸರ್ಕಾರದ ವರದಿಗಳನ್ನು ಪರಿಶೀಲಿಸಿ, ತದನಂತರದಲ್ಲಿ ಕೊಡಗನ್ನು ಮದ್ರಾಸ್ ಪ್ರಾಂತ್ಯದೊಂದಿಗೆ ವಿಲೀನಗೊಳಿಸುವ ಅಥವಾ ಕೊಡಗನ್ನು ಪ್ರತ್ಯೇಕ ಪ್ರಾಂತ್ಯವಾಗಿ ಮುಂದುವರಿಸುವ ಕುರಿತಂತೆ ಸ್ಥಳೀಯರ ಅಭಿಪ್ರಾಯದೊಂದಿಗೆ ಕೊನೆಯ ತೀರ್ಮಾನವನ್ನು ಕೈಗೊಳ್ಳುವಂತೆ ಸೂಚಿಸಲಾಯಿತು. ಇದರೊಂದಿಗೆ ಇಂಡಿಯನ್ ಸ್ಯಾನಿಟರಿ ಕಮೀಷನ್‌ನ ಶಿಫಾರಸ್ಸುಗಳನ್ನು ಪ್ರಸ್ತುತ ಸನ್ನಿವೇಶಕ್ಕೆ ಅನುಗುಣವಾಗಿ ಬದಲಿಸುವಂತೆ ಸೂಚಿಸಿತ್ತು. 1933ರಲ್ಲಿ ರಿಚರ್ಡ್ ಬರ್ಕ್ ಕೊಡಗನ್ನು ಮೈಸೂರು ರಾಜ್ಯದೊಂದಿಗೆ ಸೇರಿಸುವ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದನು. ಮಡಿಕೇರಿಯಲ್ಲಿ ನಡೆದ ಸರ್ವ ಪಕ್ಷಗಳ ಸಮಾರಂಭದಲ್ಲಿ ಕೊಡಗನ್ನು ಮೈಸೂರು ರಾಜ್ಯದೊಂದಿಗೆ ಸೇರಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು. ಈ ನಿರ್ಣಯದ ಕುರಿತು ಕೊಡಗಿನ ಬಹುಸಂಖ್ಯೆಯ ಜನರು ವಿರೋಧಿಸಿ ಕೊಡಗನ್ನು ಪ್ರತ್ಯೇಕ ರಾಜ್ಯವಾಗಿಯೇ ಇರಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರಿದರು. ಈ ಕುರಿತಂತೆ. ಸಾರ್ವಜನಿಕ ಅಭಿಪ್ರಾಯವನ್ನು ತಿಳಿಯಲು ಸರ್ಕಾರ ಪ್ರಯತ್ನಿಸಿ. ಕೊಡಗಿನ ಹಿಂದಿನ ಜನಗಣತಿಯ ಆಧಾರದ ಮೇರೆಗೆ ಕೊಡಗಿನ ಒಟ್ಟು ಜನಸಂಖ್ಯೆಯು 1.63.327ರಷ್ಟಿದ್ದು. ಅದರಲ್ಲಿ 41.026 ಜನ ಮಾತ್ರ ಕೊಡಗರಾಗಿದ್ದರು. ಇನ್ನುಳಿದವರು ಕೊಡಗೇತರರು. ಇವರುಗಳು ಭೌತಿಕವಾಗಿ. ಸಾಂಸ್ಕೃತಿಕ ಮತ್ತು ದೈಹಿಕವಾಗಿ ಬಲಿಷ್ಠರಾಗಿದ್ದರು. ಈ ಕಾರಣಗಳಿಂದ ಕೊಡಗರು ಕೊಡಗಿನ ಮೇಲೆ ಹೊಂದಿರುವ ಅಧಿಕಾರವನ್ನು ತಾಳಲಾರದೆ ಅಸಹನೆಯಿಂದ ಕೊಡಗೇತರರು ಕೊಡಗನ್ನು ಮೈಸೂರು ಪ್ರಾಂತ್ಯದೊಂದಿಗೆ ಸೇರಿಸುವ ಇರಾದೆಯನ್ನು ವ್ಯಕ್ತಪಡಿಸಿದ್ದರು. 1932–35ರ ಮುಂದು

ಮೇಜಿನ ಸಮ್ಮೇಳನದಲ್ಲಿ "ಅಖಿಲ ಭಾರತ ಸಂವಿಧಾನಿಕ ಸುಧಾರಣೆ" ವರದಿಯ ಕುರಿತು ಭಾರತ ಸರ್ಕಾರದ ಸಹ ಕಾರ್ಯದರ್ಶಿಯಾದ ಲಟಫಿ ಹೇಳುವಂತೆ, ಕೇಂದ್ರಿಯ ಆಡಳಿತಕ್ಕೆ ಒಳಪಡುವ ಪ್ರಾಂತ್ಯಗಳಲ್ಲಿ ಕೊಡಗು ಒಂದಾಗಿದೆ. ಆದ್ದರಿಂದ ವಿಲೀನ ಪ್ರಕ್ರಿಯೆಯ ಕುರಿತಂತೆ ಕೊಡಗಿನಲ್ಲಿ ಸ್ಥಳೀಯರ ಅಭಿಪ್ರಾಯವನ್ನು ಪರಿಗಣಿಸಿ ಕೊನೆಯ ನಿರ್ಧಾರವನ್ನು ಕೈಗೊಳ್ಳಲು ಸರ್ಕಾರಕ್ಕೆ ತಮ್ಮ ಅಭಿಪ್ರಾಯ ತಿಳಿಸಲಾಯಿತು. ಈ ಕಾರಣದಿಂದ ಶಾಸನ ಸಭೆಯ ಸದಸ್ಯರುಗಳು ಬ್ರಿಟಿಷ್ ಸರ್ಕಾರವು ಕೊಡಗನ್ನು ಪ್ರತ್ಯೇಕ ರಾಜ್ಯವನ್ನಾಗಿಸಿ ಆಡಳಿತ ನಡೆಸಲಾಗುತ್ತಿದೆ. ಈ ಕಾರಣದಿಂದ ಭಾರತ ಸರ್ಕಾರದಲ್ಲಿ ಕೊಡಗನ್ನು ಸ್ವತಂತ್ರ ಭಾಷಿಕ ಪ್ರಾಂತ್ಯವಾಗಿ ಇರಿಸುವ ಮೂಲಕ ಅದರ ಸಾಂಸ್ಕೃತಿಕ ಮೌಲ್ಯವನ್ನು ಕಾಪಾಡುವ ಕುರಿತು ಚೀಫ್ ಕಮಿಷನರ್‌ನ ಮೂಲಕ ಶಿಫಾರಸು ಮಾಡಿದ್ದರು.

ಬ್ರಿಟಿಷ್‌ರು ಕೊಡಗನ್ನು ಸೂಕ್ಷ್ಮರೋಗಪ್ರತಿಬಂಧಕ ಯೋಜನೆಯ ಮೂಲಕ ವಶಪಡಿಸಿಕೊಂಡಿದ್ದರು. ಈ ಸಂದರ್ಭದಲ್ಲಿ ಎನ್.ಸೋಮಣ್ಣ ಆಸಕ್ತಿದಾಯಕವಾದ ಚರ್ಚೆಯನ್ನು ಚೀಫ್ ಕಮಿಷನರ್ ಮುಂದೆ ಮಂಡಿಸುತ್ತಾರೆ. ಅದೇನೆಂದರೆ ಶೀಘ್ರವಾಗಿ ಕೊಡಗನ್ನು ದೊಡ್ಡ ಪ್ರಾಂತ್ಯದೊಂದಿಗೆ ವಿಲೀನಗೊಳಿಸಬೇಕೆಂದು ಕೇಳಿಕೊಳ್ಳುತ್ತಾರೆ. ಆ ಕುರಿತಂತೆ ಕೊಡಗಿನಲ್ಲಿ ನಡೆದ ಆಲ್ ಪಾರ್ಟಿ ಸಮಾರಂಭದಲ್ಲಿ ಕೊಡಗನ್ನು ದೊಡ್ಡ ಪ್ರಾಂತ್ಯದೊಂದಿಗೆ ಸೇರಿಸುವ ನಿರ್ಣಯವನ್ನು ಕೈಗೊಂಡಿರುವುದನ್ನು ತನ್ನ ಮಂಡನೆಯಲ್ಲಿ ತಿಳಿಸುತ್ತಾರೆ. ಹಾಗೆಯೇ ಕೊಡಗಿನಲ್ಲಿ ಕಂಡುಬರುತ್ತಿರುವ ಆರ್ಥಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಅಂಶಗಳನ್ನು ಸೇರಿಸುತ್ತಾರೆ. ಕೊಡಗನ್ನು ಕನ್ನಡ ಪ್ರಾಂತ್ಯವಾದ ಕರ್ನಾಟಕಕ್ಕೆ ಸೇರಿಸುವ ಇರಾದೆಯನ್ನು ಹೊಂದಿರುತ್ತಾರೆ. ಈ ಅಂಶಗಳನ್ನು ಗಣನೆಗೆ ತೆಗೆದುಕೊಂಡ ಶಾಸನ ಸಭೆಯ ಸದಸ್ಯ ಬಿ.ಎಮ್.ಕಾರ್ಯಪ್ಪ ಭಾರತ ಸರ್ಕಾರ ಕೊಡಗನ್ನು ಮೈಸೂರು ಅಥವಾ ಮದ್ರಾಸ್ ಸರ್ಕಾರಕ್ಕೆ ಸೇರಿಸುವ ಕುರಿತಂತೆ ಯಾವುದೇ ಆಜ್ಞೆಯನ್ನು ಹೊರಡಿಸಿಲ್ಲ ಎನ್ನುವ ತನ್ನ ಆರ್ಭಟದ ಭಾಷಣದಲ್ಲಿ ಸೋಮಣ್ಣ ಅವರ ಮಂಡನೆಗೆ ಪ್ರತಿಕ್ರಿಯಿಸುತ್ತಾ ಕೊಡಗನ್ನು ಬ್ರಿಟಿಷ್‌ರು ವಶಪಡಿಸಿಕೊಂಡಿಲ್ಲ. ಬದಲಿಗೆ ಕೊಡಗರು ಬ್ರಿಟಿಷ್ ಆಡಳಿತದ ಮೇಲಿನ ನಂಬಿಕೆಯಿಂದ ಕೊಡಗಿನ ಆಡಳಿತವನ್ನು ಬ್ರಿಟಿಷ್‌ರಿಗೆ ವಹಿಸಿರುತ್ತಾರೆ. ಹೀಗಿರುವಾಗ ಬ್ರಿಟಿಷ್‌ರಿಗೆ ಆ ನಂಬಿಕೆಯುತ್ತ ಆಡಳಿತವನ್ನು ನಡೆಸಲು ಸಾಧ್ಯವಾಗುತ್ತಿಲ್ಲವಾದರೆ, ಕೊಡಗನ್ನು ಕೊಡಗರಿಗೆ ಬಿಟ್ಟುಕೊಡಲಿ ಅಥವಾ ಜವಾಬ್ದಾರಿ ಸರ್ಕಾರದ ರಚನೆಗೆ ಅವಕಾಶ ನೀಡಲಿ. ಆಗ ಕೊಡಗರು ಉತ್ಸಾಹದಿಂದ ಆಡಳಿತ ನಡೆಸುವ ಶಕ್ತಿಯನ್ನು ಹಾಗೂ ಜ್ಞಾನವನ್ನು ಹೊಂದಿರುವುದು ಸರ್ಕಾರಕ್ಕೆ ತಿಳಿಯುತ್ತದೆ ಎಂದು ಹೇಳುತ್ತಾರೆ. ಅವರಿಗೆ ಬೆಂಬಲವನ್ನು ವ್ಯಕ್ತಪಡಿಸುವ ಮೂಲಕ ಪಿ.ಟಿ. ಬೆಳ್ಳಿಯಪ್ಪ ವಿಲೀನ ಹಾಗೂ ಪ್ರತ್ಯೇಕತೆಯ ಕುರಿತಂತೆ ಮತದಾನದ ಮೂಲಕ ನಿರ್ಣಯ ಕೈಗೊಳ್ಳುವಂತೆ ಸದನದಲ್ಲಿ ಕೇಳಿಕೊಳ್ಳುತ್ತಾರೆ. ಇದರಿಂದಾಗಿ ಮತದಾನದ ಒಟ್ಟಾರೆ ಫಲಿತಾಂಶದಲ್ಲಿ ವಿಲೀನ ಪ್ರಕ್ರಿಯೆಗೆ ಹೆಚ್ಚಿನ ಬೆಂಬಲ ದೊರೆಯಲಿಲ್ಲ. ಇದರಲ್ಲಿ ಮತದಾನವು 5 ಮತ ಪರವಾಗಿದ್ದರೆ, 8 ಮತ ವಿರೋಧವಾಗಿದ್ದವು. ಕೊಡಗಿನ ವಿಲೀನ ಪ್ರಕ್ರಿಯೆಗೆ ಸಂಬಂಧಿಸಿದ್ದಂತೆ ಕೊಡಗಿನ ಗಣ್ಯ ಮತ್ತು ಶ್ರೀಮಂತ ವ್ಯಕ್ತಿಗಳ ಅಭಿಪ್ರಾಯ ಸಂಗ್ರಹಿಸುವುದಕ್ಕೆ ಸದನ ಪ್ರಯತ್ನಿಸಿತ್ತು. 1939ರ ವೇಳೆಗೆ ಜಾಗತಿಕ

ಮಟ್ಟದಲ್ಲಿ ಮಹಾಯುದ್ಧ ಪ್ರಾರಂಭವಾಗಿತ್ತು. ಈ ಸಂದರ್ಭದಲ್ಲಿ ಕೊಡವರು ತಮ್ಮ ನಿಷ್ಠೆಯನ್ನು ತೋರಪಡಿಸುತ್ತಾರೆ. ಈ ಕುರಿತಂತೆ ಶಾಸನ ಸಭೆಯ ಸದಸ್ಯ ಎಮ್.ಎಮ್. ಬೆಳ್ಳಿಯಪ್ಪ ಚೀಫ್ ಕಮಿಷನರ್‌ನ ಮೂಲಕ ಭಾರತ ಸರ್ಕಾರದಲ್ಲಿ ತಮ್ಮ ಯೋಜನೆಯೊಂದನ್ನು ಪ್ರಸ್ತಾಪಿಸುವಂತೆ ಕೇಳಿಕೊಳ್ಳುತ್ತಾರೆ. ಅದೆನೆಂದರೆ ಕೊಡಗರ ಸಂಸ್ಕೃತಿ ಹಾಗೂ ಅವರ ಶ್ರೇಷ್ಠತೆಯನ್ನು ಪ್ರತಿಬಿಂಬಿಸುವ ಕುರಿತಂತೆ Form a Permanent Unit of the Inhabitants of Coorg in Regular Army ಎನ್ನುವ ಕೂರ್ಗ್ ರೆಜಿಮೆಂಟ್ ಅನ್ನು ಸ್ಥಾಪಿಸುವ ಇರಾದೆಯನ್ನು ವ್ಯಕ್ತಪಡಿಸುತ್ತಾರೆ. ಈ ಕುರಿತಂತೆ ಯೂರೋಪಿನ ಕ್ಷೇತ್ರದ ಸದಸ್ಯರುಗಳಾದ ಐ.ಎಮ್. ಫ್ರೇಸರ್, ಕರ್ನಲ್ ಮೋರ್‌ಲ್ಯಾಂಡ್ ಮತ್ತು ಐವರ್ ಬುಲ್‌ರವರು ಕೂರ್ಗ್ ರೆಜಿಮೆಂಟ್‌ನ ಸ್ಥಾಪನೆಗೆ ಬೆಂಬಲ ವ್ಯಕ್ತಪಡಿಸುತ್ತಾರೆ. ಆದರೆ ಸದನದ ಹಿರಿಯ ಸದಸ್ಯರಾದ ಪಿ.ಐ. ಬೆಳ್ಳಿಯಪ್ಪ, ಬಿ.ಎಮ್. ಕಾರ್ಯಪ್ಪ ಮತ್ತು ಕೆ.ಸಿ. ಕುರುಂಬಯ್ಯನವರು ಕಾಂಗ್ರೆಸ್ ಪಕ್ಷದ ನಿರ್ಣಯಕ್ಕಾಗಿ ಕಾಯುವಂತೆ ತಿಳಿಸುತ್ತಾರೆ. ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷ ಯುದ್ಧದ ಕುರಿತು ಬ್ರಿಟಿಷ್ ಸರ್ಕಾರ ಮೇಲೆ ಅನುಕಂಪವನ್ನು ವ್ಯಕ್ತಪಡಿಸುವ ಮೂಲಕ ತಟಸ್ಥ ನೀತಿಯನ್ನು ಅನುಸರಿಸುವಂತೆ ತಿಳಿಸುತ್ತದೆ. ಹೀಗಾಗಿ ಯೋಜನೆಗೆ ಅಷ್ಟೊಂದು ಬೆಂಬಲ ದೊರೆಯಲಿಲ್ಲ. ಮುಂದೆ, ಕೊಡಗನ್ನು ಮದ್ರಾಸ್ ಪ್ರಾಂತ್ಯದೊಂದಿಗೆ ವಿಲೀನಗೊಳಿಸುವುದನ್ನು ಬಲವಾಗಿ ವಿರೋಧಿಸಿದ ಕಾಂಗ್ರೆಸ್ ಪಕ್ಷ ಭಾಷಾವಾರು ವಲಯದ ಆಧಾರದ ಮೇಲೆ ಕೊಡಗನ್ನು ಪ್ರತ್ಯೇಕವಾಗಿ ಉಳಿಸಬೇಕು ಇಲ್ಲವಾದಲ್ಲಿ ಕರ್ನಾಟಕದೊಂದಿಗೆ ವಿಲೀನಗೊಳಿಸಬೇಕು ಎಂದು ಸೂಚಿಸಿತು. ಕೊಡಗನ್ನು ಪ್ರತ್ಯೇಕ ಪ್ರಾಂತ್ಯವಾಗಿ ಮುಂದುವರಿಸುವ ವಿಧೇಯಕಕ್ಕೆ 6 ಜನ ಸದಸ್ಯರ ಪರವಾಗಿ ವಾದಿಸಿದರೆ, ಇನ್ನುಳಿದ 11 ಜನರು ತಟಸ್ಥರಾಗಿ ಉಳಿದರು. ಪ್ರಾದೇಶಿಕ ಸ್ವಯಂಸರ್ಕಾರದ ನಿರ್ಮಾಣಕ್ಕೆ ಹಣಕಾಸು ಹಾಗೂ ಕೊಡಗಿನ ಬಹುಸಂಖ್ಯೆ ಜನರ ಅಭಿಪ್ರಾಯದ ಅನಿವಾರ್ಯವನ್ನು ತಿಳಿಸಲಾಯಿತು. ಹೀಗೆ ಭಾರತದ ಸ್ವಾತಂತ್ರ್ಯವರೆಗೆ ಕೊಡಗಿನ ವಿಲೀನ ಪ್ರಕ್ರಿಯೆ ಜಾರಿಯಲ್ಲಿತ್ತು. ಕೊಡಗಿನ ಅಭಿವೃದ್ಧಿಗಾಗಿ ಕಮೀಷನರ್‌ಗಳು ವಿಲೀನ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಾಗ, ಕಂಡುಬಂದ ವಿರೋಧದಿಂದ ತಮ್ಮ ಯೋಜನೆಯ ಅನುಷ್ಠಾನಕ್ಕೆ ಪ್ರಯತ್ನಿಸುತ್ತಿರುತ್ತಾರೆ. ಆದರೆ ರಾಷ್ಟ್ರೀಯತೆಯ ಪರಿಣಾಮವಾಗಿ ಅವರ ವಿಲೀನ ಪ್ರಕ್ರಿಯೆ ಯಶಸ್ವಿಯಾಗುವುದಿಲ್ಲ. ಕಮಿಷನರ್‌ಗಳ ಯೋಜನೆಯು ಫಲಕಾರಿಯಾಗಲಿಲ್ಲ. ಇದಕ್ಕೆ ಮುಖ್ಯಕಾರಣ ವಸಾಹತುಶಾಹಿ ಕೊಡಗಿನಲ್ಲಿ ಬ್ರಿಟಿಷ್ ಯೋಜನೆಗಳು ಯಶಸ್ವಿಯಾಗಲಿಲ್ಲ ಎನ್ನುವುದಕ್ಕಿಂತಲೂ ಬ್ರಿಟಿಷ್ ಅಧಿಕಾರಿಗಳು ಹೆಚ್ಚಿನ ಆಸಕ್ತಿಯನ್ನು ವಹಿಸಲಿಲ್ಲ ಎನ್ನಬಹುದು.

ಟಿಪ್ಪಣಿಗಳು ಮತ್ತು ಆಕರ ಸೂಚಿ

1. The Existing Constitution of the Province of Coorg And Its Operation,pp 415-18
2. Ibid.,p.420
3. Ibid.,p.421
4. Ibid. pp.422-423

5. The office of the Chief Commissioner of Coorg., chapter. 42, Government of India Act, 1935, Part. IV. The Chief Commissioner Provinces.
6. The office of the Chief Commissioner of Coorg., Resolution.no.138, Proceedings of the Legislative Council, 939
7. The office of the Chief Commissioner of Coorg., Constitutional Reforms in Coorg,p.19
8. Ibid.p..23
9. The office of the Chief Commissioner of Coorg., Telegram. No.78-T the Chief Commissioner, to, the government of India, home department, Dated 3rd May 1922.(part-1)
10. The office of the Chief Commissioner of Coorg., File.no. 156, Coorg and Madras Amalgamation, 1918.
11. Ibid.p.22
12. The office of the Chief Commissioner of Coorg., Appendices F.G.H Extracts from Confidential notes on Coorg, regarding the proposal to transfer Coorg to Madras. Bangalore, 1907 p.2
13. The office of the Chief Commissioner of Coorg., Serial. No. 73/11-28, Letter. No. 2852/11-28., The Local Administration on the Report of the Indian Statutory Commission.
14. The office of the Chief Commissioner of Coorg., Coorg and Politics 19-9-19
15. The office of the Chief Commissioner of Coorg., Serial. No. 38 Letter. No. 1518, From, the Chief Commissioner, to, the government of India, home department, Dated 15th April 1919.
16. The office of the Chief Commissioner of Coorg., Council proceedings., pp.120-122
17. Ibid. pp. 137-138
18. The office of the Chief Commissioner of Coorg., Council proceedings., pp.147-149
19. The office of the Chief Commissioner of Coorg., The Coorg Land Holder Association, Nov. 16-9-20
20. Ibid. 22-9-1920
21. The office of the Chief Commissioner of Coorg., The Coorg Land Holder Association, Nov. 16-9-20
22. The Existing Constitution of the Province of Coorg And Its Operation,pp.414-416
23. The Existing Constitution of the Province of Coorg And Its Operation,pp.415-417
24. Ibid.Pp. 418-419
25. The office of the Chief Commissioner of Coorg., Serial. No. 17/390 Letter. No. C.1714/390, From, the Chief Commissioner, to, the government of India, home department, Dated 28th March 1922.

26. The office of the Chief Commissioner of Coorg., Sir William Barton., Resident at Hyderabad (who was chief Commissioner of Coorg from 1920-25) who was consulted by the officiating chief Commissioner, gave his opinion on the Memorandum proposed to he sent to the Government of India for submission to the Indian Statutory Commission in 1928.

27. The office of the Chief Commissioner of Coorg., Demi-official letter. No.35/11-28, from sir Richard Burke to Mr.W.H.Lewis joint Secretary to the Government of India reforms office dated the 23rd September 1932, page of file 140/11/1928

28. The office of the Chief Commissioner of Coorg., Office of Coorg commissioner., F. Hannyington Commissioner of Coorg, Summary of the objection raised against the amalgamation of Coorg with the Madras Presidency. Dated 10th December 1918.

29. The office of the Chief Commissioner of Coorg., The Existing Constitution of the Province of Coorg And Its Operation,pp.418-419

30. The office of the Chief Commissioner of Coorg., Office of the Coorg Legislative Council., From, M.R. Rao. Bahadur. K. Chengappa. B.A., Secretary to the Coorg Legislative Council, Mercara, To, The Secretary to the Chief Commissioner of Coorg, Bangalore, Mercara, the 16th May 1931.

31. The office of the Chief Commissioner of Coorg., Office of the Coorg Legislative Council., Letter. No. 1 of 1930 From the Government of India to the Secretary of State of India. Government of India's Dispatch on the Proposals for Constitutional reforms, dated 20th September 1930.

32. The office of the Chief Commissioner of Coorg., Office of the Coorg Legislative Council., Demi-official letter. No.35/11-28, from sir Richard Burke to Mr.W.H.Lewis joint Secretary to the Government of India

33. The office of the Chief Commissioner of Coorg., Office of the Coorg Legislative Council., para.153, 160, pp.211-230

34. The office of the Chief Commissioner of Coorg., Round Table Conferences Report of Joint Committee on Indian Constitutional Reforms and Government of India Bill of 1932-1935

35. The office of the Chief-Commissioner of Coorg., Council proceedings Resolution passed by the Legislative Council in November 1936

36. The office of the Chief Commissioner of Coorg., Resolustion.no.61 by N. Somanna, proceedings of the Coorg Legislative Council.1938

37. The office of the Chief Commissioner of Coorg., B.M Cariappa's Response to the Resolution.no.61, proceedings of the Coorg Legislative Council.1938

38. The office of the Chief Commissioner of Coorg., Resolustion.no 138 by M.M Belliappa, proceedings of the Coorg Legislative Council.1939

39. The office of the Chief Commissioner of Coorg., Resolutions passed at the all party conference held in mercara on the 18th December 1932

40. The office of the Chief Commissioner of Coorg., Council proceedings,pp 180-183

ITIHASA DARPANA (Quarterly)
A Peer Reviewed Journal of Historical Research in Kannada
ISSN 2321-3590
Book No.: 37-38.
April – September 2018
Author: Mallikarjuna C. bhagodi
Title: Garuḍādri manetana: kelavu hosa sangatigaḷu

ಗರುಡಾದ್ರಿ ಮನೆತನ : ಕೆಲ ಹೊಸ ಸಂಗತಿಗಳು

'ಗರುಡಾದ್ರಿ' ಇದೊಂದು ಚಿತ್ರಕಲಾವಿದ ಮನೆತನದ ಹೆಸರು. ಸುಮಾರು ಎರಡು ಶತಮಾನಗಳ ಹಿಂದೆ ಸುರಪುರ ಸಂಸ್ಥಾನದಲ್ಲಿ ಆಶ್ರಯ ಹೊಂದಿದ್ದ ಈ ಮನೆತನ ರಾಜಾಶ್ರಯಕ್ಕಿಂತ ಮುಂಚೆಯೂ ಇದೇ ಹೆಸರಿನಿಂದ ಗುರುತಿಸಿಕೊಂಡಿತ್ತೆ? ಅಥವಾ ಮತ್ತಾವ ಹೆಸರಿನಿಂದ ಕರೆಯಿಸಿಕೊಂಡಿತ್ತು. ಇಂಥದೊಂದು ಪ್ರಶ್ನೆಗೆ ಉತ್ತರ ಹುಡುಕುವ ಪ್ರಯತ್ನ ಇಲ್ಲಿ ನಡೆದಿದೆ.

ಸುರಪುರ ಸಂಸ್ಥಾನದ ಉನ್ನತಿಯಲ್ಲಿ ಗರುಡಾದ್ರಿ ಮತ್ತು ಅವರ ವಂಶಸ್ಥರ ಬಣ್ಣ-ಕುಂಚದ ಕಾಣಿಕೆಯನ್ನು ಬಹಳ ವಿಶೇಷವೆಂದು ಪರಿಗಣಿಸಲಾಗಿದೆ. ಸಂಸ್ಥಾನದ ಹೆಸರನ್ನು ಅಂತಾರಾಷ್ಟ್ರೀಯ ನೆಲೆಯಲ್ಲಿ ಗುರುತಿಸಿಕೊಳ್ಳಲು ಈ ಕಲಾವಿದ ಮನೆತನ ಪ್ರಮುಖ ಪಾತ್ರವಹಿಸಿದೆ. ದೇಶ-ವಿದೇಶಗಳ ಪ್ರಮುಖ ಸಂಗ್ರಹಾಲಯಗಳಲ್ಲಿ ಗರುಡಾದ್ರಿಯವರು ಚಿತ್ರಿಸಿದ ಚಿತ್ರಗಳಿವೆಯಾದರೂ ಇಂದು ಆ ಎಲ್ಲ ಚಿತ್ರ ಪ್ರಕಾರಗಳನ್ನು **ಸುರಪುರ ಚಿತ್ರಕಲೆ** (ಆಂಗ್ಲರ ದಾಖಲೆಗಳಲ್ಲಿ ಈ ಚಿತ್ರ ಸಂಪ್ರದಾಯವನ್ನು Shorapur Painting ಎನ್ನುವ ಹೆಸರಿನಿಂದ ಕರೆಯಲಾಗಿದೆ) ಎಂತಲೇ ಗುರುತಿಸಲಾಗುತ್ತದೆ.

ಮಲ್ಲಿಕಾರ್ಜುನ ಸಿ. ಬಾಗೋಡಿ
ಅಧ್ಯಾಪಕ
ದೃಶ್ಯಕಲಾ ಅಧ್ಯಯನ ವಿಭಾಗ.
ಗುಲಬರ್ಗಾ ವಿಶ್ವವಿದ್ಯಾಲಯ.
ಕಲಬುರಗಿ.
ಮೊಬೈಲ್: 9448652157
bagodimc74@gmail.com

ಸುರಪುರ ಸಂಸ್ಥಾನ ಮತ್ತು ಗರುಡಾದ್ರಿಯವರ ಚಿತ್ರ ಸಂಪ್ರದಾಯ ಕುರಿತಂತೆ ಕೆಲ ವರ್ಷಗಳಿಂದ ಸಂಶೋಧನೆಗಳು ನಡೆಯುತ್ತಿವೆ. **ಸುರಪುರ ಚಿತ್ರಕಲೆ** ಕುರಿತಾಗಿಯೇ ಪ್ರಸ್ತುತ ಲೇಖಕರು ಪಿಎಚ್.ಡಿ. ಸಂಶೋಧನಾಧ್ಯಯನ ನಡೆಸಿರುತ್ತಾರೆ. ಅದು ಪ್ರಕಟವೂ[1] ಆಗಿದೆ. ಅದಾದನಂತರ ಈ ವಿಷಯವಾಗಿಯೇ ಪ್ರಕೃತ ಲೇಖಕ ಕರ್ನಾಟಕ, ತೆಲಂಗಾಣ ಮತ್ತು ಆಂಧ್ರ ಪ್ರದೇಶದ ಕೆಲವೆಡೆ ಕ್ಷೇತ್ರಕಾರ್ಯ ಕೈಗೊಳ್ಳುವ ಮೂಲಕ ಕೆಲ ಹೊಸ ಸಂಗತಿಗಳನ್ನು ಕ್ರೋಢೀಕರಿಸಿರುತ್ತಾರೆ. ಕೆಲವೊಂದು ದಾಖಲೆಗಳಲ್ಲಿ ಗರುಡಾದ್ರಿ ವಂಶಸ್ಥರ ಪೂರ್ವೇತಿಹಾಸ ಮತ್ತು ಮನೆತನಕ್ಕೆ ಸಂಬಂಧಿಸಿದ ವಿಭಿನ್ನ ಹೆಸರುಗಳು ಕಾಣಿಸಿಕೊಂಡಿವೆ. ಲಭ್ಯ ದಾಖಲೆಗಳನ್ನು ಆಧಾರವಾಗಿಟ್ಟುಕೊಂಡು ಗರುಡಾದ್ರಿ ಮನೆತನ ಹಾಗೂ ಕೃತಿರಚನೆ ಕುರಿತಂತೆ ಕೆಲ ಹೊಸ ಸಂಗತಿಗಳನ್ನಿಲ್ಲಿ ಪ್ರಸ್ತಾಪಿಸಲಾಗಿದೆ.

ಆಂಧ್ರದ ಕಡಪ ಜಿಲ್ಲೆಯಲ್ಲಿ 'ಚಿಟಿವೇಲ್ ಅಗ್ರಹಾರ' ಹೆಸರಿನ ಊರೊಂದಿದೆ. ಸುರಪುರ ಸಂಸ್ಥಾನದಲ್ಲಿ ನೆಲೆ ಕಂಡುಕೊಂಡ ಕಲಾವಿದ ಕುಟುಂಬ ಇಲ್ಲಿಂದಲೇ ಬಂದವರೆಂದು ಹೇಳಲಾಗುತ್ತದೆ. ಈಗಲೂ ಗರುಡಾದ್ರಿ ವಂಶಸ್ಥರಿಲ್ಲಿ ನೆಲೆಸಿದ್ದಾರೆ. ಇವರ ಪೂರ್ವಿಕರು ವಿಜಯನಗರ ಸಾಮ್ರಾಜ್ಯದಲ್ಲಿ ಆಶ್ರಯ ಪಡೆದಿದ್ದು, ಸಾಮ್ರಾಜ್ಯದ ಕೊನೆಯವರೆಗೂ ಆ ರಾಜ್ಯದಲ್ಲಿ (ವಿಜಯನಗರ ಸಾಮ್ರಾಜ್ಯದಲ್ಲಿ ಈ ಕಲಾವಿದ ಮನೆತನ ಯಾವ ಹೆಸರಿನಿಂದ ಗುರುತಿಸಿಕೊಂಡಿತ್ತು ಎಂಬ ಮಾಹಿತಿಯಿಲ್ಲ) ನೆಲೆಸಿದ್ದರೆನ್ನಲಾಗಿದೆ. ವಿಜಯನಗರ ಸಾಮ್ರಾಜ್ಯ ಅವನತಿ ಹೊಂದುತ್ತಿದ್ದಂತೆಯೇ ಈ ಕಲಾವಿದರಲ್ಲಿ ಕೆಲವರು ತಮ್ಮ ಮೂಲನೆಲೆ ಚಿಟಿವೇಲ್‌ಗೆ ಬಂದು ನೆಲೆಸಿದ್ದರೆ, ಮತ್ತೆ ಕೆಲವರು ಕಿನ್ನಾಳ, ಆದೋನಿ, ಹೊಳಾಲಗುಂದಿ, ಕರ್ನೂಲು ಸೇರಿದಂತೆ ಹೈದರಾಬಾದ ನಿಜಾಮ್ ರಾಜ್ಯದಲ್ಲಿ ನೆಲೆ ಕಂಡುಕೊಂಡಿದ್ದಾರೆ. ಇಂಥದೇ ಒಂದು ಸಂದರ್ಭವನ್ನು ಹುಡುಕಿಕೊಂಡು ಬೆನಕಯ್ಯ ಎಂಬಾತ 1750ರ ದಶಕದಲ್ಲಿ ಸುರಪುರಕ್ಕೆ ಬಂದು ನೆಲೆ ಕಂಡುಕೊಳ್ಳುತ್ತಾನೆ ಎನ್ನಲಾಗಿದೆ. ಕ್ರಿ.ಶ. 1636ರ ಸುಮಾರಿಗೆ ಗೋಸಲ ವಂಶದ ನಾಯಕರ (ಸುರಪುರ ನಾಯಕರು) ಸ್ವತಂತ್ರ ರಾಜ್ಯದ ಉದಯವಾಗುತ್ತದೆ. ಹಾಗಾದರೆ, ಕ್ರಿ.ಶ. 1750ರ ಪೂರ್ವದಲ್ಲಿ ಸುರಪುರ ರಾಜ್ಯದಲ್ಲಿ ಚಿತ್ರಕಲಾವಿದರು ನೆಲೆ ಕಂಡಿರಲಿಲ್ಲವೆ? ಎಂಬ ಅನುಮಾನ ಮೂಡುವುದು ಸಹಜ.

ಬೆನಕಯ್ಯ ಎಂಬಾತ ಸುರಪುರ ರಾಜರ ಆಶ್ರಯ ಪಡೆಯುವುದಕ್ಕಿಂತ ಮುಂಚೆ ಈ ಮನೆತನಕ್ಕೆ 'ಗರುಡಾದ್ರಿ' ಎಂಬ ಹೆಸರಿದ್ದ ಮಾಹಿತಿಯಾಗಲಿ, ಉಲ್ಲೇಖಗಳಾಗಲಿ ಕಂಡುಬರುವುದಿಲ್ಲ. ಸುರಪುರ ರಾಜಾಶ್ರಯ ಪಡೆದ ನಂತರವೇ ಈ ಮನೆತನಕ್ಕೆ 'ಗರುಡಾದ್ರಿ' ಎಂಬ ಹೆಸರು ಬಂದಿರುವುದಕ್ಕೆ ಸುರಪುರ ರಾಜ್ಯದಲ್ಲಿನ ಕೆಲ ದಾಖಲೆಗಳು ಪುಷ್ಟೀಕರಿಸುತ್ತವೆ.

ರಾಜಾ ರಾಘವ ಪಾಮನಾಯಕರಿಂದ ಮೊದಲ್ಗೊಂಡು ಕೊನೆಯ ರಾಜಾ ನಾಲ್ವಡಿ ವೆಂಕಟಪ್ಪನಾಯಕರವರೆಗಿನ ಅವಧಿಯನ್ನು ಕಲೆಯ ದೃಷ್ಟಿಯಿಂದ 'ಸುವರ್ಣ ಯುಗ' ಎನ್ನಲಾಗಿದೆ. ಈ ಅವಧಿಯಲ್ಲಿಯೇ ಗರುಡಾದ್ರಿಯವರು ಸಂಸ್ಥಾನದಲ್ಲಿ ಆಶ್ರಯ ಪಡೆದಿರುವ ಮಾಹಿತಿ ಕೆಲ ದಾಖಲೆಗಳಿಂದ[2] ತಿಳಿದುಬರುತ್ತದೆ.

ಗರುಡಾದ್ರಿ ಮನೆತನದ ಮೂಲಪುರುಷ ಚಿಟಿವೇಲಯ್ಯನಿಗೆ (ಆಂಧ್ರದ ಚಿಟಿವೇಲ್‌ನಿಂದ ಬಂದಿರುವ ಕಾರಣಕ್ಕೆ ಈ ಮನೆತನದ ಹಿರಿಯನಿಗೆ ಚಿಟಿವೇಲಯ್ಯ ಎಂದು ಕರೆದಿರಬಹುದು) ಬೆನಕಯ್ಯ, ಸುಂಗಾರಯ್ಯ, ಅಪ್ಪಯ್ಯ ಎಂಬ ಮೂರುಜನ ಗಂಡು ಮಕ್ಕಳು. ಇವರಲ್ಲಿ ಬೆನಕಯ್ಯನು ತಂದೆಯೊಂದಿಗೆ ಸುರಪುರ ರಾಜರ ಆಶ್ರಯವನ್ನು ಪಡೆದರೆ, ಉಳಿದಿಬ್ಬರು ಬೇರೆ ಬೇರೆ ಸಂಸ್ಥಾನಗಳಲ್ಲಿ ನೆಲೆ ಕಂಡುಕೊಳ್ಳುತ್ತಾರೆನ್ನುವ ಮಾತನ್ನು ಗರುಡಾದ್ರಿ ಸಂಬಂಧಿ ಶ್ರೀಮತಿ ಲಕ್ಷ್ಮಮ್ಮನವರು (2001ರಲ್ಲಿ ಕ್ಷೇತ್ರಕಾರ್ಯ ಕೈಗೊಂಡಿರುವ ವೇಳೆ) ಹೇಳಿದ್ದನ್ನಿಲ್ಲಿ ಸ್ಮರಿಸಬಹುದಾಗಿದೆ.

ಸುರಪುರ ರಾಜಾಶ್ರಿತ ಗರುಡಾದ್ರಿ ಕುಟುಂಬಕ್ಕೆ ದೊರೆಗಳು ಶಾಹಾಪುರ, ಮುಡಬೂಳ ಸೀಮೆಯಲ್ಲಿ ನೂರಾರು ಎಕರೆ ಭೂಮಿಯನ್ನು ಉಂಬಳಿಯನ್ನಾಗಿ ನೀಡುವುದರೊಂದಿಗೆ ಜಹಗೀರು ದಯಪಾಲಿಸುತ್ತಾರೆ. ಆ ಕಾರಣಕ್ಕಾಗಿಯೇ ಗರುಡಾದ್ರಿಯವರು ತಮ್ಮನ್ನು ಜಹಗೀರದಾರರೆಂದೂ ಕರೆದುಕೊಂಡಿದ್ದಾರೆ.[3]

ಶ್ರೀ ವೇಣುಗೋಪಾಲಸ್ವಾಮಿಯ ಉತ್ಸವವನ್ನು ಸುರಪುರದಲ್ಲಿ ಪ್ರತಿವರ್ಷ ಬಹು ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಇದೇ ಸಂದರ್ಭದಲ್ಲಿ ದೇವಾಲಯದಲ್ಲಿನ ಉತ್ಸವ ಮೂರ್ತಿಗಳನ್ನು ವಿವಿಧ ವರ್ಣಗಳಿಂದ ಸಿಂಗರಿಸಿ ಮೆರವಣಿಗೆಗೆ ಅಣಿಗೊಳಿಸುವ ಸಂಪ್ರದಾಯ ಇಂದಿಗೂ ಮುಂದುವರಿದಿದೆ. ದೇವಾಲಯದಲ್ಲಿನ ಉತ್ಸವ ಮೂರ್ತಿಗಳು ಬೆನಕಯ್ಯನಿಂದಲೇ ನಿರ್ಮಿಸಲ್ಪಟ್ಟದ್ದು, ಪ್ರತಿವರ್ಷ ಅವುಗಳಿಗೆ ಬಣ್ಣಗಳಿಂದ ಸಿಂಗರಿಸುವ ಕಾಯಕ ಬೆನಕಯ್ಯನದ್ದಾಗಿತ್ತು ಎನ್ನಲಾಗಿದೆ. ಒಮ್ಮೆ "ಬೆನಕಯ್ಯನು ಉತ್ಸವ ಮೂರ್ತಿಗಳನ್ನೆಲ್ಲ ಸಿಂಗರಿಸಿ ಮೆರವಣಿಗೆಗೆ ಅಣಿಗೊಳಿಸುತ್ತಿರಬೇಕಾದರೆ, ಆಗಿನ ದೊರೆ ಉತ್ಸವ ಮೂರ್ತಿಗಳಲ್ಲಿನ ಗರುಡ ವಾಹನವನ್ನು ನೋಡಿ 'ಗರುಡಾದ್ರಿ' ಎಂದು ಉದ್ಗಾರವೆತ್ತಿದ್ದಲ್ಲದೇ, ಬೆನಕಯ್ಯನಿಗೆ ವಸ್ತ್ರ ಇತ್ಯಾದಿಗಳಿಂದ ಸತ್ಕರಿಸಿದರಂತೆ. ದೊರೆಗಳೇ ಬೆನಕಯ್ಯನಿಗೆ 'ಗರುಡಾದ್ರಿ' ಎಂದು ಸಂಬೋಧಿಸಿರಬೇಕಾದರೆ, ಉಳಿದವರೂ 'ಗರುಡಾದ್ರಿ' ಎಂತಲೇ ಕರೆಯಲಾರಂಭಿಸುತ್ತಾರೆ. ಅಂದಿನಿಂದ ಈ ಕಲಾವಿದ ಮನೆತನಕ್ಕೆ 'ಗರುಡಾದ್ರಿ' ಎಂಬ ಹೆಸರು ಶಾಶ್ವತವಾಗಿ ಉಳಿದುಬಿಡುತ್ತದೆ. ಹಾಗಾದರೆ, ಇದಕ್ಕೂ ಮುನ್ನ 'ಗರುಡಾದ್ರಿ' ಮನೆತನದ ಮೂಲ ಹೆಸರು ಏನಿತ್ತು? ಎನ್ನುವ ಇನ್ನೊಂದು ಪ್ರಶ್ನೆ ನಮ್ಮನ್ನು ಕಾಡುತ್ತದೆ. ಅದಕ್ಕೂ ಉತ್ತರ ಹುಡುಕುವ ಪ್ರಯತ್ನ ಇಲ್ಲಿ ನಡೆದಿದೆ.

2008ರಲ್ಲಿ ಆಂಧ್ರನಾಡಿನ ಕರ್ನೂಲು, ಮಹಬೂಬನಗರ, ಹೈದರಾಬಾದ ಮತ್ತಿತರೆಡೆ ಕ್ಷೇತ್ರಕಾರ್ಯ ಕೈಗೊಂಡಾಗ, ಈ ಜಿಲ್ಲೆಗಳಲ್ಲಿ ಗರುಡಾದ್ರಿ ವಂಶಸ್ಥರು ನೆಲೆಸಿದ್ದು, ಅವರು ತಮ್ಮನ್ನು 'ವರ್ಮಾ', 'ಚಿತ್ತಾರಿ' ಹೆಸರಿನಿಂದ (ಮನೆತನದ ಹೆಸರು) ಕರೆಸಿಕೊಳ್ಳುತ್ತಿರುವುದು ಕಂಡು ಬಂದಿರುತ್ತದೆ. ಕರ್ನೂಲು ಜಿಲ್ಲೆಯ ಆದೋನಿಯಲ್ಲಿ ಗರುಡಾದ್ರಿ ವಂಶಸ್ಥರೇ ಆಗಿರುವ ಎರಡನೇ ಬೆನಕಯ್ಯನ ಪರಿವಾರ ನೆಲೆಸಿದೆ. 1970ರ ದಶಕದ ವರೆಗೂ ಈ ಕುಟುಂಬ ಸುರಪುರದಲ್ಲಿ ನೆಲೆಸಿತ್ತು. ಕಾರಣಾಂತರಗಳಿಂದ ಸುರಪುರವನ್ನು ಬಿಟ್ಟು ಆದೋನಿಯಲ್ಲಿ ನೆಲೆಕಾಣಬೇಕಾಯಿತು ಎಂದು ಹೇಳುವ ಬೆನಕಯ್ಯನವರು ಈಗಲೂ ಚಿತ್ರಕಲೆಯನ್ನು ನಂಬಿಯೇ ಜೀವನ ನಡೆಸುತ್ತಿರುವರು. ಆದೋನಿಯಲ್ಲಿ ಇವರನ್ನು


'ವರ್ಮಾ' ಎಂಬ ಹೆಸರಿನಿಂದ ಕರೆಯುತ್ತಾರೆ. ಇನ್ನೂ ಒಂದೆರಡು ಕುಟುಂಬಗಳು ಇಲ್ಲಿ ನೆಲೆಸಿದ್ದು, ಇವರು 'ಚಿತ್ತಾರಿ' ಎಂದು ತಮ್ಮನ್ನು ಕರೆಯಿಸಿಕೊಳ್ಳುತ್ತಾರೆ. ಈ ಎಲ್ಲವುಗಳನ್ನು ಗಮನಿಸಿದರೆ, ಸುರಪುರ ಆಸ್ಥಾನ ಕಲಾವಿದರ ಮೂಲ ಹೆಸರು 'ವರ್ಮಾ' ಇಲ್ಲವೆ 'ಚಿತ್ತಾರಿ' ಎಂದಿರುವುದನ್ನು ನಾವು ಒಪ್ಪಬಹುದಾಗಿದೆ. ಈ ಮಾತಿಗೆ ಪೂರಕವೆನ್ನಬಹುದಾದ ಒಂದೆರಡು ದಾಖಲೆಗಳು ಕಾಣಿಸಿಕೊಂಡಿವೆ.

ಆಂಧ್ರದ ಗಡಿಭಾಗದಲ್ಲಿ ಹೊಳಾಲಗುಂದಿ ಹೆಸರಿನ ಗ್ರಾಮವೊಂದಿದೆ. ರಾಜ್ಯ ಏಕೀಕರಣಕ್ಕೆ ಮುಂಚೆ ಈ ಗ್ರಾಮ ಕನ್ನಡ ನಾಡಿನ ಭಾಗವಾಗಿದ್ದು, ಈಗಲೂ ಇಲ್ಲಿನ ಜನ ಕನ್ನಡ ಮಾತನಾಡಬಲ್ಲರು. ಸಿದ್ಧಮಲ್ಲನಗೌಡರದು ಈ ಗ್ರಾಮದ ಶ್ರೀಮಂತ ಮನೆತನ. ಇವರ ಹಿರಿಕರು ತಮ್ಮ ಮನೆದೇವರ ಹೆಸರಿನಲ್ಲಿ ಸಿದ್ಧೇಶ್ವರ ದೇವಾಲಯವನ್ನು ಕಟ್ಟಿಸುತ್ತಾರೆ. ಸುಮಾರು ಎರಡು ಶತಮಾನಗಳ ಹಿಂದೆ ನಿರ್ಮಾಣಗೊಂಡ ಈ ದೇವಾಲಯದ ಮುಖ್ಯಮಂಟಪದ ಒಳಮಾಳಿಗೆಯಲ್ಲಿ ಸಾಕಷ್ಟು ವರ್ಣಚಿತ್ರಗಳಿದ್ದು, ಈ ಚಿತ್ರಗಳಲ್ಲಿ ಸುರಪುರ ಕಲೆಯ ಲಕ್ಷಣಗಳು ನುಸುಳಿಕೊಂಡಿವೆ.

ಒಮ್ಮೆ ಹೊಳಾಲಗುಂದಿಯ ಪಂಪನಗೌಡರನ್ನು (ಸಿದ್ಧಮಲ್ಲನಗೌಡರ ಮಗ) ಭೇಟಿ ಮಾಡಿ ದೇವಾಲಯದಲ್ಲಿನ ಚಿತ್ರರಚನೆ ಕುರಿತಂತೆ ಮಾತಿಗಿಳಿದಾಗ, ಅವರು ಸಿದ್ಧೇಶ್ವರ ದೇವಾಲಯದ ಕಟ್ಟಡ ಕೆಲಸ ಮತ್ತು ದೇವಾಲಯದಲ್ಲಿನ ಚಿತ್ರರಚನೆ ಕುರಿತಂತೆ ಮಾಹಿತಿಯನ್ನು ನೀಡುತ್ತ ತುಂಬ ಹಳೆಯದಾದ ಹಸ್ತಲಿಖಿತ ಕಟ್ಟೊಂದನ್ನು ಪ್ರಕೃತ ಲೇಖಕನಿಗೆ ತೋರಿಸಿದರು. ಕನ್ನಡದೊಂದಿಗೆ ಮೋಡಿ ಅಕ್ಷರಗಳಲ್ಲಿ ಬರೆಯಲ್ಪಟ್ಟ ಈ ಹಸ್ತಲಿಖಿತ ಕಟ್ಟಿನಲ್ಲಿ ದೇವಾಲಯ ಕಟ್ಟಡ ಕೆಲಸ ಆರಂಭವಾದಾಗಿನಿಂದ ಕಟ್ಟಡ ಕೆಲಸ ಮುಗಿದು, ಸುಣ್ಣ-ಬಣ್ಣ ಲೇಪನ ಮಾಡುವವರೆಗಿನ ಲೆಕ್ಕಪತ್ರದ ವಿವರಣೆಯಿದೆ. ಕೆಲ ಪುಟಗಳಲ್ಲಿ ವರ್ಮಾ, ಚಿತ್ತಾರಿ, ಚಿತ್ರಗಾರ, ಕಂಚಗಾರ, ಸುಣಗಾರ ಮುಂತಾದ ಹೆಸರುಗಳಿದ್ದು, ಅವರು ದೇವಾಲಯ ಕಟ್ಟಡ ಕೆಲಸದಲ್ಲಿ ನಿರತರಾಗಿದ್ದರೆಂದು ಉಲ್ಲೇಖಿಸಿದೆ.

ಮೇಲಿನ ಹೆಸರುಗಳಲ್ಲಿ 'ವರ್ಮಾ' ಎನ್ನುವ ಹೆಸರು ಆಕರ್ಷಿಸಿತು. ಕಾರಣ, ಸುರಪುರ ಆಸ್ಥಾನ ಕಲಾವಿದ ವಂಶಸ್ಥರಾದ ಗರುಡಾದ್ರಿಯವರ ಪೂರ್ವದ ಹೆಸರೂ 'ವರ್ಮಾ' (ಹಸ್ತಲಿಖಿತ ಕಟ್ಟಿನಲ್ಲಿ ಪ್ರತ್ಯೇಕವಾಗಿ ಕಲಾವಿದರ ಹೆಸರುಗಳನ್ನು ನಮೂದಿಸಿಲ್ಲ) ಎಂತಲೇ ಇದೆ. ಸಿದ್ಧೇಶ್ವರ ದೇವಾಲಯದಲ್ಲಿನ ಭಿತ್ತಿ ಚಿತ್ರಗಳಲ್ಲಿ ಪುರಾಣೋಕ್ತ ಹಾಗೂ ಐತಿಹಾಸಿಕ ಹಿನ್ನೆಲೆಯ ಸಾಕಷ್ಟು ಚಿತ್ರಗಳಿದ್ದು, ವಿಶೇಷವಾಗಿ **ಮಾರ್ಕಂಡೇಯ ಪುರಾಣ**, 'ಯಾದವರ ಕಾಳಗ'; ಈ ಎರಡು ವರ್ಣಚಿತ್ರಗಳಲ್ಲಿ ಸುರಪುರ ಚಿತ್ರಕಲೆಯ ಲಕ್ಷಣಗಳು ದಟ್ಟವಾಗಿವೆ.


ಇಂದ್ರನ ಆಸ್ಥಾನ ಸನ್ನಿವೇಶದ ಚಿತ್ರವೊಂದರಲ್ಲಿ ವಶಿಷ್ಠ ಮುನಿಗಳೊಂದಿಗೆ ನಾರದ ಚಿತ್ರಣಗೊಂಡಿದ್ದಾನೆ. ಹಿಂಬದಿಯಲ್ಲಿ ಸೇವಕರಿದ್ದು, ಚಾಮರವನ್ನು ಬೀಸುತ್ತಿದ್ದಾರೆ. ಈ ದೃಶ್ಯವು ನಾರದ ಹಾಗೂ ಮಾರ್ಕಂಡೇಯರ ಸಂಭಾಷಣೆಯನ್ನು ಸೂಚಿಸುತ್ತದೆ. ಈ ಚಿತ್ರಪಟ್ಟಿಕೆಯ ಮೇಲ್ಭಾಗದ ಎರಡೂ ಮೂಲೆಗಳಲ್ಲಿ ಸೂರ್ಯ ಹಾಗೂ ಚಂದ್ರರು ಚಿತ್ರಣಗೊಂಡಿರುವರು. ಚಿತ್ರದಲ್ಲಿನ ಆಕೃತಿಗಳ ನಿರೂಪಣೆ, ವರ್ಣಸಂಯೋಜನೆ, ಶೈಲಿ ಮಾತ್ರವಲ್ಲ ಚಿತ್ರದ ಸುತ್ತಲೂ ಇರುವ ಸುಳುವಿನ ವಿನ್ಯಾಸಗಳು ಗರುಡಾದ್ರಿ ಮೊದಲ



ಮಾರ್ಕಂಡೇಯ ಪುರಾಣ ವಿಷಯಾಧಾರಿತ ಭಿತ್ತಿಚಿತ್ರ (ಶ್ರೀ ಸಿದ್ಧೇಶ್ವರ ದೇವಾಲಯ, ಹೊಳಲಗುಂದಿ)



ಕರ್ಣಾರ್ಜುನರ ಕಾಳಗ (ರಾಯಚೂರು ಬಾಜನಗೌಡರ ಮನೆಯಲ್ಲಿನ ಭಿತ್ತಿಚಿತ್ರ)



ಸಮುದ್ರ ಮಂಥನ (ರಾಯಚೂರಿನ ಹನುಮನ ಮಂದಿರದಲ್ಲಿನ ಭಿತ್ತಿಚಿತ್ರ)



ಗರುಡಾದ್ರಿಯವರು ಮಾಣಿಕನಗರ ಸಂಸ್ಥಾನ ಆವರಣದಲ್ಲಿ ಇದ್ದುಕೊಂಡು ರಚಿಸಿದ ಮಾರ್ಥಂಡ ಪ್ರಭುಗಳ ಭಾವಚಿತ್ರ



ಗರುಡಾದ್ರಿ ವಂಶಸ್ಥ ಕಮಲಯ್ಯ ಚಿತ್ರಿಸಿದ ಮಾಣಿಕ ಪ್ರಭುಗಳ ಭಾವಚಿತ್ರ

ಬೆನಕಯ್ಯನಿಂದ ಚಿತ್ರಿಸಲ್ಪಟ್ಟ ಚೆನ್ನಬಸವ ಪುರಾಣ ವಿಷಯಾಧಾರಿತ ಹಸ್ತಪ್ರತಿ ಚಿತ್ರಗಳನ್ನು ಹೋಲುತ್ತವೆ. ದೇವಾಲಯದ ಕಲ್ಲಿನ ತೊಲೆಯೊಂದರ ಮೇಲೆ ಚಿತ್ರಿಸಲ್ಪಟ್ಟ 'ಯಾದವರ ಕಾಳಗ' ವಿಷಯಾಧಾರಿತ ವರ್ಣಚಿತ್ರದಲ್ಲೂ ಸುರಪುರ ಚಿತ್ರಕಲೆಯ ಲಕ್ಷಣಗಳು ಚಿಗುರೊಡೆದಿವೆ.

ಗರುಡಾದ್ರಿಯವರು ತಮ್ಮ ಮೂಲ ನೆಲೆ ಚಿಟಿವೇಲ್‌ಗೆ ಹೋಗಿ-ಬಂದು ಮಾಡುತ್ತಿದ್ದರು. ಈ ವೇಳೆ ಅವರು ತಮ್ಮೊಟ್ಟಿಗೆ ಬಣ್ಣ-ಕುಂಚಗಳನ್ನೂ ತೆಗೆದುಕೊಂಡು ಹೋಗುತ್ತಿದ್ದ ಮಾಹಿತಿಯನ್ನು ಲಕ್ಷ್ಮಮ್ಮನವರು ಹೇಳಿರುವುದನ್ನು ಗಮನಿಸಿದರೆ ಹೊಳಾಲಗುಂದಿ ಭಿತ್ತಿ ಚಿತ್ರಗಳಲ್ಲಿ ಗರುಡಾದ್ರಿಯವರ (ವರ್ಮಾ ಹೆಸರನ್ನೂ ಒಪ್ಪಬಹುದಾಗಿದೆ) ಪಾಲು ಇರುವುದು ಸ್ಪಷ್ಟವಾಗುತ್ತದೆ.

ಸುರಪುರ ಸಂಸ್ಥಾನದ ಕೊನೆಯ ಅವಧಿಯಲ್ಲಿ ಗರುಡಾದ್ರಿ ವಂಶಸ್ಥರು ಮಾಣಿಕನಗರ ಸಂಸ್ಥಾನಿಕರು ನಡೆಸುವ ದರ್ಬಾರಿನಲ್ಲೂ ಪಾಲ್ಗೊಂಡಿರುವ ಸಾಧ್ಯತೆಗಳಿವೆ. ಮಾಣಿಕನಗರ ಸಂಸ್ಥಾನದಲ್ಲಿ ಮಾಣಿಕ ಪ್ರಭುಗಳು ಏರ್ಪಡಿಸುತ್ತಿದ್ದ ದರ್ಬಾರಿನಲ್ಲಿ ಸಂಗೀತ, ಸಾಹಿತ್ಯ, ನಾಟಕ, ನೃತ್ಯ, ಚಿತ್ರಕಲೆ ಮುಂತಾದ ಕಲೆಗಳ ಪ್ರದರ್ಶನ ನಡೆಯುತ್ತಿತ್ತು. ಈ ಪ್ರದರ್ಶನಕ್ಕೆಂದೇ ದೂರ-ದೂರದಿಂದ ಕಲಾವಿದರು ಬರುತ್ತಿದ್ದರು. ಗರುಡಾದ್ರಿ ವಂಶಸ್ಥ ಕಮಲಯ್ಯ ಮತ್ತು ಅಪ್ಪಯ್ಯ ಈ ಪ್ರದರ್ಶನಗಳಲ್ಲಿ ಭಾಗಿಯಾಗಿ ಚಿತ್ರ ರಚನೆಯಲ್ಲಿ ತೊಡಗಿದ್ದುಂಟು. ಒಂದೊಮ್ಮೆ ಅಪ್ಪಯ್ಯನು ಮಠದಲ್ಲೇ ಇದ್ದುಕೊಂಡು[4] ತನ್ನನ್ನು ಕೃತಿರಚನೆಯಲ್ಲಿ ತೊಡಗಿಸಿಕೊಂಡಿದ್ದರೆ, ಕಮಲಯ್ಯನು ಹೋಗಿ-ಬಂದು ಮಾಡುತ್ತಿದ್ದನೆಂದು ತಿಳಿದುಬರುತ್ತದೆ. ನಂತರದ ದಿನಗಳಲ್ಲಿ ಅಪ್ಪಯ್ಯನು ಹೈದರಾಬಾದ್‌ನಲ್ಲಿ ನೆಲೆ ಕಂಡಿರುವ ಬಗ್ಗೆ ಮಾಹಿತಿಯಿದೆ.

ಗರುಡಾದ್ರಿ ಕಮಲಯ್ಯ ಕೆಲಕಾಲ ರಾಯಚೂರಿನಲ್ಲೂ ನೆಲೆಸಿರುವುದಾಗಿ ತಿಳಿದುಬರುತ್ತದೆ. ಈ ವೇಳೆ ಕಮಲಯ್ಯನು ಚಿತ್ರರಚನೆ ಮಾಡುವುದಲ್ಲದೇ ಅವುಗಳನ್ನು ಮಾರಿತಂದ ಹಣದಲ್ಲಿ ಜೀವನ ನಡೆಸಿದ ಮಾಹಿತಿ ಗರುಡಾದ್ರಿ ವಂಶಸ್ಥರಿಂದ ತಿಳಿದುಬಂದಿದೆ. ರಾಯಚೂರಿನ ಹಳೆಯ ತಲೆಮಾರಿನ ಒಂದೆರಡು ಮನೆಗಳು ಸೇರಿದಂತೆ ಅಲ್ಲಿನ ಕಿಲ್ಲೇ ಬೃಹನ್ಮಠದಲ್ಲಿ ಕಮಲಯ್ಯ ಚಿತ್ರಿಸಿರುವ ಚಿತ್ರಗಳಿವೆ. ರಾಯಚೂರು ನಗರದ ಶ್ರೀಮಂತ ವ್ಯಕ್ತಿ ಖಾಜನಗೌಡರ ಆಸರೆಯನ್ನೂ ಈ ಕಲಾವಿದ ಪಡೆದದ್ದಿದೆ ಎಂದು ಹೇಳಲಾಗುತ್ತದೆ. ಖಾಜನಗೌಡರ ಮನೆಯ ಶಯನಾಗೃಹ ಮತ್ತು ಅಡುಗೆ ಕೋಣೆಯಲ್ಲಿ ರಾಮಾಯಣ, ಮಹಾಭಾರತ, ಶ್ರೀಕೃಷ್ಣನ ಲೀಲೆಗಳಿಗೆ ಸಂಬಂಧಿಸಿದ ಚಿತ್ರಗಳಿದ್ದು, ಕೆಲವು ಸುರಪುರ ಸಮೀಪದ ರಂಗಂಪೇಟೆಯ ವೀರಶೈವ ಮಠಗಳಲ್ಲಿನ ಭಿತ್ತಿ ಚಿತ್ರಗಳನ್ನು ಹೋಲುತ್ತವೆ. ವಿಶೇಷವಾಗಿ 'ಕರ್ಣಾರ್ಜುನರ ಕಾಳಗ', 'ರಾಮ–ಸೀತೆಯರ ದರ್ಶನ', ಹೂಕುಂಡದ ದೃಶ್ಯ, ಪ್ರಾಣಿ–ಪಕ್ಷಿಗಳ ಚಿತ್ರಗಳಲ್ಲಿ ಸುರಪುರ ಚಿತ್ರಕಲೆಯ ಲಕ್ಷಣಗಳು ಕಂಡುಬರುತ್ತವೆ (**ಚೆನ್ನಬಸವ ಪುರಾಣ** ಹಸ್ತಪ್ರತಿಯಲ್ಲೂ ಇಂಥದೇ ಲಕ್ಷಣವುಳ್ಳ ಒಂದೆರಡು ಚಿತ್ರಗಳಿವೆ). ಖಾಜನಗೌಡರ ಮನೆಯ ಸಮೀಪವೇ ಇರುವ ಹನುಮನ ಮಂದಿರದಲ್ಲಿನ ಭಿತ್ತಿ ಚಿತ್ರಗಳಲ್ಲೂ ಸುರಪುರ ಚಿತ್ರಕಲೆಯ ಲಕ್ಷಣಗಳು ಕಾಣಿಸಿಕೊಂಡಿವೆ. ಇಲ್ಲಿನ ಚಿತ್ರಗಳಲ್ಲಿ ಚಿತ್ರಿತ ವಿಷಯಗಳನ್ನು ತೆಲುಗು ಅಕ್ಷರಗಳಲ್ಲಿ ಬರೆಯಲಾಗಿದೆ.

ಒಟ್ಟಿನಲ್ಲಿ ಸುರಪುರ ಆಸ್ಥಾನ ಕಲಾವಿದರು 'ವರ್ಮಾ', 'ಚಿತ್ತಾರಿ', 'ಚಿತ್ರಗಾರ', 'ಗರುಡಾದ್ರಿ' ಎಂಬ ವಿಭಿನ್ನ ಹೆಸರಿನಿಂದ ತಮ್ಮನ್ನು ಗುರುತಿಸಿಕೊಂಡಿದ್ದಾರೆ ಎನ್ನುವುದನ್ನು ಮೇಲಿನ ದಾಖಲೆಗಳು ಪುಷ್ಟೀಕರಿಸುತ್ತವೆ.

ಟಿಪ್ಪಣಿ ಮತ್ತು ಆಕರ ಸೂಚಿ

1. ಮಲ್ಲಿಕಾರ್ಜುನ ಸಿ. ಬಾಗೋಡಿ, 2010, **ಸುರಪುರ ಚಿತ್ರಕಲೆ**, ಸರಚಂದ್ರ ಪ್ರಕಾಶನ: ಚಿತ್ತಾಪುರ.

2. ವೆಂಕಯ್ಯ ಗೋಪಯ್ಯ ಕಸ್ತುರಿಗುಡಿ ಹವಲ್ದಾರ ಕವಿತ್ತ ಮಾಡಿದ ಹಸ್ತಪ್ರತಿಯೊಂದು ಸುರಪುರ ನಾಡಿನಲ್ಲಿ ಕಾಣಿಸಿಕೊಂಡಿದ್ದು, ಹಸ್ತಪ್ರತಿಯ ಒಂದು ಬದಿಯಲ್ಲಿ ಸುರಪುರ ರಾಜರ ಉದಾರ ಕೈಂಕರ್ಯವನ್ನು ದಾಖಲಿಸಿದ್ದರೆ, ಮತ್ತೊಂದು ಬದಿಯಲ್ಲಿ ಆಸ್ಥಾನ ಪಂಡಿತರು ಮತ್ತು ವೇಣುಗೋಪಾಲಸ್ವಾಮಿ ದೇವಾಲಯದ ಸೇವೋತ್ಸವಾದಿಗಳ ವಿವರಣೆ ಸಹಿತ ಉತ್ಸವ ಮೂರ್ತಿಗಳ ಬಣ್ಣಗಾರಿಕೆಯ ಮಾಹಿತಿಯಿದೆ. ಈ ಘಟನೆ ನಡೆದದ್ದು ಕ್ರಿ.ಶ. 1770ರ ಅವಧಿಯಲ್ಲಿ.

3. ಆಸ್ಥಾನ ಪ್ರಮುಖರೆನಿಸಿದ ಸುರಪುರದ ಅಷ್ಟಾವಧಾನಿಯವರ ಮನೆಯಲ್ಲಿ ಗರುಡಾದ್ರಿ ಕಮಲಯ್ಯ ಚಿತ್ರಿಸಿದ ಮಾಣಿಕ ಪ್ರಭುಗಳ ವರ್ಣಚಿತ್ರವೊಂದಿದ್ದು, ಚಿತ್ರದ ಕೆಳಗೆ ಕಮಲಯ್ಯನು ತನ್ನನ್ನು "ಜಹಗೀರದಾರ ಗರುಡಾದ್ರಿ ಕಮಲ್ ವರ್ಮಾ ಶೋರಾಪೂರ" ಎಂದು ಬರೆದುಕೊಂಡಿದ್ದಾನೆ.

4. ಬೀದರ್ ಜಿಲ್ಲೆಯ ಹುಮನಾಬಾದ ಸಮೀಪದ ಮಾಣಿಕನಗರ ಸಂಸ್ಥಾನ ಮಠ ಆವರಣದಲ್ಲಿ ಗರುಡಾದ್ರಿಯವರು ನೆಲೆಗೊಂಡು ಚಿತ್ರರಚನೆ ಮಾಡಿರುವ ಮಾಹಿತಿಯಿದೆ. ಇದು ಒಂದು ರೀತಿಯಲ್ಲಿ ಬಜಾರ್ ಪೇಂಟಿಂಗ್ಸ್ ಪರಿಕಲ್ಪನೆಯನ್ನು ನೆನಪಿಸುತ್ತದೆ. ಉತ್ತರ ಕರ್ನಾಟಕದ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ ಜಿಲ್ಲೆಗಳಲ್ಲಿ ಮಾಣಿಕ ಪ್ರಭುಗಳ ಭಕ್ತರಿದ್ದು, ಇವರ ಮನೆಗಳಲ್ಲಿ ಈ ಹಂತದ ಚಿತ್ರ ಪ್ರಕಾರಗಳಿವೆ.

■

ಸಾದರ ಸ್ವೀಕಾರ

- **ಪೆರಿಯಾರ್ ಚಿಂತನೆ**
  – ಸಿ. ಚಂದ್ರಪ್ಪ
  ಪ್ರಕಾಶಕರು: ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು.
  ವರ್ಷ: 2016 ಪುಟಗಳು: 200 ಬೆಲೆ: 100/–

- **ಕರ್ನಾಟಕದಲ್ಲಿ ತುರ್ತುಪರಿಸ್ಥಿತಿ – ಪ್ರಭಾವ ಮತ್ತು ಪರಿಣಾಮಗಳು**
  – ರಶ್ಮಿ ಎಸ್.
  ಪ್ರಕಾಶಕರು: ಅಭಿನವ, ಮಾರೇನಹಳ್ಳಿ, ಬೆಂಗಳೂರು–560040.
  ವರ್ಷ: 2018 ಪುಟಗಳು: 528 ಬೆಲೆ: 500/–

- **ಭಾರತದ ಸಂಸತ್ತು– ಒಂದು ಕಾರ್ಯನಿರತ ಪ್ರಜಾಪ್ರಭುತ್ವ**
  ಮೂಲ ಇಂಗ್ಲಿಷ್: ಬಿ.ಎಲ್.ಶಂಕರ್, ವಲೇರಿಯನ್ ರೋಡ್ರಿಗಸ್
  ಕನ್ನಡಕ್ಕೆ: ಜೆ.ಎಸ್.ಸದಾನಂದ
  ಪ್ರಕಾಶಕರು: ಅಂಕಿತ ಪುಸ್ತಕ, ಗಾಂಧಿ ಬಜಾರ್ ಮುಖ್ಯರಸ್ತೆ, ಬೆಂಗಳೂರು–560004.
  ವರ್ಷ: 2018 ಪುಟಗಳು: 680 ಬೆಲೆ:800/–

ಸಾದರ ಸ್ವೀಕಾರ ಮತ್ತು ಕೃತಿ ವಿಮರ್ಶೆಗೆ ಪುಸ್ತಕ ಕಳುಹಿಸುವ ಲೇಖಕರು ಮತ್ತು ಪ್ರಕಾಶಕರಲ್ಲಿ ಮನವಿ

- ಸಾದರ ಸ್ವೀಕಾರ ಮತ್ತು ವಿಮರ್ಶೆಗೆ ಕಳುಹಿಸುವ ಕೃತಿಗಳು ಇತಿಹಾಸ, ಪುರಾತತ್ತ್ವ, ಸಂಸ್ಕೃತಿ, ಕಲೆ ಮತ್ತು ವಾಸ್ತುಶಿಲ್ಪ, ಶಾಸನ, ನಾಣ್ಯಶಾಸ್ತ್ರ, ಪ್ರವಾಸೋದ್ಯಮ ಮುಂತಾದ ಚರಿತ್ರೆಯೊಂದಿಗೆ ಬೆಸೆದುಕೊಂಡಿರುವ ವಿಷಯಗಳಿಗೆ ಸಂಬಂಧಿಸಿರಬೇಕು.
- ಕೃತಿಯ ಒಂದು ಪ್ರತಿ ಕಳುಹಿಸಿಕೊಟ್ಟಲ್ಲಿ ಸಾದರ ಸ್ವೀಕಾರಕ್ಕೆ ಎಂತಲೂ, ಎರಡು ಪ್ರತಿಗಳನ್ನು ಕಳುಹಿಸಿಕೊಟ್ಟಲ್ಲಿ ಸಾದರ ಸ್ವೀಕಾರ ಮತ್ತು ಕೃತಿ ವಿಮರ್ಶೆಗೆ ಎಂತಲೂ ಪರಿಗಣಿಸಲಾಗುವುದು.
- ವಿಮರ್ಶೆಗೆ ಬರುವ ಕೃತಿಗಳನ್ನು ಆದ್ಯತಾನುಸಾರ ಪರಿಗಣಿಸಲಾಗುವುದು.

ಪ್ರತಿಗಳನ್ನು ಕಳುಹಿಸಿಕೊಡಬೇಕಾದ ವಿಳಾಸ
ಸಂಪಾದಕರು, **ಇತಿಹಾಸ ದರ್ಪಣ**
#33/ಎ, ಐ.ಟಿ.ಐ ಕಾಲೇಜು ಹತ್ತಿರ, ಕೆಂಪೇಗೌಡನಗರ, ವಿಶ್ವನೀಡಂ–ಅಂಚೆ, ಬೆಂಗಳೂರು–560091. ಮೊ: 7829404063.

ITIHASA DARPANA (Quarterly)
A Peer Reviewed Journal of Historical Research in Kannada
ISSN 2321-3590
Book No.: 37-38.
April – September 2018
Author: Raghunandan B. R.
Title: Kannada sinimā charitre: vyakti neleya grahikegaḷu

ಕನ್ನಡ ಸಿನಿಮಾ ಚರಿತ್ರೆ : ವ್ಯಕ್ತಿ ನೆಲೆಯ ಗ್ರಹಿಕೆಗಳು

ರಘುನಂದನ್ ಬಿ.ಆರ್.
ಸಹಾಯಕ ಪ್ರಾಧ್ಯಾಪಕರು
ಕನ್ನಡ ಸ್ನಾತಕೋತ್ತರ ಮತ್ತು
ಸಂಶೋಧನಾ ಕೇಂದ್ರ
ಸ॥ ಪ್ರ॥ ದ॥ ಕಾಲೇಜು, ವಿಜಯನಗರ,
ಬೆಂಗಳೂರು.
9742606000.

ಸೃಜನಶೀಲ ವಿಚಾರಗಳನ್ನು ತಂತ್ರಜ್ಞಾನದ ಸಹಾಯದಿಂದ ಕೃತಿಯಾಗಿ ಮೂಡಿಸುವುದೇ ಚಲನಚಿತ್ರ, ವಾಸ್ತವಗಳನ್ನು ಕ್ಯಾಮೆರಾ ಎಂಬ ಸ್ವಯಂಚಾಲಿತ ಕಣ್ಣಿನ ಮೂಲಕ ಗ್ರಹಿಸುವುದು. ಆ ಮೂಲಕ ಹಲವು ಬಿಂಬಗಳನ್ನು ಸೃಷ್ಟಿಸುವುದು ಸಿನಿಮಾದ ಮುಖ್ಯ ಕೆಲಸ. ಇದಕ್ಕೆ ಪೂರಕವಾಗಿ ಚಿತ್ರ, ಧ್ವನಿ ಹಾಗೂ ಇನ್ನಿತರ ತಾಂತ್ರಿಕ ಅಂಶಗಳು ಸಂಕಲಿತಗೊಂಡು ಚಲನಚಿತ್ರವಾಗುತ್ತದೆ. ವ್ಯಕ್ತಿ ಚಿತ್ರಿಸುವಾಗ ವೈಯಕ್ತಿಕವಾಗಿದ್ದ ಚಿತ್ರ ನಂತರ ಸಮಾಜದ ಸ್ವತ್ತಾಗುತ್ತದೆ. "ಕನಸು ವ್ಯಕ್ತಿ ಕೇಂದ್ರಿತ. ಅಲ್ಲಿ ವ್ಯಕ್ತಿಯ ಸುತ್ತ ಎಲ್ಲ ಪಾತ್ರಗಳು ಪರಿಭ್ರಮಿಸುತ್ತದೆ. ಚಲನಚಿತ್ರ ಪ್ರೇಕ್ಷಕನ ಮನಸ್ಸಿನ ಮೇಲೆ ಬೀರುವ ಪರಿಣಾಮವೂ ಅದೇ. ಕನಸುಗಾರನ ಜಾಗದಲ್ಲಿ ಪ್ರೇಕ್ಷಕ ಇರುತ್ತಾನೆ. ಪ್ರೇಕ್ಷಕನ ಪೂರ್ಣ ಗಮನವನ್ನು ತನ್ನತ್ತ ಸೆಳೆದುಕೊಂಡ ತೆರೆಯಲ್ಲಿ, ಪ್ರೇಕ್ಷಕ ತಾದ್ಯಾತ್ಮ ಹೊಂದುತ್ತಾನೆ."[1] ಒಟ್ಟು ಸಿನಿಮಾಲೋಕ ಈ ಆಶಯದಂತೆ ಇಂದಿನವರೆಗೂ ಅಭಿವ್ಯಕ್ತಿಸುತ್ತಾ ಬಂದಿದೆ. ವಿಶ್ವ ಸಿನಿಮಾ, ಭಾರತೀಯ ಸಿನಿಮಾ ಅಥವಾ ಕನ್ನಡ ಸಿನಿವಾ ಎಲ್ಲವುಗಳು ಪ್ರತಿಕ್ರಿಯಿಸಿರುವುದು ಹೀಗೆಯೇ. ಕನ್ನಡ ಸಿನಿಮಾ ತನ್ನ ಪ್ರಾದೇಶಿಕತೆ, ಭಾಷೆ ಸಮಾಜ, ಸಾಹಿತ್ಯ, ಸಂಸ್ಕೃತಿ, ರಾಜಕೀಯ, ಆರ್ಥಿಕತೆ, ಕುಟುಂಬ ಇವೆಲ್ಲವನ್ನು ಒಳಗೊಂಡ ಕನ್ನಡದ ಅಸ್ಮಿತೆಯಾಗಿ ರೂಪುಗೊಂಡಿದೆ.

ಕನ್ನಡ ರಂಗಭೂಮಿ ಮತ್ತು ಸಿನಿಮಾ : ಕನ್ನಡ ರಂಗಭೂಮಿ ಮತು ಸಿನಿಮಾ ಪರಸ್ಪರ ಸಮನ್ವಯ ಮತ್ತು ಸಾವಯವ ಗುಣಗಳನ್ನು ಹೊಂದಿದೆ. ಕನ್ನಡ ಸಿನಿಮಾದ ದಾರಿಯನ್ನು ನೋಡಿದರೆ ಅದಕ್ಕೆ ಕನ್ನಡ ಕಾವ್ಯ ಮತ್ತು ನಾಟಕ ಕ್ಷೇತ್ರಗಳಿಂದ ಹರಿದು ಬಂದ ಕಥಾವಸ್ತು ನಿಚ್ಚಳವಾಗಿ ಆರಂಭಿಕ ಸಿನಿಮಾಗಳಿಗೆ ಅಡಿಪಾಯದಂತೆ ಕೆಲಸ ಮಾಡಿದೆ. ರಾಜ್‌ಕುಮಾರ್ ಅಭಿನಯದ 'ಬೇಡರ ಕಣ್ಣಪ್ಪ' (1953), ಸಿನಿಮಾದ ವಸ್ತುವಿಗೆ ಮೂಲ ಹದಿಮೂರನೇ ಶತಮಾನದ **ಹರಿಹರನ ರಗಳೆ** ಮತ್ತು ಅದನ್ನು ಆಧರಿಸಿ ರಚನೆಯಾದ ನಾಟಕ. ಕನ್ನಡ ಕಾವ್ಯದಿಂದ ಮುಖ್ಯ ವಸ್ತುವನ್ನು ಆರಿಸಿಕೊಂಡು ಅನೇಕ ನಾಟಕಗಳು ಮತ್ತು ಸಿನಿಮಾಗಳು ತೆರೆಕಂಡಿವೆ. 'ಬೇಡರ ಕಣ್ಣಪ್ಪ' ಚಲನಚಿತ್ರವು ಅನೇಕ ಮಂದಿ ನಟರನ್ನು ಪರಿಚಯಿಸಿತು. ರಾಜ್‌ಕುಮಾರ್ ಪಂಡರೀಬಾಯಿ, ಬಾಲಕೃಷ್ಣ, ನರಸಿಂಹರಾಜು, ಇವರೇ ಪ್ರಮುಖರು. ಇವರು ಮುಂದೆ ಅನೇಕ ದಶಕಗಳವರೆಗೆ ಸಿನಿಮಾದಲ್ಲಿ ಕಾಣಿಸಿಕೊಂಡರು. ಇವರ ಕಾಲದ ವಿಶೇಷವೇನೆಂದರೆ ಮನೋರಂಜನೆಯ ಮಾಧ್ಯಮವಾಗಿ ಸಿನಿಮಾ ರಂಗವು ನಾಟಕ ರಂಗಭೂಮಿಯನ್ನು ಹಿಂದಕ್ಕೆ ಹಾಕಿರಲಿಲ್ಲ. ಹಣಕಾಸಿನ ಲಾಭದ ವಿಷಯದಲ್ಲಿ ನಾಟಕ ಕಂಪನಿಗಳು ತಮ್ಮ ಆಕರ್ಷಣೆಯನ್ನು ಉಳಿಸಿಕೊಂಡಿದ್ದವು. ಸಿನಿಮಾ ರಂಗವನ್ನು ಪ್ರವೇಶಿಸಿದ ನಟರು ತಮ್ಮ ಬಿಡುವಿನ ವೇಳೆಯಲ್ಲಿ ದುಡಿಯುವುದಕ್ಕೋಸ್ಕರ ಕನ್ನಡ ಚಲನಚಿತ್ರ ಕಲಾವಿದರ ಸಂಘವನ್ನು ಶುರು ಮಾಡಿ ನಾಟಕಗಳನ್ನು ಪ್ರದರ್ಶಿಸುತ್ತಿದ್ದರು. ಆಗಿನ ಕಾಲದ ಸಿನಿಮಾಗಳು ಹೆಚ್ಚಾಗಿ ಜನಪ್ರಿಯ ನಾಟಕಗಳ ಮೇಲೆ ಆಧಾರಿತವಾಗಿದ್ದವು.”[2] ನಾಟಕದ ಮೂಲಕವೇ ಸಿನಿಮಾ ತನ್ನ ಇರುವಿಕೆಯನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿತ್ತು. ಈ ಅವಲಂಬನೆ ಕಥೆ, ವಸ್ತು, ಭಾಷೆ, ಸಂಗೀತ, ವರ್ತನೆ ಇತ್ಯಾದಿ ಎಲ್ಲಾ ಅಂಶಗಳನ್ನು ಒಳಗೊಂಡಿತ್ತು. ಒಟ್ಟಾರೆ ಸಿನಿಮಾಯಾನದ ಮೊದಲ ಹಂತದಲ್ಲಿ ನಾಟಕದಿಂದ ಸಿನಿಮಾ ಪ್ರತ್ಯೇಕವಾಗಿ ನಿಂತು ಅಭಿವ್ಯಕ್ತಿಸಲು ಸಾಧ್ಯವಾಗುತ್ತಿರಲಿಲ್ಲ.

ಆರಂಭದಲ್ಲಿ ನಾಟಕ ರಂಗದಲ್ಲಿದ್ದವರೇ ಬಹುತೇಕ ಸಿನಿಮಾ ಕ್ಷೇತ್ರಕ್ಕೆ ಬಂದರು. ಕಥೆ ಹಾಗೂ ಇನ್ನಿತರ ತಾಂತ್ರಿಕತೆ, ರೂಪ ಹಾಗೂ ಶಿಲ್ಪದ ವಿಚಾರದಲ್ಲೂ ನಾಟಕವನ್ನೇ ಅನುಸರಿಸಿದರು. ಆಗ ನಾಟಕದಿಂದ ಚಿತ್ರರಂಗಕ್ಕೆ ಹಲವರು ವಲಸೆ ಬಂದರು. ಆಕರ್ಷಣೆಯಾಗಿ ಚಲನಚಿತ್ರ ಕಾಣತೊಡಗಿತು. ರಾಜ್‌ಕುಮಾರ್, ನರಸಿಂಹರಾಜು, ಟಿ.ಎಸ್ ಬಾಲಕೃಷ್ಣ, ಜಿ.ವಿ ಅಯ್ಯರ್, ಬೇಲೂರು ರಾಘವೇಂದ್ರ ರಾವ್, ಎಲಿವಾಳ ಸಿದ್ದಯ್ಯಸ್ವಾಮಿ ಮುಂತಾದವರು ನಾಟಕ ರಂಗದಿಂದ ಸಿನಿಮಾ ಕ್ಷೇತ್ರಕ್ಕೆ ಬಂದರು. ಗುಬ್ಬಿ ವೀರಣ್ಣ ಮತ್ತು ಸುಬ್ಬಯ್ಯನಾಯ್ಡು ಇವರುಗಳು ಕೂಡ ರಂಗಭೂಮಿಯ ಹಿನ್ನೆಲೆಯುಳ್ಳವರೇ ಆಗಿದ್ದಾರೆ. ಈ ಸಂದರ್ಭದಲ್ಲಿ ನಟ, ನಿರ್ದೇಶಕ ಹಾಗೂ ನಿರ್ಮಾಪಕ ರಂಗಭೂಮಿಯ ಅನುಭವವನ್ನೇ ಚಿತ್ರರಂಗಕ್ಕೂ ಯಥೇಚ್ಛವಾಗಿ ದುಡಿಸಿಕೊಂಡರು. ಮನರಂಜನೆಯನ್ನು ಕಲೆಯ ಮೂಲಕ ವೃತ್ತಿಯನ್ನಾಗಿಸಿಕೊಂಡವರು. ರಂಗಭೂಮಿ ಮತ್ತು ಚಲನಚಿತ್ರ ಇವೆರಡು ಕ್ಷೇತ್ರಗಳ ಅನುಭವ ಮತ್ತು ಸಿನಿಮಾ ರೂಪುಗೊಳ್ಳುತ್ತಿದ್ದ ಸಂಘರ್ಷದ ಕಾಲವನ್ನು ಪ್ರಸ್ತಾಪಿಸುವ ಗುಬ್ಬಿ ವೀರಣ್ಣನವರ ಆತ್ಮಚರಿತ್ರೆ **ಕಲೆಯೇ ಕಾಯಕ** ಈ ಅರ್ಥದಲ್ಲಿ ಚಾರಿತ್ರಿಕ ಮಹತ್ವವನ್ನು ಪಡೆಯುತ್ತದೆ.

ಅಭಿನಯ, ವೇಷಭೂಷಣ, ಸಂಗೀತ, ಸಂಭಾಷಣೆ ಇತ್ಯಾದಿ ವ್ಯಕ್ತಿಕೇಂದ್ರಿತ ನೆಲೆಯಲ್ಲಿ ರೂಪುಗೊಳ್ಳುವ ಅಭಿವ್ಯಕ್ತಿಯನ್ನು ನೇರವಾಗಿ ಚಿತ್ರರಂಗ ಎತ್ತಿಕೊಂಡರೂ ತಾಂತ್ರಿಕತೆಯ ದೃಷ್ಟಿಯಿಂದ ರಂಗಭೂಮಿಯನ್ನು ಅನುಸರಿಸಲು ಸಾಧ್ಯವಾಗುವುದಿಲ್ಲ. ಪರಿಣಾಮ ಮತ್ತು

ವ್ಯಾಪ್ತಿಯ ದೃಷ್ಟಿಯಿಂದ ರಂಗಭೂಮಿ ಮತ್ತು ಸಿನಿಮಾ ಇವೆರಡೂ ಭಿನ್ನ ಭಿನ್ನ. "ನಮಗೆ ಬೇಕು ಎನ್ನುವುದನ್ನು ರಂಗಭೂಮಿಯ ಮೇಲೆ ತೋರಿಸಲು ಸಾಧ್ಯವಿಲ್ಲ. ಸಮುದ್ರದಲ್ಲಿ ಸ್ನಾನ ಮಾಡುವುದನ್ನೇ, ಬೆಟ್ಟ ಹತ್ತುವುದನ್ನೇ ನಾವು ರಂಗಭೂಮಿಯ ಮೇಲೆ ತೋರಿಸಲು ಸಾಧ್ಯವೇ? ಸಾಂಕೇತಿಕವಾಗಿ ಅದನ್ನು ತೋರಿಸಬಹುದು. ಆದರೆ ಚಲನಚಿತ್ರದಲ್ಲಿ ಒಂದು ಸನ್ನಿವೇಶ ನಡೆಯುವ ಸ್ಥಳವನ್ನು ವಾಸ್ತವಿಕವಾಗಿ ತೋರಿಸಬಹುದು. ಯುದ್ಧದಲ್ಲಿ ಬಾಂಬ್ ಸ್ಫೋಟಿಸುವುದನ್ನು, ಕಟ್ಟಡಗಳು ಕುಸಿಯುವುದನ್ನು, ವಿಮಾನ ಡಿಕ್ಕಿ ಹೊಡೆಯುವುದನ್ನು ತೋರಿಸಬಹುದು. ರಂಗಭೂಮಿಯಲ್ಲಿ ಇದನ್ನು ತೋರಿಸಲು ಸಾಧ್ಯವಿಲ್ಲ. ಇಲ್ಲಿಯೇ ಚಲನ ಚಿತ್ರ ಮಾಧ್ಯಮ ರಂಗಭೂಮಿಯ ಮಿತಿಯನ್ನು ದಾಟುವುದು."[3]

ನಾಟಕ ನಿರ್ಮಾಣಕ್ಕೂ ಸಿನಿಮಾ ನಿರ್ಮಾಣಕ್ಕೂ ವ್ಯತ್ಯಾಸವಿದೆ. ಪ್ರಯೋಗದ ದೃಷ್ಟಿಯಲ್ಲೂ ಕೂಡ ಭಿನ್ನತೆ ಇದೆ. ಸಿನಿಮಾ ಒಮ್ಮೆ ಚಿತ್ರೀಕರಣವಾದ ಮೇಲೆ ಮತ್ತೆ ಮತ್ತೆ ಅನೇಕ ಪ್ರದರ್ಶನಗಳನ್ನು ಮಾಡಬಹುದು. ಏಕಕಾಲದಲ್ಲಿ ಹಲವು ಕಡೆಗಳಲ್ಲಿ ಪ್ರದರ್ಶನಗೊಳ್ಳಬಲ್ಲದು. ಆದರೆ ರಂಗಭೂಮಿಯಲ್ಲಿ ಪ್ರತಿ ಪ್ರಯೋಗಕ್ಕೂ ನಟರು, ನೇಪಥ್ಯದವರು, ಸಂಗೀತದವರು ಹಾಗೂ ಇತರರು ಬಂದು ಹೊಸತಾಗಿಯೇ ಅಭಿವ್ಯಕ್ತಿಸಬೇಕು. ಸಿನಿಮಾದಲ್ಲಿ ಏಕತಾನತೆ ಇದ್ದರೆ, ರಂಗಭೂಮಿಯಲ್ಲಿ ಪ್ರದರ್ಶನದಿಂದ ಪ್ರದರ್ಶನಕ್ಕೆ ಸಂಭಾಷಣೆಗಳಲ್ಲಿ ಬದಲಾವಣೆಗಳಿರಬಹುದು. ಸಮಕಾಲೀನ ಸಂಗತಿಯ ವಸ್ತುವಿಷಯಗಳನ್ನು ಸೇರಿಸಿಕೊಳ್ಳುವ ಮೂಲಕ ಸಾಂದರ್ಭಿಕ ಬದಲಾವಣೆಗಳನ್ನು ಮಾಡಿಕೊಳ್ಳಬಹುದು. ಹೀಗೆ ರಂಗಭೂಮಿ ನಿತ್ಯದ ವಿದ್ಯಮಾನಗಳನ್ನು ಒಳಗೊಳ್ಳುವ ಮೂಲಕ ತನ್ನ ಜೀವಂತಿಕೆಯನ್ನು ಉಳಿಸಿಕೊಂಡಿರುತ್ತದೆ. ರಂಗಭೂಮಿ ಮತ್ತು ಸಿನಿಮಾ ಆಶಯದ ದೃಷ್ಟಿಯಿಂದ ಒಂದೇ ಆಗಿದ್ದರೂ ಸೃಜನಶೀಲತೆ ಮತ್ತು ಕ್ರಿಯಾತ್ಮಕತೆಯ ದೃಷ್ಟಿಯಿಂದ ಭಿನ್ನ ಭಿನ್ನ ಸ್ವರೂಪಗಳನ್ನು ಹೊಂದಿವೆ.

ಕನ್ನಡ ಸಿನಿಮಾಗಳಲ್ಲಿ ನಾಟಕೀಯತೆಯ ಅಂಶ ಹೆಚ್ಚು. ಕಾರಣ ಕನ್ನಡ ಸಿನಿಮಾದಲ್ಲಿ ನಾಟಕ ಮತ್ತು ಅದರ ಪ್ರಭಾವ ಆರಂಭದಿಂದಲೂ ಅನೇಕ ತಲೆಮಾರುಗಳನ್ನು ಪ್ರಭಾವಿಸುತ್ತಲೇ ಬಂದಿರುವುದು ಮುಖ್ಯ ಕಾರಣ. ಅದಷ್ಟೇ ಅಲ್ಲದೇ ಯಾವ ಕಲಾ ಪ್ರಕಾರವಾದರೂ ತನ್ನ ಅನಾದಿಯ ಚಹರೆಗಳನ್ನು ಅಷ್ಟೇ ಸುಲಭವಾಗಿ ಕಳೆದುಕೊಳ್ಳಲು ಸಾಧ್ಯವಿಲ್ಲ. ಕಲಾಪ್ರಕಾರದ ಶಾಸ್ತ್ರೀಯತೆ ಇರಬಹುದು ಅಥವಾ ಅದು ಅಭಿವ್ಯಕ್ತಗೊಳ್ಳುವ ಕ್ರಮವಿರಬಹುದು. ಅದರ ಆಂತರಿಕ ಶಕ್ತಿ ಪರಂಪರೆಯಿಂದ ಸಂಚರಿಸಿಕೊಂಡು ಬಂದಿರುವ ಸತ್ವವೇ ಆಗಿರುತ್ತದೆ. ಆದರೆ ಅದರ ಪರಿಣಾಮದಲ್ಲಿ ಭಿನ್ನತೆ ಕಂಡುಬಂದರೂ ಅಂತಃಶಕ್ತಿ ಒಂದೇ ಆಗಿರುತ್ತದೆ. ಈ ಕಾರಣಕ್ಕೆ ಕನ್ನಡ ರಂಗಭೂಮಿಯಿಂದ ಚಲನಚಿತ್ರಕ್ಕೆ ಹೋದ ಎಲ್ಲಾ ಕಲಾವಿದರ ಸಿನಿಮಾ ಭಾಷೆಯ ಅಭಿನಯದಲ್ಲಿ ನಾಟಕದ ಭಾಷೆ ಬಳಸುವುದನ್ನು ಇಂದಿಗೂ ಕಾಣಬಹುದು. ಉಮಾಶ್ರೀ, ಗಿರಿಜಾ ಲೋಕೇಶ್, ಸುಂದರ ಶ್ರೀ, ಕಲ್ಪನಾ, ಮಂಜುಳಾ, ಮುಂತಾದ ಕಲಾವಿದೆಯರು, ಹೊನ್ನಪ್ಪ ಭಾಗವತರ್, ರಾಜ್‌ಕುಮಾರ್, ನರಸಿಂಹರಾಜು, ಬಾಲಕೃಷ್ಣ ಮುಂತಾದ ನಟರೂ ಕೂಡ ತಾವು ಅಭಿನಯಿಸಿದ ಚಿತ್ರಗಳಲ್ಲಿ ನಾಟಕ ಅಭಿನಯದ ನೈಜತೆಯನ್ನು ಕಾಣಬಹುದು. ಧ್ವನಿ ಮತ್ತು ಆಂಗಿಕಗಳನ್ನು ಬಳಸಿ ಮುಕ್ತವಾಗಿ ಅಭಿನಯಿಸುವ ಕ್ರಮ ಕನ್ನಡ ರಂಗಭೂಮಿಯಲ್ಲಿರುವುದರಿಂದ ಈ ಬಗೆ ಸಿನಿಮಾದಲ್ಲಿಯೂ ಮುಂದುವರೆದಿದೆ ಎನ್ನಬಹುದು. ಇದಕ್ಕೆ ತಂತ್ರಜ್ಞಾನವೂ ಮುಖ್ಯ ಕಾರಣ. ರಂಗಭೂಮಿ ಪ್ರೇಕ್ಷಕರನ್ನು ಎದುರಾಗುವ ಕ್ರಮ ಮತ್ತು ಸಿನಿಮಾ ಪ್ರೇಕ್ಷಕರನ್ನು ಎದುರಾಗುವ ಕ್ರಮ

ಬೇರೆ ಬೇರೆಯಾಗಿರುವುದರಿಂದ ಎರಡೂ ಒಂದೇ ಆಶಯವನ್ನು ಹೊಂದಿದ್ದರೂ, ಪ್ರಕಟಣೆಯ ಸಾಧ್ಯತೆ ಭಿನ್ನವಾಗಿದ್ದರೂ, ಮೊದಲ ಸಿನಿಮಾಗಳು ನಾಟಕದ ದೃಶ್ಯಗಳಂತೆಯೇ ಕಾಣುತ್ತವೆ.

ಆರಂಭಿಕ ಸಿನಿಮಾಗಳಿಗೆ ಮೂಲಾಧಾರ ನಾಟಕವೇ ಆಗಿದ್ದ ಕಾರಣ ವೇಷ ಭೂಷಣ, ಪ್ರಸಾದನ, ಸಂಭಾಷಣೆ, ಕಥಾವಸ್ತು, ಸೂತ್ರಧಾರಿಗಳು, ಎಲ್ಲವೂ ನಾಟಕದ ವಿನ್ಯಾಸವನ್ನೇ ಹೊಂದಿದ್ದವು. ಈ ಮಾತಿಗೆ ಮುಂದಿನ ಉದಾಹರಣೆ ಮತ್ತಷ್ಟು ಪುಷ್ಟಿಕೊಡುತ್ತದೆ. 'ರಾಯರ ಸೊಸೆ'(1957) ಸಿನಿಮಾದಲ್ಲಿ ಡಾಕ್ಟರ್ ಪಾತ್ರಕ್ಕಾಗಿ ರಾಜ್‌ಕುಮಾರ್ ಅವರನ್ನು ಆಯ್ಕೆ ಮಾಡಿದಾಗ ಈ ಚಿತ್ರದ ನಿರ್ಮಾಪಕರಾದ ಪಂಡರೀಬಾಯಿ ರಾಜಕುಮಾರರು ತಮ್ಮ ಕೂದಲಿನ ಶೈಲಿಯನ್ನು ಬದಲಿಸಬೇಕು ಎಂದು ಹೇಳಲಾಗದೇ ಹಿಂಜರಿದರು. ಕೊನೆಗೆ ಪಾತ್ರದ ಅವಶ್ಯಕತೆಯನ್ನು ಅರಿತ ರಾಜಕುಮಾರ್ ಒಬ್ಬಾತನಿಗೆ ಹೀಗೆ ಹೇಳಿದ್ದರಂತೆ "ನಾನು ಕ್ರಾಪ್ ಮಾಡಿಸಿಕೊಂಡು ಪ್ಯಾಂಟ್ ಹಾಕಿ ಪಾರ್ಟ್ ಮಾಡಲೇಬೇಕು". ಎಲ್ಲಿ ನಿರಾಕರಿಸುತ್ತಾರೋ ಎಂದು ಹೆದರಿದ್ದ ಪಂಡರೀಬಾಯಿ ಅವರಿಗೆ ಇದರಿಂದ ಸಂತೋಷವಾಯಿತು."[4] ಈಗಾಗಲೇ ರೂಪುಗೊಂಡಿದ್ದ ಸಿದ್ಧ ಮಾದರಿಯ ಕಥಾವಸ್ತು ಮತ್ತು ಅಭಿನಯ ಎಲ್ಲವನ್ನೂ ದಾಟಿಕೊಳ್ಳುವ ಪ್ರಯತ್ನವೆಂಬಂತೆ ಪ್ರತಿಕ್ರಿಯಿಸುವ ರಾಜ್‌ಕುಮಾರ್ ಅವರು ಹೊಸತನಕ್ಕೆ ತೆರೆದುಕೊಳ್ಳಲು ಪ್ರಯತ್ನಿಸುವುದು ಕಾಲದ ಸಂಕ್ರಮಣ ಸ್ಥಿತಿಯನ್ನು ಸೂಚಿಸುತ್ತದೆ. ನಾಟಕದ ಪ್ರಭಾವಳಿಯಿಂದ ಬಿಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರೂ ಸಿನಿಮಾ ರಂಗ ಅಭಿನಯದಲ್ಲಿ ನಾಟಕದ ಪ್ರಭಾವವನ್ನು ಮೀರಿಕೊಳ್ಳಲು ಅಂದು ಸಾಧ್ಯವಾಗಿರಲಿಲ್ಲ. ಉಡುಗೆ ಮತ್ತು ಆಧುನಿಕತೆ ಎರಡೂ ಕೂಡ ಮುಖಾಮುಖಿಯಾದುದನ್ನು ಇಲ್ಲಿ ಕಾಣಬಹುದು.

ನಟ ಕೇಂದ್ರಿತ ಅಭಿವ್ಯಕ್ತಿ – ತಾರಾಮೌಲ್ಯ : "ದಕ್ಷಿಣ ಭಾರತದ ಸಿನಿಮಾ ರಾಜಕೀಯ ಪ್ರಭಾವವನ್ನು ಚರ್ಚಿಸುವಾಗ ಒಂದು ಅಂಶವನ್ನು ಲೇಖಕರು ಗಮನಿಸುತ್ತಾರೆ. ಜನಪ್ರಿಯ ನಾಯಕರನ್ನು ಸೃಷ್ಟಿ ಮಾಡುವುದಕ್ಕೋಸ್ಕರ ಮತ್ತು ಅವರ ಮೂಲಕ ಸಾರ್ವಜನಿಕರ ಮನಸಿನ ಮೇಲೆ ಬಲವಾದ ಪ್ರಭಾವವನ್ನು ಬೀರುವುದಕ್ಕೋಸ್ಕರ ಸಿನಿಮಾ ನಿರ್ಮಾಪಕರು ಮತ್ತು ನಟರು ಒಟ್ಟಿಗೇ ಸೇರಿ ಸಿನಿಮಾದ ತಾಂತ್ರಿಕತೆಯ ಶಕ್ತಿಯನ್ನು ಬಳಸಿಕೊಳ್ಳುತ್ತಾರೆಂದು ಇವರು ನಂಬುತ್ತಾರೆ."[5] ನಾಯಕರನ್ನು ರೂಪಿಸುವ ಭಾರತೀಯ ಚಿತ್ರರಂಗದ ರಾಜಕಾರಣ ವ್ಯಕ್ತಿನೆಲೆಯದ್ದೇ ಆಗಿದೆ. ನಾಯಕನ ಮೂಲಕ ಆದರ್ಶವೊಂದನ್ನು ಅಥವಾ ಸಾಮಾಜಿಕ ವೈರುಧ್ಯವೊಂದನ್ನು ಕಟ್ಟುವ ಕ್ರಮ ಭಾರತದ ಚಿತ್ರರಂಗದಲ್ಲಿದೆ. ನಾಟಕಗಳಲ್ಲಿ ನಾಯಕ ಮತ್ತು ಪ್ರತಿನಾಯಕನ ಕಲ್ಪನೆ ಗಟ್ಟಿಯಾಗಿ ಪುರುಷ ಮೌಲ್ಯಗಳನ್ನು ಬಿಂಬಿಸುವಂತೆ ರೂಪುಗೊಂಡಿರುವ ರೀತಿಯೇ ಭಾರತೀಯ ಅಥವಾ ಕನ್ನಡ ಚಿತ್ರರಂಗದಲ್ಲೂ ನಾಯಕ ಪ್ರಾಧಾನ್ಯತೆಯಿದೆ. ರಂಗಭೂಮಿಯಲ್ಲಿ ಪ್ರತಿ ಪಾತ್ರಗಳೂ ತಮ್ಮ ತಮ್ಮ ಅಭಿವ್ಯಕ್ತಿಯ ನೆಲೆಯಲ್ಲಿ ಕಥನಕ್ಕೆ ಪೂರಕವಾಗಿ ಪ್ರಕಟಗೊಂಡರೆ ಸಿನಿಮಾ ರಂಗದಲ್ಲಿ ಬಹುತೇಕ ಚಿತ್ರಗಳು ಪ್ರಧಾನ ವ್ಯಕ್ತಿಯ ಮೂಲಕ ಕಥನ ಹೇಳುವುದೇ ಆಗಿದೆ. ಅನೇಕ ಸಂದರ್ಭಗಳಲ್ಲಿ ನಟನಿಗೋಸ್ಕರ ಸಿನಿಮಾ ಕಥೆಗಳು ರೂಪುಗೊಂಡ ಉದಾಹರಣೆಗಳು ಸಾಕಷ್ಟಿವೆ. ಕೇವಲ ನಾಯಕ ನಟನಿಗೆ ಮಾತ್ರವಲ್ಲದೆ, ನಟಿಯರಿಗೆ, ಪೋಷಕ ನಟರಿಗೆ ಕೂಡ ಈ ಅಂಶ ಅನ್ವಯಿಸುತ್ತದೆ. ಆದರೆ ಇಡೀ ಸಿನಿಮಾವೊಂದರ ಬೇರೆ ಬೇರೆ ಪಾತ್ರಗಳನ್ನು

ಅಭಿವ್ಯಕ್ತಿಸುವ ರೀತಿಯನ್ನು ಪರದೆಯ ಮೇಲೆ ತೋರಿಸುವುದರಲ್ಲಿ ಮತ್ತು ಪಾತ್ರಗಳ ಆಯ್ಕೆಯಲ್ಲಿ ರಾಜಕಾರಣವಿದೆ. ಪುರುಷ ಕೇಂದ್ರಿತ ನೆಲೆಯೇ ಬಹುತೇಕ ಸಿನಿಮಾಗಳ ಸತ್ವವಾಗಿರುವಂತೆ ಕನ್ನಡ ಸಿನಿಮಾ ಇರಬಹುದು ಅಥವಾ ಭಾರತೀಯ ಭಾಷೆಗಳ ಯಾವುದೇ ಸಿನಿಮಾ ರೂಪುಗೊಂಡಿವೆ. ಸಿನಿಮಾದಲ್ಲಿ ಕಾಣುವ ಎಲ್ಲ ಪಾತ್ರಗಳೂ ಪ್ರಧಾನ ಪಾತ್ರವನ್ನೇ ಪೋಷಿಸುವ ಹಾಗೆ ಸಿನಿಮಾಗಳು ತಯಾರಾಗುತ್ತವೆ.

ಮೇಲೆ ಪ್ರಸ್ತಾಪಿಸಿದ ಹಾಗೆ ನಾಯಕ ನಟರ ಮೂಲಕ ಕಥನವನ್ನು ಹೇಳುವ ಕ್ರಮವೇ ಕನ್ನಡ ಸಿನಿಮಾದಲ್ಲಿ ಪ್ರಧಾನವಾಗಿದೆ. 'ಮಯೂರ', 'ಬಬ್ರುವಾಹನ', 'ಭಕ್ತ ಪ್ರಹ್ಲಾದ', 'ಭಕ್ತ ಕುಂಬಾರ' ಚಿತ್ರಗಳಲ್ಲಿ ರಾಜ್‌ಕುಮಾರರ ಅಭಿನಯ ಹಾಗೆಯೇ 'ಬಂಗಾರದ ಮನುಷ್ಯ', 'ಸಂಪತ್ತಿಗೆ ಸವಾಲ್', 'ಹೊಸಬೆಳಕು' ತರಹದ ಸಿನಿಮಾಗಳಲ್ಲಿ ರಾಜ್‌ಕುಮಾರರ ಅಭಿನಯ, ನರಸಿಂಹರಾಜು, ಬಾಲಕೃಷ್ಣ ಅವರ ಹಾಸ್ಯ ಲೇಪಿತ ಅಭಿನಯ 'ಶರಪಂಜರ', 'ಗೆಜ್ಜೆಪೂಜೆ', 'ಎರಡು ಕನಸು', 'ಬಯಲುದಾರಿ' ಸಿನಿಮಾಗಳಲ್ಲಿನ ಮಿನುಗು ತಾರೆ ಕಲ್ಪನಾ ಅವರ ಅಭಿನಯ, 'ಸಂಪತ್ತಿಗೆ ಸವಾಲ್', 'ಬೆಸುಗೆ' ತರಹದ ಚಿತ್ರಗಳಲ್ಲಿ ಭಿನ್ನ ಭಿನ್ನ ನೆಲೆಯಲ್ಲಿ ನಟಿಸಿದ ಮಂಜುಳಾ ಅವರ ಅಭಿನಯ, 'ಕಾಕನ ಕೋಟೆ', 'ಕಾಡು', 'ಭುಜಂಗಯ್ಯನ ದಶಾವತಾರ' ಸಿನಿಮಾಗಳಲ್ಲಿ ಲೋಕೇಶ್, ಗಿರಿಜಾ ಲೋಕೇಶ್ ಅವರ ಅಭಿನಯ, 'ಭಕ್ತ ಕುಂಬಾರ', 'ಸುಭದ್ರಾ', 'ಕಾಳಿದಾಸ', 'ಜಗಜ್ಯೋತಿ ಬಸವೇಶ್ವರ' ಸಿನಿಮಾಗಳಲ್ಲಿ ಹೊನ್ನಪ್ಪ ಭಾಗವತರ್ ಅವರ ಅಭಿನಯ, 'ಅನುಭವ', 'ಪುಟ್ನಂಜ', 'ತುಂಬಿದ ಮನೆ', 'ಕುರಿಗಳು ಸಾರ್ ಕುರಿಗಳು', 'ಕೊಟ್ರೇಶಿ ಕನಸು', 'ಗುಲಾಬಿ ಟಾಕೀಸ್' ಮುಂತಾದ ಚಿತ್ರಗಳಲ್ಲಿ ಉಮಾಶ್ರೀ ಅವರ ಅಭಿನಯ, ಈ ಎಲ್ಲಾ ಅಭಿನಯದ ಮಾದರಿಗಳನ್ನು ಗಮನಿಸಿದಾಗ ನಟ ಅಥವಾ ನಟಿಗಾಗಿಯೇ ಚಿತ್ರವನ್ನು ತಯಾರು ಮಾಡಲಾಗಿದೆ ಎನಿಸುತ್ತದೆ.

ಇನ್ನೂ ಅನೇಕ ಸಂದರ್ಭಗಳಲ್ಲಿ ಕಥನವೊಂದು ಬೇಡುವ ಪಾತ್ರಗಳಿಗೆ ನಿರ್ದಿಷ್ಟ ನಟರುಗಳೇ ಸೂಕ್ತವಾಗಿ ಒಪ್ಪುತ್ತಿರುತ್ತಾರೆ. ಆಗ ಕಥೆಯೇ ನಟನೆಯ ಮಾದರಿಯನ್ನು ಆಯ್ಕೆ ಮಾಡಿ ತನ್ನ ಒಳಗಿನ ಸತ್ವದಿಂದ ಆಯ್ಕೆ ಮಾಡಿಕೊಳ್ಳುತ್ತದೆ ಎನ್ನುವುದು ಮುಖ್ಯವಾದ ಅಂಶ. ಅಂದರೆ ಕೆಲವು ಪಾತ್ರಗಳನ್ನು ನಿಗದಿತ ನಟರೇ ಮಾಡಬೇಕು ಎನ್ನುವ ಒತ್ತಾಯ ಪ್ರೇಕ್ಷಕರಿಂದ ಬರುವ ಮೊದಲೇ ನಿರ್ಮಾಪಕರು ಮತ್ತು ನಿರ್ದೇಶಕರು ನಟರನ್ನು ಸಹೃದಯರ ಮುಂದೆ ಕಟ್ಟಿಕೊಡುತ್ತಾರೆ. ತಮ್ಮ ಪ್ರತಿಭೆ ಮತ್ತು ಅಭಿನಯ ಜ್ಞಾನದ ಮೂಲಕ ಮೇಲೆ ಪ್ರಸ್ತಾಪಿಸಿದ ಎಲ್ಲಾ ನಟರು ಸಿನಿಮಾ ಎಂಬ ಪ್ರಬಲ ಮಾಧ್ಯಮದಲ್ಲಿ ತಮ್ಮ ತಮ್ಮ ನೆಲೆಯನ್ನು ಕಂಡುಕೊಂಡರು. ಹಾಗಾಗಿ ನಟರ ಮೂಲಕವೇ ಕನ್ನಡ ಚಿತ್ರರಂಗ ಮುಖ್ಯ ನೆಲೆಗೆ ಬಂದಿತು. ಸಿನಿಮಾ ಭಾಷೆಯಲ್ಲೇ ಹೇಳುವುದಾದರೆ ಸ್ಟಾರ್‌ಗಳನ್ನು ರೂಪಿಸುವ ಕ್ರಮದಲ್ಲಿ ಚಿತ್ರರಂಗದ ಮತ್ತು ಪ್ರೇಕ್ಷಕರ ಒಳಗೊಳ್ಳುವಿಕೆಯ ಜೊತೆಗೆ ನಟರ ಪ್ರತಿಭೆ ಮತ್ತು ಅಭಿನಯಕ್ಕಿರುವ ವ್ಯಾಪಕ ಸಾಧ್ಯತೆಗಳೂ ಕೂಡ ಮುಖ್ಯವಾಗುತ್ತವೆ.

ಎಪ್ಪತ್ತರ ದಶಕದ ನಂತರ ಸಂಸ್ಕಾರದಿಂದ ಹಿಡಿದು 'ಅಬಚೂರಿನ ಪೋಸ್ಟಾಫೀಸು', 'ಕಾಕನಕೋಟೆ', 'ಕಾಡು', 'ಪರಸಂಗದ ಗೆಂಡೆತಿಮ್ಮ', 'ಫಣಿಯಮ್ಮ', 'ಘಟಶ್ರಾದ್ಧ', 'ದ್ವೀಪ', 'ತಾಯಿ ಸಾಹೇಬ', 'ಗುಲಾಬಿ ಟಾಕೀಸು' ಇತ್ಯಾದಿ ಸಿನಿಮಾಗಳ ತನಕ ಸಮಾಜವನ್ನು, ಸಾಹಿತ್ಯ ಕೃತಿಯ ಸಾಹಿತ್ಯವನ್ನು ಒಳಗೊಂಡ ನಟನೆ ಅಥವಾ ಕಥಾವಸ್ತುವಿಗೆ

ಪ್ರಾಮುಖ್ಯತೆಯನ್ನು ನೀಡಿದರು. ಹಾಗಾಗಿ ಉಮಾಶ್ರೀ, ಗಿರಿಜಾ ಲೋಕೇಶ್‌ರಂತಹ ಪೋಷಕ ನಟಿಯರು ಮುಖ್ಯ ವಾಹಿನಿಯಲ್ಲಿ ಪ್ರಮುಖ ಧಾರೆಯಾದರು.

ಚಾರಿತ್ರಿಕ ಸಿನಿಮಾಗಳು ಮಾತ್ರವಲ್ಲದೆ 'ನಾಂದಿ' ಚಿತ್ರದ ಮೂಲಕ ಹೊಸ ಬಗೆಯ ಸಿನಿಮಾಗಳು ಕನ್ನಡದಲ್ಲಿ ತಯಾರಾಗಲು ಶುರುವಾದವು. ವಿ.ಎಂ.ಇನಾಮ್ದಾರ್ ಅವರ ಕಾದಂಬರಿ ಆಧಾರಿತ ಮುಕ್ತಿ, ಪೂರ್ಣಚಂದ್ರ ತೇಜಸ್ವಿಯವರ 'ಅಬಚೂರಿನ ಪೋಸ್ಟಾಫೀಸು', ಎ.ಎನ್. ಮೂರ್ತಿರಾಯರ 'ಆಷಾಡಭೂತಿ' ನಾಟಕ ಆಧಾರಿತ ಸುಬ್ಬಾಶಾಸ್ತ್ರಿ, ತ.ರಾ.ಸು ಅವರ ಕಾದಂಬರಿ ಆಧಾರಿತ 'ಚಂದವಳ್ಳಿಯ ತೋಟ' ಹಾಗೂ ಇನ್ನಿತರೆ ಸಾಹಿತಿಗಳ ಕಾದಂಬರಿಗಳು ಚಲನಚಿತ್ರವಾದವು. ಕನ್ನಡ ಚಿತ್ರರಂಗದ ಮುಂದಿನ ಚಲನೆ ಬಹಳ ಮುಖ್ಯವಾದದ್ದು "1965ರ ನಂತರದ ಮಹತ್ವದ ಬೆಳವಣಿಗೆ ಎಂದರೆ ಚಲನಚಿತ್ರ ನಿರ್ದೇಶಕನ ಮಾಧ್ಯಮ ಎನ್ನುವುದನ್ನು ಪುಟ್ಟಣ್ಣ ಕಣಗಾಲ್ 'ರುಜುವಾತು' ಪಡಿಸಿದರು. 1967ರಲ್ಲಿ 'ಬೆಳ್ಳಿ ಮೋಡ' ಚಿತ್ರದ ಮೂಲಕ ತಮ್ಮ ಪ್ರತಿಭೆ ಪ್ರದರ್ಶಿಸಿದ ಪುಟ್ಟಣ್ಣ ಕಣಗಾಲ್ ತಾರಾ ಮೌಲ್ಯವಿಲ್ಲದೆ, ಸತ್ವಶಾಲಿ ಕತೆಯನ್ನು ನಂಬಿದರೆ ಯಶಸ್ಸು ಖಂಡಿತಾ ಎಂಬುದನ್ನು ಸಾಧಿಸಿ ತೋರಿಸಿದರು. ಅವರ ಚಿತ್ರಗಳಲ್ಲಿ ಕಥೆಯೇ ನಾಯಕ"[6] ಈ ಕಾರಣದಿಂದಾಗಿ ಚಿತ್ರರಂಗದ ಇತಿಹಾಸದಲ್ಲಿ ಪುಟ್ಟಣ್ಣ ಅವರ ಸ್ಥಾನ ಪ್ರತ್ಯೇಕವಾಗಿ ನಿಲ್ಲುತ್ತದೆ. ತಾರಾಮೌಲ್ಯ ಅದ್ದೂರಿ ಸೆಟ್‌ಗಳ ಚಾರಿತ್ರಿಕ ಚಿತ್ರಗಳು, ಸಾಮಾಜಿಕ ಚಿತ್ರಗಳು ತೆರೆ ಕಾಣುತ್ತಿರುವಾಗ ಪುಟ್ಟಣ್ಣ ಅವರು ಕಥೆಗಳನ್ನೇ ಮುಖ್ಯನೆಲೆಗೆ ತಂದುಕೊಂಡು 'ಗೆಜ್ಜೆಪೂಜೆ', 'ನಾಗರಹಾವು', 'ರಂಗನಾಯಕಿ', 'ಪಡುವಾರಳ್ಳಿ ಪಾಂಡವರು' ಮುಂತಾದ ಸಿನಿಮಾಗಳನ್ನು ಕನ್ನಡ ಚಿತ್ರರಂಗಕ್ಕೆ ನೀಡುವ ಮೂಲಕ ಹೊಸ ಸಂವೇದನೆಯ ಸಾಧ್ಯತೆಯಾಗಿ ಚಿತ್ರರಂಗದಲ್ಲಿ ಸ್ಥಾಪಿತರಾದರು.

ಪುಟ್ಟಣ್ಣ ಕಣಗಾಲ್ ಅವರನ್ನು ಕೇಂದ್ರವೆಂಬಂತೆ ನೋಡಿದರೆ ಅವರ ಚಲನಚಿತ್ರಗಳು ಕನ್ನಡ ಸಿನಿಮಾ ಸಂದರ್ಭದಲ್ಲಿ ಭಿನ್ನ ನೆಲೆಯ ಆಯಾಮಗಳನ್ನು ಕಟ್ಟಿಕೊಟ್ಟವು. ಅವರು ಆರಿಸಿಕೊಳ್ಳುತ್ತಿದ್ದ ಮಧ್ಯಮ ವರ್ಗದ ಹಿನ್ನೆಲೆಯ ಮದುವೆ ವಯಸ್ಸಿನ ಹೆಣ್ಣುಮಕ್ಕಳ ಕಥನ ಬಹುತೇಕ ಸಿನಿಮಾಗಳಲ್ಲಿ ಹೊಸ ಅಲೆಯನ್ನು ಸೃಷ್ಟಿಸುತ್ತದೆ. ಕಾದಂಬರಿಗಳ ಆಯ್ಕೆ ಮತ್ತು ಆ ಮೂಲಕ ಸಮಾಜವನ್ನು ನೋಡುವ ಕ್ರಮ ಸಿನಿಮಾಗಳಾದವು. ಲೀಲಾವತಿ, ಹರಿಣಿ, ಜಯಂತಿ ಈ ನಟಿಯರು ತಮ್ಮ ತಾರಾಮೌಲ್ಯವನ್ನು ಕಾಪಾಡಿಕೊಂಡು ಬರುತ್ತಿರುವ ಕಾಲದಲ್ಲೇ ಪುಟ್ಟಣ್ಣ ಅವರು ಕನ್ನಡಕ್ಕೆ ಹೊಸ ನಟಿಯರ ಅಥವಾ ಆಗಾಗಲೇ ನಟಿಸುತ್ತಿದ್ದ ನಟಿಯರನ್ನು ಮುನ್ನೆಲೆಗೆ ತಂದರು. ಆ ದಾರಿಯಲ್ಲಿ ಕಲ್ಪನಾ ಕನ್ನಡ ಚಿತ್ರರಂಗದಲ್ಲಿ ಚಿರಸ್ಥಾಯಿಯಾಗಿ ಉಳಿಯುವಂತೆ ತಮ್ಮ ಭಾವುಕ ಅಭಿನಯವನ್ನು ಮುಖ್ಯ ಮಾಡಿಕೊಂಡರು. 'ಬೆಳ್ಳಿ ಮೋಡ'ದಿಂದ ಹಿಡಿದು 'ಗೆಜ್ಜೆಪೂಜೆ', 'ಶರಪಂಜರ', 'ಕಪ್ಪು ಬಿಳುಪು' ಮುಖ್ಯವಾದವುಗಳು. ನಾಯಕಿಯರನ್ನು ಮಾತ್ರವಲ್ಲದೇ 'ನಾಗರ ಹಾವು' ಚಿತ್ರದ ಮೂಲಕ ವಿಷ್ಣುವರ್ಧನ್ ಅವರನ್ನೂ 'ಎಡಕಲ್ಲು ಗುಡ್ಡದ ಮೇಲೆ' ಸಿನಿಮಾದ ಮೂಲಕ ಚಂದ್ರಶೇಖರ್, 'ಉಪಾಸನೆ'ಯಲ್ಲಿ ಗೋವಿಂದ ಮಣ್ಣೂರ್, 'ಬಿಳಿ ಹೆಂಡತಿ'ಯಲ್ಲಿ ಅನಿಲ್ ಕುಮಾರ್, 'ಅಮೃತಗಳಿಗೆ'ಯಲ್ಲಿ ಶ್ರೀಧರ್ ಅವರನ್ನೂ ನಾಯಕ ನಟರಾಗಿ ಚಲನಚಿತ್ರರಂಗಕ್ಕೆ ಪರಿಚಯಿಸಿದರು. ಕಲ್ಪನಾ ಅವರಂತೆಯೇ ಆರತಿ ಮತ್ತು ಪದ್ಮಾವಸಂತಿ ಅವರುಗಳನ್ನೂ ಕೂಡ ತಮ್ಮ ಕಥನಕ್ಕೆ ಪೂರಕವಾಗಿ ತಮ್ಮ ಚಲನಚಿತ್ರಗಳಲ್ಲಿ ಕಥಾ ನಾಯಕಿಯರನ್ನಾಗಿ ಮಾಡಿಕೊಂಡರು. ಪುಟ್ಟಣ್ಣ ಕಣಗಾಲ್ ಅವರು ತಮ್ಮ ಬಹುತೇಕ ಚಲನಚಿತ್ರಗಳನ್ನು

ನಾಯಕಿ ಪ್ರಧಾನ ಚಿತ್ರಗಳನ್ನಾಗಿ ಕೊಡುವ ಮೂಲಕ ಕನ್ನಡ ಚಲನಚಿತ್ರರಂಗದಲ್ಲಿ ಅದಾಗಲೇ ಪ್ರತಿಷ್ಠಾಪಿತ ನಾಯಕ ಪ್ರಧಾನ ಎನ್ನುವ ರೂಪಿತ ಆಶಯವನ್ನು ಒಡೆದರು. ಕಾದಂಬರಿಗಳ ಕಥಾವಸ್ತು ಸಮಕಾಲೀನ ಸಮಾಜ ಮತ್ತು ಹೆಣ್ಣಿನ ಮನೋಲೋಕ ಇವುಗಳನ್ನು ಪ್ರಧಾನ ನೆಲೆಯಲ್ಲಿಟ್ಟುಕೊಂಡು ಪುಟ್ಟಣ್ಣ ಕಣಗಾಲರು ಚಲನಚಿತ್ರಗಳನ್ನು ಕನ್ನಡಕ್ಕೆ ಕೊಟ್ಟರು. ಇವರ ಪ್ರಯೋಗಗಳು ಕನ್ನಡ ಚಿತ್ರ ಪ್ರೇಕ್ಷಕರಿಗೂ ತಲುಪಿದ್ದು, ಚಲನಚಿತ್ರದ ಮೂಲಕ ಆತ್ಮ ವಿಮರ್ಶೆಯ ಸಾಧ್ಯತೆಗಳಾಗಿದ್ದು ಕೂಡ ಮುಖ್ಯವೇ. ಆದರೆ ಅತಿಭಾವುಕ, ಒಂದು ರೀತಿಯ ಮೆಲೋ ಡ್ರಾಮ, ಅತೀ ನಾಟಕೀಯತೆ ಪುಟ್ಟಣ್ಣ ಅವರ ಚಿತ್ರದಲ್ಲಿ ಹೆಚ್ಚು ಕಾಣುತ್ತದೆ. ಒಮ್ಮೊಮ್ಮೆ ಅತೀ ಭಾವುಕವಾದ ಅಭಿನಯವನ್ನು ನಟರ ಮೂಲಕ ನೋಡಿದಾಗ ಸಾಮಾನ್ಯನೊಬ್ಬನ ಸಹಜ ಬದುಕಿಗಿಂತ ನಟನೆ ಬೇರೆಯಾಗಿಯೇ ನಿಂತು ತುಂಬಾ ನಾಟಕೀಯ ಎನ್ನುವಷ್ಟು ಮಟ್ಟಿಗೆ ಅನಿಸುತ್ತದೆ. ಪುಟ್ಟಣ್ಣ ಅವರ ಗರಡಿಯಲ್ಲಿ ಬಂದ ನಟಿಯರು ತಮ್ಮ ಭಾವಾಭಿವ್ಯಕ್ತಿಯನ್ನು ಕೇಂದ್ರವಾಗಿ ಮಾಡಿಕೊಂಡು ಕನ್ನಡದಲ್ಲಿ ವಿಶಿಷ್ಟವಾದ ಮಾದರಿಯೊಂದನ್ನು ರೂಪಿಸಿದ ನೆಲೆಯಲ್ಲಿ ಮುಖ್ಯವಾಗಿ ಗಮನಿಸಬಹುದು.

ಚಿತ್ರರಂಗ ನಟನೆಯಲ್ಲಿ ಹೀಗೆ ನಾಟಕೀಯತೆಯನ್ನು ಅತೀ ಹೆಚ್ಚು ತನ್ನೊಳಗೆ ಸೇರಿಸಿಕೊಂಡಿರುವುದನ್ನು ಎಲ್ಲ ಕಾಲದಲ್ಲಿಯೂ ಕಾಣಬಹುದು. ಅಭಿನಯವೆಂದರೆ ಅದೊಂದು ಭಾವಾವೇಶದ ಸಾಧ್ಯತೆ ಎನ್ನುವುದು ಪರಂಪರೆಯಿಂದ ಒಂದು ಮೌಲ್ಯವಾಗಿ ಬಂದಿದೆ. ಬಹುಶಃ ಕನ್ನಡ ರಂಗಭೂಮಿಯ ಪ್ರಾಚೀನತೆಯನ್ನು ಗಮನಿಸಿದಾಗ ಧಾರ್ಮಿಕ ಆಚರಣೆಗಳಲ್ಲಿ ಉತ್ಸವದ, ದೈವದ ಅಥವಾ ಭೂತದ ಅಭಿವ್ಯಕ್ತಿಯನ್ನು ಅಥವಾ ಅನೇಕ ಆಚರಣೆಯ ಭಾಗವಾದ ಜನಪದ ಕಲೆಗಳು ಅತಿಭಾವುಕತೆ, ಆವೇಶ, ಕುಣಿತ, ಮಾತಿನ ದಾಟಿ ಇವೆಲ್ಲವುಗಳೂ ಭಾರತದ ಅಥವಾ ಕನ್ನಡದ ನಟರನ್ನು ರೂಪಿಸಿದೆ ಮತ್ತು ರೂಪಿಸುತ್ತಿದೆ. ಇದು ನಟನೆಯೆಂದರೆ ಸಹಜವಾದುದು ಎಂಬುದನ್ನು ದೂರ ಮಾಡಿದೆ. ಕಳೆದ ಎರಡು ಮೂರು ದಶಕಗಳಲ್ಲಿ ನಟನೆಯ ಬಗೆಗೆ ಹೊಸ ಹೊಸ ಆಯಾಮಗಳು ತೆರೆದುಕೊಳ್ಳುತ್ತಿವೆ.

"ಕನ್ನಡದಲ್ಲಿ ಇತ್ತೀಚೆಗೆ ಜನಪ್ರಿಯ ತಾರಾ ನಟಿಯರು ತಾವೇ ದುಡ್ಡು ಹಾಕಿ ಕನ್ನಡ ಸಿನಿಮಾಗಳನ್ನು ನಿರ್ಮಾಣ ಮಾಡಿ ನಟಿಸಿ ಉತ್ತಮ ನಟಿ ಪ್ರಶಸ್ತಿ ಪಡೆಯುವ ಒಂದು ಕಿರು ಪ್ರವೃತ್ತಿಯೇ ಆರಂಭವಾಗಿದೆ. (ಜಯಮಾಲಾ, ಸೌಂದರ್ಯ, ತಾರಾ, ಇತ್ಯಾದಿ)"[7] ಈ ಪ್ರಕ್ರಿಯೆಯನ್ನು ಗಮನಿಸಿದಾಗ ಕನ್ನಡ ಚಲನಚಿತ್ರರಂಗದಲ್ಲಿ ಮುಖ್ಯ ಧಾರೆಯನ್ನು ಪ್ರಭಾವಿಸುವಂತೆ ಮಾಡುವ ಈ ಯತ್ನಗಳು ಮುಖ್ಯವಾದವು. ಶ್ರೇಷ್ಠ ನಟಿ ಪ್ರಶಸ್ತಿಯನ್ನು ಪಡೆಯುವ ಸಲುವಾಗಿ ಹಾಗೂ ಇದೇ ಕನ್ನಡದ ಅಸ್ಮಿತೆ ಎನ್ನುವ ಯೋಚನಾ ಕ್ರಮವೂ ಕೂಡ ಈ ಸಾಧ್ಯತೆಯ ಹಿಂದಣ ಇರುವ ಆಲೋಚನೆಗಳನ್ನು ಮುನ್ನೆಲೆಗೆ ತರುತ್ತವೆ. ಕಲಾತ್ಮಕ ಚಿತ್ರಗಳು ಅಥವಾ ಕಮರ್ಶಿಯಲ್ ಸಿನಿಮಾಗಳು ಎನ್ನುವ ವಿಭಾಗೀಕರಣ ಚಿತ್ರರಂಗದ ಈ ತರದ ವಿದ್ಯಮಾನಗಳು ನಡೆಯಲು ಕಾರಣವಾಯಿತು. ಆದರೆ ನಟನೆಯ ಮತ್ತು ಅಭಿವ್ಯಕ್ತಿಯ ದೃಷ್ಟಿಯಿಂದ ಈ ಮೂರೂ ಜನ ಕಲಾವಿದೆಯರು ಕೂಡ ಸಿನಿಮಾ ಕಥನಕ್ಕೆ ಬೇಕಾದ ಅಭಿನಯವನ್ನು 'ತಾಯಿ ಸಾಹೇಬ', 'ದ್ವೀಪ', 'ಹಸೀನಾ' ಮುಂತಾದ ಚಿತ್ರಗಳಲ್ಲಿ ನೀಡಿದ್ದಾರೆ. ಅಭಿನಯವನ್ನು ಕುರಿತಂತೆ ಇದು ಮತ್ತೊಂದು ಮಾದರಿ ಎಂದು ಕನ್ನಡ ಚಿತ್ರರಂಗದ ಸಂದರ್ಭದಲ್ಲಿ ಹೇಳಲು ಅವಕಾಶವಿದೆ.

ಮಹಿಳೆ ಮತ್ತು ಸಿನಿಮಾ : ಯಜಮಾನ್ಯ ಮತ್ತು ಅಧಿಕಾರ ಹೆಣ್ಣನ್ನು ಗೃಹಕೃತ್ಯಗಳಿಗೆ ಮಾತ್ರ ಸೀಮಿತವಾಗುವಂತೆ ತುಂಬ ಜಾಗೃತೆಯಿಂದ ನೋಡಿಕೊಂಡಿದೆ. ಕಲೆಯ ಮುಖ್ಯ ಆಶಯ ಇರುವುದೇ ಸಾಮಾಜಿಕ, ಸಾಂಸ್ಕೃತಿಕ ಸಂಘರ್ಷಗಳನ್ನು ಮತ್ತು ಪ್ರತಿರೋಧದ ನೆಲೆಗಳನ್ನು ದಾಖಲಿಸುತ್ತಾ ಪ್ರಕಟಪಡಿಸುವುದೇ ಆಗಿದೆ. ಕನ್ನಡ ಸಿನಿಮಾ ಈ ಕೆಲಸವನ್ನು ಆರಂಭದಿಂದಲೂ ಮಾಡಿಕೊಂಡು ಬಂದಿದೆ. ಮಹಿಳೆ ಮತ್ತು ಅವಳ ಭಾಷೆ, ಅಭಿವ್ಯಕ್ತಿಗಳನ್ನು ದಾಖಲಿಸುವಾಗ ಕನ್ನಡ ಸಿನಿಮಾ ಎಚ್ಚರದಿಂದ ಹೆಜ್ಜೆಗಳನ್ನು ಇಟ್ಟಿದೆ. ಕುಟುಂಬದೊಳಗೇ ನಿರ್ವಹಿಸುವ ಜವಾಬ್ದಾರಿಯುತ ಹೆಣ್ಣುಮಗಳಂತೆ, ಅಂತ:ಪುರದೊಳಗೇ ಇರುವ ಮಹಾರಾಣಿಯಂತೆ, ಹೆಣ್ಣಿನ ವಿಚಾರದಲ್ಲಿ ಮದುವೆ ಮತ್ತು ಮದುವೆಯ ಮುಂಚೆಯ ಕಾಮ ಅಕ್ಷಮ್ಯವೆಂಬಂತೆ, ಕುಟುಂಬ ಪದ್ಧತಿಯನ್ನು ಆರಾಧಿಸುವಳಂತೆ, ತ್ಯಾಗದ ಸಂಕೇತದಂತೆ, ಸತೀ ಶಿರೋಮಣಿಯಂತೆ, ದೇವತೆಯಂತೆ, ದೇಹ ಪ್ರದರ್ಶನದ ಬೊಂಬೆಯಂತೆ, ಬಜಾರಿಯಂತೆ, ಗಟವಾಣಿಯಂತೆ, ಎಲ್ಲವನ್ನೂ ನುಂಗಿಕೊಳ್ಳೋ ತಾಯಿಯಂತೆ, ಸಹನಾಮೂರ್ತಿಯಂತೆ, ಕನ್ನಡ ಸಿನಿಮಾದಲ್ಲಿ ಹೆಣ್ಣು ಚಿತ್ರಿತವಾಗಿದ್ದಾಳೆ. ಇವುಗಳ ಆಧಾರದಲ್ಲಿಯೇ ಅವಳ ಭಾಷೆ, ಭಂಗಿ, ಉಡುಗೆ, ತೊಡುಗೆ, ಬಣ್ಣ ಎಲ್ಲವೂ ನಿರ್ಧಾರಿತವಾಗಿವೆ. ಹಲವು ಸಂದರ್ಭಗಳಲ್ಲಿ ಎಲ್ಲವನ್ನೂ ಒಪ್ಪಿಕೊಳ್ಳುವ ಕೆಲವು ಸಂದರ್ಭಗಳಲ್ಲಿ ಎಲ್ಲವನ್ನೂ ತಿರಸ್ಕರಿಸುವ ರೂಪಕದಂತೆ ಹೆಣ್ಣಿನ ಯೋಚನಾ ಕ್ರಮವನ್ನು ಚಲನಚಿತ್ರಗಳು ಕಟ್ಟಿಕೊಟ್ಟಿವೆ. ಲೈಂಗಿಕತೆಯ ಕ್ರೌರ್ಯ, ಶೋಷಣೆಗಳು ಯಥೇಚ್ಛವಾಗಿ ಕನ್ನಡ ಸಿನಿಮಾದ ಹೆಣ್ಣುಮಕ್ಕಳ ಮೇಲೆಯೂ ಪ್ರಹಾರ ಮಾಡಿದೆ. ಜೊತೆಜೊತೆಗೆ ಗಂಡಿನೆದುರು ದಾಸ್ಯವನ್ನು ಒಪ್ಪಿಕೊಂಡೇ ಆದರ್ಶದ ಭಾಗವಾಗುವಂತೆ ಕೂಡ ಹೆಣ್ಣು ಕನ್ನಡ ಸಿನಿಮಾದಲ್ಲಿ ಕಾಣುತ್ತಾಳೆ. ಉದಾಹರಣೆಗೆ "ನೀ ನಡೆವ ಹಾದಿಯಲ್ಲಿ ನಗೆಹೂವು ಬಾಡದಿರಲಿ ಈ ಬಾಳ ಬುತ್ತಿಯಲಿ ಸಿಹಿಪಾಲು ನಿನಗಿರಲಿ, ಕಹಿಯೆಲ್ಲ ನನಗಿರಲಿ" ಎನ್ನುವ ಗೀತೆ ಮಂಡಿಸುವ ಪುರುಷ ರಾಜಕಾರಣದ ಗ್ರಹಿಕೆಗಳನ್ನು ಮತ್ತು ದೃಷ್ಟಿಕೋನಗಳನ್ನು ಸ್ಪಷ್ಟಪಡಿಸುತ್ತದೆ.

ಕನ್ನಡ ಸಿನಿಮಾ ಇರಲಿ, ಭಾರತೀಯ ಭಾಷೆಯ ಯಾವುದೇ ಸಿನಿಮಾ ಇರಲಿ, ನಟಿ ಎರಡನೇ ದರ್ಜೆಯ ಪಾತ್ರವಾಗಿ ಮೂಡಿಬಂದಿದ್ದಾಳೆ. ಅಭಿವ್ಯಕ್ತಿಯ ನೆಲೆಯಲ್ಲಿ ನಟನೆಯ ವಿಚಾರದಲ್ಲಿ ಪುರುಷನಿಗೆ ಸಿಕ್ಕಷ್ಟು ಅವಕಾಶಗಳು ಮಹಿಳೆಗೆ ಸಿಗುವುದೇ ಇಲ್ಲ. ಸಂಭಾವನೆಯ ವಿಚಾರದಲ್ಲೂ ನಟಿ, ಪೋಷಕ ನಟಿಯರಿಗೆ ಪುರುಷರಿಗಿಂತ ಕಡಿಮೆ ಸಂಭಾವನೆಯೇ ನೀಡಲಾಗುತ್ತಿದೆ. ಸಿನಿಮಾ ಎಂಬ ಆಧುನಿಕತೆಯ ಬಹುದೊಡ್ಡ ಸಾಧ್ಯತೆಯೊಳಗೂ ಭಾರತೀಯ ಸಂದರ್ಭದಲ್ಲಿ ಹೆಣ್ಣು ಮತ್ತೆ ದ್ವಿತೀಯ ಸ್ಥಾನಕ್ಕೆ ಹೇಗಾದರೂ ತಳ್ಳಲ್ಪಡುತ್ತಾಳೆ. ಈ ನೆಲೆಯಲ್ಲಿ "ನಟಿಯರಿಗೂ ಪುರುಷರಷ್ಟೇ ಸಮಾನ ಸಂಭಾವನೆ ಸಿಗಲಿ. ಚಿತ್ರರಂಗ ಪುರುಷ ಪ್ರಧಾನ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ. ಆದರೆ ಅದು ಸಮಾನವಾಗಬೇಕು" ಮಹಿಳಾ ಸಮಾನತೆಯ ಬಗೆಗಿನ ಈ ಮಾತು ಬಹಳ ಮುಖ್ಯವಾಗುತ್ತದೆ.

ಆರಂಭಿಕ ಸಿನಿಮಾದ ನಟಿ ಲಕ್ಷ್ಮೀಬಾಯಿಯಿಂದ ಮೊದಲುಗೊಂಡು ಆದವಾನಿ ಲಕ್ಷ್ಮೀದೇವಿ, ಪಂಡರಿಬಾಯಿ, ಲೀಲಾವತಿ, ಜಯಂತಿ, ಕಲ್ಪನಾ, ಮಂಜುಳಾ, ಆರತಿ, ಭಾರತಿ, ಜಯಮಾಲ, ಜ್ಯೋತಿಲಕ್ಷ್ಮೀ, ರೂಪಾದೇವಿ, ಗೀತಾ, ಸುಹಾಸಿನಿ, ಜ್ಯೂಲಿ

ಲಕ್ಷ್ಮೀ ಹಾಗೂ ಪೋಷಕ ನಟಿಯರೆಂದು ರೂಪಿಸಿದ ಮತ್ತೊಂದು ಗುಂಪು ಲಕ್ಷ್ಮೀದೇವಿ, ಆರ್.ಟಿ.ರಮಾ ಉಮಾಶ್ರೀ, ಗಿರಿಜಾ ಲೋಕೇಶ್, ಪ್ರಮೀಳಾ ಜೋಶಾಯಿ, ಆಶಾಲತಾ, ರೇಖಾದಾಸ್ ಮುಂತಾದ ನಟಿಯರು ಚಿತ್ರರಂಗದಲ್ಲಿ ತಮ್ಮ ವ್ಯಕ್ತಿನೆಲೆಯ ಪ್ರತಿಭೆಯಿಂದಲೇ ಪ್ರಧಾನ ಅಸ್ಮಿತೆಯನ್ನು ಕಂಡುಕೊಂಡರು. ದುಡಿಮೆ, ಮನ್ನಣೆಯ ವಿಷಯಕ್ಕೆ ಬಂದಾಗ ಪುರುಷ ನಟರೇ ಮುನ್ನಲೆಯಲ್ಲಿ ಇಂದಿಗೂ ಇದ್ದಾರೆ. ಈ ನಟಿಯರು ತನ್ನ ಪ್ರತಿಭೆಯಿಂದ ಗುರುತಿಸಲ್ಪಡುತ್ತಾರೆಯೇ ಹೊರತು ಆದಾಯ ಮತ್ತು ತಾರಾಮೌಲ್ಯದಿಂದಲ್ಲ. ಈ ಬಗೆಯ ರಾಜಕಾರಣ ಕನ್ನಡ ಸಿನಿಮಾದಲ್ಲಿ ನಿಚ್ಚಳವಾಗಿ ಆರಂಭದಿಂದ ಇಂದಿನವರೆಗೂ ಇದೆ. ಮಹಿಳಾ ಕೇಂದ್ರಿತ ಸಿನಿಮಾಗಳಲ್ಲಿ ಸ್ತ್ರೀ ಪಾತ್ರವು ಮುಖ್ಯ ಭೂಮಿಕೆಯಲ್ಲಿ ಇದ್ದರೂ ಕೂಡ ಅವು ಬೆರಳೆಣಿಕೆಯಷ್ಟು ಮಾತ್ರ. ಕಲಾತ್ಮಕ ಚಿತ್ರಗಳಾಗಿಯೋ ಅಥವಾ ನಿರ್ದೇಶಕನ ಆಸಕ್ತಿಯ ಚಿತ್ರಗಳಾಗಿಯೋ ರೂಪುಗೊಂಡು ಪ್ರಶಸ್ತಿಯೆಂಬ ಸಾರ್ಥಕತೆಗೆ ಸೀಮಿತವಾಗಿಬಿಡುತ್ತವೆ ಅವು ಮುಖ್ಯವಾಹಿನಿಗೆ ಬರುವುದೇ ಇಲ್ಲ. ಪುಟ್ಟಣ್ಣಕಣಗಾಲ್ ಮತ್ತು ಗಿರೀಶ್ ಕಾಸರವಳ್ಳಿ ಈ ಇಬ್ಬರೂ ನಿರ್ದೇಶಕರು ಮಹಿಳೆಯನ್ನು ಕಟ್ಟಿಕೊಟ್ಟ ನೆಲೆಗಳು ಭಿನ್ನವಾಗಿವೆ.

ಕನ್ನಡ ಸಿನಿಮಾದ ಸ್ತ್ರೀ ಪಾತ್ರಗಳು ಬಹಳ ಮುಖ್ಯವಾಗಿ ಸ್ತ್ರೀತ್ವದ ಗ್ರಹಿಕೆಗಳಂತೆ ಕಂಡು ಬಂದಿವೆ. ಸ್ತ್ರೀ ಶಕ್ತಿಯ ಹರಣ ಮತ್ತು ಅವಳನ್ನು ಪೋಷಿಸುವ ಪುರುಷಗುಣ ಚಲನಚಿತ್ರಗಳ ಮುಖ್ಯ ಭಾಗವೆಂಬಂತೆ ಕಂಡುಬರುತ್ತದೆ. ಪುರುಷನಿಗೆ ಸಹಕಾರಿಯಾಗುವ, ಧಾರ್ಮಿಕ ಆಚರಣೆಗಳನ್ನು ಮಹಿಳೆಗೆಂದೇ ಉಳಿಸಿಕೊಳ್ಳುವ ಪುರಾಣದಲ್ಲಿನ ಶಕ್ತಿಶಾಲಿ ದಯಾಮಯಿ ದೇವತೆಯೊಬ್ಬಳು ಕೂಡ ಗಂಡಿನ ಆಶ್ರಯದಲ್ಲಿ ಇರುವ, ಬಲಾತ್ಕಾರ ಮಾಡಿಸಿಕೊಂಡು ಪ್ರತಿಭಟಿಸದೆ ಮಾನಕ್ಕಂಜುವ, ಸುಕೋಮಲೆಯೆಂದು ಮುದ್ದಾಡಿಸಿಕೊಳ್ಳುವ, ಎಲ್ಲವನ್ನೂ ತನ್ನ ಮೇಲೆ ಆರೋಪಿಸಿಕೊಂಡು ಮೃದು ಸ್ವಭಾವವನ್ನು ಪ್ರಕಟಿಸುವ ಹಾಗೆ ಕನ್ನಡ ಸಿನಿಮಾದಲ್ಲಿನ ಹೆಣ್ಣು ಕಾಣುತ್ತಾಳೆ. ಅವಳು ಈ ಮೂಲಕ ಉದಾತ್ತತೆಯನ್ನು, ಪಾವಿತ್ರ್ಯತೆಯನ್ನು, ಉತ್ತಮ ವ್ಯಕ್ತಿತ್ವವನ್ನು ಒತ್ತಾಯವಾಗಿಯಾದರೂ ಹೇರಿಕೊಂಡ ಸಂಸ್ಕೃತಿಯ ಪ್ರತೀಕವಾಗುತ್ತಾಳೆ.

'ಗಾಳಿ ಮಾತು' ಸಿನಿಮಾದ ಉದಾಹರಣೆಯಂತೆ ಹೆಣ್ಣು ವಿವಾದದ ಕೇಂದ್ರವಾಗುತ್ತಾಳೆ. ಮಾಲಾಶ್ರೀ ಅಭಿನಯದ 'ರಾಣಿ ಮಹಾರಾಣಿ', 'ದುರ್ಗಿ', 'ಅಕ್ಕ', 'ಚಾಮುಂಡಿ', 'ಕಿರಣ್‌ಬೇಡಿ', ಮುಂತಾದ ಚಿತ್ರಗಳು ರೆಬೆಲ್ ಆಗಿ ತೋರಿಸಿದರೂ ಆ ಪಾತ್ರದೊಳಗೂ ಹೆಣ್ಣಿಗೆ ಅಂಟಿಕೊಂಡಿರುವ ಆದರ್ಶದ ಚಹರೆಗಳನ್ನು ಆರೋಪಿಸಿಬಿಡುತ್ತಾರೆ. ಕೆಲವು ಸಿನಿಮಾಗಳಲ್ಲಿ ಪ್ರತಿನಾಯಕಿಯಾಗಿ, ಇನ್ನೂ ಕೆಲವು ಸಿನಿಮಾಗಳಲ್ಲಿ ಅಕ್ಕ ತಂಗಿಯರ ಪಾತ್ರಗಳಲ್ಲಿ ಹೆಣ್ಣು ಕಾಣಿಸಿಕೊಂಡರೆ ಸಿನಿಮಾ ಒಂದರ ಪ್ರಧಾನ ಪಾತ್ರವಾದ ನಾಯಕ ನಟಗೂ ಹಲವಾರು ಮಿತಿಗಳು ಹಿರೋಯಿಸಂ ಎದುರು ಕಾಣುತ್ತವೆ. ಕೆಲವು ಕಲಾ ಚಿತ್ರಗಳು ವಾಸ್ತವ ಚಿತ್ರಣದ ಮೂಲಕ ಹೆಣ್ಣಿನ ವ್ಯಕ್ತಿತ್ವವನ್ನು ತೋರಿಸಿದರೆ ವಾಣಿಜ್ಯ ಚಿತ್ರಗಳು ವಾಸ್ತವ ಚಿತ್ರಣವನ್ನೇ ಮಾರುಕಟ್ಟೆಯ ಭಾಗವೆಂಬಂತೆ ಬಿಂಬಿಸುತ್ತವೆ. "ಹೆಣ್ಣಿನ ಬಗ್ಗೆ ಬದಲಾದ ಸಾಂಪ್ರದಾಯಿಕ ದೃಷ್ಟಿಕೋನ, ಮೇಲುಗೈ ಸಾಧಿಸಿರುವ ಗಂಡು ತನಗೆ ಕಂಡಂತೆ ತನಗೆ ಇಷ್ಟ ಬಂದಂತೆ ಚಿತ್ರಿಸಿದ್ದಾನೆಯೇ ಹೊರತು ಆಕೆ ಹೇಗಿದ್ದಾಳೋ, ಏನನ್ನು ಪ್ರತಿನಿಧಿಸುತ್ತಾಳೋ ಎಂಬುದನ್ನು ಆತ ಗಣನೆಗೆ ತೆಗೆದುಕೊಂಡಿಲ್ಲ."[10] ಒಟ್ಟಾರೆಯಾಗಿ ಗಂಡಿನ ಮೂಲಕ

ರೂಪುಗೊಂಡ ಹೆಣ್ಣು ಕನ್ನಡ ಸಿನಿಮಾದಲ್ಲಿ ಕಾಣುತ್ತಾಳೆಯೇ ಹೊರತು ಹೆಣ್ಣಿನ ನೆಲೆಯಲ್ಲಿ ವಿಕಾಸವಾಗುವ ಸ್ತ್ರೀ ಚಲನಚಿತ್ರಗಳಲ್ಲಿ ಕಾಣುವುದೇ ಇಲ್ಲ. ಕೆಲ ಮಹಿಳಾ ನಿರ್ದೇಶಕಿಯರು ಸಿನಿಮಾ ನಿರ್ದೇಶಿಸಿದರೂ ಈ ಮೇಲಿನ ಮಿತಿಗಳನ್ನು ದಾಟಿಕೊಳ್ಳಲು ಸಂಪೂರ್ಣವಾಗಿ ಸಾಧ್ಯವಾಗಿಲ್ಲ. ಪ್ರೇಕ್ಷಕರೂ ಕೂಡ ಪುರುಷ ನಿರ್ಮಿತ ದೃಷ್ಟಿಕೋನದಲ್ಲಿ ಸ್ತ್ರೀ ಪಾತ್ರಗಳು ಇರಬೇಕೆಂದು ನಿರೀಕ್ಷೆ ಮಾಡುತ್ತಾರೆ.

ಪ್ರೇಕ್ಷಕ ಕೇಂದ್ರಿತ ನೆಲೆ : ಕನ್ನಡ ಸಿನಿಮಾವನ್ನು ಪ್ರಭಾವಿಸಿದ ಮತ್ತೊಂದು ಅಂಶವೆಂದರೆ ಪ್ರೇಕ್ಷಕ ನೆಲೆಯಲ್ಲಿ ಸಿನಿಮಾ ರೂಪುಗೊಳ್ಳುವ ಸ್ಥಿತಿ. ನಿರ್ಮಾತೃಗಳಿರಬಹುದು ಅಥವಾ ನಿರ್ದೇಶಕನಿರಬಹುದು ಹಾಗೂ ಕಥಾವಸ್ತು, ಕಲಾವಿದರ ಆಯ್ಕೆಯಿರಬಹುದು ಇವೆಲ್ಲವೂ ಪ್ರೇಕ್ಷಕ ಯಾವ ಬಗೆಯ ಸಿನಿಮಾವನ್ನು ನೋಡುತ್ತಾನೆ ಎನ್ನುವುದರ ಆಧಾರದ ಮೇಲೆಯೇ ಬಹುತೇಕ ಸಂದರ್ಭಗಳಲ್ಲಿ ತೀರ್ಮಾನವಾಗುತ್ತದೆ. ಒಮ್ಮೊಮ್ಮೆ ಪ್ರೇಕ್ಷಕರ ಮನಸುಗಳನ್ನು 'ಟ್ರೆಂಡ್ ಸೆಟ್' ಮಾಡುವ ಮಾದರಿಯಲ್ಲಿ ರೂಪಿಸಲು ಪ್ರಯತ್ನಿಸಿದರೂ ಅದು ಹೆಚ್ಚು ಕಾಲ ಉಳಿಯದೆ ಆ ಕಾಲದ ಯಶಸ್ಸನ್ನು ಪಡೆದು ಮರೆಯಾಗುತ್ತದೆ. ಆದರೆ ಮೂಲದಲ್ಲಿ ಪ್ರೇಕ್ಷಕನ ಮನಸ್ಥಿತಿ ಸಹಜವಾಗಿ ಕೆಲವು ನಿರ್ದಿಷ್ಟವಾದ ನಿರೀಕ್ಷೆಗಳನ್ನು ಇಟ್ಟುಕೊಂಡಿರುತ್ತಾನೆ. ಅದಕ್ಕೆ ಸಂಸ್ಕೃತಿಯ ಹೆಸರಿಡಬಹುದು, ಪ್ರಾದೇಶಿಕತೆ ಎಂದು ಹೆಸರಿಡಬಹುದು ಅಥವಾ ಆದರ್ಶದ ಹೆಸರಿಡಬಹುದು. ಇಲ್ಲವೇ ಜನಪ್ರಿಯವಾದ ಮಾದರಿಯ ಯಾವುದಾದರೊಂದು ಹೆಸರಿಟ್ಟುಬಿಡಬಹುದು. ಈ ನಿರೀಕ್ಷೆಗಳನ್ನು ಒಳಗೊಂಡೇ ಒಬ್ಬ ನಿರ್ಮಾತೃ ಸಿನಿಮಾ ತಯಾರಿಗೆ ಬಂಡವಾಳ ಹೂಡುತ್ತಾನೆ. ಈ ಬಂಡವಾಳದ ಆಧಾರದಲ್ಲಿಯೇ ಉಳಿದೆಲ್ಲವೂ ಅನೇಕ ಸಂದರ್ಭಗಳಲ್ಲಿ ನಿರ್ಧಾರವಾಗುತ್ತದೆ. ರಾಜ್‌ಕುಮಾರ್ ಅವರಿಂದ ಒಳಗೊಂಡು ಈ ಹೊತ್ತಿನ ತನಕ ಎಲ್ಲಾ ನಾಯಕ ನಟರ ಆಯ್ಕೆ, ನಟಿಯರ ಆಯ್ಕೆ, ಕಥಾವಸ್ತುವಿನ ಆಯ್ಕೆ ಎಲ್ಲವೂ ಹೀಗೆಯೇ ನಿರ್ಧರಿತವಾಗಿವೆ. ಇನ್ನೂ ಹಲವು ಸಂದರ್ಭಗಳಲ್ಲಿ ನಟನ ಜನಪ್ರಿಯತೆಯನ್ನು ಗಮನದಲ್ಲಿಟ್ಟುಕೊಂಡು ಸಿನಿಮಾಗಳು ತಯಾರಾಗುತ್ತವೆ. ಇಲ್ಲಿ ನಿರ್ಮಾತೃವಿನ ಬಂಡವಾಳವೂ ಮುಖ್ಯವಾಗುತ್ತದೆ. ಪ್ರೇಕ್ಷಕನ ನಿರೀಕ್ಷೆಯೂ ಮುಖ್ಯವಾಗುತ್ತದೆ. ನಟರ ಅಭಿನಯವೂ ಮುಖ್ಯವಾಗುತ್ತದೆ. ಉಮಾಶ್ರೀ ಮತ್ತು ಎನ್.ಎಸ್.ರಾವ್ ಅವರ ನಟನೆ ಮುಖ್ಯವಾಗಿದ್ದು ಹೀಗೆಯೇ. ನಿರ್ದೇಶಕನ ನೆಲೆಯ ಸಿನಿಮಾಗಳು ಈ ಮೇಲಿನ ಪ್ರಸ್ತಾಪವನ್ನು ಗಮನದಲ್ಲಿಟ್ಟುಕೊಂಡು ಚಲನಚಿತ್ರವನ್ನೇ ನಿರ್ದೇಶಿಸಿದರೆ ಅದು ಪ್ರೇಕ್ಷಕರನ್ನು ತಲುಪುವ ದಾರಿಯೇ ಭಿನ್ನವಾಗಿರುತ್ತದೆ.

ಪ್ರೇಕ್ಷಕ ಕೇಂದ್ರಿತ ಸಿನಿಮಾಗಳ ಬಗ್ಗೆ ಮತ್ತೊಂದು ವಿಚಾರವನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಸಾಮಾನ್ಯವಾಗಿ ಸಿನಿಮಾ ನೋಡುವ ಪ್ರೇಕ್ಷಕ ಸಮುದಾಯ ಪ್ರದೇಶದಿಂದ ಪ್ರದೇಶಕ್ಕೆ, ಭಾಷೆಯಿಂದ ಭಾಷೆಗೆ, ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿರುತ್ತದೆ. ತಮಿಳುನಾಡಿನಲ್ಲಿ ಸಿನಿಮಾಗಳನ್ನು ನೋಡುವ ಹಾಗೆ ಕೇರಳದಲ್ಲಿ ನೋಡದೇ ಇರಬಹುದು. ಆಂಧ್ರದ ಪ್ರೇಕ್ಷಕರಿಗಿಂತಲೂ ಕನ್ನಡದ ಪ್ರೇಕ್ಷಕರು ಭಿನ್ನವಾಗಿರಬಹುದು. ಆದರೆ ಸಿನಿಮಾ ನೋಡಲು ಪ್ರೇಕ್ಷಕರಂತೂ ಬಹಳ ಮುಖ್ಯ. ಹಾಗೆಯೇ ಪ್ರೇಕ್ಷಕನ ನಿರೀಕ್ಷೆಯೂ ಬಹಳ ಮುಖ್ಯ. ಒಬ್ಬ ಪ್ರೇಕ್ಷಕ, ನಟ-ನಟಿ ಕೇಂದ್ರಿತವಾಗಿ ಅಭಿಮಾನದಿಂದ ಸಿನಿಮಾವನ್ನು ನಿರೀಕ್ಷಿಸಬಹುದು. ವಿಭಿನ್ನ ಕಥಾವಸ್ತುವನ್ನು ಬಯಸಬಹುದು. ಹಾಡು, ಹೊಡೆದಾಟ, ಬಡಿದಾಟ, ಕೌಟುಂಬಿಕ ಕಥನ, ಪ್ರೀತಿ ಪ್ರೇಮ ಪ್ರಣಯ ಕಾಮಗಳನ್ನು ನಿರೀಕ್ಷಿಸಬಹುದು. ಇವೆಲ್ಲದರ ಸೂತ್ರವೆಂಬಂತೆ ಕನ್ನಡ ಚಲನಚಿತ್ರರಂಗ ಅಥವಾ ಭಾರತದ ಯಾವುದೇ

ಭಾಷೆಗಳ ಚಿತ್ರರಂಗ ತಮ್ಮ ತಮ್ಮ ಪ್ರಾದೇಶಿಕತೆಗೆ ಅನುಗುಣವಾಗಿ ಸಂದರ್ಭಕ್ಕನುಗುಣವಾಗಿ ಪ್ರಮೇಯಗಳನ್ನು ಕಂಡುಕೊಂಡು ಸಿನಿಮಾ ತಯಾರಾಗುತ್ತಿವೆ.

"ಒಬ್ಬ ಸಾಮಾನ್ಯ ಪ್ರೇಕ್ಷಕನಿಗೆ ಸಿನಿಮಾದಲ್ಲಿ ಹಾಡು ಬಂದಾಗ ನಿಜವಾದ ಸಂಭ್ರಮವಿರುತ್ತದೆ. ಅದು ಅವನ ಕನಸಿನ ಲೋಕಕ್ಕೆ ಕೊಂಡೊಯ್ಯುವ ಸಾಧನ. ಕನಸಿನ ಲೋಕ ಎಂದು ಒಳ್ಳೆಯ ಅರ್ಥದಲ್ಲಿ ಹೇಳುತ್ತಿಲ್ಲ. ಅವನು ಯಾವ ರೀತಿ ಹಾಡಿಗೆ ಟ್ಯೂನಾಗಿರುವನೋ ಹಾಗೆ ಬಳಸಿದರೆ ಮಾತ್ರ ಅದರ ಉದ್ದೇಶ ಸಫಲವಾಗುತ್ತದೆ. ಬೇರೆ ರೀತಿ ಮಾಡಿದರೆ ಅದು ಅವನಿಗೆ ರುಚಿಸುವುದಿಲ್ಲ. ಹಾಡಿನ ವಿವರಗಳನ್ನು ಚಿತ್ರೀಕರಿಸುವ ವಿಧಾನದಲ್ಲಿ ಒಂದು ಮಾದಕತೆ ಇರುತ್ತದೆ. ಇದು ರಾಜ್‌ಕಪೂರ್‌ಗೆ ಗೊತ್ತಿತ್ತು. ಮಣಿರತ್ನಂಗೆ ಗೊತ್ತಿದೆ. ಅದು ಪ್ರೇಕ್ಷಕನನ್ನು ಚಾವಟಿಯಲ್ಲಿ ಹೊಡೆದಹಾಗೆ ಚುರುಕು ಮಾಡುತ್ತಿರುತ್ತದೆ. ಇದು ಸರಿಯೇ? ಇದು ಅಪಾಯಕಾರಿಯಲ್ಲವೇ? ಇದು ಸಿನಿಮಾವನ್ನು ದುರುಪಯೋಗಪಡಿಸಿಕೊಂಡಂತಲ್ಲವೇ? ಆದರೆ ಒಬ್ಬ ಒಳ್ಳೆಯ ನಿರ್ದೇಶಕ ಯಾವತ್ತೂ ಪ್ರವಾಹದ ವಿರುದ್ಧವೇ ಈಜುತ್ತಾನೆ. ಅವನಿಗೆ ಆ ಈಜು ಇಂಥಾ ಸಂದರ್ಭದಲ್ಲಿ ಮತ್ತಷ್ಟು ಕಷ್ಟವಾಗಬಹುದಷ್ಟೇ. ಸ್ವಲ್ಪ ಸಡಿಲ ಬಿಟ್ಟರೂ ಅವನು ಕೊಚ್ಚಿಕೊಂಡು ಹೋಗಿಬಿಡುತ್ತಾನೆ."[11]

ಜನ ಸಾಮಾನ್ಯನ ನಡುವೆ ಹುಟ್ಟಿದ ನಟ ಹೇಗೆ ಶ್ರೇಷ್ಠನಾಗುತ್ತಾನೋ ಒಬ್ಬ ನಿರ್ದೇಶಕನೂ ಕೂಡ ಜನಸಾಮಾನ್ಯನ ಭಾವನೆಗಳ ಮೂಲಕವೇ ಮುಖ್ಯವಾಗಬೇಕು. ಕನ್ನಡದ ಸಂದರ್ಭದಲ್ಲಿ ಪುಟ್ಟಣ್ಣ ಕಣಗಾಲರಂಥ ಕೆಲ ನಿರ್ದೇಶಕರು ಪ್ರೇಕ್ಷಕ ನಿರೀಕ್ಷೆಯ ಕಥನಗಳನ್ನು ಸಿನಿಮಾ ಕಥನಗಳಾಗಿ ಮಾಡಿಕೊಂಡು ಜನರ ನಡುವೆ ಬಂದರೆ, ಹಲವರು ಸಂಶೋಧನೆಯ ಮಾದರಿಯ, ಪರಿಭಾಷಾತ್ಮಕ ಅಕಾಡೆಮಿಕ್ ಚಿತ್ರಗಳನ್ನು ಮಾಡಿಕೊಂಡು ಜನರಿಂದ ದೂರ ಉಳಿದರು. ಚಿತ್ರರಂಗದ ಪರಿಭಾಷೆಯಲ್ಲಿ ಇವುಗಳಿಗೆ ಮಾಸ್ ಮತ್ತು ಕ್ಲಾಸ್ ಚಿತ್ರಗಳೆಂಬ ಹೆಸರಿಟ್ಟರು. ಒಟ್ಟು ಕನ್ನಡ ಚಲನಚಿತ್ರದಲ್ಲಿ ನಿರ್ದೇಶಕ ಕೇಂದ್ರಿತ ಮತ್ತು ಪ್ರೇಕ್ಷಕ ಕೇಂದ್ರಿತ ಸಿನಿಮಾಗಳ ಪರಂಪರೆ ಭಿನ್ನ ಭಿನ್ನ ಆಯಾಮಗಳಲ್ಲಿ ತೆರೆದುಕೊಂಡಿವೆ. ಈ ದೃಷ್ಟಿಯಲ್ಲಿ ಘಣಿರಾಮಚಂದ್ರ ಅವರ ಈ ಮುಂದಿನ ಮಾತುಗಳನ್ನು ಪರಿಶೀಲಿಸಬಹುದು. "ಸಿನಿಮಾದ ಉದ್ದೇಶ ಒಳಗಿನ ಭಾವನೆಗಳನ್ನು ಹೊರಗೆಡಹುವುದು. ಇದು ನಿರ್ದಿಷ್ಟ ವರ್ಗದ ಪ್ರೇಕ್ಷಕರನ್ನು ತಲುಪುವ ಉದ್ದೇಶಕ್ಕೆ ತಕ್ಕನಾದ ರೀತಿಯಲ್ಲಿ ರೂಪುಗೊಳ್ಳಬೇಕು. ಮನೋರಂಜನೆಯೇ ಒಂದು ಚಿತ್ರದ ಉದ್ದೇಶವಾಗಿದ್ದಾಗ ಅದು ರಂಜಿಸದೇ ಹೋದರೆ ಆ ಚಿತ್ರ ವಿಫಲ ಅಂತನೀತಿ ಹೇಳುವುದು, ಸಂದೇಶ ಸಾರುವುದು, ಚಿತ್ರದ ಉದ್ದೇಶ. ಆದರೆ ಅದು ಜನರನ್ನು ತಲುಪಬೇಕು."[12]

ನಿರ್ದೇಶಕ ಪ್ರೇಕ್ಷಕರ ನಿರೀಕ್ಷೆಯಲ್ಲಿ ಸಿನಿಮಾ ನಿರ್ದೇಶಿಸುವ ಹಾಗೂ ನಿರ್ಮಾಪಕರ ಸಿನಿಮಾ ನಿರ್ಮಿಸುವುದು. ಹಾಗೆಯೇ ಒಬ್ಬ ನಿರ್ದೇಶಕ ತನ್ನ ದೃಷ್ಟಿಕೋನವನ್ನು ಚಿತ್ರದಲ್ಲಿ ನಟರ ಮೂಲಕ ಹೇಳಿಸುವುದು ಎಲ್ಲವೂ ಮುಖ್ಯವೇ ಆಗಿದೆ. ಆದರೆ ಸಿನಿಮಾ ಮತ್ತು ರಂಗಭೂಮಿ ನಟ, ನಿರ್ದೇಶಕನಂತೆಯೇ ನೋಡುಗನ ಮಾಧ್ಯಮವಾಗಿರುವುದರಿಂದ ಪ್ರೇಕ್ಷಕ ಬಹಳ ಮುಖ್ಯವಾಗುತ್ತಾನೆ. ನಟ ರಾಜ್‌ಕುಮಾರ್ ಪದೇ ಪದೇ ಹೇಳುತ್ತಿದ್ದ "ಅಭಿಮಾನಿ ದೇವರುಗಳೇ" ಎಂಬ ಸಂಬೋಧನೆ ಈ ಅರ್ಥದಲ್ಲಿ ಮಹತ್ವ ಪಡೆಯುತ್ತದೆ.

ಸಾಮಾಜಿಕ ನೆಲೆ : ಕನ್ನಡ ಚಲನಚಿತ್ರರಂಗವು ಸಮಾಜದ ಅನೇಕ ಸಂಗತಿಗಳನ್ನು ತನ್ನೊಳಗೆ ಸೇರಿಸಿಕೊಂಡು ಸಮುದಾಯ ಪ್ರಜ್ಞೆಯಾಗಿದೆ. ಅಲ್ಲಿ ರಾಜಕೀಯ, ಚಾರಿತ್ರಿಕ,

ಸಾಮಾಜಿಕ, ಧಾರ್ಮಿಕ, ನೈತಿಕ ವಿಚಾರಗಳನ್ನು ವಿಶ್ಲೇಷಿಸಿದೆ. ಅಷ್ಟೇ ಅಲ್ಲದೆ ಸಮುದಾಯ ಸೂಕ್ಷ್ಮ ಘಟಕಗಳಾದ ವ್ಯಕ್ತಿ ಮತ್ತು ಅವನಿಗೆ ಸಂಬಂಧಿಸಿದ ವಿಷಯಗಳನ್ನು ಸಾಂಸ್ಕೃತಿಕ, ವೈಜ್ಞಾನಿಕ ನೆಲೆಯಲ್ಲಿ ತನ್ನ ಅಭಿವ್ಯಕ್ತಿಯ ಮೂಲಕ ಚರ್ಚಿಸಿದೆ. ಸಮಾಜದ ಭಾಗವಾಗುತ್ತಲೇ ಅನೇಕ ಸಂಘರ್ಷ ಪಲ್ಲಟಗಳ ಜೊತೆಯಲ್ಲಿಯೇ ಸಾಂಸ್ಕೃತಿಕ ಪ್ರಶ್ನೆಗಳನ್ನು ಎತ್ತುತ್ತಾ ಪ್ರತಿರೋಧದ ಭಾಗವಾಗಿದೆ. ಕನ್ನಡ ಸಿನಿಮಾದಲ್ಲಿ ಗ್ರಾಮಚಿತ್ರಣ, ನಗರಜೀವನ, ನಾಡು ನುಡಿಯ ಬಗೆಗಿನ ಧೋರಣೆ, ರಾಷ್ಟ್ರೀಯತೆಯ ಬಗೆಗಿನ ಅನುಸಂಧಾನ, ಭೂಮಿ, ಕುಟುಂಬ ಸಾಮಾಜಿಕ ಸಮಸ್ಯೆಗಳು, ಪ್ರಕೃತಿ, ಹೆಣ್ಣು, ಹೀಗೆ ಹತ್ತು ಹಲವಾರು ಸಾಮಾಜಿಕ, ಸಾಂಸ್ಕೃತಿಕ ಪ್ರಶ್ನೆಗೆ ಉತ್ತರ ಹುಡುಕುವ ಪ್ರಯತ್ನವಾಗಿ ಈ ಮಾಧ್ಯಮ ಶೋಧನೆಗೆ ಒಳಗಾಗುತ್ತಲೇ ಇದೆ. ಚರಿತ್ರೆಯನ್ನು ಮನುಷ್ಯ ನೆಲೆಯಲ್ಲಿ ಗಮನಿಸಿದಾಗ ಅವನು ಮಾಡಿರುವ ಪ್ರತಿಯೊಂದು ಆವಿಷ್ಕಾರವೂ ಪ್ರಯೋಗಶೀಲ ನೆಲೆಯಲ್ಲಿಯೇ, ಸಿನಿಮಾ ಕೂಡ ಮನುಷ್ಯ ಚರಿತ್ರೆಯನ್ನು ಪ್ರದರ್ಶನ ಮಾಧ್ಯಮಗಳ ಬಹಳ ಮುಖ್ಯ ಆವಿಷ್ಕಾರ.

ಕನ್ನಡ ಸಿನಿಮಾ ಒಳಗೊಂಡಿರುವ ಬಗೆಯನ್ನು ಗಮನಿಸಿದರೆ ಅದೊಂದು ಸಾಮಾಜಿಕ ಚರಿತ್ರೆಯನ್ನು ದಾಖಲಿಸುವ ಮಹತ್ವದ ಪ್ರಕಾರವೆಂಬುದು ಸ್ಪಷ್ಟವಾಗುತ್ತದೆ. ಆಯಾ ಕಾಲಘಟ್ಟದ ರಾಜಕೀಯ ಸಂಘರ್ಷಗಳನ್ನು ವ್ಯಕ್ತಿ ಸಮುದಾಯ ಹಾಗೂ ಸಾಂಸ್ಕೃತಿಕ ನೆಲೆಯಲ್ಲಿ ಪ್ರಶ್ನಿಸುವ. ಉತ್ತರದಾಯಿಯಾಗುವ ಅಥವಾ ರಾಜಕಾರಣದ ಭಾಗವಾಗಿ ಒಪ್ಪಿಕೊಳ್ಳುವಂತೆ ಸಿನಿಮಾ ಲೋಕ ಪ್ರತಿಕ್ರಿಯಿಸಿದೆ. ಧಾರ್ಮಿಕತೆಯ ಮೂಲಕ, ಸಮಾಜದ ಮುಖ್ಯ ಘಟಕವಾದ ಕುಟುಂಬದ ಮೂಲಕ ನೈತಿಕತೆಯನ್ನು ಹೇಳುವ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡಲು ಸಂದೇಶ ರವಾನೆ ಮಾಡುವಂತೆ ಅನೇಕ ಚಿತ್ರಗಳು ಕನ್ನಡ ಚಿತ್ರ ಸಂಸ್ಕೃತಿಯಲ್ಲಿ ಕಾಣುತ್ತವೆ.

ಧಾರ್ಮಿಕತೆ ಕುಟುಂಬದ ನೆಲೆಯಲ್ಲಿ ಮತ್ತು ವ್ಯಕ್ತಿ ನೆಲೆಯಲ್ಲಿ ಸಮಾಜವನ್ನು ಬಹುವಾಗಿ ಪ್ರಭಾವಿಸಿದೆ. ನೈತಿಕ ಬೋಧನೆಗಳಿಗೆ ಧಾರ್ಮಿಕ ಕಥೆಗಳನ್ನು ಹೇಳುವ 'ಬೇಡರಕಣ್ಣಪ್ಪ', 'ಸತ್ಯ ಹರಿಶ್ಚಂದ್ರ', 'ಭೂಕೈಲಾಸ', 'ಸತಿ ಸುಲೋಚನ', 'ಭಕ್ತ ಕುಂಬಾರ', 'ಸತೀ ಸಕ್ಕುಬಾಯಿ', 'ಶ್ರೀನಿವಾಸ ಕಲ್ಯಾಣ', 'ಭಕ್ತ ಸಿರಿಯಾಳ', ಚಿತ್ರಗಳನ್ನು ಒಳಗೊಂಡಂತೆ ಇತ್ತೀಚಿನ ಚಿತ್ರಗಳಾದ 'ರೇಣುಕಾ ಮಹಾತ್ಮೆ', 'ಶ್ರೀ ಮಂಜುನಾಥ', 'ಶಬರಿಮಲೆ ಸ್ವಾಮಿ ಅಯ್ಯಪ್ಪ', 'ಕೊಲ್ಲೂರು ಮೂಕಾಂಬಿಕಾ', 'ಮಂತ್ರಾಲಯ ಮಹಾತ್ಮೆ', 'ಶಿರಡಿ ಸಾಯಿಬಾಬಾ', ಮುಂತಾದ ಚಿತ್ರಗಳು ತೆರೆಕಂಡವು.

ಈ ಬಗೆಯ ಚಿತ್ರಗಳು ದೇವರ ಪವಾಡವನ್ನು ಹೇಳುತ್ತಾ, ಭಕ್ತಿಯನ್ನು ಉತ್ಪಾದಿಸುವ ಜನರ ಧಾರ್ಮಿಕ ನಂಬಿಕೆಯ ಭಾಗವಾಗಲು ಪ್ರಯತ್ನಸಿದ್ದವು. ಪುರಾಣ, ಧರ್ಮ, ಸಂಪ್ರದಾಯ ಆಚರಣೆಗಳೆಲ್ಲವೂ ಕುಟುಂಬ ವ್ಯವಸ್ಥೆಯ ಘಟಕವಾಗಿದ್ದು, ಈ ಮೂಲಕ ಕನ್ನಡ ಸಿನಿಮಾ ಭಕ್ತಿ ಪ್ರಧಾನತೆಯನ್ನು ಮೂಲ ಪರಿಕರವಾಗಿಟ್ಟುಕೊಂಡು ಚಲನಚಿತ್ರಗಳು ನಿರ್ಮಾಣವಾದವು. ಜನರು ರೂಢಿಸಿಕೊಂಡಿರುವ ಧಾರ್ಮಿಕ ರೂಪಗಳಿಗೆ ಕನ್ನಡ ಸಿನಿಮಾ ಮುಖ್ಯವಾಯಿತು ಹಾಗಾಗಿ ದೇವರುಗಳ ಪಾತ್ರಗಳಾದ ಶ್ರೀನಿವಾಸ, ರಾಘವೇಂದ್ರ, ರಾಮ, ಮುಂತಾದ ಪಾತ್ರಗಳು ಜನರ ಬದುಕಿನ ಭಾಗವಾದವು. ರಾಜ್‌ಕುಮಾರ್ ಅವರ ಶ್ರೀನಿವಾಸನ ಪಾತ್ರ, ಲೋಕೇಶ್ ಅವರ ಸಿರಿಯಾಳನ ಪಾತ್ರ, ಬಿ ಸರೋಜಾದೇವಿ, ಅವರ ಲಕ್ಷ್ಮೀ, ಪದ್ಮಾವತಿ ಪಾತ್ರ, ನಳಿನಿಯವರು ನಿರ್ವಹಿಸಿದ್ದ 'ಕವಿರತ್ನ ಕಾಳಿದಾಸ' ಚಲನಚಿತ್ರದ ಕಾಳಿದೇವಿ ಪಾತ್ರ, ಚಿರಂಜೀವಿಯ ಮಂಜುನಾಥನ, 'ಶಬರಿಮಲೆ ಸ್ವಾಮಿ

ಅಯ್ಯಪ್ಪ' ಪಾತ್ರ ನಿರ್ವಹಿಸಿದ ಸಂಜಯ್ ಹಾಗೂ ಇನ್ನೂ ಅನೇಕರು ಪ್ರೇಕ್ಷಕರಲ್ಲಿ ಮರೆಯಲಾಗದ ಪಾತ್ರಗಳಾಗಿ ಉಳಿದುಬಿಟ್ಟರು. ಧಾರ್ಮಿಕತೆಯ ಮೂಲಕ ಸಮಾಜದ ಭಾಗವಾಗಿರುವ ಅನೇಕ ಕನ್ನಡ ಚಲನಚಿತ್ರಗಳು ಧಾರ್ಮಿಕ ಕಥನಗಳ ಮೂಲಕವೇ ಪ್ರೇಕ್ಷಕ ಎಂಬ ವ್ಯಕ್ತಿ ನೆಲೆಗೆ ತಲುಪಲು ಕಾರ್ಯನಿರ್ವಹಿಸಿದೆ. ಅಷ್ಟೇ ಅಲ್ಲದೆ ಇದು ಸಾಮಾಜಿಕ ನಿರೀಕ್ಷೆಯೂ ಹೌದು. ಸಿನಿಮಾ ಚರಿತ್ರೆಯಲ್ಲಿ ಧಾರ್ಮಿಕತೆಯನ್ನು ಪ್ರಧಾನ ಧಾರೆಯನ್ನಾಗಿಸಿಕೊಂಡ ನಿರ್ಮಾಣವಾದ ಚಿತ್ರಗಳ ಪರಂಪರೆ ವಿಸ್ತಾರವಾಗಿದೆ.

ಕನ್ನಡ ಚಲನಚಿತ್ರ ರಾಷ್ಟ್ರೀಯತೆಯ ಪ್ರಜ್ಞೆಯನ್ನು ಹಲವು ಬಗೆಗಳಲ್ಲಿ ಮುಖ್ಯ ಅಭಿವ್ಯಕ್ತಿಯನ್ನಾಗಿಸಿಕೊಂಡಿದೆ. ಸಾಮಾಜಿಕ ಹಾಗೂ ರಾಜಕೀಯ ನೆಲೆಗಳನ್ನು ಶೋಧಿಸುತ್ತಾ ಚರಿತ್ರೆಯ ಮೂಲಕ ಕನ್ನಡ ಚಲನಚಿತ್ರ ಪ್ರತಿಕ್ರಿಯಿಸಿದೆ. ಜನಜೀವನ, ನಾಡು-ನುಡಿ, ದೇಶ ಪ್ರೇಮದ ಬಗೆಗಿನ ರಾಜಕೀಯ ನಿಲುವುಗಳನ್ನು ಪ್ರಕಟಪಡಿಸುವ ಅಭಿಮಾನದ ಸಾಧ್ಯತೆ ಎಂಬಂತೆ ಕನ್ನಡದ ಹಲವು ಚಿತ್ರಗಳು ರೂಪುಗೊಂಡಿವೆ. ಮಾಡಿ ಮಡಿದವರು, ಕಿತ್ತೂರ ರಾಣಿ ಚೆನ್ನಮ್ಮ ಸಿನಿಮಾಗಳಿಂದ ಮೊದಲುಗೊಂಡು ತೀರಾ ಇತ್ತೀಚಿನ ಸಂಗೊಳ್ಳಿ ರಾಯಣ್ಣ, ಕೂರ್ಮಾವತಾರ ಸಿನಿಮಾದ ತನಕ ಭಾರತೀಯ ಸಮಾಜದಲ್ಲಿಯ ರಾಷ್ಟ್ರೀಯತೆಯ ಪ್ರಜ್ಞೆಯನ್ನು ಸಿನಿಮಾ ಶೋಧಿಸುತ್ತಲೇ ಇದೆ. ಇದಲ್ಲದೆ ಚರಿತ್ರೆಯನ್ನು ಮುಖ್ಯ ಆಕರವಾಗಿಟ್ಟುಕೊಂಡು 'ಇಮ್ಮಡಿ ಪುಲಕೇಶಿ', 'ಶ್ರೀಕೃಷ್ಣ ದೇವರಾಯ', 'ಅಮರಶಿಲ್ಪಿ ಜಕಣಾಚಾರಿ' ಮುಂತಾದ ಚಿತ್ರಗಳು ಕನ್ನಡ ನಾಡು ನುಡಿಯ ಬಗ್ಗೆ ಚರ್ಚಿಸುತ್ತಲೇ ಇತಿಹಾಸದ ವಿವಿಧ ಮಗ್ಗಲುಗಳನ್ನು ಪ್ರೇಕ್ಷಕರಿಗೆ ತಲುಪಿಸಲು ಪ್ರಯತ್ನಿಸಿತು.

ಸಿನಿಮಾ ಗ್ರಾಮೀಣ ಬದುಕು ಮತ್ತು ನಗರದ ಬದುಕುಗಳನ್ನೊಳಗೊಂಡ ಅನೇಕ ಚಲನಚಿತ್ರಗಳಲ್ಲಿ ಮನುಷ್ಯನ ಬದುಕಿನ ಅನೇಕ ಸಂಘರ್ಷವನ್ನು ದಾಖಲಿಸುತ್ತಲೇ ಹಲವು ಪ್ರಶ್ನೆಗಳನ್ನು ಎತ್ತಿದೆ. ಆಧುನಿಕತೆಗೆ ತೆರೆದುಕೊಳ್ಳುತ್ತಿರುವ ಹಳ್ಳಿಯ ಬದುಕು, ನಗರದೆಡೆಗೆ ಆಕರ್ಷಣೆ, ಶಿಕ್ಷಣ ಮತ್ತು ಮೌಢ್ಯ, ಕೌಟುಂಬಿಕ ಸಂಘರ್ಷಗಳು, ಗ್ರಾಮ ಮತ್ತು ನಗರ ಸಂಸ್ಕೃತಿಗಳ ನಡುವಿನ ಅಂತರ ಮತ್ತು ಇದರ ನಡುವೆ ಮೂಡುವ ಅಧಿಕಾರದ ಸ್ವರೂಪವನ್ನು ಹಲವು ಕನ್ನಡದ ಸಿನಿಮಾಗಳಲ್ಲಿ ಚಿತ್ರಿತವಾಗಿದೆ. ಮೇಯರ್ ಮುತ್ತಣ್ಣ, ಬಂಗಾರದ ಮನುಷ್ಯ, ಮಣ್ಣಿನ ಮಗ, ಪಟ್ಟಣಕ್ಕೆ ಬಂದ ಪತ್ನಿಯರು, ಪುಟ್ನಂಜ, ಭೂತಯ್ಯನ ಮಗ ಅಯ್ಯು, ಭೂತಾಯಿಯ ಮಕ್ಕಳು, ಕೂಡಿ ಬಾಳಿದರೆ ಸ್ವರ್ಗ ಸುಖ, ಕಣ್ತೆರೆದು ನೋಡು, ಬೋರೇಗೌಡ ಬೆಂಗಳೂರಿಗೆ ಬಂದ ಮುಂತಾದ ಚಿತ್ರಗಳು ಮೇಲು ಕೀಳು, ಯಜಮಾನ್ಯ, ಅನಕ್ಷರತೆ, ಗ್ರಾಮ ಜೀವನ, ಸ್ವದೇಶಿ, ಸ್ವಾತಂತ್ರ್ಯ, ಮುಕ್ತತೆ, ಮನುಷ್ಯ ಸಂಬಂಧಗಳು, ರೈತ, ಹೆಣ್ಣು, ಕುಟುಂಬ, ಸೋದರ ವಾತ್ಸಲ್ಯ, ತಂದೆ ತಾಯಿಯ ಬಗೆಗಿನ ಗೌರವ, ಕುಟುಂಬ ಒಡೆಯುತ್ತಿರುವ ಕಾರಣಗಳು, ಉಡುಗೆಯ ಬಗೆಗಿನ ರಾಜಕಾರಣ, ಮಾತು, ನಡೆವಳಿಕೆ ಇತ್ಯಾದಿ ವಿಚಾರಗಳು ಮುಖ್ಯವಾಗುತ್ತಲೇ ಅನೇಕ ಸಾಂಸ್ಕೃತಿಕ ಸಂಘರ್ಷಗಳನ್ನು ದಾಖಲಿಸುವಂತೆ ಸಿನಿಮಾಗಳಲ್ಲಿ ರೂಪುಗೊಂಡಿರುವುದನ್ನು ಕಾಣಬಹುದು. ಇದರೊಟ್ಟಿಗೆ ನಗರದ ಜೀವನ ಕ್ರಮ ಆಧುನಿಕತೆಯ ರೂಪವಾಗಿ ಗ್ರಾಮ ಸಂಸ್ಕೃತಿಯ ಮೇಲೆ ಮತ್ತು ನಗರದಲ್ಲಿನ ಬದಲಾದ ಜೀವನ ಕ್ರಮದಲ್ಲಿ ಉಂಟು ಮಾಡಿದ ಅಂತರ ಮತ್ತು ತಲ್ಲಣಗಳನ್ನು ಅನೇಕ ಸಿನಿಮಾಗಳು ಸಾಕ್ಷೀಕರಿಸಿವೆ. ಹೊಸ ಪರಿಸರಕ್ಕೆ ಹೊಂದಿಕೊಳ್ಳಲಾಗದೆ ವಾಸ್ತವದ ಬದುಕು ಅನೇಕ ಸಂಕೀರ್ಣತೆಯಲ್ಲಿ ಸಿಲುಕಿಕೊಳ್ಳುವ ಮೋಸದ ತಾಣವಾಗಿ ಕಾಣುವ ನಗರಗಳು ಸಂಬಂಧಿಗಳಿಗೆ ಯಾವುದೇ ಬೆಲೆಯನ್ನು ನೀಡದ ಆಧುನಿಕರು ಎನಿಸಿಕೊಳ್ಳುವ

ನಗರದ ಜನರ ವರ್ತನೆ ಇವೆಲ್ಲದರಿಂದ ಪ್ರಭಾವಕ್ಕೊಳಗಾಗಿ ವ್ಯಕ್ತಿಯು ಮತ್ತೆ ತನ್ನ ಪರಿಸರಕ್ಕೆ ತೆರಳುವ ವಸ್ತುವುಳ್ಳ ಅನೇಕ ಚಿತ್ರಗಳು ಆಧುನಿಕತೆಯ ಮತ್ತು ನಾಗರೀಕತೆಯ ಹಲವು ಮೂಲಗಳನ್ನು ಪರಿಚಯಿಸಿವೆ. ಹಾಗೆಯೇ ಮಿತಿಯನ್ನು ದಾಖಲು ಮಾಡಿರುತ್ತವೆ. ವ್ಯಕ್ತಿಯೊಬ್ಬ ನಗರದಲ್ಲಿ ಶಿಕ್ಷಣ ಕಲಿತು ತನ್ನ ಹಳ್ಳಿಗೆ ತೆರಳಿ ಅಲ್ಲಿನ ಸ್ಥಳೀಯ ರಾಜಕಾರಣ, ಅಸಮಾನತೆ, ಬದುಕಿನ ಬಗೆಗಿನ ವಿಶ್ವಾಸ, ಜ್ಞಾನ ಹಾಗೂ ತಿಳಿವಳಿಕೆಯ ಸಾಧ್ಯತೆಯೂ ಕೂಡ ಕನ್ನಡ ಸಿನಿಮಾದಲ್ಲಿವೆ. 'ಕಾಕನಕೋಟೆ' ಚಿತ್ರದಂತಹ ಅನೇಕ ಚಲನಚಿತ್ರಗಳು ಕನ್ನಡ ಸಿನಿಮಾ ಚರಿತ್ರೆಯಲ್ಲಿ ಪ್ರಯೋಗಗೊಂಡಿವೆ.

ಸಮಾಜ ಮತ್ತು ಸಿನಿಮಾ ಭಿನ್ನ ಭಿನ್ನ ಸಾಧ್ಯತೆಗಳಲ್ಲ. ಲೋಕದೃಷ್ಟಿ ಮತ್ತು ಸಿನಿಮಾ ದೃಷ್ಟಿ ಪರಸ್ಪರ ಎರಡೂ ಒಂದರೊಳಗೊಂದು ಬೆರೆತಿದ್ದರೆ ಅದು ಕಾಲದ ಸತ್ಯವನ್ನು ಹೇಳುವ ಸಿನಿಮಾವಾಗುತ್ತದೆ ಮತ್ತು ಕಲಾಕೃತಿಯಾಗುತ್ತದೆ. ಸಿನಿಮಾಗಳು ಮನುಷ್ಯ ಸಮಾಜದ, ಮಾನವ ಚರಿತ್ರೆಗಳನ್ನು ಸಮಕಾಲೀನಗೊಳಿಸಲು ಪ್ರಯತ್ನಿಸುತ್ತಿರುತ್ತವೆ. ಘಟಿಸಿ ಹೋದ ಪ್ರತಿಯೊಂದು ಸಂದರ್ಭಕ್ಕೆ, ಘಟನೆಗೆ ಪೂರಕವಾದ ಎಲ್ಲಾ ಅಂಶಗಳನ್ನು ಚರಿತ್ರೆಯೊಳಗಿಂದ ಹೆಕ್ಕಿ ಸಿನಿಮಾ ಪ್ರತಿಕ್ರಿಯಿಸುತ್ತದೆ. ಸಮಾಜ ಪರವಾದ ಮತ್ತು ವಿಲೋಮವಾದ ಎರಡೂ ಬಗೆಯ ಮಂಡನಾ ಕ್ರಮಗಳುಂಟು "ಈ ಹೊತ್ತು ನಮ್ಮಲ್ಲಿ ಬಹುಸಂಖ್ಯಾತರ ಕ್ರೌರ್ಯ ಎಲ್ಲ ರೀತಿಯಲ್ಲೂ ಆಗತ್ತೆ. ಅದರ ಬಗ್ಗೆ ನಾನೊಬ್ಬನೆ ಅಲ್ಲ ಎಷ್ಟೋ ಜನ ಕಲಾಕಾರರಲ್ಲಿ ಈ ಪ್ರಶ್ನೆಗಳು ಮಿಡಿಯುತ್ತಿವೆ. ಸೋಲುವುದಕ್ಕೆ ಆಗುತ್ತದೆಯೋ? ನಮ್ಮಲ್ಲಿ ಹೆಣ್ಣು ಮಗಳೊಬ್ಬಳು ಮದುವೆಯಾಗದೆ ಹೊರಗೆ ಹೋಗಿ ಬಸಿರಾಗಿ ಬಂದರೆ 'ಬಾರಮ್ಮ ನೀ ಮದುವೆಯಾಗದಿದ್ದರೂ ಪರವಾಗಿಲ್ಲ ನಿನ್ನ ಮಗು ನಾನು ಸಾಕುತ್ತೇನೆ. ನನ್ನ ತಂಗಿಯಂತೆ ಎಂದು ಹೇಳಲಿಕ್ಕೆ ಸಾಧ್ಯವಾಗುತ್ತದೆಯೇ? ಇದನ್ನು ನಾವು ಸಿನಿಮಾ ಮಾಡಲು ಆಗುತ್ತದೆಯೇ?"[13] ಈ ಮಾತುಗಳ ಮೂಲಕವೇ ಸಮಾಜವನ್ನು ಗ್ರಹಿಸುತ್ತಾ ಸಮಾಜದ ಸ್ಥಿತಿಯನ್ನು ಮತ್ತು ಜೀವಪರವಾಗಬೇಕಾದ ಧ್ವನಿಯನ್ನು ದಾಖಲಿಸಲು ಆಗದ ಸಾಮಾಜಿಕ ಹಿಡಿತದಲ್ಲಿ ಕನ್ನಡ ಚಲನಚಿತ್ರವಿದೆ. ಸಮಾಜ ಕೇಂದ್ರಿತ ಅನೇಕ ಚಲನಚಿತ್ರಗಳು ಜೀವಪರತೆಯ ಪ್ರಧಾನ ಆಶಯವನ್ನು ಹೊಂದಿವೆ. ಇನ್ನೂ ಅನೇಕ ಪಲಾಯನವಾದಿ ಸಿನಿಮಾಗಳೂ ಇವೆ. ಸಾಮಾಜಿಕ ಸಂದರ್ಭವನ್ನು ಮತ್ತಷ್ಟು ಹೊಗಳುತ್ತಾ ಹುಸಿ ಆದರ್ಶಕೇಂದ್ರಿತ ನೆಲೆಯಲ್ಲಿ ಹಲವು ಸಿನಿಮಾಗಳು ನಿರ್ಮಾಣವಾಗುತ್ತಿವೆ. ವ್ಯಕ್ತಿ ಕೇಂದ್ರಿತ ಬಯಕೆ ಮತ್ತು ಮನೋಲೋಕದ ಸ್ವತಂತ್ರ ನಿರೀಕ್ಷೆಗಳು ಬಹುಜನ ಒಪ್ಪುವ ಹಾಗೆ ಮಾಡಲಾಗದೆ ಕೆಲ ಸಿನಿಮಾಗಳು ಸೋಲುತ್ತಿವೆ. ಸಮೂಹಪ್ರಜ್ಞೆ ಎನ್ನುವ ಪರಿಕರ ಕನ್ನಡ ಸಿನಿಮಾ ರಂಗದಲ್ಲಿ ಹೆಚ್ಚು ಕೆಲಸಮಾಡುತ್ತಲೇ ವ್ಯಕ್ತಿನೆಲೆಗೆ ತಲುಪಬೇಕಾದ ಸಾಧ್ಯತೆಯನ್ನು ಪ್ರಮುಖವಾಗಿ ಒಳಗೊಳ್ಳಬೇಕಿದೆ. ಸಾಮಾಜಿಕ ಪ್ರತಿಕ್ರಿಯೆ ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾಗಿ ವ್ಯಕ್ತಿಯೊಬ್ಬನ್ನನ್ನೂ ತಲುಪುವುದು ಕೂಡ ಸಿನಿಮಾದ ಬಹಳ ಮುಖ್ಯ ಜವಾಬ್ದಾರಿ. ಕನ್ನಡ ಸಿನಿಮಾ ಚರಿತ್ರೆಯಲ್ಲಿ ಆರಂಭದಿಂದಲೂ ಹಲವಾರು ಸ್ಥಿತ್ಯಂತರಗಳನ್ನು ಹೊಂದುತ್ತಲೇ ಆಯಾಕಾಲದ ನಿರೀಕ್ಷೆಗಳಿಗೆ ಅನುಗುಣವಾಗಿ ಪ್ರತಿಕ್ರಿಯಿಸಿದೆ. ಈ ಪ್ರತಿಕ್ರಿಯೆಗೆ ಸಮಾಜವೂ, ವ್ಯಕ್ತಿಯೂ ಮುಖ್ಯ ಆಕರಗಳಾಗಿ ಕನ್ನಡ ಸಿನಿಮಾ ದುಡಿಸಿಕೊಂಡಿದೆ.

* * *

ಚಲನಚಿತ್ರಗಳಲ್ಲಿ ತಾಂತ್ರಿಕವಾಗಿ ಕೇವಲ ಚಿತ್ರಗಳ ಚಲನೆ ಮಾತ್ರವಲ್ಲದೆ ಒಂದು ಕಥನದ ಚಲನೆ, ಅಭಿನಯದ ಚಲನೆ, ಸಾಮಾಜಿಕ ಚಲನೆ ಅಥವಾ ಮನುಷ್ಯಲೋಕದ ವಿವಿಧ ಆವರಣಗಳ ಚಲನೆಯಾಗಿರುತ್ತದೆ. ಚಿತ್ರಗಳು ಎಂದರೆ ಒಂದು ನಿರ್ದಿಷ್ಟ ಕಥನದ ವಿವಿಧ ಚೌಕಟ್ಟುಗಳು ಎಂದು ಭಾವಿಸಬಹುದು. ಆದರೆ ಚಿತ್ರಗಳು ಕಥೆಯನ್ನು ಹೇಳಲು ಸಂದರ್ಭ ಸನ್ನಿವೇಶಕ್ಕೆ ಅನುಗುಣವಾಗಿ ಪಾತ್ರಗಳ ಅಭಿನಯ ಅಗತ್ಯ. ಏಕೆಂದರೆ ಕಥನಕ್ಕೆ ಮಾತು ಬರುವುದೇ ಮಾತನಾಡುವವರು ಅಭಿನಯಿಸಿದಾಗ ಮಾತ್ರ. ಇಲ್ಲವೇ ಯಾವುದೇ ಪಠ್ಯವನ್ನು ಕೇವಲ ಕಲ್ಪಿಸಿಕೊಂಡು ಮನೋಭೂಮಿಕೆಯಲ್ಲಿ ಸ್ಥಾಪಿಸಿಕೊಳ್ಳಬೇಕಾಗುತ್ತದೆ. ಹೀಗಾದಾಗ ಕಥನವನ್ನು ಪ್ರದರ್ಶನವಾಗಿ ತೋರಿಸುವೆಡೆ ಅಭಿವ್ಯಕ್ತಿ ಸೋಲುತ್ತದೆ. ಚಲನಚಿತ್ರ ತುಂಬಾ ಶಕ್ತಿಶಾಲಿಯುತವಾದ ಮಾಧ್ಯಮವಾಗಿ ಬೆಳೆದಿದೆ. ಈ ಸಾಧ್ಯತೆಗಳನ್ನು ಪ್ರಸ್ತಾಪಿಸುವ ಯು.ಆರ್.ಅನಂತಮೂರ್ತಿಯವರ ಈ ಮಾತುಗಳು ಮುಖ್ಯವಾಗಿವೆ. "ಚಲಿಸುವ ಚಿತ್ರಗಳ ಮೂಲಕ, ಕಿವಿಯ ಮೂಲಕ, ಸಿನಿಮಾ ನಮಗೆ ಅನುಭವವನ್ನು ಸೃಷ್ಟಿಸಿಕೊಡುತ್ತದೆ. ಕಣ್ಣಿನ ಮೂಲಕ ನಮಗೆ ಸ್ಪಷ್ಟವಾಗಿ ಕಂಡದ್ದೂ ಕೂಡ ವಸ್ತು ಪ್ರಪಂಚದ ವಸ್ತುವಾಗಿ ಮಾತ್ರ ಉಳಿಯದೆ, ಒಂದು ಕಲಾಕೃತಿ ದೃಶ್ಯವಾಗುವುದೇ ಅಮೂರ್ತವಾದುದನ್ನು ಹೊಳೆಯಿಸುವುದೇ ಸಿನಿಮಾ ನಮಗೆ ಕೊಡುವ ಮಹತ್ವದ ಅನುಭವ."[14] ಅನುಭವ ಚಲನಚಿತ್ರದ ಮೂಲಕ ಪ್ರೇಕ್ಷಕನಿಗೆ ತಲುಪಬೇಕಾದರೆ ಕಥೆ, ದೃಶ್ಯ, ಶಬ್ದ, ದೃಷ್ಟಿ, ಸಾಹಿತ್ಯ, ನಿರ್ದೇಶನ, ಕಥಾ ವಿಷಯಕ್ಕೆ ಸಂಬಂಧಪಟ್ಟ ಎಲ್ಲವುಗಳೂ ಮುಖ್ಯವಾದ ಘಟಕಗಳಾದರೂ ಪ್ರದರ್ಶಕ ಸಿನಿಮಾದಲ್ಲಿ ಅಭಿನಯವು ಪ್ರಧಾನ ಘಟಕವಾಗುತ್ತದೆ.

"ಸಿನಿಮಾ ಎನ್ನುವ ಮಾಧ್ಯಮವೇ ಅತ್ಯಂತ ಸಂಕೀರ್ಣ. ಅಂತೆಯೇ ಕನ್ನಡ ಸಿನಿಮಾ ಕೂಡ. ಕನ್ನಡ ಸಿನಿಮಾಕ್ಕೆ ಇಲ್ಲಿ ಒಂದು ತಂತ್ರಜ್ಞಾನವಿದೆ, ವಸ್ತುವಿದೆ. ಒಂದು ಉದ್ಯಮವಿದೆ ಮತ್ತು ಇದೆಲ್ಲದರ ಜೊತೆ ಸಿನಿಮಾ ಭಾಷೆಯ ಸಾಂಗತ್ಯವಿದೆ. ಇಂತಹ ಕನ್ನಡ ಸಿನಿಮಾ ವಿಶಿಷ್ಟ ಮತ್ತು ಅನನ್ಯಗೊಳ್ಳುವುದು, ನಾವು ಕನ್ನಡವೆಂದು ಪರಿಭಾವಿಸುವ ಒಂದು ಸ್ಥಿತಿ ಮತ್ತು ಅನುಭವವನ್ನು ಈ ಸಿನಿಮಾ ಸಾಧ್ಯತೆಯು ಪ್ರತಿನಿಧಿಸುವ ಕಾರಣ. ಕನ್ನಡ ಸಿನಿಮಾ ಎಂಬುದೊಂದಿದೆಯೇ? ಎಂಬ ಪ್ರಶ್ನೆಯನ್ನು ಈ ಸಂದರ್ಭದಲ್ಲಿ ನಾವು ಕೇಳಿಕೊಳ್ಳಬೇಕಾಗುತ್ತದೆ ಕೂಡ. ಇದಕ್ಕೆ ಉತ್ತರರೂಪಿಯಾಗಿ ನಾವು ಅನಿರ್ದಿಷ್ಟತೆಯನ್ನೇ ಪಡೆಯಬೇಕಾಗುತ್ತದೆ. ಕನ್ನಡ ಸಿನಿಮಾ ಎಂಬ ಒಂದು ಸಾಧ್ಯತೆಯಿಲ್ಲ. ಬದಲು ಕನ್ನಡ ಸಿನಿಮಾಗಳು ಎಂಬ ಬಹುಸಾಧ್ಯತೆಗಳಿವೆ."[15] ಇಲ್ಲಿ ಕನ್ನಡವೆನ್ನುವ ಬಹುಮುಖಿ ನೆಲೆಯನ್ನು ಕನ್ನಡ ಸಿನಿಮಾ ಸಂದರ್ಭದಲ್ಲಿ ಏಕತ್ರವಾಗಿ ಗ್ರಹಿಸಲು ಸಾಧ್ಯವಿಲ್ಲ. ಹಾಗಾಗಿ ಕನ್ನಡ ಸಿನಿಮಾ ಚರಿತ್ರೆಯೂ ಕೂಡ ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಬಹುಮುಖತೆಯನ್ನು ಪಡೆದಿವೆ. ಕನ್ನಡ ಸಿನಿಮಾ ತಯಾರಿಕೆಯನ್ನು ಕುರಿತಂತೆ ಒಳಗೊಳ್ಳುವ ನಟ-ನಟಿ, ನಿರ್ದೇಶಕ, ಪ್ರಾದೇಶಿಕತೆ, ಭಾಷೆ, ಸಾಹಿತ್ಯ ಕೃತಿ ಎಲ್ಲವೂ ತನ್ನ ಅನುಭವಕ್ಕೆ ದಕ್ಕಿದ ಸಾಂಸ್ಕೃತಿಕತೆಯನ್ನು ಪ್ರತಿನಿಧಿಸುತ್ತಿರುತ್ತದೆ. ಹಾಗಾಗಿ ಹಲವು ಕನ್ನಡಗಳು ಇರುವುದರಿಂದ ಇಲ್ಲಿ ವ್ಯಕ್ತಿನೆಲೆಯು, ಸಮಷ್ಟಿ ನೆಲೆಯು, ಕಲಾಭಿವ್ಯಕ್ತಿಯ ದೃಷ್ಟಿಯಿಂದ ಮುಖ್ಯವಾಗುತ್ತದೆ. ಈ ನಿಟ್ಟಿನಲ್ಲಿ ನಟ-ನಟಿಯರನ್ನು ಕೇಂದ್ರವಾಗಿಟ್ಟುಕೊಂಡೂ ಕೂಡ ಕನ್ನಡ ಸಿನಿಮಾ ಚರಿತ್ರೆ ಮತ್ತು ಸಂಸ್ಕೃತಿಯನ್ನು ಗ್ರಹಿಸಬಹುದಾಗಿದೆ.

ಟಿಪ್ಪಣಿಗಳು ಮತ್ತು ಆಕರ ಸೂಚಿ

1. ಮಾಧವ ಐತಾಳ್, 1994, 'ಒಡೆದ ಕನ್ನಡಿಯ ಛಿದ್ರ ಮುಖಗಳು', (ಸಂ.) ರವಿಕುಮಾರ್. **ಸಿನಿಮಾ (ಆಶಯ–ಅಭಿವ್ಯಕ್ತಿ),** ಪ್ರತಿಭಾ ಯುವ ವೇದಿಕೆ: ಬೆಂಗಳೂರು. ಪು.11.
2. ಮಾಧವಪ್ರಸಾದ್ ಎಂ., (ಅನು.) ವಿಜಯ್ ಕುಮಾರ್ ಎಂ.ಬೋರಟ್ಟಿ, 2014, 'ಕನ್ನಡ ಸಿನೆಮಾದಲ್ಲಿ ರಾಷ್ಟ್ರೀಯ ಅಸ್ಮಿತೆಯ ರಾಜಕೀಯ', **ಲೋಕಜ್ಞಾನ–5,** ಪ್ರಸಾರಾಂಗ, ತುಮಕೂರು ವಿವಿ: ತುಮಕೂರು. ಪು.61.
3. ವೈಕುಂಠರಾಜು ಜಿ.ವಿ., 2008, **ಸಿನಿಮಾ ಐವತ್ತು ವರ್ಷಗಳ ಕನ್ನಡ ಚಿತ್ರರಂಗ,** ಸನತ್ ಪ್ರಕಾಶನ: ಬೆಂಗಳೂರು. ಪು.21.
4. ಮಾಧವಪ್ರಸಾದ್ ಎಂ., 2014, ಪೂರ್ವೋಕ್ತ, ಪು.61.
5. ಅದೇ. ಪು.63.
6. ಗಂಗಾಧರ ಮೊದಲಿಯಾರ್, 1998, **ಕನ್ನಡ ಸಿನಿಮಾ,** ಕನ್ನಡ ಪುಸ್ತಕ ಪ್ರಾಧಿಕಾರ: ಬೆಂಗಳೂರು. ಪು.136.
7. ಶ್ರೀಪಾದ್ ಭಟ್, 2016, **ಬಿಸಿಲು ಬಯಲು ನೆಳಲು,** ಅಹರ್ನಿಶಿ ಪ್ರಕಾಶನ: ಶಿವಮೊಗ್ಗ. ವಿವೇಕ್ ತಾರಕೇಶ್ವರ್ ಅವರ ಮುನ್ನುಡಿಯಲ್ಲಿ.
8. ವಿಜಯನಾರಸಿಂಹ (ಸಾಹಿತ್ಯ), ಅರಸುಕುಮಾರ್. ಜಿ.ಎ.(ನಿ), 1967, **'ಬಂಗಾರದ ಹೂವು', ಯ್ಯೂಟ್ಯೂಬ್.**
9. ಶಾರುಖ್‌ಖಾನ್ (ನಟ), 31 ಆಗಸ್ಟ್ 2018, **ವಿಜಯ ಕರ್ನಾಟಕ (ದಿನಪತ್ರಿಕೆ),** ಲವಲವಿಕೆ(ಪುರವಣಿ). ಪು.4.
10. ಲೀಲಾರಾವ್, 1994, 'ಬದಲಾಗುತ್ತಿರುವ ಚೌಕಟ್ಟಿನಲ್ಲಿ ಶಾಶ್ವತ ಮೌಲ್ಯಗಳು– ಭಾರತೀಯ ಮಹಿಳೆ ಮತ್ತು ಸಿನಿಮಾ,' (ಸಂ.) ರವಿಕುಮಾರ. ನ., **ಸಿನಿಮಾ (ಆಶಯ, ಅಭಿವ್ಯಕ್ತಿ),** ಪ್ರತಿಭಾ ಯುವ ವೇದಿಕೆ: ಬೆಂಗಳೂರು. ಪುಟ.109.
11. ಗಿರೀಶ್ ಕಾಸರವಳ್ಳಿ, 1997, 'ಪ್ರತಿಮಾ ಲೋಕದಲ್ಲೊಂದು ಪಯಣ'. (ಸಂ.) ವಿ.ಶೈಲಜ, ಎನ್.ಎಸ್.ಶ್ರೀಧರ ಮೂರ್ತಿ. **ಸಂಚಯ– ಚಲನಚಿತ್ರ ವಿಶೇಷಾಂಕ,**: ಬೆಂಗಳೂರು. ಪು.5.
12. ಫಣಿ ರಾಮಚಂದ್ರ, 1997, 'ತಲುಪುವ ತವಕ', (ಸಂ.) ವಿ.ಶೈಲಜ, ಎನ್.ಎಸ್.ಶ್ರೀಧರ ಮೂರ್ತಿ. **ಸಂಚಯ– ಚಲನಚಿತ್ರ ವಿಶೇಷಾಂಕ:** ಬೆಂಗಳೂರು. ಪು.11.
13. ರಾಜೀವ್ ತಾರಾನಾಥ್, 1994, 'ಭಾರತೀಯ ಸಂಸ್ಕೃತಿ ಸಂಗೀತ–ಸಿನಿಮಾ', (ಸಂ.) ರವಿಕುಮಾರ.ನ., **ಸಿನಿಮಾ (ಆಶಯ, ಅಭಿವ್ಯಕ್ತಿ),** ಪ್ರತಿಭಾ ಯುವ ವೇದಿಕೆ: ಬೆಂಗಳೂರು. ಪು.109.
14. ಅನಂತಮೂರ್ತಿ ಯು.ಆರ್, 1997, 'ಸಂಸ್ಕಾರ – ಸಿನಿಮಾ ಕುರಿತು' (ಪಟ್ಟಿಕೆಯಲ್ಲಿನ ಹೇಳಿಕೆ). **ಸಂಚಯ– ಚಲನಚಿತ್ರ ವಿಶೇಷಾಂಕ:** ಬೆಂಗಳೂರು. ಪು.10.
15. ಪ್ರದೀಪ್ ಕುಮಾರ್ ಶೆಟ್ಟಿ, 2016, 'ಕನ್ನಡ ಸಿನಿಮಾ ಚರಿತ್ರೆ : ಸಮಾಜ, ಸಂಸ್ಕೃತಿ ಮತ್ತು ರಾಜಕಾರಣ,' (ಸಂ.) ಚಂದ್ರಶೇಖರ್ ಎಸ್., ಸುರೇಂದ್ರರಾವ್ ಬಿ., **ಕರ್ನಾಟಕದ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಕೆಲವು ನೆಲೆಗಳು ಸಂಪುಟ–12,** ಕುವೆಂಪು ಭಾಷಾ ಭಾರತಿ ಪ್ರಾಧಿಕಾರ: ಬೆಂಗಳೂರು. ಪು.241.

■

ITIHASA DARPANA (Quarterly)
A Peer Reviewed Journal of Historical Research in Kannada
ISSN 2321-3590
Book No.: 37-38.
April – September 2018
Author: Vithal Potdar
Title: şāsanatajñ Prof. Shriniva ritti

ಶಾಸನತಜ್ಞ ಪ್ರೊ. ಶ್ರೀನಿವಾಸ ರಿತ್ತಿ
(೧೯೨೯-೨೦೧೮)

ಇತ್ತೀಚೆಗೆ ನಮ್ಮನ್ನಗಲಿದ ಪ್ರೊ. ಶ್ರೀನಿವಾಸ ರಿತ್ತಿಯವರು ಶಾಸನಶಾಸ್ತ್ರ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿ ಹೋಗಿದ್ದಾರೆ. ಭೌತಿಕವಾಗಿ ಅವರು ನಮ್ಮ ಮಧ್ಯದಲ್ಲಿರದಿದ್ದರೂ ಭಾರತೀಯ ಇತಿಹಾಸಕ್ಕೆ ತಮ್ಮದೇ ಆದ ವಿಶಿಷ್ಟವಾದ ರೀತಿಯಲ್ಲಿ ಕೊಡುಗೆಯನ್ನು ನೀಡಿದ್ದಾರೆ. ವಿಶೇಷವಾಗಿ ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನಶಾಸ್ತ್ರ ವಿಷಯಗಳಿಗೆ ಸಂಬಂಧಿಸಿದಂತೆ ಅವರು ರಚಿಸಿರುವ ಗ್ರಂಥಗಳು ಸದಾಕಾಲ ಸಂಶೋಧಕರಿಗೆ ಪ್ರಮುಖ ಆಕರ ಗ್ರಂಥಗಳಾಗಿ ಮಾರ್ಗದರ್ಶಕವಾಗಿವೆ.

ಜೂನ್ 8. 1929ರಂದು ಹಾವೇರಿಯಲ್ಲಿ ಜನಿಸಿದ ರಿತ್ತಿಯವರು ತಮ್ಮ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಹಾವೇರಿಯಲ್ಲಿ ಮುಗಿಸಿದರು. ಧಾರವಾಡದ ಸುಪ್ರಸಿದ್ಧ ಕರ್ನಾಟಕ ಕಾಲೇಜಿನಿಂದ ಸಂಸ್ಕೃತ ಮತ್ತು ಕನ್ನಡ ವಿಷಯಗಳೊಂದಿಗೆ ಬಿ.ಎ. ಪದವಿಯನ್ನು ಮತ್ತು ಕರ್ನಾಟಕ ವಿಶ್ವವಿದ್ಯಾಲಯದಿಂದ ಸಂಸ್ಕೃತ ಮತ್ತು ಪ್ರಾಕೃತ ಐಚ್ಛಿಕ ವಿಷಯಗಳ ಜೊತೆಗೆ ಎಂ.ಎ. ಪದವಿಯನ್ನು ಪ್ರಥಮ ಶ್ರೇಣಿಯಲ್ಲಿ ಪಡೆದರು. ತದನಂತರ 1953–55ರವರೆಗೆ ಆಗಿನ ಮುಂಬಯಿ ಸರಕಾರದ ಕಾನೂನು ಇಲಾಖೆಯಲ್ಲಿ ಸೇವೆ ಸಲ್ಲಿಸಿದರು. ರಿತ್ತಿಯವರ ಜೀವನದಲ್ಲಿ ಐತಿಹಾಸಿಕ

ವಿಠ್ಠಲ ಪೋತದಾರ
ಹಿರಿಯ ಸಂಶೋಧನಾ ಸಹಾಯಕ,
ದಿ ಮಿಥಿಕ್ ಸೊಸೈಟಿ
ನೃಪತುಂಗ ರಸ್ತೆ,
ಬೆಂಗಳೂರು–560001
ಮೊ: 9448460871
vithal.potdar@gmail.com

ತಿರುವು ದೊರೆತದ್ದು 1955ರಲ್ಲಿ. ಪಿ.ಬಿ. ದೇಸಾಯಿಯವರ ಕರೆಗೆ ಓಗೊಟ್ಟು ಆ ವರ್ಷ ತಮಿಳುನಾಡಿನ ಉದಕಮಂಡಲದಲ್ಲಿ ಕಚೇರಿಯನ್ನು ಹೊಂದಿದ್ದ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ ಶಾಸನಶಾಸ್ತ್ರ ಮತ್ತು ಸಂಶೋಧನ ಇಲಾಖೆಯಲ್ಲಿ ಸಂಶೋಧನಾ ಸಹಾಯಕರಾಗಿ ಕೆಲಸವನ್ನು ಪ್ರಾರಂಭಿಸಿದ್ದು. ಈ ಇಲಾಖೆಯಲ್ಲಿ 1955ರಿಂದ 1964ರವರೆಗೆ ಸೇವೆ ಸಲ್ಲಿಸಿದ ರಿತ್ತಿಯವರು ಒಬ್ಬ ಪರಿಣಿತ ಶಾಸನಶಾಸ್ತ್ರಜ್ಞರಾಗಿ ರೂಪುಗೊಳ್ಳುವಲ್ಲಿ ಆಗಿನ ಕಾಲದ ಅನೇಕ ವಿದ್ವಾಂಸರು ಅವರ ಮೇಲೆ ಪ್ರಭಾವವನ್ನು ಬೀರಿದ್ದಾರೆ. ಡಿ.ಸಿ. ಸರ್ಕಾರ, ಜಿ.ಸಿ.ಎಚ್. ಛಾಬ್ರಾ, ಎನ್. ಲಕ್ಷ್ಮೀನಾರಾಯಣ ರಾವ್, ಜಿ.ಎಸ್. ಗಾಯಿ ಮತ್ತು ಪಿ.ಬಿ. ದೇಸಾಯಿಯವರ ಮಾರ್ಗದರ್ಶನವನ್ನು ಅವರು ತಮ್ಮ ಜೀವನಪರ್ಯಂತ ಸ್ಮರಿಸಿಕೊಳ್ಳುತ್ತಿದ್ದರು. ಜೊತೆಗೆ ಇದೇ ವಿಭಾಗದಲ್ಲಿದ್ದ ಎಸ್.ಆರ್. ರಾವ್, ಎಚ್.ಕೆ. ನರಸಿಂಹಸ್ವಾಮಿ, ಟಿ.ವಿ. ಮಹಾಲಿಂಗಂ ಮತ್ತು ಕೆ.ಜಿ. ಕೃಷ್ಣನ್ ಮುಂತಾದ ಖ್ಯಾತನಾಮರ ಜೊತೆಗೆ ಕೆಲಸ ಮಾಡುವ ಸುಯೋಗ ಅವರಿಗೆ ದೊರಕಿತು. ಇದೇ ರೀತಿಯಾಗಿ ಶಾಸನ ಸಂಶೋಧನ ಕ್ಷೇತ್ರದಲ್ಲಿ ಹೆಸರು ಮಾಡಿದ ಬಿ.ಆರ್. ಗೋಪಾಲ, ಕೆ.ವಿ. ರಮೇಶ್, ಎಸ್. ಶಂಕರನಾರಾಯಣನ್ ಮತ್ತು ಅಜಯಮಿತ್ರ ಶಾಸ್ತ್ರಿ ಅವರುಗಳು ರಿತ್ತಿಯವರ ಸಹೋದ್ಯೋಗಿಗಳು ಮತ್ತು ಸಹವರ್ತಿಗಳಾಗಿದ್ದರು.

ಕಳೆದ ಅರ್ಧ ಶತಮಾನಕ್ಕೂ ಹೆಚ್ಚು ಕಾಲ ರಿತ್ತಿಯವರು ಶಾಸನ ಸಂಗ್ರಹ, ಸಂಶೋಧನೆ ಮತ್ತು ಪ್ರಕಟನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಈ ಮೂರೂ ಪ್ರಮುಖ ಶೈಕ್ಷಣಿಕ ಮತ್ತು ತಾಳ್ಮೆಯುತ ಕೆಲಸಗಳನ್ನು ಅವರು ತಮ್ಮ ವೃತ್ತಿಜೀವನದ ಪ್ರಾರಂಭದಲ್ಲಿ ಉದಕಮಂಡಲದಲ್ಲಿ ಪ್ರಾರಂಭಿಸಿ, ನಂತರದಲ್ಲಿ ತಾವು ಕೆಲಸ ಮಾಡಿದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಅಲ್ಲಿಂದ ನಿವೃತ್ತಿಯಾದ ನಂತರ ಮತ್ತು ತಮ್ಮ ಜೀವನದ ಕೊನೆಯ ವರ್ಷಗಳವರೆಗೂ ಮುಂದುವರಿಸಿದರು.


ಶಾಸನ ಸಂಶೋಧನೆಗೆ ಸಂಬಂಧಿಸಿದಂತೆ ರಿತ್ತಿಯವರು **ಎಪಿಗ್ರಾಫಿಯಾ ಇಂಡಿಕಾ, ಜರ್ನಲ್ ಆಫ್ ದಿ ಓರಿಯಂಟಲ್ ರಿಸರ್ಚ್, ಮದ್ರಾಸ್, ಕ್ವಾರ್ಟರ್ಲಿ ಜನರಲ್ ಆಫ್ ಮಿಥಿಕ್ ಸೊಸೈಟಿ, ಮಿಥಿಕ್ ಸೊಸೈಟಿ, ಬೆಂಗಳೂರು, ಕರ್ನಾಟಕ ವಿಶ್ವವಿದ್ಯಾಲಯದ ಜರ್ನಲ್, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಪ್ರಬುದ್ಧ ಕರ್ನಾಟಕ** ಮುಂತಾದ ಪ್ರಸಿದ್ಧ ನಿಯತಕಾಲಿಕೆಗಳಲ್ಲಿ ಅತಿ ಉಪಯುಕ್ತವಾದ ಸಂಶೋಧನಾತ್ಮಕ ಲೇಖನಗಳನ್ನು ಪ್ರಕಟಿಸಿದ್ದಾರೆ. ಜೊತೆಗೆ ಅವರ ಇನ್ನೂ ಕೆಲವು ಲೇಖನಗಳು ಹೆಸರಾಂತ ವಿದ್ವಾಂಸರಿಗೆ ಅರ್ಪಿಸಿದ ಸನ್ಮಾನ ಮತ್ತು ಸಂಸ್ಮರಣ ಸಂಚಿಕೆಗಳಲ್ಲಿಯೂ ಪ್ರಕಟವಾಗಿವೆ.

ಶಾಸನ ಸಂಶೋಧನೆಗೆ ಸಂಬಂಧಿಸಿದಂತೆ ರಿತ್ತಿಯವರು ಪ್ರಕಟಿಸಿರುವ ಗ್ರಂಥಗಳು ಇಂತಿವೆ:

1. **ನಾಂದೇಡ ಜಿಲ್ಲೆಯ ಶಾಸನಗಳು**
2. **ಸೊಲ್ಲಾಪುರ ಜಿಲ್ಲೆಯ ಶಾಸನಗಳು**
3. **ಕೊಲ್ಲಾಪುರ ಜಿಲ್ಲೆಯ ಶಾಸನಗಳು**

ಆಯಾ ಪ್ರದೇಶದ ಹವ್ಯಾಸಿ ಶಾಸನ ಸಂಗ್ರಹಕಾರರೊಡನೆ ಈ ಪ್ರದೇಶಗಳಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಂಡು ಕನ್ನಡ ಭಾಷಾ ಶಾಸನ ಸಂಪತ್ತು ನಶಿಸಿ ಹೋಗದಂತೆ

ಪುಸ್ತಕರೂಪದಲ್ಲಿ ಅವುಗಳನ್ನು ಪ್ರಕಟಿಸುವುದರ ಮೂಲಕ ರಿತ್ತಿಯವರು ಕನ್ನಡ ನಾಡಿಗೆ ಚಿರಸ್ಮರಣೀಯುವಾದ ಕೊಡುಗೆಯುನ್ನು ನೀಡಿದ್ದಾರೆ.



ನವದೆಹಲಿಯ ಭಾರತೀಯ ಇತಿಹಾಸ ಅನುಸಂಧಾನ ಪರಿಷತ್ತಿನೊಂದಿಗೆ ನಿಕಟವಾದ ಸಂಬಂಧವನ್ನು ಹೊಂದಿದ್ದ ಅವರು ಎಂಟು ವರ್ಷಗಳ ಕಾಲ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದರು. ವಿಜಯನಗರದ ಇತಿಹಾಸಕ್ಕೆ ಸಂಬಂಧಿಸಿದ ಶಾಸನ ಸಂಪುಟಗಳ ಪ್ರಕಟಣೆಗಾಗಿ ಪರಿಷತ್ತು ರೂಪಿಸಿದ ಯೋಜನೆಯ ಸಂಚಾಲಕರಾಗಿ ಕಾರ್ಯ ನಿರ್ವಹಿಸಿದರು. ಜಿ.ಆರ್. ಗೋಪಾಲ ಅವರೊಡನೆ ಒಟ್ಟು 1898 ಕನ್ನಡ ಶಾಸನಗಳನ್ನು ಪರಿಷ್ಕರಿಸಿ ಶಾಸನದ ಪಾಠಗಳು, ಸಾರಾಂಶಗಳು, ಅವುಗಳ ವಿಮರ್ಶಾತ್ಮಕ ಅಭ್ಯಾಸ ಮತ್ತು ವಿಸ್ತೃತವಾದ ಪ್ರಸ್ತಾವನೆಯನ್ನು ಒಳಗೊಂಡ ಮೂರು ಸಂಪುಟಗಳನ್ನು ಪರಿಷತ್ತಿನ ಸಹಯೋಗದೊಡನೆ ಪ್ರಕಟಿಸಿದ್ದಾರೆ. ಇದೇ ಯೋಜನೆಯಲ್ಲಿ 585 ತೆಲುಗು ಶಾಸನಗಳ ಪಾಠವನ್ನೊಳಗೊಂಡ ಒಂದು ಸಂಪುಟವು ಹಿರಿಯ ಶಾಸನಶಾಸ್ತ್ರಜ್ಞರಾದ ಪಿ.ವಿ. ಪರಬ್ರಹ್ಮಶಾಸ್ತ್ರಿಯವರು ಸಂಪಾದಿಸಿದ್ದಾರೆ. 241 ಸಂಸ್ಕೃತ ಶಾಸನಗಳನ್ನೊಳಗೊಂಡ ಮತ್ತೊಂದು ಸಂಪುಟವನ್ನು ರಿತ್ತಿಯವರೇ ಸಂಪಾದಿಸಿದ್ದಾರೆ. ಅದೇ ರೀತಿಯಾಗಿ 576 ತಮಿಳು ಶಾಸನಗಳನ್ನೊಳಗೊಂಡ ಒಂದು ಸಂಪುಟವನ್ನು ರಿತ್ತಿಯವರ ಮಾರ್ಗದರ್ಶನದಲ್ಲಿ ವೈ. ಸುಬ್ಬರಾಯಲು ಮತ್ತು ಎಸ್. ರಾಜವೇಲು ಸಂಪಾದಿಸಿದ್ದಾರೆ. ಇನ್ನೂ ಒಂದು ತಮಿಳು ಶಾಸನಗಳ ಸಂಪುಟ ಪ್ರಕಟಣೆಗೆ ಸಿದ್ಧವಾಗಬೇಕಾಗಿದೆ. ಈ ರೀತಿಯಾಗಿ ವಿಜಯನಗರದ ಸಮಗ್ರ ಇತಿಹಾಸದ ಅಧ್ಯಯನಕ್ಕೆ ಸಂಬಂಧಿಸಿದಂತೆ ಪ್ರಮುಖ ಆಕರವಾಗಿರುವ ಶಾಸನಗಳ ಕುರಿತಾದ ಕನ್ನಡ, ತೆಲುಗು, ತಮಿಳು ಮತ್ತು ಸಂಸ್ಕೃತ ಭಾಷೆಗಳಲ್ಲಿ ಲಭ್ಯವಿರುವ ಎಲ್ಲಾ ಶಾಸನಗಳನ್ನು ರಿತ್ತಿಯವರು ತಮ್ಮ ಸಹಸಂಶೋಧಕರೊಡನೆ ಸಂಪಾದಿಸಿಕೊಟ್ಟಿದ್ದಾರೆ.

ಇದೇ ರೀತಿಯಾಗಿ ಭಾರತದ ಶಾಸನಗಳ ಸಂಪಾದನೆಯ ಯೋಜನೆಯ ಸಂಚಾಲಕರಾಗಿದ್ದ ರಿತ್ತಿಯವರ ಮಾರ್ಗದರ್ಶನದಲ್ಲಿ ಶ್ರೀನಿವಾಸ ಪಾಡಿಗಾರ ಅವರು ಬಾದಾಮಿ ಚಾಲುಕ್ಯರ ಕಾಲದ 452 ಶಾಸನಗಳ ಸಂಪುಟವನ್ನು ಸಂಪಾದಿಸಿದ್ದಾರೆ. ಅದೇ ರೀತಿಯಾಗಿ ಎಸ್.ಎಸ್. ರಾಮಚಂದ್ರಮೂರ್ತಿಯವರು ವಾರಂಗಲ್ಲಿನ ಕಾಕತೀಯರ 367 ಶಾಸನಗಳನ್ನು ಒಳಗೊಂಡ ಒಂದು ಸಂಪುಟವನ್ನು ಸಂಪಾದಿಸಿದ್ದಾರೆ.

ಈ ಮೊದಲು ಮೈಸೂರು ರಾಜ್ಯಕ್ಕೆ ಸಂಬಂಧಿಸಿದಂತೆ ಬಿ.ಎಲ್. ರೈಸ್ ಅವರು ಪ್ರಕಟಿಸಿದ್ದ **ಎಪಿಗ್ರಾಫಿಯಾ ಕರ್ನಾಟಿಕದ** ಹನ್ನೆರಡು ಸಂಪುಟಗಳ ಪರಿಷ್ಕರಣೆ ಕಾರ್ಯವನ್ನು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ಕೈಗೊಂಡಿದೆ. ಈ ಯೋಜನೆಯ ಅಡಿಯಲ್ಲಿ ತುಮಕೂರು ಜಿಲ್ಲೆಯ ಬಹು ಪ್ರಾಚೀನ ಕಾಲದಿಂದ ಹಿಡಿದು 18ನೆಯ

ಶತಮಾನದವರೆಗಿನ ಕನ್ನಡ ಮತ್ತು ಸಂಸ್ಕೃತ ಭಾಷೆಯಲ್ಲಿಯ 423 ಶಾಸನಗಳುಳ್ಳ ಪರಿಷ್ಕೃತ ಸಂಪುಟವನ್ನು ರಿತ್ತಿಯವರು ಸಂಪಾದಿಸಿದ್ದು, ಮೈಸೂರು ವಿಶ್ವವಿದ್ಯಾನಿಲಯವು ಅದನ್ನು ಪ್ರಕಟಿಸಿದೆ.

ಶಾಸನಶಾಸ್ತ್ರದ ಜೊತೆಗೆ ಪ್ರಾಚೀನ ಭಾರತದ ಇತಿಹಾಸದ ಇತರ ಆಯಾಮಗಳಿಗೆ ಸಂಬಂಧಿಸಿದಂತೆ ಕೂಡ ರಿತ್ತಿಯವರು ಮೌಲಿಕ ಕೊಡುಗೆಯನ್ನು ನೀಡಿದ್ದಾರೆ. ಪಿ.ಬಿ. ದೇಸಾಯಿ ಮತ್ತು ಜಿ.ಆರ್. ಗೋಪಾಲ ಅವರೊಡನೆ **History of Karnataka** (ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟಣೆ) ಮತ್ತು **ಪ್ರಾಚೀನ ಭಾರತ ಚರಿತ್ರೆ, ಕರ್ನಾಟಕ ಗ್ರಾಮಸೂಚಿ** (ಕರ್ನಾಟಕ ಸರ್ಕಾರದ ಪ್ರಕಟಣೆ) **ಮುಳಗುಂದ ನಾಡು** (ಕರ್ನಾಟಕ ವಿಶ್ವವಿದ್ಯಾಲಯ), **ಪ್ರಾಚೀನ ಕರ್ನಾಟಕದ ಆಡಳಿತ ಪಾರಿಭಾಷಿಕ ಕೋಶ** (ಕರ್ನಾಟಕ ಪುರಾತತ್ವ ಇಲಾಖೆ, ಕರ್ನಾಟಕ ಸರ್ಕಾರ), ಜಿ.ಎಸ್. ದೀಕ್ಷಿತ್, ಬಿ. ರಾಮಸ್ವಾಮಿ ಅವರೊಡನೆ ಆಚಾರ್ಯ ಸೋಮದೇವ ವಿರಚಿತ **ನೀತಿವಾಕ್ಯಾಮೃತಂ**, ಸುರೇಂದ್ರ ದಾನಿಯವರೊಡನೆ **ಆಲೂರ ವೆಂಕಟರಾಯರ ಸಮಗ್ರ ಕೃತಿಗಳು ಭಾಗ 1 ಮತ್ತು 2** ಈ ಕೃತಿಗಳು ರಿತ್ತಿಯವರು ಇತಿಹಾಸದ ಸಂಶೋಧನಾ ಲೋಕಕ್ಕೆ ನೀಡಿದ ಇತರ ಕೃತಿಗಳಾಗಿವೆ.

ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನಶಾಸ್ತ್ರ ವಿಭಾಗದಲ್ಲಿ 25 ವರ್ಷಗಳ ಕಾಲ ಸುದೀರ್ಘ ಸೇವೆ ಸಲ್ಲಿಸಿದ ರಿತ್ತಿಯವರು ಪ್ರಾಚೀನ ಭಾರತದ ಚರಿತ್ರೆ, ಪ್ರಾಚೀನ ರಾಜ್ಯಶಾಸ್ತ್ರ, ಶಾಸನ ಮತ್ತು ಲಿಪಿವಿಜ್ಞಾನ ಮತ್ತು ಪ್ರಾಚೀನ ಕರ್ನಾಟಕದ ಇತಿಹಾಸವನ್ನು ಈ ಕಾಲಾವಧಿಯಲ್ಲಿ ನೂರಾರು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಬೋಧಿಸಿದ್ದಾರೆ. ಜೊತೆಗೆ ಒರ್ವ ಕಾಶ್ಮೀರ ರಾಜ್ಯದ ವಿದ್ಯಾರ್ಥಿನಿ ಮತ್ತು ಜಪಾನ್ ದೇಶದ ವಿದ್ಯಾರ್ಥಿಯೊಬ್ಬ ಸೇರಿ ಸುಮಾರು 20 ಪಿಎಚ್.ಡಿ. ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದ್ದಾರೆ. ಇದರ ಜೊತೆಗೆ ಆಂಧ್ರಪ್ರದೇಶದಲ್ಲಿರುವ ಶ್ರೀ ಸತ್ಯಸಾಯಿ ಇನ್ಸ್ಟಿಟ್ಯೂಟ್ ಆಫ್ ಹೈಯರ್ ಲರ್ನಿಂಗ್, ಪುಟ್ಟಪರ್ತಿಯಲ್ಲಿ ಹತ್ತು ವರ್ಷಗಳ ಕಾಲ ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸಿ ಸ್ನಾತಕೋತ್ತರ ಮತ್ತು ಪಿಎಚ್.ಡಿ. ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದ್ದಾರೆ.

ಈ ವಿಶಿಷ್ಟವಾದ ಶೈಕ್ಷಣಿಕ ಕೊಡುಗೆಗಳ ಜೊತೆಗೆ ರಿತ್ತಿಯವರು ಅನೇಕ ಶೈಕ್ಷಣಿಕ ಗೌರವಗಳಿಗೂ ಭಾಜನರಾಗಿದ್ದಾರೆ. ಅನೇಕ ವರ್ಷಗಳವರೆಗೆ ಭಾರತೀಯ ಪುರಾಭಿಲೇಖನ ಪರಿಷತ್ತಿನ ಕಾರ್ಯದರ್ಶಿ ಮತ್ತು ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುವುದರ ಜೊತೆಗೆ ಅದರ ಪತ್ರಿಕೆಯ ಸಂಪಾದಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಧಾರವಾಡದಲ್ಲಿ ಆಲೂರ ವೆಂಕಟರಾವ ಪ್ರತಿಷ್ಠಾನದ ಅಧ್ಯಕ್ಷರಾಗಿ 15 ವರ್ಷಗಳವರೆಗೆ ಕಾರ್ಯ ನಿರ್ವಹಿಸಿದ್ದಾರೆ. ಇತ್ತೀಚೆಗೆ ಕರ್ನಾಟಕ ಸರ್ಕಾರ ರಚಿಸಿದ ಕರ್ನಾಟಕ ಕುಲಪುರೋಹಿತ ಆಲೂರ ವೆಂಕಟರಾವ್ ರಾಷ್ಟ್ರೀಯ ಟ್ರಸ್ಟ್ (ರಿ.)ನ ಅಧ್ಯಕ್ಷರಾಗಿ ತಾವು ನಿಧನರಾಗುವವರೆಗೂ ಕಾರ್ಯ ನಿರ್ವಹಿಸಿದರು.

ರಿತ್ತಿಯವರ ವಿದ್ವತ್ತನ್ನು ಪರಿಗಣಿಸಿ ಅವರ ಜೀವಿತಾವಧಿಯಲ್ಲಿ ಅನೇಕ ಪುರಸ್ಕಾರಗಳು, ಸನ್ಮಾನಗಳು, ಗೌರವಗಳು ಅವರನ್ನರಸಿ ಬಂದವು. ಇಂಡಿಯನ್ ಹಿಸ್ಟರಿ ಕಾಂಗ್ರೆಸ್‌ನ

ಒಂದು ಅಧಿವೇಶನದಲ್ಲಿ ಅವರು ಶಾಸನ ಸಂಶೋಧನೆ ವಿಭಾಗಕ್ಕೆ ಅಧ್ಯಕ್ಷರಾಗಿ ಚುನಾಯಿತರಾಗಿದ್ದರು. ಕರ್ನಾಟಕ ಇತಿಹಾಸ ಅಕಾದೆಮಿ, ಭಾರತೀಯ ಪುರಾಭಿಲೇಖ ಪರಿಷತ್ತು, ಭಾರತೀಯ ಸ್ಥಳನಾಮ ಪರಿಷತ್ತು, ಮರಾಠವಾಡಾ ಇತಿಹಾಸ ಪರಿಷತ್ತು ಇತ್ಯಾದಿಗಳ ವಾರ್ಷಿಕ ಸಮ್ಮೇಳನಗಳ ಸರ್ವಾಧ್ಯಕ್ಷರಾಗಿ ಅವರು ಗೌರವಿಸಲ್ಪಟ್ಟರು. ಶಾಸನ ಸಂಶೋಧನಾ ಕ್ಷೇತ್ರಕ್ಕೆ ಇವರು ನೀಡಿದ ಕೊಡುಗೆಯನ್ನು ಗಮನಿಸಿ ಭಾರತೀಯ ಪುರಾಭಿಲೇಖ ಪರಿಷತ್ತು ಇವರಿಗೆ ತಾಮ್ರಪತ್ರ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಅವರ ಜೀವಿತಾವಧಿಯಲ್ಲಿ ಅವರಿಗೆ ಸಂದ ಗೌರವ/ಪ್ರಶಸ್ತಿಗಳ ಪಟ್ಟಿ ಇಂತಿದೆ:

1. ಬೆಂಗಳೂರಿನ ಮಿಥಿಕ್ ಸೊಸೈಟಿ ಗೌರವ (ಸಂಸ್ಥೆಯ ವಜ್ರಮಹೋತ್ಸವ ಸಂದರ್ಭ, 1984)
2. ಶ್ರವಣಬೆಳಗೊಳದ ಚಾರುಕೀರ್ತಿ ಭಟ್ಟಾರಕ ಪ್ರಶಸ್ತಿ (2001)
3. ಕರ್ನಾಟಕ ಇತಿಹಾಸ ಅಕಾದೆಮಿಯ ಡಾ. ಬಾ.ರಾ. ಗೋಪಾಲ ಸ್ಮಾರಕ ಪ್ರಶಸ್ತಿ (2002)
4. ಮಂತ್ರಾಲಯದ ಶ್ರೀ ರಾಘವೇಂದ್ರಸ್ವಾಮಿ ಮಠದ ಶ್ರೀ ಸುಜಯಶ್ರೀ ಪ್ರಶಸ್ತಿ (2007)
5. ಕರ್ನಾಟಕ ಸರ್ಕಾರದ ಸುವರ್ಣ ಕರ್ನಾಟಕದ ರಾಜ್ಯೋತ್ಸವ ಪ್ರಶಸ್ತಿ (2007)
6. ಕರ್ನಾಟಕ ಸರ್ಕಾರದ ಕೃಷ್ಣದೇವರಾಯನ 500ನೆಯ ಪಟ್ಟಾಭಿಷೇಕ ಸಮಿತಿ ಸನ್ಮಾನ (2010)
7. ಗುಲಬರ್ಗಾ ವಿಶ್ವವಿದ್ಯಾಲಯದ ಗೌರವ ಡಿ.ಲಿಟ್. ಪದವಿ (2010)
8. ಚಿದಾನಂದ ಪ್ರಶಸ್ತಿ, ಚಿದಾನಂದ ಪ್ರಶಸ್ತಿ ಸಮಿತಿ, ಬೆಂಗಳೂರು (2010)
9. ಶಂ.ಬಾ. ಜೋಶಿ ಪ್ರಶಸ್ತಿ, ಕನ್ನಡ ಸಂಘ, ಶಿವಮೊಗ್ಗ (2010)
10. ಜೀವಿತಾವಧಿ ಸಾಧನೆ ಪ್ರಶಸ್ತಿ, ರೋಟರಿ ಕ್ಲಬ್, ಧಾರವಾಡ (2011)
11. ಸನ್ಮಾನ, ಕರ್ನಾಟಕ ವಿದ್ಯಾವರ್ಧಕ ಸಂಘ ಸಂಸ್ಥಾಪನಾ ದಿನ (2011)
12. ಸನ್ಮಾನ ಮತ್ತು ಗೌರವ ಸದಸ್ಯತ್ವ, ಭಾರತೀಯ ಪ್ರಾಚೀನ ವಿಜ್ಞಾನ ಮತ್ತು ಪುರಾತತ್ವ ಸಂಸ್ಥೆ, ಮೈಸೂರು (2011)
13. ಅವಾರ್ಡ್ ಆಫ್ ಎಕ್ಸಲೆನ್ಸ್ ಸನ್ಮಾನ, ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ, ನವದೆಹಲಿ (2011)
14. ಶ್ರೀ ನಾ.ಶ್ರೀ. ರಾಜಪುರೋಹಿತ ಪ್ರಶಸ್ತಿ (2012)
15. ಸನ್ಮಾನ ಮತ್ತು 'ಪ್ರತ್ನಕೀರ್ತಿ' ಸನ್ಮಾನ ಗ್ರಂಥ ಸಮರ್ಪಣೆ, ಧಾರವಾಡ (ಜೂನ್, 2012)
16. ರಾಷ್ಟ್ರಕವಿ ಗೋವಿಂದ ಪೈ ಸ್ಮಾರಕ ಪ್ರಥಮ ಪ್ರಶಸ್ತಿ, ಉಡುಪಿ (2013)
17. ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಸನ್ಮಾನ (ಹಸ್ತಪ್ರತಿ ಸಮ್ಮೇಳನ, ಧಾರವಾಡ, 2014)

18. ವಿ.ಸೀ. ಸಂಪದ, ಬೆಂಗಳೂರು ಇವರಿಂದ ಹಿರಿಯ ಸಾಧಕರಿಗೆ ಕೃತಜ್ಞತೆ (2014)
19. ಸೋದೆ ಶ್ರೀ ವಾದಿರಾಜ ಮಠ, ಸ್ವರ್ಣವಲ್ಲಿ ಮಠ ಮತ್ತು ಜೈನಮಠ ಇವರಿಂದ ಸೋದೆ ಸದಾಶಿವರಾಯ ಪ್ರಶಸ್ತಿ (2014)
20. ಕರ್ನಾಟಕ ಸರ್ಕಾರದ ಆರ್ಕಿಯಾಲಾಜಿಕಲ್ ಮ್ಯೂಸಿಯಂ ಮತ್ತು ಹೆರಿಟೇಜ್ ಇವರಿಂದ ಕರ್ನಾಟಕ ಪುರಾತತ್ವ ಪ್ರಶಸ್ತಿ (2015)
21. ಗೌರವ ಫೆಲೋಶಿಪ್ ಮತ್ತು ಸನ್ಮಾನ, ಸಂವಿದ್ಯಾ ಇನ್ಸ್ಟಿಟ್ಯೂಟ್, ಪುಣೆ (2015)
22. ಗೌರವ ಸನ್ಮಾನ, ಕರ್ನಾಟಕ ವಿದ್ಯಾವರ್ಧಕ ಸಂಘದ 127 ವರ್ಷದ ಉತ್ಸವ (2016)
23. ಕ್ಯಾಂಪ್‌ಬೆಲ್ ಸ್ಮಾರಕ ಚಿನ್ನದ ಪದಕ, ರಾಯಲ್ ಏಶಿಯಾಟಿಕ್ ಸೊಸೈಟಿ, ಮುಂಬಯಿ (2016)
24. **ದಿ ಇನ್ಸ್‌ಕ್ರಿಪ್ಶನ್ ಆಫ್ ವಿಜಯನಗರ ರೂಲರ್ಸ್** ಎಂಬ ಬೃಹತ್ ಯೋಜನೆಯನ್ನು ಮುಗಿಸಿದ ಸಂದರ್ಭದಲ್ಲಿ ಭಾರತೀಯ ಇತಿಹಾಸ ಅನುಸಂಧಾನ ಪರಿಷತ್ತು, ನವದೆಹಲಿ ಸಂಸ್ಥೆಯ ಅಧ್ಯಕ್ಷರಿಂದ ಸನ್ಮಾನ (2017)
25. ಕರ್ನಾಟಕ ಇತಿಹಾಸ ಅಕಾದೆಮಿ 'ಇತಿಹಾಸ ಸಂಸ್ಕೃತಿ ಶ್ರೀ' ಪ್ರಶಸ್ತಿ (2017)

ಇಷ್ಟೆಲ್ಲ ಪ್ರಶಸ್ತಿ–ಸನ್ಮಾನಗಳಿಗೆ ಭಾಜನರಾಗುವುದರ ಜೊತೆಗೆ ರಿತ್ತಿಯವರು ವಿದೇಶಿಯ ವಿಶ್ವವಿದ್ಯಾಲಯಗಳ ಗೌರವಕ್ಕೂ ಪಾತ್ರರಾಗಿದ್ದರು. ಜಪಾನ್ ದೇಶದ ಟೋಕಿಯೋ ವಿಶ್ವವಿದ್ಯಾಲಯ ಮತ್ತು ಇತರ ಸಂಸ್ಥೆಗಳಲ್ಲಿ ನಡೆದ ಅಂತಾರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ ಮೂರು ಬಾರಿ ಮತ್ತು ಜರ್ಮನಿಯ ಬರ್ಲಿನ್‌ನಲ್ಲಿ ನಡೆದ ಇತಿಹಾಸ ಸಮ್ಮೇಳನದಲ್ಲಿ ಅವರು ಭಾಗವಹಿಸಿದ್ದರು.

ರಿತ್ತಿಯವರು ಭೌತಿಕವಾಗಿ ಇಂದು ನಮ್ಮೊಡನೆ ಇಲ್ಲ. ಆಗಸ್ಟ್ 15, 2018 ಸ್ವಾತಂತ್ರ್ಯ ದಿನಾಚರಣೆ ದಿನ, ಅವರ ಆತ್ಮ ಈ ಭೌತಿಕ ಜೀವನದಿಂದ ಮುಕ್ತಿಯನ್ನು ಪಡೆಯಿತು. ತಮ್ಮ ನೇತ್ರದಾನ, ದೇಹದಾನ ಮತ್ತು ಸಂಶೋಧನೆಯ ಮೂಲಕ ಅವರು ನಿಜವಾಗಿಯೂ ತಾವೊಬ್ಬ 'ಕಾಯಕಜೀವಿ'ಯಾಗಿದ್ದರು ಎಂಬುದನ್ನು ಶೈಕ್ಷಣಿಕ ಲೋಕಕ್ಕೆ ತೋರಿಸಿಕೊಟ್ಟಿದ್ದಾರೆ. 89 ವರ್ಷಗಳ ತಮ್ಮ ಇಳಿವಯಸ್ಸಿನಲ್ಲಿಯೂ ಅವರು ತೋರುತ್ತಿದ್ದ ಜೀವನೋತ್ಸಾಹ ಇಂದಿನ ಸಂಶೋಧಕರ ವರ್ಗಕ್ಕೆ ದಾರಿದೀಪವಾಗಿದೆ. ಸಂಶೋಧನೆ ನಿಂತ ನೀರಾಗಿರದೇ ಅದು ಸದಾಕಾಲ ಪ್ರವಹಿಸುವ ಜಲಾಗಾರ. ರಿತ್ತಿಯವರು ತಮ್ಮ ಸಂಶೋಧನೆಗಳ ಮೂಲಕ ಅನೇಕ ಪ್ರಶ್ನೆಗಳಿಗೆ ಉತ್ತರಿಸಿದ್ದರೂ, ಉತ್ತರಿಸದೇ ಉಳಿದಿರುವ ಪ್ರಶ್ನೆಗಳು ಇನ್ನೂ ನೂರಾರು. ಅವುಗಳಿಗೆ ಸೂಕ್ತವಾಗಿ ಉತ್ತರಿಸುವ ರೀತಿಯಲ್ಲಿ ಇಂದಿನ ಇತಿಹಾಸದ ಸಂಶೋಧನಾ ಮಾರ್ಗ ಮುಂದುವರೆಯಬೇಕಾಗಿದೆಯಷ್ಟೆ. ■

ಪುಸ್ತಕ ವಿಮರ್ಶೆ

ITIHASA DARPANA (Quarterly)
A Peer Reviewed Journal of Historical Research in Kannada
ISSN 2321-3590
Book No.: 37-38.
April – September 2018
Author: Subhash Rajamane
Title: Hindūgaḷa paryāya kathana

ಹಿಂದೂಗಳ ಪರ್ಯಾಯ ಚರಿತ್ರೆ

ಸುಭಾಷ್ ರಾಜಮಾನೆ
#121, ಎಂ.ಸಿ. ಬಡಾವಣೆ,
13ನೇ ಮುಖ್ಯರಸ್ತೆ, ವಿಜಯನಗರ,
ಬೆಂಗಳೂರು–560040.
ಮೊಬೈಲ್:8073397463


ವೆಂಡಿ ಡೊನಿಗರ್ ಅಮೆರಿಕಾದ ಶಿಕಾಗೋ ವಿಶ್ವವಿದ್ಯಾಲಯದಲ್ಲಿ ಚರಿತ್ರೆಯನ್ನು ಬೋಧಿಸುತ್ತಿರುವ ಪ್ರಸಿದ್ಧ ಪ್ರಾಧ್ಯಾಪಕಿಯಾಗಿದ್ದಾರೆ. ಅವರು ಕಳೆದ ಐದು ದಶಕಗಳಿಂದ ತಮ್ಮನ್ನು ಜಗತ್ತಿನ ಮತಧರ್ಮಗಳ ಅಧ್ಯಯನದಲ್ಲಿ ತೊಡಗಿಸಿಕೊಂಡವರು. ಮತಧರ್ಮಗಳ ಕ್ಷೇತ್ರದಲ್ಲಿ ವಿಸ್ತಾರವಾದ, ಆಳವಾದ ವಿದ್ವತ್ತನ್ನು ಹೊಂದಿದ್ದಾರೆ. ಅವರು ಎರಡು ಡಾಕ್ಟರೇಟ್ ಪದವಿಗಳನ್ನು ಪಡೆದವರಾಗಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಅರವತ್ತಕ್ಕೂ ಹೆಚ್ಚು ಸಂಶೋಧನಾರ್ಥಿಗಳು ಮಹಾಪ್ರಬಂಧಗಳನ್ನು ರಚಿಸಿ ಡಾಕ್ಟರೇಟ್ ಪದವಿಗಳನ್ನು ಪಡೆದಿದ್ದಾರೆ. ಡೊನಿಗರ್ ಅವರು ಭಾರತದ ಚರಿತ್ರೆಯ ಅಧ್ಯಯನದಲ್ಲಿ ವಿಶೇಷವಾದ ಆಸ್ಥೆಯನ್ನು ಹೊಂದಿದ್ದಾರೆ. ಅದರಲ್ಲೂ ಮುಖ್ಯವಾಗಿ ಹಿಂದೂ ಮತ, ಪುರಾಣ, ಐತಿಹ್ಯ ಹಾಗೂ ಸಂಸ್ಕೃತ ಪಠ್ಯಗಳನ್ನು ವಿಸ್ತೃತವಾಗಿ ಅಧ್ಯಯನ ಮಾಡಿದವರಾಗಿದ್ದಾರೆ. ಭಾರತದ ಚರಿತ್ರೆಯನ್ನು ಪುರಾಣಗಳ ಮೂಲಕ ಶೋಧಿಸಿ ಹಲವು ಕೃತಿಗಳನ್ನು ರಚಿಸಿದ್ದಾರೆ.[1] ಡೊನಿಗರ್ ಮೂಲತಃ ಇಂಡೊಲಾಜಿಸ್ಟ್ ಮತ್ತು ಸಂಸ್ಕೃತ ಭಾಷೆಯ ವಿದ್ವಾಂಸರು. ಭಾರತೀಯ ಅನೇಕ ಸಂಸ್ಕೃತ ಕಾವ್ಯಗಳನ್ನೂ ಇಂಗ್ಲಿಷಿಗೆ ಭಾಷಾಂತರಿಸಿದ್ದಾರೆ.[2] ಡೊನಿಗರ್ ಅವರ ಪ್ರಸಿದ್ಧ **The Hindus: An**

Alternative History ಎಂಬ ಕೃತಿಯನ್ನು ಬಂಜಗೆರೆ ಜಯಪ್ರಕಾಶ್ ಅವರು ಇತ್ತೀಚೆಗೆ **ಹಿಂದೂಗಳು: ಬೇರೊಂದು ಚರಿತ್ರೆ** ಎಂಬ ಶೀರ್ಷಿಕೆಯಲ್ಲಿ ಕನ್ನಡಕ್ಕೆ ಭಾಷಾಂತರಿಸಿದ್ದಾರೆ.

ಡೊನಿಗರ್‌ರ ಚಾರಿತ್ರಿಕ ಮಹತ್ವದ ಈ ಕೃತಿಯಾದ ಇದನ್ನು ಭಾರತದಲ್ಲಿ ಪೆಂಗ್ವಿನ್ ಪ್ರಕಾಶನ ಸಂಸ್ಥೆಯು 2009ರಲ್ಲಿ ಪ್ರಕಟಿಸಿತ್ತು. ಆಗ ಕೆಲವು ಲೇಖಕರು ಡೊನಿಗರ್‌ರ ಪಾಂಡಿತ್ಯವನ್ನು ಪ್ರಶಂಸೆ ಮಾಡಿದ್ದರು. ಕೆಲವು ಹಿಂದೂ ಮತಾಂಧರು ಇದರ ಬಗ್ಗೆ ಅಸಹನೆಯನ್ನು ವ್ಯಕ್ತಪಡಿಸಿದ್ದರು. ಈ ಕೃತಿಯಲ್ಲಿ ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ನೋವನ್ನುಂಟು ಮಾಡಲಾಗಿದೆ ಎಂದು ದೀನಾ ನಾಥ ಬಾತ್ರ[3] ಎಂಬುವರು 2011ರಲ್ಲಿ ನ್ಯಾಯಾಲಯದಲ್ಲಿ ದಾವೆ ಹೂಡಿದರು. ಇದರಿಂದಾಗಿ 2014ರಲ್ಲಿ ಪೆಂಗ್ವಿನ್ ಪ್ರಕಾಶನ ಸಂಸ್ಥೆಯು ಇದರ ಪ್ರತಿಗಳ ಮಾರಾಟವನ್ನು ನಿಲ್ಲಿಸಿತು. ಅಷ್ಟೇ ಅಲ್ಲದೆ ಏಕಾಏಕಿಯಾಗಿ ಮಾರುಕಟ್ಟೆಯಲ್ಲಿರುವ ಪ್ರತಿಗಳನ್ನು ಕೂಡ ಹಿಂಪಡೆಯಿತು. ಆ ಸಂದರ್ಭದಲ್ಲಿ ಅರುಂಧತಿ ರಾಯ್, ವಿಲಿಯಂ ಡಾಲ್ರಿಂಪಲ್, ನೀಲ್ ಗೈಮನ್ ಮೊದಲಾದ ಲೇಖಕ/ಲೇಖಕಿಯರು, ಬುದ್ಧಿಜೀವಿಗಳು ನ್ಯಾಯಾಲಯದ ತೀರ್ಪನ್ನು ಸಾರ್ವಜನಿಕವಾಗಿ ಖಂಡಿಸಿದ್ದರು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ಉಲ್ಲಂಘನೆ ಎಂದು ಕಟುವಾಗಿ ವಿರೋಧಿಸಿಲಾಗಿತ್ತು.

ಇತ್ತೀಚೆಗೆ ಭಾರತದಲ್ಲಿ ಲೇಖಕ/ಲೇಖಕಿಯರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದಮನಿಸುವ ಕೃತ್ಯಗಳು ನಡೆಯುತ್ತಿವೆ. ಹಂಸದಾ ಸೌವೇಂದ್ರ ಶೇಖರ್‌ರ ಆದಿವಾಸಿ ವಿಲ್ ನಾಟ್ ಡ್ಯಾನ್ಸ್ ಎಂಬ ಕಥಾ ಸಂಕಲನದ ಮಾರಾಟವನ್ನು ಜಾರ್ಖಂಡ ಸರ್ಕಾರವು ನಿಷೇಧಿಸಿತ್ತು. ಕೆಲವು ವರ್ಷಗಳ ಹಿಂದೆ ಪಿ.ವಿ. ನಾರಾಯಣರ **ಧರ್ಮಕಾರಣ,** ಬಂಜಗೆರೆ ಜಯಪ್ರಕಾಶರ **ಆನುದೇವಾ ಹೊರಗಣವನು,** ಯೋಗೇಶ್ ಮಾಸ್ಟರ್‌ರ **ಡುಂಡಿ** ಕೃತಿಗಳನ್ನು ರಾಜ್ಯ ಸರ್ಕಾರ ಮುಟ್ಟುಗೋಲು ಹಾಕಿತ್ತು. ಅಷ್ಟೇ ಅಲ್ಲದೆ ಸಾಮಾಜಿಕ ಮೌಢ್ಯತೆಯನ್ನು ಖಂಡಿಸುತ್ತಿದ್ದ ಪ್ರಖರ ವೈಚಾರಿಕ ಚಿಂತಕರ ಸರಣಿ ಹತ್ಯೆಗಳೂ ಕೂಡ ನಡೆದಿವೆ. ಬಹುತ್ವದ ಭಾರತವಲ್ಲಿ ಅಸಹನೆ ತಾಂಡವವಾಡುತ್ತಿರುವ ಇಂದಿನ ಅಹಿತಕರ ಮತ್ತು ಹಿಂಸೆಯ ಸಂದರ್ಭದಲ್ಲಿ ಡೊನಿಗರ್‌ರ ಪ್ರಖ್ಯಾತ ಕೃತಿಯೊಂದು ಕನ್ನಡದಲ್ಲಿ ಪ್ರಕಟವಾಗುತ್ತಿರುವುದು ಮಹತ್ವದ ಸಂಗತಿಯಾಗಿದೆ.

ವಸಾಹತುಶಾಹಿ ಕಣ್ಣೋಟದಿಂದ ಕಟ್ಟಲಾಗಿದ್ದ ಭಾರತೀಯ ಚರಿತ್ರೆಯಾಗಲಿ ಪಶ್ಚಿಮದ ಓರಿಯಂಟಲಿಸ್ಟ್‌ರು ತೆರದಿಟ್ಟ ವೈಭವೀಕರಣದ ಚರಿತ್ರೆಯಾಗಲಿ ಎರಡೂ ಕೂಡ ಅತಿರೇಕಗಳೇ ಆಗಿದ್ದವು. ಆಳುವ ವರ್ಗಗಳ ಕೇಂದ್ರದಿಂದ ಚರಿತ್ರೆಯನ್ನು ನೋಡಿದಾಗಲೆಲ್ಲ ಅಲ್ಲಿ ಸಾಮಾನ್ಯ ಜನಸಮುದಾಯಗಳ ಬದುಕು ಮತ್ತು ಸಾಂಸ್ಕೃತಿಕ ಚಹರೆಗಳೇ ನಾಪತ್ತೆಯಾಗಿವೆ. ಪ್ರಭುತ್ವ, ಸಾಮ್ರಾಜ್ಯಶಾಹಿ, ದೇವಾಲಯ, ಪುರೋಹಿತಶಾಹಿ, ಶಿಲ್ಪಗಳು, ರಾಷ್ಟ್ರ, ರಾಷ್ಟ್ರೀಯತೆಗಳ ಕನ್ನಡಿಯಿಂದ ಚರಿತ್ರೆಯನ್ನು ನೋಡಲೆತ್ನಿಸಿದಾಗಲೂ ಕೂಡ ಸಾಕಷ್ಟು ಬಿಕ್ಕಟ್ಟುಗಳು ಉಲ್ಬಣಗೊಂಡಿವೆ. ಇದೇ ಚರಿತ್ರೆಯನ್ನು ಅಲಕ್ಷಿತ, ಅಂಚಿನ, ಮಾರ್ಕ್ಸ್‌ವಾದಿ, ಭಕ್ತಿ ಪಂಥ, ಶ್ರಮಣ ಪರಂಪರೆಗಳ ಮೂಲಕ ನೋಡಿದಾಗ ಭಾರತೀಯ ಬಹುತ್ವ ಪರಂಪರೆಯ ಚಹರೆಗಳು ಕಾಣುತ್ತವೆ. ಅದ್ದರಿಂದಲೇ ಡಿ.ಡಿ. ಕೋಸಾಂಬಿ, ರೋಮಿಲಾ ಥಾಪರ್, ಎಚ್.ಡಿ. ಸಾಂಕಾಲಿಯಾ, ಆರ್.ಎಸ್. ಶರ್ಮಾ, ಡಿ.ಎನ್. ಝಾ, ಇರ್ಫಾನ್ ಹಬೀಬ್, ಸತೀಶಚಂದ್ರ, ಸುಮಿತ್ ಸರ್ಕಾರ್, ಬಿಪನ್‌ಚಂದ್ರ ಮೊದಲಾದ



ಕೃತಿ : ಹಿಂದೂಗಳು ಬೇರೊಂದು ಚರಿತ್ರೆ
ಮೂಲ : ವೆಂಡಿ ಡೋನಿಗರ್
(ಕನ್ನಡಕ್ಕೆ) : ಬಂಜಗೆರೆ ಜಯಪ್ರಕಾಶ್
ವರ್ಷ : 2017
ಪುಟಗಳು : 492, ಬೆಲೆ: 490/-
ಪ್ರಕಾಶಕರು : ಚಿವಿವರ ಪ್ರಕಾಶನ
ಬೆಂಗಳೂರು-560021.

ಚರಿತ್ರೆಕಾರರು ಭಾರತದ ಅಸಮಾನತೆ, ಜಾತಿ, ಜಮೀನ್ದಾರಿ ವ್ಯವಸ್ಥೆ, ವರ್ಣ ವ್ಯವಸ್ಥೆ, ಅಸ್ಪೃಶ್ಯತೆ, ಲಿಂಗ ತಾರತಮ್ಯ ಮುಂತಾದವುಗಳನ್ನು ಮರೆಮಾಚಿ ಭಾರತೀಯ ಚರಿತ್ರೆಯನ್ನು ನೋಡಿದವರೇ ಅಲ್ಲ. ಹಾಗೆಯೇ ಭಾರತದ ಅಪಾರವಾದ ವೈವಿಧ್ಯತೆ, ಉದಾರತೆ, ಸಹಿಷ್ಣುತೆ, ಆಧ್ಯಾತ್ಮಿಕತೆ, ಅನುಭಾವ, ಪ್ರಜಾತಂತ್ರ ಬಹುತ್ವಗಳಂತಹ ಜೀವಪರ ಸಂಗತಿಗಳನ್ನು ವೈಭವೀಕರಿಸಿದವರೂ ಅಲ್ಲ. ಇವರೆಲ್ಲ ಚರಿತ್ರೆಯಲ್ಲಿ ಇಂತಹವುಗಳೇ ಅಂತಿಮ ಸತ್ಯವೆಂದು ಸಾರಿದವರಲ್ಲ. ಬದಲಾದ ಸಾಮಾಜಿಕ ಸನ್ನಿವೇಶಗಳಿಗೆ ಮತ್ತು ಹೊಸ ಕಾಲಮಾನಗಳಿಗೆ ತಕ್ಕಂತೆ ತಮ್ಮ ದೃಷ್ಟಿಕೋನ, ವಿಧಾನ, ಅಧ್ಯಯನಗಳ ಪರ್‌ಸ್ಪೆಕ್ಟಿವ್‌ಗಳನ್ನು ಬದಲಿಸಿಕೊಂಡು ಭಿನ್ನವಾದ ಒಳನೋಟಗಳನ್ನು ನೀಡುತ್ತ ಬಂದಿದ್ದಾರೆ.

ಈ ಹಿನ್ನೆಲೆಯಲ್ಲಿ ಡೊನಿಗರ್ ಭಾರತದ ಮತಧರ್ಮಗಳ ಕುರಿತು ಭಿನ್ನವಾದ ಚಿಂತನೆಗಳನ್ನು ಮಂಡಿಸುವ ಪ್ರಮುಖ ವಿದ್ವಾಂಸರಾಗಿದ್ದಾರೆ. ಭಾರತದ ಚರಿತ್ರೆಯಲ್ಲಿ ಹಿಂದೂ ಮತವು ರೂಪುಗೊಳ್ಳುತ್ತ ಬಂದಿರುವ ಬಗೆಯನ್ನು ಹಲವು ಆಯಾಮಗಳಿಂದ ಚರ್ಚಿಸಿದ್ದಾರೆ. ಅವುಗಳ ಮುಖಾಂತರ ತಮ್ಮದೇಯಾದ ತಾತ್ವಿಕ ನಿಲುವುಗಳನ್ನು ವ್ಯಕ್ತಪಡಿಸಿದ್ದಾರೆ. ಅವುಗಳನ್ನು ಒಪ್ಪುವುದು ಬಿಡುವುದು ಬೇರೆ ಸಂಗತಿ. ಆದರೆ ಚರಿತ್ರೆಯನ್ನು ಹೊಸ ಅಧ್ಯಯನ, ಸಂಶೋಧನೆ, ಬಹುಮುಖಿ ವಿಧಾನಗಳ ಮೂಲಕ ಶೋಧಿಸಿ ತಮ್ಮ ಧೋರಣೆಗಳನ್ನು ಅಭಿವ್ಯಕ್ತಿಸುವ ಸ್ವಾತಂತ್ರ್ಯವಂತೂ ಅವರಿಗಿದೆ. ಅದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾವುದೇ ಲೇಖಕ ಲೇಖಕರಿಗೂ ಇರುವ ಮತ್ತು ಇರಬೇಕಾದ ಸಂವಿಧಾನಬದ್ಧ ಮೂಲಭೂತ ಹಕ್ಕಾಗಿದೆ.

ಹಿಂದೂ ಚರಿತ್ರೆಯನ್ನು ಸಮೀಕ್ಷೆ ಮಾಡುವುದಾಗಲಿ ಅದರ ಸ್ವರೂಪವನ್ನು ವಿವರಿಸುವುದಾಗಲಿ ಡೊನಿಗರ್ ಅವರ ಪ್ರಧಾನ ಉದ್ದೇಶವಲ್ಲ ಎಂಬುದು ಕೃತಿಯನ್ನು ಓದಿದಾಗ ತಿಳಿಯುತ್ತದೆ. ಬ್ರಾಹ್ಮಣಶಾಹಿ ಶಾಸ್ತ್ರ ಗ್ರಂಥಗಳು ಮತ್ತು ಸಂಸ್ಕೃತ ಪಠ್ಯಗಳಿಂದ ರೂಪಿತವಾದ ಹಿಂದೂ ಮತವನ್ನು ವಿಶ್ಲೇಷಿಸುವುದರಲ್ಲೂ ಅವರು ಆಸಕ್ತಿಯನ್ನು

ಸುಭಾಷ್ ರಾಜಮಾನೆ

ತೋರಿಸುವುದಿಲ್ಲ. ಇವುಗಳಿಗೆ ಪರ್ಯಾಯವಾಗಿ ಸಂಸ್ಕೃತ ಪಠ್ಯಗಳೊಳಗಿನ ಪ್ರಾಕೃತ ಪಾಠಗಳನ್ನು ಮತ್ತು ಸಂಸ್ಕೃತೇತರ ಕಥನಗಳನ್ನು, ಮಾಹಿತಿಗಳನ್ನು ಪ್ರಧಾನ ಆಕರಗಳಾಗಿ ಬಳಸಿಕೊಂಡಿದ್ದಾರೆ. ಸಂಸ್ಕೃತದ ಬಗ್ಗೆ ಡೊನಿಗರ್ ಅವರು "ಸಂಸ್ಕೃತ ಎನ್ನುವುದು ಒಂದು ಭಾಷಾ ಮಾಧ್ಯಮವೇ ಹೊರತು ಆ ಭಾಷೆಯನ್ನು ಉಪಯೋಗಿಸುವುದರಲ್ಲೇ ಯಾವುದೋ ಅರ್ಥ ಅಡಗಿಕೊಂಡಿದೆಯೆಂದು ಭಾವಿಸಕೂಡದು. ಸಂಸ್ಕೃತ ಬ್ರಾಹ್ಮಣರಿಗೆ, ಭಗವದ್ಗೀತೆಗೆ ಸಂಬಂಧಿಸಿದ್ದು ಮಾತ್ರವೇ ಅಲ್ಲ. ಸಂಪ್ರದಾಯಗಳನ್ನು ರೂಪಿಸಿ ಅವುಗಳನ್ನು ಸ್ಥಿರಪಡಿಸಬಯಸುವ ಶಕ್ತಿಗಳನ್ನು ಪ್ರತಿಭಟಿಸುವ ಶಕ್ತಿಗಳು ಕೆಲವಿರುತ್ತವೆ. ಆ ಪ್ರತಿಭಟನಾ ಶಕ್ತಿಗಳು ಬೇರೆಬೇರೆ ವರ್ಗಗಳ ನಡುವಿನ ಸಂಬಂಧಗಳ ಅಭಿವೃದ್ಧಿಗೆ ಪ್ರಯತ್ನಿಸುತ್ತವೆ. ಆ ವಿಧವಾಗಿ ವರ್ಣಸಂಕರ ಏರ್ಪಡುತ್ತದೆ. ಈ ಬದಲಾವಣೆಗಳನ್ನು ಪ್ರತಿಬಂಧಿಸುವುದಕ್ಕೆ ಬ್ರಾಹ್ಮಣರು ಸದಾ ಕಾಲ ವಿಫಲ ಯತ್ನಗಳನ್ನು ಮಾಡುತ್ತಲೇ ಬಂದರು"[4] ಎಂದು ಹೇಳುತ್ತಾರೆ.

ಸಂಸ್ಕೃತ ಕೇವಲ ಒಂದು ಭಾಷಾ ಮಾಧ್ಯಮ ಎಂದಿರುವುದು ಮುಖ್ಯ ಗ್ರಹಿಕೆಯಾಗಿದೆ. ಯಾಕೆಂದರೆ ಭಾರತೀಯ ಚರಿತ್ರೆ, ಪರಂಪರೆ, ಸಾಹಿತ್ಯ, ಮೀಮಾಂಸೆ, ಸಂಸ್ಕೃತಿ ಎಂದಾಗಲೆಲ್ಲ ಸಂಸ್ಕೃತದ ಕಡೆಗೇ ಮುಖ ಮಾಡಲಾಗಿದೆ. ಸಂಸ್ಕೃತವನ್ನು ದೇವಭಾಷೆಯೆಂದು ದೈವೀಕರಿಸಲಾಗಿದೆ. ಆದರೆ ಜನಸಮುದಾಯಗಳ ಬದುಕಿನ ರೀತಿಯಲ್ಲಿ ಮತ್ತು ಅವರ ಮಾನಸದಲ್ಲಿ ಅಂತಸ್ಥವಾಗಿದ್ದ ಜ್ಞಾನ ಮತ್ತು ವಿವೇಕಗಳು ಆ ಸಂಸ್ಕೃತ ಭಾಷೆಯೊಳಗೆ ಸೇರಿಕೊಂಡಿರುವ ಸಾಧ್ಯತೆಗಳನ್ನು ಅಲ್ಲಗಳೆಯಲಾಗದು. ಬಹುತೇಕ ಸಂಸ್ಕೃತ ನಾಟಕಗಳಲ್ಲಿ ಸ್ತ್ರೀಯರು ಪ್ರಾಕೃತ ಭಾಷೆಯನ್ನು, ಪುರುಷರು ಸಂಸ್ಕೃತವನ್ನು ಮಾತ್ರ ಉಪಯೋಗಿಸುತ್ತಾರೆ. ಆದರೆ ಅವರ ಮಧ್ಯದಲ್ಲಿ ಅನುವಾದಕರು ಇಲ್ಲದೆಯೇ ಪರಸ್ಪರ ಮಾತನಾಡಿಕೊಳ್ಳುವುದನ್ನು ಅರ್ಥಮಾಡಿಕೊಳ್ಳಬೇಕೆಂದರೆ ಸ್ತ್ರೀಯರಿಗೆ ಸಂಸ್ಕೃತ, ಪುರುಷರಿಗೆ ಪ್ರಾಕೃತ ತಿಳಿದಿರಲೇಬೇಕು. ಆ ನಾಟಕಗಳೊಳಗಿನ ಕೆಲವು ಸ್ತ್ರೀಯರು ಸಂಸ್ಕೃತ ಮಾತಾಡುವುದನ್ನು, ಬರೆಯುವುದನ್ನು ಹಾಗೂ ಪುರುಷರು ಪ್ರಾಕೃತದಲ್ಲಿ ಮಾತಾಡುವುದನ್ನು ಗಮನಿಸಬಹುದಾಗಿದೆ. ಹೀಗೆ ಸಂಪ್ರದಾಯ, ಪರಂಪರೆ ಎನ್ನುವುದು ಚರಿತ್ರೆಯಲ್ಲಿ ಆಗಾಗ ಭಂಗವಾಗುತ್ತಲೇ ಬಂದಿದೆ. ಸ್ತ್ರೀಯರು ವೇದಗಳನ್ನು ಪಠಿಸಬಾರದೆಂಬ ನಿಷೇಧಗಳನ್ನು ಶಾಸ್ತ್ರಗಳು ಪದೇಪದೇ ಹೇರುತ್ತಿದ್ದವು. ಯಾಕೆಂದರೆ ಅಂದಿನ ಸಮಾಜದಲ್ಲಿ ಸ್ತ್ರೀಯರು ಆ ಸಾಮರ್ಥ್ಯವುಳ್ಳವರಾಗಿದ್ದರಿಂದಲೇ ಇಂತಹ ನಿಷೇಧಗಳು ವ್ಯಕ್ತವಾಗುತ್ತವೆ ಎಂದು ಡೊನಿಗರ್ ಅಭಿಪ್ರಾಯಪಡುತ್ತಾರೆ. ಇಂತಹ ದಮನಿತ ಸಂಗತಿಗಳನ್ನು ಡೊನಿಗರ್ ಮುನ್ನೆಲೆಗೆ ತಂದು ಚರ್ಚಿಸುವುದರಲ್ಲೇ ಅವರ ಚಾರಿತ್ರಿಕ ದೃಷ್ಟಿಕೋನದ ಬಗೆಯನ್ನು ತಿಳಿಸುತ್ತದೆ. ಚರಿತ್ರೆಯಲ್ಲಿ ಮರೆಮಾಚಿದ ಸತ್ಯಗಳನ್ನು ಬೆಳಕಿಗೆ ತರುವುದರ ಮೂಲಕ ಡೊನಿಗರ್ ಪರ್ಯಾಯ ಚರಿತ್ರೆಯನ್ನು ಶೋಧಿಸಲು ಪ್ರಯತ್ನಿಸಿದ್ದಾರೆ ಎಂಬುದಕ್ಕೆ ಈ ಕೃತಿಯಲ್ಲಿ ಸಾಕಷ್ಟು ನಿದರ್ಶನಗಳಿವೆ.

ಡೊನಿಗರ್ ಭಾರತದ ಚರಿತ್ರೆಯನ್ನು ಆಲದ ಮರವೊಂದರ ರೂಪಕದ ಮೂಲಕ ಗ್ರಹಿಸಲು ಯತ್ನಿಸಿದ್ದಾರೆ. ಅವರು "ಭಾರತದ ಚರಿತ್ರೆ ಒಂದು ದೊಡ್ಡ ಆಲದ ಮರದಂತಹುದ್ದು. ಕೊಂಬೆಗಳಿಲ್ಲದೆ ಆಕಾಶಕ್ಕೆ ನೀಳವಾಗಿ ಚಾಚಿಕೊಂಡಿರುವ ಒಂದು ವೃಕ್ಷದ ಹಾಗಲ್ಲದೆ ಆಲದ ಮರ ತನ್ನ ಕೊಂಬೆಗಳನ್ನು ಎಲ್ಲ ಕಡೆಗೂ ವಿಸ್ತರಿಸಿ ಬಿಳಲುಗಳನ್ನು ನೆಲದೊಳಕ್ಕೆ ಇಳಿಸುತ್ತದೆ. ಆ ಬಿಳಲುಗಳು ಆ ಕೊಂಬೆಗಳನ್ನು ಬೇರೆ ಮರಗಳಿಗೆ ಸಮಾನಗೊಳಿಸುತ್ತವೆ.

ಆ ವಿಧವಾಗಿ ಒಂದು ಆಲದ ಮರವೇ ಒಂದು ಕಾಡಾಗಿ ಮಾರ್ಪಡುತ್ತದೆ. ಸ್ವಲ್ಪ ಕಾಲಕ್ಕೆ ಅವುಗಳಲ್ಲಿ ಯಾವುದು ನಿಜವಾದ ಮರ ಯಾವುದು ಬಿಳಲು ಎಂಬುದೇ ಗೊತ್ತಾಗುವುದಿಲ್ಲ. ಇದೇ ಪದ್ಧತಿಯಲ್ಲಿ ನಾವು ಭಾರತದ ಚರಿತ್ರೆಗೆ ಸಂಬಂಧಿಸಿದಂತೆ ಒಂದು ಕಡೆ ಏನು ನಡೆಯುತ್ತಿದೆ ಎಂದು ತಿಳಿದುಕೊಳ್ಳುವ ಕ್ರಮದಲ್ಲಿ ನಮ್ಮ ದೃಷ್ಟಿಯನ್ನು ಅದಕ್ಕೆ ಸಮಾನಾಂತರವಾಗಿ ಹಾಯಿಸಿ ಮತ್ತೊಂದು ಕಡೆ ಏನು ನಡೆಯುತ್ತಿದೆ ಎಂಬುದನ್ನೂ ಕೂಡ ನೋಡಬೇಕಾಗಿರುತ್ತದೆ" ಎಂದಿರುವುದು ಮಹತ್ವದ ಅಂಶವಾಗಿದೆ. ಡೊನಿಗರ್ ಭಾರತದ ಚರಿತ್ರೆಯನ್ನು ಉತ್ತರ ಭಾರತ ಮತ್ತು ದಕ್ಷಿಣ ಭಾರತವೆಂದು ಪ್ರತ್ಯೇಕಿಸಿಕೊಂಡು ನೋಡುವ ಸಾಂಪ್ರದಾಯಿಕ ವಿಧಾನವನ್ನು ನಿರಾಕರಿಸುತ್ತಾರೆ. ಚರಿತ್ರಕಾರರು ಉತ್ತರ ಭಾರತದ ಆಗು ಹೋಗುಗಳಿಗೆ ಪ್ರಧಾನ ಆದ್ಯತೆಯನ್ನು ನೀಡುತ್ತಲೇ ಬಂದಿದ್ದಾರೆ. ಆಲದ ಮರವೊಂದರ ಬೇರುಗಳು ಮತ್ತು ಬಿಳಲುಗಳು ಒಂದರೊಳಗೊಂದು ಹಾಸುಹೊಕ್ಕಾಗಿರುವಂತೆ ಉತ್ತರ ಭಾರತ-ದಕ್ಷಿಣ ಭಾರತದ ಚರಿತ್ರೆಯನ್ನು ಒಂದರೊಳಗೊಂದು ಮಿಳಿತವಾಗಿರುವ ಸಾಧ್ಯತೆಗಳನ್ನು ಒರೆಗೆ ಹಚ್ಚಿ ನೋಡುತ್ತಾರೆ.

ಗುಪ್ತರ ಕಾಲದಲ್ಲಿ ಆರಂಭವಾದ ದೇವಾಲಯಗಳನ್ನು ಕಟ್ಟುವ ಪ್ರಕ್ರಿಯೆಯು ಮುಂದೆ ಬಾದಾಮಿ ಚಾಲುಕ್ಯರು, ಪಲ್ಲವರು, ಚೋಳರು, ಹೊಯ್ಸಳರು, ವಿಜಯನಗರಗಳ ಕಾಲದಲ್ಲಿ ಬೃಹತ್ ದೇವಾಲಯಗಳ ನಿರ್ಮಾಣಕ್ಕೆ ಬುನಾದಿಯನ್ನು ಹಾಕಿತು. ಇದರೊಂದಿಗೆ ದೇವಾಲಯದ ಗೋಡೆಗಳ ಮೇಲೆ ಪೌರಾಣಿಕ, ರಾಮಾಯಣ, ಮಹಾಭಾರತಗಳ ಕತೆಯ ಪ್ರಸಂಗಗಳು ಮತ್ತು ಅವುಗಳ ಪಾತ್ರಗಳು ಕೆತ್ತನೆಗೊಂಡವು. ಸಂಗೀತ, ಕಲೆ, ನೃತ್ಯಗಳ ಹೆಸರಲ್ಲಿ ಹೆಣ್ಣನ್ನು ದೇವದಾಸಿತನಕ್ಕೆ ಅಧೀನಗೊಳಿಸಿ ವೇಶ್ಯಾವಾಟಿಕೆಯ ಮೂಲಗಳಾದವು. ಪುರೋಹಿತಶಾಹಿ ವ್ಯವಸ್ಥೆ ಮತ್ತಷ್ಟು ಬಲಗೊಂಡಿದ್ದಲ್ಲದೆ ದೇವಾಲಯಗಳು ಪ್ರತಿಷ್ಠಿತರ ಶಕ್ತಿ ಕೇಂದ್ರಗಳಾದವು. ಇವು ವರ್ಣ ವ್ಯವಸ್ಥೆಯನ್ನು ಪುನರ್ ಪ್ರತಿಷ್ಠಾಪನೆಯನ್ನು ಮಾಡುವುದರ ಮೂಲಕ ಶ್ರಮಿಕ ಸಮುದಾಯಗಳನ್ನು ದೇವಾಲಯಗಳಿಂದ ದೂರ ಇಟ್ಟಿತು. ಆದರೆ ಇಂತಹ ಸಾಮಾಜಿಕ ವಿಘಟನೆಯ ಕಾಲಘಟ್ಟ ಮತ್ತು ಸನ್ನಿವೇಶಗಳಲ್ಲಿ ಪ್ರತಿಷ್ಠಿತ ಶಕ್ತಿಗಳನ್ನು ಪ್ರತಿರೋಧಿಸುವ ನೆಲೆಗಳು ಭಕ್ತಿ ಚಳವಳಿಯಿಂದ ಹುಟ್ಟಿಕೊಂಡವು. ಈ ಹಿನ್ನೆಲೆಯಲ್ಲಿ ಬಸವಣ್ಣ ಅಸಮಾನತೆಯ ಮೂಲವಾಗಿದ್ದ ದೇವಾಲಯಗಳ ಪ್ರತಿಷ್ಠೆಯನ್ನು ಭಂಜಿಸಲು 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎಂದು ಹೇಳಿದನು. ಡೊನಿಗರ್ ಇಂತಹ ಚಾರಿತ್ರಿಕ ಮತ್ತು ಪ್ರತಿಷ್ಠಿತ ಶಕ್ತಿ ಕೇಂದ್ರಗಳಿಂದ ದೂರವುಳಿದ ಮಹಾರಾಷ್ಟ್ರ, ತಮಿಳುನಾಡು, ಕರ್ನಾಟಕ, ಬಂಗಾಲ ಮೊದಲಾದ ಭಕ್ತಿ ಪಂಥಗಳ ಪ್ರತಿರೋಧದ ಚಹರೆಗಳನ್ನು ಚರ್ಚಿಸಿದ್ದಾರೆ.

ಭಾರತದ ಚರಿತ್ರೆಯನ್ನು ಅಧ್ಯಯನ ಮಾಡುವವರಿಗೆ ಹಲವು ಸಂಗತಿಗಳ ಕುರಿತು ಇಂದಿಗೂ ವಾದ-ವಾಗ್ವಾದಗಳು ನಡೆಯುತ್ತಿವೆ. ಆರ್ಯರ ಮೂಲ, ಭಾರತದಲ್ಲಿ ಅವರ ಪ್ರವೇಶ, ಜಾತಿಗಳ ಉದ್ಭವ ಮತ್ತು ಹಿಂದೂ ಮತದ ಮೂಲ-ಇವುಗಳ ಗೊಂದಲಗಳನ್ನು ಡೊನಿಗರ್ ತಮ್ಮ ಕೃತಿಯಲ್ಲಿ ವಿಶ್ಲೇಷಿಸಿದ್ದಾರೆ. ಕೆಲವು ಪ್ರಮೇಯಗಳನ್ನೂ ಮಂಡಿಸಿದ್ದಾರೆ. ಆದರೆ ಇವುಗಳ ಚಾರಿತ್ರಿಕ ಮೂಲಗಳನ್ನು ಕೆದಕುತ್ತ ಹೋಗುವುದರಿಂದ ಅವು ಮತ್ತಷ್ಟು ಗೋಜಲುಗಳಾಗಿಯೇ ಕಂಡಿವೆ. ಡೊನಿಗರ್ ಅವರ ಉದ್ದೇಶ ಇಂತಹ ಕೆಲವೊಂದು ಚಾರಿತ್ರಿಕ ಗೊಂದಲಗಳನ್ನು ಇತ್ಯರ್ಥ ಮಾಡುವುದಕ್ಕಿಂತ ಹಿಂದೂ ಮತದ ಸಾಂಸ್ಕೃತಿಕ ರಾಜಕಾರಣವನ್ನು ಶೋಧಿಸುವುದಾಗಿದೆ. ತಮ್ಮ ಅಧ್ಯಯನ ಮತ್ತು ಶೋಧನೆಗೆ

ಬಹುತೇಕವಾಗಿ ಲಿಖಿತ ಆಕರಗಳನ್ನು ಬಳಸಿಕೊಂಡಿದ್ದಾರೆ. ಭಾರತದ ಚರಿತ್ರೆಯನ್ನು ಅರಿಯಲು ಮೌಖಿಕ ಆಕರಗಳು ಕೂಡ ಮುಖ್ಯವೇ. ಅವುಗಳನ್ನು ಡೋನಿಗರ್ ಅಲ್ಲಲ್ಲಿ ಬಳಿಸಿದ್ದರೂ ಅವುಗಳ ಪ್ರಮಾಣ ಕಡಿಮೆ ಎಂದೇ ಹೇಳಬೇಕು. ಕೆಲವು ಸಲ ತೀರ ಸಾಮಾನ್ಯ ಮತ್ತು ಎಲ್ಲರಿಗೂ ತಿಳಿದಿರುವ ಸಂಗತಿಗಳನ್ನು ಅನಗತ್ಯವಾಗಿ ವಿವರಿಸುವ ಹಾಗೂ ಲಂಬಿಸುವ ಕಾರ್ಯವನ್ನೂ ಮಾಡಿದ್ದಾರೆ. ಸಾಮಾನ್ಯವಾಗಿ ಪಶ್ಚಿಮದ ಚರಿತ್ರೆಕಾರರು ಭಾರತವನ್ನು ಒಂದು ಅದ್ಭುತವೆಂದು ಏಕಮುಖಿಯಾಗಿ ವೈಭವೀಕರಣ ಮಾಡಿ ಬರೆದ ಕೃತಿಗಳು ಸಾಕಷ್ಟಿರುವಾಗ ಡೊನಿಗರ್ ಬಹುತ್ವದ ಭಾರತವನ್ನು ಶ್ರಮಿಕ ಸಮುದಾಯಗಳ ಬದುಕು ಮತ್ತು ಅವುಗಳ ಜ್ಞಾನ ಪರಂಪರೆಗಳ ಮೂಲಕ ನೋಡುವ ಪ್ರಯತ್ನವನ್ನು ಮಾಡಿದ್ದಾರೆ.

ನನಗೆ ತಿಳಿದ ಮಟ್ಟಿಗೆ ವೆಂಡಿ ಡೊನಿಗರ್ ಅವರ ಕೃತಿಯೊಂದನ್ನು ಬಂಜಗೆರೆ ಜಯಪ್ರಕಾಶ್ ಅವರು ಮೊದಲ ಬಾರಿಗೆ ಕನ್ನಡ ಭಾಷೆಗೆ ಅನುವಾದಿಸಿರುವುದು ನಿಜವಾಗಿಯೂ ಶ್ಲಾಘನೀಯ ಕಾರ್ಯವಾಗಿದೆ. ಈ ಮೊದಲು ಕೂಡ ಅವರು ಕೆಲವು ಆಂಗ್ಲ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ.[6] ಡೊನಿಗರ್ ಅವರ ಕೃತಿಯು ಇಂಗ್ಲಿಷ್‌ನಲ್ಲಿ ಏಳು ನೂರು (ಬಿಬ್ಲಿಯೋಗ್ರಾಫಿ ಮತ್ತು ಇಂಡೆಕ್ಸ್ ಹೊರತು ಪಡಿಸಿ) ಪುಟಗಳ ಬೃಹತ್ ಗ್ರಂಥವಾಗಿದೆ. ಬಂಜಗೆರೆ ಅವರು ಕೊನೆಯ ಎರಡು-ಮೂರು ಅಧ್ಯಾಯಗಳನ್ನು ಬಿಟ್ಟಿರುವುದು ಹಾಗೂ ಆಕರ ಕೃತಿಗಳ ಪಟ್ಟಿಯನ್ನು ನೀಡದಿರುವುದು ಚರಿತ್ರೆಯನ್ನು ಗಂಭೀರವಾಗಿ ಅಧ್ಯಯನ ಮಾಡುವವರ ದೃಷ್ಟಿಯಿಂದ ಕೊರತೆಗಳಾಗಿವೆ. ಆದ್ದರಿಂದ ಇದನ್ನು ಕನ್ನಡದಲ್ಲಿ ಓದುವವರು ಡೊನಿಗರ್‌ರ ಆಂಗ್ಲ ಗ್ರಂಥವನ್ನೂ ಓದಬೇಕಾಗುತ್ತದೆ.

ಟಿಪ್ಪಣಿಗಳು ಮತ್ತು ಆಕರ ಸೂಚಿ

01. Siva, the Erotic Ascetic(1973), The Origins of Evil in Hindu Mythology, Dreams, Illusion and Other Realities, Splitting the Difference: Gender and Myth in Ancient Greece and India, On Hinduism

02. **ಋಗ್ವೇದ, ಮನುಸ್ಮೃತಿ, ಕಾಮಸೂತ್ರ** ಮೊದಲಾದ ಕೃತಿಗಳನ್ನು ಸಂಸ್ಕೃತದಿಂದ ಇಂಗ್ಲಿಷಿಗೆ ಭಾಷಾಂತರಿಸಿದ್ದಾರೆ.

03. ಪಂಜಾಬಿನವರಾದ ದೀನಾ ನಾಥ ಬಾತ್ರ ನಿವೃತ್ತ ಶಾಲಾ ಶಿಕ್ಷಕರು. 'ಶಿಕ್ಷಾ ಬಚಾವ್ಹೋ ಆಂದೋಲನ್ ಸಮಿತಿ' ಮತ್ತು 'ಶಿಕ್ಷಾ ಸಂಸ್ಕೃತಿ ಉತ್ಥಾನ್ ನ್ಯಾಸ್' ಸಂಘಟನೆಗಳ ಸ್ಥಾಪಕರಾಗಿದ್ದಾರೆ. ಆರ್‌ಎಸ್‌ಎಸ್‌ನ 'ವಿದ್ಯಾ ಭಾರತಿ' ಸಂಸ್ಥೆಯ ಕಾರ್ಯದರ್ಶಿಯಾಗಿದ್ದರು. ಆರ್‌ಎಸ್‌ಎಸ್‌ನ ಕಟ್ಟಾ ಪ್ರಚಾರಕರಾಗಿದ್ದಾರೆ.

04. ಹಿಂದೂಗಳು: ಬೇರೊಂದು ಚರಿತ್ರೆ, ಪು.3

05. ಅದೇ, ಪು.269

06. ಅಲೇಕ್ಸ್ ಹೇಲಿಯ **ರೂಟ್ಸ್** ಕಾದಂಬರಿಯನ್ನು **ತಲೆಮಾರು** (2003) ಹೆಸರಲ್ಲಿ ಸಂಗ್ರಹಾನುವಾದ ಮಾಡಿದ್ದಾರೆ. ಇದು ಆನಂದಕಂದ ಗ್ರಂಥಮಾಲೆ. ಮಲ್ಲಾಡಿಹಳ್ಳಿಯಿಂದ ಪ್ರಕಟವಾಗಿದೆ. ಜಾನ್ ಪರ್ಕಿನ್ಸ್ ಅವರ **ಕನ್ಫೆಶನ್ಸ್ ಆಫ್ ಯಾನ್ ಎಕನಾಮಿಕ್ ಹಿಟ್‌ಮನ್** ಕೃತಿಯನ್ನು ಪಾಪ ನಿವೇದನೆ (2008) ಎಂದು ಅನುವಾದಿಸಿದ್ದಾರೆ. ಶಂಕರ ಮೊಕಾಶಿ ಪುಣೆಕರ ಅವರ **ಹರಿಜನ್ ಕಾಂಟ್ರಿಬ್ಯೂಷನ್ ಟು ದಿ ಮಿಡೀವಲ್ ಇಂಡಿಯನ್ ಥಾಟ್** ಕೃತಿಯನ್ನು **ಮಧ್ಯಯುಗೀನ ಭಾರತ: ಅಂತ್ಯಜರ ತತ್ವಚಿಂತನೆ** ಅಸ್ಪೃಶ್ಯರ ತತ್ವಚಿಂತನೆ ಎಂದು ಅನುವಾದಿಸಿದ್ದಾರೆ. ■

ITIHASA DARPANA (Quarterly)
A Peer Reviewed Journal of Historical Research in Kannada
ISSN 2321-3590
Book No.: 37-38.
April – September 2018
Author: P.V. Krishna Murthy.
Title: Ganga Śrīpuruṣana Hebbāḷada aprakaṭita śāsanu

ಗಂಗ ಶ್ರೀಪುರುಷನ ಹೆಬ್ಬಾಳದ ಅಪ್ರಕಟಿತ ವೀರಗಲ್ಲು ಶಾಸನ

ಪಿ.ವಿ. ಕೃಷ್ಣಮೂರ್ತಿ
37, ಶ್ರೀಕೃಷ್ಣ ಕೃಪ
3ನೆಯ ಅಡ್ಡರಸ್ತೆ,
1ನೆಯ ಮುನೇಶ್ವರ ಬ್ಲಾಕ್,
ಹರಿನಗರಕ್ರಾಸ್
ಬೆಂಗಳೂರು–560108
ಮೊ: 9036808395
pvk.krishnamurthy@gmail.com

ಬೆಂಗಳೂರು ನಗರ ವ್ಯಾಪ್ತಿಯಲ್ಲಿನ ಬೆಂಗಳೂರು-ಬಳ್ಳಾರಿ ಮುಖ್ಯರಸ್ತೆಯಲ್ಲಿರುವ ಇಂದಿನ ಹೆಬ್ಬಾಳ ಗ್ರಾಮವು ಗಾಂಧಿ ಕೃಷಿ ವಿಜ್ಞಾನ ಕೇಂದ್ರ ಮತ್ತು ಬೆಂಗಳೂರು ಕೃಷಿ ವಿಜ್ಞಾನ ವಿಶ್ವವಿದ್ಯಾಲಯ ಮುಂತಾದವುಗಳ ನೆಲೆಯಾಗಿ ಪ್ರಸಿದ್ಧವಷ್ಟೆ. ಈ ಗ್ರಾಮದ ಊರ ಬಾಗಿಲ ಬಳಿ ಹದಿನೇಳನೆಯ ಶತಮಾನದ ಶಾಸನವೊಂದರ [1] ಜೊತೆಯಲ್ಲಿ ಎರಡು ಯಂತ್ರದ ಕಲ್ಲುಗಳು ಹಾಗೂ ಒಂದು ವೀರಗಲ್ಲು ಶಿಲ್ಪದಿಂದ ಕೂಡಿದ ಶಿಲೆಗಳು ಇದ್ದವು. ಇತ್ತೀಚೆಗೆ ರಸ್ತೆ ಅಭಿವೃದ್ಧಿಯ ಭಾಗವಾಗಿ ಅವನ್ನು ತೆರವುಗೊಳಿಸಲು ನಗರಾಡಳಿತದವರು ಮುಂದೆ ಬಂದ ಸಂದರ್ಭದಲ್ಲಿ ಅವುಗಳನ್ನು ರಕ್ಷಿಸಲು ನಗರದ ರಾಜೀವ್ ನೃಪತುಂಗ ಅವರ ನೇತೃತ್ವದ **ಹೆರಿಟೇಜ್ ರಿವೈವಲ್ ಹಬ್**‌ನ ಕಾರ್ಯಕರ್ತರು ಮುಂದೆ ನಿಂತು, ಅಲ್ಲಿನ ನಿವಾಸಿಗಳ ನೆರವಿನೊಂದಿಗೆ ಅಲ್ಲಿನ ವೀರಗಲ್ಲು ಶಿಲ್ಪದಿಂದ ಕೂಡಿದ ಶಿಲೆಯ ಅಡಿಭಾಗವನ್ನು ಶೋಧಿಸಿದಾಗ ಅಲ್ಲಿ ಅಕ್ಷರಗಳಿರುವುದನ್ನು ಗಮನಿಸಿದರು. ಅವರು ಆ ಭಾಗವನ್ನು ಶುದ್ಧಿಗೊಳಿಸಿ ಛಾಯಾಚಿತ್ರ ತೆಗೆದು, ಕೂಡಲೇ ವಾಟ್ಸಪ್ ಮೂಲಕ ನನಗೆ ರವಾನಿಸಿದರು. (ಆಗ ರಾತ್ರಿ 8 ಗಂಟೆ) ನಾನು ಅದನ್ನು ಆ ಕೂಡಲೇ ಅವಲೋಕಿಸಿ ಅದು ತಲಕಾಡು ಗಂಗರ

ಶ್ರೀಪುರುಷನದೆಂದು (ಕ್ರಿ.ಶ. ಸು 726–788), ಇದುವರೆಗೂ ಅಪ್ರಕಟಿತವೆಂದು, ಅದರ ಲಿಪಿ ಸ್ವರೂಪದ ಹಿನ್ನೆಲೆಯಲ್ಲಿ ಅದರ ಕಾಲ ಸುಮಾರು ಕ್ರಿಸ್ತಶಕ ಎಂಟನೆಯ ಶತಮಾನವೆಂದು ಅದರಲ್ಲಿ ಪೆರ್ಬ್ಬೊಳಲ ಮೂವತ್ತು ಎಂಬ ಪ್ರಾದೇಶಿಕ ವಿಭಾಗದ ಪ್ರಸ್ತಾಪವಿರುವುದನ್ನು ತಿಳಿಸಿದೆ. ಅಷ್ಟಕ್ಕೆ ಅವರು ನನ್ನನ್ನು ಬಿಡದೆ ಮರುದಿನ ಬೆಳಗ್ಗೆಯೇ ನಾನು ಅದನ್ನು ಪ್ರತ್ಯಕ್ಷವಾಗಿ ಪರಿಶೀಲಿಸಲು ಒತ್ತಾಯಮಾಡಿದರು, ಅವರ ಬಳಗದ ಪ್ರಶಾಂತ್‌ವೇಪುರಿ ಎಂಬುವರು ನನ್ನನ್ನು ಅಲ್ಲಿಗೆ ಕರೆದೊಯ್ದರು. ಆಗ ನಾನು ಸ್ಥಳದಲ್ಲಿಯೇ ಶಾಸನದ ಪಾಠವನ್ನು ಸಿದ್ಧಪಡಿಸಿ, ಅನಂತರ ಅದರ ಪಡಿಯಚ್ಚು ಮಾಡಿಕೊಳ್ಳಲಾಯಿತು. ಅಲ್ಲದೆ ಇತ್ತೀಚಿಗೆ **ಇನ್ಸ್ಕ್ರಿಪ್ಷನ್ ಸ್ಟೋನ್ಸ್ ಆಫ್ ಬೆಂಗಳೂರು** ವೇದಿಕೆಯ ಪಿ.ಎಲ್. ಉದಯ ಕುಮಾರ್ ಅವರು ಒದಗಿಸಿದ ಆ ಶಾಸನದ ಉತ್ತಮ ಛಾಯಾಚಿತ್ರದ ನೆರವಿನಿಂದ ಅದನ್ನು ಮತ್ತೆ ಸೂಕ್ಷ್ಮವಾಗಿ ಪರಿಶೀಲಿಸಿ, ಭಾಷೆ, ಲಿಪಿ, ಬಂಧ ಇವುಗಳ ನೆರವಿನಿಂದ ಸಿದ್ಧಪಡಿಸಿರುವ ಶಾಸನದ ಪಾಠವನ್ನು ಮತ್ತು ಸಾರಾಂಶವನ್ನು ಕೆಳಗೆ ನೀಡಲಾಗಿದೆ. ಪಾಠವನ್ನು ಸಿದ್ಧಪಡಿಸುವಲ್ಲಿ ನೆರವಾದ ನನ್ನ ಗುರುಗಳಾದ ಕೆ.ಆರ್. ಗಣೇಶ, ಕೆ.ಆರ್. ನರಸಿಂಹನ್ ಹಾಗೂ ಮಿತ್ರ ಎಸ್. ಕಾರ್ತಿಕ್ ಅವರಿಗೆ ಧನ್ಯವಾದಗಳು.

ಶಾಸನದ ಪಾಠ

1 ಸ್ವಸ್ತಿ ಶ್ರೀ ಸಿರಿಪುರುಷ ಮಹಾರಾಜಾ ಪೃಥುವೀ ರಾಜ್ಯಂಗೆಯ್ಯೆ
2 ಪೆರ್ಬ್ಬೊಳಲ್ನಾಡು ಮೂವತ್ತುಮಾನ್ಪೆಟ್ಟ್ನಾಗತ್ತರಸರಾಳೆ ಆರ
3 ಕಮ್ಮೊಜಿರ ಮೈಂದುನಂ ಕೊಡನ್ದಲೆಯರ ಕಿತ್ತಯನಾ ರಟ್ಟವಾ
4 ಡಿ ಕೂಚಿ ತನ್ನೊಡೆ ಊರಟಿವಿನೊಳೆಜಿದಿನ್ದ್ರಕ ಪುಕಾನ್
5 ಪೆರ್ಗ್ಗನ್ದಿಯು ಕಿಱುಗುನ್ದಿ ತಮ್ಮ ಕುಳ್ನಿಜಿದೊದು ಇ ಕಲ್ಲುಂ

ಸಾರಾಂಶ

ಸಿರಿಪುರುಷ (ಶ್ರೀ>ಸಿರಿ) ಮಹಾರಾಜನು ಭೂಮಿಯನ್ನು (ರಾಜ್ಯವನ್ನು) ಆಳುತ್ತಿದ್ದಾಗ ಪೆರ್ಬ್ಬೊಳಲನಾಡು–30ನ್ನು ಪೆಟ್–? ನಾಗತ್ತರಸನು ಆಳುತ್ತಿರಲು ಆರ (ಎಂಬ ಮನೆತನದ–?) ಕಮ್ಮೊಜಿ ಎಂಬ ವ್ಯಕ್ತಿಯ ಮೈದುನ ಕೊಡನ್ದಲೆ (ವಂಶದ) ಕಿತ್ತಯ್ಯನು ರಟ್ಟವಾಡಿಯ ದಂಡು ಬಂದಾಗ ಊರಿನ ನಾಶವನ್ನು ತಡೆಯಲು ಹೋರಾಡಿ ಸತ್ತು ಇನ್ದ್ರಲೋಕವನ್ನು ಸೇರಿದ–? = ಸ್ವರ್ಗಸ್ತನಾದ. ಪ್ರಾಯಃ ವೀರನ ಬಂಧುಗಳಾದ ಪೆರ್ಗ್ಗನ್ದಿ ಮತ್ತು ಕಿಱುಗುನ್ದಿತಮ್ಮ ಎಂಬುವರು ಕುಳ್ನಿಜಿದ (ಕುಳ್+ನಿಜಿದ = ಕುಳ್ಳಿರಿಸಿದ – ಸ್ಥಾಪಿಸಿದ) ಕಲ್ಲು ಇದಾಗಿದೆ.

ಸುಮಾರು 0.6 ಮೀ. ಅಗಲ ಮತ್ತು 1.2 ಮೀ. ಎತ್ತರದ ಈ ವೀರಗಲ್ಲಿನ ಪಾಠದ ಮೇಲ್ಭಾಗದಲ್ಲಿ ಕೆತ್ತಿರುವ ಶಿಲ್ಪದಲ್ಲಿ ಕುದುರೆಯ ಮೇಲೆ ಕುಳಿತಿರುವ ವೈರಿಯ ಚಿತ್ರವನ್ನು ಬಹುಶಃ ಕೆತ್ತಲಾಗಿದ್ದು, ವೀರನು ಅವನನ್ನು ಎದುರಿಸಿ ಹೋರಾಡುವ ಭಂಗಿಯಲ್ಲಿ ನಿಂತಿರುವುದು ಕಂಡುಬರುತ್ತದೆ. ಇಬ್ಬರ ಕೈಯಲ್ಲೂ ಆಯುಧಗಳಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಇಲ್ಲಿ ಶಿಲ್ಪಗೊಂಡಿರುವ ಕುದುರೆಯ ಅಂಗರಚನೆ ವಿಶಿಷ್ಟವಾಗಿದೆ.


ದಕ್ಷಿಣ ಕರ್ನಾಟಕ ಪ್ರದೇಶದ ಮೇಲೆ ಆಡಳಿತ ನಡೆಸಿದ ಗಂಗರಸರಲ್ಲಿ ಶ್ರೀಪುರುಷ ಮಹಾರಾಜನು ಬಹು ಪ್ರಸಿದ್ಧನಾದ ದೊರೆ. ಈತನನ್ನು 'ರಣಭಾಜನ, ರಾಜಕೇಸರಿ, ಭೀಮಕೋಪ, ಲೋಕಧೂರ್ತ, ಪೆರ್ಮಾನಡಿ, ಕೊಂಗುಣಿಮುತ್ತರಸ' ಎಂದು ಮುಂತಾದ ಬಿರುದುಗಳಿಂದ ಶಾಸನಗಳು ವರ್ಣಿಸಿವೆ. ಅಲ್ಲದೆ ರೂಪದಲ್ಲಿ ಕಾಮನೂ, ಧನುರ್ಯುದ್ಧಮಾಡುವಲ್ಲಿ ರಾಮಚಂದ್ರನೂ, ವಿಕ್ರಮದಲ್ಲಿ ಪರಶುರಾಮನೂ ಐಶ್ವರ್ಯದಲ್ಲಿ ದೇವೇಂದ್ರನೂ, ಪ್ರತಾಪದಲ್ಲಿ ಸೂರ್ಯನೂ, ಪ್ರಭುತ್ವದಲ್ಲಿ ಕುಭೇರನೂ ಆಗಿದ್ದು ಪ್ರಜಾಪರಿಪಾಲನಕ್ಕಾಗಿಯೇ ಬ್ರಹ್ಮನಿಂದ ಸೃಷ್ಟಿಸಲ್ಪಟ್ಟಿದ್ದನೆಂದೂ ಶಾಸನಕವಿಗಳು ಇವನನ್ನು ವಿಧ ವಿಧವಾಗಿ ವರ್ಣಿಸಿವೆ. ಇವನು ಗಜಶಾಸ್ತ್ರವೆಂಬ ಗ್ರಂಥವನ್ನು ರಚಿಸಿದ್ದನೆಂದೂ ತಿಳಿದು ಬರುತ್ತದೆ. ಶ್ರೀಪುರುಷನ ದೀರ್ಘವಾದ ಆಳ್ವಿಕೆಯಲ್ಲಿ ದಕ್ಷಿಣದಲ್ಲಿ ಪ್ರಬಲರಾಗಿ ಮೆರೆಯುತ್ತಿದ್ದ **ಪಾಂಡ್ಯ, ಪಲ್ಲವ** ಹಾಗೂ ಉತ್ತರದ ಕಡೆಯಿಂದ ದಾಳಿಮಾಡಿದ **ರಾಷ್ಟ್ರಕೂಟರ** ಸೊಕ್ಕನ್ನೂ ಮುರಿದು ಯಾರಿಗೂ ಅಡಿಯಾಳಗದೆ ತನ್ನ ಸ್ವತಂತ್ರತೆಯನ್ನು ಕಾದುಕೊಂಡಿದ್ದ ಅಪ್ರತಿಮ ದೊರೆಯಾಗಿದ್ದನು ಶ್ರೀಪುರುಷ ಮಹಾರಾಜ. ಇವನ ಕಾಲದಿಂದಲೇ ಅಧಿಕ ಸಂಖ್ಯೆಯ ಗಂಗರ ಶಿಲಾಶಾಸನಗಳು ಹಾಗೂ ವೀರಗಲ್ಲುಗಳು ತಲೆ ಎತ್ತಿರುವುದು ಗಮನಾರ್ಹ ಸಂಗತಿ.


ಉತ್ತರದಲ್ಲಿ ಬಾದಾಮಿ ಚಲುಕ್ಯರ ರಾಜ್ಯವನ್ನು ಆಕ್ರಮಿಸಿ ಅವರ ಪಿತ್ರೈಸಿಗಳಾಗಿದ್ದ ದಕ್ಷಿಣದ ಈ ಗಂಗರಸರ ರಾಜ್ಯವಾದ ಗಂಗವಾಡಿಯನ್ನು ಆಕ್ರಮಿಸಬೇಕೆಂದು ದಾಳಿಯಿಟ್ಟದ್ದ ರಾಷ್ಟ್ರಕೂಟರೊಡನೆ ಗಂಗರಸರು ಹೋರಾಡಿದ ಸಂದರ್ಭದ ಅನೇಕ ವೀರಗಲ್ಲುಗಳು ತುಮಕೂರು ಜಿಲ್ಲೆಯ ಹಿರೀಗುಂಡಗಲ್ಲು ಮುಂತಾದ ಅನೇಕ ಸ್ಥಳಗಳಲ್ಲಿ ಕಂಡುಬರುತ್ತವೆ.[2] ಅಂತಹ ದಾಳಿಯೊಂದರ ಸಂದರ್ಭದ ವೀರಗಲ್ಲೇ ಪ್ರಸ್ತುತ ಹೆಬ್ಬಾಳದಲ್ಲಿ ಶೋಧವಗಿರುವ ಈ ಅಪ್ರಕಟಿತ ವೀರಗಲ್ಲು ಶಾಸನವಾಗಿದೆ.

ಈ ಶಾಸನದಲ್ಲಿ ಪೆರ್ಬ್ಬೊಳಲನಾಡು-30 ಎಂಬ ಆಡಳಿತ ವಿಭಾಗದ ಉಲ್ಲೇಖ ಬಂದಿದೆ. ಅಂದರೆ ಈ ಶಾಸನ ದೊರೆತ ಸ್ಥಳವಾದ ಹೆಬ್ಬಾಳವನ್ನು ಕೇಂದ್ರವಾಗಿಟ್ಟುಕೊಂಡು ಅದರ ಸುತ್ತಮುತ್ತಲ ಸುಮಾರು ಮೂವತ್ತು ಗ್ರಾಮಗಳ ವ್ಯಾಪ್ತಿಯನ್ನು ಪಡೆದಿದ್ದ ನಾಡು ಇದಾಗಿದ್ದಿತೆಂದು ತೋರುತ್ತದೆ. ಇಲ್ಲಿನ ಪೆರ್ಬ್ಬೊಟಿಲ್ ಎಂಬುದು ಇಂದಿನ ಹೆಬ್ಬಾಳ ಗ್ರಾಮವೇ ಆಗಿದೆ. ಪಿರಿಯ + ಪೊಟಿಲ್= ಪೆರ್ಪೊಟಿಲ್ > ಪೆರ್ವ್ವೊಟಿಲ್ > ಪೆರ್ಬ್ಬೊಟಿಲ್ > ಪೆರ್ಬ್ಬೊಳ್ > ಪೆಬ್ಬೊಳ್ > ಪೆಬ್ಬಾಳ > ಹೆಬ್ಬಾಳ ಎಂದು ಈ ಶಬ್ದದ ಬೆಳವಣಿಗೆಯ ಸ್ಥೂಲ ಸ್ವರೂಪವಾಗಿದೆ. ಈ ಸ್ಥಳವು 1300 ವರ್ಷಗಳಷ್ಟು ಪುರಾತನವಾದುದಾಗಿದೆ.

ದಕ್ಷಿಣಕ್ಕೆ ಬೆಂಗಳೂರನ್ನೂ ಒಳಗೊಂಡಂತೆ ಉತ್ತರದ ಎಲಹಂಕ ಪ್ರದೇಶವೂ ಈ ಪೆರ್ಬ್ಬೊಳಲ ನಾಡಿನಲ್ಲಿ ಅಂತರ್ಗತವಾಗಿದ್ದವೆಂದು ತೋರುತ್ತದೆ. 'ಎಲವ ವಿಷಯ' ಎಂಬ ಎಲಹಂಕನಾಡಿನ ಪ್ರಾಚೀನತಮ ಉಲ್ಲೇಖವು ಇತ್ತೀಚೆಗೆ ಶೋಧವಾಗಿರುವ ಹೆಸರಘಟ್ಟದ ರಾಜೇಂದ್ರ ಚೋಳನ ಆಳ್ವಿಕೆಯ ಕ್ರಿ.ಶ. 1019ರ ಕನ್ನಡ ಶಾಸನದಲ್ಲಿ ಬಂದಿದೆ.[3] ಪೆರ್ಬ್ಬೊಳಲನಾಡಿನ ಪೂರ್ವಕ್ಕೆ ದಕ್ಷಿಣ ಸಬ್ಬಿನಾಡು ಮತ್ತು ಮಾಶಂದಿ/ ತೊಜೆವಳಿ ನಾಡು, ಪಶ್ಚಿಮಕ್ಕೆ ಕುಕ್ಕಲನಾಡು, ಉತ್ತರಕ್ಕೆ ಸಬ್ಬಿನಾಡು, ದಕ್ಷಿಣಕ್ಕೆ ಬೆಂಪೂರು-







ಚಿತ್ರ ಕೃಪೆ: ಪಿ.ಎಲ್. ಉದಯ ಕುಮಾರ್

12 ಹಾಗೂ ಹೊಮ್ಮಳಿಗೆ ನಾಡುಗಳು ಮೇರೆಗಳಾಗಿದ್ದವೆಂದು ಹೇಳಬಹುದಾಗಿದೆ. ಈ ಪೆರ್ಬ್ಬೊೞಲ್ (ಪಿರಿಯ + ಪೊೞಲ್) ಅಂದರೆ ಇಂದಿನ ಹೆಬ್ಬಾಳ ಸ್ಥಳವು ಎಂಟನೆಯ ಶತಮಾನಕ್ಕಾಗಲೇ ದೊಡ್ಡ ಪಟ್ಟಣವಾಗಿದ್ದಿತೆಂದು ತೋರುತ್ತದೆ. ಇದು ಬೆಂಗಳೂರನ್ನು ಸಂಪರ್ಕಿಸುವ ಪ್ರಾಚೀನ ವಾಣಿಜ್ಯ ಮಾರ್ಗದಲ್ಲಿಯೇ ಸಮಾವೇಶಗೊಂಡಿರುವುದು ಗಮನಾರ್ಹ ಅಂಶವಾಗಿದ್ದು ಬೆಂಗಳೂರು ಮುಂದೆ ಒಂದು ಪ್ರಮುಖ ವಾಣಿಜ್ಯ ಕೇಂದ್ರವಾಗಿ ರೂಪುಗೊಳ್ಳುವುದಕ್ಕೂ ಎಷ್ಟೋ ಮೊದಲೇ ಹೆಬ್ಬಾಳ ಕೂಡ ಒಂದು ಪ್ರಮುಖ ವಾಣಿಜ್ಯಕೇಂದ್ರವಾಗಿ ಮೆರೆದಿದ್ದಿತೆಂದು ಅಭಿಪ್ರಾಯಪಡಲು ಅವಕಾಶವಿದೆ.

ಪೆಬ್ನಾಗತ್ತರಸ ಎಂಬುವನು ಪೆರ್ಬ್ಬೊೞಲನಾಡು-30ನ್ನು ಆಳುತ್ತಿದ್ದನು. 'ಪೆಟ್' ಎಂಬುದು 'ದೊಡ್ಡ' ಎಂಬರ್ಥದಲ್ಲಿ ಬಳಕೆ ಯಾಗಿರುವುದಕ್ಕೆ ಆಧಾರಗಳಿವೆ. ಅಂದರೆ ಇವನನ್ನು 'ದೊಡ್ಡನಾಗತ್ತರಸ' ಎಂದು ಗ್ರಹಿಸಬಹುದು. 9–10ನೆಯ ಶತಮಾನದ ಪ್ರಸಿದ್ಧ ಬೇಗೂರು ವೀರಗಲ್ಲು ಶಾಸನದಲ್ಲಿ ಇರ್ವ್ವಲಿ ಯೂರ್ ಒಡೆಯನಾದ ಇರುಗನಿಗೆ 'ನಾಗತ್ತರಪಟ್ಟ'ವನ್ನು ನೀಡಿರುವ ಸಂದರ್ಭವನ್ನು ಗಮನಿಸಿದರೆ 'ನಾಗತ್ತರ' ಎಂಬುದು ಒಂದು ಬಿರುದೇ? ಎಂಬ ಸಂದೇಹ ಉಂಟಾಗದೆ ಇರದು. ಕಿತ್ತಯ್ಯ = ಕಿತ್ತರಸ ಎಂದು ಭಾವಿಸಿದರೆ, ಇದೇ ಗಂಗ ಶ್ರೀಪುರುಷನ ಹಿರೀಗುಂಡಗಲ್ಲು ಶಾಸನವೊಂದರಲ್ಲಿ[4] ರಾಷ್ಟ್ರಕೂಟರ ವಿರುದ್ಧ ನಡೆದ ಕಾಳೆಗದ ಸಂದರ್ಭದಲ್ಲೂ 'ಕಿತ್ತರಸ' ಎಂಬುವವನ ಉಲ್ಲೇಖವಿರುವುದನ್ನು ಗಮನಿಸಬಹುದಾಗಿದೆ. 'ಕೂಚಿ' ಎಂಬುವ ಪದಕ್ಕೆ 'ಕೂಚು' ಎಂರ್ಥವೂ ಇದ್ದು ಇದಕ್ಕೆ 'ಸಿದ್ಧತೆ, ಸಜ್ಜು ಎಂಬರ್ಥದ ಜೊತೆಗೆ ಸಿಬಿರದಿಂದ ಸೈನ್ಯದ ರವಾನೆ, ದಂಡಿನ ಚಲನೆ, ದಂಡಿನೊಡನೆ ಪ್ರಯಾಣಮಾಡು' ಎಂಬರ್ಥಗಳು ನಿಘಂಟುಗಳಲ್ಲಿ ದಾಖಲಿಸಿರುವುದನ್ನು ಗಮನಿಸಬಹುದಾಗಿದೆ. ಹಾಗಾಗಿ 'ಆರ ಕಮ್ಮೊಱರ ಮೈದುನನಾದ ಕೊಡನ್ದಲೆಯರ ಕಿತ್ತಯನು ರಟ್ಟವಾಡಿಯ (ರಾಷ್ಟ್ರಕೂಟರ) ದಂಡು ದಾಳಿ ಮಾಡಲು ಬಂದಾಗ ನಡೆದ ಊರಳಿವಿನ ಹೋರಾಟದಲ್ಲಿ ಸ್ವರ್ಗಸ್ಥನಾದನೆಂದು ಅರ್ಥೈಸಬಹುದಾಗಿದೆ.

ಈ ಶಾಸನದ ಬಗೆಗೆ ಹೆಚ್ಚಿನ ಅಧ್ಯಯನ ನಡೆಯಬೇಕಿದೆ. ಶಾಸನದ ಪಾಠ ಅನೇಕ ಕಡೆ ಅಸ್ಪಷ್ಟವಾಗಿದ್ದು, ಕಂಡರಣೆಕಾರನಿಂದಾಗಿರುವ ಅಪಲಿಖಿತಗಳೂ ಸೇರಿ ಅತ್ಯಂತ ಖಚಿತವಾಗಿ ಅರ್ಥವನ್ನು ಹೇಳಲು ಸಾಧ್ಯವಾಗುತ್ತಿಲ್ಲ. ಸಂದರ್ಭಾನುಸಾರವಾಗಿ ಅರ್ಥವನ್ನು ಹೇಳಲು ಇಲ್ಲಿ ಪ್ರಯತ್ನಿಸಲಾಗಿದೆ.

ಟಿಪ್ಪಣಿಗಳು ಮತ್ತು ಆಕರ ಸೂಚಿ

01. **ಎಪಿಗ್ರಾಫಿಯಾ ಕರ್ನಾಟಿಕಾ** ಸಂಪುಟ IX. {ರೈಸ್ ಆವೃತ್ತಿ}. ಬೆಂಗಳೂರು-136.
02. **ಎಪಿಗ್ರಾಫಿಯಾ ಕರ್ನಾಟಿಕಾ** ಸಂಪುಟ XVI. ತುಮಕೂರು 86 ರಿಂದ 104 ಸಂಖ್ಯೆಯಲ್ಲಿನ ಹಲವು ವೀರಗಲ್ಲುಗಳು. ತುಮಕೂರು ಜಿಲ್ಲೆಯ ಸಪ್ಲಿಮೆಂಟರಿ ಸಂಪುಟ.
03. ನೋಡಿ: **ಇತಿಹಾಸ ದರ್ಶನ** ಸಂಪುಟ 33(2018)ಪು. 46.
04. **ಎಪಿಗ್ರಾಫಿಯಾ ಕರ್ನಾಟಿಕಾ** ಸಂಪುಟ XVI. ತುಮಕೂರು 91. ತುಮಕೂರು ಜಿಲ್ಲೆಯ ಸಪ್ಲಿಮೆಂಟರಿ ಸಂಪುಟ.

ITIHASA DARPANA (Quarterly)
A Peer Reviewed Journal of Historical Research in Kannada
ISSN 2321-3590
Book No.: 37-38.
April – September 2018
Author: H S Gopala rao
Title: K.G. Bēvinahaḷḷi gramada vīragallu ṣāsana

ಕೆ.ಜಿ. ಬೇವಿನಹಳ್ಳಿ ಗ್ರಾಮದ ವೀರಗಲ್ಲು ಶಾಸನ

ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನ, ಕೋಳಾಲ ಹೋಬಳಿಯ ಒಂದು ಗ್ರಾಮ ಕೆ.ಜಿ.ಬೇವಿನಹಳ್ಳಿ. ಇಲ್ಲಿ ದೊಡ್ಡದಾದ ಒಂದು ಬೇವಿನಮರದ ಕೆಳಗೆ ಅತಿ ಸಾಧಾರಣವೆನ್ನ ಬಹುದಾದ ಭೈರವೇಶ್ವರ ಅಥವಾ ಭೈರಪ್ಪನ ದೇವಾಲಯವಿದೆ. ಅದು ಒರಟು ಕಲ್ಲು ಮತ್ತು ಮಣ್ಣಿನಿಂದ ನಿರ್ಮಾಣವಾಗಿದ್ದು, ಮೇಲ್ಛಾವಣಿಗೆ ಕಲ್ಲಿನ ಚಪ್ಪಡಿಗಳನ್ನು ಹಾಕಲಾಗಿದೆ. ಈ ಗ್ರಾಮಕ್ಕೆ ಸಮೀಪ ಗುಡಿಬೇವಿನಹಳ್ಳಿ ಗ್ರಾಮವಿದೆ.

ಕೆ.ಜಿ.ಬೇವಿನಹಳ್ಳಿಯ ಗಂಗರಾಜು ಅವರ ಜಮೀನಿನಲ್ಲಿರುವ ಭೈರಪ್ಪ ಅಥವಾ ಭೈರವೇಶ್ವರ ದೇವಾಲಯವು ಹೊರನೋಟಕ್ಕೆ ದೇವಾಲಯ ವೆನಿಸುವುದಿಲ್ಲ. ಅದೊಂದು ಊರಾಚೆ ಇರುವ ಪಾಳು ಮಂಟಪವೆನಿಸುತ್ತದೆ. ಇಡೀ ಮಂಟಪವನ್ನು ಮೇಲ್ಛಾವಣಿಯನ್ನೂ ಬಿಡದಂತೆ ಬೇವಿನಮರದ ಬೇರುಗಳು ಆಕ್ರಮಿಸಿಕೊಂಡಿವೆ. ದೇವಾಲಯವನ್ನು ಸಾಧಾರಣವಾದ ಬಾಗಿಲಿನ ಮೂಲಕ ಪ್ರವೇಶಿಸಿದರೆ, ಎಡಗಡೆಗೆ ಭೈರವ ಎಂದು ಗುರುತಿಸಲಾಗುವ ಕಲ್ಲು ಮತ್ತು ಅದರಿಂದ ಸ್ವಲ್ಪ ಮುಂದೆ ಗರ್ಭಗುಡಿ ಎಂದು ಕರೆಯಲಾಗುವ ಭಾಗದಲ್ಲಿ ಸಪ್ತಮಾತೃಕೆಯರು ಎಂದು ಗುರುತಿಸಲಾಗುವ ಕಲ್ಲುಗಳಿಗೆ ಭಕ್ತರಿಂದ ಪೂಜೆ ಸಲ್ಲುತ್ತದೆ. ಸ್ಥಳೀಯರೇ ಅಲ್ಲದೆ, ಸಮೀಪದ

ಎಚ್.ಎಸ್.ಗೋಪಾಲ ರಾವ್
144, 'ಸ್ವಸ್ತಿಶ್ರೀ ಸ್ಕಂದ', ಐ.ವೈ.ಡಿ. ರಸ್ತೆ,
ಅರಸಿನಕುಂಟೆ, ನೆಲಮಂಗಲ
ತಾಲ್ಲೂಕು, ಬೆಂಗಳೂರು ಗ್ರಾಮಾಂತರ
ಜಿಲ್ಲೆ – 562 123
ಮೊಬೈಲ್: 9448669922
hsgorao@yahoo.com

ಹಲವು ಗ್ರಾಮಗಳಲ್ಲಿ ಈ ಭೈರವನ ಒಕ್ಕಲುಗಳಿದ್ದಾರೆ. ಅವರುಗಳು ತಮಗೆ ಅವಕಾಶವಾದಾಗ ಅಥವಾ ಬೇಕು ಎನಿಸಿದಾಗ ಭೈರವೇಶ್ವರನಿಗೆ ಪೂಜೆ ಸಲ್ಲಿಸುತ್ತಾರೆ.

ಮೊದಲ ಮಳೆ ಬಂದ ನಂತರ ಉಳುಮೆಯ ಕಾರ್ಯ ಆರಂಭಿಸುವಾಗ ಸ್ಥಳೀಯ ದೇವರುಗಳಿಗೆ ಪೂಜೆ ಸಲ್ಲಿಸುವ ಪದ್ಧತಿ ಸಾಮಾನ್ಯವಾಗಿ ಎಲ್ಲ ಗ್ರಾಮಗಳಲ್ಲಿರುತ್ತದೆ; ಅಂತೆಯೇ ಸುಗ್ಗಿಯ ಸಂದರ್ಭದಲ್ಲೂ ಇಂತಹ ಆಚರಣೆಗಳಿಗೆ ಅವಕಾಶ ಇರುತ್ತದೆ. ಇವೆಲ್ಲವುದರ ಜೊತೆಗೆ ಸುಗ್ಗಿಯ ನಂತರ ಊರವರೆಲ್ಲರೂ ಸೇರಿ ಆಚರಿಸುವ ಪರೇವು ಅಥವಾ ಪರ್ವ ಊರೊಟ್ಟಿನ ಕಾರ್ಯಕ್ರಮವಾಗಿರುತ್ತದೆ. ಇಂತಹ ಕಾರ್ಯಕ್ರಮಗಳು ಇಲ್ಲಿಯೂ ನಡೆಯುವ ಸೂಚನೆಗಳಿವೆ. ಅಲ್ಲದೆ, ಈ ದೇವರ ಭಕ್ತರು ತಮಗೆ ಅನುಕೂಲವೆನ್ನಿಸಿದಾಗ ಅಥವಾ ತಮ್ಮ ಕುಟುಂಬದ ಶುಭ ಸಮಾರಂಭಗಳ ಆರಂಭದಲ್ಲಿ ಇಲ್ಲಿಗೆ ಬಂದು ದೇವರಿಗೆ ಬಲಿ (ಸಾಮಾನ್ಯವಾಗಿ ಕೋಳಿ) ಸಮರ್ಪಿಸುತ್ತಾರೆ. ಇದು ಕೆಲವು ಕುಟುಂಬಗಳಿಗೆ ಮಾತ್ರ ಸೀಮಿತವಾದ ದೇವರಾಗಿರುವುದರಿಂದ ವಾರ್ಷಿಕ ಹಬ್ಬಗಳೇನೂ ನಡೆಯುವಂತೆ ಕಾಣುವುದಿಲ್ಲ. ವಾರ್ಷಿಕ ಗ್ರಾಮದೇವತೆಯ ಹಬ್ಬದಂತಹ ಆಚರಣೆ ಇದ್ದಿದ್ದರೆ ಪ್ರಾಣಿಬಲಿಯೂ ನಡೆಯುವ ಸಂಭವಗಳಿದ್ದವು.

ಗರ್ಭಗೃಹ ಎಂದು ಪ್ರತ್ಯೇಕವಾಗಿ ಗುರುತಿಸಲಾಗುವ ಭಾಗಕ್ಕೆ ಹೊಂದಿಕೊಂಡಂತಿರುವ ಭಾಗದಲ್ಲಿ ಮರದ ಬುಡಕ್ಕೆ ಒರಗಿಸಿ ನಿಲ್ಲಿಸಲಾಗಿರುವ ವೀರಗಲ್ಲು ಇಲ್ಲಿನ ಐತಿಹಾಸಿಕ ಮಹತ್ವವನ್ನು ನಿರೂಪಿಸಲು ಇರುವ ಏಕೈಕ ಸಾಕ್ಷಿ.

ವೀರಗಲ್ಲು: ಶಿಲ್ಪ

ಸುಮಾರು 3 ಅಡಿ ಅಗಲ ಮತ್ತು ಆರು ಅಡಿ ಎತ್ತರವಿರುವ ವೀರಗಲ್ಲಿನ ಮೇಲಿನ ಶಿಲ್ಪಸ್ವರೂಪವು ಕ್ರಿ.ಶ.14ನೆಯ ಶತಮಾನಕ್ಕೆ ಸೇರುತ್ತದೆ.

ಮೂರು ಹಂತಗಳ ಕೆತ್ತನೆ ಇರುವ ಈ ವೀರಗಲ್ಲಿನ ಮೇಲಿನ ಮೊದಲ ಪಟ್ಟಿಕೆ ಮತ್ತು ಎರಡನೆಯ ಪಟ್ಟಿಕೆಗಳಲ್ಲಿ ಶಾಸನವಿದೆ. ಮೇಲಿನ ಪಟ್ಟಿಕೆಯ ಕೆಳಗಿನ ಪಟ್ಟಿಕೆಯಲ್ಲಿ ಕೈಲಾಸವಾಸಿಯಾದ ವೀರನ ಮುಂದೆ ನಿಂತಿರುವ ಗುರು (ಬಹುತೇಕ ಕಾಳಾಮುಖ ಗುರು) ಶಿವಲಿಂಗಕ್ಕೆ ಪೂಜೆ ಸಲ್ಲಿಸುತ್ತಿದ್ದಾನೆ. ಶಿವಲಿಂಗದ ಇನ್ನೊಂದು ಬದಿಗೆ ನಂದಿಯ ಮೂರ್ತಿ ಇದೆ.

ನಂತರದ ಪಟ್ಟಿಕೆಯಲ್ಲಿ ಶಾಸನದ ಮುಂದುವರಿದ ಪಾಠವಿದೆ. ನಂತರದ ಪಟ್ಟಿಕೆಯಲ್ಲಿ ವಿಮಾನದಲ್ಲಿ ಕುಳಿತ ವೀರನನ್ನು ಇಬ್ಬರು ಅಪ್ಸರ ಸ್ತ್ರೀಯರು ಕೈಲಾಸಕ್ಕೆ ಕರೆತರುತ್ತಿರುವ ಶಿಲ್ಪವಿದೆ. ವಿಮಾನದಲ್ಲಿ ವೀರನು ಪದ್ಮಾಸನ ಭಂಗಿಯಲ್ಲಿ ಕುಳಿತು ಕೈಮುಗಿಯುತ್ತಿದ್ದಾನೆ. ಅವನ ಎರಡೂ ಬದಿಗಳಲ್ಲಿ ನಿಂತಿರುವ ಸ್ತ್ರೀಯರ ಒಂದು ಕೈಯಲ್ಲಿ ಬಿಲ್ಲು (ವೀರನ ಕಡೆಯ ಕೈ) ಮತ್ತು ಮತ್ತೊಂದು ಕೈಯಲ್ಲಿ ಚಾಮರವನ್ನು ಹಿಡಿದಿದ್ದಾರೆ.

ಕೆಳಗಿನಿಂದ ಮೊದಲ ಹಂತದಲ್ಲಿನ ಶಿಲ್ಪದಲ್ಲಿ ಎರಡೂ ಪಕ್ಕಗಳಲ್ಲಿ ಬಾಣ ಹಿಡಿದು ನಿಂತಿರುವ ವೀರರ ಜೊತೆಗೆ ಆಲೀಢಾಸನ ಭಂಗಿಯಲ್ಲಿ ನಿಂತಿರುವ ವೀರನ ಹೋರಾಟದ ಚಿತ್ರಣವಿದೆ.

ಯಾವುದೋ ಹೋರಾಟದಲ್ಲಿ ಇಬ್ಬರು ವೀರರ ಜೊತೆಗೆ ಸೆಣೆಸಾಟ ನಡೆಸಿರುವ, ಒಬ್ಬ ವೀರ ಸಾವನ್ನಪ್ಪಿರುವ ಸಂದರ್ಭದ ಚಿತ್ರಣ ಈ ವೀರಗಲ್ಲಿನಲ್ಲಿ ಶಿಲ್ಪರೂಪ ಪಡೆದಿದೆ.

ಶಾಸನ

ವೀರಗಲ್ಲಿನ ಮೇಲೆ ಎರಡು ಪಟ್ಟಿಕೆಗಳಲ್ಲಿ ಬರೆಯಲ್ಪಟ್ಟಿರುವ ಶಾಸನ ಪಾಠವು ಕನ್ನಡ ಭಾಷೆ ಮತ್ತು ಲಿಪಿಯಲ್ಲಿದೆ.

ಶಾಸನಪಾಠ

ಮೊದಲನೆಯ ಪಟ್ಟಿಕೆ:

1. [ಸ್ವ]ಸ್ತಿ ಶ್ರೀಮತ್ ಶ್ರೀ ಬಾವನಮಲ್ಲ ಮಾರೆಯನೂ
2. ಹಣಿಯರ ಕುಮಾರ ದಲ್ಲಪ್ಪನೂ ಲೋವರ
3. (ಶ್ರೀ)ದಾಸ ಬಡಿಯನಾಯಕ ನಿಡುಗಲ್ಲ ದಾ

ಎರಡನೆಯ ಪಟ್ಟಿಕೆ

4. ಳಿಗೆ ಬಂದಲ್ಲಿ ಸಕವರುಷ ೧೨೫೮ನೆಯ ಶ್ರಾವಣ ಮಾಸ
5. ಶು ೧ಲು [ಕ್ಷ]ಬೇವಿನಹಳಿಯ (ಓಬ) ನಾಯ್ಕನ [ಸ್ವು]ಸೆ ಗಿಡದ
6. ಮ್ಮ ನಾಗಯನು [ಸತ್ತು . . . . .]

ಎರಡು ಪಟ್ಟಿಕೆಗಳಲ್ಲಿರುವ ಶಾಸನದಲ್ಲಿನ ಲಿಪಿಸ್ವರೂಪವು ಕ್ರಿ.ಶ.14ನೆಯ ಶತಮಾನದ ಕನ್ನಡ ಲಿಪಿಯ ಸ್ವರೂಪಕ್ಕೆ ಹೊಂದುತ್ತವೆ. ಶಾಸನದ ಭಾಷೆಯು ಅತ್ಯಂತ ಸರಳವಾಗಿದ್ದು, 5 ಮತ್ತು 6ನೆಯ ಸಾಲುಗಳ ವಿನಹ ಮತ್ತೆಲ್ಲೂ ಹೆಚ್ಚಿನ ಸಮಸ್ಯೆಗಳಿಲ್ಲ. 5ನೆಯ ಸಾಲಿನಲ್ಲಿ ಕೆಲವು ಅಕ್ಷರಗಳು ಮತ್ತು 6ನೆಯ ಸಾಲಿನಲ್ಲಿ ಕೆಲವು ಅಕ್ಷರಗಳು ಅಸ್ಪಷ್ಟವಾಗಿವೆ.

ಶಾಸನದ ಅರ್ಥ:

ಶುಭವಾಗಲಿ. ಶ್ರೀಮತ್. ಶ್ರೀ ಬಾವನಮಲ್ಲ ಮಾರೆಯ. ಹಣಿಯರ ಕುಮಾರ ದಲ್ಲಪ ಮತ್ತು ಲೋವರ ಶ್ರೀದಾಸ ಬಡಿಯನಾಯಕರು ನಿಡುಗಲ್ಲಿನ ಮೇಲೆ ಶಕವರುಷ 1258ನೆಯ ಶ್ರಾವಣ ಮಾಸದ ಶುಕ್ಲಪಕ್ಷ 1ರಂದು ದಾಳಿಗೆ ಬಂದಾಗ, ಬೇವಿನಹಳ್ಳಿಯ ಓಬನಾಯ್ಕನ ಸೊಸೆ ಗಿಡದಮ್ಮ ಮತ್ತು ನಾಗಯ್ಯ (ಬಹುತೇಕ ಓಬನಾಯ್ಕನ ಮಗ ಅಂದರೆ ಗಿಡದಮ್ಮನ ಗಂಡ) ಸತ್ತು ಸ್ವರ್ಗಸ್ತರಾದರು.


ಶಾಸನ ಪಾಠದಿಂದ ಇದೊಂದು ವೀರ ಶಾಸನ ಎನ್ನುವುದು ಸ್ಪಷ್ಟವಾದರೂ, ವೀರನ ಸಾವಿಗೆ ಕಾರಣವಾದ ದಾಳಿಗೆ ಪ್ರೇರಣೆಯಾದದ್ದೇನು ಎಂಬ ಬಗೆಗೆ ಯಾವುದೇ ಸೂಚನೆಗಳು ಲಭ್ಯವಿಲ್ಲ. ಶಾಸನದಲ್ಲಿ ಪ್ರಸ್ತಾಪಿತನಾಗಿರುವ ಮಾರೆಯ ಎಂಬ ವ್ಯಕ್ತಿಯ ಬಿರುದು ಅಥವಾ ಅಡ್ಡಹೆಸರು ಬಾವನಮಲ್ಲ ಎಂದಿರಬಹುದು. ಮತ್ತೊಬ್ಬನ ಹೆಸರು ಹಣಿಯರ ಕುಮಾರ ದಲ್ಲಪ. ಹಣಿಗ ಶಬ್ದದ ಅರ್ಥಕ್ಕೆ ಹುಡುಕಾಟ ನಡೆಸಿದಾಗ ಪಣಿಯನ್ನು

ನೋಡಲು ಸೂಚನೆ ದೊರೆಯಿತು. ಹಾಗೆ ಗಮನಿಸಿದಾಗ ಪಣಿ ಶಬ್ದಕ್ಕಿರುವ ಹಲವು ಅರ್ಥಗಳ ಪೈಕಿ ಈ ಸಂದರ್ಭಕ್ಕೆ ಹೊಂದುವಂತಹ 'ವ್ಯಾಪಾರ ಮಾಡುವ ಒಂದು ಜನಾಂಗದ ಹೆಸರು; ವೈಶ್ಯ' ಎಂಬ ಅರ್ಥವನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟಿನ ಮೂಲಕ ಪಡೆಯಲಾಯಿತು. ಆದ್ದರಿಂದ ಹಣಿಯರ ಕುಮಾರ ದಲ್ಲಪನು ವೈಶ್ಯ ಅಥವಾ ವಣಿಕ (ಬಣಜಿಗ) ಕುಲದವನೂ ಆಗಿರುವ ಸಾಧ್ಯತೆಗಳಿವೆ. ಬಣಜಿಗ ಎಂದರೂ ವ್ಯಾಪಾರ ಮಾಡುವವನು ಎಂದೇ ಅರ್ಥ. ನಂತರದ ಶ್ರೀದಾಸನ ಹೆಸರಿನ ಜೊತೆಗೆ ಲೋವರ ಪೂರ್ವಪದವಾಗಿ ಸೇರಿದೆ. ಇದು ಲೋಹದ ಕೆಲಸ ಮಾಡುವ ಎಂದರೆ ಕಮ್ಮಾರನನ್ನು ಸೂಚಿಸುತ್ತಿರಬಹುದು. ಬಡಿಯನಾಯಕನು ಬಡಗಿಯ ವೃತ್ತಿಗೆ ಸಂಬಂಧಿಸದವನಿರಬಹುದು. ಇದರಿಂದ ಒಂದು ಗ್ರಾಮದ ವೈಶ್ಯರು ಅಥವಾ ಬಣಜಿಗರು ಮತ್ತು ಕಮ್ಮಾರರು ಸೇರಿ ನಿಡುಗಲ್ಲಿನ ಮೇಲೆ ದಾಳಿ ಮಾಡಿದಾಗ, ಆ ದಾಳಿಯಲ್ಲಿ ಬೇವಿನಹಳ್ಳಿಯ ಓಬಯನಾಯ್ಕನ ಮಗ ನಾಗಯ್ಯನ ಹೆಂಡತಿ ಗಿಡದಮ್ಮ ಮೃತಪಟ್ಟಿರುವ ಸೂಚನೆಯನ್ನು ಶಾಸನ ಪಾಠದಿಂದ ಪಡೆಯಬಹುದಾಗಿದೆ.


ಶಾಸನವು ಉಲ್ಲೇಖಿಸುವ ಕಾಲ ಶಕ ವರುಷ 1258 ಶ್ರಾವಣ ಮಾಸದ ಶು 1. ಸಂವತ್ಸರದ ಹೆಸರಾಗಲೀ, ವಾರದ ಹೆಸರಾಗಲೀ ಉಲ್ಲೇಖಗೊಂಡಿಲ್ಲ. ಇದೊಂದು ಲೋಪ. ಸಾಮಾನ್ಯವಾಗಿ ಇಂತಹ ಲೋಪಗಳು ಸಂಭವಿಸುವುದಿಲ್ಲ. ಇದಕ್ಕೆ ಕಾರಣ ಲಿಪಿಕಾರನ ಅಜಾಗರೂಕತೆ ಎಂದು ಭಾವಿಸಲು ಅವಕಾಶಗಳಿವೆ. ಲೋಪವನ್ನು ಮರೆತು ಕಾಲವನ್ನು ಕ್ರಿ.ಶ.ಕಾಲದಲ್ಲಿ ಎಣಿಕೆ ಮಾಡಿದಾಗ ಅದು 10-7-1336, ಬುಧವಾರಕ್ಕೆ ಸರಿಹೊಂದುತ್ತದೆ.

ಶಾಸನ ಪಾಠವಾಗಲೀ, ಶಾಸನ ಶಿಲ್ಪವಾಗಲೀ ದಾಳಿಯ ಅಥವಾ ಹೋರಾಟದ ಸ್ವರೂಪದ ಬಗ್ಗೆ ಯಾವುದೇ ಸೂಚನೆ ನೀಡಿಲ್ಲವಾದ್ದರಿಂದ ನಡೆದಿರುವ ದಾಳಿಗೆ ಊರಳಿವು ಕಾರಣವಾಗಿರಬಹುದೆಂದು ಊಹಿಸಬಹುದಾಗಿದೆ. ಒಟ್ಟಾರೆ ನಿಡುಗಲ್ಲಿನ ಮೇಲಿನ ದಾಳಿಯಲ್ಲಿ ಬೇವಿನಹಳ್ಳಿಯ ಓಬಯನಾಯ್ಕನ ಮಗ ನಾಗಯ್ಯನ ಹೆಂಡತಿ, ಅಂದರೆ ಓಬಯನಾಯ್ಕನ ಸೊಸೆ ಗಿಡದಮ್ಮನ ಜೊತೆಗೆ ನಾಗಯ್ಯನೂ ಮೃತಪಟ್ಟಿರುವುದನ್ನು ಶಾಸನ ದಾಖಲಿಸಿದೆ. ಜೊತೆಗೆ ಮಾರೆಯ, ವ್ಯಾಪಾರಿ ವರ್ಗಕ್ಕೆ ಸೇರಿದ ದಲ್ಲಪ, ಕಮ್ಮಾರ ವೃತ್ತಿಯ ಶ್ರೀದಾಸ, ಬಡಗಿ ಬಡಿಯನಾಯಕನೂ ಪಾಲ್ಗೊಂಡಿರುವುದನ್ನು ಗಮನಿಸಿದಾಗ ಇದು ಬಹುತೇಕ ವೃತ್ತಿಗೆ ಸಂಬಂಧಿಸಿದಂತೆ ನಿಡುಗಲ್ಲಿನವರೊಡನೆ ನಡೆದಿರಬಹುದಾದ ಸಂಘರ್ಷವೆನ್ನಬಹುದು. ದಾಳಿಯಲ್ಲಿ ಪಾಲ್ಗೊಂಡವರು (ಕ್ಷ) ಬೇವಿನಹಳ್ಳಿಯವರು ಎಂದು ಸ್ಪಷ್ಟವಾಗಿರುವಾಗ ದಾಳಿಯಲ್ಲಿ ಹೋರಾಡಿ ವೀರಸ್ವರ್ಗ ಪಡೆದವರಿಗೆ ಅವರ ಊರಿನಲ್ಲೇ ಸ್ಮಾರಕವನ್ನು ನಿರ್ಮಿಸಿರುವುದು ಸಮಂಜಸವಾಗಿದೆ.

ಇತಿಹಾಸದ ವಿದ್ಯಾರ್ಥಿಗಳಿಗೆ ತಿಳಿದಿರುವಂತೆ ಕ್ರಿ.ಶ.1336, ದಕ್ಷಿಣ ಭಾರತದ, ವಿಶೇಷವಾಗಿ ಕರ್ನಾಟಕದ ಇತಿಹಾಸದಲ್ಲಿ ಪ್ರಮುಖ ವರ್ಷ. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದ ಅಥವಾ ಹೊಯ್ಸಳ ಸಾಮ್ರಾಜ್ಯದ ಮುಂದುವರಿಕೆಯಾಗಿ ವಿಜಯನಗರ ಸಾಮ್ರಾಜ್ಯ ಅಸ್ತಿತ್ವಕ್ಕೆ ಬಂದ ವರ್ಷ ಅದು ಎಂದು ತಿಳಿಯಲಾಗಿದೆ. ಅಂತಹ ಸಂದರ್ಭದಲ್ಲಿ







ರಾಜ್ಯದಲ್ಲಿನ ಅಂತಃಕಲಹಗಳು ಯಾವುದಕ್ಕೆ ಸಾಕ್ಷಿಯಾಗಿದ್ದವು ಎಂಬ ಪ್ರಶ್ನೆ ಸಹಜವಾಗಿ ಎದುರಾಗುತ್ತದೆ. ಪ್ರಸ್ತುತ ಶಾಸನ ದೊರೆತಿರುವ ಪ್ರದೇಶವು ನಿಡುಗಲ್ಲಿಗೆ ಶೀರಾ ಸಮೀಪವಲ್ಲವಾದರೂ, ಪಾವಗಡದ ಮಾರ್ಗವಾಗಿ ಸಮೀಪಿಸಬಹುದಾದ ಸ್ಥಳವಾಗಿತ್ತು. ಕೆ.ಜಿ.ಬೇವಿನಹಳ್ಳಿಯ ಈ ಶಾಸನದ ಕಾಲಕ್ಕೆ ನಿಡುಗಲ್ಲಿನಲ್ಲಿ ಅಂತಹ ಪ್ರಭಾವಿ ದೊರೆಗಳು ಇದ್ದಂತೆ ತೋರುವುದಿಲ್ಲ. ಹೊಯ್ಸಳರು ಮಾತ್ರವಲ್ಲದೆ, ಆ ಪ್ರದೇಶದಲ್ಲಿ ಪ್ರಭಾವಶಾಲಿಗಳಾಗಿದ್ದ ಇರುಂಗೋಳ ಚೋಳರು ದುರ್ಬಲರಾಗಿದ್ದರು. ಕ್ರಿ.ಶ.1337ರ ದೊಡ್ಡಬಾಣಗೆರೆ ಶಾಸನದ ಪ್ರಕಾರ (ಎ.ಕ.XII ಶಿರಾ8) ಮತ್ತು ಕ್ರಿ.ಶ.1341ರ ಚಿಕ್ಕಬಾಣಗೆರೆಯ (ಎ.ಕ.XII ಶಿರಾ 10) ಶಾಸನಗಳ ಪ್ರಕಾರ ಆ ಪ್ರದೇಶವನ್ನು ಆಳುತ್ತಿದ್ದವರು ಕ್ರಮವಾಗಿ ಕೆಸರಸ ವಿಜಯರಸ ಮತ್ತು ಹೊಳಕಲ್ಲ ಗಂಗೆಯನಾಯ್ಕನ ಮಗ ಬೊಂಮೆಯ ನಾಯಕ. ಇವರು ಯಾರೂ ಅಂತಹ ಪ್ರಸಿದ್ಧಿ ಪಡೆದವರೇನಲ್ಲ. ಹಿಂದಿನ ಪ್ರಬಲ ಅರಸರು ದುರ್ಬಲರಾಗಿದ್ದರು ಮತ್ತು ಮುಂದಿನವರು ಇನ್ನೂ ಅಧಿಕಾರ ಪಡೆದಿರಲಿಲ್ಲ. ಅಂತಹ ಸಂದರ್ಭದಲ್ಲಿ ಸ್ಥಳೀಯ ಅಧಿಕಾರಿಗಳೇ ಆಡಳಿತದ ಚುಕ್ಕಾಣಿ ಹಿಡಿದಿರುವ ಸಾಧ್ಯತೆಗಳು ಹೆಚ್ಚು. ಅಂತಹ ಸಮಯದಲ್ಲಿ ಆಡಳಿತಾತ್ಮಕ ಏರುಪೇರುಗಳು ಸಹಜವಾಗಿಯೇ ಘಟಿಸಿದ್ದು, ಅಂತಹ ಯಾವುದೋ ಒಂದು ಸಂದರ್ಭವು ಹೋರಾಟಕ್ಕೆ ಅವಕಾಶ ಕಲ್ಪಿಸಿರುವ ಸಾಧ್ಯತೆಗಳಿವೆ. ಅಂತಹ ಒಂದು ಹೋರಾಟದಲ್ಲಿ ಬೇವಿನಹಳ್ಳಿಯ ನಾಗಯ್ಯ ಮತ್ತು ಅವನ ಹೆಂಡತಿ ಸತ್ತಿದ್ದಾರೆಂದು ಸದ್ಯಕ್ಕೆ ಊಹಿಸಲಾಗಿದೆ.

ಈ ವೀರಗಲ್ಲು ಸ್ಮಾರಕವನ್ನು ಹಾಕಿಸಿದವರು ಯಾರು ಎಂಬುವಾಗಲಿ, ವೀರನ ಕುಟುಂಬಕ್ಕೆ ಏನಾದರೂ ದಾನ ದತ್ತಿಗಳು ದೊರೆತಿವೆಯೆ ಎಂಬುದಕ್ಕಾಗಲೀ ಯಾವ ಸಾಕ್ಷಿಗಳೂ ಇಲ್ಲ. ಹೋರಾಟದಲ್ಲಿ ಸತ್ತ ವೀರನು ಕೈಲಾಸವಾಸಿಯಾದ ಎಂಬುದರ ನೆನಪಿಗಾಗಿ ಈ ವೀರಗಲ್ಲು ಸ್ಮಾರಕವನ್ನು ಶಾಸನಸಹಿತ ಹಾಕಿಸಲಾಗಿದೆ. ಈ ಸ್ಮಾರಕ ಮತ್ತು ಅದಕ್ಕೆ ಹೊಂದಿಕೊಂಡಂತಿರುವ ಬೇವಿನಮರ ಹಾಗೂ ಅದರ ಕೆಳಗಿನ ಕಲ್ಲಿನ ರೂಪದ ಭೈರವ ಮತ್ತು ಸಪ್ತಮಾತೃಕೆಯರಿಗೆ ಕೆಲವು ಕುಟುಂಬಗಳವರು ನಡೆದುಕೊಳ್ಳುವುದರ ಮೂಲಕ ವೀರನಿಗೆ ಗೌರವ ಸಲ್ಲಿಸುತ್ತಿದ್ದಾರೆ.

ಕೃತಜ್ಞತೆಗಳು: ಈ ವೀರಗಲ್ಲು ಶಾಸನವನ್ನು ನನ್ನ ಗಮನಕ್ಕೆ ತಂದು ಅಧ್ಯಯನಕ್ಕೆ ಅವಕಾಶಮಾಡಿದ ಸ್ಥಳೀಯರಾದ ಶಿವಣ್ಣ ಮತ್ತು ರಮೇಶ್ ಅವರಿಗೆ ಧನ್ಯವಾದಗಳು ಸಲ್ಲುತ್ತವೆ.

■

ITIHASA DARPANA (Quarterly)
A Peer Reviewed Journal of Historical Research in Kannada
ISSN 2321-3590
Book No.: 37-38.
April – September 2018
Author: K R Narasimhan.
Title: Bidarahaḷḷiya Kāṣiviṣveṣwara'

ಬಿದರಹಳ್ಳಿಯ ಕಾಶಿವಿಶ್ವನಾಥೇಶ್ವರ ದೇಗುಲ ಬಳಿಯ ಅರಳಿಮರದ ಬುಡದಲ್ಲಿರುವ ಮಂಟಪದ ಕಂಬದ ಹೊಸ ಶೋಧಿತ ಶಾಸನ

(ಇಲ್ಲಿನ ಶಾಸನ ತಲೆಕೆಳಕಾಗಿದೆ)

01 [. . ಸಾಸಿರದ ಎರಡು]
12 ನೂಱ ಎಪ್ಪತ್ತಯ್ದು
03 ಆ ಮೇಲೆ ವಿಜಯ
04 ಸಂವತ್ಸರದ ಚೆ[ಯಿ]
05 ತ್ರ ಸು 1 ಬು ಶ್ರೀಮ
06 ನುಮಹಾಬಾ. .
07 ತಪ್ಪುವ ರಾಯರಗಂ
08 ಡ ಶ್ರೀವೀರ ಬುಕಂಣ
09. [ಯ]ರು ಪ್ರಿಥ್ವಿರಾಜ್ಯಂ
10 ಗೆಯ್ಯುತಿದ್ದಲಿ ಆ
11 ತನ ಎಕ್ಕಟಿಗ ಶ್ರೀ
12 ಮನು ಮಹಾ . .
13 ಂತಾಧಿಪತಿ ನ
14 ರಲೋಕಗಂಡ .

ಕೆ.ಆರ್. ನರಸಿಂಹನ್
203, ಸಿಂಚನ, 1ಎ ಅಡ್ಡರಸ್ತೆ
1ನೇ ಮುಖ್ಯರಸ್ತೆ, ಮಾರುತಿನಗರ
ಯಲಹಂಕ, ಬೆಂಗಳೂರು
ಮೊ: 9448413045

ಪೋಷಣೆ: ಕೆ. ಧನಪಾಲ್

ಇಲ್ಲಿನ ಶಾಸನವು ಶಕವರ್ಷವನ್ನು ಅಂಕೆಗಳಲ್ಲಿ ನಮೂದಿಸದೆ ಅಕ್ಷರಗಳಲ್ಲಿ ತಿಳಿಸುತ್ತದೆ. ಇದೊಂದು ವಿಶೇಷವಾಗಿದೆ. ಮೊದಲ ಸಾಲಿನ ಪಾಠವು ಲಭ್ಯವಿಲ್ಲದಿದ್ದರೂ ಕಾಲದ ಅರಿವಿಗೇನೂ ಬಾಧಕವಿಲ್ಲ. ಕಾಲವನ್ನು ಊಹಿಸಲು ಅವಕಾಶವಿದೆ. ಇದರ ಕಾಲವು ಸಾವಿರದ ಎರಡುನೂರ ಎಪ್ಪತ್ತೈದು.



ಎಂದರೆ 1275ಕ್ಕೆ ಸೇರುವ ಕ್ರಿ.ಶ. 1353 ಎಂದಾಗುತ್ತದೆ. ಇದು ವಿಜಯ ಸಂವತ್ಸರವಾಗಿರುವುದೂ ಸರಿ ಇರುತ್ತದೆ. ಸಂವತ್ಸರದ ಮೊದಲ ಚೈತ್ರಮಾಸದಲ್ಲಿ, ವರ್ಷದ ಆರಂಭ ದಿನದಂದೇ ಶಾಸನವನ್ನು ಹಾಕಲಾಗಿದೆ. ಅಲ್ಪವ್ಯತ್ಯಾಸದಿಂದಾಗಿ ಇದು ಗುರುವಾರವೂ ಆಗಬಹುದು.

ವಿಜಯನಗರ ಸಾಮ್ರಾಜ್ಯವನ್ನು ಪರಿಪಾಲನೆ ಮಾಡಿದ ನಾಲ್ಕು ಮನೆತನಗಳಲ್ಲಿ ಮೊದಲನೆಯದಾದ ಸಂಗಮ ವಂಶದ ಎರಡನೇ ರಾಜ ವೀರಬುಕ್ಕಣ್ಣ ಒಡೆಯ

ಈತನ ಆಳ್ವಿಕೆಯ ಕಾಲವನ್ನು ಕ್ರಿ.ಶ. 1352ರಿಂದ 1377ರ ವರೆಗೆಂದು ಗುರುತಿಸಲಾಗಿದೆ. ಮೊದಲನೆಯ ಬುಕ್ಕಣ್ಣನು ತನ್ನ ಸೋದರ ಹರಿಹರನ ಜೊತೆಯಲ್ಲಿಯೇ ಆಳ್ವಿಕೆ ನಡೆಸಿದನೆಂಬುದಕ್ಕೆ ಶಾಸನದ ಪುರಾವೆಯೂ ಇದೆ. ಇಲ್ಲಿಗೆ ಸಮೀಪದ ಕಟ್ಟಿಗೇನಹಳ್ಳಿಯಲ್ಲಿ ಲಭ್ಯವಾದ ಶಾಸನದಲ್ಲಿ ಹರಿಯಪ್ಪ ವೊಡೆಯರೂ, ಬುಕ್ಕಣ್ಣ ವೊಡೆಯರೂ ಪ್ರಥ್ವಿರಾಜ್ಯಂಗೈಯ್ಯುತಿದ್ದಲ್ಲಿ ಎಂದೇ ಹೇಳುತ್ತದೆ. ಇದರಿಂದಾಗಿ ಮೊದಲನೆಯ ಬುಕ್ಕಣ್ಣ ವೊಡೆಯರು ರಾಜ್ಯವಾಳುತ್ತಿದ್ದುದು ಇದರಿಂದ ನಿಶ್ಚಿತವಾಗಿ ತಿಳಿಯುತ್ತದೆ. ಈತನ ಎಕ್ಕಟಿಗ (ಆಪ್ತ ಸಮಾಲೋಚಕ)* ಮಹಾಸಾಮಂತಾಧಿಪತಿ ನರಲೋಕ ಗಂಡ ಎಂಬ ವಿಶೇಷಣದಿಂದ ಕೂಡಿದ ವ್ಯಕ್ತಿಯಿದ್ದಿರಬೇಕು. ಮೂರನೇ ಬಲ್ಲಾಳನ ಕಾಲದಿಂದ ಪ್ರಸಿದ್ಧನಾದ ವ್ಯಕ್ತಿ ಈತನೇ ಆಗಿದ್ದಿರಬೇಕೆಂದು ಊಹಿಸಲು ನಿಚ್ಚಳ ಅವಕಾಶವಿರುತ್ತದೆ. ಈತ ಯಾರು ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಶಾಸನವು ಇಲ್ಲಿಗೆ ನಿಂತುಹೋಗಿರುವುದು ಅಡ್ಡಿಯಾಗಿದೆ.

ಆದೆಪ್ಪ ಪಾಸೋಡಿಯವರು ತಮ್ಮ ನಲ್ಲೂರು ನಾಡಿನ ಬಗ್ಗೆ ಬರೆದಿರುವ ಪ್ರಬಂಧದಲ್ಲಿ 'ನಲ್ಲೂರು ನಾಡವರು, ಯಲಹಂಕ ನಾಡವರು, ವಿಜಯನಗರದ ಅರಸರ ಮತ್ತು ಜನತೆಯ ಮಧ್ಯವರ್ತಿಗಳಾಗಿದ್ದರು' ಎನ್ನುತ್ತಾರೆ. ಹೆಚ್.ಎಸ್.ಗೋಪಾಲರಾವ್‌ರವರು 'ಯಲಹಂಕ ಮತ್ತು ವಿಜಯನಗರ ಸಂಬಂಧಗಳು' ಎಂಬ ಲೇಖನದಲ್ಲಿ 'ವಿಜಯನಗರದ ಮೊದಲ ದೊರೆ ಹರಿಹರನ ಕಾಲದಿಂದ ಕೊನೆಯ ದೊರೆ ಶ್ರೀರಂಗರಾಯನ ಕಾಲದವರೆಗೂ ಯಲಹಂಕ ನಾಡು ಮತ್ತು ಅದರ ಪ್ರಭುಗಳು ವಿಜಯನಗರದೊಡನೆ ಉತ್ತಮ ಬಾಂಧವ್ಯ ಹೊಂದಿದ್ದ ವಿಷಯವನ್ನು ಶಾಸನಗಳು ಸ್ಪಷ್ಟಪಡಿಸಿವೆ' ಎಂಬ ಮೌಲಿಕವಾದ ನುಡಿಗಳನ್ನು ದಾಖಲಿಸಿದ್ದಾರೆ.

ಯಲಹಂಕವು ಹನ್ನೊಂದನೇ ಶತಮಾನದ ಕಾಲಕ್ಕಾಗಲೇ ಒಂದು ಪ್ರಾಂತ್ಯ ಇಲ್ಲವೆ 'ವಿಷಯ'ವಾಗಿ ಗುರುತಿಸಲ್ಪಟ್ಟಿದ್ದ ವಿಚಾರವನ್ನು ಇತ್ತೀಚೆಗೆ ಶೋಧಿಸಲಾದ ಹೆಸರಘಟ್ಟದ ಶಾಸನದಿಂದ ತಿಳಿಯಬಹುದಾಗಿರುತ್ತದೆ. ಆದರೆ ಯಲಹಂಕ ನಾಡಿಗೆ ಐತಿಹಾಸಿಕ ಮಹತ್ವವನ್ನು ಸಾಂಸ್ಕೃತಿಕ ವೈಭವವನ್ನು, ಸಾಮಾಜಿಕ ಹಿರಿಮೆಯನ್ನು ದೊರಕಿಸಿಕೊಟ್ಟವರೆಂದರೆ ಹೊಯ್ಸಳ ಅರಸರೆಂದೇ ಹೇಳಬೇಕಾದೀತು. ಮೂರನೇ ಬಲ್ಲಾಳನ ಆಳ್ವಿಕೆ ಮುಗಿದು ಸುಮಾರು ಹತ್ತು ವರ್ಷಗಳಲ್ಲಿ ವಿಜಯನಗರ ಅರಸರ ಆಳ್ವಿಕೆ ಎಲಹಂಕ ನಾಡಿನಲ್ಲಿ ಪ್ರಭಾವಯುತವಾಗಿತ್ತೆಂಬುದಕ್ಕೆ ಬಿದರಹಳ್ಳಿ ಶಾಸನವು ಸಾಕ್ಷಿಯಾಗಿದೆ.

ಕೃತಜ್ಞತೆಗಳು:
ಶಾಸನವನ್ನು ಶೋಧಿಸಲು ಮಾರ್ಗದರ್ಶನ ನೀಡಿದ ಕರ್ನಾಟಕ ರಾಜ್ಯದ ಪುರಾತತ್ವ ಮತ್ತು ವಸ್ತುಸಂಗ್ರಹಾಲಯ ಇಲಾಖೆಯ ನಿರ್ದೇಶಕರಾದ ಆರ್.ಗೋಪಾಲ್ ಅವರಿಗೆ ಮತ್ತು ಅವರ ಕಛೇರಿಯ ಸಿಬ್ಬಂದಿವರ್ಗದವರಿಗೆ ನಮ್ಮ ಹೃತ್ಪೂರ್ವಕ ಧನ್ಯವಾದಗಳು.

---

* ಎಕ್ಕಟಿಗ – ರಾಜನ ವೈವಿಧ್ಯಮಯವಾದ ಅಂಗರಕ್ಷಕ ವೀರಪಡೆಗಳಲ್ಲಿ 'ಎಕ್ಕಟಿಗ' ಕೂಡ ಒಂದು ಎಂಬ ಅಭಿಪ್ರಾಯವೂ ಇದೆ. ವಿವರಗಳಿಗಾಗಿ ನೋಡಿ: ಎನ್.ಆರ್. ಲಲಿತಾಂಬ ಅವರ 'ಎಕ್ಕಟಿಗ ವೀರಪಡೆ', 2010, ಇತಿಹಾಸ ದರ್ಶನ, ಸಂಪುಟ–25, ಪು.263–267. – ಸಂಪಾದಕರು.

■

'ಇತಿಹಾಸ ದರ್ಪಣ'ಕ್ಕೆ ಪ್ರಬಂಧವನ್ನು ಕಳುಹಿಸುವ ಮುನ್ನ...


'ಇತಿಹಾಸ ದರ್ಪಣ'ಕ್ಕೆ ಸಂಶೋಧನ ಪ್ರಬಂಧವನ್ನು ಕಳುಹಿಸುವವರು ಈ ಕೆಳಕಂಡ ಕ್ರಮಗಳನ್ನು ಪಾಲಿಸಬೇಕು.

- ಪ್ರಬಂಧವು ಅಪ್ರಕಟಿತವಾಗಿರಬೇಕು ಮತ್ತು ನವ ಶೋಧನೆ, ವಿನೂತನ ವಿಶ್ಲೇಷಣೆ, ಆಲೋಚನೆ ಹಾಗೂ ಸಂಶೋಧನಾ ವಿಧಾನಗಳಿಂದಾಗಿ ಹೊಸತನದಿಂದ ಕೂಡಿದ ಮತ್ತು ಚರಿತ್ರೆಯ ಅಧ್ಯಯನದ ಮೇಲೆ ಹೊಸ ಬೆಳಕು ಚೆಲ್ಲುವ ಪ್ರಬಂಧವಾಗಿರಬೇಕು.
- ಪ್ರಬಂಧವನ್ನು 'ನುಡಿ' ತಂತ್ರಾಂಶದಲ್ಲಿ ಬೆರಳಚ್ಚು ಮಾಡಿ ಇ-ಮೇಲ್ ಮಾಡುವುದು ಹೆಚ್ಚು ಸೂಕ್ತವಾಗಿರುತ್ತದೆ. ಉಲ್ಲೇಖದ ಟಿಪ್ಪಣಿಗಳನ್ನು ಉಲ್ಲೇಖ, ಹೆಚ್ಚಿನ ಮಾಹಿತಿ ಹಾಗೂ ಅಗತ್ಯ ವಿವರಣೆಗಳನ್ನು ಕೊನೆ ಟಿಪ್ಪಣಿಗಳ ರೂಪದಲ್ಲಿ ನೀಡಬೇಕು.
- ಕೊನೆ ಟಿಪ್ಪಣಿಗಳನ್ನು ನೀಡುವಾಗ ಲೇಖಕರ ಹೆಸರು, ಪ್ರಕಟಣಾ ವರ್ಷ, ಕೃತಿಯ ಶೀರ್ಷಿಕೆ (ಇಟ್ಯಾಲಿಕ್‌ನಲ್ಲಿ), ಸ್ಥಳ, ಪ್ರಕಾಶಕರು ಮತ್ತು ಪುಟಗಳ ವಿವರಗಳನ್ನು ಮೊದಲ ಬಾರಿ ನೀಡಬೇಕು. ಪುನರುಕ್ತಗೊಳ್ಳುವಾಗ ಲೇಖಕರ ಹೆಸರು, ವರ್ಷ ಬರೆದು 'ಪೂರ್ವೋಕ್ತ' ಎಂದು ಕೃತಿಯ ಹೆಸರ ಸ್ಥಳದಲ್ಲಿ ನಮೂದಿಸಿ ಪುಟಗಳ ಸಂಖ್ಯೆ ಸೂಚಿಸಬೇಕು. ತತ್ಕೂಡಲೇ ಉಲ್ಲೇಖಿಸುವ ಸಂದರ್ಭದಲ್ಲಿ 'ಇಲ್ಲೇ' ಎಂದು ನಮೂದಿಸಿ ಪುಟಗಳ ಸಂಖ್ಯೆ ಸೂಚಿಸಬೇಕು.
- ಲೇಖನಗಳನ್ನು ಉಲ್ಲೇಖಿಸುವಾಗ– ಲೇಖಕನ ಹೆಸರು, ಪ್ರಕಟಣಾ ವರ್ಷ, ಲೇಖನದ ಶೀರ್ಷಿಕೆ (' ' ಈ ಚಿಹ್ನೆಯಲ್ಲಿ ಕೊಡುವುದು), ಈ ಲೇಖನ ಪ್ರಕಟವಾದ ನಿಯತಕಾಲಿಕೆ ಹೆಸರು (ಇಟ್ಯಾಲಿಕ್‌ನಲ್ಲಿ), ಸಂಚಿಕೆ, ಸಂಪುಟ, ವರ್ಷ, ಪ್ರಕಟವಾಗುತ್ತಿರುವ ಸ್ಥಳ ಮತ್ತು ಪುಟಗಳ ವಿವರ ಸೂಚಿಸುವುದು.
- ಸಂಪಾದಿತ ಕೃತಿಯಲ್ಲಿನ ಲೇಖನವನ್ನು ಉಲ್ಲೇಖಿಸುವಾಗ– ಲೇಖಕನ ಹೆಸರು, ಪ್ರಕಟಣಾ ವರ್ಷ, ಲೇಖನದ ಶೀರ್ಷಿಕೆ (' '), ಸಂಪಾದಕರ ಹೆಸರು, ಕೃತಿಯ ಶೀರ್ಷಿಕೆ (ಇಟ್ಯಾಲಿಕ್‌ನಲ್ಲಿ), ಸ್ಥಳ, ಪ್ರಕಾಶಕರು, ಪುಟಗಳ ವಿವರ ಸೂಚಿಸುವುದು.
- ಪ್ರಬಂಧಕ್ಕೆ ಪೂರಕವಾದ ಚಿತ್ರಗಳನ್ನು ಕಳುಹಿಸಿಕೊಡಬಹುದು. ಅವುಗಳಿಗೆ ಕಡ್ಡಾಯವಾಗಿ ಚಿತ್ರ ಶೀರ್ಷಿಕೆಗಳನ್ನು ನೀಡಿರಬೇಕು.
- ಇತಿಹಾಸ ದರ್ಪಣ ಚಂದಾದಾರರಾಗಿರುವವರಿಗೆ ಮೊದಲ ಆದ್ಯತೆ.
- ಪ್ರಕಟಣೆಗೆ ಬರುವ ಪ್ರಬಂಧಗಳನ್ನು ಪೂರ್ವಾವಲೋಕನಕ್ಕಾಗಿ ತಜ್ಞರಿಗೆ ಕಳುಹಿಸಿ ಕೊಡಲಾಗುವುದು. ಆಯ್ಕೆಯಾದ ಪ್ರಬಂಧಗಳನ್ನು ಪ್ರಕಟಣಾ ಪೂರ್ವದಲ್ಲಿಯೇ ಲೇಖಕರಿಗೆ ತಿಳಿಸಲಾಗುವುದು.
- ಪ್ರಕಟವಾದ ಪ್ರಬಂಧಗಳಿಗೆ ಯಾವುದೇ ಸಂಭಾವನೆಯನ್ನು ನೀಡಲಾಗುವುದಿಲ್ಲ ಮತ್ತು ತಾವು ಕಳುಹಿಸಿಕೊಟ್ಟ ಲೇಖನ ಸಂಬಂಧ ಯಾವುದೇ ಪತ್ರ ವ್ಯವಹಾರ ಮತ್ತು ದೂರವಾಣಿ ಸಂಭಾಷಣೆಗೆ ಅವಕಾಶವಿರುವುದಿಲ್ಲ.
- ಪ್ರಬಂಧಗಳನ್ನು '**itihasadarpana@gmail.com**'ಗೆ ಇ–ಮೇಲ್ ಮಾಡುವುದು.

–ಸಂಪಾದಕರು



ಹೆಬ್ಬಾಳದ ಅಪ್ರಕಟಿತ ವೀರಗಲ್ಲು ಶಾಸನ



ಆಧುನಿಕ ತಂತ್ರಜ್ಞಾನದ ಪಡಿಯಚ್ಚು

ಚಿತ್ರ: ಪಿ.ಎಲ್. ಉದಯ ಕುಮಾರ್

ITIHASA DARPANA (Kannada Quarterly) : A Peer Reviewed Journal of Historical Research in Kannada, Book: 37-38, (Combined Issue) April - September 2018, Pages: 192, Edited by: Rajesh H.G. # 33/A, Near I.T.I. College, Kempegowda Nagara, Vishwaneedam Post, Bengaluru-560 091. Mob.: 7829404063. Email: itihasadarpana@gmail.com, Website: itihasadarpana.wordpress.com



ಮುಖಪುಟ ಚಿತ್ರ : ನಿಲುವುಗಲ್ಲು ಸಮಾಧಿ, ತೋಡಲಬಂಡೆ, ಸಾಸಲು ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು.. ಚಿತ್ರ: ಎಸ್. ವೆಂಕಟೇಶ್
ಹಿಂಬದಿ ಚಿತ್ರ : ಆನೆಯನ್ನು ಬೇಟೆಯಾಡುತ್ತಿರುವ ದೃಶ್ಯ, ಗಲ್ಲ ಗುಡ್ಡ ಚಿತ್ರ: ಮೋಹನ ಆರ್.

ISSN 232-13590

ಬೆಲೆ: ₹200/-